ರಾಜಧಾನಿಯಲ್ಲಿ ಮೈಸೂರು ಸಹೋದರರಿಂದ ನಡೆಸಲ್ಪಡುತ್ತಿರುವ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದಿಂದ ಸರ್ಕಾರಿ ಪರೀಕ್ಷೆಗಳಿಗೆ ಕಳುಹಿಸಲ್ಪಟ್ಟಿದ್ದ ವಿದ್ಯಾರ್ಥಿಗಳೆಲ್ಲರೂ ತೇರ್ಗಡೆ ಹೊಂದಿರುತ್ತಾರೆ.

Office of the President
District Board, Mysore.
Dated 19-6 50

NOTIFICATION

Applications are invited for the posts of Head Masters and Assistant Masters to the High Schools under the management of the Mysore District Board. The appointments are only temporary. Ordinarily, preference will be given to candidates with B T qualifications and teaching experience. They will be given the *minimum* salary in the scale fixed by Government. The last date of receiving applications is *25th June 1950*. Candidates selected for interview are required to interview the undersigned at 1 p m on the 30th June 1950, in the District Board Buildings, Mysore.

(SD) B M. CHENNABASAPPA,
President

ಚಾತ್ರೆ ನಿಲ್ಲಿಸಕೂಡದು

ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಕೆಂಬಾಲು ಗ್ರಾಮಕ್ಕೆ ಸೇರಿದಂತೆ ಕಪಿಲ ನದಿಯ ದಡದಲ್ಲಿ ಪುರಾತನವಾದ ಶ್ರೀರಾಮ ದೇವಸ್ಥಾನದ ರಥೋತ್ಸವ ಮತ್ತು ಜಾತ್ರೆಗಳು ಪ್ರತಿ ವರ್ಷ ನಡೆದುಕೊಂಡುಬರುತ್ತಿದ್ದು ಈಗ ಜಾತ್ರೆಯನ್ನು ಕೆಲವು ಜನರು ನಿಲ್ಲಿಸಿರುತ್ತಾರೆ. ಈ ದೇವಾಲಯಕ್ಕೆ ಅನೇಕ ಮರ್ಯಾದೆಗಳೂ, ನೂರು ಸಾವಿರ ರೂ ಗಳ ವರಮಾನವೂ ಇವೆ. ಈ ವಿಷಯವಾಗಿ ಗ್ರಾಮದ ಅನೇಕ ಜನರು ಸರ್ಕಾರ, ಮುಜರಾಯಿ ಇಲಾಖೆಗಳಿಗೆ ಅಹವಾಲುಗಳನ್ನೂ ಬರೆದು ಇದ್ದರೂ ಜಾತ್ರೆಯು ಸ್ಥಳದಲ್ಲಿ ನಿಂತಿಯನ್ನು ಕಟ್ಟಲೂ ಸಹ ಸರ್ಕಾರದವರನ್ನು ಕೇಳಲಾಗಿತ್ತು. ಕಳೆದ ಅಕ್ಟೋಬರಿನಲ್ಲಿ ಸಂತೆಕಟ್ಟಲು ಅವಕಾಶವಿತ್ತಿದ್ದರೂ ಸಹ ಇಲ್ಲಿಯವರೆಗೂ ಅದನ್ನು ಜಾರಿಗೆ ತಂದಿರುವುದಿಲ್ಲ. ಈ ವಿಷಯಗಳನ್ನು ಸರ್ಕಾರದವರು ಪರಿಶೀಲಿಸಿ ಸೂಕ್ತ ಆಜ್ಞೆಗಳನ್ನು ಹೊರಡಿಸಬೇಕೆಂದು ಜಿಲ್ಲಾ ಹರಿಜನ ಸ್ವಯಂ ಸೇವಕರಾದ ಶ್ರೀ ಕೇಶವರಾಮು ದಾಸರು ಪ್ರಾರ್ಥಿಸಿದ್ದಾರೆ.

ಬಾಲಕ ಭಕ್ತರ ಅಮೋಘ ಉಪನ್ಯಾಸ

ರಾಜಧಾನಿಯ ಮಂಡಿ ಮೊಹಲ್ಲಾದ ಕಾಳಮ್ಮನಗುಡಿ ಬೀದಿಯ ದೇವಾಂಗ ಸಂಘದ ವಾಚನಾಲಯದಲ್ಲಿ ಕಳೆದ ಗುರುವಾರ ಅಮಾವಾಸ್ಯೆಯ ಪ್ರಯುಕ್ತ ಶ್ರೀ ಕೆ. ಕೆ. ಪಾರ್ಥಸಾರಥಿ ಎಂಬ ಬಾಲಕ ಭಕ್ತರು ಭಕ್ತಿ ಮತ್ತು ಲೌಕಿಕ ಸಂಬಂಧದ ವಿಚಾರವಾಗಿ ಶ್ಲಾಘನೀಯವಾದ ಉಪನ್ಯಾಸವನ್ನು ಮಾಡಿದರು.

ಮೈಸೂರು ವಿಶ್ವ ವಿದ್ಯಾನಿಲಯ

ಪ್ರಕಟಣೆ

ಮೈಸೂರು ತಾ॥ 22-5-50

ಭಾರತದ ಯಾವುದಾದರೂ ವಿಶ್ವ ವಿದ್ಯಾನಿಲಯದ ಡಾಕ್ಟರೇಟ್ ಪದವಿಯನ್ನು ಪಡೆಯಲು ಬಯಸುವ ಹಿಂದುಳಿದ ಜನಾಂಗದ ಎಂ ಎ ಮತ್ತು ಎಂ ಎಸ್ ಸಿ. ವಿದ್ಯಾರ್ಥಿಗಳಿಗೆ ಮಾಹೆಯಾನಾ ೧೦೦ ರೂಪಾಯಿಗಳ ಮೂರು ವೇತನಗಳನ್ನು ಕೊಡಲಾಗುವುದು. ಸದರಿ ಪದವಿಗೆ ಗೊತ್ತಾಗಿರುವ ಅವಧಿಗೆ ವೇತನವನ್ನು ಸಲ್ಲಿಸಲಾಗುವುದು. ವೇತನವನ್ನು ಕೊಡುವ ಉದ್ದೇಶವನ್ನು ನೆರವೇರಿಸದಿದ್ದರೆ ಉಮೇದುವಾರನು ತೆಗೆದುಕೊಂಡಿರುವ ಮೊಬಲಗನ್ನು ವಾಪಸು ಕೊಡಬೇಕೆಂಬ ಕರಾರಿನ ಮೇಲೆ ಅದನ್ನು ಕೊಡಲಾಗುವುದು. ಕೆಳಕಂಡ ನಮೂನೆಯಲ್ಲಿ ಅರ್ಜಿಯನ್ನು ೧೯೫೦ನೇ ಜೂನ್ ೩೦ರೊಳಗೆ ಮೈಸೂರು ವಿಶ್ವ ವಿದ್ಯಾನಿಲಯದ ರಿಜಿಸ್ಟ್ರಾರ್‌ರವರಿಗೆ ತಲುಪುವಂತೆ ಕಳುಹಿಸಬೇಕು. "೧೯೫೦-೫೧ನೇ ಡಾಕ್ಟರೇಟ್ ಪದವಿ ವೇತನಕ್ಕಾಗಿ ಅರ್ಜಿ" ಎಂಬುದಾಗಿ ಲಕೋಟೆಯ ಮೇಲೆ ಬರೆದಿರಬೇಕು.

ಅಪ್ಪಣೆ ಮೇರೆ,

ಸಿ. ರಂಗಾಚಾರ್, ಆ॥ ರಿಜಿಸ್ಟ್ರಾರ್

ಮೈಸೂರು ವಿಶ್ವ ವಿದ್ಯಾನಿಲಯ

ಡಾಕ್ಟರೇಟ್ ಪ್ರಶಸ್ತಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ

೧ ಹೆಸರು	
೨ ತಂದೆಯ ಹೆಸರು	
೩ ಜಾತಿ	
೪ ವಯಸ್ಸು	
೫ ವಿಳಾಸ	
೬ ಅರ್ಹತೆ ೧ ಪದವಿ ೨ ಪದವಿ ಪಡೆದ ವರ್ಷ ೩ ಐಚ್ಛಿಕ ವಿಷಯಗಳು ೪ ಪದವಿ ಪಡೆದ ವಿಶ್ವ ವಿದ್ಯಾನಿಲಯ.	
೭ ಮೊದಲನೇ ಪ್ರಯತ್ನದಲ್ಲಿಯೇ ಪದವಿ ಪಡೆಯಲಾಯಿತೇ ಅಥವಾ ಬೇರೆ ಬೇರೆ ವರ್ಷಗಳಲ್ಲಿ ಭಾಗಗಳಲ್ಲಿ ತೇರ್ಗಡೆಯಾಯಿತೇ	
೮ ರಿಜಿಸ್ಟರ್ ನಂಬರ್ ಮತ್ತು ವರ್ಷ	
೯ ಉಮೇದುವಾರನು ಡಾಕ್ಟರೇಟ್ ಪದವಿಗೆ ಸೇರ ಬಯಸುವ ವಿಶ್ವ ವಿದ್ಯಾನಿಲಯದ ಹೆಸರು.	
೧೦ ಡಾಕ್ಟರೇಟ್ ಪದವಿಗೆ ಆರಿಸಿಕೊಂಡಿರುವ ವಿಷಯ	
೧೧ ಉಮೇದುವಾರನು ಮೈಸೂರಿನಲ್ಲಿ ಜನಿಸಿದವನೇ ಅಥವಾ ಹೊರಗಿನವನೇ	
೧೨ ಉಮೇದುವಾರನು ತಿಳಿಸಬೇಕಾದ ಇತರೇ ಹೆಚ್ಚಿನ ವಿವರಗಳು.	

ಸೂಚನೆ— ಮೇಲ್ಕಂಡ ಉಮೇದುವಾರರು ವಿಶ್ವ ವಿದ್ಯಾನಿಲಯಗಳ ಸರ್ಟಿಫಿಕೇಟುಗಳನ್ನು ಪಡೆದುಕೊಳ್ಳಲು ತಾವೇ ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕು.

ಸ್ಥಳ............

ತಾರೀಖು............ ೧೯೫೦

ಉಮೇದುವಾರನ ರುಜು

ನಿಮ್ಮ ನೆಚ್ಚಿನ **ಪ್ರಭಾ** ಚಿತ್ರ ಮಂದಿರದಲ್ಲಿ

23-6-50 ರಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಜಗತ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

ಸುನ್ಹೇರೆ ದಿನ್

ಭೂಮಿಕೆಯಲ್ಲಿ:-

ರಿಹಾನ, ರಾಜಕಪೂರ್, ನಿಗಾರ್

ಮತ್ತು ನಿಮ್ಮ ಮೆಚ್ಚಿನ ನಟನಟಿಯರು

ಶ್ರೀ ಗಣೇಶಾ ಟಾಕೀಸ್

21-6-50 ರಿಂದ ದಿನವಹಿ 3 ಪ್ರದರ್ಶನಗಳು

... ಚಿತ್ರ

ಚಿತ್ತಾಕರ್ಷಕ ಹಿಂದಿ ಚಿತ್ರ

ಮಿರ್ಜಾ ಸಾಹಿಬಾನ್

30-6-50 ರಿಂದ ... ಮತ್ತು ...

ಫೆ ಸ್ಟಿ ವ ಲ್ಸ್

Edited, printed and published by A. R. Nagarajan, at Sadhvi Press, D.Subbiah Road, Mysore.

ಫೋನ್ ನಂ 792 ॥ವಂದೇ ಮಾತರಂ॥ ಬಿಡಿಪ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೨೨-೬-೫೦ [ಸಂಚಿಕೆ ೩೦೪

ಪೂರ್ಮ ಯೋಜನೆ ಬಗ್ಗೆ ಬ್ರಿ॥ ಸರ್ಕಾರದ ಸೋಲೇ?

ಟೈಪ್‌ರೈಟರ್ ಸಂಬಂಧವಾಗಿ ಲಿಪಿಯ ಸುಧಾರಣೆ

ಬೆಂಗಳೂರು ೨೨

ಕನ್ನಡ ಭಾಷೆಯ ಟೈಪ್‌ರೈಟರಿಗಾಗಿ ಕೀ ಬೋರ್ಡನ್ನು ತಯಾರಿಸುವ ಬಗ್ಗೆ ಸರ್ಕಾರದವರಿಂದ ನೇಮಿಸಲಾಗಿದ್ದ ಪ್ರವೀಣರ ಸಮಿತಿಯು ಹಲವು ಬಾರಿ ಸಭೆ ನಡೆಸಿ ಕನ್ನಡ ಭಾಷೆಯ ಟೈಪ್‌ರೈಟರ್ ಮತ್ತು ಲಿನೋಟೈಪು ಯಂತ್ರಗಳಿಗೆ ಭಾಷೆಯ ಎಲ್ಲಾ ಅಕ್ಷರಗಳನ್ನೂ ಕೀಬೋರ್ಡನ್ನು ಸಹಕರಿಸಲು ಸಾಧ್ಯವಿಲ್ಲವೆಂದು ಗೊತ್ತಾದ ಕಾರಣ ಕನ್ನಡ ಭಾಷೆಯ ಲಿಪಿಯನ್ನು ಸುಧಾರಣೆ ಮಾಡುವ ವಿಷಯಕ್ಕೆ ಸಮಿತಿಯು ಗಮನ ಕೊಡಬೇಕೆಂದು ಸರ್ಕಾರದವರು ಕೋರಿದ್ದರು. ಈ ಬಗ್ಗೆ ಸಮಿತಿಯವರು ಲಿಪಿ ಸುಧಾರಣೆಯಲ್ಲಿ ಆಸಕ್ತಿಯುಳ್ಳ ಜನರ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತಿರುವರು. ಈ ವಿಷಯದಲ್ಲಿ ಆಸಕ್ತಿಯುಳ್ಳವರು ತಮ್ಮ ಸಲಹೆಗಳನ್ನು ತಿಳಿಸಬೇಕೆಂದು ಸಮಿತಿಯವರು ಪ್ರಾರ್ಥಿಸಿದ್ದಾರೆ

ಖೈದಿಯ ವಾಂತಿಯಲ್ಲಿ ಚಿನ್ನದ ಬಳೆ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದ ಚಿಕ್ಕ ಪಟಾಲಿಗ ಎಂಬ ಖೈದಿಯು ಎದೆಯ ನೋವಿಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲ್ಪಟ್ಟನಂತರ, ಅವನಾಗಿಯೇ ವಾಂತಿ ಮಾಡಿದನೆಂದೂ, ಆಗ ಒಂದು ಚಿನ್ನದ ಬಳೆಯು ಅವನ ಬಾಯಿಯಿಂದ ಬಿತ್ತೆಂದೂ, ಸ್ವಲ್ಪ ಹೊತ್ತಿನ ನಂತರ ಅವನು ಮೃತಿ ಹೊಂದಿದನೆಂದೂ ಹೇಳಲಾಗಿದೆ

ವಿಶ್ವ ಆರೋಗ್ಯ ಸಂಸ್ಥೆಗೆ ಡಾ॥ ಬಿ. ಜಯರಾಂ

ವಿಶ್ವ ಆರೋಗ್ಯ ಸಂಸ್ಥೆಯವರು ತಿರುಚಿನಾಪಳ್ಳಿಯಲ್ಲಿ ಸ್ಥಾಪಿಸಲಿರುವ ಕ್ಷಯ ರೋಗ ನಿರೋಧ ಕೇಂದ್ರದ ಮುಖ್ಯಾಧಿಕಾರಿಯನ್ನಾಗಿ ಮೈಸೂರು ಸಂಸ್ಥಾನದ ವೈದ್ಯಕೀಯ ಸೀನಿಯರ್ ಸರ್ಜನ್ ಡಾ॥ ಬಿ ಜಯರಾಂರವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ

ಅಮೆರಿಕದ ಸಿನಿಮಾ ನಟಿ ಕತ್ತನ್ನು ಕೊಯ್ದುಕೊಂಡಳು

ಜೂಡಿ ಗಾರ್ಲೆಂಡ್ ಎಂಬ ೨೭ ವಯಸ್ಸಿನ ಹಾಲಿವುಡ್ ಸಿನಿಮಾ ನಟಿಯು ಮನಸ್ಸಿನ ವ್ಯಸನವನ್ನು ತಡೆಯಲಾರದೆ ಕತ್ತನ್ನು ಕೊಯ್ದುಕೊಂಡಳೆಂದೂ, ಆದರೆ ಬಲವಾದ ಗಾಯವಾಗಲಿಲ್ಲವೆಂದೂ ಹೇಳಲಾಗಿದೆ

ಭಸ್ಮವಾದ ದೇವಾಲಯದಲ್ಲಿ ಭಾರಿ ನಾಗರ ಹಾವು

ಕೊಟ್ಟಾಯಂ ಬಳಿ ಶಬರಿಮಲೈ ಗುಡ್ಡದಲ್ಲಿದ್ದ ದೇವಾಲಯವು ಸುಡಲ್ಪಟ್ಟಿತ್ತಷ್ಟೆ? ಸುಟ್ಟುಬಿದ್ದ ಭಾಗಗಳನ್ನು ಕೆಲಸಗಾರರು ತೆಗೆದು ಸಾಫು ಮಾಡುತ್ತಿದ್ದಾಗ, ದೇವರ ವಿಗ್ರಹದ ಕೆಳಗಿದ್ದ ೧೫ ಅಡಿ ಉದ್ದದ ಭಾರಿ ನಾಗರ ಹಾವೊಂದು ರೋಷದಿಂದ ಹೆಡೆಯನ್ನು ಬಿಚ್ಚಿ ನುಗ್ಗಿತೆಂದೂ, ಅದರ ಮೇಲೆ ಕಲ್ಲನ್ನು ಎಸೆದರೂ ಸಹ ಅದು ಆವೇಶದಿಂದ ಮುಂದೆ ಬಂದಿತೆಂದೂ, ಆದರೆ ತಿರುವಾಂಕೂರಿನ ದೇವಾಲಯಗಳ ಸಮಿತಿಯ ಅಧ್ಯಕ್ಷರಾದ ಶ್ರೀ ಉನ್ನಿ ಕೃಷ್ಣನ್‌ರವರು ಅದರ ಬಳಿಗೆ ಹೋಗಿ ಚೆನ್ನನ್ನು ನಮಿಸಿ "ಅಯ್ಯಪ್ಪ ಹೋಗು" ಎಂದು ಪ್ರಾರ್ಥಿಸಲಾಗಿ ಅದು ಹೆಡೆ ಮುಚ್ಚಿ ಹೊರಟುಹೋಯಿತೆಂದೂ ತಿಳಿದುಬಂದಿದೆ

ಪೌರಸಭೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಲಭಿಸುವುದೇ?

ಸ್ವಂ ಸು.ಪ್ರೋ] ಬೆಂಗಳೂರು ೨೨

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ಈ ದಿನ ಬೆಳಗ್ಗೆ ಮದರಾಸಿಗೆ ಪ್ರಯಾಣ ಮಾಡಿದರು. ಮದರಾಸಿನಲ್ಲಿ ಪೌರಸಭೆಗಳು ನಡೆಸುತ್ತಿರುವ ಕಾರ್ಯಕಲಾಪಗಳ ಬಗ್ಗೆಯೂ ಮತ್ತು ಪೌರಸಭೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆಯೂ ಅವರ ಚರ್ಚೆ ನಡೆಸುವರೆಂದು ಗೊತ್ತಾಗಿದೆ

○ ಸಂಸ್ಥಾನದ ಜಿಲ್ಲಾ ಬೋರ್ಡುಗಳನ್ನು ರದ್ದುಪಡಿಸಿ ಜಿಲ್ಲಾ ಕೌನ್ಸಿಲ್ಲುಗಳನ್ನು ಮಾಡುವ ಆಲೋಚನೆಯು ಸರ್ಕಾರಕ್ಕೆ ಇರುವುದಾಗಿ ಗೊತ್ತಾಗಿದೆ

ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಚುನಾವಣೆ

ಕಾಂಗ್ರೆಸ್ ಅಧಿವೇಶನಕ್ಕೆ ರಾಜಧಾನಿಯಿಂದ ಹೋಗಬೇಕಾದ ಇಬ್ಬರು ಪ್ರತಿನಿಧಿಗಳ ಚುನಾವಣೆಯ ಬಗ್ಗೆ ಬದಲಾವಣೆಯಾದ ವೇಳಾ ಪಟ್ಟಿಯ ಪ್ರಕಾರ ನಾಳೆ ಮಧ್ಯಾಹ್ನ ೩ ರಿಂದ ರಾತ್ರಿ ೮ ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಜುಲೈ ೨೭ನೇ ತಾರೀಖು ಸಂಜೆ ೩ ರಿಂದ ರಾತ್ರಿ ೮ ರ ವರೆಗೆ ಚುನಾವಣೆ ನಡೆಯುವುದು. ರಾತ್ರಿ ೮ ರ ಮೇಲೆ ಎಣಿಕೆಯಾಗಿ, ಮಾರನೇ ಮಧ್ಯಾಹ್ನ ೧೨ ಗಂಟೆಗೆ ಫಲಿತಾಂಶವನ್ನು ಪ್ರಕಟಿಸಲಾಗುವುದು. ಅರ್ಜಿಗಳ ನಮೂನೆಯನ್ನು ಕಾಂಗ್ರೆಸ್ ಕಛೇರಿಯಲ್ಲಿ ಪಡೆಯಬಹುದು

ಯಳಂದೂರು ಪೌರಸಭಾ ಚುನಾವಣೆ ಫಲಿತಾಂಶ

ಯಳಂದೂರು ಪೌರಸಭೆಯ ಚುನಾವಣೆಯು ನೆನ್ನೆ ದಿನ ನಡೆದು, ಕೆಳಗೆ ಕಂಡ ಉಮೇದುವಾರರುಗಳು ಜಯಶೀಲರಾಗಿದ್ದಾರೆ - ಶ್ರೀಗಳಾದ-ಆರ್ ನಾಗರಾಜ್, ಸಿ ನಂಜಪ್ಪ, ಪಟೇಲ್ ರಂಗನಾಯಕ, ಎಸ್ ಲಕ್ಷ್ಮೀನಾರಾಯಣರಾವ್, ಬಿ ಮುತ್ತು, ನಾಯಕ, ಮರಿನಾಯಕ, ಆರ್ ಪುಟ್ಟರಂಗನಾಯಕ, ಎಂ ಚಿಕ್ಕೇಗೌಡ, ರಂಗನಾಯಕ, ಮತ್ತು ಬಿ ನಂಜುಂಡನಾಯಕ

ಕನ್ನಂಬಾಡಿ ನೀರಿನ ಮಟ್ಟ

ಈ ದಿನ ಕೃಷ್ಣರಾಜ ಸಾಗರದಲ್ಲಿ ನೀರು ೭೭-೯೯ ಅಡಿಯ ಮಟ್ಟದಲ್ಲಿದೆ

ದೇವೀಸಿಂಗರಿಗೆ ಜಾಮೀನು

ಮೈಸೂರು ೨೦

ಸರ್ಕಾರಿ ಅಧಿಕಾರಿಗಳಿಬ್ಬರನ್ನು ಕೊಂದ ಆಪಾದನೆಗಾಗಿ ಶಿಕ್ಷೆಗೆ ಗುರಿಯಾಗಿರುವ ಶ್ರೀ ದೇವೀಸಿಂಗರನ್ನು ಜಾಮೀನಿನ ಮೇಲೆ ಬಿಡಲಾಗಿದೆ. ಅವರು ತಮ್ಮ ಶಿಕ್ಷೆಯ ಮೇಲೆ ಅಪೀಲು ಮಾಡುವರೆಂದು ತಿಳಿದುಬಂದಿದೆ. ಶ್ರೀ ದೇವಿ ಸಿಂಗರಿಗೆ ಕಠಿಣ ಸಜಾ ಎಂಬ ಶಿರೋನಾಮೆಯಲ್ಲಿ ನೆನ್ನೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ ವಿಷಯವಾಗಿ ೫ ಸಾವಿರ ರೂ ಜುಲ್ಮಾನೆ ವಿಧಿಸಿದರೆಂಬುದರ ಬದಲು ೩೦೦ ರೂ ಎಂದು ಬಿದ್ದಿದೆ. ವಾಚಕರು ಅದನ್ನು ೨೦೦ ರೂ ಎಂದು ಓದಿಕೊಳ್ಳಬೇಕೆಂದು ಕೋರಲಾಗಿದೆ

ಖುಷ್ಕಿ ಅನ್ನ ಮಾರುತ್ತಿದ್ದುದಕ್ಕೆ ಜುಲ್ಮಾನೆ

ರಾಜಧಾನಿಯ ಸವಾಯ್ ಪತ್ರಿಯ ಮಿಲಿಟರಿ ಹೋಟೇಲಿನಲ್ಲಿ ಮುಮ್ಮ್ರ ಕಾಶ ಎಂಬುವರು ಮೊನ್ನೆ ದಿನ ಖುಷ್ಕಿ ಅನ್ನ ಮಾಡಿ ಮಾರುತ್ತಿದ್ದುದನ್ನು ಫುಡ್ ರೇಷನ್ ಆಫೀಸಿನವರು ಪತ್ತೆ ಹಚ್ಚಿ ಮೊಕದ್ದಮೆ ಹೂಡಿದ್ದರು. ಆಪಾದಿತನಿಗೆ ಕೋರ್ಟು ಮುಗಿಯುವವರೆಗೆ ಸಾದಾ ಸಜಾ ಮತ್ತು ೫೦ರೂ ಜುಲ್ಮಾನೆ, ತಪ್ಪಿದರೆ ಒಂದು ತಿಂಗಳು ಸಾದಾ ಸಜಾ ಶಿಕ್ಷೆಯನ್ನು ವಿಧಿಸಲಾಯಿತು

ರಹದಾರಿ ಇಲ್ಲದೆ ಟೀ ಷಾಪ್ ನಡೆಸುತ್ತಿದ್ದುದು ಪತ್ತೆ

ನೆನ್ನೆ ದಿನ ಸಂತೆ ಪೇಟೆಯಲ್ಲಿ ಮಹದೇವ ಎಂಬುವರೂ, ಈ ದಿನ ಶ್ರೀರಂಗಪಟ್ಟಣದ ರಸ್ತೆಯ ಹಳೇ ಉಕ್ಕಡದ ಮನೆಯಲ್ಲಿ ನಾರಾಯಣದಾಸ್ ಎಂಬುವರೂ, ರಹದಾರಿ ಪಡೆಯದೆ ಟೀ ಷಾಪ್ ನಡೆಸುತ್ತಿದ್ದುದನ್ನು ಫುಡ್ ರೇಷನ್ ಆಫೀಸಿನವರು ಪತ್ತೆ ಹಚ್ಚಿ ಮೊಕದ್ದಮೆ ಹೂಡಿದ್ದಾರೆ

ವಿದ್ಯುಚ್ಛಕ್ತಿಯಿಂದ ಬಾಲಕನು ಮರಣಹೊಂದಿಲ್ಲ

ಕಳೆದ ಭಾನುವಾರ ಚಾಮುಂಡಿ ಬಡಾವಣೆಯಲ್ಲಿ ಪಟವಾಡಿಸುತ್ತಿದ್ದ ಬಾಲಕನು ವಿದ್ಯುಚ್ಛಕ್ತಿಗೆ ಸಿಕ್ಕಿ ಸತ್ತನೆಂದು ಮೊನ್ನೆ ದಿನ ನಮ್ಮ ಪತ್ರಿಕೆಯಲ್ಲಿ ವರದಿಯಾಗಿರುವ ಸುದ್ದಿಯ ಬಗ್ಗೆ ಆ ಬಾಲಕನು ಸತ್ತಿಲ್ಲವೆಂದೂ, ಈಗ ಆರೋಗ್ಯವಾಗಿರುವನೆಂದೂ ತಿಳಿಸಲಾಗಿದೆ.

ಲಂಚ ಕೊಡಲು ಪ್ರಯತ್ನಿಸಿದುದಕ್ಕಾಗಿ ಜುಲ್ಮಾನೆ

ನಂಜನಗೂಡು ೨೧

ಈ ತಾಲ್ಲೂಕಿನ ಅಮಲ್ದಾರರಾದ ಶ್ರೀ ಬಿ ಮಲ್ಲಣ್ಣನವರಿಗೆ ಲಂಚ ಕೊಡಲು ಪ್ರಯತ್ನಿಸಿದ ಆಪಾದನೆಯು ರುಜುವಾತಾಗಿ, ಇಲ್ಲಿನ ೧ನೇ ವಿಶೇಷ ನ್ಯಾಯಾಧೀಶರು ಚಿಕ್ಕಸಿದ್ದೇಗೌಡ ಎಂಬುವನಿಗೆ ಒಂದುನೂರು ರೂ ಗಳ ದಂಡವನ್ನು ವಿಧಿಸಿರುವರು.

ಜಿಲ್ಲಾ ಚುನಾವಣಾಧಿಕಾರಿಗಳು

ರಾಜಧಾನಿಯ ವಕೀಲರಾದ ಶ್ರೀ ಕೆ. ಎಸ್ ಸೂರ್ಯನಾರಾಯಣರಾವ್‌ರನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗಳ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸುವವರು ನಮೂನೆಗಳಲ್ಲಿ ಅರ್ಜಿಗಳನ್ನು ರಾಜಧಾನಿಯ ಹೊರಪೇಟೆ ರಸ್ತೆಯ "ಅರುಣ" ಪತ್ರಿಕೆಯ ಕಛೇರಿಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ನಾಳೆದ್ದು ೬ ಗಂಟೆಯೊಳಗಾಗಿ ತಲುಪಿಸಬೇಕೆಂದು ಕೋರಲಾಗಿದೆ

ಬ್ರಿಟಿಷ್ ಸರ್ಕಾರವನ್ನು ಉರುಳಿಸಲು ಚರ್ಚಿಲ್ ಪ್ರಯತ್ನ

ಯೂರೋಪಿನ ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪತ್ತಿ ಬಗ್ಗೆ ಷಟ್ ರಾಷ್ಟ್ರಗಳ ಸಮ್ಮೇಳನದಲ್ಲಿ ಬ್ರಿಟನ್ನಿನ ಭಾಗವಿಲ್ಲದುದರ ಬಗ್ಗೆ, ಬ್ರಿಟಿಷ್ ಟೋರಿಗಳ ಮುಖಂಡರಾದ ಮಿಸ್ಟರ್ ಚರ್ಚಿಲ್ಲರು, ಸರಕಾರವನ್ನು ಸವಾಲಿಗೆ ಕರೆಯುವರೆಂದೂ, ಇದನ್ನು ಕಾರ್ಮಿಕ ಸರಕಾರವು ಎದುರಿಸುವುದಾಗಿಯೂ ಹೇಳಲಾಗಿದೆ. ಪಾರ್ಲಿಮೆಂಟಿನಲ್ಲಿ ಈ ವಿಷಯದ ಬಗ್ಗೆ ಸರಕಾರಕ್ಕೆ ಸೋಲಾದರೆ, ಅಟ್ಲಿ ಮಂತ್ರಿ ಮಂಡಳವು ಬೀಳುವುದೆಂದು ಹೇಳಲಾಗಿದೆ

ಮಗುವಿನ ಮಾರಾಟಕ್ಕಾಗಿ ಸ್ತ್ರೀಯ ದಸ್ತಗಿರಿ

ವಿಜಾಪುರ ನಗರದ ಬಳಿ ಸತ್ತೂರು ತಾಲ್ಲೂಕಿನ ರಾಕಮಂಚಿ ಎಂಬಹಳ್ಳಿಯಲ್ಲಿ ೨ ತಿಂಗಳಿನ ಗಂಡು ಶಿಶುವನ್ನು ಮಾರಾಟ ಮಾಡಲೆತ್ನಿಸಿದುದಕ್ಕಾಗಿ ಕವಮಣಿ ಎಂಬಾಕೆಯನ್ನು ದಸ್ತಗಿರಿ ಮಾಡಲಾಗಿದೆ. ಅದೇ ತಾಲ್ಲೂಕಿನ ಕನ್ನೆ ಶಿರ ಪ್ರಾಮೂರು ಎಂಬ ಹಳ್ಳಿಯ ಮಗುವೊಂದು ಕಾಣೆಯಾಗಿದೆಯೆಂದು ಪೋಲೀಸರಿಗೆ ದೂರು ಕೊಡಲಾಗಿತ್ತು. ಕವಮಣಿಯ ಮೇಲೆ ಮೊಕದ್ದಮೆಯನ್ನು ಹೂಡಲಾಗುವುದು

ಒಂದು ಕಸಿಯನ್ನು ಕೊಂದರೆ ೨ ರೂ.

ಅಂಬಾಲಾ ಜಿಲ್ಲೆಯ ಹಲವು ಭಾಗಗಳಲ್ಲಿ ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ಕೆ ಅಡ್ಡಿ ತರುತ್ತಿರುವ ಕೋತಿಗಳ ಕಾಟವನ್ನು ತಪ್ಪಿಸಲು, ಅವುಗಳನ್ನು ಹೊಡೆದು ಕೊಂದವರಿಗೆ ಕೋತಿಯೊಂದಕ್ಕೆ ೨ ರೂ ಗಳನ್ನು ಕೊಡುವುದಾಗಿ ಪಂಜಾಬ್ ಸರ್ಕಾರದವರು ಘೋಷಿಸಿದ್ದಾರೆ. ಬಹುಮಾನವನ್ನು ಪಡೆಯುವವರು ಸಂಗ್ರಹಿಸಿದ ಬಾಲವನ್ನು ಕಂದು ನ್ಯಾಯಾಧೀಶರ ಮುಂದೆ ತೋರಿಸಬೇಕು

○ ದಕ್ಷಿಣ ಆಫ್ರಿಕದ ಪ್ರಧಾನಿ ಡಾ॥ಮೇಲನ್‌ರವರ ಬಂಗಲೆಗೆ ನೆನ್ನೆ ಬೆಂಕಿ ಬಿದ್ದಿತು. ಪ್ರಧಾನಿ ಮತ್ತು ಅವರ ಮಗಳನ್ನು ಪಾರು ಮಾಡಲಾಯಿತು. ಶಯನ ಮಂದಿರದಲ್ಲಿ ಅಗ್ನಿಯು ಕಾಣಿಸಿಕೊಂಡಿತು. ಕೆಲವು ವಸ್ತ್ರಗಳು ಭಸ್ಮವಾದವು

೧೫ ಲಕ್ಷ ಪೌಂಡುಗಳ ಮೋಸದ ಪತ್ತೆಗೆ ಪ್ರಯತ್ನ

ಬ್ರಿಟನ್ನಿನಲ್ಲಿ ವ್ಯವಸ್ಥಿತವಾದ ಮೋಸದ ಸಂಬಂಧವಾದ ಎರಡು ವಿದ್ಯಮಾನಗಳ ಪತ್ತೆಯಲ್ಲಿ ಸ್ಕಾಟ್ಲೆಂಡ್ ಯಾರ್ಡಿನ ಪತ್ತೆ ಪೋಲೀಸರು ತೊಡಗಿದ್ದಾರೆ. ಇವು ೧೫ ಲಕ್ಷ ಪೌಂಡುಗಳ ವ್ಯವಹಾರಗಳಾಗಿವೆ ಇಂಗ್ಲೆಂಡಿನ ಮಿಡ್ಲೆಂಡ್ ಮತ್ತು ಪೂರ್ವ ತೀರಗಳಲ್ಲಿರುವ ೮೦ ಕಟ್ಟಡಗಳ ಕಂಪೆನಿಗಳು ಈ ಸಂಬಂಧವಾಗಿ ತಂಟೆಗೆ ಗುರಿಯಾಗಿವೆ ಯುದ್ಧದ ಪಕ್ಷದ ಸಮಿತಿಯನ್ನು ಮೋಸಗೊಳಿಸಲು ಪ್ರಯತ್ನ ನಡೆದಿದೆಯೆಂದು ಆಪಾದಿಸಲಾಗಿದೆ

ರಷ್ಯದಲ್ಲಿ ಮತ್ತೊಮ್ಮೆ ಅಣು ಸ್ಫೋಟನ

ಜುಲೈಗೆ ರಷ್ಯದಲ್ಲಿ ಒಂದು ಕಡೆ ಮತ್ತೊಮ್ಮೆ ಅಣು ಸ್ಫೋಟನೆಯಾದುದಾಗಿ ತಿಳಿದುಬಂದಿರುವುದೆಂದು ಅಮೆರಿಕದ ಸೈನ್ಯಗಳ ಕಾಲೇಜಿನ ಪ್ರೊಫೆಸರೊಬ್ಬರು ತಿಳಿಸಿದ್ದಾರೆ. ಬರುವ ಸೆಪ್ಟೆಂಬರ್ ತಿಂಗಳಿನೊಳಗೆ ರಷ್ಯವು ೬ ಅಣು ಬಾಂಬುಗಳನ್ನು ತಯಾರಿಸುವುದೆಂದೂ, ಬರುವ ವರ್ಷದಲ್ಲಿ ೨೫ ಬಾಂಬುಗಳು ತಯಾರಾಗುವುವೆಂದೂ ಇವರು ಹೇಳಿದ್ದಾರೆ

ಚಾಮುಂಡಿ ಬೆಟ್ಟದ ಬಳಿ ಪ್ರಾಣಿ ಬಲಿ ತಪ್ಪಬೇಕು

ಚಾಮುಂಡೇಶ್ವರಿ ಬೆಟ್ಟದ ಪಾದದ ಬಳಿ ಪ್ರಾಣಿಗಳ ಬಲಿಯಾಗುತ್ತಿರುವುದರಿಂದ ಆಚಾರ ಶೀಲರೂ, ಈಶ್ವರೀ ಭಕ್ತರೂ ಆದ ಅನೇಕ ಯಾತ್ರಿಕರಿಗೆ ತುಂಬಾ ಅಡಚಣೆಯಾಗುತ್ತಿದೆ ಮಹಾತ್ಮಗಾಂಧಿಯವರ ಅಹಿಂಸಾ ತತ್ವ ಪಾಲನೆಯ ಈ ಕಾಲದಲ್ಲೂ ಇಂತಹ ಕೃತ್ಯಗಳು ಬಹಿರಂಗದಲ್ಲಿ ನಡೆಸಲು ಅವಕಾಶ ಕೊಡುವುದು ತುಂಬಾ ವಿಷಾದಕರ ಅಮ್ಮನವರ ಪಾದ ಪೂಜೆ ಮಾಡುವ ಅರ್ಚಕರು ಬಲಿ ಕೊಡಲು ಬರುವವರಿಂದ ಕೋಳಿ ಒಂದಕ್ಕೆ ೨ ಆಣೆ, ಕುರಿಯೊಂದಕ್ಕೆ ೮ ಆಣೆಯಿಂದ ೮ ಆಣೆ ವರೆಗೆ ವಸೂಲು ಮಾಡಿ ಕೊಲೆ ಮಾಡುವ ಪ್ರಾಣಿಗಳ ಮೇಲೆ ತೀರ್ಥದ ಜಲವನ್ನು ಚೆಲ್ಲುತ್ತಾರೆ ಈ ಕೃತ್ಯಗಳನ್ನು ಸರ್ಕಾರ ಮತ್ತು ಪೌರಸಭೆಗಳು ನಿಲ್ಲಿಸಲು ಏರ್ಪಾಡು ಮಾಡುವುದು ಒಳ್ಳೆಯದು- ಎಂದು ರಾಜಧಾನಿಯ ಶ್ರೀ ಎಂ ಸಿ ನರಸಿಂಹಯ್ಯನವರು ಪತ್ರ ಬರೆದು ತಿಳಿಸಿದ್ದಾರೆ ಪ್ರಾಣಿಗಳನ್ನು ಬಲಿ ಕೊಡುವುದರಿಂದ ದೇವತೆಯು ಪ್ರಸನ್ನಳಾಗುವಳೆಂದು ಭಾವಿಸುವುದು ಕೇವಲ ಕಲ್ಪನೆಯೆಂದೂ ಜಗಜ್ಜನನಿಯೆಂದು ಕರೆಸಿಕೊಂಡಿರುವ ದೇವಿಯು ಪ್ರಾಣಿಗಳ ಬಲಿಯನ್ನು ಕೇಳುವುದಿಲ್ಲವೆಂದೂ ಅವರು ಹೇಳಿದ್ದಾರೆ

ಭಾರತದ ವ್ಯವಸಾಯದ ಬೆಳೆಯ ಸರ್ವೆ

ಅಖಿಲ ಭಾರತದ ಆಧಾರದ ಮೇಲೆ ವ್ಯವಸಾಯದ ಬೆಳೆಗಳು ಮತ್ತು ಬೆಲೆಗಳ ಬಗ್ಗೆ ತಕ್ಕ ವಿಷಯಗಳನ್ನು ತಿಳಿದುಕೊಳ್ಳಲು ಭಾರತ ಸರ್ಕಾರದವರು ಒಂದು ರಾಷ್ಟ್ರೀಯ ಮಾದರಿ ಸರ್ವೆಯನ್ನು ಕೈಗೊಳ್ಳಲಿದ್ದಾರೆಂದು ಮೈಸೂರು ಸಂಸ್ಥಾನದ ಸೆನ್ಸಸ್ ಕಮೀಷನರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ತಿಳಿಸಿರುವರು ಸರ್ವೆಗೆ ೨೫ ಲಕ್ಷ ರೂಗಳ ಖರ್ಚಾಗುವ ಅಂದಾಜಾಗಿದೆ

ವಯಸ್ಕರ ಶಿಕ್ಷಣ ಸಮಿತಿ

ಮೊನ್ನೆ ಮಧ್ಯಾಹ್ನ ಮೈಸೂರು ಪೌರಸಭಾಧ್ಯಕ್ಷರೂ, ಕಮಿಷನರೂ, ಮತ್ತು ಪೌರಸಭೆಯ ಮ್ಯಾನೇಜಿಂಗ್ ಕಮಿಟಿ ಸದಸ್ಯರುಗಳೂ ಮೈಸೂರು ನಗರದ ವಯಸ್ಕರ ಶಿಕ್ಷಣ ಸಮಿತಿಯ ಕಛೇರಿಗೆ ಭೇಟಿಕೊಟ್ಟರು ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸ ಭದ್ರಯ್ಯನವರೂ ಮತ್ತು ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್ ಎ ಮುಂಜುನಾಥರವರೂ ಸ್ವಾಗತವಿತ್ತು ನಗರದಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಶಾಲೆಗಳನ್ನು ಪರಿಶೀಲಿಸಿ ಅವರ ಕೆಲಸಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಕೆಲವು ಬೋಧಪ್ರದವಾದ ಚಲನಚಿತ್ರಗಳನ್ನು ನೋಡಿ ಚಲನಚಿತ್ರರಿಂದಾಗಿ ಈ ಸಮಿತಿಯು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಲೆಂದು ಹಾರೈಸಿದರು

ಮನೆ ಕೆಲಸಕ್ಕಾಗಿ ಹೆಂಡತಿಯರಿಗೆ ಸಂಬಳ

ರಷ್ಯದಿಂದ ಆಕ್ರಮಿತವಾಗಿರುವ ಜರ್ಮನ್ ಪ್ರದೇಶದಲ್ಲಿರುವ ಜರ್ಮನ್ ಜನರು ತಮ್ಮ ಪತ್ನಿಯರು ಮಾಡುವ ಮನೆ ಕೆಲಸಗಳಿಗಾಗಿ ಇನ್ನು ಮುಂದೆ ಸಂಬಳವನ್ನು ಕೊಡಬೇಕಾಗುವುದು ಈ ಬಗ್ಗೆ ಶಾಸನ ಮಾಡಲು ಸಿದ್ಧತೆಯಾಗುತ್ತಿದೆ ಇದಲ್ಲದೆ ಅವಿವಾಹಿತ ತಾಯಂದಿರಿಗೆ ಹುಟ್ಟುವ ಮಕ್ಕಳನ್ನು ಔರಸ ಶಿಶುಗಳಂತೆ ಭಾವಿಸಬೇಕೆಂದು ಸಹಾ ಶಾಸನವಾಗಲಿದೆ

ಆಗಸ್ಟ್ ೧೫ಕ್ಕೆ ಈ ಸಾರಿ ವಿಶೇಷ ಸಂಭ್ರಮವಿಲ್ಲ

ಭಾರತವು ಪ್ರಜಾಸತ್ತಾತ್ಮಕ ರಾಜ್ಯವಾಗಿ ಈ ಜನವರಿ ೨೬ ರಲ್ಲಿ ಮಾರ್ಪಟ್ಟಿರುವುದರಿಂದ ಆಗಸ್ಟ್ ೧೫ ರಂದು ಹೆಚ್ಚಿನ ಸಂಭ್ರಮದ ಏರ್ಪಾಡು ಇರುವುದಿಲ್ಲ ಸಾರ್ವಜನಿಕ ರಜ ಮಾತ್ರ ಇರುವುದು ರಾಷ್ಟ್ರಾಧ್ಯಕ್ಷರು ದೆಹಲಿಯ ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸುವರು. ಸಂಜೆ ಸರ್ಕಾರಿ ಸತ್ಕಾರವು ಏರ್ಪಾಡಾಗುವುದು ಆದರೆ ಸೈನಿಕ ಕವಾಯಿತುಗಳು ಇರುವುದಿಲ್ಲ

ಕೆಂಪುಸಮುದ್ರದಲ್ಲಿ ಬ್ರಿಟಿಷ್ ಹಡಗಿನ ಸ್ಫೋಟನೆ

ಕೆಂಪು ಸಮುದ್ರದಲ್ಲಿ ಮೊನ್ನೆ ರಾತ್ರಿ ಇಂಡಿಯನ್ ಎಂಟರ್ ಪ್ರೈಸ್ ಎಂಬ ಬ್ರಿಟಿಷ್ ಹಡಗಿನಲ್ಲಿ ಅಸ್ಫೋಟನೆಯಾಗಿ ಅದರಲ್ಲಿದ್ದ ೭೩ ಜನ ನಾವಿಕರ ಪೈಕಿ ಒಬ್ಬ ಭಾರತೀಯನು ಮಾತ್ರ ಉಳಿದು ಕೊಂಡಿದ್ದಾನೆ ಅವನನ್ನು ಬೇರೊಂದು ಹಡಗು ಸಂರಕ್ಷಿಸಿತು ಭಾರತಕ್ಕಾಗಿ ೫೮೦ ಟನ್ ಸ್ಫೋಟಕ ವಸ್ತುಗಳು ಅದರಲ್ಲಿದ್ದವು

ಪ. ಬಂಗಾಳಾ ಸರಕಾರಕ್ಕೆ ಅರವಿಂದರ ಪ್ರತಿಮೆ

ಪುದುಚೇರಿಯಲ್ಲಿರುವ ಯೋಗಿ ಅರವಿಂದ ಘೋಷರ ಅಮೃತ ಶಿಲೆಯ ಪ್ರತಿಮೆಯನ್ನು ಪಶ್ಚಿಮ ಬಂಗಾಳ ಸರಕಾರಕ್ಕೆ ಬಹುಮಾನವಾಗಿ ಕೊಡಲು ಕಲ್ಕತ್ತದ ಶ್ರೀ ಅರವಿಂದ ಅವಿರ್ಭಾವ ಮಹೋತ್ಸವ ಸಮಿತಿಯು ನಿರ್ಧರಿಸಿದೆ ಹಿಂದೆ ಅರವಿಂದರನ್ನು ಅಲಿಪುರ ಬಾಂಬ್ ಮೊಕದ್ದಮೆಯ ಸಂಬಂಧವಾಗಿ ವಿಚಾರಣೆ ಮಾಡಲಾದ ಜಿಲ್ಲಾ ನ್ಯಾಯಾಸ್ಥಾನದ ಮುಂದೆ ಆ ಪ್ರತಿಮೆಯನ್ನು ಇಡಲಾಗುವುದು

ಪಾಕಿಸ್ಥಾನ ಮತ್ತು ಅಫ್ಘಾನಿಸ್ಥಾನ ಸೈನ್ಯಗಳಿಗೆ ಘರ್ಷಣೆ

ಬೆಲೂಚಿಸ್ಥಾನ ಮತ್ತು ಅಫ್ಘಾನಿಸ್ಥಾನದ ಸೈನ್ಯಗಳಿಗೆ ಕಳೆದ ಶನಿವಾರ ಘರ್ಷಣೆಯಾಯಿತೆಂದು ಹೇಳಲಾಗಿದೆ ಎರಡು ಕಡೆಯವರೂ ಗುಂಡುಹಾರಿಸಿದರೆಂದೂ, ಅಫ್ಘನ್ನರು ಪಾಕಿಸ್ಥಾನದ ಒಂದು ಪ್ರದೇಶದಲ್ಲಿ ದಾಳಿಯನ್ನು ಹೂಡಿದರೆಂದೂ ಹೇಳಲಾಗಿದೆ

ರೈಲಿನಿಂದ ಹುಡುಗಿ ಹಾರಿದಳು

ಪೆರಂಬೂರಿನ ಕಸ್ತೂರಿ ಬಾಯಿ ಎಂಬ ೭ ವರ್ಷದ ಹುಡುಗಿಯು ಮದ್ರಾಸಿಗೆ ಮೊನ್ನೆ ರೈಲಿನಲ್ಲಿ ೪ ಸೇರು ಅಕ್ಕಿಯನ್ನು ತರುತ್ತಿದ್ದಾಗ, ತಿರುವಳ್ಳೂರು ಬಳಿ ಮಂಮಯತ್ತು ಎಂಬುವನು ಅಕ್ಕಿಯ ಚೀಲವನ್ನು ಕಿತ್ತುಕೊಂಡು ರೈಲಿನಿಂದ ಹಾರಿದನೆಂದೂ, ಕೂಡಲೇ ಹುಡುಗಿಯೂ ಹಾರಿ ಕೂಗಿಕೊಂಡಳೆಂದೂ, ಸಮೀಪ ಹತ್ತಿರದಲ್ಲಿ ಕೆಲಸ ಮಾಡುತ್ತಿದ್ದ ರೈತರು ಅವನನ್ನು ಹಿಡಿದು ಪೋಲೀಸರ ವಶಕ್ಕೆ ಒಪ್ಪಿಸಿದರೆಂದೂ ಹೇಳಲಾಗಿದೆ

ಬಾವಿಗೆ ನೀರು ತುಂಬಿ ಬಿದ್ದ ಹಸುವನ್ನು ಮೇಲಕೆತ್ತಿದನು

ಅಮೆರಿಕದ ಮಸಾಚುಸೆಟ್ಸಿನ 'ಬೆಡ್‌ಫರ್ಡ್' ಎಂಬಲ್ಲಿ ಫನಾಲ್ಡ್ ಎಂಬೊಬ್ಬ ರೈತನ ಹಸುವು ೨೦ ಅಡಿಯ ಹಾಳು ಬಾವಿಯೊಂದಕ್ಕೆ ಬಿದ್ದು ಹೋಯಿತು ಅದನ್ನು ಮೇಲಕ್ಕೆತ್ತಲು ಅಶಕ್ತನು ಆ ಬಾವಿಗೆ ನೀರನ್ನು ಪೂರ್ತಿ ತುಂಬಲು ಆ ಹಸುವು ಮೇಲಕ್ಕೆ ತೇಲಿ ಬಂತು. ಆಗ ಅದನ್ನು ಹೊರಕ್ಕೆ ಎಳೆದುಕೊಂಡನು

ಒಲಂಪಿಯಾ
22-6-50 ರಿಂದ ದಿನವಹಿ 3 ಆಟಗಳು
ಪ್ರಕಾಶ್‌ರವರ
ಶಾದಿ-ಕಿ-ರಾತ್
ಪಾತ್ರ. ಗೀತಾಬಾಲಿ, ರೆಹಮಾನ್, ಅರುಣ್

ಬೆಳಗಿನ ಪ್ರದರ್ಶನ 23-6-50 ರಿಂದ
ದೋ ದಿಲ್
ಪಾತ್ರ. ಸುರೈಯ್ಯಾ, ಮೋತೀಲಾಲ್

ರಣಜಿತ್ ಜನಪ್ರಿಯವಾದ 3 ನೇ ವಾರ
ದಿನವಹಿ 3 ಪ್ರದರ್ಶನಗಳು
ಮನೋಹರ ನೃತ್ಯ, ಮಧುರ ಸಂಗೀತ ಹಾಸ್ಯಗಳಿಂದ ಕೂಡಿದ ತೆಲುಗು ಚಿತ್ರ
- ಮೊದಟಿ ರಾತ್ರಿ -
(FIRST NIGHT)
ಬೆಳಗಿನ ಪ್ರದರ್ಶನ 23-6-50 ರಿಂದ 3 ದಿನಗಳು ಮಾತ್ರ
ಶೈಗಾಲ್ ಮತ್ತು ಖುರ್ಷಿದ್ ನಟಿಸಿರುವ ಭಕ್ತ ಸೂರದಾಸ್

ಚಾಮುಂಡೇಶ್ವರಿ ಟಾಕೀಸ್
23-6-50 ರಿಂದ 4 ನೇ ವಾರ
ಮರುದನಾಡು ಎಳವರಸಿ
ಮುಖ್ಯ ಪಾತ್ರ:- ವಿ ಎನ್ ಜಾನಕಿ, ಎಂ ಜಿ. ರಾಮಚಂದ್ರನ್, ಪುಳಿಮೂಟೆ ಮತ್ತು ಲಲಿತಾ-ಪದ್ಮಿನಿ

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

ರಾಜಕಮಲ್,
ಮೈಸೂರು
23-6-50 ರ ಶುಕ್ರವಾರ 3 ನೇ ವಾರ
ಪ್ರತಿ ದಿನ 3 ಆಟಗಳು
ಪಲ್ಲೆಟೂರಿ ಪಿಲ್ಲ
(ತೆಲುಗು)
ಭೂಮಿಕೆ - ಅಂಜಲಿದೇವಿ, ರಾಮರಾವ್ ನಾಗೇಶ್ವರರಾವ್

— Morning Shows .—
from 23-6-50 for 4 days
PLAINSMAN —
— & THE LADY
With William Elliot,
Vera Ralston, Gail Patrick

ಮೈಸೂರು ಬ್ಯಾಂಕ್ ಲಿಮಿಟೆಡ್,
ಮೈಸೂರು
ಹರಾಜು
ಹೊಸ ಸಂತೇಪೇಟೆಯಲ್ಲಿರುವ ೩೨೦೩ ನೇ ನಂಬರ್ ಗೋಡೌನಿನಲ್ಲಿ ತಾ|| ೨೪-೬-೫೦ನೇ ಶನಿವಾರ ಬೆಳಗ್ಗೆ ೯ ಘಂಟೆಗೆ ೧೧೭೦ ಮೂಟೆ ಹತ್ತಿಕಾಳು ಮೈಸೂರು ಬ್ಯಾಂಕ್ ಮ್ಯಾನೇಜರ್‌ರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದೆಂದು ಈ ಮೂಲಕ ತಿಳಿಸಲಾಗಿದೆ ಹರಾಜಿನ ನಿಯಮಗಳನ್ನು ಸ್ಥಳದಲ್ಲಿಯೇ ತಿಳಿಸಲಾಗುವುದು
ಎಲ್. ಎಸ್. ವಿ. ರಾಮಯ್ಯರ್,
ಮ್ಯಾನೇಜರ್

Edited, printed and published by A. K Nagarajan, at Sadhvi Press, D Subbiah Road, Mysore.

ಸಾಧ್ವಿ

ಸಂಪುಟ ೮] ಶುಕ್ರವಾರ ೨೨-೬-೫೦ [ಸಂಚಿಕೆ ೩೩

ಮೈಸೂರಲ್ಲಿ ಸೀಮೆಎಣ್ಣೆ ಹತೋಟಿಯ ರದ್ದು

ಸಂಸ್ಥಾನದಲ್ಲಿ ಸೀಮೆಯೆಣ್ಣೆ ರೇಷನಿಂಗ್ ರದ್ದು

ಮೈಸೂರು ೨೨.

ಸೀಮೆಯೆಣ್ಣೆಯ ಸರಬರಾಜಿನ ಸ್ಥಿತಿಯು ಉತ್ತಮಗೊಂಡಿರುವುದರಿಂದ ಸಂಸ್ಥಾನದಲ್ಲಿ ಅದರ ಹತೋಟಿಯನ್ನು ರದ್ದುಗೊಳಿಸಲಾಗಿದೆ. ಚಿಲ್ಲರೆ ವ್ಯಾಪಾರಿಗಳು ಮತ್ತು ಸಗಟು ವ್ಯಾಪಾರಿಗಳು ಲೈಸೆನ್ಸ್ ಅಥವ ಪರವಾನಗಿಗಳಿಲ್ಲದಿದ್ದರೂ ಸೀಮೆಯೆಣ್ಣೆಯನ್ನು ಕೊಂಡುಕೊಳ್ಳಬಹುದೆಂದು ತಿಳಿಸಲಾಗಿದೆ. ಈ ಆಜ್ಞೆಯು ಕೂಡಲೇ ಜಾರಿಗೆ ಬರುವುದು.

ಮೈಸೂರಿನವರಿಗೆ ಕೊರಿಯಾ ರಾಜ್ಯದಲ್ಲಿ ಹುದ್ದೆ

ಮೈಸೂರು ಸಂಸ್ಥಾನದವರಾದ ಶ್ರೀ ನಾಗೇಶರಾವ್ ರವರನ್ನು ಅಖಿಲ ಸರಕಾರ ಅಧೀನ ಸಂಸ್ಥೆಯವರು ಕೊರಿಯಾದ ರಾಜಧಾನಿಯ ಖಜಾನೆಯ ಅಧಿಕಾರಿಯನ್ನಾಗಿ ನೇಮಿಸಿರುವರು. ಅವರಿಗೆ ಜಗತ್ತಿನ ಚಿಕಾಗೊ ನಗರದ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್ ಫಿಲಾಸಫಿ ಎಂಬ ಪ್ರಶಸ್ತಿ ಬಂದಿದೆ.

ವಾಣೀ ವಿಲಾಸ ಮೊಹಲ್ಲೆಯಲ್ಲಿ ಭಾನುವಾರ ವಿಶೇಷ ಅಂಚೆ ಸೌಕರ್ಯ

ರಾಜಧಾನಿಯ ವಾಣೀವಿಲಾಸ ಮೊಹಲ್ಲೆಯ ನಿವಾಸಿಗಳು ಭಾನುವಾರದಲ್ಲಿ ಅಂಚೆಗಳನ್ನು ಕಳುಹಿಸಲು ಅನುಕೂಲವಾಗಿರುವ ಅಂಚೆ ಕಛೇರಿಯಲ್ಲಿ ಒಂದು ವಿಶೇಷ ಭಾಗದ ಪೆಟ್ಟಿಗೆಯನ್ನು ಇಡಲಾಗುತ್ತದೆ. ಭಾನುವಾರ ಅಪರಾಹ್ನ ಈ ಪೆಟ್ಟಿಗೆಯನ್ನು ತೆಗೆದು ಕಾಗದಗಳನ್ನು ಆ ದಿನ ಸಂಜೆ ಕಳುಹಿಸುವುದು. ಆ ದಿನ ಮಧ್ಯಾಹ್ನ ೩ ಗಂಟೆಗೆ ಆ ಕಾಗದಗಳನ್ನು ತಿಳಿಸಲಾಗುವುದು. ಕೊಡಗು, ಚಿತ್ರದುರ್ಗ, ಹೆಗ್ಗಡದೇವನಕೋಟೆ, ನಂಜನಗೂಡು ಮತ್ತು ಚಾಮರಾಜನಗರಗಳನ್ನು ಬಿಟ್ಟು ಜಿಲ್ಲೆಗಳಿಗೂ ಈ ಕಾಗದಗಳು ರವಾನೆಯಾಗುವುವು.

ಚುನಾವಣಾ ಸಮಿತಿಗೆ ಮೈಸೂರಿನ ಸದಸ್ಯರು

ಭಾರತದ ಪಾರ್ಲಿಮೆಂಟಿನ ಚುನಾವಣಾ ಕ್ಷೇತ್ರಗಳ ವಿಂಗಡಣೆಯ ನಿಬಂಧನೆಗಳ ಪ್ರಕಾರ, ಮೈಸೂರು ಸಂಸ್ಥಾನದ ಸಲಹಾ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯು ಭಾರತದ ಚುನಾವಣಾ ಕಮಿಷನರಿಗೆ ಸಲಹೆಯನ್ನು ನೀಡುವುದು. ಸಮಿತಿಯಲ್ಲಿ ಶ್ರೀಗಳಾದ ಟಿ. ಚನ್ನಯ್ಯ, ಕೆ. ಹನುಮಂತಯ್ಯ, ಎಂ. ವಿ. ರಾಮರಾವ್, ಮತ್ತು ಹೆಚ್. ಆರ್. ... ಇದ್ದಾರೆ.

ವಿದ್ವಾನ್ ಶರೆಸಿಂಹ ಮೂರ್ತಿ ಶಾಸ್ತ್ರಿಗಳ ನಿಧನ

ಶ್ರೀಮನ್ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ತರ್ಕ ಶಾಸ್ತ್ರದ ಅಧ್ಯಾಪಕರಾಗಿದ್ದ ವಿದ್ವಾನ್ ಓ. ಎನ್. ನರಸಿಂಹ ಮೂರ್ತಿ ಶಾಸ್ತ್ರಿಗಳು ಬೆಂಗಳೂರಿನ ತಮ್ಮ ಗೃಹದಲ್ಲಿ ಕಳೆದ ೧೧ನೇ ತಾರೀಖು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೪ ವರ್ಷವಾಗಿತ್ತು. ಅವರು ಪ್ರಾಚೀನ ಮತ್ತು ನವೀನ ತರ್ಕ ಶಾಸ್ತ್ರಗಳಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿದ್ದರಲ್ಲದೇ, ಕಳೆದ ವರ್ಷ ಅಷ್ಟು ಕ ಬೇಕಾದವರಲ್ಲೂ ಸಹ ಪ್ರಥಮದರ್ಜೆಯಲ್ಲಿ ತೇರ್ಗಡೆಯಾಗಿದ್ದರು. ಮೃತರಾದವರಿಗೆ ಅವರ ನಿಧನದಿಂದ ವಿದ್ವತ್ ಸಮಾಜಕ್ಕೆ ಅಪಾರ ನಷ್ಟವುಂಟಾಗಿರುತ್ತದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಪ್ರತಿನಿಧಿ ಸ್ಥಾನವಿಲ್ಲ

ಬೆಂಗಳೂರು ೨೨.

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರುಗಳು ಕಾಂಗ್ರೆಸ್ ಅಧಿವೇಶನದ ಎಕ್ಸ್ ಅಫಿಸಿಯೋ ಪ್ರತಿನಿಧಿಗಳಾಗಲು ಹಕ್ಕಿಲ್ಲದಾಗುವರೆಂದು ತೀರ್ಮಾನಿಸಲಾಗಿದೆ. ಈ ವಿಷಯದ ಬಗ್ಗೆ ಕಾರ್ಯಕಾರಿ ಸಮಿತಿಯು ಮಾಡಿದ್ದ ಪ್ರಾರ್ಥನೆಯನ್ನು ಅಖಿಲಭಾರತ ಕಾಂಗ್ರೆಸ್ಸಿನ ಚುನಾವಣಾ ಸಮಿತಿಯು ನಿರಾಕರಿಸಿದೆಯೆಂದು ತಿಳಿದುಬಂದಿದೆ. ಇದರ ಮೇಲೆ ಕಾರ್ಯಕಾರಿ ಸಮಿತಿಗೆ ಅಪೀಲು ಮಾಡಬೇಕಾಗುವುದೆಂದು ಹೇಳಲಾಗಿದೆ.

ಹಲ್ಲು ತೆಗೆಯುವಾಗ ಹುಡುಗಿಯ ಮರಣ

ಚಿಕ್ಕಮಗಳೂರು ಜಿಲ್ಲೆಯ ಮೆಡಿಕಲ್ ಶಾಲೆಯ ಆಸ್ಪತ್ರೆಯ ಹಲ್ಲಿನ ವಿಭಾಗದಲ್ಲಿದ್ದ ಆರತಿ ಎಂಬ ಹದಿನಾಲ್ಕು ವರ್ಷದ ಯುವತಿಯು ಮೊನ್ನೆ ಆಸ್ಪತ್ರೆಗೆ ಹೋಗಿ, ನೋವಿನಿಂದ ಒಂದು ಹಲ್ಲನ್ನು ತೆಗೆಸುವ ಸಮಯದಲ್ಲಿ ಇಂಜಕ್ಷನ್ ಕೊಡಲಾಯಿತೆಂದೂ, ಕೂಡಲೇ ಆಕೆಯು ಪ್ರಜ್ಞೆಯಿಂದ ಮರಣಹೊಂದಿದಳೆಂದು ಹೃದಯ ಸ್ತಂಭನದಿಂದ ಸಾವು ಬಂದಿತೆಂದು ಹೇಳಲಾಗಿದೆ. ಇದೇ ರೀತಿ ಮತ್ತೊಬ್ಬರಿಗೂ ಇಂಜಕ್ಷನ್ ಕೊಟ್ಟಾಗ, ಅವರೂ ಮೂರ್ಛೆಗೊಂಡರೆಂದು ವರದಿಯಾಗಿದೆ.

ಮಂಗಗಳ ಕಾಟ

ಆಹಾರದ ಅಭಾವದ ಸಂಬಂಧವಾಗಿ ಉತ್ತರ ಭಾರತದ ಕಾನ್ಪುರ, ಅಲಹಾಬಾದ್ ಮತ್ತು ಮೊದಲಾದ ಪಟ್ಟಣಗಳಲ್ಲಿ ೩೦ ಸಾವಿರ ಕೋತಿಗಳನ್ನು ಸಾಗಿಸಬೇಕೆಂಬುದು ಈ ಕೃಷಿಕರ ಬಗ್ಗೆ ಹೇಳಿತ್ತು. ಆದರೆ ಕೋತಿಗಳ ಹಾವಳಿ ಹೆಚ್ಚಿದೆ. ಅಲ್ಲಿನ ನ್ಯಾಯಾಧೀಶರ ಕಛೇರಿಗೆ ನುಗ್ಗಿ, ಅಲ್ಲಿದ್ದ ಹಲವು ದಾಖಲೆ ಕಾಗದ ಪತ್ರಗಳನ್ನು ಹರಿದು ನಾಶ ಮಾಡುತ್ತಿವೆ. ಇವುಗಳನ್ನು ಹತ್ತಿಕ್ಕಲು ಮಾರ್ಗವೇನೆಂದು ಯೋಚಿಸಲಾಗಿದೆ.

ಎಲ್. ಎಸ್. ತರಗತಿಗಳು

ರಾಜಧಾನಿಯ ವಿ. ವಿ. ಪುರದ ಕನ್ಯಾ ಮಾಧ್ಯಮಿಕ ಶಾಲೆಯ ಕಟ್ಟಡದಲ್ಲಿ ಜುಲೈ ೧ನೇ ತಾರೀಖಿನಿಂದ ಎಲ್. ಎಸ್. ತರಗತಿಯ ಬಾಲಕ ಬಾಲಕಿಯರಿಗಾಗಿ ಶಿಕ್ಷಣ ತರಗತಿಗಳನ್ನು ತೆರೆಯಲಾಗುವುದು. ವಿವರಗಳನ್ನು ಸಂಚಾಲಕರಿಂದ ತಿಳಿಯಬಹುದು.

ಇಂಜನಿಯರಿಗೆ ಸಿಕ್ಕ ಪ್ರಯಾಣಿಕನ ತಲೆ ಬುರುಡೆ

ಕಳೆದ ಸೋಮವಾರ ಶಿವಮೊಗ್ಗದ ಸ್ಟೇಷನ್ ಸಮೀಪದಲ್ಲಿ ಒಬ್ಬ ಪ್ರಯಾಣಿಕನು ರೈಲಿನ ಬಾಗಿಲಿನಿಂದ ಹೊರಗೆ ಬಿದ್ದು ರೈಲಿನ ಚಕ್ರಕ್ಕೆ ಸಿಕ್ಕಿ ಮೃತಪಟ್ಟನು. ರೈಲು ಹೊರಡುವ ವೇಳೆಯಲ್ಲಿ ಹಾರಿ ಹತ್ತಲು ಹೋಗಿ ಕೆಳಗೆ ಬಿದ್ದು ಚಕ್ರದಡಿಗೆ ಸಿಕ್ಕಿದನು. ಇಂಜನಿನ ಚಕ್ರಕ್ಕೆ ಅವನ ತಲೆಯು ಸಿಕ್ಕಿಕೊಂಡು ಬುರುಡೆ ಹಾರಿಹೋಯಿತು.

ಮರಿಗಳನ್ನು ಹಿಡಿದುದಕ್ಕಾಗಿ ಸಿಂಹಗಳ ಪ್ರತೀಕಾರ

ರಾಜಕೋಟೆಯ ಸಮೀಪದಲ್ಲಿರುವ ಸಾಂಬಾ ಗ್ರಾಮದ ಬಳಿ ಎರಡು ಸಿಂಹದ ಮರಿಗಳನ್ನು ಒಬ್ಬ ಗ್ರಾಮಸ್ಥನು ಹಿಡಿದ ಸಂದರ್ಭದಲ್ಲಿ ಆ ಪ್ರದೇಶದ ಸಿಂಹಗಳೆಲ್ಲವೂ ಸೇರಿ ಮತ್ತು ಸುತ್ತಲ ಗ್ರಾಮಗಳ ಜನರ ಮೇಲೆ ಬಿದ್ದು ಪ್ರತೀಕಾರ ಮಾಡಿದವು. ೩ ಜನರು ಸಿಂಹಗಳ ಕೋಪಕ್ಕೆ ಬಲಿಯಾದರು.

ಸ್ಕಾಟಿಷ್ ಚರ್ಚ್ ಕಾಲೇಜ್ ಆಫ್ ಇಂಜನಿಯರಿಂಗ್ ಪರೀಕ್ಷೆ ಫಲಿತಾಂಶ

ರಾಜಧಾನಿಯ ಸ್ಕಾಟಿಷ್ ಚರ್ಚ್ ಕಾಲೇಜ್ ಆಫ್ ಇಂಜನಿಯರಿಂಗ್ ಪರೀಕ್ಷೆಗಳ ಫಲಿತಾಂಶವು ಪ್ರಕಟವಾಗಿದೆ. ೨ನೇ ವರ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿ ೨ನೇ ವರ್ಷಕ್ಕೆ ಬಂದಿದ್ದಾರೆ. ತರಗತಿಯಲ್ಲಿ ಉತ್ತೀರ್ಣರಾದವರು ೨ನೇ ತಾರೀಖು ತರಗತಿ ಪ್ರಾರಂಭವಾಗುವುದು. ಆಗ ನಿವೃತ್ತಿ ಗಂಗ ಜನರು ಶೇಕಡ ... ಆಗಿದ್ದಾರೆ.

ಜೇವಾರಿಗೆ ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಪ್

ಜೇವಾರಿಗೆ ಸೇರಬಯಸುವ ಬಾಲಕ ಬಾಲಿಕೆಯರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜೇವಾರಿಗೆ ಸಂಘದ ಕಛೇರಿಯಲ್ಲಿ ಸ್ಕಾಲರ್ ಷಿಪ್ಪುಗಳನ್ನು ನೀಡಲು ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿ ಫಾರಂಗಳನ್ನು ಸಂಘದ ಕಛೇರಿಯಿಂದ ಪಡೆಯಬಹುದು. ಕಡೆ ತಾರೀಖು ... ಎಂದು ತಿಳಿಸಲಾಗಿದೆ.

ಕನ್ನಂಬಾಡಿ ನೀರಿನ ಮಟ್ಟ

ಈ ದಿನ ಕನ್ನಂಬಾಡಿ ಕಟ್ಟೆಯಲ್ಲಿ ನೀರು ೮೦-೯೦ ಅಡಿ ಮಟ್ಟದಲ್ಲಿತ್ತು.

ಸಹ ಅಧ್ಯಾಪಕರಿಗೆ ವಿಶ್ವ ಸಂಸ್ಥೆಯ ಹುದ್ದೆ

ವಿಶ್ವ ಸಂಸ್ಥೆಯ ಆರ್ಥಿಕ ಶಾಖೆಗಳ ಕ್ರಿಸ್ತಿಯನ್ ಕಾಲೇಜಿನ ಅಧ್ಯಾಪಕರಾಗಿದ್ದ ಶ್ರೀ ... ಅವರನ್ನು ವಿಶ್ವ ಸಂಸ್ಥೆಯು ಆ ಶಾಖೆಯ ಹುದ್ದೆಗೆ ನೇಮಿಸಿದೆ. ಇವರು ಅಧಿಕಾರದ ಅವಧಿಯಲ್ಲಿ ವಿಶ್ವ ಸಂಸ್ಥೆಯ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವರು.

ಪರೀಕ್ಷಕರು ಮತ್ತು ವಿದ್ಯಾರ್ಥಿಗಳ ಹೆಸರು ತಿಳಿಯಲು ದಂಡ ಮಾಡುವ ವ್ಯವಸ್ಥೆ

ಪರೀಕ್ಷೆಗಳ ಫಲಿತಾಂಶಗಳು ಹೊರಬೀಳುವ ಮುನ್ನವೇ ಪರೀಕ್ಷಕರ ಹೆಸರುಗಳನ್ನು, ವಿದ್ಯಾರ್ಥಿಗಳ ಸಂಖ್ಯೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವವರಿಗೆ ದಂಡ ವಿಧಿಸುವ ಹೊಸ ವ್ಯವಸ್ಥೆಯೊಂದನ್ನು ಮೈಸೂರು ವಿಶ್ವವಿದ್ಯಾನಿಲಯವು ಜಾರಿಗೆ ತಂದಿದೆ. ಸೆಪ್ಟೆಂಬರ್ ತಿಂಗಳ ಪರೀಕ್ಷೆಯಲ್ಲಿ ಈ ಪದ್ಧತಿಯನ್ನು ಜಾರಿಗೆ ತರಲಾಗುವುದು. ಇದಕ್ಕಾಗಿ ೧೦೦ ರೂ. ಗಳ ದಂಡವು ವಿಧಿಸಲ್ಪಡುವುದೆಂದು ಹೇಳಲಾಗಿದೆ.

ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ

ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಚುನಾವಣೆಯು ಬರುವ ತಿಂಗಳು ೨ನೇ ತಾರೀಖು ನಡೆಯುವುದು. ನಾಮಪತ್ರಗಳನ್ನು ಸಲ್ಲಿಸಲು ಕಡೆಯ ದಿನಾಂಕವು ಜೂನ್ ೨೭ನೇ ತಾರೀಖು ಎಂದು ನಿಗದಿಪಡಿಸಲಾಗಿದೆ.

ಶಿಕ್ಷಣ ಶಿಬಿರದ ಪ್ರಾರಂಭೋತ್ಸವ

ಬೆಂಗಳೂರಿನಲ್ಲಿ ನಡೆಯುವ ಶಿಕ್ಷಣ ಸಮಿತಿಯ ಬೇಸಿಗೆ ಶಿಬಿರದ ಪ್ರಾರಂಭೋತ್ಸವವನ್ನು ಇದೇ ತಿಂಗಳು ೨೭ನೇ ತಾರೀಖು ಸಂಸ್ಥಾನದ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ಎಚ್. ವಿ. ಕೃಷ್ಣಸ್ವಾಮಿಯವರು ನೆರವೇರಿಸುವರು. ಈ ಶಿಬಿರದಲ್ಲಿ ೭೦ ಜನ ಕಾರ್ಯಕರ್ತರು ಭಾಗವಹಿಸುವರು.

ಶ್ರೀರಕ್ಷ ನ್ಯಾಯಾಧೀಶರ ಮೇಲೆ ಪತ್ರಿಕೆಯ ಆರೋಪ ನಿರಾಕರಣೆ

ಶ್ರೀ ಆರ್. ... ಅರಸಿನವರು ಶ್ರೀರಕ್ಷ ನ್ಯಾಯಾಧೀಶರಾದ ಶ್ರೀ ಪಿ. ಮೇ... ಪತ್ರಿಕೆಯ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನ್ಯಾಯಾಧೀಶರ ಮುಂದೆ ಹಾಜರಾಗಿದ್ದ ಮೊಕದ್ದಮೆಯನ್ನು ಹಿಂತೆಗೆದುಕೊಂಡಿದ್ದಾರೆ. ವಿಚಾರಣೆಗೆ ಇದನ್ನು ತೆಗೆದುಕೊಳ್ಳಲು ಮುನ್ಸಿಫ್ ನ್ಯಾಯಾಲಯಕ್ಕೆ ಅಧಿಕಾರವಿದೆಯೋ ಅಥವಾ ಜಿಲ್ಲಾ ನ್ಯಾಯಾಲಯಕ್ಕೆ ಅಧಿಕಾರವಿದೆಯೋ ಎಂಬ ವಿಷಯವನ್ನು ವಿಚಾರಣೆಗೆ ಬರುವ ೧ನೇ ತಾರೀಖು ವಾದಗಳಾಗುವುವು.

ಕೋಲಾರದ ಚಿನ್ನದ ಗಣಿಗಳ ಪ್ರಾರಂಭ

ಕೋಲಾರದ ಚಿನ್ನದ ಗಣಿಗಳ ಹತೋಟಿಯನ್ನು ಭಾರತಕ್ಕೆ ಒಪ್ಪಿಸುವ ಬಗ್ಗೆ ಮಾತುಕತೆ ನಡೆಸಲು ಶ್ರೀ ಎಂ. ಎ. ಶ್ರೀನಿವಾಸನವರು ಲಂಡನ್ನಿಗೆ ತೆರಳಲಿದ್ದಾರೆ. ಪ್ರಯಾಣ ಬೆಳೆಸುವರು.

ಮನುಷ್ಯ ಮತ್ತು ಮಂಗದ ಸಂಯುಕ್ತ ಸಂತಾನಕ್ಕೆ ಪ್ರಯತ್ನ ?

ವೈಜ್ಞಾನಿಕ ಪ್ರಯೋಗಗಳ ಮೂಲಕ ಮನುಷ್ಯ ಮತ್ತು ಕಪಿಗಳ ಸಂಯುಕ್ತ ಸಂತಾನವನ್ನು ಪಡೆಯಲು ವರ್ಜೀನಿಯ ವಿಶ್ವವಿದ್ಯಾನಿಲಯದ ಜೀವ ಶಾಸ್ತ್ರಜ್ಞರು ಮತ್ತು ಬ್ರಿಟೀಷ್ ವಿದ್ವಾಂಸರೂ ಪ್ರಯತ್ನಿಸುತ್ತಿದ್ದಾರೆಂದು ವರದಿಯಾಗಿದೆ. ಇದಕ್ಕೆ ಅನೇಕ ಕ್ರೈಸ್ತ ಪಾದ್ರಿಗಳು ಪ್ರತಿಭಟನೆಯನ್ನು ಸೂಚಿಸಿದ್ದಾರೆ. ಈ ರೀತಿಯ ಸಂತಾನವನ್ನುಂಟುಮಾಡುವುದು ಒಂದು ಕ್ರಾಂತಿಕಾರ ಪ್ರಯತ್ನವೆಂದೂ, ಮತ್ತು ಇದರಿಂದ ಸಮಾಜ ಮತ್ತು ನೀತಿಗೆ ಸಂಬಂಧಿಸಿದ ಒಂದು ತೊಡಕಿನ ಸಮಸ್ಯೆಯು ಉತ್ಪತ್ತಿಯಾಗುವುದೆಂದೂ ಬ್ರಿಟೀಷರು ತಿಳಿಸಿದ್ದಾರೆ. ಮನುಷ್ಯರ ಜೀವಕೋಶಗಳನ್ನು ಹೆಣ್ಣು ಕಪಿಗೆ ಪ್ರಯೋಗಿಸಿ "ಹೊಸಮಾನವ" ಸಂತಾನವನ್ನು ಪಡೆಯುವುದಕ್ಕೆ ಪ್ರಯತ್ನಗಳಾಗುತ್ತಿವೆ

ಭೂತಗಳನ್ನು ಓಡಿಸಲು ಪ್ರೇತ ಚಿಕಿತ್ಸಾಲಯ

ಆಸ್ಟ್ರಿಯಾದ ವೈದ್ಯ ಮಂತ್ರವಾದಿನಿಯು ಮನುಷ್ಯರ ಮೇಲೆ ಬರುವ ಭೂತಗಳನ್ನು ಓಡಿಸಲು ಒಂದು ಪ್ರೇತ ಚಿಕಿತ್ಸಾಲಯವನ್ನು ತೆರೆದಿದ್ದಾರೆ. ರೋಗಿಗಳನ್ನು ಮುಚ್ಚಿದ ಕೋಣೆಗಳಲ್ಲಿ ಕೂಡಿಸಿ ದಿನವೆಲ್ಲಾ ತಿರುಗಿಸುತ್ತಾರೆ. ಈ ಚಿಕಿತ್ಸಾ ವಿಧಾನದಿಂದ ಮನುಷ್ಯನ ಶರೀರಕ್ಕೆ ತೊಂದರೆಯಾಗದೇ ಪಿಶಾಚಗಳಿಗೆ ಮಾತ್ರ ಹಿಂಸೆಯಾಗುವುದೆಂದು ಮಂತ್ರವಾದಿನಿಯು ಹೇಳುತ್ತಾರೆ. ಈ ರೀತಿಯ ಚಿಕಿತ್ಸೆ ಪಡೆದ ಸ್ತ್ರೀಯೊಬ್ಬಳು ೩೩ ಗಾಯಗಳನ್ನು ಹೊಂದಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾಳೆ

ಲೇಷರ್ ಅಂಗಡಿಯವರು ಹೋಟೆಲು ನಡೆಸಕೂಡದು

ಮದರಾಸಿನಲ್ಲಿ ಗೀಷ್ ಅಂಗಡಿಗಳ ಮಾಲೀಕರುಗಳು ರಿಪೇರಿ ಅಂಗಡಿ ಮತ್ತು ಫಲಾಹಾರ ಮಂದಿರಗಳನ್ನು ನಡೆಸಕೂಡದೆಂದು ಅಲ್ಲಿನ ಸಿವಿಲ್ ಸಪ್ಲೈ ಅಧಿಕಾರಿಗಳು ತಿಳಿಸಿದ್ದಾರೆ

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಅವೆನ್ಯೂ ರಸ್ತೆ, ಶ್ರೀ ... ರಸ್ತೆ,
ಬೆಂಗಳೂರು.

ಮೈಸೂರಿನ ಮುನ್ನಡೆ

೧೯೪೭ ನೇ ಅಕ್ಟೋಬರ್ ೨೪ರಿಂದ ೧೯೫೦ ನೇ ಜನವರಿ ೨೬ ರವರೆಗೂ ಮೈಸೂರು ಸರಕಾರದ ನಾನಾ ಇಲಾಖೆಗಳಲ್ಲಿ ನಡೆದ ಪ್ರಗತಿಯನ್ನು ಕುರಿತು ಸರ್ಕಾರದ ಪಬ್ಲಿಸಿಟಿ ಇಲಾಖೆಯವರು ಪುಸ್ತಕವೊಂದನ್ನು ಪ್ರಕಟಿಸಿರುತ್ತಾರೆ. ಆಹಾರ, ವೈದ್ಯ ಸಹಾಯ, ಕೈಗಾರಿಕೆ, ವಿದ್ಯುಚ್ಛಕ್ತಿ, ರಸ್ತೆ ಸಂಚಾರ, ಪೌರ ಸಭೆಗಳು, ಇಂಥ ವಿವಿಧ ಶಾಖೆಗಳ ಕಾರ್ಯಗಳಲ್ಲಿ ಸಾಧಿಸಲಾಗಿರುವ ಪ್ರಗತಿಯನ್ನು ಅದರಲ್ಲಿ ಪ್ರಕಟಿಸಲಾಗಿದೆ. ಪುಸ್ತಕದಲ್ಲಿ ಅನೇಕ ಚಿತ್ರಗಳು ಅಂದವಾಗಿ ಮುದ್ರಿಸಲ್ಪಟ್ಟಿವೆ

ಭಗಿನೀ ಸೇವಾ ಸಮಾಜ

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಭಗಿನೀ ಸೇವಾ ಸಮಾಜದವರು, ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳು, ಕೈಗಾರಿಕೆ ಮತ್ತು ಸಂಗೀತ ಇವುಗಳಲ್ಲಿ ಶಿಕ್ಷಣವನ್ನು ಕೊಡಲು ಏರ್ಪಾಡು ಮಾಡಿರುತ್ತಾರೆ. ಮೆಟ್ರಿಕ್ಯುಲೇಷನ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರಿಗೆ ಪ್ರತ್ಯೇಕ ಶಿಕ್ಷಣದ ವ್ಯವಸ್ಥೆ ಮಾಡಲಾಗಿದೆ. ಹಿಂದಿಯಲ್ಲಿ ಪ್ರಾಥಮಿಕದಿಂದ ವಿಶಾರದ ತರಗತಿಯವರೆಗೂ ಪಾಠವನ್ನು ಹೇಳಿಕೊಡಲಾಗುತ್ತದೆ. ವಯಸ್ಸಾದ ಮಹಿಳೆಯರಿಗೆ ಮಧ್ಯಾಹ್ನ ೩ರಿಂದ ೬ ಗಂಟೆ ವರೆಗೂ ಶಿಕ್ಷಣದ ಏರ್ಪಾಡಾಗಿದೆ. ಹೆಚ್ಚಿನ ವಿವರವನ್ನು ಲಕ್ಷ್ಮೀಪುರದ ಕಲ್ಯಾಣೀ ಗೃಹದಲ್ಲಿ ಸಮಾಜದ ಗೌರವ ಕಾರ್ಯದರ್ಶಿಗಳಿಂದ ಪಡೆಯಬಹುದು

CITY TUTORIAL, COLLEGE
Vanivilas Road, Mysore
Coaching for GIRLS ONLY
● S. S L C. Examn of Oct 1950.
● High School I year class for M S Passed Girls
JOIN IMMEDIATELY

Edited, printed and published by A. K. Nagarajan, at Sadhvi Press, D Subbiah Road, Mysore

ಮಧುರೆ ಜೈಲಿನಲ್ಲಿ ಲಾಠಿ ಏಟಿನಿಂದ ಒಬ್ಬನ ಮರಣ

ಶಿಕ್ಷೆ ವಿಧಿಸಲ್ಪಟ್ಟ ಏಳು ಜನ ಕಮ್ಯೂನಿಸ್ಟ್ ಕೈದಿಗಳ ಮೇಲೆ ಮಧುರೆಯ ಸೆಂಟ್ರಲ್ ಜೈಲಿನ ವಾರ್ಡರುಗಳು ಮೊನ್ನೆ ಎರಡು ಬಾರಿ ಲಾಠಿ ಪ್ರಯೋಗಿಸಿದುದರ ಪರಿಣಾಮವಾಗಿ ೮ ಜನರಿಗೆ ತೀವ್ರ ಗಾಯಗಳಾಗಿ, ಒಬ್ಬನು ಮೊನ್ನೆ ಮೃತನಾದನು. ಮತ್ತೊಬ್ಬನ ಸ್ಥಿತಿ ವಿಷಮವಾಗಿದೆ. ತಿರುನೆಲ್ವೇಲಿ ಜೈಲಿನಿಂದ ಹದಿನಾಲ್ಕು ಮಂದಿ ಕೈದಿಗಳು ಉಪವಾಸ ಮುಷ್ಕರ ಹೂಡುವುದಾಗಿ ಬೆದರಿಸಿದ್ದರಿಂದ ಸರ್ಕಾರವು ಅವರನ್ನು ಮಧುರೆ ಜೈಲಿಗೆ ಕಳಿಸಿತು. ಅಧಿಕಾರಿಗಳ ಕಟ್ಟು ನಿಟ್ಟುಗಳ ವಿರುದ್ಧ ಪ್ರಯತ್ನಿಸಿದರೆಂದೂ, ಆಗ ಲಾಠಿ ಪ್ರಹಾರ ಮಾಡಬೇಕಾಯಿತೆಂದೂ ಹೇಳಲಾಗಿದೆ

ಸಾವಿರ ಮೈಲಿ ಕುದುರೆ ಸವಾರಿ ಮಾಡಿದ ಮುದುಕಿ

ಜರ್ಮನಿಯ ಶ್ರೀಮಂತಳಾದವಳೊಬ್ಬಳು ವಾರ್ ಹೊಹೊನಾನ್ ಎಂಬ ಅರವತ್ತೆಂಟು ವರ್ಷದ ಮುದುಕಿಯು ರೋಮ್ ನಗರಕ್ಕೆ ಯಾತ್ರೆ ಹೋಗಲು ಕುದುರೆ ಮೇಲೆ ಸವಾರಿ ಮಾಡುತ್ತಾ ಸಾವಿರ ಮೈಲಿಗಳ ಪ್ರಯಾಣ ಮಾಡಿ ಆ ನಗರವನ್ನು ತಲುಪಿದಳು. ಈ ಯಾತ್ರೆ ಮಾಡಲು ಆಕೆಗೆ ೬೦ ದಿನಗಳ ಕಾಲ ಬೇಕಾಯಿತು.

M G.M's TECHNICOLOR SMASH
THE THREE — — MUSKETEERS
With LANA TURNER & GENE KELLY
now being screened in crowded
SRI GAYATHRI TALKIS
Daily 3 Shows
Morning Shows On 24th Sat & 25th Sun
THE THREE — — MUSKETEERS

ನೆಹರೂರವರಿಗೆ ಬೆಟ್ಟದಷ್ಟು ಹೂ ಮಾಲೆಗಳು

ಇತ್ತೀಚೆಯ ಏಷ್ಯಾ ಪ್ರವಾಸವನ್ನು ಮುಗಿಸಿಕೊಂಡು ರಂಗೂನಿಗೆ ಆಗಮಿಸಿದ ಪ್ರಧಾನಿ ನೆಹರೂರವರಿಗೆ ಅಲ್ಲಿನ ಜನರು ಅದ್ಭುತ ಸ್ವಾಗತವನ್ನಿತ್ತು, ಬೆಟ್ಟದಷ್ಟು ಹೂಮಾಲೆಗಳನ್ನು ಅರ್ಪಿಸಿದರು. ಕುತ್ತಿಗೆಯು ತುಂಬುವಷ್ಟು ಮಾಲೆಗಳು ಬಂದ ನಂತರ, ಅವರ ಪುನಃ ಅರ್ಪಿಸಲಾದ ಅನೇಕ ಹೂಮಾಲೆಗಳನ್ನು ಮುಟ್ಟಿ ತನ್ನ ಸೇವಾದಳದವರಿಗೆ ಒಪ್ಪಿಸಿದರು

ರಾಜಘಾಟಿನಲ್ಲಿ ವಿಶ್ವದ ಎಲ್ಲ ರಾಜ್ಯಗಳ ಮರಗಳು

ದೆಹಲಿಯಲ್ಲಿ ಗಾಂಧೀಜೀಯವರ ಸಮಾಧಿ ಸ್ಥಳವಾದ ರಾಜಘಾಟಿನಲ್ಲಿ ವಿಶ್ವದ ಎಲ್ಲ ರಾಜ್ಯಗಳ ಒಂದೊಂದು ಗಿಡವನ್ನು ನೆಡುವ ವಿಷಯವನ್ನು ಯೋಚಿಸಲಾಗುತ್ತಿದೆ

Mysore City Municipality

N O T I C E

Sealed tenders will be received up to 4 p. m on 26-6-50 by the Municipal Engineer for -

1) *Providing brick* nogged terrace for the verrandah portion of the *rear part of Dr Annajappa's* shop and Sri Kambaiah's shop in the northern side of Devaraj Market

2) Clearing silt in the septic tank of the Sewage Farm

3) Constructing the lavatory in the rear of Municipal Indigenous Hospital in K R Mohalla

4) Providing an additional room to the rear portion of central hall of sewage farm Office

Each tender must be accompanied with a chellan for having remitted Rs 175, Rs 118, Rs 30 and Rs 85 respectively in the Municipal Treasury. For further particulars please see the office notice board

(Sd.) S. Sivappa.
I/C Municipal Engineer

ಪ್ರಭುದೇವಾ ಟಾಕೀಸ್
ದಿನವಹಿ 3 ಆಟಗಳು
24-6-50 ನೇ ಶನಿವಾರದಿಂದ
- ಸು ಮ ತಿ - (ತೆಲುಗು)
ಪಾತ್ರ:- ಕಣ್ಣಾಂಬ, ಸಿ. ಎಸ್. ಆರ್., ಬಳ್ಳಾರಿ ಲಲಿತ
ರಾಮಕೃಷ್ಣ ಶಾಸ್ತ್ರಿ ಮುಂತಾದವರು

— ರ ಣ ಜಿ ತ್ ಟಾ ಕೀ ಸ್ —
ಜನಪ್ರಿಯವಾದ 3ನೇ ವಾರ :: ದಿನವಹಿ 3 ಆಟಗಳು
ಮನೋಹರ ನೃತ್ಯ, ಸುಮಧುರ ಸಂಗೀತ ಮತ್ತು ಹಾಸ್ಯಲಹರಿಯಿಂದ ಕೂಡಿದ ತೆಲುಗು ಚಿತ್ರ
ಮೊ ದ ಟಿ ರಾ ತ್ರಿ (First Night)

ಪುಟ ೧೯ ೦ 792 ... ...

ಸಾಧ್ವಿ

ಸಂಪುಟ ೮] ಶನಿವಾರ ೨೪-೬-೫೦ [ಸಂಚಿಕೆ ...

ಮೈ॥ ಸರ್ಕಾರದ ಮೇಲೆ ಪುಟ್ಟರಾಜೆ ಅರಸ್ ಕ್ರಮ?

ಗ್ರಾಮ ಸೇವಾ ಶಿಬಿರದ ಮುಕ್ತಾಯ

ಮೈಸೂರು ೨೪

ಮೈಸೂರು ತಾಲ್ಲೂಕು ವರುಣ ಹೋಬಳಿ ಇನಾಂ ದುದ್ದಗೆರೆ ಗ್ರಾಮದಲ್ಲಿ ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಆಶ್ರಯದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ನಡೆಸುತ್ತಿದ್ದ ಗ್ರಾಮ ಸೇವಾ ಶಿಬಿರದ ಮುಕ್ತಾಯ ಸಮಾರಂಭವು ನಿನ್ನೆ ನಡೆಯಿತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಚ್ ಕೆ ಕೇಶವಾ ರಸ್ವಾಮಿಯವರು ಅಗ್ರಾಸನವನ್ನು ವಹಿಸಿದ್ದರು ಮೈಸೂರು ನಗರದಿಂದಲೂ, ಸುತ್ತಮುತ್ತಲ ಪ್ರದೇಶದಿಂದಲೂ ಅನೇಕ ಪ್ರಮುಖರು ಸಮಾರಂಭಕ್ಕೆ ಬಂದಿದ್ದರು.

ಪ್ರಾರ್ಥನೆಯಾದನಂತರ ಇನಾಂದಾರರಾದ ಶ್ರೀ ಎಂ ಎ. ಲಕ್ಷ್ಮೀಶನಯ್ಯನವರು ಎಲ್ಲರಿಗೂ ಸ್ವಾಗತವನ್ನು ಬಯಸಿ ಭಾಷಣ ಮಾಡಿದರು ಶಿಬಿರದಲ್ಲಿ ನಡೆದಿರುವ ಕಾರ್ಯ ಕಲಾಪಗಳ ವರದಿಯನ್ನು ಶ್ರೀ ಪ್ರಭಾಕರ ಶರ್ಮರವರು ಒಪ್ಪಿಸಿದರು ಗ್ರಾಮಸ್ಥರ ದ ಕುಣಿತ, ಕೋಲಾಟ ಮುಂತಾದ ಕಲಾ ಪ್ರದರ್ಶನಗಳು ನಡೆದುವು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗ್ರಾಮ ಸೇವಾ ಶಿಬಿರಗಳ ಆವಶ್ಯಕತೆಯನ್ನು ವಿವರಿಸಿ ಹೇಳಿದರು ಸಮಾಜದ ಸೇವೆಗಾಗಿ ಅಧಿಕಾರಿಗಳೂ ಸಾರ್ವಜನಿಕರೂ ಸಹಕರಿಸಿ ಕೆಲಸ ಮಾಡಬೇಕೆಂದು ಹೇಳಿದರು.

ಶಿಬಿರದ ಉಪಸಂಹಾರ ಭಾಷಣವನ್ನು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿ ಸದಸ್ಯರಾದ ಶ್ರೀ ಎಚ್ ಚನ್ನಯ್ಯನವರು ಮಾಡಿದರು ಹಳ್ಳಿಗಳ ನಾಡಾದ ನಮ್ಮ ದೇಶದಲ್ಲಿ ಗ್ರಾಮ ಸೇವಾ ಶಿಬಿರಗಳ ಪಾತ್ರವು ಎಷ್ಟು ಪ್ರಾಮುಖ್ಯವಾದುದೆಂದು ಅವರು ತಿಳಿಸಿದರು ವಿದ್ಯಾರ್ಥಿಗಳು ಎಲ್ಲ ದೇಶಗಳ ರಾಜಕೀಯ ಚಟುವಟಿಕೆಗಳನ್ನೂ ಅರಿತುಕೊಳ್ಳಬೇಕೆಂದೂ, ಆದರೆ ರಾಜಕೀಯ ಚಳವಳಿಯಲ್ಲಿ ಧುಮುಕಬಾರದೆಂದೂ ಸೂಚಿಸಿದರು ಸ್ವಾತಂತ್ರ್ಯವು ಬಂದ ನಂತರ ರಾಷ್ಟ್ರ ರಚನೆಯ ಮಾರ್ಗದಲ್ಲಿ ಅನೇಕ ತೊಡಕುಗಳುಂಟಾಗಿವೆಯೆಂದೂ, ಸಕಾಲದಲ್ಲಿ ಮಳೆ ಬಾರದೆ ಪ್ರಕೃತಿಯೂ ಸಹ ವಿರೋಧವಾಗಿದೆಯೆಂದೂ ಹೇಳಿ ಆದರೂ ಜನರು ಧೈರ್ಯಗೆಡದೆ ಆತ್ಮಬಲ ಜನಿಸಿ ಮಾರ್ಗವನ್ನು ಅನುಸರಿಸಿ ಸರ್ಕಾರದವರು ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಗಳಲ್ಲಿ ಸಹಕರಿಸಬೇಕೆಂದು ಕೋರಿದರು ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

೫೩ ನೇ ಹರಿಕಥೆ

ಕೊಪ್ಪಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ಮೂರು ಘಂಟೆಗೆ ಶ್ರೀ ಎಂ ಎಲ್ ನಾರಾಯಣದಾಸರಿಂದ ಭಕ್ತ ಸಿರಿಯಾಳ ಎಂಬ ಹರಿಕಥೆಯು ನಡೆಯುವುದು

ರೇಷನ್ ಇಲ್ಲದೆ ಹುಲ್ಲು ತಿನ್ನುತ್ತಿದ್ದಾರೆ

ಕಳೆದ ೩೦ ದಿನಗಳಿಂದ ಮೈಸೂರು ತಾಲ್ಲೂಕು ವರುಣದ ಹೋಬಳಿ ದುದ್ದಗೆರೆ, ಪುರ ಮುಂತಾದ ಕಡೆಗಳ ರೇಷನ್ ಡಿಪೋಗಳಲ್ಲಿ ಅಕ್ಕಿ, ರಾಗಿ ಯಾವುದೂ ಇಲ್ಲದೆ ಜನರು ಹುರುಳಿ ಕಾಳನ್ನು ಕೊಂಡು ತಿನ್ನುತ್ತಿರುವರೆಂದು ತಿಳಿದುಬಂದಿದೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದರ ಕಡೆ ಗಮನ ಕೊಡುವರೆಂದು ನಂಬಲಾಗಿದೆ

ನೆಹರೂ ಸರ್ಕಾರ ಉರುಳಿಸಲು ಪಿತೂರಿ

ಬಂಗಾಳದ ಕೋಮುವಾದಿಗಳ ಗುಂಪೊಂದು ನೆಹರೂರವರ ಸರ್ಕಾರವನ್ನು ಉರುಳಿಸುವ ಉದ್ದೇಶದಿಂದ ಗುಟ್ಟಾಗಿ ಪಿತೂರಿ ನಡೆಸುತ್ತಿದೆಯೆಂದು ವರದಿಯಾಗಿದೆ ಬಂಗಾಳದ ಒಂದು ಗುಪ್ತಸ್ಥಳದಲ್ಲಿರುವ ರೇಡಿಯೋ ಕೇಂದ್ರದಿಂದ ಇವರು ಪ್ರತಿ ದಿನವೂ ಪಂಡಿತ ನೆಹರೂ ಮತ್ತು ಭಾರತ ಸರ್ಕಾರದ ಮೇಲೆ ಅಪಪ್ರಚಾರ ಮಾಡುತ್ತಿರುವರಲ್ಲದೇ ಅವರ ಮೇಲೆ ಜನರು ದಂಗೆಯೇಳುವಂತೆ ಪ್ರೇರೇಪಿಸುತ್ತಿರುವರೆಂದೂ ಹೇಳಲಾಗಿದೆ ಈ ರೇಡಿಯೋ ಕೇಂದ್ರವನ್ನು ಪತ್ತೆ ಮಾಡಲು ಭಾರತ ಸರ್ಕಾರದ ಪ್ರವೀಣರು ಶೋಧ ನಡೆಸುತ್ತಿರುವರು

ಲಿಯಾಖತ್ ಅಲಿಗೆ ಪಾಕಿಸ್ತಾನದ ರಕ್ಷಣಾ ಶಾಖೆಯಲ್ಲಿ ಹುದ್ದೆ

ಮಿ॥ ಲಿಯಾಖತ್ ಅಲಿಯನ್ನು ಪಾಕಿಸ್ತಾನ ಸರ್ಕಾರದ ಸಾಮಗ್ರಿಗಳನ್ನು ಕೊಳ್ಳುವ ರಕ್ಷಣಾ ಶಾಖೆಗೆ ಪ್ರಧಾನ ಸಲಹೆಗಾರರನ್ನಾಗಿ ನೇಮಿಸಲಾಗಿದೆಯೆಂದು ಢಾಕ್ಕಾದ ಪತ್ರಿಕೆಯೊಂದು ವರದಿ ಮಾಡಿದೆ ಅವರು ಸಧ್ಯದಲ್ಲಿಯೇ ಪೂರ್ವ ಬಂಗಾಳದ ಢಾಕಾ ಮತ್ತು ಚಿಟ್ಟಗಾಂಗ್ ನಗರಗಳಿಗೆ ಭೇಟಿ ಕೊಡಬಹುದೆಂದೂ ಹೇಳಲಾಗಿದೆ.

ಈ ದಿನ ರಾತ್ರಿ ಸ್ವಾಮಿಗಳು ಸಮಾಧಿ ಹೊಂದುವರಂತೆ

ತಿರುತ್ತಣಿಯಿಂದ ಕೆಲವು ತಿಂಗಳ ಹಿಂದೆ ಮದರಾಸಿನ ಸಮೀಪದ ಕೋಡಂಬಾಕಂ ಎಂಬಲ್ಲಿಗೆ ಒಬ್ಬ ಜಟಾಧಾರಿ ಮತ್ತು ಮೌನ ವ್ರತಧಾರಿ ಸ್ವಾಮಿಗಳು ಭಕ್ತಾದಿಗಳೊಡನೆ ಬಂದು ನೆಲೆಸಿರುವರು ಅವರು ಅಲ್ಲಿನ ಕಾಳಿಕಾ ದೇವಾಲಯದ ಬಳಿ ಧ್ಯಾನಾಸಕ್ತರಾಗಿದ್ದಾರೆ ಸ್ವಾಮಿಗಳು, ಈ ದಿನ ಮಧ್ಯರಾತ್ರಿ ವೇಳೆಗೆ ತಾವು ಸಮಾಧಿ ಹೊಂದುವುದಾಗಿ ಹೇಳಿರುವರು ಆದ್ದರಿಂದ ಭಕ್ತಾದಿಗಳು ಅವರ ಸಮಾಧಿಗಾಗಿ ಅವರು ಕುಳಿತಿರುವ ಸ್ಥಳದ ಬಳಿ ಏಳು ಅಡಿ ಆಳದ ಹಳ್ಳವೊಂದನ್ನು ತೋಡಿರುವರು ಸ್ವಾಮಿಗಳವರನ್ನು ಭಕ್ತರು ಜೀವಂತವಾಗಿ ಎಲ್ಲಿ ಸಮಾಧಿ ಮಾಡಿಬಿಡುವರೋ ಎಂದು ಬಲವಾದ ಪೋಲೀಸ್ ಕಾವಲನ್ನಿಡಲಾಗಿದೆ ವೈದ್ಯರು ಬಂದು ಪರೀಕ್ಷಿಸಿ ಅಪ್ಪಣೆ ಕೊಟ್ಟ ಹೊರತು ಅವರನ್ನು ಸಮಾಧಿ ಮಾಡಕೂಡದೆಂದೂ ತಿಳಿಸಲಾಗಿದೆ

ಮೈಸೂರು ಸರ್ಕಾರದ ಮೇಲೆ ಪುಟ್ಟರಾಜೇ ಅರಸರ ಕಾನೂನು ಕ್ರಮ? ಭಾಗವೇ ?

ಬೆಂಗಳೂರು ೨೪

ಶ್ರೀ ಪುಟ್ಟರಾಜೆ ಅರಸರ ಸ್ವಪಕ್ಷೀಯರ ವಿಚಾರಣೆ ನಡೆಯುವವರೆಗೆ ಅವರು ರಜದ ಮೇಲಿರಬೇಕೆಂದು ಸರಿಗಹಿ ಅವರ ಸಂಬಳ ಸಾರಿಗೆಗಳನ್ನು ಕೊಡುವಂತೆ ಕೇಂದ್ರ ಸರ್ಕಾರದಿಂದ ೨೯-೩-೫೦ ರಲ್ಲೇ ಬಂದಿದ್ದ ಸೂಚನೆ ಪ್ರಕಾರ ಶ್ರೀ ಅರಸರು ತಮ್ಮ ಸಂಬಳಕ್ಕಾಗಿ ಮೈಸೂರು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳಿಗೆ ಕಳೆದ ಮಾರ್ಚಿ ಕಾಗದವನ್ನು ಬರೆದುದಕ್ಕೆ ಸರಿ ಉತ್ತರ ಪರಿಶೀಲನೆಯಲ್ಲಿದೆಯೆಂದು ಉತ್ತರ ಕೊಡಲಾಗಿತ್ತು ಇದರ ಮೇಲೆ ಶ್ರೀ ಪುಟ್ಟರಾಜೇ ಅರಸರು ಪುನಃ ಆಗಿ ನೆನ್ನೆ ಚೀಫ್ ಶ್ರೇಷ್ಠ ಕಾರ್ಯದರ್ಶಿಗಳಿಗೆ ಒಂದು ಜ್ಞಾಪಕ ಪತ್ರವನ್ನು ಬರೆದು ತಮ್ಮ ಸಂಬಳವನ್ನು ಕೂಡಲೇ ಪಾವತಿ ಮಾಡದಿದ್ದರೆ ತಾವು ಅನಿವಾರ್ಯವಾಗಿ ಕಾನೂನು ರೀತ್ಯಾ ಸರ್ಕಾರದ ಮೇಲೆ ಕ್ರಮವನ್ನು ಜರುಗಿಸಬೇಕಾಗುವುದೆಂದು ತಿಳಿಸಿರುವರೆಂದು ವರದಿಯಾಗಿದೆ

ಪೆಟ್ರೋಲ್ ಪಡಿತರ ಶೇಕಡ ೫೦ ರಷ್ಟು ಹೆಚ್ಚಳ

ಬರುವ ತಿಂಗಳು ೧ನೇ ತಾರೀಖಿನಿಂದ ಬೊಂಬಾಯಿ, ಮದರಾಸ್, ಕಲ್ಕತ್ತ, ಡೆಲ್ಲಿ ಮತ್ತು ಎರ್ನಾಕುಲಂ ನಗರಗಳಲ್ಲೂ ಮತ್ತು ರೇವುಪಟ್ಟಣಗಳ ಸಮೀಪದ ಪ್ರದೇಶಗಳಲ್ಲೂ ಪೆಟ್ರೋಲ್ ಪಡಿತರವನ್ನು ರದ್ದುಗೊಳಿಸಲಾಗುವುದೆಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ ಇತರ ಕಡೆಗಳಲ್ಲಿ ಮೋಟಾರು ವಾಹನಗಳಿಗೆ ಕೊಡುವ ಪೆಟ್ರೋಲಿನ ಮೂಲ ಪ್ರಮಾಣವನ್ನು ಶೇಕಡ ೫೦ ರಷ್ಟು ಹೆಚ್ಚಿಸಲಾಗುವುದೆಂದೂ ತಿಳಿಸಲಾಗಿದೆ

ಕೃಷ್ಣರಾಜ ಸಾಗರದ ನೀರಿನ ಮಟ್ಟ ಹೆಚ್ಚುವ ಸಂಭವ

ಕೊಡಗಿನಲ್ಲಿ ನೆನ್ನೆ ದಿನ ವಿಪರೀತ ಮಳೆಯಾಗಿದೆಯೆಂದು ವರದಿಯಾಗಿದೆ. ಆದುದರಿಂದ ಕೃಷ್ಣರಾಜ ಸಾಗರದ ನೀರಿನ ಮಟ್ಟವು ಹೆಚ್ಚುವ ಸಂಭವವಿದೆ. ಈ ದಿನ ನೀರಿನ ಮಟ್ಟ ೮೯.೯೦ ಅಡಿಗಳು

ಕೆ. ಸಿ. ರೆಡ್ಡಿಯವರು ಇನ್ನೂ ಒಂದು ತಿಂಗಳು ಬರುವುದಿಲ್ಲ

ಸ್ವಂ. ವ. ಪ್ರ.] ಬೆಂಗಳೂರು ೨೪

[illegible] ಶ್ರೀ ಕೆ [illegible] [illegible] ಇನ್ನೂ [illegible] ಒಂದು ತಿಂಗಳ [illegible] [illegible] [illegible] ತಿಳಿದು ಬಂದಿದೆ. [illegible]

[illegible] ಕೇಂದ್ರ [illegible] [illegible] [illegible] ಸಚಿವರ [illegible] [illegible] ಗಿದೆ

ಕಾಗದದ ಹತೋಟಿ ರದ್ದು

[illegible] ಕಾಗದದ [illegible] ಹತೋಟಿಯನ್ನು [illegible] ರದ್ದುಗೊಳಿಸ[illegible] ಕೇಂದ್ರ ಸರ್ಕಾರವು ಪ್ರಕಟನೆಯನ್ನು ಹೊರಡಿಸಿದೆ.

ಪ್ರಿಯತಮೆಗೆ ಸಿಗರೇಟ್ ಬೆಂಕಿ ತಗುಲಿ ನೂತನ ವಧುವಿನ ಮರಣ

[illegible] ಒಬ್ಬ ಇಂಟರ್ ವಿದ್ಯಾರ್ಥಿಯು ವಿವಾಹ [illegible] [illegible] ಗೃಹದಲ್ಲಿ [illegible] ಮಲಗಿದ್ದ [illegible] ಸಿಗರೇಟನ್ನು [illegible] [illegible] [illegible] ಸ್ಪಿರಿಟ್ [illegible] [illegible] ಬೆಂಕಿ [illegible] [illegible] [illegible] ತಗುಲಿ [illegible] [illegible] [illegible] ತಿಳಿದುಬಂದಿದೆ

ಅಗರ-ಮಾಂಬಳ್ಳಿ ಪೌರಸಭಾ ಚುನಾವಣಾ ಫಲಿತಾಂಶ

ಅಗರ ೨೪

ಅಗರ-ಮಾಂಬಳ್ಳಿ ಮೈನರ್ ಪೌರಸಭಾ ಚುನಾವಣೆಯು ಕಳೆದ ಬುಧವಾರ ನಡೆಯಿತು ಫಲಿತಾಂಶಗಳ ಎಣಿಕೆಯು ನೆನ್ನೆ [illegible] [illegible] [illegible] ಚುನಾಯಿತರಾಗಿದ್ದಾರೆ:-ಎರಡನೇ [illegible] [illegible] [illegible] [illegible] [illegible] [illegible] ಓಟುಗಳನ್ನು ಪಡೆದಿದ್ದಾರೆ— ಎಂ ಜಿ [illegible] (೧೯೩), [illegible] (೧೫೭), [illegible] (೧೯೭) [illegible] (೨೦೮), ಎಂ ಎಸ್ [illegible] (೨೨೮) [illegible] (೨೨೫) [illegible] (೨೫೯) [illegible] [illegible] ಪೋಲೀಸ್ ಅಧಿಕಾರಿಗಳು [illegible] [illegible] ಮಾಡಿದ್ದರು.

ಸತ್ಯಾರಕ್ಕೆ ಬರ್ ಕಾರ್ಮಿಕರ ಪ್ರಾರ್ಥನೆ

ಮೈಸೂರು ೨೪

ಅಖಿಲಭಾರತ ಹಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಬುಧವಾರ ಸಂಜೆ ಶ್ರೀ ಬಿ. ಕೇಶವಮೂರ್ತಿರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಸ್ಸುಗಳ ಮಾಲೀಕರು ಕೆಲಸಗಾರರಿಗೆ ಗೊತ್ತಾದ ಯೂನಿಫಾರಂ ಬಟ್ಟೆಗಳನ್ನು ಕೊಡುವವರೆಗೂ ಕಾರ್ಮಿಕರ ಮೇಲೆ ಕ್ರಮ ಜರುಗಿಸಬಾರದೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು. ಕೆಲಸಗಾರರಿಗೆ ಕೊಡಬೇಕಾಗುತ್ತಿರುವ ತಿರುಕಳಗಳ ಬಗ್ಗೆ ಚರ್ಚೆ ಮಾಡಿ ನಿಯೋಗ ಹೋಗಲು ತೀರ್ಮಾನಿಸಲಾಯಿತು. ಕೆ ಎ ವರ್ತ್ತ ಹಸನ್ ಮೋಟಾರು ಸರ್ವಿಸ್ಸಿನಲ್ಲಿ ಕೆಲಸದ ಕ್ರಮಬದ್ಧವಾದ ಆರ್. ಬಸ್ ಕೆಲಸಗಾರ ಜೈ ಸಿ ಬಿ ಅವರನ್ನು ವಜಾ ಕೆಲಸ ಕ್ಕೆ ತೆಗೆದುಕೊಂಡುದಕ್ಕಾಗಿ ಮಾಲೀಕರನ್ನು ಅಭಿನಂದಿಸಿ ಉಳಿದವರನ್ನೂ ಹಾಗೆಯೇ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಲಾಯಿತು.

ಪ್ರೈಟುಗಳಿಂದ ೪ ಸಾವಿರ ಮರ ಕಡಿಯುವ ಕಾರ್ಯಕ್ರಮ

ರಾಜಧಾನಿಯ ಜವಾಬ್ದಾರ ನಗರದ ಸಭೆಯು ಮೊನ್ನೆ ಸಂಜೆ ಡಿ. ಒದ್ದದ ಯಸ್ಥರ ಶಾಲೆಯಲ್ಲಿ ನಡೆದ ಒಂದು ತಿಂಗಳ ಪ್ರಥಮ ವಾರದಲ್ಲಿ ಮರ ನೆಡುವ ಕಾರ್ಯಕ್ರಮವನ್ನು ಚರ್ಚಿಸಲಾಯಿತು. ರಾಜ್ ಬಹದ್ದೂರ್ ಎಂ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ೪ ಸಾವಿರ ಹಣ್ಣಿನ ಮರಗಳನ್ನು ನಾನಾ ಮೊಹಲ್ಲೆಯ ಪ್ರೈಟುಗಳ ಮತ್ತು ಶಾಲೆಗಳ ಮನೆಗಳಲ್ಲಿ ನೆಡಲು ತೀರ್ಮಾನವಾಯಿತಲ್ಲದೇ, ಅವುಗಳ ವೃಕ್ಷ ನೆಟ್ಟವರಿಗೆ ಬಹುಮಾನ ಕೊಡಲು ನಿರ್ಧರಿಸಲಾಯಿತು.

ಹಿಂದೀ ಪರೀಕ್ಷೆಗಳು

ಬರುವ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಥಮ, ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಅರ್ಜಿ ಪತ್ರ ಕಳುಹಿಸಲು ಈ ತಿಂಗಳು ೩೦ ನೇ ತಾರೀಖು ಕಡೆಯ ದಿನವಾಗಿರುತ್ತದೆ. ಪತ್ರಗಳನ್ನು ಸಭಾ ಕಾರ್ಯಾಲಯದಲ್ಲಿ ಪಡೆಯಬಹುದು.

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70, ಅವೆನ್ಯೂ ರೋಡ್ ಕ್ರಿಷ್ಣರಾಜೇಂದ್ರ ರಸ್ತೆ,
ಬೆಂಗಳೂರು.

Edited, printed and published by A R Nagarajan, at Sadhvi Press D Subbiah Road, Mysore.

೨ ಲಕ್ಷ ರೂ. ಸರ್ಕಾರಿ ಹಣದ ದುರ್ವಿನಿಯೋಗಕ್ಕಾಗಿ ಶಿಕ್ಷೆ

ಹಾರಿಸ್ಸಾವಕ್ಕೆ ಸೇರಿದ ಕೋಚಟ್ ಸಂಸ್ಥಾನದ ಖಜಾನೆಯ ೩ ಲಕ್ಷ ೮೦ ಸಾವಿರ ರೂ ಗಳನ್ನು ದುರುಪಯೋಗಪಡಿಸಿಕೊಂಡಂಬ ಆಪಾದನೆ ಮೇಲೆ ಒಬ್ಬ ಮಹಿಳೆಯೂ ಸೇರಿ ೪ ಜನರಿಗೆ ವಿವಿಧ ಶಿಕ್ಷೆಗಳನ್ನು ವಿಧಿಸಲಾಯಿತು. ಮುಖ್ಯ ತಪ್ಪಿತಸ್ಥನಿಗೆ ೧೦ ವರ್ಷ ಕಠಿಣ ಸಜ ೪೯ ಸಾವಿರ ರೂ ಜುಲ್ಮಾನೆ, ಇನ್ನೊಬ್ಬರಿಗೆ ೩ ವರ್ಷ ಸಜಾ ೮೦೬೦ ರೂ ಜುಲ್ಮಾನೆ. ಉಳಿದ ಎಂಬುವರಿಗೆ ಒಂದು ದಿನದ ಸಾದಾ ಗೃಹವಾಸ ಶಿಕ್ಷೆಗಳನ್ನು ಕೊಡಲಾಯಿತು.

ರೈಲಿನಲ್ಲಿ ಐರೋಪ್ಯ ಮಹಿಳೆಯ ಕೊಲೆ

ಮೊನ್ನೆ ರಾತ್ರಿ ಉತ್ತರ ಪ್ರದೇಶದ ರೂರ್ಕೀ-ಹರಿದ್ವಾರ ಮತ್ತು ಮುಜಫರ ನಗರಗಳ ಮಧ್ಯೆ ಗಾಡಿಯು ಮೋಲಾಗಾಡಿಯು ಹೋಗುತ್ತಿದ್ದಾಗ, ಅದರ ಮೊದಲನೇ ತರಗತಿ ಬೋಗಿಯೊಳಗೆ ದುರಾತ್ಮರು ಪ್ರಸ್ಥಾನ ಮಾಡುತ್ತಿದ್ದ ಶ್ರೀ ಎಚ್ ಜಾರ್ಜ್ ಎಂಬಾಕೆಯನ್ನು ಇರಿದು ಆಕೆಯ ಬಳಿಯಿದ್ದ ಆಭರಣಗಳನ್ನು ಅಪಹರಿಸಿದ್ದಾರೆ ಗಾಯಗೊಂಡವಳನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಆಕೆಯು ಮೃತಿ ಹೊಂದಿದಳು.

ವಿಗ್ರಹ ಒಡೆದವನನ್ನು ಹಿಡಿದವರಿಗೆ ಬಹುಮಾನ

ತಿರುವಾಂಕೂರು ಸಂಸ್ಥಾನದ ಶಬರಿಮಲೈ ದೇವಾಲಯದ ವಿಗ್ರಹವನ್ನು ಒಡೆದವನನ್ನು ಹಿಡಿದು ಕೊಟ್ಟವರಿಗೆ ೩ ಸಾವಿರ ರೂ ಗಳ ಬಹುಮಾನವನ್ನು ಕೊಡುವುದಾಗಿ ತಿಳಿಸಲಾಗಿದೆ. ಒಡೆದಿದ್ದ ವಿಗ್ರಹವನ್ನು ಪುನಃ ಜೋಡಿಸಲಾಗಿದೆ. ಅದನ್ನು ಮೊದಲಿದ್ದ ಸ್ಥಾನದಲ್ಲೇ ನಾಳೆ ಪ್ರತಿಷ್ಠಿಸಲಾಗುವುದು.

ಪಠಾಣಿಸ್ಥಾನದ ಪ್ರತಿ ಸರ್ಕಾರ ಸ್ಥಾಪನೆ

ವಾಯುವ್ಯ ಗಡಿಯ ಗಲಭೆಗಾರನೆಂದು ಪ್ರಸಿದ್ಧನಾಗಿರುವ ಇಪಿ ಫಕೀರನು ಪಠಾಣಿಸ್ತಾನ್ ಚಳುವಳಿಯನ್ನು ನಡೆಸುತ್ತಿರುವುದಾಗಿ ಹೇಳಲಾಗಿದೆ. ವಜೀರಿಗಳು, ಮಹಸೂದರುಗಳು, ಇವೇ ಮುಂತಾದ ಗುಡ್ಡಗಾಡಿನ ಪಂಗಡದವರು ಈಗಾಗಲೇ ಒಂದು ಪ್ರತಿ ಸರ್ಕಾರವನ್ನು ಇಪಿ ಫಕೀರರ ನೇತೃತ್ವದಲ್ಲಿ ಸ್ಥಾಪಿಸಿದ್ದಾರೆ. ತಮ್ಮ ಚಳುವಳಿಗೆ ಅನ್ಯನ್ಯರ ಬೆಂಬಲವನ್ನು ಕೋರಲು ಈ ಪೈಕಿ ಹಲವರು ಕಾಬೂಲಿಗೆ ಹೋಗಿದ್ದಾರೆ.

ಈ ಕೂಡಲೇ ಯುದ್ಧದ ಭಯವಿಲ್ಲ

ಅಮೇರಿಕದ ವಿದೇಶಾಂಗ ಇಲಾಖೆಯ ರಿಪಬ್ಲಿಕನ್ ಪಂಗಡದ ಸಲಹೆಗಾರರಾದ ಜಾನ್ ಫಾಸ್ಟರ್ ಡಲ್ಲೆಸ್ರವರು ಹೇಳುವ ಪ್ರಕಾರ, ಈ ಕೂಡಲೇ ಯುದ್ಧದ ಭಯವಿಲ್ಲವೆಂದು ಗೊತ್ತಾಗುತ್ತದೆ. ಮಿತ್ರರು ರಷ್ಯದ ಪಂಗಡದವರಿಗಿಂತಲೂ ಬಲಿಷ್ಠರಾಗಿರುವುದರಿಂದ ಈ ಸ್ಥಿತಿಯುದಿಯೆಂದು ಅವರು ಹೇಳಿದರು.

ಸಿಂಧಿನ ಉಪಾಧ್ಯಾಯರಿಗೆ ನಿವೃತ್ತಿ ವೇತನವಿಲ್ಲ

ಸಿಂಧ್ ದೇಶದ ಉಪಾಧ್ಯಾಯರುಗಳಿಗೆ ನಿವೃತ್ತಿ ವೇತನಗಳನ್ನು ಕೊಡಕೂಡದೆಂದು ಅಲ್ಲಿನ ಸರ್ಕಾರದವರು ಮಾಡಿರುವ ನಿರ್ಧಾರವನ್ನು ಪ್ರತಿಭಟಿಸಿ, ಉಪಾಧ್ಯಾಯರುಗಳೆಲ್ಲರೂ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನೊನ್ನೆ ಹೂಡಿದ್ದರು.

7-8 ರೂ ಗಳಲ್ಲಿ
ಮನೆಗಳು ಬಾಡಿಗೆಗೆ ಇವೆ
ಉತ್ತರಹಳ್ಳರವರ ರಾಜಲಕ್ಷ್ಮಿ ಹಾಲ್, ಅರಮನೆ ರೋಡ್, ಮೈಸೂರು
ಇವರಲ್ಲಿ ವಿಚಾರಿಸಿ

ವೈಜಯಂತಿಮಾಲಳಿಗೆ ತಿಂಗಳಿಗೆ ೧॥ ಸಾವಿರ ರೂ.

ಮದ್ರಾಸಿನ ಸಿನಿಮಾ ನಟಿ ವೈಜಯಂತಿ ಮಾಲಳಿಗೆ ಪ್ರತಿ ತಿಂಗಳೂ ಅಲ್ಲಿನ ಎ. ವಿ ಎಂ ಸಿನಿಮಾ ಪ್ರೊಡಕ್ಷನ್ಸಿನ ಮಾಲೀಕರಾದ ಶ್ರೀ ಮೇಯಪ್ಪರವರು ೧೫೦೦ ರೂ ಗಳನ್ನು ಕೊಡಬೇಕೆಂದು ಹೈ ಕೋರ್ಟಿನವರು ತೀರ್ಪಿತ್ತಿದ್ದಾರೆ. ಆಕೆಯೊಡನೆ ಮಾಡಿಕೊಂಡ ಕಾಂಟ್ರಾಕ್ಟಿನ ಪೂರ್ತಿ ಹಣವನ್ನು ಮಾಲೀಕರು ಕೊಡಲಿಲ್ಲವೆಂಬ ಕಾರಣದ ಮೇಲೆ ಆಕೆಯು ಗಾರ್ಡಿಯನ್ನರು ದಾವೆಯನ್ನು ಹೂಡಿದ್ದರು. ಹಣವನ್ನು ಒಟ್ಟಿಗೆ ಕೊಡುವ ಬದಲು ತಿಂಗಳಿಗೆ ೧೫೦೦ ರೂ ನ ತಿ ಕೊಡಲು ಆಜ್ಞೆಯಾಗಿದೆ.

ಕಾಲರಾ ವ್ಯಾಧಿಗಾಗಿ ಹಾಸನದ ಕೋರ್ಟುಗಳು ಬಂದ್

ಹಾಸನ ಟವನ್ನಿನಲ್ಲಿ ಕಾಲರಾ ವ್ಯಾಧಿಯು ಹರಡಿರುವುದರಿಂದ ಅಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ಒಂದು ವಾರ ಕಾಲ ಮುಚ್ಚಲಾಗಿದೆ.

ನಜರಬಾದ್ ಮೊಹಲ್ಲಾ ಅಂಗಡಿಗಳಿಗೆ ಕಾಲದ ಮಿತಿಯಿಲ್ಲವೇ ?

ಅಂಗಡಿ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ಒಂದು ಪತ್ರವನ್ನು ಬರೆದು ಶಾಪ್ ಅಸಿಸ್ಟೆಂಟ್ ಕಾನೂನು ಬಂದು ಎರಡು ವರ್ಷಗಳಾದರೂ ನಜರಬಾದಿನ ವಿಭಾಗದ ಅಂಗಡಿ ಬೀಡಿ ಅಂಗಡಿ ಸೈಕಲ್ ಶಾಪ್ ಮುಂತಾದವುಗಳ ಮಾಲೀಕರು ಪ್ರತಿ ದಿನ ಬೆಳಿಗ್ಗೆ ೭ ರಿಂದ ರಾತ್ರಿ ೧೦ ಘಂಟೆ ವರೆಗೂ ವ್ಯಾಪಾರ ಮಾಡುತ್ತಾ ಕಾನೂನನ್ನು ಉಲ್ಲಂಘಿಸುತ್ತಿದ್ದಾರೆಂದೂ ಮುಖ್ಯವಾಗಿ ನಜರಬಾದ್ ಮೊಹಲ್ಲಾದಲ್ಲಿ ಈ ರೀತಿ ವಿಶೇಷವಾಗಿ ನಡೆಯುತ್ತಿದೆಯೆಂದೂ, ಅಧಿಕಾರ ವರ್ಗದವರು ಈ ಬಗ್ಗೆ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ಕೋರಿರುತ್ತಾರೆ.

ಶ್ರೀ ಗಣೇಶಾ ಟಾಕೀಸ್

ಚಿತ್ರ ಪ್ರೇಮಿಗಳ ಕೋರಿಕೆಯಂತೆ ಪುನಃ
25-6-50ನೇ ಭಾನುವಾರದಿಂದ 3 ದಿನಗಳು ಮಾತ್ರ ಪ್ರತಿ ದಿನ 3 ಆಟಗಳು
STALINGRAD & SPORTS PARADE IN MOSCOW
ಸ್ಟಾಲಿನ್‌ಗ್ರಾಡ್ ಮತ್ತು ಸ್ಪೋರ್ಟ್ಸ್ ಪೆರೇಡ್ ಇನ್ ಮಾಸ್ಕೋ
(ವರ್ಣರಂಜಿತ ಚಿತ್ರ)
ಮುಂದಿನ ಆಕರ್ಷಣೆ 28-6-50 ರಿಂದ
TARZAN & THE MERMAIDS — ಟಾರ್ಜಾನ್ ಮತ್ತು ಮತ್ಸ್ಯಕನ್ಯೆಯರು

ಪ್ರಭುದೇವಾ ಟಾಕೀಸ್
ದಿನವೂ 3 ಆಟಗಳು
24-6-50 ನೇ ಶನಿವಾರದಿಂದ
— ಸುಮತಿ — (ತೆಲುಗು)
ಪಾತ್ರ: ಕನ್ನಾಂಬ, ಸಿ. ಎಸ್. ಆರ್., ಬಳ್ಳಾರಿ ಲಲಿತ, ರಾಮಕೃಷ್ಣ ಶಾಸ್ತ್ರಿ ಮುಂತಾದವರು

ರಾಜಕಮಲ್,
ಮೈಸೂರು
24-6-50ರಿಂದ ಶನಿವಾರದಿಂದ
ಪ್ರತಿ ದಿನ 3 ಆಟಗಳು
ಪಲ್ಲೆಟೂರಿ ಪಿಲ್ಲ
(ತೆಲುಗು)
ಭೂಮಿಕೆ:- ಅಂಜಲಿದೇವಿ, ರಾಮರಾವ್
ಸಾಗೇಶ್ವರರಾವ್

— Morning Shows —
from 23-6-50 for 4 days
PLAINSMAN —
— & THE LADY
With— William Elliot, Vera Ralston, Gail Patrick

ಬಣ್ಣಬಣ್ಣದ ಬಾಂಬೆ ವಾಯಿಲ್ ಸೀರೆಗಳಿಗೆ
ಪೂನಾ ಸೀರೆಗಳಿಗೆ
ಮೈಸೂರು ಇಂಡಿಯನ್ ಬ್ಯಾಂಕ್ ಎದುರಿನಲ್ಲಿರುವ
ಎಂ. ವಿ. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್

ಕ್ರಮಾಂಕ 792 [illegible] ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೨೫-೬-೫೦ [ಸಂಚಿಕೆ ೧೮

ಕೆ. ಸಿ. ರೆಡ್ಡಿಯವರು ನಿವೃತ್ತರಾಗುವರೇ ?

ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಚುನಾವಣೆ

೨ ಸ್ಥಾನಗಳಿಗೆ ಏಳು ಜನ ಉಮೇದುವಾರರು

ಮೈಸೂರು ೨೫

ನಾಸಿಕ ಕಾಂಗ್ರೆಸ್ಸಿನ ಅಧಿವೇಶನಕ್ಕೆ ನಗರದಿಂದ ಹೋಗಬಹುದಾದ ಪ್ರತಿನಿಧಿಗಳ ಎರಡು ಸ್ಥಾನಗಳಿಗೆ ಉಮೇದುವಾರಿಕೆ ಅರ್ಜಿಗಳನ್ನು ನೆನ್ನೆ ಸ್ವೀಕರಿಸಲಾಯಿತು. ಮಂಡಿ, ನಜರ್‌ಬಾದ್, ಲಷ್ಕರ್ ಮತ್ತು ಮಂಡಿ ಮೊಹಲ್ಲಗಳಿಂದ ಎರಡು ಸ್ಥಾನಕ್ಕೆ ಶ್ರೀಗಳಾದ ಎಸ್. [illegible] ಮತ್ತು ವೈ. ಗ. ವೆಂಕಟಪ್ಪ ಇವರುಗಳು [illegible] ಕೃಷ್ಣರಾಜ, ಚಾಮರಾಜ ಮತ್ತು ದೇವರಾಜ ಮೊಹಲ್ಲಗಳಿಂದ ಒಂದು ಸ್ಥಾನಕ್ಕೆ ಶ್ರೀಗಳಾದ ಬಿ. [illegible] ಸ್ವಾಮಿ, ಎಂ. ಎಸ್. [illegible] ಮತ್ತು ಎಸ್. ಎಚ್. ಶಾಸ್ತ್ರಿಗಳು ನಿಂತಿರುವರು

ಜಿಲ್ಲೆಯ ಪ್ರತಿನಿಧಿಗಳ ಚುನಾವಣೆ

ನೆನ್ನೆ ದಿನ ಮೈಸೂರು ಜಿಲ್ಲೆಯ ಪ್ರತಿನಿಧಿ ಸ್ಥಾನಗಳಿಗೆ ನಾನಾ ತಾಲ್ಲೂಕುಗಳಿಂದ ಉಮೇದುವಾರಿಕೆ ಅರ್ಜಿಗಳನ್ನು ಸ್ವೀಕರಿಸಲಾಯಿತು. ಹೆಗ್ಗಡದೇವನ ಕೋಟೆ, ಹುಣಸೂರು-ಪಿರಿಯಾಪಟ್ಟಣ, ಯಳಂದೂರು ಮತ್ತು ಚಾಮರಾಜನಗರಗಳಲ್ಲಿ ಶ್ರೀಗಳಾದ [illegible] ಕುಮಾರಸ್ವಾಮಿ, [illegible] ಕೃಷ್ಣಮೂರ್ತಿ, [illegible] ಸೂರ್ಯನಾರಾಯಣ ಮತ್ತು [illegible] ಪ್ರತಿನಿಧಿಗಳಾಗಲು ಅರ್ಜಿ ಸಲ್ಲಿಸಿದರು [illegible] ಪ್ರತಿನಿಧಿ [illegible] ತಾಲ್ಲೂಕಿಗೆ ಶ್ರೀಗಳಾದ [illegible] ಮತ್ತು ಎ. ಶಿವಣ್ಣನವರೂ ಕೃಷ್ಣರಾಜನಗರಕ್ಕೆ ಶ್ರೀಗಳಾದ ಎಂ. ಎಚ್. ನಂಜುಂಡ [illegible] ಮತ್ತು ವೈ. ಎಸ್. ನಂಜುಂಡಯ್ಯನವರೂ, ನಂಜನಗೂಡಿಗೆ ಶ್ರೀಗಳಾದ [illegible] ಸಿದ್ದಯ್ಯ, ಹೆಜ್ಜಿಗೆ ಲಿಂಗಣ್ಣ ಮತ್ತು ಮಹದೇವಯ್ಯನವರೂ, ಗುಂಡ್ಲುಪೇಟೆಗೆ ಶ್ರೀಗಳಾದ ಎಸ್. [illegible] ಮತ್ತು ಹೆಜ್ಜಿಗೆ ಲಿಂಗಣ್ಣನವರೂ ನಿಂತಿದ್ದಾರೆ. [illegible] ತಾಲ್ಲೂಕಿಗೆ ಪ್ರತಿನಿಧಿ ಸ್ಥಾನವಿರುವುದಿಲ್ಲ

ಈ ದಿನ ಅರ್ಜಿಗಳ ಪರಿಶೀಲನೆಯಾಗಿ ಕೃಷ್ಣರಾಜನಗರ ತಾಲ್ಲೂಕಿಗೆ ಸಲ್ಲಿಸಲಾಗಿದ್ದ ಶ್ರೀ [illegible] ಅವರ ಅರ್ಜಿಯನ್ನೂ, ನಂಜನಗೂಡು [illegible] ಶ್ರೀ ಹೆಜ್ಜಿಗೆ ಲಿಂಗಣ್ಣನವರ ಅರ್ಜಿಯನ್ನೂ ತಿರಸ್ಕರಿಸಲಾಯಿತು. ಆದ್ದರಿಂದ ಕೃಷ್ಣರಾಜನಗರ ತಾಲ್ಲೂಕಿನಲ್ಲೂ [illegible] ನಾವಗೊಳ್ಳುವಂತಿದೆ

ಭಾರತಕ್ಕೆ ನೆಹರೂರವರ ವಾಪಸು

ಇಂಡೊನೇಷ್ಯ ಮತ್ತು ಆಗ್ನೇಯ ಏಷ್ಯಗಳಲ್ಲಿ ಮೂರು ವಾರಗಳ ಕಾಲ ಪ್ರವಾಸವನ್ನು ಮುಗಿಸಿಕೊಂಡು ಪ್ರಧಾನಿ ನೆಹರೂರವರು ನೆನ್ನೆ ಕಲ್ಕತ್ತಾ ನಗರಕ್ಕೆ ಆಗಮಿಸಿದರು. ಮಳೆ ಬೀಳುತ್ತಿದ್ದರೂ ಸಹ ಅಸಂಖ್ಯ ಜನರು ಅವರನ್ನು ನೋಡಲು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ದಾರಿಯುದ್ದಕ್ಕೂ ಸಹಸ್ರಾರು ಜನರು ಜಯಘೋಷವನ್ನು ಮಾಡಿದರು. ಒಂದು ಕಡೆ ಒಬ್ಬ ತರುಣನು ನೆಹರೂರವರು ಹಿಂತಿರುಗಬೇಕೆಂದು ಕೂಗಿಕೊಂಡನು. ಜನರು ಅವನ ಬಾಯಿ ಮುಚ್ಚಿ ಪೋಲೀಸರ ವಶಪಡಿಸಿದರು

ಕೆ. ಸಿ. ರೆಡ್ಡಿಯವರು ನಿವೃತ್ತರಾಗುವರೇ ?

(ಸ್ವಂತ ವರದಿಗಾರ) ಬೆಂಗಳೂರು ೨೫

ಪ್ರಧಾನ ಸಚಿವ ಶ್ರೀ ಕೆ. ಸಿ. ರೆಡ್ಡಿಯವರ ದೇಹಸ್ಥಿತಿಯು ಇನ್ನೂ ಉತ್ತಮಗೊಂಡಿಲ್ಲವಾದ ಕಾರಣ ಅವರು ನೀಲಗಿರಿಯಿಂದ ಮಲಯಾಳಕ್ಕೆ ತೆರಳಿ ಅಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆಯಲು ಆಲೋಚಿಸುತ್ತಿರುವರೆಂದು ಗೊತ್ತಾಗಿದೆ. ಅವರು ಒಬ್ಬ ಸಚಿವರೊಡನೆ ಟೆಲಿಫೋನ್ ಮೂಲಕ ಮಾತನಾಡಿ ತಮ್ಮ ಅನಾರೋಗ್ಯದ ನಿಮಿತ್ತ ತಾವು ಮಂತ್ರಿ ಪದವಿಯಲ್ಲಿರಲು ಸಾಧ್ಯವಾಗದಿರಬಹುದೆಂದೂ, ಆ ಬಗ್ಗೆ ಇತ್ತರಲ್ಲೇ ತಾವು ಅಂತ್ಯ ನಿರ್ಧಾರಕ್ಕೆ ಬರಲಿರುವುದಾಗಿಯೂ ತಿಳಿಸಿದರೆಂದು ವರದಿಯಾಗಿದೆ

ಸರ್ಕಾರದ ಮೇಲೆ ಹೈಕೋರ್ಟಿನಲ್ಲಿ ಪುಟ್ಟಸ್ವಾಮಿ ಅರಸರ ದಾವಾ

ಶ್ರೀ ಪುಟ್ಟಸ್ವಾಮಿ ಅರಸರು ತಮ್ಮ ರಜದ ಅವಧಿಯ ಸಂಬಳವನ್ನು ಕೂಡಲೇ ಕೊಡಿಸಿಕೊಡಬೇಕೆಂದು ಇತ್ತೀಚೆಗೆ ಸರ್ಕಾರಕ್ಕೆ ಬರೆದಿದ್ದ ಪತ್ರಕ್ಕೆ ಯಾವ ಜವಾಬೂ ಬಾರದಿದ್ದುದರಿಂದ ಶ್ರೀ ಅರಸರ ಪರವಾಗಿ ಶ್ರೀ ಎಚ್. ಎಸ್. [illegible] ನೆನ್ನೆ ಶ್ರೀಘ್ರ ನ್ಯಾಯಸ್ಥಾನಕ್ಕೆ ಒಂದು ಸ್ವಾಮ್ಯದ [illegible] ಅರ್ಜಿಯನ್ನು ಸಲ್ಲಿಸಿ ಶ್ರೀ ಅರಸರ ಸಂಬಳವನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿರುವರೆಂದು ಗೊತ್ತಾಗಿದೆ.

ಯುಗೊಸ್ಲೇವಿಯ ಗಡಿ ಬಳಿ ಬಲ್ಗೇರಿಯದ ಸೈನ್ಯ ಶೇಖರಣೆ

ಯುಗೊಸ್ಲೇವಿಯ ಗಡಿ ಬಳಿ ಬಲ್ಗೇರಿಯದ ಸೈನ್ಯಗಳು ಶೇಖರವಾಗುತ್ತಿವೆಯೆಂದು ಅಲ್ಲಿನ [illegible] ತಿಳಿಸಿದೆ. [illegible] ಉದ್ರೇಕವನ್ನುಂಟುಮಾಡುವ ಸ್ಥಿತಿಯಲ್ಲಿ ಬಲ್ಗೇರಿಯ ವರ್ತಿಸುತ್ತಿರುವುದಾಗಿ ಆ [illegible] ಆಪಾದಿಸಿದೆ

ಎರಡು ತಲೆಯ ಕರುವಿಗೆ ಕುದುರೆ ಕಾಲಿನ ಗೊರಸು

ನಂಜನಗೂಡು ತಾಲ್ಲೂಕು [illegible] ಹೋಬಳಿ [illegible] ಗ್ರಾಮದ ಒಬ್ಬರ ಮನೆಯಲ್ಲಿ ಇಂದು ಬಣ್ಣದ ಹಸುವು ಹಾಕಿರುವ ಕರುವಿಗೆ ಎರಡು ತಲೆ, ನಾಲ್ಕು ಕಣ್ಣು, ನಾಲ್ಕು ಕಿವಿ, ನಾಲ್ಕು ಕಾಲುಗಳಿವೆ. ಕಾಲಿನ ಗೊರಸು ಕುದುರೆಗಿರುವಂತಿದೆ. ಒಂದು ವಾರ ಮಾತ್ರವಿದೆ. ಕರುವು ಆರೋಗ್ಯವಾಗಿದೆ.

ಫ್ರಾನ್ಸಿನ ಬಿಡೋ ಮಂತ್ರಿ ಮಂಡಲಕ್ಕೆ ಸೋಲು

ಫ್ರಾನ್ಸಿನ ಸರ್ಕಾರಿ ಅಧಿಕಾರಿಗಳ ಸಂಬಳವನ್ನು ಹೆಚ್ಚಿಸಬೇಕೆಂದು ಅಲ್ಲಿನ ಸಮಾಜವಾದಿ ಪಕ್ಷವು ಮುಂದೆ ಬಂದಿದ್ದ ಪ್ರಧಾನಿ ಬಿಡೋರವರ ಮಸೂದೆಯು ತಿರಸ್ಕರಿಸಲ್ಪಟ್ಟು ಅಲ್ಲಿನ ಮಂತ್ರಿ ಮಂಡಲದಲ್ಲಿ ವಿಶ್ವಾಸವಿದೆಯೇ ಇಲ್ಲವೇ ಎಂಬ ಬಗ್ಗೆ ವೋಟು ತೆಗೆದುಕೊಳ್ಳಲಾಗಿ ೩೫೨ ವೋಟು ವಿರುದ್ಧವಾಗಿಯೂ, ೨೩೦ ವೋಟುಗಳ ಪರವಾಗಿಯೂ ಬಂದವು. ಆದುದರಿಂದ ಫ್ರಾನ್ಸಿನ ಮಂತ್ರಿ ಮಂಡಲವು ನೆನ್ನೆ ರಾಜೀನಾಮೆ ಇತ್ತಿತು

ತಂತಿ ಸುದ್ದಿ ರವಾನೆ ದರದಲ್ಲಿ ರಿಯಾಯಿತಿ

ಬರುವ ಜುಲೈ ೧ನೇ ತಾರೀಖಿನಿಂದ ಶುಭ ಸಂದೇಶಗಳ ಸುದ್ದಿಯನ್ನು ತಂತಿ ಮೂಲಕ ಕಳುಹಿಸುವ ದರದಲ್ಲಿ ರಿಯಾಯಿತಿಯನ್ನು ಕೊಟ್ಟು ೬ ಆಣೆ ಅದಕ್ಕೆ ಇಳಿಸಿ, ಪದಗಳ [illegible] ಸುದ್ದಿಗೆ ೧೦ ಆಣೆ [illegible] ಅಂಚೆಯ ಖರ್ಚು ಸುದ್ದಿಗೆ ೧೧ [illegible] ನಿಗದಿಯಾಗಿದೆ

ಸಿವಿಲ್ ಸರ್ವಿಸ್ ಪರೀಕ್ಷೆ

ಕೆಲವು ವರ್ಷಗಳಿಂದ ನಿಂತುಹೋಗಿದ್ದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಈ ವರ್ಷ ನಡೆಸಲಾಗುವುದೆಂದು ತಿಳಿದುಬಂದಿದೆ

ಕಾಂಗ್ರೆಸ್ ಚುನಾವಣೆಯನ್ನು ಮುಂದುವರಿಸಿರಲು ಒತ್ತಾಯ

ಸಂಸ್ಥಾನದ ಕಾಂಗ್ರೆಸ್ ಚುನಾವಣೆಯನ್ನು ಇದೇ ೩೦ನೇ ತಾರೀಖು ನಡೆಸುವ [illegible] ಗೊತ್ತುಮಾಡಿ ಮತ್ತೆ ಅದನ್ನು ಬದಲಾಯಿಸಿ ಬರುವ ತಿಂಗಳು ೨ನೇ ತಾರೀಖಿಗೆ ಮುಂದುವರಿಸಿರುವ ಬಗ್ಗೆ ರಾಜಧಾನಿಯ ಶ್ರೀಗಳಾದ ಎ. ರಾಮಣ್ಣ ಮತ್ತು ಬಿ. ರಾಚಯ್ಯ ಮುಂತಾದವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಚುನಾವಣೆಯನ್ನು ಮುಂದುವರಿಸದೆ ಇದೇ ೩೦ನೇ ತಾರೀಖಿನ ದಿನವೇ ನಡೆಸಬೇಕೆಂದು ಒತ್ತಾಯಪಡಿಸಿರುವುದಾಗಿ ಗೊತ್ತಾಗಿದೆ. ಬರುವ ತಿಂಗಳು ೨ನೇ ತಾರೀಖು [illegible] ಹಬ್ಬಗಳು ಇರುವುದರಿಂದ [illegible] ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದರಿಂದ ಆ ದಿನ ಒತ್ತಾಯ ಕಷ್ಟವಾಗುವುದೆಂದು ತಿಳಿದುಬಂದಿದೆ

ಸಂಸ್ಥಾನಗಳಲ್ಲಿ ಆಬ್ಕಾರಿ ಸುಂಕದ ರದ್ದು

ಸಂಸ್ಥಾನದಲ್ಲಿ ಕೆಲವು ಸರಕುಗಳ ಮೇಲೆ ವಿಧಿಸುವ ಆಬ್ಕಾರಿ ಸುಂಕವನ್ನು ತೆಗೆದು ಹಾಕಲಾಗಿದೆ. ಭಾರತ ಸರ್ಕಾರದವರು ಆಬ್ಕಾರಿಯ ಪದ್ಧತಿಯನ್ನು ಜಾರಿಗೆ ತರುವುದಾಗಿಯೂ, ಮೈಸೂರು ಸಂಸ್ಥಾನದಲ್ಲಿ ಈ ಸುಂಕವನ್ನು [illegible] ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿಯೂ, [illegible] ಸಚಿವರಾದ ಶ್ರೀ [illegible] ಹೇಳಿದ್ದಾರೆ. ಇದರಿಂದ ಅಗತ್ಯ ವಾದ ವಸ್ತುಗಳನ್ನು [illegible] ತಯಾರಿಸುತ್ತಿರುವ ಕೆಲವು ಕೈಗಾರಿಕೆಗಳ ಮೇಲಿನ ಸುಂಕವನ್ನು ತೆಗೆಯಲಾಗುವುದೆಂದು ಅವರು ತಿಳಿಸಿರುವರು

ಕನ್ನಂಬಾಡಿ ನೀರಿನ ಮಟ್ಟ

ಈ ದಿನ ಕೃಷ್ಣರಾಜ ಸಾಗರದಲ್ಲಿ ನೀರು ೩೫-೩೩ ಅಡಿಯ ಮಟ್ಟಕ್ಕೆ ಏರಿದೆ

ಕನ್ನಂಬಾಡಿಯಿಂದ ನಾಲೆಗಳಿಗೆ ನೀರು

ಕಾವೇರಿಯಲ್ಲಿ ನೀರು ಬರುವುದು ಕಡಿಮೆಯಾಗಿಲ್ಲವಾದುದರಿಂದ ನಾಲೆಗಳ ಮುಖ್ಯ ತೂಬುಗಳನ್ನು ಬರುವ ತಿಂಗಳ ಮೊದಲನೇ ತಾರೀಖಿನವರೆಗೂ ತೆರೆಯಲಾಗುವುದಿಲ್ಲ. ಪರಿಸ್ಥಿತಿಯು ಉತ್ತಮವಾಗಿದ್ದಲ್ಲಿ ಮುಂಚಿತವಾಗಿಯೇ ತೆಗೆಯಲಾಗುವುದೆಂದು ತಿಳಿಸಲಾಗಿದೆ

ರಾಜಧಾನಿಯಲ್ಲಿ ಇನ್ನೊಂದು ಅಂಚೆ ಬಟವಾಡೆ ಸೌಕರ್ಯ

ಮೈಸೂರು ನಗರದಲ್ಲಿ ಈಗ ಇರುವ ಅಂಚೆ ಬಟವಾಡೆಗಳ ಜೊತೆಗೆ ಮಧ್ಯಾಹ್ನ ನಾಲ್ಕು ಘಂಟೆಗೆ ಇನ್ನೊಂದು ಬಟವಾಡೆಯ ಸೌಕರ್ಯವನ್ನು ಏರ್ಪಡಿಸಲಾಗುವುದೆಂದು ತಿಳಿದುಬಂದಿದೆ. ನೀಲಗಿರಿ ಮತ್ತು ಕೊಡಗುಗಳಿಂದ ಬರುವ ಅಂಚೆಗಳನ್ನೂ ಮತ್ತು ಮಧ್ಯಾಹ್ನ ಮೂರು ಘಂಟೆವರೆಗೆ ಹಾಕಲಾಗುವ ಸ್ಥಳೀಯ ಕಾಗದ ಪತ್ರಗಳನ್ನೂ ಇದರ ಮೂಲಕ ಹಂಚಲಾಗುವುದು

ಹರಿಕಥೆ ಮತ್ತು ಹರಿಕಥೆ

ರಾಜಧಾನಿಯ [illegible] ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ದಿನ ರಾತ್ರಿ ೮ ಘಂಟೆಗೆ ಶ್ರೀ ಸೀತಾ [illegible] ದಾಸರಿಂದ ದಾಸರ ಪದಗಳ ಹಾಡುಗಾರಿಕೆಯೂ, ಅನಂತರ ಶ್ರೀರಾಮಕೃಷ್ಣ ಶಾಸ್ತ್ರಿಗಳವರಿಂದ ಭಾಗವತ [illegible] ಹರಿಕಥೆಯೂ ನಡೆಯುವುದು

ಫಿಲಿಪ್ಪೈನ್ಸಿಗೆ ಮೈಸೂರಿನ ಕರುಗಳು

ಫಿಲಿಪ್ಪೈನ್ಸಿನ ಪಶುಪಾಲನಾ ಇಲಾಖಾ ಪ್ರತಿನಿಧಿಯು ಕೆಲವು ದಿವಸಗಳ ಹಿಂದೆ ಹೆಬ್ಬಾಳ ಮತ್ತು ಹೆಸರಘಟ್ಟಗಳ ಪಶುಪಾಲನಾ ಕೇಂದ್ರಗಳಿಗೆ ಭೇಟಿಯಿತ್ತಿರೆಂದೂ, ಅವರು ಮೈಸೂರಿನಿಂದ ೫೦೦ ಉತ್ತಮ ರಾಸುಗಳನ್ನು ತಮ್ಮ ದೇಶಕ್ಕೆ ಕೊಂಡು ಹೋಗಲು ಅಭಿಪ್ರಾಯಪಟ್ಟರೆಂದೂ ಗೊತ್ತಾಗಿದೆ

ವಿವಾಹ ಮಹೋತ್ಸವ

ಮಹಾರಾಜಾ ಕಾಲೇಜು ಅಧ್ಯಾಪಕರಾದ ಶ್ರೀ ಎ. ಎ. ಕೃಷ್ಣರಾಯರು ನೆನ್ನೆ ತಮ್ಮ ಕುಮಾರಿ [illegible] ಅವರನ್ನು ಭಾರತ ವಿಮಾನ ದಳದ ಶ್ರೀ [illegible] ವೆಂಕಟರಾಮಯ್ಯನವರಿಗೆ ಕೊಟ್ಟು ವಿವಾಹವನ್ನು ಮೊನ್ನೆ ನೆರವೇರಿಸಿದರು

ವಾರ ಭವಿಷ್ಯ

ಶ್ರೀ

ತಾ|| ೨೫-೬-೫೦ರಿಂದ ೨ ೭ ೫೦ರ ವರೆಗೆ

ಮೇಷ—ಮಹತ್ವದ ಕಾರ್ಯಗಳು ಅಧಿಕಾರ ಸ್ಥಿತಿ ಮತ್ತು ಆರೋಗ್ಯ ಉತ್ತಮ ಉದ್ಯಮಗಳಲ್ಲಿ ಜಯ, ಯಶಸ್ಸು ಗೃಹದಲ್ಲಿ ಸೌಖ್ಯ ತಾ|| ೨೭, ೨೮ ಗೊಂದಲ ಖರ್ಚು, ಹಿತೈಷಿಯ ಆಗಮನ

ವೃಷಭ—ಮನಸ್ಸಿಗೆ ಸಂತೋಷ ಉದ್ಯಮಗಳಲ್ಲಿ ಜಯ, ಆರೋಗ್ಯ ಉತ್ತಮ ಶೇವಾದೇವಿ ವ್ಯವಹಾರಗಳ ಸಂಸಾರ ಸಹೋದ್ಯೋಗಿ ಪ್ರವಾಸ ನೌಕರಿ ಯಲ್ಲಿ ಒಳ್ಳೆಯ ಘಟನೆಗಳು ತಾ|| ೨೮ ೩೦ ಖರ್ಚು ತೊಂದರೆ

ಮಿಥುನ ಅನಾರೋಗ್ಯ ಘಟನೆ ನಷ್ಟ ಶಲ್ಲಿಅಶಾಂತಿ ನೌಕರಿದ ಧಿಗಳಲ್ಲಿಅವಮಾ ಹಿತಶತ್ರುಗಳ ಕಾಟ ಪ್ರವಾಸದಲ್ಲಿ ಪ್ರಾಣದ ಹಾವಳಿ ತಾ|| ೨೭, ೨೮ ಚಿಂತೆ ಅಗ್ನಿ ಭಯ ಮನೋವ್ಯಥೆ

ಕರ್ಕ—ಕಾರ್ಯ ಸಿದ್ಧಿ ಸುಖ ಪ್ರವಾಸ ವಿದ್ಯಾರ್ಥಿಗಳಿಗೆ ಶ್ರೇಯಸ್ಸು ಮಹತ್ವ ದ ಜನ ತಾ|| ೨೭, ೨೮ ನಷ್ಟಹಾನಿ ಧನಲಾಭ

ಸಿಂಹ—ಆದಾಯ ... ಕಾರ್ಯಗಳಿಗೆ ... ಕಾರ ಯ ... ನೌಕ ... ಧನ ಲಾಭ ಮನಸ್ಸಿಗೆಆನಂದ ತಾ|| ೨೮ ೩೦ ಪ್ರವಾಸ ಮಿತ್ರರ ಭೇಟಿ

ಕನ್ಯಾ—ಮನಸ್ಸಿನ ತೀವ್ರತೆಯಿಂದ ಆನಾರೋಗ್ಯ ಸೂಚನೆ ನೌಕರಿ ದಂಧೆಗಳಲ್ಲಿ ಅಪಯಶಸ್ಸು ಆರೋಗ್ಯದ ವಿಚಾರದಲ್ಲಿ ಎಚ್ಚರಿಕೆ ತಾ|| ೨೮, ೩೦ ನಿದ್ರಾ ನಾಶ ಶತೃ, ಸಂಸಾರದಲ್ಲಿ ವ್ಯಾಧಿ

ತುಲಾ—ದುಂದು ವೆಚ್ಚ ನೆನೆಸಿದ ಕಾರ್ಯಗಳಿಗೆ ವಿಘ್ನ, ನೌಕರಿ ದಂಧೆಗಳಲ್ಲಿ ಚಿಂತೆ ನಿರುತ್ಸಾಹ ಪ್ರವಾಸದಿಂದ ತ್ರಾಸ ತಾ|| ೨೭, ೨೮ ಬಂಧು ನಾಶ

ವೃಶ್ಚಿಕ—ಆರೋಗ್ಯ ಉತ್ತಮ ವಿದ್ಯಾರ್ಥಿಗಳಿಗೆ ಯಶಸ್ಸು ವ್ಯಾಪಾರ ನೌಕರಿಗಳಲ್ಲಿ ಜಯ, ಗೃಹದಲ್ಲಿ ಸೌಖ್ಯ ತಾ|| ೨೯, ೩೦ ವಿವಾದ ಗಡಿಬಿಡಿ

ಧನು—ಆರೋಗ್ಯ ಉತ್ತಮ, ಪರೋಪಕಾರ ಕಾರ್ಯ ಸಜ್ಜನರ ಭೇಟಿ, ವ್ಯಾಪಾರ, ನೌಕರಿ ದಂಧೆಗಳಲ್ಲಿ ಉತ್ಕರ್ಷ ಮಿತ್ರ ಸಹಾಯ, ಪ್ರಗತಿದಾಯಕ ತಾ|| ೨೭, ೨೮ ಉತ್ಸಾಹ, ಮನರಂಜನೆ

ಮಕರ—ಶುಭದವಾರ ಆರೋಗ್ಯ ಉತ್ತಮ. ನೌಕರಿ ದಂಧೆಗಳಲ್ಲಿ ಸಾಧಾರಣ ಸ್ಥಿತಿ, ಕುಟುಂಬದಲ್ಲಿ ಹರ್ಷ, ಧನಲಾಭ, ಸುಮಿತ್ರವಾಸ ತಾ|| ೨೭ ೨೮ ಶುಭವಾರ್ತೆ, ಲಾಭ ಮಿತ್ರಭೇಟಿ

ಕುಂಭ ಅಪಯಶಸ್ಸು ದುಸ್ಥಿತಿ ಅನಾರೋಗ್ಯ ವಿರೋಧ ಮನೆಯವರೊಟ್ಟಿಗೆ ಅಪಮಾನ ೨೯, ೩೦ ಹಣಕಾಸಿನ ಮುಗ್ಗಟ್ಟು, ಅಸ್ವಸ್ಥ ಪತ್ರಾಗಮನ

ಮೀನ ಅಪಯಶಸ್ಸು ಅಪ್ರಿಯಕರ ವಾದ ಪ್ರಸಂಗಗಳು ಮನಸ್ಸಿಗೆ ಬೇಸರ, ಪ್ರಿಯಜನರ ವಿರಹ ಸ್ತ್ರೀಜನ ಅನಾರೋಗ್ಯ, ನೌಕರಿ ದಂಧೆಗಳಲ್ಲಿ ನಷ್ಟ ತಾ|| ೨೫, ೨೬ ಧನಹಾನಿ ಅಪಮಾನ, ಚಿಂತೆ, ಕಲಹ

---

7 8 ರೂ ಗಳಲ್ಲಿ

ಮನೆಗಳು ಬಾಡಿಗೆಗೆ ಇವೆ

ಉತ್ತರ ... ಹಾಲ್, ... ಮೈಸೂರು ... ವಿಚಾರಿಸಿ

M G M's TECHNICOLOR SMASH

THE THREE — — MUSKETEERS

With LANA TURNER & GENE KELLY

now being screened in crowded

SRI GAYATHRI TALKIES

Daily 3 Shows

GLORIOUS 2nd WEEK

From 25-6 50



ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀನಿವಾಸಾಚಾರ್ಲು ರಸ್ತೆ, ಬೆಂಗಳೂರು.

ರಾಜಕಮಲ್,

ಮೈಸೂರು

23-6 50ರಿಂದ ಅಪೋರ್ವ 3ನೇ ವಾರ ಪ್ರತಿ ದಿನ 3 ಆಟಗಳು

ಪಲ್ಲೆಟೂರಿ

ಪಿಲ್ಲ

(ತೆಲುಗು)

ಘಂಟಸಾಲ - ಅಂಜಲೀದೇವಿ, ಅಕ್ಕಿನೇನಿ ನಾಗೇಶ್ವರರಾವ್

CITY TUTORIAL COLLEGE,

Vanivilas Road, Mysore

Coaching for GIRLS ONLY

● S S L. C Examn of Oct 1950

● High ; School I year for M S Passed Girls

JOIN IMMEDIATELY

ಗಣೇಶಾ ಟಾಕೀಸ್

25-6-50 ರಿಂದ 3 ದಿನಗಳು ಮಾತ್ರ ಪ್ರತಿ ದಿನ 3 ಆಟಗಳು

Stalingrad & Sports Parade in Moscow

ಸ್ಟಾಲಿನ್‌ಗ್ರಾಡ್ ಮತ್ತು ಸ್ಪೋರ್ಟ್ಸ್ ಪೆರೇಡ್ ಇನ್ ಮಾಸ್ಕೊ

ರಷ್ಯನ್ ದೇಶದ ಚಿತ್ರ

28 6—50 ರಿಂದ

... ಮತ್ತು ...

Edited, printed and published by A R Nagarajan, at Sadhvi Press, D Subbiah Road, Mysore

ಪ್ರಭುದೇವಾ ಟಾಕೀಸ್

ದಿನವೂ 3 ಆಟಗಳು

24-6-50ನೇ ಶನಿವಾರದಿಂದ

- ಸು ಮ ತಿ - (ತೆಲುಗು)

ಪಾತ್ರ:- ಕನ್ನಾಂಬ, ಸಿ. ಎಸ್. ಆರ್., ಬಳ್ಳಾರಿ ಲಲಿತ ರಾಮಕೃಷ್ಣ ಶಾಸ್ತ್ರಿ ಮುಂತಾದವರು

Estd. 1917

Principal P SUBBARAYA SASTRY, M A (Mys) M A in Com (Cal), C E. T D (Lon), F C I (Lon)

The Champion

METROPOLITAN COLLEGE OF COMMERCE,

Co-operators' Home, 100 ft Road, Mysore is receiving admissions for Courses of studies leading to

Examinations conducted by	D Com Diplomas in
The Government of India	Accountancy Commerce
The Government of Mysore	Business Organization
Indian Merchants' Chamber	Company Secretaryship
Institute of Book-keepers (Lon)	Stenography Banking

as well as individual Certificate Courses in Type-writing, Shorthand Book-keeping etc

Prospectus, Admission form etc can be had by sending As 2 in Postage stamp

— ರ ಣ ಜಿ ತ್ ಟಾ ಕೀ ಸ್ —

ಜನಪ್ರಿಯವಾದ 3ನೇ ವಾರ :: ದಿನವೂ 3 ಆಟಗಳು

ಮನೋಹರ ನೃತ್ಯ, ಸುಮಧುರ ಸಂಗೀತ ಮತ್ತು ಹಾಸ್ಯಲಹರಿಯಿಂದ ಕೂಡಿದ ತೆಲುಗು ಚಿತ್ರ

ಮೊದಟಿ ರಾತ್ರಿ (First Night)

ಸಾಧ್ವಿ

[illegible]] ಮೈಸೂರು [illegible] [[illegible]

ಉತ್ತರ ಮತ್ತು ದಕ್ಷಿಣ ಕೊರಿಯಾ ಯುದ್ಧ

ಗುಮಾಸ್ತರ ಮೇಲೆ ಕೃಷ್ಣ ಇಂಜನಿಯರರು ಕೈ ಮಾಡಿದ ಆಪಾದನೆ

ಮೈಸೂರು [illegible]

[illegible]

ಕೊಡು ಹೋಗುತ್ತಿದ್ದವನನ್ನು ತಲೆ ಕುಟ್ಟಿ ಉಳಿಸಿದರು

[illegible]

ಪೋರ್ಚುಗೀಜ್ ಪ್ರಧಾನಿಯ ಕೊಲೆ ಪ್ರಯತ್ನ

[illegible]

ಸರ್ಕಾರದ ಮೇಲೆ ಆರ್. ಎಸ್. ಎಸ್. ನವರ ದಾವಾ

[illegible]

ಮೈಸೂರಿಗೆ ಪುನಃ ನೆಹರೂ ರವರ ಭೇಟಿಯೋ ?

ಮೈಸೂರು [illegible]

[illegible]

ಸಂಗೀತ

[illegible]

ಕನ್ನಂಬಾಡಿ ನೀರಿನ ಮಟ್ಟ [illegible] ಅಡಿಗಳಿಗೆ ಏರಿದೆ

[illegible]

[illegible] ವರ್ಷದ ಬಾಲಕ

[illegible]

ಅಮೆರಿಕಕ್ಕೆ ಸ್ಪೇನಿನಲ್ಲಿ ವಿಮಾನ ನೆಲೆಗಳು

[illegible]

ನ್ಯಾಯವಾದ ಕೂಲಿಯ ನಿರ್ಧಾರದ ಸಮಿತಿ ಸ್ಥಾಪನೆ

ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಮಿಕರ ಕೂಟ

ಮೈಸೂರು [illegible]

[illegible]

ದಕ್ಷಿಣ ಕೊರಿಯದ ಮೇಲೆ ಉತ್ತರ ಕೊರಿಯದ ಯುದ್ಧ

[illegible]

ನೆಹರೂರವರ ೩ ಕಾರುಗಳಿಗೆ [illegible] ರೂ.

[illegible]

ಮಲಯದ ಮಹಿಳೆಗೆ ಮರಣ ದಂಡನೆ

[illegible]

ಗುಜರಾತಿ ಸಂಸ್ಥೆಯ ರಜತ ಮಹೋತ್ಸವ

[illegible]

ಮೇರಿ ರಾಣಿಯ ಮನೆಗೆ ಕಳ್ಳರ ಪ್ರವೇಶ

ಇಂಗ್ಲೆಂಡಿನ ಮೇರಿ ರಾಣಿಯವರ ವಿಹಾರವಾದ ಮಾರ್ಲ್‌ಬರೋ ಭವನಕ್ಕೆ ಕಳ್ಳರೊಳ್ಳಗೆ ನುಗ್ಗಿ ೬೦ ವರ್ಷದ ಸೇವಕಿಯನ್ನು ಮತ್ತು ಇನ್ನೊಬ್ಬಳನ್ನು ಇರಿದರೆಂದು ಹೇಳಲಾಗಿದೆ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ರಾಣಿಯವರ ಒಂದು ಆಭರಣಗಳು ಕಳುವಾಗಿವೆ. ಭವನದ ಸುತ್ತಲೂ ಇದ್ದ ಕಾವಲುಗಾರರ ಕಣ್ಣಿಗೆ ಬೀಳದೆ ಕಳ್ಳರು ಒಳಕ್ಕೆ ಹೇಗೆ ನುಗ್ಗಿದ್ದಾರೆ?

ರೆಕ್ಕೆಯಿಂದ ಕೂಡಿದ ಬೆಕ್ಕು

ತಿರುಚ್ಚಿನಾಪಳ್ಳಿಯಲ್ಲಿ ಒಬ್ಬ ಜವಾನನು ಪಕ್ಷಿಯ ಮೇಲೆ ರೆಕ್ಕೆಗಳನ್ನು ಹೊಂದಿದ ವಿಚಿತ್ರ ಬೆಕ್ಕನ್ನು ಹೊಂದಿರುವನೆಂದು ತಿಳಿದಿಯಾಗಿದೆ. ಆ ಬೆಕ್ಕು ರೆಕ್ಕೆಯನ್ನು ಪಕ್ಷಿಗಳಂತೆ ಹರಡಿ ಅಡಿಗಟ್ಟಲು ಅದ ರ ಪಕ್ಷಿಯಂತೆ ಹಾರಲಾರದು ಅದಕ್ಕೆ ೧೫ ಸಾವಿರ ರೂ. ಬೆಲೆಯನ್ನು ಕೊಡಲು ಬಂದ ಒಬ್ಬನಿಗೆ ಅವನು ಅದನ್ನು ಮಾರಲು ನಿರಾಕರಿಸಿದನು ಸಾಕುದಾಗಿ ಅದನ್ನು ಉಪಯೋಗಿಸಿಕೊಳ್ಳಲು ಹಲವರು ಅವನಿಗೆ ದಿನಂಪ್ರತಿ ೧೦ ರೂ ಬಾಡಿಗೆ ಕೊಡುತ್ತಿರುವರೆಂದು ಗೊತ್ತಾಗಿದೆ

"ವಿಶ್ವ ಕಲಾ"

ರಾಜಧಾನಿಯ ಪಾಣಿಪಾಕ ಮೊಹಲ್ಲಾ ಶ್ರೀ ವಿ ಲಕ್ಷ್ಮೀಪತಿಯವರ ಸಂಪಾದಕತ್ವದಲ್ಲಿ "ವಿಶ್ವ ಕಲಾ" ಎಂಬ ಮಾಸಪತ್ರಿಕೆಯು ಹೊರಟು ಅದರ ಪ್ರಥಮ ಸಂಚಿಕೆ ನಮ್ಮ ಕೈ ಸೇರಿದೆ ವಿಶ್ವದ ಎಲ್ಲಾ ಕಲಾ ವಿಷಯಗಳನ್ನೂ ಪ್ರಕಟಿಸುವ ಉದ್ದೇಶದಿಂದ ಇದು ಪ್ರಾರಂಭವಾಗಿದೆ. ಪತ್ರಿಕೆಯು ಬಹಳ ಕಾಲ ಬಾಳಿ ತನ್ನ ಉದ್ದೇಶವನ್ನು ಸಿದ್ಧಿಸಿಕೊಳ್ಳಲೆಂದು ಹಾರೈಸುತ್ತೇವೆ ಪತ್ರಿಕೆಯ ವಾರ್ಷಿಕ ಚಂದಾ ಏಜೆಂಟರ ಮೂಲಕ ೧-೮-೦ ರೂ. ಅಂಚೆ ಮೂಲಕ ೨-೦-೦ರೂ ಕಲಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಲು ಯೋಗ್ಯವಾಗಿದೆ

SARADAVILAS HIGH SCHOOL,
MYSORE

WANTED

1) A Govt. certified auditor to audit the accounts of the S. V. Educational Institutions every month for the year 50-51
2) A clerk with S.S.L.C. and Senior Accountancy.
3) A Graduate with Hindi optionals or Rashtra Bhasha Visharad.
4) A B. Com. or D. Com for Saradavilas Commercial Institute.

Apply on or before the 30th.

(Sd.) P. GOPALAKRISHNA SETTY,
Hon Secretary,
Saradavilas High School,
Mysore

ಹರಿಜನರನ್ನು ಬೈದು ನೀರಿಗೆ ಅವಕಾಶ ಕೊಡದಿದ್ದುದಕ್ಕಾಗಿ ದಸ್ತಗಿರಿ

ಅಂಬಾಲದ ಕಸ್ತೂರಿ ಲಾಲ್ ಎಂಬ ಬ್ರಾಹ್ಮಣ ರಸದ ವ್ಯಾಪಾರಿ ಮತ್ತು ಅವನ ಮಗ ಇಬ್ಬರೂ ಸೇರಿ ಹರಿಜನ ಹೆಂಗಸೊಬ್ಬಳನ್ನು "ಚಮ್ಮಾರ್" ಎಂದು ನಿಂದಿಸಿ, ಸಾರ್ವಜನಿಕ ನಲ್ಲಿಯಿಂದ ನೀರನ್ನು ತೆಗೆದುಕೊಳ್ಳಲು ಅವಕಾಶ ಕೊಡದಿದ್ದುದಕ್ಕಾಗಿ ಅವರನ್ನು ದಸ್ತಗಿರಿ ಮಾಡಲಾಗಿದೆ

ಹಡಗು ಮತ್ತು ಸಬ್‌ಮೆರೀನ್‌ಗಳಲ್ಲಿ ಅಣು ಶಕ್ತಿಯ ಬಳಕೆ

ಕೈಗಾರಿಕೋದ್ಯಮಗಳಿಗೆ ಅಣು ಶಕ್ತಿಯನ್ನು ಇನ್ನು ಹತ್ತು ವರ್ಷ ಕಾಲದಲ್ಲಿ ಹೇಗೆ ಬಳಸಿಕೊಳ್ಳಬಹುದೆಂಬ ಬಗ್ಗೆ ಬ್ರಿಟನ್ನಿನಲ್ಲಿರುವ ಅಣುಶಕ್ತಿ ಕೇಂದ್ರದಲ್ಲಿ ಪತ್ರಕರ್ತರಿಗೆ ವಿವರಿಸಲಾಯಿತು ಇನ್ನು ಹತ್ತು ವರ್ಷ ಕಾಲದಲ್ಲಿ ಅಣು ಶಕ್ತಿಯನ್ನು ಹಡಗು ಮತ್ತು ಸಬ್ ಮೆರೀನ್‌ಗಳನ್ನೂ ನಡೆಸಲು ಬಳಸಬಹುದೆಂದೂ ಅಣು ಶಾಸ್ತ್ರಜ್ಞರು ವ್ಯಕ್ತಪಡಿಸಿದರು

ಬಿಕರಿಗಿದೆ

ಬ್ರೂಕ್ (BROOK) ಎಲೆಕ್ಟ್ರಿಕ್ ಮೋಟಾರ್ H P 3½. ಕೇಸಿಂಗ್ ವಿಚಾರ ರನ್ನಿಂಗ್ ಕಂಡಿಷನ್ನಿನಲ್ಲಿ ಇದೆ ಇವರಲ್ಲಿ ವಿಚಾರಿಸಿ.

ಎಂ. ಮೈಲಾರಯ್ಯ,
ದೀಪ ಅಂಗಡಿ, ಶಿವರಾಂಪೇಟೆ, ಮೈಸೂರು.

ಉಪಾಧ್ಯಾಯರು ಬಾಲಕರ ಬಟ್ಟೆ ಹೊಲಿಯಬೇಕು

ಲಕ್ನೋ—ಫೈಜಾಬಾದ್ ಪ್ರದೇಶದಲ್ಲಿ ಹಳ್ಳಿಯ ಪ್ರಾಥಮಿಕ ಮತ್ತು ಜೂನಿಯರ್ ಹೈ ಸ್ಕೂಲುಗಳ ಉಪಾಧ್ಯಾಯರುಗಳು ಈ ವರ್ಷ ಮುಗಿಯುವುದರಲ್ಲಿ ಬಟ್ಟೆ ಹೊಲಿಯುವುದನ್ನು ಕಲಿಯಬೇಕಾಗಿದೆ ಈ ಆಜ್ಞೆಯನ್ನು ಮಾಡಿರುವ ಉತ್ತರ ಪ್ರದೇಶದ ವಿದ್ಯಾ ಇಲಾಖೆಯ ಅಧಿಕಾರಿಗಳು, ಬಾಲಕರ ಬಟ್ಟೆಗಳನ್ನು ಸರಿಪಡಿಸಲು ಸೂಜಿ ಮತ್ತು ದಾರಗಳನ್ನು ಇಟ್ಟುಕೊಳ್ಳಬೇಕೆಂದು ಉಪಾಧ್ಯಾಯರುಗಳಿಗೆ ತಿಳಿಸಿದ್ದಾರೆ ಒಟ್ಟು ೧೪,೭ ಸಾವಿರ ವಿದ್ಯಾರ್ಥಿಗಳ ಬಟ್ಟೆಗಳನ್ನು ಅಂಟುವಾಳದ ಕಾಯಿನಿಂದ ಒಗೆದು ಶುಭ್ರಪಡಿಸುವ ಕಾರ್ಯವನ್ನು ಉಪಾಧ್ಯಾಯರುಗಳು ಮಾಡಬೇಕೆಂದು ಸೂಚಿಸಲಾಗಿದೆ

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,
70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

ಕುಮಾರ ಮಂಗಳಂರವರ ದಸ್ತಗಿರಿ

ದಕ್ಷಿಣ ಕೊರಿಯಾದವರು ಪುನಃ ಹಿಡಿದ ಸುವಾನ್ ನಗರದ ವಿಮಾನ ನಿಲ್ದಾಣದ ಮೇಲೆ ರಷ್ಯದ ಕೆಂಪು ಚಿಹ್ನೆಯ ವಿಮಾನಗಳಿಂದ ನೆನ್ನೆ ಧಾಳಿ ನಡೆಯಿತು. ಶತ್ರು ವಿಮಾನಗಳು ನಿಲ್ದಾಣವನ್ನು ಪುಡಿಪುಡಿ ಮಾಡಿದವು. ಬ್ರಿಟಿಷ್ ಮತ್ತು ಅಮೆರಿಕಾ ಯುದ್ಧ ಹಡಗುಗಳು ಕೊರಿಯದ ಪೂರ್ವ ತೀರದಲ್ಲಿ ಕಾರ್ಯಾಚರಣೆಗೆ ತೊಡಗಿವೆ. ಅಮೆರಿಕದ ವಿಮಾನಗಳು ಉತ್ತರ ಕೊರಿಯನ್ನರ ಮೇಲೆ ಧಾಳಿ ನಡೆಸಿದುದಾಗಿ ಹೇಳಲಾಗಿದೆ. ಉತ್ತರ ಕೊರಿಯದ ೭ ಕಮ್ಯೂನಿಸ್ಟ್ ಹಡಗುಗಳನ್ನು ಮುಳುಗಿಸಲಾಗಿದೆ. ಈಜಿಪ್ಟ್ ಈ ಯುದ್ಧದ ಬಗ್ಗೆ ಭದ್ರತಾ ಸಮಿತಿಯು ಮಾಡಿರುವ ನಿರ್ಣಯವನ್ನು ಒಪ್ಪುವುದಿಲ್ಲವೆಂದು ಆ ದೇಶದ ಪ್ರಧಾನಿಗಳು ತಿಳಿಸಿರುತ್ತಾರೆ

ಕೊರಿಯಾ ಯುದ್ಧದಲ್ಲಿ ನೆಹರೂ ಮಧ್ಯಸ್ಥಿಕೆಯಾಗಲಿ

ವಿಶ್ವ ಸಂಸ್ಥೆಯ ಪರವಾಗಿ ಕೊರಿಯಾ ವಿಷಯದ ಮೇಲೆ ಭಾರತದ ಪ್ರಧಾನಿ ನೆಹರೂರವರು ಮಧ್ಯಸ್ಥಿಕೆ ವಹಿಸುವಂತೆ ಅವರನ್ನು ಆಹ್ವಾನಿಸಬೇಕೆಂದು ಲಂಡನ್ನಿನ ವಾಮಪಕ್ಷದ ಪತ್ರಿಕೆ "ರೆನಾಲ್ಡ್ಸ್ ನ್ಯೂಸ್" ಸೂಚಿಸಿದೆ. ಈ ಕಾರ್ಯಕ್ಕೆ ಪ್ರಪಂಚ ಪ್ರಖ್ಯಾತಿ ಪಡೆದಿರುವ ಮಧ್ಯಸ್ಥಿಕೆಗಾರರ ಅವಶ್ಯಕತೆ ಇರುವುದೆಂದೂ, ಪ್ರಪಂಚದ ರಾಜಕಾರಣಿಯೂ ಮತ್ತು ಏಷ್ಯದ ಶ್ರೇಷ್ಠ ನಾಯಕರೂ ಆದ ಪ್ರಧಾನಿ ನೆಹರೂರವರೇ ಇದಕ್ಕೆ ತಕ್ಕವರೆಂದೂ ಆ ಪತ್ರಿಕೆ ತಿಳಿಸುತ್ತದೆ

○ ೫೦೦ ಪೌಂಡು ತೂಕದ ಅಮೆರಿಕದ ಜಾನ್ ಅಂಟೋನಿಯವರು ಮರಣಹೊಂದಿದರು. ಅವರ ಕಳೇಬರವನ್ನು ಹೊತ್ತುಕೊಂಡು ಹೋಗಲು ಒಂದು ಲಾರಿಯನ್ನು ಉಪಯೋಗಿಸಬೇಕಾಯಿತು

ಜಿಲ್ಲಾ ಬೋರ್ಡಿನಲ್ಲಿ ಆಹಾರಹತೋಟಿ ನಿರ್ಣಯ

ಕಳೆದ ತಿಂಗಳು ನಡೆದ ಮೈಸೂರು ಜಿಲ್ಲಾ ಬೋರ್ಡಿನ ಸಭೆಯಲ್ಲಿ ಆಹಾರದ ಹತೋಟಿಯನ್ನು ತೆಗೆಯಬೇಕೆಂದು ನಿರ್ಣಯ ಮಾಡಿದ ಸಂಬಂಧದಲ್ಲಿ ಬೋರ್ಡಿನ ಸದಸ್ಯರಾದ ಶ್ರೀ ಪಿ. ವೆಂಕಟಕೃಷ್ಣಯ್ಯನವರು ಪತ್ರ ಬರೆದು, ತಾವು ಹತೋಟಿ ಆಜ್ಞೆಯನ್ನು ತೀವ್ರವಾಗಿ ಖಂಡಿಸಲಿಲ್ಲವೆಂದೂ, ಅದನ್ನು ಸರ್ಕಾರದವರು ಅನಿವಾರ್ಯವಾಗಿ ಸಡಿಲಿಸಬೇಕಾಯಿತೆಂದು ಹೇಳಿದುದಾಗಿಯೂ ತಿಳಿಸಿದ್ದಾರೆ. ಮಳೆಯಾಗದೇ ಇರುವುದು ಸರ್ಕಾರದ ಜವಾಬ್ದಾರಿಯಾಗುವುದಿಲ್ಲವೆಂದೂ, ಈಗಿನ ಪರಿಸ್ಥಿತಿಯು ದೈವೀಕವೇ ಹೊರತು ಬೇರೆಯಲ್ಲವೆಂದೂ ಹೇಳುವವರು ರಹದಾರಿ ಪಡೆದು ೧೦ ಸೇರು, ರಹದಾರಿಯಿಲ್ಲದೆ ೩ ಸೇರು ಧಾನ್ಯವನ್ನು ತೆಗೆದುಕೊಂಡು ಹೋಗಲು ಅವಕಾಶ ಕೊಡಲಾಗಿದೆಯೆಂದೂ, ಅದನ್ನು ೨೦ ಸೇರು ಮತ್ತು ೫ ಸೇರುಗಳಿಗೆ ಬದಲಾಯಿಸಬೇಕೆಂದು ಹೇಳಿದುದಾಗಿಯೂ ಅವರು ತಿಳಿಸಿದ್ದಾರೆ. ಕೆರೆ ಮತ್ತು ನಾಲೆಗಳ ರಿಪೇರಿ ಮಾಡಿಸಿ, ಟ್ರ್ಯಾಕ್ಟರ್ ಮುಂತಾದ ಯಂತ್ರೋಪಕರಣಗಳ ಉಪಯೋಗದಿಂದ ಬೆಳೆಯನ್ನು ಅಧಿಕಗೊಳಿಸಬೇಕೆಂದೂ ಅವರು ಸಲಹೆಯಿತ್ತರು

ಸತ್ಯಾಗ್ರಹಕ್ಕೆ ಅವಕಾಶವಾಗುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ

ಯುವಕ ಸಂಘದ ವಾರ್ಷಿಕೋತ್ಸವದಲ್ಲಿ ವೆಂಕಟಪ್ಪನವರ ಭಾಷಣ

ಮೈಸೂರು, ೩

ರಾಜಧಾನಿಯ ಇಟ್ಟಿಗೆಗೂಡಿನ ಯುವಕ ಸಂಘದ ಐದನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಶ್ರೀ ಪಿ. ಡಿ. ಎಸ್. ನಾಯುಡುರವರ ವ್ಯಾಯಾಮ ಶಾಲೆಯ ಕಟ್ಟಡದಲ್ಲಿ ನಡೆಯಿತು. ಶಾಸನ ಸಭಾಧ್ಯಕ್ಷರಾದ ಶ್ರೀ ಬಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆ ಆದ ಕೂಡಲೆ, ಭಾರತೀಯರಿಂದ ಸ್ವಾಗತ ಪದ್ಯ ಪಠಣವಾದ ನಂತರ ಸಂಘದ ಅಧ್ಯಕ್ಷರು ಭಾಷಣ ಮಾಡಿದರು.

ಶ್ರೀ ವಿಷಕಂಠಯ್ಯನವರು ವಾರ್ಷಿಕ ವರದಿ ಓದಿದರು. ಪೆನ್ರಿ ಅಂಡ್ ಬ್ರದರ್ಸ್ ರವರ ಆರ್ಕೆಸ್ಟ್ರಾ, ವಿವಿಧ ವೇಷಗಳ ಪ್ರದರ್ಶನ, ಸಂಘದ ನಟರಿಂದ ಸುಳ್ಳು ಬಹುಮಾನ ವಿನಿಯೋಗ ನಡೆಯಿತು.

[illegible] ಧ್ಯಕ್ಷರಾದ ಶ್ರೀ [illegible] ಲಿಂಗ [illegible] ಇಲ್ಲಿ [illegible] ನಿವಾಸಿಗಳಿಗೆ ಪ ಸಗೆಗಳನ್ನು [illegible] ವೀಯುವುದಾಗಿ ಭರವಸೆ ಕೊಟ್ಟಿದ್ದರೂ, ನಗರಸಭೆಯ ಮಾಡಿಕೊಂಡ ಮೇಲೆ ನಿವೇಶನಗಳಲ್ಲಿ ಹೊಸ ಮನೆಗಳನ್ನು ಕಟ್ಟಿಸಿ ಮಾರಾಟ ಮಾಡಿಸಲು ಏರ್ಪಾಡು ಮಾಡುತ್ತಿರುವುದ ಶೋಚನೀಯವೆಂದೂ, ಇದನ್ನು ಪ್ರತಿಭಟಿಸಲು ಸತ್ಯಾಗ್ರಹವನ್ನಾದರೂ ಹೂಡಲು ಸಿದ್ಧರಿರುವುದಾಗಿಯೂ ತಿಳಿಸಿದರು. ಶ್ರೀ ಎಸ್. ಚನ್ನಯ್ಯನವರು ಮಾತನಾಡಿ ಸತ್ಯಾಗ್ರಹಕ್ಕೆ ಅವಕಾಶವಾಗದ ರೀತಿಯಲ್ಲಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದಾಗಿಯೂ, ಅ ದ ರೂ ಹೋರಾಟವು ಅನಿವಾರ್ಯವಾದರೆ ಅದಕ್ಕೂ ಹಿಂಜರಿಯುವುದಿಲ್ಲವೆಂದೂ ಹೇಳಿದರು.

ಅಧ್ಯಕ್ಷ ಶ್ರೀ ವೆಂಕಟಪ್ಪನವರು ಕೊನೆಯಲ್ಲಿ ಭಾಷಣ ಮಾಡಿದರು. ಕೋಮುವಾರು ಭಾವನೆಯು ಇರುವವರೆಗೆ ದೇಶದ ಏಳಿಗೆಯು ಸಾಧ್ಯವಿಲ್ಲವೆಂದು ಅವರು ಅಭಿಪ್ರಾಯ ಪಟ್ಟರು. ಸತ್ಯಾಗ್ರಹವು ನಡೆಯುವಂತಹ ಸ್ಥಿತಿಯು ಬಂದರೆ ಅದು ಪ್ರಜಾಪ್ರಭುತ್ವ ರಾಜ್ಯದ ಲಕ್ಷಣವಲ್ಲವೆಂದೂ ತಿಳಿಸಿ, ಸಕಲರೂ ಗಾಂಧಿಜಿಯವರ ಆದರ್ಶವನ್ನು ಪಾಲಿಸಬೇಕೆಂದರು. ವಂದನಾರ್ಪಣೆ ಮತ್ತು ಲಘು ಉಪಹಾರಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ರಘುರಾಮ್ ಬ್ರದರ್ಸ್ ಅಂಡ್ ಕಂಪೆನಿ

[illegible]

ಸಯ್ಯಾಜಿರಾವ್ ರಸ್ತೆ, ಮೈಸೂರು.

ನಥೂಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

0 ಅಲ್ಬರ್ಟ್ ಶ್ರೀನಿವಾಸಾಚಾರ್ಯರ ರಸ್ತೆ,

ಬೆಂಗಳೂರು

ದೇಶಾದ್ಯಂತವೂ ವನ ಮಹೋತ್ಸವ ಸಮಾರಂಭ

ಕೇಂದ್ರಮಂತ್ರಿ ಮುನ್ಷಿಯವರ ಯೋಜನೆಯಂತೆ ನೊನ್ನೆ ದೇಶಾದ್ಯಂತವೂ ವನ ಮಹೋತ್ಸವದ ಸಮಾರಂಭಗಳು ನಡೆದವು. ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರು ಈ ಮಹೋತ್ಸವವನ್ನು ಪ್ರಾರಂಭಿಸುವ ಸಲುವಾಗಿ ರಾಜಘಾಟಿಗೆ ತೆರಳಿ ಗಾಂಧಿಜಿಯವರ ಸಮಾಧಿ ಬಳಿ ಕುಳಿತು ಸಸಿಯನ್ನು ನೆಟ್ಟರು. ಕೆಲವು ಗಜಗಳ ದೂರದಲ್ಲಿ ಪ್ರಧಾನಿ ನೆಹರೂರವರು ಮತ್ತೊಂದು ಮಾವಿನ ಸಸಿಯನ್ನು ನೆಟ್ಟರು. ನಂತರ ಅಲ್ಲಿನ ವನದಲ್ಲಿ ಮಾವಿನ ಸಸಿಯು ರಾಷ್ಟ್ರಾಧ್ಯಕ್ಷರಿಂದ ನೆಡಲ್ಪಟ್ಟಿತು. ಒಟ್ಟು ೬ ಸಾವಿರ ಮರಗಳನ್ನು ಅಲ್ಲಿ ನೆಡಲಾಗುವುದು. ಇದರಂತೆಯೇ ನಾನಾ ಸಂಸ್ಥಾನಗಳ ಗವರ್ನರುಗಳೂ, ರಾಜಪ್ರಮುಖರೂ, ಮುಖಂಡರೂ ಈ ಕಾರ್ಯವನ್ನು ನೆರವೇರಿಸಿದರು.

ಭಾರತದಿಂದ ಸಕ್ಕರೆಯ ರಫ್ತು ಕೂಡದು

ಭಾರತದಿಂದ ಹೊರಕ್ಕೆ ಸಕ್ಕರೆಯನ್ನು ಕಳುಹಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈ ಕಾಯಿದೆ ಇದೇ ಜುಲೈ ೧ರಿಂದ [illegible]

ಮೇವಿನ ಅಭಾವದಿಂದ ದನಗಳ ಕಾಡಿಗೆ

ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ದನಗಳ ಮೇವಿನ ಅಭಾವವು ಮಿತಿ ಮೀರಿರುತ್ತದೆ. ಎಲ್ಲಾ ಕಡೆಯೂ ಪೈರು ಪಚ್ಚೆಗಳು ಒಣಗಿ ಹೋಗಿರುತ್ತವೆ. ಅನೇಕ ಮೈಲಿಗಳ ದೂರದಿಂದ ಗಾಡಿಗಳಲ್ಲಿ ಹುಲ್ಲನ್ನು ತಂದು ದನಗಳಿಗೆ ಹಾಕಬೇಕಾಗಿದೆ. ಸಾವಿರಾರು ದನಗಳನ್ನು ಮೇವಿಗಾಗಿ ಬಿಳಿಗಿರಿ ರಂಗನ ಬೆಟ್ಟ ಮತ್ತು ಇತರ ಕಾಡುಗಳಿಗೆ ಕಳುಹಿಸಲಾಗುತ್ತಿದೆ. ಈ ಪ್ರದೇಶಗಳಲ್ಲಿ ಕ್ಷಾಮದ ಪರಿಸ್ಥಿತಿಯು ತಲೆದೋರಿದೆ. ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಚಾಮರಾಜನಗರ ಮತ್ತು ಗುಂಡ್ಲುಪೇಟೆ ಪ್ರದೇಶಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸುವರೆಂದು ತಿಳಿದುಬಂದಿದೆ. ಅರಣ್ಯ ಪ್ರದೇಶಗಳಲ್ಲಿ ದನಕರುಗಳು ಉಚಿತವಾಗಿ ಮೇಯಲು ಸರ್ಕಾರದವರು ಅವಕಾಶ ಕಲ್ಪಿಸಿಕೊಡಲಿರುವರೆಂದು ಗೊತ್ತಾಗಿದೆ.

ಬೊಂಬಾಯಿನಲ್ಲಿ ಪೆಟ್ರೋಲ್ ಬೆಲೆ ಇಳಿಯಿತು

ಬೊಂಬಾಯಿ, ಮದರಾಸು ಮೊದಲಾದ ತೀರ ಪ್ರದೇಶಗಳು ಮತ್ತು ಅವುಗಳ ಸಮೀಪದ ಸ್ಥಳಗಳಲ್ಲಿ ನೊನ್ನೆಯಿಂದ ಪೆಟ್ರೋಲಿನ ಪಡಿತರವು ರದ್ದಾಗಿದೆ. ಬೊಂಬಾಯಿಯಲ್ಲಿ ಅದರ ಬೆಲೆಯು ಆರು ಕಾಸಿನಷ್ಟು ಕಡಿಮೆಯಾಗಿದೆಯೆಂದೂ ಮತ್ತು ಪಡಿತರವನ್ನು ತೆಗೆದುದರಿಂದ ಯಾವ ಕಠಿಣ ಪರಿಸ್ಥಿತಿಯು ಸಂಭವಿಸಿಲ್ಲವೆಂದೂ ವರದಿಯಾಗಿದೆ.

ಮೊಕಾರ್ಥರರಿಗೆ ಚಿಯಾಂಗರ ಸಹಾಯ

ದಕ್ಷಿಣ ಕೊರಿಯಾದ ವಿಶ್ವಸಂಸ್ಥೆಯ ಸೈನ್ಯಗಳ ಸಹಾಯಕ್ಕಾಗಿ ತಮ್ಮ ಸೈನ್ಯವನ್ನು ಕಳುಹುವುದಾಗಿ ಫಾರ್ಮೋಸಾ ಚಿಯಾಂಗ್ ಕೈಷೇಕರು ಜ|| ಮೊಕಾರ್ಥರರಿಗೆ ಸೂಚಿಸಿದ್ದಾರೆ.

ತಗಡೂರು ಬಳಿ ಹಗಲು ಕಳ್ಳತನ

ತಗಡೂರು ಮತ್ತು ಸುತ್ತಮುತ್ತಲ ಹಳ್ಳಿಗಳ ದಾರಿಯಲ್ಲಿ ಇತ್ತೀಚೆಗೆ ಹಗಲಿನಲ್ಲೇ ಕಳ್ಳತನ, ದರೋಡೆ ಮುಂತಾದವು ನಡೆಯುತ್ತಿವೆ. ದಾರಿಯಲ್ಲಿ ಹೋಗುವ ಹೆಂಗಸರ ಒಡವೆಗಳನ್ನೂ, [illegible] ದವಸ ಧಾನ್ಯಗಳನ್ನೂ [illegible] ಹೋಗುತ್ತಿರುವುದಾಗಿಯೂ ಈ ಒಗ್ಗೆ ಜನರು ಬೆದರಿರುವರೆಂದೂ, ಸರ್ಕಾರವು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ತಗಡೂರಿನ ಮಹನೀಯರೊಬ್ಬರು ಪತ್ರ ಬರೆದು ತಿಳಿಸಿದ್ದಾರೆ.

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, ಉಬ್ಬಸ, ಪರಿಣಾಮಕಾರಿ ಮತ್ತು ಗಲಾಯಕಟ್ಟೆ (TONSIL) ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-0-0

ಆರ್. ಎಸ್. ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು.

ಅಮೆರಿಕಾದಿಂದ ರಕ್ಷಕರ ನಿರ್ಗಮನ

ಕಳೆದ ಕೆಲವು ದಿವಸಗಳಿಂದಲೂ ಅಮೆರಿಕನ್ ಅಧಿಕಾರಿಗಳು ಅಮೆರಿಕಾದಿಂದ ಸ್ವದೇಶಕ್ಕೆ ಹಿಂತಿರುಗುತ್ತಿದ್ದಾರೆಂದು ವರದಿಯಾಗಿದೆ. ರಷ್ಯ ರಾಯಭಾರಿಗಳು, ಮತ್ತು ವಿಶ್ವ ಸಂಸ್ಥೆಯ ಪ್ರತಿನಿಧಿಗಳ ಪತ್ನಿ ಮಕ್ಕಳು ರಾಯಭಾರಿಗಳು ಈಗಾಗಲೇ ಹಿಂತಿರುಗಿದ್ದಾರೆ. ವಿಶ್ವಸಂಸ್ಥೆಯ ಪ್ರತಿನಿಧಿಗಳ ನಾಯಕರಾದ ಜೋಸೆಫ್ ಮಲ್ಲಿಕ್‌ರವರೂ ಮತ್ತು ವಿಶ್ವಸಂಸ್ಥೆಯ ಉಪಕಾರ್ಯದರ್ಶಿಗಳಾದ ಜಂಟಿಕೋರರವರೂ ಸಿದ್ಧರಲ್ಲಿಯೇ ಸ್ವದೇಶಕ್ಕೆ ತೆರಳುವರೆಂದು ಗೊತ್ತಾಗಿದೆ.

ದಕ್ಷಿಣ ಕೊರಿಯ ಸೈನ್ಯಗಳಿಗೆ ವಿಶ್ವ ಸಂಸ್ಥೆಯ ಧ್ವಜ

ಈಗ ದಕ್ಷಿಣ ಕೊರಿಯದ ಭೂ, ಜಲ, ವಾಯು ಸೈನ್ಯಗಳು ಶೀಘ್ರದಲ್ಲಿಯೇ ವಿಶ್ವ ಸಂಸ್ಥೆಯ ಧ್ವಜವನ್ನು ಹಾರಿಸಬಹುದೆಂದು ಗೊತ್ತಾಗಿದೆ. ಹಾಗೆಯೇ ದಕ್ಷಿಣ ಕೊರಿಯದ ಸಹಾಯಕ್ಕೆ ಬರುವ ಸೈನ್ಯಗಳೆಲ್ಲವೂ ಈ ಧ್ವಜವನ್ನೇ ಹಾರಿಸುವುವು. ಈ ಧ್ವಜದಲ್ಲಿ ನೀಲಿ ಬಣ್ಣದ ಹಚ್ಚಾಳದ ಮಧ್ಯೆ ಭೂಪಟ ಮತ್ತು ಶಾಂತಿಯ ಚಿಹ್ನೆಯಾದ [illegible] ಹಿಪ್ಪೆ ಎಲೆಗಳ [illegible] ಗಳವೆ.

ವಿದ್ಯಾರ್ಥಿ ಗೋಷ್ಠಿಗಾಗಿ ಸ್ವಯಂ ಸೇವಕರು

ಕೃಷ್ಣರಾಜ ಸಾಗರದ ಬೃಂದಾವನದಲ್ಲಿ ಇದೇ ೯ ನೇ ತಾರೀಖಿನಿಂದ ಬರುವ ೩೦ ಗಳು ೩ ದಿನಗಳೂ ಭಾರತ ಮತ್ತು ಅಮೆರಿಕಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಡೆಯಲಿರುವ ನಾನಾ ರಾಜ್ಯಗಳ ವಿದ್ಯಾರ್ಥಿ ಗೋಷ್ಠಿಯ ಸಹಾಯಕ್ಕಾಗಿ ಸ್ವಯಂ ಸೇವಕ ಮತ್ತು ಸೇವಿಕೆಯರ ಅಗತ್ಯವಿರುವುದರಿಂದ, ಸೇರಲಿಚ್ಛಿಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಹೆಸರುಗಳನ್ನು 'ಅರುಣ' ಕಛೇರಿಯಲ್ಲಿ ಕೊಡಬೇಕೆಂದು ಕೋರಲಾಗಿದೆ. ಕಾಲೇಜು ಹೈಸ್ಕೂಲ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಕೊಡಬಹುದೆಂದು ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರು ತಿಳಿಸಿರುತ್ತಾರೆ.

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲು ನೋವು ಮೊದಲಾದ ಎಲ್ಲ ಹಲ್ಲಿನ ವ್ಯಾಧಿಗಳನ್ನು ಖಾತರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ

ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು

ರಮಣಿ ಟ್ರೇಡಿಂಗ್ ಕಂಪೆನಿ,

ಗಾರ್ಡನ್ /ಸಿ ಕೃಷ್ಣಮೂರ್ತಿಪುರಂ,

ಮೈಸೂರು

ನಮ್ಮ ಪ್ರತಿನಿಧಿಗಳು –

ಎಚ್. ವಿ. ಕೆ. ಸ್ವಾಮಿ,

೨೨೭ ದಿವಾನ್ಸ್ ರೋಡ್, ಮೈಸೂರು

ಆರ್. ಜಿ. ಬ್ರಾಂಡ್ ತುಪ್ಪ

ಪ್ರಕಟಣೆ

ಮೈಸೂರಿನಲ್ಲಿರುವ ಪ್ರಸಿದ್ಧ ಆರ್. ಜಿ. ಬ್ರಾಂಡ್ ತುಪ್ಪದ ಮಾಲೀಕರಾದ ಶ್ರೀ ಎಸ್. ಎಂ. ಗಣಪತಿಯಪ್ಪ ಚೆಟ್ಟಿಯಾರ್ ಅಂಡ್ ಸನ್ಸ್‌ರವರು ಸಾರ್ವಜನಿಕರಲ್ಲಿ ವಿನಯದಿಂದ ಮಾಡಿಕೊಂಡ ಮನವಿ

ಮೈಸೂರಿನ ಸಾರ್ವಜನಿಕರು ನಮ್ಮ ತುಪ್ಪವನ್ನು ಉಪಯೋಗಿಸುತ್ತಾ ನಮಗೆ ಉದಾರವಾಗಿ ನೀಡುತ್ತಿರುವ ಪ್ರೋತ್ಸಾಹಕ್ಕೆ ನಾವು ಋಣಿಗಳಾಗಿರುತ್ತೇವೆ. ಮುಂದಿನಂತೆ ನಾವು ಸಮಸ್ತ ಜನರ ಸೇವೆ ಸಲ್ಲಿಸ ಬಯಸುತ್ತೇವೆ. ನಮಗೆ ಅತಿ ಪ್ರಿಯವಾದ, ತಮ್ಮ ಮೆಚ್ಚಿಗೆ ಪಡೆದ, ನಮ್ಮ ತುಪ್ಪವನ್ನು ಒಂದೇ ಉತ್ತಮ ರೀತಿಯಲ್ಲಿ ಇಡಲು ತಮ್ಮಗಳ ಸಹಕಾರ ಅತ್ಯಗತ್ಯವಾಗಿರುತ್ತದೆ. ತಾವು ದಯಮಾಡಿ ತುಪ್ಪವನ್ನು ಕೊಳ್ಳುವಾಗ ನಮ್ಮ ರಿಜಿಸ್ಟರ್ ನಂಬರ್ 440 ಮತ್ತು ನಮ್ಮ ಆರ್. ಜಿ. ಬ್ರಾಂಡ್ ಲೇಬಲ್‌ಗಳಿರುವ ಟಿನ್‌ಗಳಿಂದ ಮಾತ್ರ ಪಡೆಯಬೇಕಾಗಿ ಕೋರುತ್ತೇವೆ

Edited, printed and published by A R Nagarajan, at Sadhvi Press, D Subbiah Road, Mysore

ಅಕ್ಟೋಬರ್ ೨೦ಕ್ಕೆ ಮೈಸೂರಿಗೆ ನೆಹರೂ

[illegible]

[illegible]

[illegible]

[illegible]

ಈಜಿಪ್ಟ್ ಸೈನ್ಯದ ಮೇಲೆ ಯಹೂದ್ಯರ ಧಾಳಿ

ಈಜಿಪ್ಟಿನ ಯುದ್ಧ ಕಾಟಸ್ಥ್ಯ ಸಾರಿನೊಳಗೆ ಯಹೂದ್ಯರ ಸೈನ್ಯಗಳು ನುಗ್ಗಿ ಧಾಳಿ ಮಾಡಿದುವೆಂದೂ, ಆ ಸೈನ್ಯಗಳನ್ನು ಹಿಂದಕ್ಕೆ ಅಟ್ಟಲಾಯಿತೆಂದೂ ಈಜಿಪ್ಟಿನ ಮುಖ್ಯ ಮಂತ್ರಿಯು ಹೇಳಿದ್ದಾರೆ ಯಹೂದ್ಯರ ವಿಮಾನವು ಅವರ ಸೈನ್ಯಕ್ಕೆ ಕಾವಲಾಗಿತ್ತೆಂದು ಹೇಳಲಾಗಿದೆ

ಸಾವರ್ಕರ್ ಸಂಸ್ಕೃತಿಯ ಶಾಲೆ

ಸಾವರ್ಕರರ ಹೆಸರಿನಲ್ಲಿ ಸಂಸ್ಕೃತಿಯ ಶಾಲೆಯೊಂದನ್ನು ಹೂಗ್ಲಿಯ ಹಿಂದೂ ವಿದ್ಯಾರ್ಥಿ ಫೆಡರೇಷನ್ನಿನವರು ಸ್ಥಾಪಿಸಿದ್ದಾರೆ ಶಾಲೆಯ ಆರಂಭೋತ್ಸವವನ್ನು ನೆರವೇರಿಸಿದ ಬಂಗಾಳ ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ ಮನುಜ ಚಂದ್ರ ಸರ್ವಾಧಿಕಾರಿಯವರು ಭಾಷಣ ಮಾಡುತ್ತಾ, ಸಾವರ್ಕರರತತ್ವವನ್ನು ವಿವರಿಸಲು ಒಂದೆರಡು ಗಂಟೆಗಳು ಸಾಲದೆಂದೂ, ಅವರೇ ಶಿವಾಜಿಯಂತೆ ದೇಶದಲ್ಲಿ ಸ್ವಾತಂತ್ರ್ಯದ ಹೋರಾಟವನ್ನು ಆರಂಭಿಸಿದರೆಂದೂ ಹೇಳಿದರು

ಚುನಾವಣೆಯಲ್ಲಿ ಮಂತ್ರಿಯ ಸೋಲು

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಯ ಚುನಾವಣೆಗೆ ಕಲ್ಲಿಕೋಟೆ ತಾಲ್ಲೂಕಿನಿಂದ ನಿಂತಿದ್ದ ಮದ್ರಾಸಿನ ಮಂತ್ರಿ ಶ್ರೀ ಮಾಧವ ಮೆನನ್‌ರವರು ಪರಾಜಿತರಾದರು ಅವರಿಗೆ ೫೧ ಓಟುಗಳು ಬಂದು ಅವರ ಪ್ರತಿ ಸ್ಪರ್ಧಿಯು ೬೩ ಓಟುಗಳನ್ನು ಗಳಿಸಿದರು

ಗ್ರಾಮಸ್ಥರಿಂದಲೇ ನಿರ್ಮಿತವಾದ ರಸ್ತೆಯ ಪ್ರಾರಂಭ

ಮೈಸೂರು–ಬನ್ನೂರು ರಸ್ತೆ ಮೂಲಕ ಕ್ಯಾತನ ಹಳ್ಳಿ, ಸುಗ್ಗನ ಹಳ್ಳಿ, ಕೆಂಪಯ್ಯನ ಹುಂಡಿ ಮುಂತಾದ ಗ್ರಾಮಗಳಿಗೆ ಗ್ರಾಮಸ್ಥರಿಂದಲೇ ನಿರ್ಮಿತವಾಗಿರುವ ರಸ್ತೆಯ ಪ್ರಾರಂಭೋತ್ಸವವನ್ನು ನೆನ್ನೆ ದಿವಸ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರು ನೆರವೇರಿಸಿದರು ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು ಇದೇ ಮಾರ್ಗದಲ್ಲಿ ೮೦೦ ಸಾಲು ಮರಗಳನ್ನು ತಾಲ್ಲೂಕಿನ ಗ್ರಾಮಾಭಿವೃದ್ಧಿ ಸಮಿತಿಯವರು ನೆಡಲು ಏರ್ಪಾಡು ಮಾಡಿದ್ದಾರೆ

ಉತ್ತರ ಕೊರಿಯದಲ್ಲಿ ಅತ್ಯುಚ್ಚ ಸೈನಿಕ ಪ್ರಶಸ್ತಿ

"ಕೊರಿಯಾ ಪ್ರಜಾ ಪ್ರಭುತ್ವದ ವೀರ" ನೆಂಬ ಹೊಸ ಪ್ರಶಸ್ತಿಯನ್ನು ಉತ್ತರ ಕೊರಿಯದ ಸರ್ಕಾರದವರು ಏರ್ಪಡಿಸುವುದಾಗಿ ಹೇಳಲಾಗಿದೆ ಇದು ಅತ್ಯಂತ ಭಾರಿ ಬೆಲೆಯದಾಗುವುದು ಬಹು ಸಾಹಸಕಾರಿ ಕಾರ್ಯಗಳನ್ನು ನಡೆಸಿದವರಿಗೆ ಮಾತ್ರ ಇದನ್ನು ಕೊಡಲಾಗುವುದು

ಪೊಲೀಸ್ ವೇಷದ ಢಕಾಯಿತರು

ಪೊಲೀಸು ವೇಷ ಧರಿಸಿದ ೧೫ಜನ ಡಕಾಯಿತರು ಪಂಜಾಬಿನ ಒಂದು ಹಳ್ಳಿಗೆ ನುಗ್ಗಿ ಅಲ್ಲಿದ್ದ ಎಲ್ಲ ಬಂದೂಕ ಮತ್ತು ಹೋಂ ಗಾರ್ಡುಗಳ ರೈಫಲ್ಲುಗಳನ್ನೂ, ತೋಟಾಗಳನ್ನೂ ಕಿತ್ತುಕೊಂಡು ಪೊಲೀಸು ಠಾಣೆಗೆ ತೆಗೆದುಕೊಂಡು ಹೋಗುವುದಾಗಿ ಹೇಳಿ ಹೊರಟುಹೋದರು

ಬಡತನದ ಬೇಗೆತಾಳಲಾರದೆ ಹೆಡ್ಮಾಸ್ಟರ ಆತ್ಮಹತ್ಯೆ

ಮಧ್ಯ ಪ್ರದೇಶದ ಅಕೋಲಾ ಜಿಲ್ಲೆಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ತಮಗೆ ಬರುವ ೪೪ ರೂ ಸಂಬಳದಲ್ಲಿ ದೊಡ್ಡ ಸಂಸಾರವನ್ನು ನಿರ್ವಹಿಸಲು ಸಾಧ್ಯವಿಲ್ಲವೆಂದು ಕಾದ ಕಬ್ಬಿಣದ ರೇಲೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ

ಕಾಂ॥ ಪ್ರತಿನಿಧಿಗಳ ಚುನಾವಣೆ

ಗುಂಡ್ಲುಪೇಟೆ ತಾಲ್ಲೂಕಿನಿಂದ ಕಾಂಗ್ರೆಸ್ ಪ್ರತಿನಿಧಿಗಳ ಒಂದು ಸ್ಥಾನಕ್ಕೆ ಚುನಾವಣೆಗೆ ನಿಂತಿದ್ದ ಶ್ರೀ ಹೆಜ್ಜಿಗೆ ಲಿಂಗಣ್ಣನವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಶ್ರೀ ಎಸ್ ನಾರಾಯಣರಾಯರು ಅವಿರೋಧವಾಗಿ ಆರಿಸಿ ಬಂದಿದ್ದಾರೆ

ಉತ್ತರ ಕೊರಿಯದಲ್ಲಿ ಸೈನ್ಯ ಜಮಾವಣೆ

೧೯೫೧ರಿಂದ ೩೮ರ ಒಳಗೆ ಆಕ್ರಮಿಸಿದ ಎಲ್ಲ ಕೊರಿಯನ್ನರೂ ಸೈನ್ಯಕ್ಕೆ ಸೇರಬೇಕೆಂದು ಉತ್ತರ ಕೊರಿಯದ ಸರ್ಕಾರವು ಆಜ್ಞೆ ಮಾಡಿರುತ್ತದೆ

ಪೂರ್ವ ಜರ್ಮನಿ ಅಧ್ಯಕ್ಷರು ಮಾಸ್ಕೋವಿನಲ್ಲಿ

ಪೂರ್ವ ಜರ್ಮನಿಯ ಪ್ರಜಾ ಪ್ರಭುತ್ವದ ಅಧ್ಯಕ್ಷರಾದ ವಿಲ್ಹೆಮ್ ಪೀಕ್‌ರವರು ಮಾಸ್ಕೊ ಅಧಿಕಾರಿಗಳನ್ನು ಭೇಟಿ ಮಾಡಲು ಅಲ್ಲಿಗೆ ಹೋಗಿದ್ದಾರೆ

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿ ಪ್ರಭುಗಳಿಂದ ಪ್ರಾರಂಭ

ಈ ತಿಂಗಳು ೧೦ನೇ ತಾರೀಖು ಕೃಷ್ಣರಾಜಸಾಗರದಲ್ಲಿ ಸೇರುವ ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯ ಪ್ರಾರಂಭೋತ್ಸವವನ್ನು ಶ್ರೀಮನ್ ಮಹಾರಾಜರು ರಾಜಧಾನಿಯಲ್ಲಿ ನೆರವೇರಿಸುವರು

ಭಾರತ ವಾಚನ

ರಾಜಧಾನಿಯ ಬಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟ ರಮಣ ಸ್ವಾಮಿ ದೇವಸ್ಥಾನದಲ್ಲಿ ನಾಳಿದ್ದಿನಿಂದ ಪ್ರತಿ ದಿನ ಮಧ್ಯಾಹ್ನ ೩ ಘಂಟೆಯಿಂದ ೪–೩೦ ಘಂಟೆ ವರೆಗೆ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನ ಸಹಿತ ಭಾರತ ವಾಚನವನ್ನು ಏರ್ಪಡಿಸಲಾಗಿದೆ

ಮೈಸೂರು ವಿದ್ಯಾರ್ಥಿಯ ಪ್ರತಿಭೆ

ಈಚೆಗೆ ಇಂಗ್ಲೆಂಡಿನಲ್ಲಿ ನಡೆದ ಲಂಡನ್ ವಿಶ್ವವಿದ್ಯಾಲಯದ ಎಂ. ಎಸ್‌ಸಿ ಪರೀಕ್ಷೆಯಲ್ಲಿ ಮೈಸೂರಿನ [illegible] ಶ್ರೀ ಎಲ್. ಆರ್. ಶ್ಯಾಮರಾಯರ ಮಗ ಶ್ರೀ ಎಲ್ ಎಸ್. ರಂಗನಾಥ ರಾವ್‌ರವರು ಮೊದಲನೆಯ ರ್‍ಯಾಂಕ್ ಪಡೆದು ಉತ್ತೀರ್ಣರಾಗಿದ್ದಾರೆ. ಇವರು ಪ್ರಾಚೀನ ಪ್ರಾಣಿಗಳ ಶಾಸ್ತ್ರದಲ್ಲಿ ಪರೀಕ್ಷೆಗೆ ಕುಳಿತಿದ್ದರು

ಬಂಗಲೆ ಬಿಕರಿಗಿದೆ

ಕಾಂತರಾಜ ಅರಸ್ ರೋಡಿನಲ್ಲಿರುವ 1205ನೇ ನಂಬರ್ ಮನೆ ಇದರಲ್ಲಿ 50 ರೂ ಗಳು ಬಾಡಿಗೆ ಬರುವ ಎರಡು ಮನೆಗಳಿವೆ ಮುಂದೆ ವಿಶಾಲವಾದ ಕಾಂಪೌಂಡು, ನಲ್ಲಿ, ದೀಪ, ಭಾವಿ, ಎಲ್ಲವೂ ಇವೆ ಅಲ್ಲೇ ವಿಚಾರಿಸಿ

ರಘುಲಾಲ್ & ಕೋ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

ರಾಜಕಮಲ್,
ಮೈಸೂರು
30-6-50ರಿಂದ ಪ್ರತಿ ದಿನ3 ಆಟಗಳು
ನೀಲ ಸಮುದ್ರ
ಮೊದಲನೇ ವರ್ಣರಂಜಿತ ತಮಿಳು ಚಿತ್ರ

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು
ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6
ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು
ರಮಣಿ ಟ್ರೇಡಿಂಗ್ ಕಂಪೆನಿ,
೧೨೫೪/೩, ಕೃಷ್ಣಮೂರ್ತಿಪುರಂ,
ಮೈಸೂರು
ನಮ್ಮ ಪ್ರತಿನಿಧಿಗಳು –
ಎಸ್ ವಿ. ಕೆ. ಸ್ವಾಮಿ,
೩೭೭ ದಿವಾನ್ಸ್ ರೋಡ್, ಮೈಸೂರು

SRI GAYATHRI
TALKIES
Daily 4 Shows
LAST DAY
THREE MUSKETEERS
From 5-7-50 for 2 days
SOUTHERN YANKEE
With Red Skelton

JUST NOW PUBLISHED
Books by **D NARASIMHAN** M Sc, B Com
OUTLINE MAP DRAWING BOOK
(New Edition in the form of an Atlas Book)
Approved for use in Schools by the Text Book Committee

MIDDLE SCHOOL GEOGRAPHY - Part I
Recommended by the D P I for use in Middle Schools

A Guide to "OUR INDIA" (in Kannada)
An indispensable book for all S S L C Students

For Copies apply to **N. S. VASAN & Co.,**
Avenue Road, BANGALORE 2

ನೋಟೀಸು

ಕೊಳ್ಳೇಗಾಲಂ ತಾಲ್ಲೂಕು [illegible] ಗ್ರಾಮದಲ್ಲಿರುವ [illegible] ಚನ್ನ [illegible] ಮಗ ಸಿದ್ದನಾಯಕನು ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ –

[illegible] ಶಿವಭಕ್ತರು [illegible] ಬುದ್ಧಿ [illegible] ಗೆ ಎರಡು [illegible] ಎರಡೂ ಬಾಳದೇ ಹೋಗಿರುತ್ತದೆ [illegible] ನನ್ನ ಮಗ ಸಿದ್ದಯ್ಯ [illegible] ದತ್ತು ಸ್ವೀಕಾರ ಮಾಡಿಕೊಂಡಿರುತ್ತಾನೆ ಈಗಲೂ ಸ್ವಲ್ಪ ದಿವಸಗಳಿಂದ ನಮ್ಮ ಗ್ರಾಮ ಮಣೇಗಾರರೇ ಮೊದಲಾದವರು ನನ್ನ ತಮ್ಮನಿಗೆ ದುರೋಧನೆ ಹೇಳಿ ಅವನಿಂದ ಏನಾದರೂ ದಸ್ತಾವೇಜು ಹುಟ್ಟಿಸಿ ನಮ್ಮ ಸ್ವತ್ತು ಕಬಳ್ ಮಾಡಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಅದರ ಮೇಲ್ಕಂಡ ಭಾಗಾಂಶದ ಮತ್ತು [illegible] ಸ್ವೀಕಾರವಾಗಿರುವ ವೈವರಿನ [illegible] ವೂ ಉಂಟಾಗುತ್ತದೆ [illegible] ಗ್ರಾಮದಲ್ಲಿ ನಮ್ಮ ತಂದೆ ಕುಟುಂಬಕ್ಕೆ [illegible] ಪಿತ್ರಾರ್ಜಿತವಾದ ಸುಮಾರು (೮೦೦೦ ರೂ) ಎಂಟು ಸಾವಿರ ರೂಪಾಯಿ ಬೆಲೆ ಬಾಳುವ ನಂಜೆ ಪುಂಜೆ ಭೂಮಿಗಳೂ, ಮನೆಗಳೂ, [illegible] ಮತ್ತು ಜಂಗಮ ಸ್ವತ್ತುಗಳೂ [illegible] ಮೇಲ್ಕಂಡ ನನ್ನ ತಮ್ಮ ಸಿಂಚಯ್ಯನಿಂದ ಯಾರೇ ಆಗಲೀ ದಸ್ತಾವೇಜು ಮಾಡಿಸಿಕೊಂಡರಾಗಲೀ, ಸಾಲ ಕೊಟ್ಟರಾಗಲೀ ಅದು ನಮ್ಮನ್ನು ಕಟ್ಟು ಪಡಿಸತಕ್ಕದ್ದಲ್ಲವೆಂದೂ, ಅದರಿಂದ ನಾವು ಕೋರ್ಟಿಗೆ ಹೋಗುವ ಸಂದರ್ಭ ಏರ್ಪಟ್ಟರೆ ಅದರಿಂದ ನಮಗೆ ಉಂಟಾಗುವ ಎಲ್ಲ ನಷ್ಟ [illegible] ಗಳಿಗೆಲ್ಲಾ ಹಾಗೆ ಮಾಡಿಸಿಕೊಂಡವರೇ ಜವಾಬ್ದಾರರೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

ಸಿ ಸ್ವಾ [illegible]

Edited, printed and published by A K Nagarajan, at Sadhvi Press, D Subbiah Road, Mysore.

ಸಂಪುಟ ೮] ಬುಧವಾರ [illegible] [ಸಂಚಿಕೆ [illegible]

ಫಾರ್ಮೋಸಾ ಧಾಳಿಗೆ ಚೀಣಾ ಕಮ್ಯೂನಿಸ್ಟರು

ಫಾರ್ಮೋಸಾ ಮೇಲೆ ದಾಳಿಗೆ ೧೫ ಲಕ್ಷ ಕಮ್ಯೂನಿಸ್ಟ್ ಸೈನ್ಯ

[illegible]

ಕೊರಿಯಾ ಯುದ್ಧ ನಿಲ್ಲದಿದ್ದರೆ ಅಣುಬಾಂಬಿನ ಪ್ರಯೋಗ?

[illegible]

[illegible]

ಕಾಂಗ್ರೆಸ್ ಅಧಿವೇಶನ, ಸೆಪ್ಟೆಂಬರಿನಲ್ಲಿ

[illegible]

ಕೊರಿಯಾಕ್ಕೆ ಭಾರತದ ಸೈನ್ಯ ಸಹಾಯವಿಲ್ಲ

[illegible]

ದೊಡ್ಡದಾದ ಅಂಚೆ ಕಾರ್ಡು

[illegible]

೩ ವರ್ಷದೊಳಗೆ ಮೂರನೇ ಮಹಾ ಯುದ್ಧ

[illegible]

[illegible]

ಸಂಸ್ಥಾನದ ಎಲ್ಲ ಬಸ್ಸುಗಳ ರಾಷ್ಟ್ರೀಕರಣವಾಗಲಿ

ಮೋಟಾರು ಕೆಲಸಗಾರರ ಸಭೆಯಲ್ಲಿ ನಿರ್ಣಯ

ಮೈಸೂರು ಜ

ಕಳೆದ ಶನಿವಾರ ನಡೆದ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯಲ್ಲಿ ಈ ರೀತಿ ನಿರ್ಣಯಗಳಾದುವು:-

ರಾಜಧಾನಿಯ ಸಿ. ಟಿ. ಸಿ. ಮತ್ತು ಚಾಮುಂಡಿ ಮೋಟಾರು ಸರ್ವೀಸ್ಸುಗಳಿಗೆ ಸೇರಿದ ಶ್ರೀಗಳಾದ ಎಂ. ಶ್ರೀಕಂಠಯ್ಯ, ಬಿ. ಸುಬ್ರಮಣ್ಯ ರಾವ್, ಕೆ. ಆರ್. ಗೋಪಾಲಯ್ಯ, ಬಿ. ವಿ. ಸುಬ್ಬರಾವ್, ಡಿ. ... ಮತ್ತು ರಾಜು ಎಂಬುವರನ್ನು ನಿಷ್ಕಾರಣವಾಗಿ ಕೆಲಸದಿಂದ ತೆಗೆದುಹಾಕಿರುವುದನ್ನು ಖಂಡಿಸಿ, ಅವರುಗಳನ್ನು ಪುನಃ ಸೇರಿಸಿಕೊಳ್ಳಬೇಕೆಂದು ತಗಾದೆ ಮಾಡಲಾಯಿತು. ಇದಲ್ಲದೆ ಸಂಸ್ಥಾನಾದ್ಯಂತವೂ ಈ ಕೂಡಲೇ ಬಸ್ಸುಗಳನ್ನು ರಾಷ್ಟ್ರೀಕರಿಸಬೇಕೆಂಬ ನಿರ್ಣಯವೂ, ರಾಜಧಾನಿಯ ಸಿ. ಟಿ. ಸರ್ವೀಸನ್ನು ನಿವಾಸಿಗಳ ಹಿತದೃಷ್ಟಿಯಿಂದ ಸರ್ಕಾರದವರಾಗಲಿ, ಪೌರಸಭೆಯವರಾಗಲಿ ಅಥವಾ ಕಾರ್ಪೊರೇಷನ್ ಸಂಸ್ಥೆಯವರಾಗಲಿ ತೆಗೆದುಕೊಳ್ಳಬೇಕೆಂಬ ನಿರ್ಣಯವೂ ಆದವು.

ಸ್ಟ್ಯಾನ್ಲಿ ಇಂಜಿನಿಯರಿಂಗ್ ಇನ್ಸ್ಟಿಟ್ಯೂಟಿಗೆ ಭೇಟಿ

ಸಂಸ್ಥಾನದ ಮಾಜಿ ವಿದ್ಯಾ ಸಚಿವರಾದ ಶ್ರೀ ಕೆ. ಮಹಮದ್ ಇಮಾಂರವರು ನೆನ್ನೆ ದಿನ ರಾಜಧಾನಿಯ ಸ್ಟ್ಯಾನ್ಲಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗಿಗೆ ಭೇಟಿಯಿತ್ತು, ಅಲ್ಲಿನ ಕಾರ್ಯಕಲಾಪಗಳ ಬಗ್ಗೆ ಮತ್ತು ಸಂಸ್ಥೆಯ ಪ್ರಗತಿ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು.

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀ ಚಿಕ್ಕಪೇಟೆ ರಸ್ತೆ, ಬೆಂಗಳೂರು.

VISIT ONCE

ಸಾಧ್ವಿ ಸ್ಟೋರ್ಸ್

ಅಗ್ರಹಾರ, ಮೈಸೂರು

ವಿದ್ಯಾರ್ಥಿಗಳಿಗೋಸ್ಕರ ಸ್ಪೆಷಲ್ ರೇಟ್

ಫ್ಯಾಕ್ಟರ್ ರೀಮ್ಸ್ ಗೆ 0-14-6

ಹಳೆಯ ದ್ವಿತ ಗಳ್ಳೆ 0-11-6

ಸ್ಟೂಡೆಂಟ್ಸ್ ನೋಟ್ ಬುಕ್

English paper with margin

100 ಹಾಳೆ	0- 6- 0
150 „	0- 9- 0
200 „	0- 12- 0
300 „	1- 0- 0
400 „	1- 5- 0
500 „	1- 9- 0
M. S. ಬುಕ್ (Flexible)	0- 10- 0

4-7-50 ರಿಂದ 4-8-50ರವರೆಗೆ ಮಾತ್ರ ಈ ಧಾರಣೆ ಅನ್ವಯಿಸುತ್ತದೆ.

ಭದ್ರಾವತಿ ಅಭಿವೃದ್ಧಿ ಬಗ್ಗೆ ಪೌರಸಭಾಧ್ಯಕ್ಷರ ಹೇಳಿಕೆ

ಸ್ವಂ. ವ.] ಭದ್ರಾವತಿ ಜ

ಇಲ್ಲಿನ ಪೌರಸಭಾಧ್ಯಕ್ಷರು ಮೊನ್ನೆ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಪಟ್ಟಣದಲ್ಲಿ ಏರ್ಪಡಿಸಲಾಗಿರುವ ಸೌಕರ್ಯಗಳ ಬಗ್ಗೆ ವಿವರಣೆಯನ್ನು ಇತ್ತರು. ಶ್ರಮಿಕರುಗಳ ಅಭಿವೃದ್ಧಿಯನ್ನು ಪಡೆಯಲು ಮೈಸೂರ್ ಐರನ್ ವರ್ಕ್ಸ್ ಗಳ ಸಹಾಯದಿಂದ ಕಂಪನಿಗಳನ್ನು ಮುಗಿಸಲಾಗಿದೆ. ಸ್ಲೇಗು ಮುಂತಾದ ಉತ್ಪನ್ನಗಳು ಪಾರದರ್ಶಕ ಸ್ವಯಂ ಗ್ರಾಹಿಂಗ್ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುನ್ಸಿಪಾಲಿಟಿ ಜಂಟಿ ವ್ಯವಸ್ಥೆ ಬಗ್ಗೆ ಆದ ಯೋಜನೆಯು ಕಾರ್ಯಗತವಾಗುತ್ತಲಿದೆ. ಕಬ್ಬಿಣದ ಕಾರ್ಖಾನೆಯವರ ಸಹಾಯದಿಂದ ೪೦ ಮನೆಗಳಿಗೆ ನಲ್ಲಿಗಳನ್ನು ಕೊಡಲಾಗಿದೆ. ಊರಿನ ಕೆಲವು ಮುಖ್ಯ ರಸ್ತೆಗಳಿಗೆ ಟಾರು ಹಾಕಿಸಲು ಸರ್ಕಾರದಿಂದ ೫ ಸಾವಿರದ ಗ್ರಾಂಟು ಪಡೆಯಲಾಗಿದೆ. ಹರಿಜನರಿಗಾಗಿ ೧೨ ಮನೆಗಳನ್ನು ಕಟ್ಟಿಸಿಕೊಟ್ಟಿರುವುದಲ್ಲದೆ ಸರ್ಕಾರದ ಗ್ರಾಂಟು ಪಡೆದು ಭಜನೆ ಮಂದಿರ ಮತ್ತು ೮ ಮನೆಗಳನ್ನು ಕಟ್ಟಿಸಲಾಗಿದೆ. ಕಾರ್ಮಿಕರಿಗೂ ಮಧ್ಯಮ ತರಗತಿಯವರಿಗೂ ೪೩೦ ಮನೆಗಳನ್ನು ಬಡಾವಣೆಯಲ್ಲಿ ಒದಗಿಸಲಾಗಿದೆ. ಇವಲ್ಲದೆ ವಾಚನಾಲಯ, ಪುಸ್ತಕ ಭಂಡಾರ, ಮುಂತಾದುವನ್ನು ತೆರೆಯಲಾಗಿದೆ-ಎಂದು ಅವರು ತಿಳಿಸಿದರು.

ಅಮೆರಿಕದ ನೆಲೆ ಮೇಲೆ ಉತ್ತರದವರ ವಿಮಾನ ಧಾಳಿ

ಉತ್ತರ ಕೊರಿಯದ ಸೈನ್ಯಗಳು ಸುವೋನ್ ನಗರದ ಕಡೆ ಮುಂದೋಡುತ್ತಾ ಸೋಲು ಭಾಗಗಳಲ್ಲಿ ಮುಂದುವರಿದಿವೆ. ಆ ನಗರವು ಇತ್ತೀಚೆ ದಕ್ಷಿಣದವರ ಕೈಯ್ಯಲ್ಲಿರುವುದಾಗಿ ಅಮೆರಿಕದ ಹೇಳಿಕೆ ತಿಳಿಸುತ್ತದೆ. ದಕ್ಷಿಣ ಕೊರಿಯದ ಯುದ್ಧರಂಗದಲ್ಲಿ ಅಮೆರಿಕನ್ನರು ಸ್ಥಾಪಿಸಿರುವ ನೆಲೆಯ ಮೇಲೆ ಉತ್ತರದವರ ವಿಮಾನಗಳು ಗುಂಡು ಹಾರಿಸಿ ಧಾಳಿ ಮಾಡಿದವು. ಆದರೆ ನಷ್ಟವು ಈ ಯುದ್ಧದಲ್ಲಿ ಅಮೆರಿಕದ ಸೈನಿಕರು ಪಾಲುಗೊಂಡಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ಜಪಾನಿನಲ್ಲಿ ವಿಮಾನ ಧಾಳಿ ಮುಂಜಾಗ್ರತೆ

ಜಪಾನಿನಲ್ಲಿ ವಿಮಾನ ಧಾಳಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸೂಚನೆ ಹೊರಡಿಸಲಾಗಿದೆ.

ಅಧಿಕಾರಿಗಳನ್ನು ಆಕರ್ಷಿಸಲು ಕಳ್ಳನೋಟು

ಅಹಮದ್ ನಗರದಿಂದ ಬೊಂಬಾಯಿಗೆ ಬಂದಿರುವ ಒಬ್ಬ ನಿರುದ್ಯೋಗಿ ಪದವೀಧರನು ನೆನ್ನೆ ದಿನ ಅಲ್ಲಿನ ವ್ಯಾಪಾರಿಯು ಶ್ರೀ ಶ್ರೀ ಎಂ. ಪಿ. ಪಾಟೀಲರ ಕಾರಿನ ಕಡೆ ಕಳ್ಳನೆಂದೂ, ಅದರಿಂದ ಕಾರಿನ ಗಾಜು ಒಡೆದು ಒಳಗಿದ್ದ ಶ್ರೀ ಪಾಟೀಲರ ಕಾರ್ಯದರ್ಶಿಗಳಿಗೆ ಪೆಟ್ಟು ತಗುಲಿತೆಂದೂ ವರದಿಯಾಗಿದೆ. ಒಡನೆಯೇ ಸಚಿವರು ಕಾರನ್ನು ನಿಲ್ಲಿಸಿ ದರ್ಜಿಯುವನನ್ನು ಹಿಡಿದು ಪೊಲೀಸರಿಗೆ ಕೊಟ್ಟರು. ಪೊಲೀಸರ ತನಿಖೆ ನಡೆದು, ಆತನು ಅಧಿಕಾರಿಗಳನ್ನು ಆಕರ್ಷಿಸಲು ಈ ಕೃತ್ಯಗಳಲ್ಲಿ ತೊಡಗುತ್ತಿದ್ದನೆಂದೂ, ಹಿಂದೆ ಹಲವು ವೇಳೆ ಆತನು ಓಡುತ್ತಿದ್ದ ಕಾರುಗಳಿಗೆ ಅಡ್ಡಲಾಗಿ ಮಲಗುತ್ತಿದ್ದನೆಂದೂ ತಿಳಿದುಬಂದಿದೆ.

ದೇವಾಲಯಗಳ ರಿಪೇರಿಗೆ ಪಶ್ಚಿಮ ಪಂಜಾಬಿನ ಆಜ್ಞೆ

ಪಶ್ಚಿಮ ಪಂಜಾಬ್ ಪ್ರಾಂತದಲ್ಲಿರುವ ಹಿಂದೂ ಮತ್ತು ಸಿಖ್ ದೇವಾಲಯಗಳನ್ನು ರಿಪೇರಿ ಮಾಡಲು ಅಂದಾಜನ್ನು ಸಿದ್ಧಗೊಳಿಸಬೇಕೆಂದು ಅಲ್ಲಿನ ಸರ್ಕಾರವು ಆಜ್ಞೆ ಮಾಡಿದೆ.

ಶ್ರೀಕಂಠೇಶ್ವರ ಸ್ವಾಮಿಯವರ ಕಲ್ಯಾಣ ಮಹೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಕಲ್ಯಾಣ ಮಹೋತ್ಸವವು ನಾಳೆ ರಾತ್ರಿ ಜರುಗುವುದು. ಇದರ ಅಂಗವಾಗಿ ಇಂದಿನಿಂದ ೧೨ನೇ ತಾರೀಖಿನ ವರೆಗೂ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ರೇಷನ್ ಕಾರ್ಡ್ ಸಿಕ್ಕಿದೆ

ರಾಜಧಾನಿಯ ರೇಷನಿಂಗ್ ಏರಿಯಾಗೆ ಸೇರಿದ ಒಂದು ರೇಷನ್ ಕಾರ್ಡ್ ಸಿಕ್ಕಿದೆ. ಅದರ ಮಾಲೀಕರು ತಕ್ಕ ರುಜುವಾತು ಕೊಟ್ಟು ಕಾರ್ಡನ್ನು "ಸಾಧ್ವಿ" ಪತ್ರಿಕೆ ಕಛೇರಿಯಲ್ಲಿ ಪಡೆಯಬಹುದು.

ಒಲಂಪಿಯಾ ದಲ್ಲಿ

6-7-50ರಿಂದ 3ನೇ ಅಠವಾರ

ಸಾದಿ ಕಿ ರಾತ್

ಮುಂದಿನ ಬದಲಾವಣೆ

• ಮುನಿಯ •

ಪಾತ್ರ:— ಸುರಯ್ಯಾ, ಅರ್ಜುನ್ ದಿವಾರ್, ಮತ್ತು ಯಾಕುಬ್

ಚೆಲುವಿಗ್ರಹರ್ಶನ : : 7-7-50 ರಿಂದ ಶಾರ್, ಶಿಲಾ ಚಿತ್ರ ಪತ್ರ ಚುನಾವನ

• ಗ ಜ ಲ್ •

ಮೈಸೂರಿನಲ್ಲಿ ಪ್ರಥಮ ಪ್ರದರ್ಶನ

ಪ್ರಭಾ * 7-7-50 ರಿಂದ

ಅಭೂತಪೂರ್ವ ಪ್ರಾರಂಭ



ಸಿಂಹನಾದದವರ ಅಪ್ಪಟ್ಟ ಹಿಂದಿ ಚಿತ್ರ

• ನಜಾರೆ •

ಪಾತ್ರ:-ಕಾಮಿನಿ, ಅಶೋಕ್ ಕುಮಾರ್, ಶೇಖರ್ ಮುಂತಾದವರು.

ಈ ಚಿತ್ರದ ದೊಡ್ಡವರು ಅದರ್ ಚಿತ್ರದಲ್ಲಿ ೫೦,೦೦೦ ರೂ. ಗಳಷ್ಟು ಹಣ ಖರ್ಚು ಮಾಡಲ್ಪಟ್ಟಿದೆ.

ಒಂದು ಸಿಗರೇಟಿನಿಂದ ೪೦ ಲಕ್ಷ ಪೌಂಡು ನಷ್ಟ

ಜಪಾನಿನ ತೀರ ನಗರವಾದ ಅಟಾಮಿ ಎಂಬಲ್ಲಿ ಒಬ್ಬನು ತನಗಾಪತಗಾಗಿ ಬೂಟನ್ನು ಕಟ್ಟಿ, ಹತ್ತಿದ ಸಿಗರೇಟಿನ ತುಂಡನ್ನು ಒಂದು ಎಣ್ಣೆಯ ಕೊಳಕ್ಕೆ ಎಸೆದುದರಿಂದ ಬೆಂಕಿ ಹತ್ತಿ ೪೦ ಲಕ್ಷ ಪೌಂಡುಗಳ ನಷ್ಟವುಂಟಾಯಿತು. ೬೦ ಸಾವಿರ ಜನರು ವಾಸಿಸುತ್ತಿದ್ದ ಹೋಟೇಲುಗಳು ಸುಟ್ಟು, ಅವರಿಗೆ ವಾಸಿಸಲು ಸ್ಥಳವಿಲ್ಲವಾಗಿದೆ.

ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕ ಭಂಡಾರ ಸೇವಾ ಕಾರ್ಯ

ಸಂಸ್ಥಾನದ ವಯಸ್ಕರ ಶಿಕ್ಷಣಾ ಸಮಿತಿಯವರು ಪುಸ್ತಕ ಭಂಡಾರದ ಸೇವೆಯ ಸಂಬಂಧವಾಗಿ ಹೊಸ ೮ ಪುಟಗಳ ಸುಂದರ ಕೈಪಿಡಿ ಗ್ರಂಥವನ್ನು ಪ್ರಕಟಿಸಿದ್ದಾರೆ. ಸಾರ್ವಜನಿಕ ಜೀವನದ ಬಗ್ಗೆ ವಿಷಯಗಳನ್ನು ತಿಳಿದು, ಜನರು ಅವುಗಳ ಉಪಯೋಗದಿಂದ ತಮ್ಮ ಉದ್ಯೋಗಗಳಲ್ಲಿ ಹೆಚ್ಚು ನಿಪುಣರಾಗಿ, ಬಿಡುವು ಕಾಲದಲ್ಲಿ ಉತ್ತಮ ರೀತಿಯ ಕಾಲಕ್ಷೇಪಗಳನ್ನು ಮಾಡಲು ಈ ರೀತಿಯ ಪುಟ್ಟ ಗ್ರಂಥಗಳಿಂದ ಸಹಾಯವಾಗುವುದೆಂದು ಬಗೆದು ಹೊಸ ಗ್ರಂಥ ರಚನೆಯನ್ನು ಮಾಡಿರುತ್ತಾರೆ. ಇದರಿಂದ ಅಕ್ಷರಾಭ್ಯಾಸವನ್ನು ಮಾಡಿದ ವಯಸ್ಕರಿಗೆ ತುಂಬಾ ಸಹಾಯವಾಗುವುದು.

ಬಾಲಕನಿಂದ ಅನೋಖಾ ಉಪನ್ಯಾಸ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ಮೊನ್ನೆ ರಾತ್ರಿ ಬಾಬಾರವರ ಪೂಜೆ ಮತ್ತು ಸಂಗೀತಗಳು ನಡೆದವು. ಶ್ರೀ ಸಿ. ಕೆ. ಪಾರ್ಥಸಾರಥಿ ಎಂಬ ಬಾಲಕ ಭಕ್ತರು ಬಾಬಾರವರ ವಿಷಯವಾಗಿ ಅನೋಖವಾದ ಉಪನ್ಯಾಸ ಮಾಡಿದರು.

ತಗಡೂರಿನ ದೇವರಿಗೆ ಆಭರಣ

ತಗಡೂರಿನ ಅಂಬನಾಥೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಹೆಗ್ಗಡ ಹಳ್ಳಿಯ ನಿವೃತ್ತ ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಕೊಂಗಾಲಪ್ಪನವರು ನಾಗಾಭರಣವನ್ನು ಮಾಡಿಸಿಕೊಟ್ಟು ಉತ್ಸವ ಸೇವೆಯನ್ನು ನಡೆಸಿದರು. ಪ್ರತಿ ವರ್ಷವೂ ಈ ಉತ್ಸವವನ್ನು ನಡೆಸಲು ಅವರು ಏರ್ಪಾಡು ಮಾಡಿರುತ್ತಾರೆ.

ಸಂತಾಪ ಸೂಚನೆ

ಸಮಾಜವಾದಿ ಪಕ್ಷದ ಮುಖಂಡರಾದ ಯೂಸುಫ್ ಮೆಹರಾಲಿಯವರ ನಿಧನಕ್ಕಾಗಿ ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ಫೆಡರೇಷನ್ ವಿದ್ಯಾರ್ಥಿಗಳು ನೆನ್ನೆ ಶ್ರೀ ರಾಮಚಂದ್ರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದಿವಂಗತರ ಬಗ್ಗೆ ತಮ್ಮ ಸಂತಾಪವನ್ನು ವ್ಯಕ್ತ ಪಡಿಸಿದರು.

ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ಸಿನವರು ನೆನ್ನೆ "ಅರುಣ" ಕಛೇರಿಯಲ್ಲಿ ಶ್ರೀ ಸೇನಾಪತಿ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದಿವಂಗತ ಯೂಸುಫ್ ಮೆಹರಾಲಿಯವರ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿದರು.

Edited, printed and published by A. R. Nagarajan, at Sadhvi Press, D. Subbiah Road, Mysore.

ಫೋನ್ ನಂ. 798 ರಿಜಿಸ್ಟರ್ಡ್ ನಂ. ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೬-೭-೫೦ [ಸಂಚಿಕೆ

ಉ. ಕೊರಿಯದ ರಾಜಧಾನಿ ಮೇಲೆ ಅಮೆರಿಕನ್ನರ ಧಾಳಿ

ದಕ್ಷಿಣ ಕೊರಿಯಾ ಒಳಾಡಳಿತ ಮಂತ್ರಿಯು ಸೆರೆ

ದಕ್ಷಿಣ ಕೊರಿಯಾದ ಪ್ರಮುಖ ರೇವು ಪಟ್ಟಣವಾದ ಇಂಚಾನ್ನನ್ನು ಉತ್ತರ ಕೊರಿಯನ್ನರು ಹಿಡಿದರು. ಹಿಮ್ಮೆಟ್ಟಿ ಓಡಿ ಹೋಗುತ್ತಿರುವ ದಕ್ಷಿಣ ಸೈನ್ಯಗಳನ್ನು ಉತ್ತರದವರು ಬೆನ್ನಟ್ಟುತ್ತಾ ಹೊಡೆಯುತ್ತಿದ್ದಾರೆ. ದಕ್ಷಿಣ ಕೊರಿಯಾ ಒಳಾಡಳಿತ ಮಂತ್ರಿಯಾದ ಕಿಂ ಹ್ಯೊ ಸುಕ್ ರವರನ್ನು ಸೆರೆ ಹಿಡಿಯಲಾಗಿದೆ. ನಾರ್ವೆಯು ತನ್ನ ವ್ಯಾಪಾರಿ ಹಡಗುಗಳನ್ನು ದಕ್ಷಿಣ ಕೊರಿಯಾಕ್ಕೆ ಸಹಾಯಾರ್ಥವಾಗಿ ಕೊಡುವುದೆಂದು ತಿಳಿದುಬಂದಿದೆ. ಸದ್ಯದಲ್ಲಿ ಜನರಲ್ ಮೆಕಾರ್ಥರರನ್ನು ಪ್ರಪಂಚ ಸಂಸ್ಥೆಯು ಕೊರಿಯಾ ಕಮ್ಯಾಂಡರನ್ನಾಗಿ ನೇಮಿಸಲಾಗುವುದೆಂದು ವರದಿಯಾಗಿದೆ

ಮಕ್ಕಳೊಡನೆ ಬಾವಿಗೆ ಬಿದ್ದು ಆತ್ಮಹತ್ಯೆ

ಮದರಾಸಿನ ಗುಬ್ಬಿ, ಹೊಸಳ್ಳಿಗ್ರಾಮದಲ್ಲಿ ಮಧ್ಯ ವಯಸ್ಸಿನ ಹಿಂದೂ ಮಹಿಳೆಯೊಬ್ಬಳು ತನ್ನ ನಾಲ್ಕು ಮಕ್ಕಳನ್ನು ಬಾವಿಗೆ ನೂಕಿ ತಾನೂ ಬಿದ್ದು ಮರಣ ಹೊಂದಿದಳೆಂದು ವರದಿಯಾಗಿದೆ. ನೆರೆಹೊರೆಯವರ ಪ್ರಯತ್ನದಿಂದ ಮೂರು ಮಕ್ಕಳು ಮಾತ್ರ ಬದುಕಿದವು.

ರುಮೇನಿಯದಲ್ಲಿ ಗೂಢಚಾರರಿಗೆ ಫಾಸಿ ಶಿಕ್ಷೆ

ರುಮೇನಿಯದಲ್ಲಿ ಗೂಢಚಾರ ಕೃತ್ಯ ನಡೆಸಿದ್ದಕ್ಕಾಗಿ ಇಬ್ಬರನ್ನು ಮರಣ ದಂಡನೆಗೆ ಗುರಿಪಡಿಸಲಾಗಿದೆ. ಒಬ್ಬ ಮಹಿಳೆಯೂ ಸೇರಿ ಐದು ಮಂದಿಗೆ ೬ ರಿಂದ ೨೫ ವರ್ಷ ಶಿಕ್ಷೆಯನ್ನು ವಿಧಿಸಲಾಗಿರುವುದಲ್ಲದೆ ಅವರ ಆಸ್ತಿ ಪಾಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ

ಕೊರಿಯಾ ಬಗ್ಗೆ ಮಧ್ಯಸ್ತಿಕೆಗೆ ಅಮೆರಿಕಾ ಸಿದ್ಧವಿಲ್ಲ

ಕೊರಿಯ ಯುದ್ಧ ಮುಕ್ತಾಯದ ಬಗ್ಗೆ ಭಾರತವು ವಹಿಸಬೇಕೆಂದಿರುವ ಮಧ್ಯಸ್ತಿಕೆ ವಿಷಯದ ಸುದ್ದಿಯು ಅಮೆರಿಕ ಸರ್ಕಾರಕ್ಕೆ ಮುಟ್ಟಿಲ್ಲವೆಂದೂ, ರಷ್ಯದೊಡನೆ ಈ ಬಗ್ಗೆ ಮಧ್ಯಸ್ತಿಕೆ ಮಾತುಕತೆಯನ್ನು ನಡೆಸುವ ಯುಕ್ತತೆಯು ಕಾಣಬರುತ್ತಿಲ್ಲವೆಂದೂ ಅಮೆರಿಕದ ವಿದೇಶಾಂಗ ಇಲಾಖಾ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ

ಕೊರಿಯಾ ಪತನವಾದರೆ ೩ನೇ ಮಹಾ ಯುದ್ಧವೇ ?

ಯುದ್ಧದಲ್ಲಿ ದಕ್ಷಿಣ ಕೊರಿಯವು ಸೋತು ಕಮ್ಯೂನಿಸ್ಟರ ವಶವಾದರೆ ಜಗತ್ತನ್ನು ಮೂರನೆ ಮಹಾ ಯುದ್ಧಕ್ಕೆ ತಳ್ಳಬೇಕಾಗುವುದೆಂದು ಬ್ರಿಟಿಷ್ ಮಾಜಿ ಮುಖ್ಯ ಮಂತ್ರಿ ಚರ್ಚಿಲ್ಲರು ಹೇಳಿದ್ದಾರೆ.

ಮೈಸೂರು ಬೆಂಗಳೂರು ರೇಷನಿಂಗ್ ಅಧಿಕಾರಿಗಳು

ಬೆಂಗಳೂರು ಮತ್ತು ಮೈಸೂರು ರೇಷನಿಂಗ್ ಅಧಿಕಾರಿಗಳು ನೇರವಾಗಿ ಆಹಾರ ಸರಬರಾಜಿನ ಡೈರೆಕ್ಟರಿಗೆ ಜವಾಬ್ದಾರರೆಂದೂ, ಇತರ ಪ್ರದೇಶಗಳಲ್ಲಿರುವ ಅಧಿಕಾರಿಗಳು ಆಯಾ ಜಿಲ್ಲಾಧಿಕಾರಿಗಳ ಕೈಕೆಳಗೆ ಕೆಲಸಮಾಡಬೇಕೆಂದೂ ಸೂಚಿಸುವ ಆಜ್ಞೆಯನ್ನು ಸರ್ಕಾರದವರು ಮಾಡಿರುತ್ತಾರೆ

ಸಂಸ್ಥಾನದ ಆಹಾರ ಬೆಳೆಗಾಗಿ ಕೇಂದ್ರದ ಗ್ರಾಂಟು, ಸಾಲ

(ಸ್ವಂ. ವ. ಪ್ರೋ.) ಬೆಂಗಳೂರು ೬

೧೯೫೦-೫೧ನೇ ಸಾಲಿನಲ್ಲಿ ಆಹಾರ ಧಾನ್ಯದ ಬೆಳೆ ಹೆಚ್ಚಿಸುವ ಸಂಬಂಧವಾಗಿ ಸಂಸ್ಥಾನ ಸರ್ಕಾರದವರು ಕೇಂದ್ರದವರನ್ನು ಗ್ರಾಂಟು ಮತ್ತು ಸಾಲಕ್ಕಾಗಿ ಕೇಳಿದ ಬಗ್ಗೆ ಅದನ್ನು ಕೊಡಲು ಕೇಂದ್ರ ಸರ್ಕಾರದವರು ಒಪ್ಪಿರುವುದಾಗಿಯೂ, ಸಂಸ್ಥಾನ ಸರ್ಕಾರದವರು ೪೯ನೇ ಸಾಲಿನಲ್ಲಿ ಆಹಾರ ಬೆಳೆಯ ಯೋಜನೆಯಂತಹ ಕಾರ್ಯಕ್ರಮವನ್ನೇ ಇಟ್ಟುಕೊಳ್ಳಬೇಕೆಂದೂ ಸೂಚಿಸಿರುವುದಾಗಿಯೂ ತಿಳಿದುಬಂದಿದೆ

ಜನಗಣತಿಯಲ್ಲಿ ಸಹಕರಿಸಬೇಕೆಂದು

ಬರುವ ಮಾರ್ಚಿ ೧ನೇ ತಾರೀಖು ದೇಶದಲ್ಲಾಗುವ ಜನಗಣತಿ ಕಾರ್ಯದ ಸಂದರ್ಭದಲ್ಲಿ ನಾಗರೀಕ ಪ್ರಜೆಗಳಿಗೆ ಅಧಿಕಾರಿಗಳು ಕೇಳುವ ಪ್ರಶ್ನೆಗಳಿಗೆ ಸಮಂಜಸವಾದ ಮತ್ತು ಸತ್ಯಾಂಶಗಳಿಂದ ಕೂಡಿದ ಉತ್ತರಗಳನ್ನು ಕೊಡದೆ ಇದ್ದವರಿಗೆ ೧೦೦೦ ರೂ ಜುಲ್ಮಾನೆ ವಿಧಿಸಲಾಗುವುದೆಂದು ಸರ್ಕಾರಿ ಪ್ರಕಟಣೆಯು ತಿಳಿಸುತ್ತದೆ.

ಟ್ರಾಲಿ ಬಸ್ ಯೋಜನೆ ವಜಾ

ಬೆಂಗಳೂರು ನಗರದಲ್ಲಿ ಟ್ರಾಲಿ ಬಸ್ಸನ್ನು ಏರ್ಪಡಿಸುವ ವಿಷಯದ ಬಗ್ಗೆ ಸರ್ಕಾರದವರು ತಯಾರಿಸುತ್ತಿದ್ದ ಯೋಜನೆಯನ್ನು ವಜಾ ಮಾಡಲಾಗಿದೆ. ಈ ಬಗ್ಗೆ ಏರ್ಪಟ್ಟಿದ್ದ ಸಿಬ್ಬಂದಿಯನ್ನು ಇಲಾಖೆಗೆ ವರ್ಗಾಯಿಸಲಾಗಿದೆ.

○ ಹೆಚ್. ಸಿ. ದಾಸಪ್ಪನವರು ದೆಹಲಿಗೆ ಇಂದು ವಿಮಾನದಲ್ಲಿ ತೆರಳಿದರು.

○ ವಿಶ್ವವಿದ್ಯಾಲಯದವರು ವಿದ್ಯಾರ್ಥಿಗಳಿಗೆ ಕಾಲೇಜುಗಳ ಸೀಟುಗಳ ಬಗ್ಗೆ ೧೧ ಜನ ಸಮಿತಿಯನ್ನು ರಚಿಸಿದ್ದಾರೆ

ರೈತರಿಗೆ ಗೊಬ್ಬರಕ್ಕೆ ಸರ್ಕಾರಿ ಸಾಲ

ಧಾನ್ಯವನ್ನು ಬೆಳೆಯುವ ಸಲುವಾಗಿ ರೈತರು ಗೊಬ್ಬರವನ್ನು ಉಪಯೋಗಿಸಲು ಅವರಿಗೆ ಎಕರೆಗೆ ೫ರಿಂದ ೧೦೦ ರೂ ಗಳ ವರೆಗೆ ಗೊಬ್ಬರದ ಸಾಲವನ್ನು ಕೊಡುವುದಾಗಿ ಸರ್ಕಾರದವರು ತೀರ್ಮಾನಿಸಿದ್ದಾರೆ. ತಾಲ್ಲೂಕಿನ ಅಮಲ್ದಾರರುಗಳ ಹತ್ತಿರ ಈ ಬಗ್ಗೆ ಅರ್ಜಿಗಳನ್ನು ಸಾದರಪಡಿಸಬೇಕಾಗಿದೆ. ಈ ಸಾಲವನ್ನು ಧಾನ್ಯದ ರೂಪದಲ್ಲಿ ವಾಪಸು ಕೊಡಬೇಕಾಗಿದೆ, ತಪ್ಪಿದರೆ ಪ್ರತಿ ೫೦ ರೂ ಸಾಲಕ್ಕೆ ೫ ರೂ ದಂಡವನ್ನು ಕೊಡಬೇಕಾಗುತ್ತದೆ.

ನಿಜಾಮರೂ ಸಹ ಅಪರಾಧಿಯಾಗಬೇಕೆಂದು ರಿಟ್ಟು

ನವಾಬ್ ಲಾಯಕ್ ಅಲಿ ಮುಂತಾದವರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಅಪರಾಧಿಯಾದ ಖಾಸಿಂ ರಜ್ವಿಯು ಈ ಮೊಕದ್ದಮೆಯಲ್ಲಿ ನಿಜಾಮರನ್ನೂ ಸಹ ಒಬ್ಬ ಅಪರಾಧಿಯೆಂದು ಪರಿಗಣಿಸಬೇಕೆಂದು ಪ್ರಾರ್ಥಿಸಿದನು. ನ್ಯಾಯಾಧ್ಯಕ್ಷರವರು ರಿಟ್ಟು ಅರ್ಜಿಯನ್ನು ತಿರಸ್ಕರಿಸಿದರು.

ಕೇಂದ್ರದ ಉಪಮಂತ್ರಿಗಳಿಗೆ ೨೦೦೦ ರೂ. ವೇತನ

ಕೇಂದ್ರ ಸರ್ಕಾರದ ಡೆಪ್ಯುಟಿ ಮಂತ್ರಿಗಳ ನೇಮಕ ಮತ್ತು ಅವರ ಸಂಬಳದ ಬಗ್ಗೆ ರಾಷ್ಟ್ರಾಧ್ಯಕ್ಷರು ವಿಶೇಷ ಆಜ್ಞೆಯನ್ನು ಹೊರಡಿಸಿ, ಅವರಿಗೆ ೨೦೦೦ ರೂ ಗಳ ವೇತನವನ್ನು ಕೊಡಲಾಗುವುದೆಂದು ಪ್ರಕಟಿಸಿದ್ದಾರೆ. ಈ ಆಜ್ಞೆಯು ಕಳೆದ ಮೇ ತಿಂಗಳು ೫ ರಿಂದ ಜಾರಿಗೆ ಬಂದಿರುವುದಾಗಿ ತಿಳಿಸಲಾಗಿದೆ

ಕರಾಚಿ ನಿರಾಶ್ರಿತರಿಂದ ಮನೆಗಳ ಆಕ್ರಮಣ

ಪಾಕಿಸ್ತಾನದ ಸೈನ್ಯ ಇಲಾಖೆಯವರು ತಮ್ಮ ನೌಕರರುಗಳಿಗಾಗಿ ಕಟ್ಟಿಸಿದ್ದ ೨೦೦ ಮನೆಗಳನ್ನು ನಿರಾಶ್ರಿತರು ಆಕ್ರಮಿಸಿರುವುದಾಗಿ ಕರಾಚಿಯಿಂದ ಸುದ್ದಿ ಬಂದಿದೆ

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ಈ ದಿವಸ ನೀರು ೬೦-೭೫ ಅಡಿಯ ಮಟ್ಟದಲ್ಲಿದೆ. ಕಳೆದ ವಾರದಿಂದ ವಿಶ್ವೇಶ್ವರಯ್ಯ ನಾಲೆಯಿಂದ ನೀರನ್ನು ಬಿಡಲಾಗುತ್ತಿದೆ.

ಸರ್ಕಾರಿ ಕೆಲಸ ನೌಕರಿಗೆ ಹಾಕುವ ಅರ್ಜಿಗಳಿಗೆ ಫೀಜು

ಸಂಸ್ಥಾನ ಸರ್ಕಾರದ ಕೆಲ ದರ್ಜೆ ನೌಕರಿ ಮತ್ತು ಪಾರಿಭಾಷಿಕವಲ್ಲದ ಇತರ ಕೆಲವು ಹುದ್ದೆಗಳಿಗೆ ಅಭ್ಯರ್ಥಿಗಳು ಒಂದು ರೂಪಾಯಿ ಫೀಜನ್ನು ಸಲ್ಲಿಸಬೇಕಾಗಿದೆ. ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಜಿಗಳ ಮೇಲೆ ಇನ್ನು ಮುಂದೆ ಫೀಜನ್ನು ವಿಧಿಸಲಾಗುವುದೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ. ಇಲ್ಲದೆ ಈ ಬಗ್ಗೆ ಅಮೋಘವಾದದ್ದಾಗಿ ಅರ್ಜಿ ಕೊಳ್ಳುವುದಕ್ಕಾಗಿ ಪ್ರತ್ಯೇಕ ಪರೀಕ್ಷೆ ಫೀಜು ತೆರಬೇಕೆಂಬುದು ಹಾಗೂ ನಿಯಮವನ್ನು ತಿಳಿಸಲಾಗಿದೆ.

ಅಮೆರಿಕದ ಸೈನ್ಯದ ಭಾಗ ಆಕ್ರಮಿಸಲ್ಪಟ್ಟಿತು

ಉತ್ತರ ಕೊರಿಯದ ಸೈನಿಕರು ಭಾರಿ ಟ್ಯಾಂಕುಗಳನ್ನು ಹೊಂದಿ, ಸುವಾನ್ ಪಟ್ಟಣದ ದಕ್ಷಿಣ ಭಾಗದಲ್ಲಿ ರಕ್ಷಣೆಗಾಗಿ ನಿಂತಿದ್ದ ಅಮೆರಿಕದ ಸೈನ್ಯ ವಿಭಾಗವನ್ನು ಉತ್ತರ ಸೈನ್ಯಗಳಿಂದ ಆಕ್ರಮಿಸಿದ್ದಾರೆ. ಈ ಕೊರಿಯದ ಮುಖ್ಯ ರೇವಾದ ಇಂಚಾನ್ ಎಂಬುದನ್ನು ಹಿಡಿಯಲಾಗಿದೆ. ದಕ್ಷಿಣದ ಸೈನ್ಯಗಳು ಅಲ್ಲಿಂದ ಹಿಮ್ಮೆಟ್ಟಿ ಪ್ರತಿರೋಧವನ್ನು ತೋರಿದವು. ಯುದ್ಧಭೂಮಿಗೆ ೬ ಹಡಗುಗಳಲ್ಲಿ ಶಸ್ತ್ರಾಸ್ತ್ರಗಳನ್ನು ಈಗ ಅಮೆರಿಕವು ಕೊರಿಯಾಕ್ಕೆ ಕಳುಹಿಸುತ್ತಿದೆ. ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗ್ ಮೇಲೆ ಅಮೆರಿಕದ ವಿಮಾನಗಳು ಭಾರಿ ಬಾಂಬ್ ಹಾಕಿದವು. ೮ ಉ. ಕೊರಿಯ ವಿಮಾನಗಳ ನಷ್ಟವಾಗಿದೆ. ಚೀನಾವು ಕೊರಿಯ ಯುದ್ಧದ ಬಗ್ಗೆ ಹೊಂದಿರುವ ನೀತಿಯನ್ನು ಬದಲಿಸಬೇಕೆಂದು ಅಮೆರಿಕವು ಕೇಳಿದೆ. ಹಿಂದೂಚೀನಾ ಯುದ್ಧದಲ್ಲಿ ಅಮೆರಿಕ ಸಹಾಯ ನೀಡುತ್ತದೆ.

ನಾಯಿಯ ಓಡಿಸ ಹೋದ ಬಾಲಕ ಗುಂಡಿಗೆ ಬಲಿ

ಮದ್ರಾಸಿನ ಪೈಲು ಇಲಾಖೆ ಮುಖ್ಯಾಧಿಕಾರಿ ಕಚೇರಿಗೆ ಸೇರಿದವರ ೧೪ ವರ್ಷದ ಮಗ ಸುರೇಂದ್ರನು ತನ್ನ ಮನೆಯ ಹೊರಗಡೆ ಬಂದೂಕ ಹಿಡಿದು ನಾಯಿಯನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಆಕಸ್ಮಾತ್ ಬಂದೂಕಿನ ಹಾರಿ ಗುಂಡು ಅವನ ಹೊಟ್ಟೆಯಲ್ಲಿ ಹೊಕ್ಕಿತು. ಆಸ್ಪತ್ರೆಗೆ ಕೊಂಡೊಯ್ದು ಸೇರಿಸಿದಾಗ್ಯೂ ಹುಡುಗನು ಬದುಕಲಿಲ್ಲ.

ಕೊರಿಯಾ ಬಗ್ಗೆ ಭಾರತದ ಮಧ್ಯಸ್ತಿಕೆಯಿಲ್ಲ

ಕೊರಿಯ ಯುದ್ಧದ ಬಗ್ಗೆ ಭಾರತವು ಮಧ್ಯಸ್ತಿಕೆ ವಹಿಸುವುದಾಗಿ ಹೇಳಿರುವುದು ನಿಜವಲ್ಲವೆಂದು ಭದ್ರತಾ ಸಮಿತಿಯ ಭಾರತದ ಪ್ರತಿನಿಧಿ ಸರ್ ಬಿ. ಎನ್. ರಾಯರವರು ತಿಳಿಸಿದ್ದಾರೆ

ದಕ್ಷಿಣ ಮಲಕ್ಕಾ ದ್ವೀಪದಲ್ಲಿ ಯುದ್ಧ ಸ್ಥಿತಿ

ಅಂಬಾಯ್ನು ಮತ್ತಿತರ ದಕ್ಷಿಣ ಮಲಕ್ಕಾ ದ್ವೀಪಗಳಲ್ಲಿ ಯುದ್ಧ ಪರಿಸ್ಥಿತಿಯುಂಟಾಗಿದೆಯೆಂದು ಇಂಡೋನೇಷ್ಯ ಸರ್ಕಾರದವರು ಘೋಷಿಸಿರುವರು

ಪೂರ್ವ ಬಂಗಾಳದಿಂದ ಪುನಃ ಹಿಂದುಗಳ ಯಾತ್ರೆ

ಪೂರ್ವ ಬಂಗಾಳದಿಂದ ಹಿಂದುಗಳು ಪುನಃ ಭಾರತಕ್ಕೆ ಬರುವುದು ಕೆಲವು ದಿವಸಗಳಿಂದ ಹೆಚ್ಚಾಗುತ್ತಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ|| ಬಿ. ಸಿ. ರಾಯರವರು ಹೇಳಿದ್ದಾರೆ. ಇದರಿಂದ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಆತಂಕ ಉಂಟಾಗಿದೆಯೆಂದು ಹೇಳಲಾಗಿದೆ

ವಿಶ್ವ ಸಂಸ್ಥೆಯ ಅಧಿವೇಶನಕ್ಕೆ ರಷ್ಯದ ಬಹಿಷ್ಕಾರ

ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಭಾಗವಹಿಸುವುದಿಲ್ಲವಾಗಿ ರಷ್ಯವು ಆ ಸಂಸ್ಥೆಯ ಕಾರ್ಯದರ್ಶಿಗೆ ತಿಳಿಸಿದೆ

ಪ ಟ್ಟ ಮ ಹೋ ತ್ಸ ವ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿರುವ ಪೌರಸಭೆಯ ಆಸ್ಪತ್ರೆ (ಮುನಿಸಿಪಲ್ ಆಯುರ್ವೇದ ಆಸ್ಪತ್ರೆ)ಯ ಆವರಣದಲ್ಲಿ ಬುಧವಾರ ಸಂಜೆ ಪಟ್ಟ ಮಹೋತ್ಸವವನ್ನು ಶ್ರೀ ಎಸ್. ಲಿಂಗಣ್ಣನವರು ನೆರವೇರಿಸಿದರು.

ಇಟ್ಟಿಗೆಗೂಡು ಮನೆಗಳ ವಿಚಾರದಲ್ಲಿ ಅಪಪ್ರಚಾರವೆ?

ಮೇಲ್ಕಂಡ ಮನೆಗಳ ವಿಚಾರದಲ್ಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರ ವಿವರಣೆಯನ್ನು ಮೂರು ಪತ್ರಿಕೆಗಳಲ್ಲಿ ಓದಿರುತ್ತೇನೆ ಒಂದಕ್ಕೊಂದಕ್ಕೆ ವ್ಯತ್ಯಾಸವಿದೆ ಮೂರು ಪತ್ರಿಕೆಗಳ ಹೇಳಿಕೆಗಳು ಒಂದೇ ರೀತಿಯಾಗಿಲ್ಲ ನಗರಾಭಿವೃದ್ಧಿ ಸಮಿತಿಯಲ್ಲಿ ನಾನಿದ್ದಾಗ ೩ ಸಾವಿರ ರೂಪಾಯಿ ಅಂದಾಜಿನ ಮೇಲ್ಪಟ್ಟು ಕಟ್ಟುವ ಕಟ್ಟಡಕ್ಕೆ ನನ್ನ ಮತವಿರಲಿಲ್ಲ ಈಗಲೂ ಇಲ್ಲ ಈ ನಿಶ್ಚಿತ ದಿಶವೂ ಇಲ್ಲ ಸಮಿತಿಯಲ್ಲಿ ಚೇರ್ಮನ್ನರೂ ಸೇರಿ ನಾಲ್ಕು ಜನ ನಾಮಕರಣ ಸದಸ್ಯರೂ, ಮೂರು ಜನ ಸರ್ಕಾರಿ ಅಧಿಕಾರಿಗಳೂ, ಮೂರು ಜನ ಚುನಾಯಿತ ಸದಸ್ಯರೂ ಇರುತ್ತಾರೆ ನಮ್ಮ ಮಾತುಗಳಿಗೆ ಅಲ್ಲಿ ಬೆಲೆ ಇಲ್ಲ

ಇಟ್ಟಿಗೆಗೂಡಿನ ಪ್ರಜೆಗಳು ಈಗ್ಯೆ ಸುಮಾರು ೪ ತಿಂಗಳ ಹಿಂದೆ ಶ್ರೀ ವಿ ಟಿ ಅವ್ವಂಗಂ ನಾಯದಲಿಯಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೂರು ಸಾವಿರ ರೂಪಾಯಿಗೆ ಕಡಿಮೆಯಾಗಿಯೇ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದೂ ಕಟ್ಟಿದ ಕಟ್ಟಡಗಳನ್ನು ಇಟ್ಟಿಗೆಗೂಡಿನಲ್ಲಿ ಮನೆಯಿಲ್ಲದವರಿಗೆ ಮತ್ತು ಮನೆ ಕಳೆದುಕೊಂಡಿರುವವರಿಗೇ ಕೊಡಬೇಕೆಂದೂ ಕೇವಲ ಗರೀಬರಿಗೆ ಸಾಧ್ಯವಾದಷ್ಟು ಕಂತಿನ ಮೇಲೆ ಕೊಡಿಸಬೇಕೆಂದೂ ಈ ರೀತಿಯಾಗಿ ತೀರ್ಮಾನಮಾಡಿ ಈಗ್ಗೆ ಸುಮಾರು ನಾಲ್ಕು ತಿಂಗಳ ಹಿಂದೆ ಛೇರ್ಮನ್ನರಿಗೆ ಅರ್ಜಿ ಬರೆದು ಖುದ್ದಾಗಿ ಸಲ್ಲಿಸಿದ್ದರೂ ಈ ದಿನದವರೆಗೂ ಅವರಿಗೆ ಯಾವ ಜವಾಬೂ ಬಂದಿರುವುದಿಲ್ಲ ಇದನ್ನು ಕಂಡ ಪ್ರಜೆಗಳು ಪುನಃ ಸಚಿವರಲ್ಲಿ ನಿಯೋಗ ಹೋದಾಗ್ಯೆ ಇಟ್ಟಿಗೆಗೂಡಿನವರಿಗೇ ಮನೆಗಳನ್ನು ಕೊಡುತ್ತೇವೆ ಅದರ ಹರಾಜು ಮೂಲ್ಯ ಬಿಡ್ಡು ಮಾಡಿ ಯಾತಕ್ಕೆ ತೆಗೆದುಕೊಳ್ಳಬಾರದು' ಎಂಬ ಸಲಹೆ ಮಾನ್ಯ ಸಚಿವರಿಂದಲೇ ಬಂದಿತೆಂದು ನಿಯೋಗದವರಿಂದ ನನಗೆ ಖಚಿತವಾಗಿ ತಿಳಿದುಬಂದಿದೆ ಈ ರೀತಿ ಹರಾಜು ಹಾಕಿದಲ್ಲಿ ಮನೆ ಇಲ್ಲದವರಿಗೆ ಮನೆ ಸಿಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿಯೋಗದವರು ಹೇಳಿದುದಾಗಿಯೂ ನನಗೆ ತಿಳಿಸಿರುತ್ತಾರೆ

ಈಚೆಗೆ ನಗರಾಭಿವೃದ್ಧಿ ಸಮಿತಿಯವರು ೬೮೦೦ ರೂಪಾಯಿನ ೬ ಕಟ್ಟಡಗಳನ್ನು ಕಟ್ಟುವುದಕ್ಕೆ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಟೆಂಡರುಗಳನ್ನು ಕರೆದಿದ್ದರು ಕೂಡಲೆ ನಾನು ಸಮಿತಿ ಅಧ್ಯಕ್ಷರಿಗೂ, ಸಮಿತಿಯ ಸದಸ್ಯರಿಗೂ, ಸಚಿವರಿಗೂ, ಕಾಗದ ಬರೆದು ಹೆಚ್ಚು ಬೆಲೆಯ ಕಟ್ಟಡಗಳನ್ನು ಕಟ್ಟಿಸಕೂಡದೆಂದೂ, ಕಟ್ಟತಕ್ಕ ಮನೆಗಳೆಲ್ಲವೂ, ಮನೆ ಇಲ್ಲದವರಿಗೇ ಮೀಸಲಾಗಿಡಬೇಕೆಂದೂ ನಗರಾಭಿವೃದ್ಧಿ ಸಮಿತಿಯ ಮುಂದೆ ನನ್ನ ಅರಿಕೆಯನ್ನು ಇಡಬೇಕೆಂದೂ ಸಹ ಕೇಳಿದ್ದೆ ಇದಕ್ಕೂ ಛೇರ್ಮನ್ನರಿಂದಾಗಲೀ ಸಚಿವರಿಂದಾಗಲೀ ಈ ದಿನದವರೆಗೂ ಜವಾಬಿಲ್ಲ ಇಂತಹ ಸನ್ನಿವೇಶದಲ್ಲಿ ಯುವಕರ ಸಂಘದ ಆಶ್ರಯದಲ್ಲಿ ನಾನು ಮೊನ್ನೆಯ ದಿನ ಭಾಷಣ ಮಾಡಿದಾಗ ಸತ್ಯಾಗ್ರಹ ಮಾಡಬೇಕಾಗಿ ಬಂದರೂ ಅದು ಅನಿವಾರ್ಯವೆಂದು ಹೇಳಿದ್ದು ನಿಜ್ಜವು ಹಾಗೆ ಹೇಳಿದ ಮಾರನೆಯ ದಿನವೇ ನಾಲ್ಕು ತಿಂಗಳಿಂದ ಯಾವ ಅಧಿಕಾರಿಯಿಂದಲೂ ನಮ್ಮ ಕಾಗದಗಳಿಗೆ ಬಾರದಿದ್ದ ಈ ಛೇರ್ಮನ್ನರ ಭರವಸೆ ಪತ್ರಿಕೆಗಳ ಹೇಳಿಕೆ ಮೂಲಕವಾದರೂ ಬಂದದ್ದು ಸಂತೋಷದ ವಿಷಯವೇ ಸರಿ ನನಗೆ ಕೊಡಿಸಿರುವ ಅಪಪ್ರಚಾರದ ಕಿರೀಟ ಧರಿಸುವುದಕ್ಕೂ ನಾನು ಹಿಂಜರಿಯುವುದಿಲ್ಲ ಪ್ರಜೆಗಳಿಗೆ ಅನುಕೂಲವಾದದ್ದಕ್ಕೆ ಸಂತೋಷಿಸುತ್ತೇನೆ

ಎಸ್ ಲಿಂಗಣ್ಣ

ಬಂಗಲೆ ಬಿಕರಿಗಿದೆ

ಕಾಂತರಾಜ ಅರಸ್ ರೋಡಿನಲ್ಲಿರುವ 1205ನೇ ನಂಬರ್ ಮನೆ ಇದರಲ್ಲಿ 50 ರೂ ಗಳು ಬಾಡಿಗೆ ಬರುವ ಎರಡು ಮನೆಗಳಿವೆ ಮುಂದೆ ವಿಶಾಲವಾದ ಕಾಂಪೌಂಡು, ನಲ್ಲಿ, ದೀಪ, ಭಾವಿ ಎಲ್ಲವೂ ಇವೆ ಅಲ್ಲೇ ವಿಚಾರಿಸಿ

ಸಿನಿಮಾ ನಟಿಯ ಚುಂಬನಕ್ಕಾಗಿ ೧೫೦೦ ಪೌಂಡು

ಟರ್ಕಿಯ ಹಿಂದಿನ ರಾಜಧಾನಿ ಇಸ್ತಾಂಬೂಲಿನಲ್ಲಿ ಇತ್ತೀಚೆಗೆ ಒಬ್ಬ ಸಿನಿಮಾ ನಟಿ ಎಲೀ ಪರ್ಡ್ ಎಂಬಾಕೆಯನ್ನು ಚುಂಬಿಸುವ ಹಕ್ಕಿನ ಬಗ್ಗೆ ಹರಾಜು ಮಾಡಲಾಯಿತು ಅನೇಕರು ಒಬ್ಬರ ಮೇಲೊಬ್ಬರು ಪೈಪೋಟಿ ನಡೆಸಿದರು ಆಖೈರು ಬಿಡ್ಡುದಾರರು ೧೫೦೦ ಪೌಂಡುಗಳನ್ನು ಕೊಟ್ಟನು ಆತನು ಆಕೆಯ ಗಂಡನೇ ಎಂದು ಅನಂತರ ಗೊತ್ತಾಯಿತು ಈ ಹಣವನ್ನು ದಾನ ಮಾಡಲಾಗುವುದು

ಜ್ವಾಲಾಮುಖಿ ಆಡುತ್ತಿದೆ

ಜಾವಾ ಮತ್ತು ಸುಮಾತ್ರಾ ನಡುವಿನ ಭೀಕರವಾದ ಕ್ರಕಟೋವಾ ಎಂಬ ಜ್ವಾಲಾಮುಖಿಯು ಆಡಲುಪಕ್ರಮಿಸಿ ೩೦೦೦ ಅಡಿ ಎತ್ತರಕ್ಕೆ ಕಲ್ಲು ಮಣ್ಣುಗಳನ್ನು ಎರಚುತ್ತಿರುವುದಾಗಿ ಹೇಳಲಾಗಿದೆ ಎರಡು ವಾರದ ಕೆಳಗೆ ಇದೇ ಮಾರ್ಗದಲ್ಲಿ ಇಂಡೊನೇಷ್ಯದ ಅಧ್ಯಕ್ಷ ಸೋಕರ್ನೋರವರು ವಿಮಾನದಲ್ಲಿ ಹೋಗಿದ್ದರು ಈ ಜ್ವಾಲಾಮುಖಿಗೆ ನೆರೆಹೊರೆಯವರು ಭೇಟಿಯಿತ್ತಿದ್ದರು.

○ ತಮ್ಮ ಸಂಬಳದ ಬಗ್ಗೆ ಹೈ ಕೋರ್ಟಿನಲ್ಲಿ ಶ್ರೀ ಪುಟ್ಟರಾಜೆ ಅರಸರು ಹೂಡಿದ್ದ ಮೊಕದ್ದಮೆಯು ನಿನ್ನೆ ನಡೆಯಬೇಕಾಗಿದ್ದುದು ಮುಂದಕ್ಕೆ ಹಾಕಲಾಗಿದೆ

ಯುಗೊಸ್ಲೇವಿಯಾ ಗಡಿ ಬಳಿ ರಷ್ಯದ ಸಿದ್ಧತೆಯೇ?

ಯುಗೊಸ್ಲೇವಿಯಾ ಗಡಿ ಬಳಿ ರಷ್ಯದಿಂದ ಸಜ್ಜಿತವಾದ ಬಲ್ಗೇರಿಯಾ, ರುಮೇನಿಯ ಮತ್ತು ಹಂಗೆರಿ ಸೈನ್ಯಗಳು ಸಿದ್ಧವಾಗಿ ನಿಂತಿರುವುದಾಗಿ ಸುದ್ದಿ ಬಂದಿದೆ ಇದಲ್ಲದೆ ಟರ್ಕಿಯ ಪೂರ್ವ ಭಾಗದ ಪ್ರದೇಶಗಳ ಕಡೆ ರಷ್ಯದ ಹಲವು ಡಿವಿಷನ್ ಸೈನ್ಯಗಳು ಹೋಗುತ್ತಿವೆ ಪರ್ಷಿಯದ ಮೇಲೆ ರಷ್ಯದ ವಿರುದ್ಧ ಪ್ರಚಾರವು ವಿಪರೀತವಾಗಿದೆ ಕೊರಿಯ ಮತ್ತು ಅತಿದೂರಪ್ರಾಚ್ಯದ ಕಡೆಗೆ ಇರುವ ಪಾಶ್ಚಾತ್ಯ ರಾಷ್ಟ್ರಗಳ ಗಮನವನ್ನು ಬೇರೊಂದು ಕಡೆಗೆ ರಷ್ಯವು ತಿರುಗಿಸುತ್ತಿದೆ

ವಿಶ್ವ ಸಂಸ್ಥೆಯಿಂದ ರಷ್ಯದ ನಿರ್ಗಮನವೇ?

ರಷ್ಯವು ಭದ್ರತಾ ಸಮಿತಿಗೆ ಕೊರಿಯದಲ್ಲಿರುವ ಅಮೆರಿಕ ಸೇನೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಕೋರುತ್ತ ಮನವಿಯೊಂದನ್ನು ಕಳುಹಿಸಿದೆ ಈ ಬಗ್ಗೆ ಅದು ವಿಶ್ವ ಸಂಸ್ಥೆಯನ್ನೇ ತ್ಯಜಿಸಬಹುದೆಂದು ನಂಬಲಾಗಿದೆ

ಭಾರತಕ್ಕೆ ಆಹಾರ ಸಾಮಗ್ರಿಗಳ ಆಮದು

ಭಾರತವು ಹೊರಗಿನಿಂದ ೧ ಲಕ್ಷ ಟನ್ ಸಕ್ಕರೆಯನ್ನು ಆಮದು ಮಾಡಿಕೊಳ್ಳುವ ವಿಷಯವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿದೆ ಬರುವ ವರ್ಷ ೩೦ ಲಕ್ಷ ಟನ್ ಆಹಾರ ಧಾನ್ಯವನ್ನು ಹೊರಗಿನಿಂದ ತರಿಸಲಾಗುವುದು

ರಾಜಕಮಲ್, ಮೈಸೂರು
ದಿನವಹಿ 3 ಆಟಗಳು
7-7-50 ರಿಂದ 2ನೇ ವಾರ
ನೀಲ ಸಮುದ್ರ
ಮೊದಲನೇ ವರ್ಣರಂಜಿತ ತಮಿಳು ಚಿತ್ರ
ಬೆಳಗಿನ ಪ್ರದರ್ಶನ
7-7-50ರಿಂದ 4ದಿನಗಳು ಮಾತ್ರ
"ಸಿಲ್ವರ್ ಕ್ವೀನ್" (ಹಿಂದಿ)
ಮಾಧುರಿ, ನವೀನ್ ಚಂದ್ರ, ಆಗಾಜಾನ್

SRI GAYATHRI TALKIES
Daily 3 Shows
From 7-7-50 for 2 days
A must see picture
M G M'S
ACT OF VIOLENCE
ಆಕ್ಟ್ ಆಫ್ ವಯೊಲೆನ್ಸ್
With -Robert Ryan
Morning Shows
On Sat 8th & Sun 9th
M G M's
'The Hucksters'
With -Clark Gable

ಒಲಂಪಿಯಾದಲ್ಲಿ
6 7 50ರಿಂದ 3ನೇ ಸಡೇ ವಾರ
ಶಾದಿ ಕಿ ರಾತ್
ಮುಂದಿನ ಬದಲಾವಣೆ 13—7—50ರಿಂದ
• ದುನಿಯಾ •
ಪಾತ್ರ — ಸುರಯ್ಯ, ಕರನ್ ದಿವಾನ್, ಮತ್ತು ಯಾಕೂಬ್
ಬೆಳಗಿನ ಪ್ರದರ್ಶನ 7-7-50 ರಿಂದ
ಬಾಬ್, ರೀಟಾ ಚಿಟ್ನಿಸ್ ಪಾತ್ರ ವಹಿಸಿರುವ
• ಗಜಲ್ •
ಮೈಸೂರಿಗೆ ಪ್ರಥಮ ಪ್ರದರ್ಶನ

ರಸಿಕರಿಗೆ ಅಚ್ಚುಮೆಚ್ಚಾದುವು
ಮೈಸೂರು ರೇಷ್ಮೆ ವಸ್ತ್ರಗಳು
ಮಿತವ್ಯಯ-ಹಾಗೂ ಸುರುಚಿ.
ಮೈಸೂರು ರೇಷ್ಮೆ — ಸಮಾಜದಲ್ಲಿ ಮೇಲ್ಮೆಯ ಗುರುತು / ಮುಕ್ತಂಜೆಯಲ್ಲಿ ಅನುಭವವಾದುದು
ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನಸೆಳೆವ ಮಾದರಿಗಳು
ಚಂದಿನ ಅಂದದ ರಂಗುಗಳು
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು

ರಘುಲಾಲ್ & ಕೋ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು
ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

ಮೈಸೂರು ಸಿಟಿ ರೇಷನಿಂಗ್ ಆಫೀಸು

ನೋಟಿಫಿಕೇಷನ್

ನಂ ಎಸ್ ಎಂ- 6/50-51
ತಾ|| 4-7-1950

ಇದರಿಂದ ಮೈಸೂರು ಸಿಟಿಯ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮತ್ತು ಸಹಕಾರ ಡಿಪೋ ಮತ್ತು ಸಹಕಾರ ಸಂಘಗಳು ಇದೇ ಜುಲೈ ೭ನೇ ತಾ|| ಶನಿವಾರ ದಾಸ್ತಾನು ಎಣಿಕೆ ಬಗ್ಗೆ ಪೂರ್ತಾ ಮುಚ್ಚಲ್ಪಡುತ್ತವೆ ಇದೇ ಮಾಹೆ ೯ನೇ ತಾರೀಖು ಭಾನುವಾರ ಎಲ್ಲಾ ಡಿಪೋಗಳು ಪೂರ್ತಾ ಕೆಲಸ ಮಾಡುತ್ತವೆ

(ಸಹಿ) ಡಿ. ವಿ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

Edited printed and published by A R Nagarajan, at Sadhvi Press, D Subbiah Road, Mysore

ಸಂಪುಟ 79[illegible] [illegible] [illegible]

ಸಾಧ್ವಿ

ಸಂಪುಟ ೮] ಶುಕ್ರವಾರ ೭-೭-೫೦ [ಸಂಚಿಕೆ ೬೨೪

ಉ. ಕೊರಿಯದವರ ಪ್ರಚಂಡ ಮುನ್ನಡೆ

ಕೊರಿಯ ಸಂಗ್ರಾಮ ಬೇಗ ಮುಗಿಯುವ ಸಂಭವವಿಲ್ಲ

[illegible]

ರಷ್ಯಾದೊಡನೆ ಸಂಧಾನವಾಗಬೇಕೆಂದು ಚರ್ಚಿಲ್

[illegible]

ಮಲಯಾದಲ್ಲಿ ಚಿತ್ರ ತಯಾರಿಸಲು ಸಾಬು ಸಿದ್ಧತೆ

[illegible]

[illegible]

[illegible]

ಕೆ. ವಿ. [illegible]

[illegible]

ಫಕ್ತೂನರ ಮೇಲೆ ಪಾಕಿಸ್ತಾನದ ಧಾಳಿ

[illegible]

ಅಕ್ಸ್‌ಫರ್ಡಿನಲ್ಲಿ ವಿಶ್ವ ಗರ್ಲ್ ಗೈಡುಗಳ ಸಮ್ಮೇಳನ

[illegible]

ಮದ್ರಾಸಿನಲ್ಲಿ ಅಕ್ಕಿಗಿಂತಲೂ ಗೋಧಿಗೆ ಕಡಿಮೆ ಬೆಲೆ

[illegible]

ಹೊಸ ೧ ಆಣೆ ಸ್ಟಾಂಪು

[illegible]

ಶೃಂಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹೊಸ ಡೈರೆಕ್ಟರು

[illegible]

[illegible]

[illegible]

[illegible]

[illegible]

[illegible]

[illegible]

ಉ. ಕೊರಿಯ ಸೇನೆಯ ಪ್ರಚಂಡ ವೇಗದ ನುಗ್ಗಾಟ

[illegible]

ಹೈದರಾಬಾದಿನ ಭಾರಿ ಹಗರಣ [illegible]

[illegible]

ಬಿಹಾರಿನಲ್ಲಿ ಕ್ಷಾಮಗಾಲದ ಸಾವುಗಳು

[illegible]

[illegible]

[illegible]

ಪೋಲೀಸರ ಕಣ್ಣಿಗೆ ಮೆಣಸಿನ ಪುಡಿ ಹಾಕಿ ಪರಾರಿ

ಬೊಂಬಾಯಿ ಅಧಿಕಪ್ಯದ ನ್ಯಾಯಾಧೀಶರ ಮುಂದೆ ಹಾಜರು ಮಾಡಲು ವ್ಯಾನಿನಲ್ಲಿ ಕರೆದುಕೊಂಡು ಹೋಗುತ್ತಿದ್ದ ಐದು ಮಂದಿ ಕೈದಿಗಳು ಪೋಲೀಸರ ಕಣ್ಣಿಗೆ ಮೆಣಸಿನ ಪುಡಿಯನ್ನು ಚೆಲ್ಲಿ ಪರಾರಿಯಾದರೆಂದು ವರದಿಯಾಗಿದೆ

ಬ್ರಿಟಿಷ್ ರಾಜರ ಭಾವಚಿತ್ರ ತೆಗೆದುಹಾಕಲು ಸೂಚನೆ

ಮಧ್ಯ ಪ್ರದೇಶದ ಸರ್ಕಾರಿ ಕಛೇರಿಗಳಲ್ಲಿರುವ ಬ್ರಿಟಿಷ್ ರಾಜರ ಭಾವಚಿತ್ರಗಳನ್ನು ತೆಗೆದುಹಾಕಬೇಕೆಂದು ಅಲ್ಲಿನ ಸರ್ಕಾರದವರು ಸೂಚನೆಯಿತ್ತಿದ್ದಾರೆ

ಚಾಮುಂಡೇಶ್ವರಿ
ಟಾಕೀಸ್
ತಾ॥ 8-7 50 ನೇ ಶನಿವಾರದಿಂದ
ಪ್ರತಿ ದಿನ 3 ಆಟಗಳು
* ಖಿಡಕಿ *
(ಹಿಂದಿ)
ಪಾತ್ರ - ಮನಮೋಹನ್ ಕೃಷ್ಣ ಆಲಿ ರೆಹಮಾನ್
ಮತ್ತು ವಿ ಹೆಚ್ ದೇಸಾಯಿ

ಗಣೇಶಾ ಟಾಕೀಸ್
8-7-50 ರಿಂದ ಪ್ರತಿ ದಿನ 3 ಆಟಗಳು
ಮೈಟಿ ಜೋಯಂಗ್
MIGHTY JOE YOUNG
ಪಾತ್ರ ಟೆರ್ರಿ ಮೂರ್ ಬೆನ್ ಜಾನ್ಸನ್
8 ಮತ್ತು 9ನೇ ತಾರೀಖುಗಳಲ್ಲಿ
ಬೆಳಿಗ್ಗೆ ೧೦-೩೦ ಗಂಟೆಗೆ
ಇದೇ ಚಿತ್ರವು ಪ್ರದರ್ಶಿಸಲ್ಪಡುವುದು
ಮುಂದಿನ ಆಕರ್ಷಣೆ -
14—7—50ನೇ ಶುಕ್ರವಾರದಿಂದ
ಬಡಿ ಬಹೆನ್

ಗುಂಡ್ಲುಪೇಟೆ ಹೈ ಸ್ಕೂಲು

ಗುಂಡ್ಲುಪೇಟೆ ೭

ಈ ಹೈ ಸ್ಕೂಲಿನಲ್ಲಿ ಹಳ್ಳಿ ಹುಡುಗರಿಂದ ಅಕ್ರಮವಾಗಿ ಆಟಪಾಟದ ಫೀಜನ್ನು ವಸೂಲುಮಾಡುತ್ತಿರುವುದಾಗಿ ೩೦-೬-೫೦ರ "ಸಾಧ್ವಿ" ಪತ್ರಿಕೆಯಲ್ಲಿ ಒಬ್ಬ ಬಾತ್ಮೀದಾರರು ಬರೆದಿದ್ದ ವಿಷಯವು ವಾಸ್ತವವಲ್ಲವೆಂದೂ, ಕಾನೂನಿಗೆ ವಿರೋಧವಾಗಿ ಈ ಹೈಸ್ಕೂಲಿನಲ್ಲಿ ಯಾವ ಕಾರ್ಯಕ್ರಮವನ್ನೂ ನಡೆಸುತ್ತಿಲ್ಲವೆಂದೂ ಆಟಕ್ಕೆ ಬರುತ್ತಿರುವ ವಿದ್ಯಾರ್ಥಿಗಳಿಂದ ಮಾತ್ರ ಅದನ್ನು ತೆಗೆದುಕೊಳ್ಳಲಾಗುತ್ತಿದೆಯೆಂದೂ ಶಾಲಾಧಿಪತಿಗಳು ನಮಗೆ ಬರೆದು ತಿಳಿಸಿರುತ್ತಾರೆ.

ಗೃಹಸಚಿವರ ಭೇಟಿ

ಈ ತಾಲ್ಲೂಕಿನಲ್ಲಿ ಉಂಟಾಗಿರುವ ಆಹಾರ ಅಭಾವದ ಪರಿಸ್ಥಿತಿಯನ್ನು ಪರಿಶೀಲಿಸಲು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಕಳೆದ ಸೋಮವಾರ ಇಲ್ಲಿಗೆ ಭೇಟಿಯಿತ್ತು, ಇಲ್ಲಿನ ನಿವಾಸಿಗಳ ಕುಂದುಕೊರತೆಗಳನ್ನು ಅರಿತು ಇಲ್ಲಿ ಉಂಟಾಗಿರುವ ಕಠಿಣ ಪರಿಸ್ಥಿತಿಗಾಗಿ ಮನ ನೊಂದು, ಈಗ ತಾಲ್ಲೂಕಿಗೆ ಬರುತ್ತಿರುವುದಕ್ಕಿಂತಲೂ ಹೆಚ್ಚು ಆಹಾರ ಧಾನ್ಯವನ್ನು ಒದಗಿಸುವುದಾಗಿ ಭರವಸೆಯಿತ್ತರು. ಕಾಡುಗಳಿಂದ ದನಕರುಗಳಿಗಾಗಿ ಹುಲ್ಲನ್ನು ತರಲು ಸುಂಕವನ್ನೂ ಮನ್ನಾ ಮಾಡಲಾಗಿದೆಯೆಂದು ತಿಳಿಸಿದರು. ಸ್ವಂತ ಉಪಯೋಗಕ್ಕಾಗಿ ಜನರು ಈಗ ಅವಕಾಶ ಕೊಟ್ಟಿರುವುದಕ್ಕಿಂತಲೂ ಹೆಚ್ಚು ಧಾನ್ಯವನ್ನು ತರಲೂ ಸಹ ಅನುಮತಿ ಕೊಡಲಾಗುವುದೆಂದು ಹೇಳಿದರು

ದ ಕೊರಿಯಾ ೩ನೇ ೧ ಭಾಗ ಉತ್ತರದವರ ವಶ

ಉತ್ತರ ಕೊರಿಯಾದ ಸೈನ್ಯಗಳು ೩೮ನೇ ಸಮಾನಾಂತರರೇಖೆಯೊಳಗೆ ನುಗ್ಗಿದ ಅಂದಿನಿಂದ ದಕ್ಷಿಣ ಕೊರಿಯಾದ ೩ನೇ ಒಂದು ಭಾಗವನ್ನು ಅವರು ಆಕ್ರಮಿಸಿಕೊಂಡಂತಾಗಿದೆ

ಬೊಂಬಾಯಿಯಲ್ಲಿ ಮೋಲಂಕಸ್ಟ್ರಿನ ಮೋಟಾರು ರೈಲು

ಮೋಲಂಕಸ್ಟ್ರ ಮೋಟಾರು ರೈಲು ಈಗ ಬೊಂಬಾಯಿಯಲ್ಲಿ ಏರ್ಪಾಡಾಗಿದೆ ವಿದ್ಯುಚ್ಛಕ್ತಿಯಿಂದ ಇದು ಬೊಂಬಾಯಿನ ಅಕ್ಕ ಪಕ್ಕದ ಊರುಗಳಿಗೆ ಹೋಗಿ ಬರಲು ವ್ಯವಸ್ಥೆಯಾಗಿರುವುದು ಇದು ಭಾರತದಲ್ಲಿಯೇ ಹೊಸದಾದುದು

○ ದೆಹಲಿ-ಮಥುರಾ ರಸ್ತೆಯಲ್ಲಿ ಒಂದು ಕಡೆ ೩ ಸಾವಿರ ವರ್ಷಗಳ ಹಿಂದೆ ಇದ್ದಿತೆಂದು ಹೇಳಲಾದ ನಗರವೊಂದನ್ನು ಪ್ರಾಕ್ತನ ಶಿಲ್ಪ ಇಲಾಖೆಯವರು ಕಂಡುಹಿಡಿದಿದ್ದಾರೆ

VISIT ONCE
ನಾಧರ್ ಸ್ಟೋರ್ಸ್
ಅಗ್ರಹಾರ ಮೈಸೂರು
— 0 —
ವಿದ್ಯಾರ್ಥಿಗಳಿಗೋಸ್ಕರ ಸ್ಪೆಷಲ್ ರೇಟ್
ನ್ಯಾಷನಲ್ ರೀಡರ್ಸ್ ಗಡ್ಡಿ 0-14-6
ಹವಳದ ಪ್ರೀವ ಗಡ್ಡಿ 0-11-6
ಸ್ಟೂಡೆಂಟ್ಸ್ ನೋಟ್ ಬುಕ್
English paper with margin

100 ಪೇಜು	0	6	0
150	0	9	0
200 ,,	0	12	0
300 ,,	1	0	0
400 ,	1	5	0
500 ,,	1	9	0
M S ಬುಕ್ (Flexible)	0	10	0

4-7-50 ರಿಂದ 4-8-50ರವರೆಗೆ ಮಾತ್ರ ಈ ಧಾರಣೆಗೆ ಸಿಕ್ಕುತ್ತದೆ.

Edited, printed and published by A R Nagarajan, at Sadhvi Press, D Subbiah Road, Mysore

ಟೆಂಡರ್ ನೋಟಿಫಿಕೇಷನ್

ಈ ಕೆಳಗೆ ನಮೂದು ಮಾಡಿರುವ ಪ್ರೈಮರಿ ಸ್ಕೂಲ್ ಕಟ್ಟಡವನ್ನು ಕಟ್ಟಲು ಟೆಂಡರ್‌ಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಲ್ಲಿ ಈ ತಿಂಗಳು ತಾರೀಖು ೨೪ನೇ ಸೋಮವಾರ ಮಧ್ಯಾಹ್ನ ೩ ಗಂಟೆಯವರೆಗೆ ಸ್ವೀಕರಿಸಲಾಗುತ್ತದೆ. ಟೆಂಡರು ಕೊಡಲಿರುವವರು ೨೫೦ ರೂಪಾಯಿಗಳನ್ನು ಪ್ರತಿ ಕೆಲಸಕ್ಕೂ ಠೇವಣಿಯಾಗಿ ಟ್ರೆಜರಿಗೆ ಪಾವತಿಮಾಡಿ ಚಲನ್ನನ್ನು ಟೆಂಡರಿಗೆ ಲಗತ್ತಿಸಬೇಕು. ಹಣವನ್ನು ಖಜಾನೆಗೆ ಜಮಾ ಮಾಡದಿರುವ ಟೆಂಡರ್‌ಗಳು ಬಂದಲ್ಲಿ ಅಂಥ ಟೆಂಡರಿಗೆ ಗಮನ ಕೊಡುವುದಿಲ್ಲ. ಟೆಂಡರನ್ನು ಕೊಡಲಿಚ್ಛಿಸುವವರು ಕೆಲಸದ ಅಂದಾಜು ಮತ್ತು ಪ್ಲಾನನ್ನು ಪ್ರೆಸಿಡೆಂಟರವರ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ನೋಡಬಹುದು. ಟೆಂಡರು ಹಾಕತಕ್ಕವರು ಅಂದಾಜಿನ ಪ್ರತಿ ಒಂದು ಐಟಂಗಳಿಗೆ ರೇಟನ್ನು ನಮೂದಿಸಬಹುದು ಅಥವಾ ಶೇಕಡಾ ಅಂದಾಜು ಮೊಬಲಗಿನ ಮೇಲೆ ಹೆಚ್ಚು ಅಥವಾ ಕಡಿಮೆ ಎಷ್ಟು ಎಂಬುದನ್ನು ನಮೂದಿಸತಕ್ಕದ್ದು. ಕೆಲಸ ತೆಗೆದುಕೊಳ್ಳುವವರು ಬೋರ್ಡಿನಿಂದ ಕೊಡತಕ್ಕಂಥ ಸಾಮಾನುಗಳನ್ನು ಕೆಲಸಕ್ಕೆ ಉಪಯೋಗಿಸಲು ಬದ್ಧರಾಗಿರಬೇಕು

೧ ಪ್ರೈಮರಿ ಸ್ಕೂಲು, ಚಿಕ್ಕಹನಸೋಗೆ, ಕೃಷ್ಣರಾಜನಗರ ತಾಲ್ಲೂಕು ಅಂದಾಜು ರೂ ೪೭೦೦

೨ ಪ್ರೈಮರಿ ಸ್ಕೂಲು ಹನಗೋಡು, ಹುಣಸೂರು ತಾಲ್ಲೂಕು ಅಂದಾಜು ರೂ ೨೫೦೦

(ಸಹಿ) ಜೆ. ಎಂ. ಚಿಕ್ಕಬಸಪ್ಪ,
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡ್, ಮೈಸೂರು

JUST NOW PUBLISHED
Books by D NARASIMHAN M Sc, B Com,
OUTLINE MAP DRAWING BOOK
(New Edition in the form of an Atlas Book)
Approved for use in Schools by the Text Book Committee
MIDDLE SCHOOL GEOGRAPHY - Part I
Recommended by the D P I for use in Middle Schools
A Guide to "OUR INDIA" (in Kannada)
An indispensable book for all S S L C Students
For Copies apply to N. S. VASAN & Co.,
Avenue Road, BANGALORE 2

SRI LAKSHMI, MYSORE
From 8th July 1950 : Daily 3 Shows
Shakespeare's Master-piece Drama
* HAMLET *
Starring - Laurence Oliver, Vileen Herlie, Jean Simmons & others
A STORY OF MURDER & MADNESS

ಪ್ರಭುದೇವಾ ಟಾಕೀಸ್
ದಿನವಹಿ 3 ಆಟಗಳು
8-7-50ರಿಂದ ಅಮೋಘ 3ನೇವಾರ
— ಸುಮತಿ — (ತೆಲುಗು)
ಪಾತ್ರ:- ಕನ್ನಾಂಬ, ಸಿ ಎಸ್. ಆರ್., ಬಳ್ಳಾರಿ ಲಲಿತ
ರಾಮಕೃಷ್ಣ ಶಾಸ್ತ್ರಿ ಮುಂತಾದವರು

ರಾಜಕಮಲ್
ಮೈಸೂರು
8-7-50 ರಿಂದ
ದಿನವಹಿ 3 ಆಟಗಳು
ರಾಜಕಮಲ್ ಕಲಾ ಮಂದಿರ್‌ರವರ
* ಭೂಲ್ *
(ಹಿಂದಿ)
ಭೂಮಿಕೆ — ಕಿಶೋರ್ ಶರ್ಮಾ, ಸುಮತಿ,
ಕೇಶವರಾವ್ ದಾತೆ, ರೇಖ

ಪುಸ್ತಕಂ ೨೨ … … ಪತ್ರಿಕೆ …

ಸಂಪುಟ ೮] ಶನಿವಾರ ೮-೭-೫೦ [ಸಂಚಿಕೆ …

ಅಮೆರಿಕಾ ದೇಶಕ್ಕೆ ರಷ್ಯದ ಎಚ್ಚರಿಕೆ

ವನ ಮಹೋತ್ಸವಗಳು

ಮೈಸೂರು ೮

ನೆನ್ನೆ ದಿನ ಬೆಳಿಗ್ಗೆ ರಾಜಧಾನಿಯ ಕೃಷ್ಣರಾಜ ನರಸಿಂಹ ಮುಖಂಡರ ಆಯುರ್ವೇದ ಆಸ್ಪತ್ರೆಯಲ್ಲಿ ನಗರ ಸಭಾಧ್ಯಕ್ಷರಾದ ಶ್ರೀ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ವನ ಮಹೋತ್ಸವವು ನಡೆಯಿತು. ಸಂಸ್ಕೃತ ಆಯುರ್ವೇದ ಸಂಸ್ಥೆಗಳ ಮುಖ್ಯಾಧಿಕಾರಿಗಳಾದ ಶ್ರೀ ನಾರಾಯಣರಾಯರು ಮುಂತಾದವರೂ ಭಾಗವಹಿಸಿದ್ದರು.

ಅದರ ತರುವಾಯ ನೆನ್ನೆ ಸಂಜೆ ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಉತ್ಸವವು ನಡೆಯಿತು.

ನೆನ್ನೆ ಸಂಜೆ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ವನ ಮಹೋತ್ಸವವು ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ … ರವರು ಸ್ವಾಗತ ಭಾಷಣ ಮಾಡಿದರು. ಶ್ರೀ ನಾರಾಯಣರಾವ್ ಮುಂತಾದವರು ಮತ್ತು ಶ್ರೀ ಸಿಂಗ್ರಯ್ಯಂಗಾರ್ಯರು ಮತ್ತು ಶ್ರೀ ಟಿ. ವೆಂಕಟರಮಣಯ್ಯನವರುಗಳು ವನ ಮಹೋತ್ಸವದ ಅಗತ್ಯ ಮತ್ತು ಮಹತ್ವವನ್ನು ಕುರಿತು ಭಾಷಣ ಮಾಡಿದರು. ಬಂದಿದ್ದ ಅತಿಥಿಗಳೆಲ್ಲರೂ ಒಂದೊಂದು ಗಿಡವನ್ನು ನೆಟ್ಟರು.

ಸರ್ಕಾರಿ ರೇಷ್ಮೆ ಕಾರ್ಖಾನೆಯ ಆವರಣದಲ್ಲಿ ಕಾರ್ಮಿಕರೂ ಮತ್ತು ಅಧಿಕಾರಿಗಳೂ ನೆನ್ನೆ ವನಮಹೋತ್ಸವವನ್ನು ಆಚರಿಸಿದರು. ಕಾರ್ಖಾನೆ ಸೂಪರಿಂಟೆಂಡೆಂಟರಾದ ಶ್ರೀ … ಸುಬ್ಬರಾಯರೂ ಮತ್ತು ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ … ಪ್ರಸಾದರವರೂ ಸಸಿಗಳನ್ನು ನೆಟ್ಟರು.

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ

ಕೀರ್ತಿಶೇಷ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತಿ ಮಹೋತ್ಸವವನ್ನು ಇದೇ ತಿಂಗಳು ೨೦ನೇ ತಾರೀಖು ಸಂಜೆ ೬ ಘಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ನೆರವೇರಿಸಲಾಗುವುದು. ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ಎಸ್. ಸಿದ್ದಯ್ಯನವರು ಅಧ್ಯಕ್ಷತೆಯನ್ನು ವಹಿಸುವರು.

ರಾಜಧಾನಿಯಲ್ಲಿ ಇಂಜನಿಯರಿಂಗ್ ಕಾಲೇಜ್ ಸ್ಥಾಪನೆ ಪ್ರಯತ್ನ

ರಾಜಧಾನಿಯ ಸ್ಥಾಪಕರ … ಟ್ರಸ್ಟ್ ಅಥವಾ ಇಂಜನಿಯರಿಂಗ್ ಸಂಸ್ಥೆಯವರು ಇಂಜನಿಯರಿಂಗ್ ಕಾಲೇಜನ್ನು ಸ್ಥಾಪಿಸುವ ಬಗ್ಗೆ ವಿಶ್ವವಿದ್ಯಾನಿಲಯದ ಈ ಸಮಿತಿಯವರು ನೆನ್ನೆ ಬೆಳಿಗ್ಗೆ ಮೇಲ್ಕಂಡ ಸಂಸ್ಥೆಗೆ ಭೇಟಿ ಕೊಟ್ಟು ಅಲ್ಲಿನ ಕೆಲಸ ಕಾರ್ಯಗಳನ್ನೂ ಮತ್ತು ಅದಕ್ಕೆ ಕೊಡಲಿರುವ ಸಿವಿಲ್ ಕಟ್ಟಡವನ್ನೂ ಪರಿಶೀಲಿಸಿದರು. ನೆನ್ನೆ ಬೆಳಿಗ್ಗೆ ೧೧ ಘಂಟೆ ಸಮಯದಲ್ಲಿ ಸಮಿತಿಯವರು ವಿಶ್ವವಿದ್ಯಾನಿಲಯದ ಕೌನ್ಸಿಲ್ ಹಾಲಿನಲ್ಲಿ ಸಭೆ ಸೇರಿ ಇಂಜನಿಯರಿಂಗ್ ಕಾಲೇಜಿನ ಸ್ಥಾಪನೆ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿದರು. ಇದೇ ತಿಂಗಳು ೧೫ನೇ ತಾರೀಖು ನಡೆಯಲಿರುವ ವಿಶ್ವವಿದ್ಯಾಲಯದ ಕೌನ್ಸಿಲ್ಲಿನ ಸಭೆಯಲ್ಲಿ ಆ ವರದಿಯನ್ನು ಪರಿಶೀಲಿಸಲಾಗುವುದು.

ಜನದ ಶಕ್ತಿ ಮುಕದ ವ್ಯವಹಾರ

ಮೈಸೂರು ೮

ಅರಮನೆ ಜನದ ಶಕ್ತಿ ಮುಕದ ಸ್ಥಿರ ಪಟ್ಟಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರ ಮೇಲೆ ಡಿಸ್ಟ್ರಿಕ್ಟ್ ಜಡ್ಜ್‌ರ ಕೋರ್ಟಿನಲ್ಲಿ ಶ್ರೀ ಎಂ. ಎಸ್. … ವಗೈರೆಯವರು ಹೂಡಿದ್ದ ದಾವಾ ವಜಾ ಆಗಿ ಶ್ರೀ ಶ್ರೀಗಳವರ ಪರವಾಗಿ ತೀರ್ಮಾನವಾಗಿದೆ.

ಬಿ. ಎಸ್. ಸಿ. ವಿದ್ಯಾರ್ಥಿಗಳಿಗೆ ಫಿಲೋಮಿನಾ ಕಾಲೇಜಿನಲ್ಲಿ ಸ್ಥಳ

ರಾಜಧಾನಿಯ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ ಓದಲು ಸ್ಥಳ ದೊರೆಯದ ಬಿ. ಎಸ್. ಸಿ. (ಪಿ. ಸಿ. ಎಂ. ಭಾಗದ) ವಿದ್ಯಾರ್ಥಿಗಳು ಕೂಡಲೇ ಸೆಂಟ್ ಫಿಲೋಮಿನಾ ಕಾಲೇಜಿಗೆ ಅರ್ಜಿಗಳನ್ನು ಹಾಕಿಕೊಂಡು ಇದೇ ೧೨ನೇ ತಾರೀಖಿನೊಳಗೆ ಕಾಲೇಜಿಗೆ ಸೇರಬೇಕೆಂದು ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ತಿಳಿಸಿರುತ್ತಾರೆ.

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿ ೧೦ನೇ ತಾರೀಖು ಆರಂಭ

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಸರ್ವಿಸ್ಸಿನ ಗೋಷ್ಠಿಯು ಬರುವ ಸೋಮವಾರ ಆರಂಭವಾಗಿ ೧೯ನೇ ಬುಧವಾರ ಮುಕ್ತಾಯವಾಗುವುದು. ಇದು ಶ್ರೀಯುತ ಮಹಾರಾಜರು ಇದರ ಪ್ರಾರಂಭೋತ್ಸವವನ್ನು ಇಲ್ಲಿನ ಗವರ್ನ್ಮೆಂಟ್ ಹೌಸಿನ ಬಂಗಲೆಯಲ್ಲಿ ನೆರವೇರಿಸುವರು. ಅಮೆರಿಕದಿಂದ ಬರುವ ೧೨ ಜನ ಪ್ರೊಫೆಸರು ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ಹಾಗೆ ಆಗಮಿಸುವರು. ಯೂರೋಪಿನಿಂದ ಇತರ ಪ್ರತಿನಿಧಿಗಳು ಹಾಜರಿದ್ದು ದಿನ ಬರುವರು.

ಆಯುರ್ವೇದ ಭಾಷಣ

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪದವೀಧರರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೪ ಘಂಟೆಗೆ ಆಯುರ್ವೇದ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಮೀಟಿಂಗ್ ವೈದ್ಯ … ಶ್ರೀ ಎಸ್. ಅಶ್ವತ್ಥನಾರಾಯಣರಾಯರವರ 'ಅಭಯಾ' ಎಂಬ ವಿಷಯವಾಗಿ ಭಾಷಣಮಾಡುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಪ ರಿ ಕ್ಷೆ

ಮೈಸೂರು ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಶಾರದಾ … ಶಾಲೆಯಲ್ಲಿ ನಾಳೆ ಮಧ್ಯಾಹ್ನ ೩ ಘಂಟೆಗೆ ಶ್ರೀ ಎಂ. ಎಸ್. ನಾರಾಯಣ ಶಾಸ್ತ್ರಿಗಳವರ ಪರೀಕ್ಷೆಯು ನಡೆಯುವುದು.

ಕೊರಿಯಾ ಬಗ್ಗೆ ಅಮೆರಿಕಕ್ಕೆ ರಷ್ಯದ ಎಚ್ಚರಿಕೆ

ಅಮೆರಿಕವು ಕೊರಿಯಾದ ಮೇಲೆ ಹೇರಿರುವ ಸೈನಿಕ ದಿಗ್ಬಂಧನದ ಬಗ್ಗೆ ರಷ್ಯವು ಅಮೆರಿಕಕ್ಕೆ ಒಂದು ಪತ್ರವನ್ನು ಬರೆದು ಈ ದಿಗ್ಬಂಧನದ ಪರಿಣಾಮವನ್ನು ಅದು ಭರಿಸಬೇಕಾಗುವುದೆಂದು ಎಚ್ಚರಿಸಿದೆ.

ಶಾಂತಿ ಸ್ಥಾಪನೆಗಾಗಿ ಅಣು ಶಕ್ತಿಯ ಬಳಕೆ

ಜಲಜನಕ ಬಾಂಬಿನ ತಯಾರಿಕೆ ಬಗ್ಗೆ ಸಂಪೂರ್ಣ ಪರಿಶೋಧನೆ ನಡೆಸಲೂ ಮತ್ತು ಅಣು ಬಾಂಬಿನ ತಯಾರಿಕೆಯನ್ನು ಹೆಚ್ಚಿಸಲೂ ಅಮೆರಿಕದ ಅಧ್ಯಕ್ಷ ಟ್ರೂಮನ್ನರು … ಕೋಟಿ ಡಾಲರುಗಳನ್ನು ಮಂಜೂರು ಮಾಡಬೇಕೆಂದು ಅಲ್ಲಿನ ಕಾಂಗ್ರೆಸ್ಸನ್ನು ಕೇಳಿರುವರು. ಪ್ರಪಂಚದಲ್ಲಿ ಶಾಂತಿ ಸ್ಥಾಪನೆ ಮತ್ತು ಶಾಂತಿ ಪಾಲನೆಗಾಗಿ ಅಣುಶಕ್ತಿಯನ್ನು ಉಪಯೋಗಿಸಬೇಕೆಂಬುದು ನಮ್ಮ ಧ್ಯೇಯವೆಂದೂ, ಈ ಧ್ಯೇಯಸಾಧನೆಗಾಗಿ ಅಣುಶಕ್ತಿಯನ್ನು ಭದ್ರತೆಗಾಗಿ ಉಪಯೋಗಿಸುವುದು ಅಗತ್ಯವೆಂದೂ ಅವರು ಹೇಳಿರುವರು.

ಮದುವೆ ಗುಂಪಿನ ಮೇಲೆ ಸಿಡಿಲಿಗೆ ತುತ್ತಾದವರು

ಪೂನಾ … ಹಳ್ಳಿ ೭ ಜನರು ಒಂದು ಮದುವೆ ಗುಂಪಿನವರು ನೆನ್ನೆ ಸಂಜೆ ಮಳೆಯಲ್ಲಿ ಹೋಗುತ್ತಿದ್ದಾಗ ಅವರ ಮೇಲೆ ಸಿಡಿಲು ಹೊಡೆದು ಎಲ್ಲರೂ ಸತ್ತರೆಂದು ವರದಿಯಾಗಿದೆ.

ಮೈಸೂರು ಜಿಲ್ಲೆ ಮತ್ತು ಗೃಹ ಸಚಿವರ ಪ್ರವಾಸ

ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಇದೇ ೧೧ನೇ ತಾರೀಖು ಬೆಳಿಗ್ಗೆ ಟಿ. ನರಸೀಪುರ, ಮೂಗೂರು, ಸಂತೆಮರಳ್ಳಿ, ಯಳಂದೂರು ಮತ್ತು ಚಾಮರಾಜನಗರಗಳಿಗೆ ಭೇಟಿ ಕೊಡುವರು. ಆ ದಿನ ಸಂಜೆ ಮಳವಳ್ಳಿ ತಾಲ್ಲೂಕಿನಲ್ಲಿ ಸಭೆಯಲ್ಲಿ ಭಾಗವಹಿಸುವರು. ೧೨ನೇ ತಾರೀಖು ಅವರು ಶ್ರೀ ಚಾಮರಾಜನಗರದ ಜಿಲ್ಲೆಗೆ ಹಿಂದಿರುಗುವರು.

… … ಸಂಸ್ಥೆಯ ಸಭೆ

ಮೈ. ಸು. ಪ್ರೆಸ್ ಬೆಂಗಳೂರು ೮

… … … ಸಂಘದ ಕಾರ್ಯಕಾರಿ ಸಮಿತಿ … ಸುಮಾರು ೧೨೦೦ ರೂ. ಎಂದು ನಿರ್ಧರಿಸಲಾಗಿದೆ.

○ ನಗರದಲ್ಲಿ ನಡೆದ … ೧೦ ತಿಂಗಳ … … ನಡೆಯುವುದು. ಪ್ರಾಂತದ ಸಮಿತಿಯಲ್ಲಿ … … ಪ್ರಾಂತ ಪ್ರತಿನಿಧಿ ವ್ಯವಸ್ಥೆ ಕೊಡಲಾಗುವುದು.

○ ಬೆಂಗಳೂರು … … ಕಳ್ಳತನದ ನಷ್ಟ ಶ್ರೀ ಆ. ವಿ. ಗಣಪತಿ ಎಂಬುವರ ಬಳಿ … ತಿಂಗಳ … … ಹಾಗೂ … … ಗಿ ತಿಳಿಸಲಾಗಿದೆ.

○ ಶ್ರೀ ಎಸ್. … … ೩ ತಿಂಗಳ … … ೩ ತಿಂಗಳ … ಸೆಕ್ರೆಟರಿ …

ಪ್ರಪಂಚ ಯುದ್ಧದ ಸಂಭವವಿಲ್ಲವೆಂದು ನೆಹರೂ

ಕೊರಿಯಾ ಯುದ್ಧದಿಂದ ಕೂಡಲೇ ಪ್ರಪಂಚದ ಯುದ್ಧ ಆಗಬಹುದು ಮತ್ತೆಗೆ ಯಾವ ಸೂಚನೆಯೂ ಇಲ್ಲವೆಂದು ನೆಹರೂರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಬ್ರಿಟಿಷ್ ವಿಮಾನದ ಮೇಲೆ ಕಮ್ಯೂನಿಸ್ಟರ ಗುಂಡು

ಹಾಂಗ್‌ಕಾಂಗಿನ ಸಮೀಪದಲ್ಲಿ ಹಾರುತ್ತಿದ್ದ ಬ್ರಿಟಿಷ್ ವಿಮಾನದ ಮೇಲೆ ಚೀನಾದ ಕಮ್ಯೂನಿಸ್ಟರ ವಿಮಾನ ನಾಶಕ ತೋಪಿನಿಂದ ಎರಡು ಬಾರಿ ಗುಂಡುಗಳನ್ನು ಹಾರಿಸಲಾಯಿತು. ಆದರೆ ಏನೂ ಹಾನಿಯಾಗಲಿಲ್ಲವೆಂದು ತಿಳಿದುಬಂದಿದೆ.

ಶ್ರೀ ಕೃಷ್ಣಕಳಾ ಮಂದಿರ

ರಾಜಧಾನಿಯ ಶ್ರೀ ಕೃಷ್ಣಕಳಾ ಮಂದಿರದ ದ್ವಿತೀಯ ವಾರ್ಷಿಕೋತ್ಸವವು ಮೊನ್ನೆ ದಿನ ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. … ನವರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾರತದ ಪ್ರಾಚೀನ ಕಲೆಗಳಲ್ಲಿ ನೃತ್ಯವು ಒಂದು ಶ್ರೇಷ್ಠ ಕಲೆಯೆಂದೂ ಕಲೆಯ ಎಲ್ಲ ಅಂಗಗಳನ್ನೂ ಉತ್ತಮ ವ್ಯಾಯಾಮ … ಕಲಿಯುವುದಕ್ಕೆ ಸಂಸ್ಥೆಯಲ್ಲಿ ಕಲಿಸಬೇಕೆಂದೂ ಅಧ್ಯಕ್ಷರು ಹೇಳಿದರು. ಮಂದಿರದ ಸಂಸ್ಥಾಪಕರಾದ ಶ್ರೀ … ರವರು ವಾರ್ಷಿಕ ವರದಿಯನ್ನು ಓದಿದರು. ಶ್ರೀ … ರವರಿಂದ ನೃತ್ಯ ಪ್ರದರ್ಶನ ಮತ್ತು ಪ್ರಸಾದ ವಿನಿಯೋಗವಾದ ನಂತರ ಸಭೆಯು ಮುಕ್ತಾಯವಾಯಿತು.

ಶಿಶು ಸಾಹಿತ್ಯ ಸಂಘಟನೆಗೆ ಮಹಾರಾಜರ ಭೇಟಿ

ನೆನ್ನೆ ದಿನ ಶ್ರೀಯುತ ಮಹಾರಾಜರವರು ಮೈಸೂರು ಶಿಶು ಸಾಹಿತ್ಯ ಸಂಘಕ್ಕೆ ಅಧ್ಯಕ್ಷರಾದ ಶ್ರೀ ಎ. ಸೀತಾರಾಮಯ್ಯ ಮತ್ತು ಇತರ ಸದಸ್ಯರೊಡನೆ ಭೇಟಿ ಕೊಟ್ಟರು. ಅಲ್ಲಿಯ ಕೆಲಸ ಕಾರ್ಯಗಳನ್ನು ಅವಲೋಕಿಸಿ ಮೆಚ್ಚಿಕೆಯನ್ನು ಸೂಚಿಸಿದರು. ಅಂತರ ರಾಷ್ಟ್ರೀಯ ವಿದ್ಯಾ ಪರಿಷತ್ತಿನ ಜಗತ್ಸಂಸ್ಥೆಯ ಆಶ್ರಯದಲ್ಲಿ ನಡೆಯುವಾಗ ಪುಸ್ತಕಗಳ ಪ್ರದರ್ಶನವನ್ನು ಅಲ್ಲಿ ಏರ್ಪಡಿಸಬೇಕೆಂದು ಸೂಚಿಸಿದ್ದರು.

ಸಮುದ್ರ ಮಧ್ಯದಲ್ಲಿ ೩೫೦ ಮೂಟೆ ಅಕ್ಕಿ ವಶ

ಪೂರ್ವ ಗೋದಾವರಿಯಿಂದ ವಿಶಾಖ ಪಟ್ಟಣದ ಜಿಲ್ಲೆಗೆ ಕಳ್ಳತನದಲ್ಲಿ ಸಾಗಿಸುವ ಸಲುವಾಗಿ ೯ ದೋಣಿಗಳಲ್ಲಿ ತುಂಬಿದ್ದ ೩೫೦ ಚೀಲಗಳ ಅಕ್ಕಿಯನ್ನು ವಶಪಡಿಸಿಕೊಳ್ಳಲು ಮದ್ರಾಸು ಪೊಲೀಸರು ಕಳೆದ ಗುರುವಾರ ರಾತ್ರಿ ೮॥ ಮೈಲಿ ದೂರ ಸಮುದ್ರದಲ್ಲಿ ಅರ್ಧ ಗಂಟೆ ಹೋರಾಡಬೇಕಾಯಿತು. ಈ ಸಂಬಂಧವಾಗಿ ೩೮ ಜನರ ದಸ್ತಗಿರಿಯಾಗಿದೆ

ಟ್ರಾಲಿ ಬಸ್ ಸರ್ವೀಸ್ ಏರ್ಪಾಡು ರದ್ದಾಗಿಲ್ಲ

ಬೆಂಗಳೂರು ನಗರದಲ್ಲಿ ಸಂಚಾರದ ಅನುಕೂಲತೆಗಾಗಿ ಸರ್ಕಾರದವರು ಏರ್ಪಾಡು ಮಾಡಬೇಕೆಂದಿದ್ದ ವಿದ್ಯುಚ್ಛಕ್ತಿ ಟ್ರಾಲಿ ಬಸ್ ಸರ್ವೀಸಿನ ಯೋಜನೆಯನ್ನು ಬಿಟ್ಟುಬಿಡಲಾಗಿದೆಯೆಂದು ಪ್ರಕಟವಾಗಿರುವುದು ನಿಜವಲ್ಲವೆಂದು ಸರ್ಕಾರದ ಪ್ರಕಟಣೆಯು ತಿಳಿಸಿರುತ್ತದೆ. ಅದಕ್ಕಾಗಿ ನಡೆಯಬೇಕಾಗಿದ್ದ ಸರ್ವೆ, ಯೋಜನೆಯ ಖರ್ಚಿನ ಅಂದಾಜು ಮುಂತಾದ ಕಾರ್ಯಗಳು ಮುಗಿದಿರುವುದರಿಂದ ಸಿಬ್ಬಂದಿಯನ್ನು ಬೇರೆ ಇಲಾಖೆಗಳಿಗೆ ವರ್ಗ ಮಾಡಲಾಗಿದೆಯೆಂದು ತಿಳಿಸಲಾಗಿದೆ

ಕನ್ನಡ ಸಾಹಿತ್ಯ ಪರಿಷತ್ತಿನ ಈ ವರ್ಷದ ಪ್ರಬಂಧ ಸ್ಪರ್ಧೆ

ವೀರಶೈವಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸಗಳಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಶ್ರೀ ತೊಟಗೆರೆ ಶಂಕರಪ್ಪನವರಿಂದ ಪ್ರಬಂಧ ಸ್ಪರ್ಧೆಯನ್ನು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿರುತ್ತಾರೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ೨೫ ರೂ.ಗಳ ಒಂದೇ ಒಂದು ಬಹುಮಾನವನ್ನು ಕೊಡಲಾಗುವುದು. ಭಾಗವಹಿಸುವವರು ೧ ರೂಪಾಯಿನ ಪ್ರವೇಶ ಧನವನ್ನು ಕಳುಹಿಸಿಕೊಡಬೇಕು. ೧೯೫೦ನೇ ಸೆಪ್ಟೆಂಬರ್ ೩೦ ರೊಳಗಾಗಿ ಪರಿಷತ್ತಿನ ಕಛೇರಿಗೆ ಪ್ರಬಂಧವು ತಲುಪಬೇಕು

ರಘುಲಾಲ್ & ಕೋ.

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

10 ಅವೆನ್ಯೂ ಶ್ರೀನಿವಾಸಾಚಾರ್ಲು ರಸ್ತೆ,

ಬೆಂಗಳೂರು.

ಗಣೇಶಾ ಟಾಕೀಸ್

-7-50 ರಿಂದ ಪ್ರತಿ ದಿನ 3 ಆಟಗಳು

ಮೈಟಿ ಜೋ ಯಂಗ್

MIGHTY JOE YOUNG

ಪಾತ್ರ-ಟೆರ್ರಿ ಮೂರ್, ಬೆನ್ ಜಾನ್ಸನ್

8 ಮತ್ತು 9ನೇ ತಾರೀಖಿನಲ್ಲಿ

ಬೆಳಿಗ್ಗೆ ೧೦-೩೦ ಗಂಟೆಗೆ

ಇದೇ ಚಿತ್ರವು ಪ್ರದರ್ಶಿಸಲ್ಪಡುವುದು.

ಬಂದಿನ ಬದಲಾವಣೆ -

14—7—50ನೇ ಶುಕ್ರವಾರದಿಂದ

ಬ ಡಿ ಬ ಹೆ ನ್

ಶಸ್ತ್ರ ಚಿಕಿತ್ಸೆಯಿಂದ ಹಸ್ತ ಊನ ಮಾಡಿದುದಕ್ಕೆ ದಂಡ

ಬ್ರಿಟನ್ನಿನ ಆಸ್ಪತ್ರೆಯೊಂದರಲ್ಲಿ ಕ್ರಾವ್‌ಡಾನ್ ಎಂಬ ವೈದ್ಯರು, ಟಾಟ್ರೆಹಾಮರಿ ಎಂಬ ೧೨ ವರ್ಷದ ಹುಡುಗಿಗೆ ಕೈ ಮೇಲೆ ಎದ್ದಿದ್ದ ಹುಣ್ಣನ್ನು ಆಪರೇಷನ್ ಮೂಲಕ ಸರಿಪಡಿಸಲು ಪ್ರಯತ್ನಪಟ್ಟು ವಿಫಲರಾದರು. ಇದರಿಂದ ಆ ಹುಡುಗಿಯ ಕೈ ಶಕ್ತಿಯು ಕೈನಂತೆ ನಿಶ್ಚೇಷ್ಟವಾಯಿತು. ಇದಕ್ಕಾಗಿ ಮೊಕದ್ದಮೆ ಹೂಡಲಾಗಿ, ಬ್ರಿಟನ್ನಿನ ಆರೋಗ್ಯ ಶಾಖೆಗೆ ೫ ಸಾವಿರ ಪೌಂಡುಗಳ ದಂಡವನ್ನು ವಿಧಿಸಲಾಯಿತು

ಯೋಗಾನಂದ ವಿದ್ಯಾರ್ಥಿ ನಿಲಯ

ಆರ್ಥಿಕವಾದ ಶ್ರೀವೈಷ್ಣವ ಬ್ರಾಹ್ಮಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಾಹೆಯಾನ ಇಪ್ಪತ್ತು ರೂಪಾಯಿಗಳಂತೆ ೧ ಯೂನಿಟ್ ದರದಲ್ಲಿ ಊಟಕ್ಕೆ ಮಾತ್ರ ಏರ್ಪಾಡು ಮಾಡಲಾಗುತ್ತದೆಯೆಂದೂ, ಸೇರಬಿಚ್ಛಿಸುವವರು ಈ ತಿಂಗಳ ೧೫ನೇ ತಾರೀಖಿನೊಳಗೆ ಅರ್ಜಿಗಳನ್ನು ಹಾಕಬಹುದೆಂದೂ ಲಕ್ಷ್ಮೀಪುರದಲ್ಲಿರುವ ಶ್ರೀ ಯೋಗಾನಂದ ಮಠದ ಏಜೆಂಟರಾದ ಶ್ರೀ ಎಸ್ ಆರ್ ಶರ್ಮರವರು ತಿಳಿಸಿರುತ್ತಾರೆ

ಗೃಹಕೃತ್ಯದ ತೊಂದರೆಯಿಂದ ಅಧಿಕಾರಿ ಪತ್ತೆಯಿಲ್ಲ

ತಿರುಚನಾಪಳ್ಳಿಯ ಸಾರ್ವಜನಿಕ ಆರೋಗ್ಯ ಇಲಾಖೆಯ ಅ॥ ಇಂಜನಿಯರರಾಗಿದ್ದ ಎಸ್ ಆರ್ ಶ್ರೀನಿವಾಸನ್‌ರವರು ಗೃಹಕೃತ್ಯದ ತೊಂದರೆ ನಿಮಿತ್ತ ನೌಕರಿಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಕೆಲವು ದಿನಗಳ ಹಿಂದೆ ಇವರ ಇಲಾಖೆಯಲ್ಲಿ ಸಾರ್ವಜನಿಕ ಆರೋಗ್ಯದ ಬಗ್ಗೆ ಶಿಕ್ಷಣ ಹೊಂದಿದ್ದರಲ್ಲದೆ ಅಮೇರಿಕದಲ್ಲಿ ಉತ್ತಮ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನವೂ ಇವರಿಗೆ ದೊರೆಯುವುದಾಗಿತ್ತು. ಈಚೆಗೆ ಇವರು ಮನೆಯನ್ನು ಬಿಟ್ಟು ಎಲ್ಲೋ ಹೊರಟುಹೋಗಿದ್ದಾರೆ. ಕೇಂದ್ರ ಸ್ಟೈಲ್ಸ್ ಮಂತ್ರಿ ಶ್ರೀ ಕೆ ಸಂತಾನಂರವರಿಗೆ ಇವರು ಸಂಬಂಧಿಗಳು

ಅಮೇರಿಕದ ಆಯವ್ಯಯದಲ್ಲಿ ೧೫೦೦ ಕೋಟಿ ರೂ ಇಳಿತಾಯ

ಕಳೆದ ೩೦ನೇ ತಾರೀಖಿಗೆ ಅಂತ್ಯವಾದ ಅಮೇರಿಕ ಸರ್ಕಾರದ ಆಯವ್ಯಯದಲ್ಲಿ ೧೫೦೦॥ ಕೋಟಿ ರೂ.ಗಳಷ್ಟು ಹಣದ ಇಳಿತಾಯ ವಾಗಿರುವುದಾಗಿ ವರದಿಯಾಗಿದೆ

9 ಗಜದ ಧರ್ಮಾವರದ ರೇಷ್ಮೆ ಸೀರೆಗಳಿಗೆ

9 ಗಜದ ನಾಗಪುರದ ನೂಲಿನ ನೈಸ್ ಸೀರೆಗಳಿಗೆ

M V. ಭೋಜಯ್ಯ ಬಿ ಎ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಾಜಕಮಲ್

ಮೈಸೂರು

8—7—50 ರಿಂದ

ದಿನವೂ 3 ಆಟಗಳು

ರಾಜಕಮಲ್

ಕಲಾ ಮಂದಿರ್‌ರವರ

ಭೂಲ್

(ಹಿಂದಿ)

ಭೂಮಿಕೆ — ಪಿರ್ಮಲ್ ಕಪೂರ್, ಸುಶೀಲ್,

ಕೇಶವರಾವ್ ದಾತೆ, ಲೀಲ

7-7-50ರಿಂದ ಬೆಳಗಿನ ಪ್ರದರ್ಶನ 4 ದಿನಗಳು ಮಾತ್ರ

ಸಿಲ್ವರ್ ಕ್ವೀನ್ (ಹಿಂದಿ)

ಪ್ರಭಾ ★ **7 7 50 ರಿಂದ**

ಜನೋತ್ಸ ಪ್ರಾರಂಭ

ರಣಜಿತ್‌ರವರ ಅತ್ಯುತ್ತಮ ಹಿಂದಿ ಚಿತ್ರ

- ನ ಜಾ ರೆ -

ಪಾತ್ರ-ಶಶಿಕಲಾ, ಆಗಾ ಜಾನ್, ಸತೀಶ್ ಶಾಂತಿ ಮಧುಕರ್

ಈ ಚಿತ್ರವು ಬೊಂಬಾಯಿ ಲಿಬರ್ಟಿ ಚಿತ್ರ ಮಂದಿರದಲ್ಲಿ ೩೫,೦೦೦ ರೂ ಗಳನ್ನು ಒಂದು ವಾರಕ್ಕೆ ಸಂಗ್ರಹಿಸಿದೆ.

ಬೊಂಬಾಯಿಯಲ್ಲಿ ೪ ಅಂಗುಲ ಮಳೆ

ನೆನ್ನೆ ದಿನ ಬೆಳಿಗ್ಗೆ ಬೊಂಬಾಯಿನಲ್ಲಿ ಸುಮಾರು ಆರು ಘಂಟೆ ಅವಧಿಯಲ್ಲಿ ನಾಲ್ಕು ಅಂಗುಲಗಳಷ್ಟು ಮಳೆಯಾಗಿರುವುದೆಂದು ವರದಿಯಾಗಿದೆ. ನಗರದ ಅನೇಕ ಕಡೆ ಮಂಡಿಯುದ್ದ ನೀರು ನಿಂತಿತ್ತು. ಒಂದು ಮನೆಯು ಕುಸಿದುಬಿದ್ದು ಒಬ್ಬನಿಗೆ ಗಾಯವಾಗಿರುವುದಾಗಿ ತಿಳಿದುಬಂದಿದೆ

ದೇವನೂರು ಪ್ರೌಢ ಶಾಲೆಯ ಪ್ರಾರಂಭ

ದೇವನೂರಿನಲ್ಲಿ ಶ್ರೀ ಗುರುಮಲ್ಲೇಶ ಪ್ರೌಢ ಶಾಲೆಯ ಪ್ರಾರಂಭೋತ್ಸವವು ಶ್ರೀ ಕೋಟೆಯಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನೆರವೇರಿತು. ದೇವತಾ ಪ್ರಾರ್ಥನೆಯ ನಂತರ, ಶಾಲಾ ಸಭಾಪತಿಗಳಾದ ಶ್ರೀ ಡಿ ಎಂ ಸಿದ್ದಯ್ಯನವರು ಸ್ವಾಗತ ಭಾಷಣ ಮಾಡಿದರು. ಶಾಲೆಯ ಮುಖ್ಯೋಪಾಧ್ಯಾಯರಾದ-ಶ್ರೀ ಎ ಓ ಕೃಷ್ಣರಾಯರು ಭಾಷಣ ಮಾಡಿ, ವಿದ್ಯಾಭ್ಯಾಸದ ಅವಶ್ಯಕತೆ ಮತ್ತು ಉದ್ದೇಶಗಳನ್ನು ವಿವರಿಸಿದರು. ಶ್ರೀ ಜಿ ಎಸ್. ಶ್ರೀನಿವಾಸಮೂರ್ತಿ, ಬಿ ಪುಟ್ಟಮಲ್ಲಪ್ಪನವರೂ ಭಾಷಣಗಳನ್ನು ಮಾಡಿದನಂತರ ಅಧ್ಯಕ್ಷರು ಶಾಲೆ ಆರಂಭೋತ್ಸವವನ್ನು ನೆರವೇರಿಸಿದರು. ಮಂಗಳಾರತಿ, ಪಾನಕೋಸಂಬರಿ ಗಳಾಗಿ ಸಮಾರಂಭವು ಮುಕ್ತಾಯವಾಯಿತು

ಬಂಗಲೆ ಬಿಡುವಿಗಿದೆ

ಕಾಂತರಾಜ ಅರಸ್ ರೋಡಿನಲ್ಲಿರುವ 1205ನೇ ನಂಬರ್ ಮನೆ ಇದರಲ್ಲಿ 50 ರೂ.ಗಳು ಬಾಡಿಗೆ ಬರುವ ಎರಡು ಮನೆಗಳಿವೆ. ಮುಂದೆ ವಿಶಾಲವಾದ ಕಾಂಪೌಂಡು, ನಲ್ಲಿ, ದೀಪ, ಭಾವಿ, ಎಲ್ಲವೂ ಇವೆ ಅಲ್ಲೇ ವಿಚಾರಿಸಿ

ಚಾಮುಂಡೇಶ್ವರಿ ಟಾಕೀಸ್

ತಾ॥ 8-7 50 ನೇ ಶನಿವಾರದಿಂದ

ಪ್ರತಿ ದಿನ 3 ಆಟಗಳು

*** ಖಿಡಕಿ ***

(ಹಿಂದಿ)

ಪಾತ್ರ - ಮುನವ್ವರ್ ಸುಲ್ತಾನ, ಆಘಾ, ರೆಹನಾ ಮತ್ತು ವಿ. ಹೆಚ್. ದೇಸಾಯಿ

SRI GAYATHRI

TALKIES

From 9-7 50 Daily 3 Shows

PARAMOUNT'S

THE GREAT LOVER

With.-Bob Hope

Morning Shows

On Sat. 8th & Sun 9th

M G M's

"THE HUCKSTERS"

With -Clark Gable

Edited, printed and published by A R Nagarajan, at Sadhvi Press, D Subbiah Road, Mysore

ಸಾಧ್ವಿ 792 WEEKLY EDITION ಬಿಡಿಪ್ರತಿ ೬ ಕಾಸು

ಸಂಪುಟ ೧೮] ಭಾನುವಾರ ೯-೭-೫೦ [ಸಂಚಿಕೆ ೩೩

ಕೊರಿಯಾ ರಾಜಧಾನಿ ವಿಪತ್ತಿಗೆ ಸಿಕ್ಕುವುದೇ?

ಸಿಂಹಳದ ಹೈಕಮಿಷನರರ ಭೇಟಿ

ಮೈಸೂರು ೮

ಭಾರತದಲ್ಲಿ ಸಿಂಹಳದ ಹೈಕಮಿಷನರರಾಗಿರುವ ಶ್ರೀ ಸಿ. ಕುಮಾರಸ್ವಾಮಿಯವರು ರಾಜಧಾನಿಯ ಸರ್ಕಾರಿ ಭವನದಲ್ಲಿ ನೆನ್ನೆ ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಮಾತುಕತೆ ನಡೆಸಿದರು. ಸಿಂಹಳ ದ್ವೀಪದಲ್ಲಿ ಭಾರತೀಯ ಕಾರ್ಮಿಕರಿಗೂ ಸ್ಥಳೀಯ ಕಾರ್ಮಿಕರಿಗೂ ಯಾವ ಭೇದವನ್ನೂ ಮಾಡುತ್ತಿಲ್ಲವೆಂದು ಅವರು ಹೇಳಿದರು. ಅಲ್ಲಿ ಈಗ ೩೫ ಜನರು ಉಪಾಧ್ಯಾಯರಾಗಿರುತ್ತಾರೆ. ವಿಶ್ವವಿದ್ಯಾಲಯದವರಿಗೆ ... ಶಾಲೆಗಳಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡಲಾಗುತ್ತಿದೆ. ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾದ ಊಟ ಸರಬರಾಜಾಗುತ್ತಿದೆ-ಎಂದು ಹೇಳಿದರು. ಕೊರಿಯಾ ಯುದ್ಧದ ವಿಷಯವಾಗಿ ತಮ್ಮ ದೇಶದ ಸರ್ಕಾರದ ನೀತಿಯೇನೆಂದು ಕೇಳಲು ಅವರು ಯಾವ ಉತ್ತರವನ್ನೂ ಕೊಡಲಿಲ್ಲ.

ದಸರಾ ವಸ್ತು ಪ್ರದರ್ಶನಕ್ಕೆ ನೆಹರೂರವರ ಭೇಟಿ

ಬರುವ ಅಕ್ಟೋಬರ್ ತಿಂಗಳು ೨೦ನೇ ತಾರೀಖು ದಸರಾ ವಸ್ತುಪ್ರದರ್ಶನಕ್ಕೆ ಪ್ರಧಾನಿ ಪಂಡಿತ ನೆಹರೂರವರು ಭೇಟಿ ಕೊಡುವುದಾಗಿ ಗೊತ್ತಾಗಿದೆ.

ಷೌ ರ ಜ ಭೆ ಯ ... ಆರೋಗ್ಯ ಅಧಿಕಾರಿಗಳು

ಹಿಂದೆ ರಾಜಧಾನಿಯ ಆರೋಗ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದ ಶ್ರೀ ಎಸ್. ವೆಂಕಟಗಿರಿರಾಯರನ್ನು ಮತ್ತೆ ಅದೇ ಜಾಗದಲ್ಲಿ ಆರೋಗ್ಯಾಧಿಕಾರಿಗಳನ್ನಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ.

ಎಲ್. ಎಸ್. ಶಿಕ್ಷಣ ತರಗತಿಗಳು

ರಾಜಧಾನಿಯ ಆ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮ ಸಹಾಯ ಸಂಘದ ಆಶ್ರಯದಲ್ಲಿ ಲೋವರ್ ಸೆಕೆಂಡರಿ ಬಾಲಕ ಬಾಲಕಿಯರಿಗಾಗಿ ಈ ಮಾಹೆ ಒಂದನೇ ತಾ॥ ದಿಂದ ತರಗತಿಗಳು ನಡೆಯುತ್ತಿವೆ. ... ನೇ ತಾ॥ ನೊಳಗೆ ಸೇರಬಹುದೆಂದು ಸಂಚಾಲಕರು ತಿಳಿಸುತ್ತಾರೆ.

ಅಣು ಬಾಂಬು ತಯಾರಿಕೆ ವಿವಿಧ ಕ್ಷೇತ್ರಗಳಿಗೆ ವರ್ಗ

ಅಮೆರಿಕದ ಅಣುಬಾಂಬು ತಯಾರಿಕಾ ಕಾರ್ಖಾನೆಯನ್ನು ವಿಂಗಡಿಸಿ ಈಗ ವಿವಿಧ ಕ್ಷೇತ್ರಗಳಿಗೆ ವರ್ಗಾಯಿಸಲಾಗಿದೆ. ಯುದ್ಧಕಾಲದಲ್ಲಿ ಒಂದೇ ಕಡೆ ಕಾರ್ಖಾನೆಯು ಕೇಂದ್ರೀಕರಣದಿಂದ ಆಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳಲು ಈ ರೀತಿಯ ವ್ಯವಸ್ಥೆ ಮಾಡಲಾಗಿದೆ. ಕೊರಿಯಾ ಯುದ್ಧವು ಆರಂಭವಾಗುವ ಮುಂಚೆಯೇ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

ಮುಚ್ಚಿಹಿಡಿದು ನೋಟನ್ನು ತಿಂದನು

ಸೈಗಾನಿನ ರಾತ್ರಿ ಕ್ಲಬ್ಬೊಂದರಲ್ಲಿ ಜೂಜಾಡುತ್ತಿದ್ದ ೬೬ ವರ್ಷದ ವ್ಯಾಪಾರಿಯೊಬ್ಬ ನೋಟಿನಿಗೆ ೫೦ ಸಾವಿರ ಡಾಲ್ಯಾರನ್ನು ... ಬಂದಿತು. ಇದರಿಂದ ಅವನಿಗೆ ಹುಚ್ಚು ಹಿಡಿದಂತಾಗಿ ನೋಟುಗಳನ್ನು ಬಾಯಿಗೆ ಹಾಕಿಕೊಂಡದಲ್ಲದೆ ಅಲ್ಲಿ ಹಲವನ್ನು ತಿನ್ನಲು ಪ್ರಯತ್ನಪಟ್ಟನು. ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು.

ಗ್ರಾಮಗಳಲ್ಲಿ ವ್ಯಾಪಾರ ಪದ್ಧತಿ ತಪ್ಪಿ ವಿನಿಮಯಕ್ಕೆ ಏರ್ಪಾಡಾಗಬೇಕು

ಸ್ಥಳೀಯ ಸಂಸ್ಥೆಗಳ ಸಚಿವರಿಗೆ ಸಗರ ಶಾಸಕರ ಸಲಹೆ

ಶಿವಮೊಗ್ಗ ೬

ಶ್ರೀಯುತ ಸಗರ ರಾಮಚಂದ್ರರಾಯರು, ಮುಖ್ಯವಾದ ಸ್ಥಳೀಯ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರಿಗೆ ಪತ್ರವೊಂದನ್ನು ಬರೆದು ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವಂತೆ ಶಾಸನವಾಗಬೇಕೆಂದು ಕೋರಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬರು ಆಳುವ ವ್ಯಾಪಾರ ವ್ಯವಸ್ಥೆಯು ತಪ್ಪಬೇಕೆಂದೂ, ಅದರ ಬದಲು ಪದಾರ್ಥಗಳ ವಿನಿಮಯದ ಏರ್ಪಾಡು ಆಗಬೇಕೆಂದೂ ಇದರಿಂದ ಕಸುಬುಗಳಿಗೆ ಪರಸ್ಪರ ಗೌರವವೂ ... ಗ್ರಾಮಗಳಲ್ಲಿ ಉಂಟಾಗುವುದೆಂದೂ ಅವರು ಹೇಳಿದ್ದಾರೆ. ಅದಕ್ಕಾಗಿ ಅವರು ಎರಡು ಸಂಬಂಧದ ಸಲಹೆಗಳನ್ನು ... ಗ್ರಾಮ ಪಂಚಾಯತಿಗಳಿಗೆ ಆಡಳಿತ ಮತ್ತು ನ್ಯಾಯ ವಿಚಾರಣೆಗಾಗಿ ಪೂರ್ಣಾಧಿಕಾರ ಕೊಡುವುದು, ಎರಡನೆಯದಾಗಿ ಕಸುಬಿನವರ ಸಂಘದ ವಿಚಾರವನ್ನು ಗ್ರಾಮ ಪಂಚಾಯತಿಗೆ ವಹಿಸುವುದು, ಪ್ರತಿ ಪಂಚಾಯತಿಗೂ ಅವಶ್ಯಕವಾದ ಗ್ರಾಮ ಸೇವಾ ದಳವನ್ನು ಏರ್ಪಡಿಸುವುದು ಇದೇ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದು ಅವರು ತಿಳಿಸಿದ್ದಾರೆ.

ಬಸ್ಸಿಗೆ ವಿದ್ಯುಚ್ಛಕ್ತಿ ತಗುಲಿ ೨೧ ಜನರ ಮರಣ

ತಿರುಚ್ಚಿರಾಪಳ್ಳಿಗೆ ೧೬ ಮೈಲಿ ದೂರದಲ್ಲಿ ನೆನ್ನೆ ಪ್ರಯಾಣಿಕರ ಬಸ್ಸೊಂದಕ್ಕೆ ವಿದ್ಯುಚ್ಛಕ್ತಿಯ ತಂತಿ ತಗಲಿ ಅದರಲ್ಲಿದ್ದ ೨೧ ಜನರು ಮರಣಹೊಂದಿದ್ದಾರೆ. ಹಿಂದಿನಿಂದ ಬರುತ್ತಿದ್ದ ಮತ್ತೊಂದು ಬಸ್ಸಿಗೆ ಅವಕಾಶ ಕೊಡಲು ಈ ಬಸ್ಸು ರಸ್ತೆಯ ಪಕ್ಕಕ್ಕೆ ಸರಿದಾಗ ಮೇಲಿನಿಂದ ತಂತಿಯು ... ವೇಳೆ ... ಪ್ರಯಾಣಿಕರು ಮತ್ತು ... ಕಂಡಕ್ಟರುಗಳು ಪಾರಾಗಿ ತಮ್ಮ ಪ್ರಾಣಗಳನ್ನು ಉಳಿಸಿಕೊಂಡರು.

ಬಿ. ಎಸ್. ಸುಬ್ಬರಾಯರಿಗೆ ನೂರ್‌ಹುಸೇನರ ನೋಟೀಸು

ಮೈಸೂರು ೮

ಶ್ರೀ ದೇವೀಸಿಂಗರ ನೊಕದ್ದಮೆ ಸಂಬಂಧವಾಗಿ ರಾಜಧಾನಿಯ ಓರಿಯಂಟಲ್ ಇಂಡಸ್ಟ್ರೀಸ್ "ಮಾಲೀಕರಾದ ಶ್ರೀ ಬಿ. ಎಸ್. ಸುಬ್ಬರಾಯರು ಜನಾಬ್ ನೂರ್ ಹುಸೇನರವರ ಮೇಲೆ ಮಾನ ನಷ್ಟಕ್ಕಾಗಿ ಮೊಕದ್ದಮೆ ಹೂಡಿ ಅದು ವಜಾ ಆಯಿತಷ್ಟೆ? ಈಗ ಜನಾಬ್ ನೂರ್ ಹುಸೇನರು ಶ್ರೀ ಸುಬ್ಬರಾಯರಿಗೆ ನೋಟೀಸನ್ನು ಕೊಟ್ಟು ಹತ್ತು ಸಾವಿರ ರೂಗಳ ನಷ್ಟವನ್ನು ಕೊಡಬೇಕೆಂದು ತಿಳಿಸಿದ್ದಾರೆ.

ಹೊಸ ವಿದ್ಯುಚ್ಛಕ್ತಿ ಸರಬರಾಜು ಕೆಲಸಕ್ಕೆ ಏನಾಯಿತು

ಮೈಸೂರು ಸಂಸ್ಥಾನದ ರಾಜಪ್ರಮುಖರ ವಿದ್ಯುಚ್ಛಕ್ತಿಯ ಸರಬರಾಜಿನ ಮೇಲೆ ತೆರಿಗೆ ವಸೂಲು ಮಾಡಲಾಗುವುದೆಂದು ಹಿಂದೆ ಹೊರಡಿಸಿದ್ದರೂ ಸಹ, ಸರ್ಕಾರದವರು, ಗೃಹಗಳು ಮತ್ತು ವ್ಯವಸಾಯಕ್ಕೆ ಒದಗಿಸಲಾಗುವ ವಿದ್ಯುಚ್ಛಕ್ತಿಯ ಮೇಲೆ ತೆರಿಗೆ ವಸೂಲು ಮಾಡುವುದಿಲ್ಲವೆಂದು ತಿಳಿಯಬಂದಿದೆ. ಅವರ ಕೈಗಾರಿಕೆಗಳಿಗೆ ಒದಗುವ ವಿದ್ಯುಚ್ಛಕ್ತಿಯ ಮೇಲೆ ತೆರಿಗೆ ಹಾಕಲಾಗುವುದು. ಇದರಿಂದ ೧೦ ಲಕ್ಷ ರೂ. ವರಮಾನ ಬರುವ ನಿರೀಕ್ಷೆಯಿದೆ.

ಅರ್ಜಿ ಬಗ್ಗೆ ಸುಳ್ಳು ಹೇಳಿದುದಕ್ಕೆ ಗುಮಾಸ್ತರ ಮೇಲೆ ಕ್ರಮ

ಚನ್ನಪಟ್ಟಣ ತಾಲ್ಲೂಕು ಕಛೇರಿಯ ಆಹಾರ ಶಾಖೆಯಲ್ಲಿ ಗುಮಾಸ್ತರಾಗಿದ್ದ ಜನಾಬ್ ... ಸರೀಫ್ ಎಂಬುವರು ತಮ್ಮ ವಿದ್ಯಾ ಅರ್ಹತೆ ಬಗ್ಗೆ ಸುಳ್ಳು ಹೇಳಿರುವುದರಿಂದ ಅವರನ್ನು ವಜಾ ಮಾಡಿ ೨ ವರ್ಷಗಳ ಕಾಲ ಯಾವ ಸರ್ಕಾರಿ ನೌಕರಿಗೂ ಸೇರಲು ಅವಕಾಶವಿಲ್ಲದಂತೆ ಆಜ್ಞೆ ಹೊರಡಿಸಲಾಗಿದೆ.

ತಳೂರು ಗ್ರಾಮದಲ್ಲಿ ಕಳ್ಳತನದಲ್ಲಿ ಜೋಳ ಕುಯ್ದು ನಷ್ಟ

ಮೈಸೂರು ತಾಲ್ಲೂಕು ತಳೂರು ಗ್ರಾಮದಲ್ಲಿ ... ಹೊಲದಲ್ಲಿ ಯಾರೋ ನೆನ್ನೆ ರಾತ್ರಿ ಜೋಳವನ್ನು ಕುಯ್ದು ಬಹಳ ನಷ್ಟವನ್ನುಂಟು ಮಾಡಿರುವುದಾಗಿ ವರದಿಯಾಗಿದೆ. ಈ ರೀತಿ ಮುಂದೆ ನಡೆಯದಂತೆ ಸರ್ಕಾರದವರು ಏರ್ಪಡಿಸಬೇಕೆಂದು ಜಮೀನಿನ ಮಾಲೀಕರು ಪ್ರಾರ್ಥಿಸಿದ್ದಾರೆ.

ದ. ಕೊರಿಯದ ಹೊಸ ರಾಜಧಾನಿಗೂ ವಿಪತ್ತು ಸನ್ನಿಹಿತ

ಉತ್ತರ ಕೊರಿಯದ ಟ್ಯಾಂಕುಗಳು ಮತ್ತು ಸೈನ್ಯ ಸಮೂಹಗಳು ಅಮೆರಿಕದ ರಕ್ಷಣಾ ಸಾಲಿನಲ್ಲಿ ತೂರಿ ಕೊರಿಯ ಅರು ಪಶ್ಚಿಮ ಭಾಗದಲ್ಲಿರುವ ಒಸಾನ್ ಎಂಬ ಪಟ್ಟಣವನ್ನು ಹಿಡಿದಿರುವ ಕಮ್ಯೂನಿಸ್ಟರ ಯುದ್ಧ ಟ್ಯಾಂಕುಗಳನ್ನು ತಡೆಗಟ್ಟಲು ಅಮೆರಿಕನ್ನರು ಬಲವಾದ ತೀವ್ರತರ ಹೋರಾಟ ಮಾಡಿಕೊಂಡಿದ್ದರೆ ದಕ್ಷಿಣ ಕೊರಿಯದ ಹೊಸ ರಾಜಧಾನಿಗೂ ವಿಪತ್ತು ಸನ್ನಿಹಿತವಾಗುವುದೆಂದು ಹೇಳಲಾಗಿದೆ. ಯುದ್ಧ ಕ್ಷೇತ್ರದಿಂದ ೩೦ ಮೈಲಿ ಹಿಂದಕ್ಕೆ ಅಮೆರಿಕನ್ನರು ಒಟ್ಟಿಗೆ ... ಮೂಲಕ ಅನೇಕ ಮೆಷಿನ್‌ಗನ್ನುಗಳನ್ನು ... ಪ್ರಧಾನ ಸೇನಾಧಿಪತ್ಯವನ್ನಾಗಿ ಮಾಡಲಾಗಿದೆ. ಇದಕ್ಕೆ ಮುಂಚೆ ಅಂದರೆ ಮತ್ತೆ ಪ್ರಕಾರ ಅಮೆರಿಕನ್ನರ ಭಾರಿ ತೋಪುಗಳು ಕಮ್ಯೂನಿಸ್ಟರ ಪಡೆಯವರ ಮೇಲೆ ಬಲವಾಗಿ ಕೊರಿಯನ್ನರು ಸ್ಥಳ ಬಿಟ್ಟು ಹೋಗಿದ್ದರೆಂದು ಹೇಳಲಾಗಿದೆ. ಅಮೆರಿಕನ್ನರು ಹಾಸಕಾಗುವಾಗ ಬಹಳ ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡರು. ಈಗ ದಕ್ಷಿಣ ಕೊರಿಯಾ ರಾಜಧಾನಿಗೆ ಅಮೆರಿಕನ್ನರು ಹಾಸಕಾಗ ಬೇಕಾಗಬಹುದೆಂದು ಹೇಳಲಾಗಿದೆ.

ಅಮೆರಿಕದ ಯುದ್ಧ ನೌಕೆ ಮುಳುಗಿತು

ಉತ್ತರ ಕೊರಿಯದ ನೌಕಾ ಬಲವು ೫ ಗಂಟೆ ಕಾಲ ಕಾಳಗ ನಡೆಸಿ ಅಮೆರಿಕದ ಯುದ್ಧ ನೌಕೆಯನ್ನು ನೆನ್ನೆ ದಿನ ಮುಳುಗಿಸಿದುದಾಗಿ ಪೆಂಗ್ಯಾಂಗ್ ರೇಡಿಯೋ ವರದಿ ಮಾಡಿದೆ.

ಬಾವಿ ತೆಗೆಯಲು ಸಿದ್ಧ ಪುರುಷನ ಸಹಾಯ

ಭೂಮಿ ಯೊಳಗೆ ಒಂದು ಮೈಲಿ ದೂರದ ವರೆಗೆ ಇರುವ ವಸ್ತುಗಳನ್ನು ಕಂಡು ಹಿಡಿಯುವ ಅದ್ಭುತ ಶಕ್ತಿಯುಳ್ಳ ಸಿದ್ಧ ಪುರುಷನೊಬ್ಬನ ಎಂಬುವರ ಸಹಾಯವನ್ನು ಪಡೆದುಕೊಂಡು ಮದ್ರಾಸು ಸರ್ಕಾರದವರು ಬಾವಿಗಳನ್ನು ತೋಡಲು ಪ್ರಯತ್ನ ಪಡುವವರಾಗಿದ್ದಾರೆ. ಯಾವುದಾದರೂ ಒಂದು ಸ್ಥಳಕ್ಕೆ ಹೋಗಿ ಅವರು ಕಣ್ಣು ಮುಚ್ಚಿ ಕುಳಿತುಕೊಂಡ ಸ್ವಲ್ಪ ಹೊತ್ತಿನಲ್ಲಿಯೇ ಭೂಮಿ ಯೊಳಗೆ ಇರುವ ವಸ್ತುಗಳನ್ನು ತಿಳಿಸಬಲ್ಲರು.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ಈ ದಿನ ಪ್ರ. ... ನೀರು ೬೭-೩೩ ಅಡಿಯ ಮಟ್ಟಕ್ಕೆ ಏರಿದೆ.

ಹೋಟೇಲುಗಳಿಗೆ ವಾರಕ್ಕೆ ಆರು ದಿನ ರೇಷನ್

ಸಂಸ್ಥಾನದಲ್ಲಿನ ಹೋಟೇಲುಗಳಿಗೆ ವಾರಕ್ಕೆ ಆರು ದಿನಗಳಲ್ಲಿ ಮಾತ್ರ ರೇಷನ್ ಪದಾರ್ಥಗಳನ್ನು ಒದಗಿಸಬೇಕೆಂದು ಭಾರತ ಸಂಸ್ಥಾನಗಳ ಸರ್ಕಾರಗಳಿಗೆ ಸೂಚಿಸಲಾಗುವುದೆಂದು ಕೇಂದ್ರ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಹೇಳಿರುವರು. ಈ ರೀತಿ ಕಡ್ಡಾಯ ಮಾಡಿದರೆ ಜನರು ಹರಿಬಾರಿಯನ್ನು ಹೆಚ್ಚು ಉಪಯೋಗಿಸಬಲ್ಲರೆಂದು ಅವರು ತಿಳಿಸಿರುವರು.

ಲಂಡನ್ನಿನಲ್ಲಿ ಕಮ್ಯೂನಿಸ್ಟರ ವಿರುದ್ಧವಾಗಿ ಭಾರತ ಹೋರಾಟವನ್ನು ನಡೆಸುತ್ತಿರುವುದರಿಂದ ಕೊರಿಯಕ್ಕೆ ಮಿಲಿಟರಿ ಸಹಾಯವನ್ನು ಒದಗಿಸಲು ಅದಕ್ಕೆ ಸಾಧ್ಯವಿಲ್ಲವೆಂದು ತಿಳಿಸಲಾಗಿದೆ.

ವಾರ ಭವಿಷ್ಯ

ತಾ॥ ೯-೭-೫೦ರಿಂದ ೧೬-೭-೫೦ರ ವರೆಗೆ

ಮೇಷ—ಆರೋಗ್ಯ ಉತ್ತಮ, ಇಷ್ಟ ಪ್ರಿಯ ಕಾರ್ಯಗಳಲ್ಲಿ ಉತ್ಸಾಹ, ಅಪ್ತರ ಭೇಟಿ, ಧನಲಾಭ, ವ್ಯಾಪಾರ ವ್ಯವಹಾರಗಳಲ್ಲಿ ಜಯ, ಸುಖಪ್ರವಾಸ, ಪ್ರೋತ್ಸಾಹ ತಾ॥ ೧೩, ೧೪ ಮಹತ್ವದ ಪತ್ರಾಗಮನ

ವೃಷಭ—ಆರೋಗ್ಯ ಉತ್ತಮ, ಮಿತ್ರ ಜನರ ಭೇಟಿ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಜಯ, ಧನಲಾಭ, ಅಪ್ತರ ಭೇಟಿ, ಮನೆಯಲ್ಲಿ ಅನಾರೋಗ್ಯ ತಾ॥ ೯, ೧೦ ಮನರಂಜನೆ, ಮಿತ್ರರ ಆಗಮನ.

ಮಿಥುನ—ಮನೆಯಲ್ಲಿ ಅಲಕ್ಷ್ಯ ಮನಸ್ಸಿಗೆ ತಾಪ, ತೊಂದರೆ, ಕಾರ್ಯ ವಿಘ್ನ, ಅನಾರೋಗ್ಯ, ನೌಕರಿಯಲ್ಲಿ ಮೋಸ, ಪ್ರವಾಸ, ವ್ಯಾಪಾರ ವ್ಯವಹಾರಗಳಲ್ಲಿ ಕಲಹ ಹೆಚ್ಚು ಖರ್ಚು, ತಾ॥ ೧೦ ೧೧ ಅಶುಭ ವಾರ್ತೆ ಅಪಮಾನ

ಕರ್ಕ—ಆರೋಗ್ಯ ಉತ್ತಮ, ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಧನಲಾಭ, ಸನ್ಮಾನ, ಎದುರಾಳಿಗಳ ಅಪಜಯ, ವಿದ್ಯಾರ್ಥಿಗಳಿಗೆ ಯಶಸ್ಸು ತಾ॥ ೧೩, ೧೪ ಪರೋಪಕಾರ, ಅತಿಥಿಗಳ ಆಗಮನ.

ಸಿಂಹ—ಆರೋಗ್ಯ ಉತ್ತಮ, ಮನಸ್ಸಿನಲ್ಲಿ ಉತ್ಸಾಹ ವ್ಯಾಪಾರ ಉದ್ಯೋಗಗಳಲ್ಲಿ ಧನಲಾಭ ಎದುರಾಳಿಗಳ ಅಪಜಯ ಖರ್ಚು ತಾ॥ ೧೦, ೧೪ ಮಹತ್ವ ಪತ್ರಾಗಮನ

ಕನ್ಯಾ—ಮನಸ್ಸಿಗೆ ಅಶಾಂತಿ ದಿನಚರಿಯಲ್ಲಿ ಅಲಕ್ಷ್ಯ, ನೌಕರಿಯಲ್ಲಿ ಅಪಮಾನ ಗೃಹಕಲಹ, ಕಷ್ಟ, ದುರ್ವಾರ್ತೆ ಪತ್ರಾಗಮನ. ತಾ॥ ೯, ೧೦ ಕಠಿಣ ಪ್ರಸಂಗ ಸಂಕಟ ನಾಶ, ಸಹಾಯ

ತುಲಾ—ಗಡಿಬಿಡಿ, ಅಧೈರ್ಯ, ಸಂಕಟ, ನೌಕರಿ, ಉದ್ಯೋಗ, ವ್ಯಾಪಾರಗಳಲ್ಲಿ ಹಾನಿ, ಗುಪ್ತ ಚಿಂತೆ, ಕಳುವು, ಖರ್ಚು, ತಾ॥ ೧೦, ೧೧, ೧೨ ಲಾಭದಾಯಕ

ವೃಶ್ಚಿಕ—ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗಗಳಲ್ಲಿ ಲಾಭ, ನೌಕರಿಯಲ್ಲಿ ಪ್ರಶಂಸೆ, ಕೌಟುಂಬಿಕ ಸುಖ, ವಿದ್ಯಾಭ್ಯಾಸದ ಪ್ರಗತಿ, ಪರೋಪಕಾರ ತಾ॥ ೧೩, ೧೪ ಖರ್ಚು, ಗೊಂದಲ,

ಧನು—ಆರೋಗ್ಯ ಉತ್ತಮ, ಅಪ್ತರ ಭೇಟಿ, ಮಹತ್ವಪೂರ್ಣ ಕಾರ್ಯ, ಮಿತ್ರರಿಂದ ಪ್ರೋತ್ಸಾಹ, ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಉತ್ಸಾಹ, ಜಯ, ಮಾನ, ಧನಲಾಭ ತಾ॥ ೧೧, ೧೨, ೧೩, ೧೪, ಲಾಭ, ದಾನ

ಮಕರ—ಆರೋಗ್ಯ ಉತ್ತಮ, ಮಿತ್ರಜನರ ಸಹವಾಸ, ಪ್ರವಾಸ, ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಅನುಕೂಲ ಪ್ರಯಾಸ ತಾ॥ ೧೧, ೧೨, ಜಯ, ಧನಲಾಭ

ಕುಂಭ—ಎದುರಾಳಿಗಳ ಉನ್ನತಿ, ಮನಸ್ಸಿಗೆ ಅಶಾಂತಿ ಸಜ್ಜನರ ಭೇಟಿ ಅನಾರೋಗ್ಯ, ಪ್ರವಾಸದಲ್ಲಿ ಅಪಘಾತ ಭಯ, ನೌಕರಿ ವ್ಯಾಪಾರ, ಉದ್ಯೋಗಗಳಲ್ಲಿ ಹಾನಿ, ಚಿಂತೆ, ಖರ್ಚು, ಮನೆಯಲ್ಲಿ ಅಸೌಖ್ಯ, ತಾ॥ ೧೧ ೧೨, ಅಶುಭ ವಾರ್ತೆ

ಮೀನ—ಮನಸ್ಸಿಗೆ ಅಶಾಂತಿ, ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಎದುರಾಳಿಗಳಿಂದ ತೊಂದರೆ, ಮನೆಯಲ್ಲಿ ಅಶಾಂತಿ, ಅಪಮಾನ, ಪೀಡೆ, ಖರ್ಚು ತಾ॥ ೯, ೧೪ ಅಶಾಂತಿ

ವಿಶ್ವ ಶಾಂತಿ ಸ್ಥಾಪನೆಗೆ ನೆಹರೂ ಸರ್ವದಾ ಸಿದ್ಧ

ಪಂಡಿತ ಜವಹರಲಾಲ್ ನೆಹರೂರವರು ನೆನ್ನೆ ದಿನ ದೆಹಲಿಯಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಕರೆದು ಕೊರಿಯದ ಪರಿಸ್ಥಿತಿಯನ್ನು ಕುರಿತು ಪ್ರಸ್ತಾಪಿಸುತ್ತ ಈ ಸಂಬಂಧದಲ್ಲಿ ಭಾರತವು ಈಗಾಗಿ ಮಧ್ಯಸ್ಥಿಕೆವಹಿಸುವುದಿಲ್ಲವೆಂದೂ, ಅದಕ್ಕೆ ಆ ಅಧಿಕಾರವೂ ಇಲ್ಲವೆಂದೂ ಅವರು ಕೊರಿಯದ ಸಂಬಂಧಪಟ್ಟ ಪಕ್ಷಗಳಿಂದ ಸೂಚನೆ ಬಂದಲ್ಲಿ ಆಗ ಭಾರತವು ಮಧ್ಯಸ್ಥಿಕೆವಹಿಸಬಹುದೆಂದೂ, ಯಾವುದಾದರೂ ಮಾರ್ಗದಿಂದ ವಿಶ್ವ ಶಾಂತಿ ಸ್ಥಾಪನೆಯಾಗುವುದಾದರೆ ಅದಕ್ಕಾಗಿ ತಾವು ಎಲ್ಲಿಯವರೆಗಾದರೂ ಹೋಗಲು ಸಿದ್ಧರಿರುವುದಾಗಿಯೂ ಅವರು ತಿಳಿಸಿದರು

ಕೆಂಪು ಚೀಣಕ್ಕೆ ಸ್ಥಾನ ದೊರಕಿಸಲು ಭಾರತದ ಪ್ರಯತ್ನ

ಕಮ್ಯೂನಿಸ್ಟ್ ಚೀಣದ ಪ್ರತಿನಿಧಿಗೆ ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ದೊರಕಿಸಿಕೊಡುವ ಸಲುವಾಗಿ ಇಂಗ್ಲೆಂಡಿನಲ್ಲಿರುವ ಭಾರತದ ಹೈಕಮೀಷನರ್ ಶ್ರೀ ವಿ ಕೆ ಕೃಷ್ಣ ಮೆನನ್ನರವರು ಬ್ರಿಟನ್ನಿನ ಪ್ರಧಾನಿ ಮಿ॥ ಅಟ್ಲೀ ಮತ್ತು ಉಪವಿದೇಶಾಂಗಸಚಿವ ಮಿ॥ ಕೆನೆತ್ ಯಂಗರವರನ್ನು ಹಲವು ಬಾರಿ ಭೇಟಿ ಮಾಡಿದ್ದರೆಂದು ತಿಳಿದು ಬಂದಿದೆ

ಮೈಸೂರು ಎಂ ಬಿ ಬಿ ಎಸ್ ಪರೀಕ್ಷೆಗೆ ಭಾರತ ಮನ್ನಣೆ

೧೯೩೩ನೇ ಡಿಸೆಂಬರ್ ತಿಂಗಳ ಪರೀಕ್ಷೆಯಿಂದ ಈಚೆಗೆ ಕೊಡಲಾದ ಮೈಸೂರು ವಿಶ್ವವಿದ್ಯಾನಿಲಯದ ಎಂ ಬಿ ಬಿ ಎಸ್ ಪ್ರಶಸ್ತಿಗೆ ಭಾರತ ಸರ್ಕಾರವು ಮನ್ನಣೆ ಇತ್ತಿದೆ

ಅಮೆರಿಕದಲ್ಲಿ ಬಲವಂತ ಸೈನ್ಯ ಸಂಗ್ರಹಣೆ

ಕೊರಿಯ ಯುದ್ಧದಲ್ಲಿ ಭಾಗವಹಿಸುವುದಕ್ಕೆ ಅಗತ್ಯವಾಗಿ ಬೇಕಾದಷ್ಟು ಸೈನ್ಯವನ್ನು ಸಂಗ್ರಹಿಸುವ ಸಲುವಾಗಿ ಅಮೆರಿಕದಲ್ಲಿ ಹೆಚ್ಚು ಹೆಚ್ಚು ಮಂದಿಯನ್ನು ಬಲವಂತವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ

ಬರ್ಮಾಕ್ಕೆ ಬಂದ ೧೫೦೦ ಚೀಣಾ ಸೈನಿಕರ ಕೈಸೆರೆ

ಯೂನಾನ್ ಗಡಿ ದಾಟಿ ಬರ್ಮಾದೊಳಗೆ ನುಗ್ಗಿ ಬಂದ ಜನರಿಗೆ ಬಂದೂಕಗಳನ್ನು ಮಾರಿ, ಅಕ್ಕಿ ಮುಂತಾದುವನ್ನು ಲೂಟಿ ಮಾಡಿದ ೧೫೦೦ ರಾಷ್ಟ್ರೀಯ ಚೀಣಾ ಸೈನಿಕರನ್ನು ಬರ್ಮಾ ಸರ್ಕಾರಿ ಸೈನ್ಯಗಳು ಸುತ್ತುವರಿದು ಕೈಸೆರೆ ಹಿಡಿದಿವೆ

ಜಪಾನಿನಲ್ಲಿ ವಿಶೇಷ ರಕ್ಷಣಾ ವ್ಯವಸ್ಥೆ

ಜಪಾನಿನಲ್ಲಿ ೭೫ ಸಾವಿರ ಜನರುಳ್ಳ ರಾಷ್ಟ್ರೀಯ ಪೋಲೀಸ್ ರಿಸರ್ವ್ ಪಡೆಯನ್ನು ನಿರ್ಮಿಸಲೂ ಮತ್ತು ನೌಕಾ ರಕ್ಷಣಾ ಪಡೆಯನ್ನು ದೊಡ್ಡದು ಮಾಡಲೂ ಸಹ ಜನರಲ್ ಮೆಕಾರ್ಥರರು ಆಜ್ಞೆ ಮಾಡಿರುತ್ತಾರೆ

ಆಹಾರ ಶಾಖೆ ಕಛೇರಿ ಹಣದ ಪೆಟ್ಟಿಗೆ ಕಳುವು

ಬೆಂಗಳೂರ್ [illegible]ಲ್ಲಿರುವ ಆಹಾರ ಶಾಖೆಯ ಡೆಪ್ಯುಟಿ ಡೈರೆಕ್ಟರವರ ಕಛೇರಿಯಲ್ಲಿ ನೆನ್ನೆ ದಿನ ಯಾರೋ ಹಣದ ಪೆಟ್ಟಿಗೆಯನ್ನು ಅಪಹರಿಸಿದರೆಂದು ವರದಿಯಾಗಿದೆ ಅದರೊಳಗೆ ೧೫೦೦ ರೂ ಮತ್ತು ೧೨ ಸಾವಿರ ರೂ ಗಳ ಚೆಕ್ಕು ಇದ್ದವೆಂದು ತಿಳಿದುಬಂದಿದೆ

ಅನ್ನಪೂರ್ಣ ಶಿಖರಾರೋಹಣ

ಹಿಮಾಲಯದ ಅತ್ಯಂತ ಭಾರಿ ಶಿಖರಗಳಲ್ಲೊಂದಾದ ೨೬, ೪೯೨ ಅಡಿ ಇರುವ ಅನ್ನಪೂರ್ಣ ಎಂಬುದನ್ನು ಕಳೆದ ತಿಂಗಳು ೫ ನೇ ತಾರೀಖು ೯ ಜನ ಫ್ರೆಂಚ್ ಪರ್ವತಾರೋಹಿಗಳು ಹತ್ತಿರುವುದಾಗಿ ತಿಳಿದು ಬಂದಿದೆ ಮನುಷ್ಯನು ಹತ್ತಿರುವ ಶಿಖರಗಳಲ್ಲಿ ಇದೇ ಅತಿ ದೊಡ್ಡದು ನೇಪಾಳದ ಕೃಷ್ಣ ಗಂಡಕಿ ಕಣಿವೆ ಭಾಗದಲ್ಲಿ ಈ ಶಿಖರವು ಇದೆ ಪರ್ವತಾರೋಹಿಗಳ ಮುಖಂಡರಾದ ಮಾರಿಸ್ ಹೆರ್ಜೋಗ್‌ರವರು ಶಿಖರದ ಮೇಲೆ ಹತ್ತು ನಿಮಿಷಗಳ ಕಾಲ ನಿಂತು ಫ್ರೆಂಚ್ ಧ್ವಜವನ್ನು ಹಾರಿಸಿದರು ಆ ಸಮಯದಲ್ಲಿ ಅಲ್ಲಿ ಉಷ್ಣಾಂಶವು ಕೇವಲ ೨೫ ಡಿಗ್ರಿ ಮಾತ್ರ ಇತ್ತು

ಉಬ್ಬಸ ರೋಗಕ್ಕೆ ಸಿದ್ಧೌಷಧ

ಮಂಡ್ಯ ಜಿಲ್ಲೆ ಮಳವಳ್ಳಿಯ ಸಬ್ ಪೋಸ್ಟ್ ಮಾಸ್ಟರಾದ ಶ್ರೀ ಡಿ ಕೆ. ರಾಮಚಂದ್ರ ಅಯ್ಯಂಗಾರರವರು ಉಬ್ಬಸ ಮತ್ತು ಮೂರ್ಛೆ ರೋಗಗಳಿಗೆ ಸಿದ್ಧೌಷಧವನ್ನು ಕಂಡುಹಿಡಿದಿರುವರು ರೋಗಗಳಿಂದ ನರಳುವವರು ಅವರಿಗೆ ತಮ್ಮ ವಿಳಾಸದ ಅಂಚೆ ಕವರನ್ನು ಇಟ್ಟು ಪತ್ರ ಬರೆದು ವಿವರಗಳನ್ನು ತಿಳಿದುಕೊಳ್ಳಬಹುದು ಶ್ರೀಯುತರು ಹಾವು ಕಡಿದ ಜನರನ್ನೂ ವಾಸಿಮಾಡಬಲ್ಲರು

ಮಹಾರಾಜಾ ಕಾಲೇಜ್ ಹಾಸ್ಟಲ್

ಮೈಸೂರು

ಮೇಲ್ಕಂಡ ಹಾಸ್ಟಲಿಗೆ ಹಾಲು ಸರಬರಾಜು ಮಾಡಲು ಸೀಲ್ಡ್ ಟೆಂಡರುಗಳನ್ನು ತೆಗೆದುಕೊಳ್ಳಲ್ಪಡುತ್ತೆ ದಿನ ೧ಕ್ಕೆ ಸರಾಸರಿ ೧೦೦ ಸೇರು ಅಚ್ಚಹಾಲು ಬೇಕಾಗುತ್ತದೆ ಸಪ್ಲೈ ಮಾಡಲು ಇಷ್ಟಪಡುವವರು ತಾ॥ 15-7-50ರ ಪೂರ್ವಾಗಿ ಹಾಸ್ಟಲ್ ವಾರ್ಡನ್ನರವರಿಗೆ ತಮ್ಮ ಸೀಲಾದ ಟೆಂಡರುಗಳನ್ನು ಕಳುಹಿಸಿಕೊಡಬಹುದು ಹೆಚ್ಚು ವಿವರಗಳಿಗೆ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು

ಸಿ. ವಿ ಕೃಷ್ಣ ಅಯ್ಯಂಗಾರ್
ವಾರ್ಡನ್

ಮೈಸೂರು ಡಿವಿಜನ್ ಕೋ-ಆಪರೇಟಿವ್ ಸೊಸೈಟಿಗಳ

ಅಸಿಸ್ಟೆಂಟ್ ರಿಜಿಸ್ಟ್ರಾರರ ಕಛೇರಿಯಿಂದ

C S 191/49-50

ಪ್ರತಿವಾದಿಗಳು - 1) ಪುಟ್ಟಮಾದಯ್ಯ
2) ಅಕ್ಕಯ್ಯ

ಒಂದನೇ ಪ್ರತಿವಾದಿಯಾದ ನೀನು ೧೧-೭-೫೦ನೇ ತಾರೀಖು ಕೋರ್ಟಿಗೆ ಹಾಜರಾಗಬೇಕು. ಇಲ್ಲವಾದರೆ ಏಕಪಕ್ಷವಾಗಿ ತೀರ್ಮಾನ ಮಾಡಲಾಗುತ್ತೆ

ಗೌ॥ಕಾರ್ಯದರ್ಶಿ,
ಅರಮನೆ ಅಗ್ರಹಾರದ ಹೋಟೆಲ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರು

Edited, printed and published by A R Nagarajan, at Sadhvi Press, D Subbiah Road, Mysore

ರಾಜಕಮಲ್, ಮೈಸೂರು

8—7—50 ರಿಂದ

ದಿನವಹಿ 3 ಆಟಗಳು

ರಾಜಕಮಲ್ ಕಲಾ ಮಂದಿರ್‌ರವರ

ಭೂಲ್

(ಹಿಂದಿ)

ಭೂಮಿಕೆ.— ಶಿವಾಜಿ ಶರಾರ್, ಮುಮ್ತಾ[illegible], ಕೇಶವರಾವ್ ದಾತೆ, ರೀಲ



ಸಂಪುಟ ೭೯೨ | ೪೭ ನೇ ವರ್ಷ | ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೮] | ಸೋಮವಾರ ೧೦ ೭-೫೦ | [ಸಂಚಿಕೆ ೩೩

ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಮಿಕರ ಮುಷ್ಕರ

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿ

ಮೈಸೂರು ೧೦

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯಲ್ಲಿ ಭಾಗವಹಿಸಲು ಪ್ರಪಂಚದ ನಾನಾ ಭಾಗಗಳಿಂದ ಪ್ರತಿನಿಧಿಗಳು ಈಗಾಗಲೇ ತಮ್ಮ ಸ್ಥಳಗಳಿಂದ ಹೊರಟು ಇಲ್ಲಿಗೆ ಒಂದೆರಡು ದಿನಗಳಲ್ಲಿ ಆಗಮಿಸುವವರಾಗಿದ್ದಾರೆ ಪ್ರಪಂಚ ವಿದ್ಯಾರ್ಥಿ ಸರ್ವೀಸಿನ ಸಿಬ್ಬಂದಿ ಪ್ರಧಾನ ಕಾರ್ಯದರ್ಶಿ ಮತ್ತು ವಿಲ್ಸನ್ ಥಾಮಸ್, ಅಧ್ಯಕ್ಷ .... ವೀರರಾಘವರು ನೆನ್ನೆದಿನ ಆಗಮಿಸಿದರು ಅಂತರ ರಾಷ್ಟ್ರೀಯ ವಿದ್ಯಾರ್ಥಿ ಸರ್ವೀಸಿನ ಪ್ರಧಾನ ಕಾರ್ಯದರ್ಶಿ ಡಾ|| ಎಸ್ ಪಾಲಂಟೈನರವರು ಮದ್ರಾಸಿನಿಂದ ಆಗಮಿಸಿದ್ದಾರೆ

ಈ ಸಮ್ಮೇಳನದಲ್ಲಿ ಭಾರತದ ಪರವಾಗಿ ಕೆಳಗೆ ಕಂಡವರು ಭಾಗವಹಿಸುವರು. - ಅಲಿಘರ ವಿಶ್ವವಿದ್ಯಾಲಯದ ಪ್ರೊಫೆಸರ್ ಬಿ ಷಾಸ್ತ್ರಿ ಡಾ|| ಪಾಲ್ಕರ್ ಮಹೀರ್ ಮುಸೀಲ್ ಡಾ|| ಶಹಾಬುದ್ದೀನ್, ಡಾ|| ಇಂದ್ರಪಾಲ್ ಪರ್ಶ್, ಅಮಲ್ ಚಂದ್ರ, ಶ್ರೀಮತಿ ಶವ ರಾವೇಲಿ, ರಾಘವ ಅಯ್ಯರ್, ವೀರೇಂದ್ರ ಅಗರವಾಲ್, ರಾಮಪ್ಪ ಮೆನನ್, ಅಪ್ಪಾರಾವ್, ಮಾಧವ ಶೆಟ್ಟಿ, ಮಹಮದ್, ಹಾಸಿದ್ದಾಂತ, ಪ್ರೊಫೆಸರ್ ಮತ್ತು ಮೈಸೂರಿನ ಟಿ ಬಿ ವೆಂಕಟೇಶ್

ಜೂಜು ಹಾ ಟಿ ದ ಶಿಕ್ಷೆ

ರಾಜಧಾನಿಯ ಬೆಳ್ಳಿಕಟ್ಟೆಗೆ ಮೊದಲಿನ ಹಿಂದಿನ ನಂಬರು ಮನೆಯಲ್ಲಿ ನಿನ್ನೆ ಮಧ್ಯಾಹ್ನ ಮೂರು ಮತ್ತು ಇತರ ಆರು ಜನರು ಜೂಜಾಡುತ್ತಿದ್ದ ಸಮಯದಲ್ಲಿ ದೇವರಾಜ ಪೊಲೀಸರು ಸ್ಥಳಕ್ಕೆ ಹೋಗಿ ಅವರನ್ನು ಹಿಡಿದು ೫೧ ರೂ ಗಳನ್ನು ವಶಪಡಿಸಿಕೊಂಡಿರುತ್ತಾರೆ ಅವರ ಮೇಲೆ ಮೊಕದ್ದಮೆ ಹೂಡಲಾಗುವುದು

ಸಂಸ್ಥಾನದ ರೇಷ್ಮೆ ವ್ಯವಸಾಯಗಾರರ ಸಮ್ಮೇಳನ

ಸಂಸ್ಥಾನದ ರೇಷ್ಮೆ ವ್ಯವಸಾಯಗಾರರ ಸಮ್ಮೇಳನವು ನಾಳೆ ಮಧ್ಯಾಹ್ನ ೩ ಗಂಟೆಗೆ ಸಂಕೆ ಮರಳ್ಳಿಯ ರೇಷ್ಮೆ ಕಾರ್ಖಾನೆಯಲ್ಲಿ ನಡೆಯುವುದು. ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು ಕೇಂದ್ರ ಶಾಸನ ಸಭಾ ಸದಸ್ಯರಾದ ಶ್ರೀ ಕೆ ಹೆಚ್ ಹುಂಚಪ್ಪನವರು ಅಧ್ಯಕ್ಷತೆ ವಹಿಸುವರು

"ಯುಗಶಕ್ತಿ" ಸಹಾಯಾರ್ಥ ವಿವಿಧ ವಿನೋದಾವಳಿ

ರಾಜಧಾನಿಯ ಯುಗಶಕ್ತಿ ಪತ್ರಿಕೆಯ ಸಹಾಯಾರ್ಥವಾಗಿ ನಿಧಿಯನ್ನು ಸೇರಿಸಲು ಇದೇ ೧೬ನೇ ತಾರೀಖು ಟೌನ್ ಹಾಲಿನಲ್ಲಿ ಒಂದು ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ ಈ ಸಂಬಂಧವಾಗಿ ಶ್ರೀ ಎಂ ಆರ್ ಸಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನೇಮಿಸಲ್ಪಟ್ಟಿದೆ

ಪುರುಷ ಮತ್ತು ಸ್ತ್ರೀ ಲಿಂಗ ಗಳಿರುವ ವಿಚಿತ್ರ ಮಗು

ನಾಗಪುರದಲ್ಲಿ ಒಂದು ಮಗುವಿಗೆ ಜನನಾಂಗ ಸ್ಥಾನದಲ್ಲಿ ಪುರುಷ ಮತ್ತು ಸ್ತ್ರೀ ಜನನೇಂದ್ರಿಯಗಳೆರಡೂ ಇವೆ ಇದು ಆಲ್ಲಿನ ವೈದ್ಯರಿಗೆ ಪರಮಾಶ್ಚರ್ಯವುಂಟುಮಾಡಿದೆ

ಹೆಣ್ಣು ಕೊಡದಿದ್ದುದಕ್ಕಾಗಿ ಬಾಂಬು ಹಾಕಿದ ಪ್ರಸಂಗ

ಒಬ್ಬನ ಮರಣ, ೧೧ ಜನರಿಗೆ ಗಾಯ

ಬೆಂಗಳೂರು ೧೦

ಚಿಕ್ಕರಾಯ ಪಟ್ಟದ ಕೆಲಂದರ್ ಖಾನ್ ಎಂಬುವನು ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಮೀಡಿ ಮಲ್ಲಸಂದ್ರ ಎಂಬ ಹಳ್ಳಿಯಲ್ಲಿ ವಾಸವಾಗಿರುವ ತನ್ನ ಬಂಧುಗಳ ಮನೆಗೆ ಹೋಗಿ ಅವರ ಹುಡುಗಿಯನ್ನು ತನಗೆ ಮದುವೆ ಮಾಡಬೇಕೆಂದು ಬಹಳ ದಿನಗಳಿಂದಲೂ ಕೇಳುತ್ತಿದ್ದನೆಂದೂ, ಹಿರಿಯವರ ನ್ನೆಲ್ಲ ಅಂತರವಿದ್ದುದರಿಂದ ವಿವಾಹಕ್ಕೆ ಸಂಬಂಧಿಕರು ಒಪ್ಪಲಿಲ್ಲವೆಂದೂ, ಕಳೆದ ೭ ತಿಂಗಳ ಹಿಂದೆ ಇದೇ ರೀತಿ ಪುನಃ ಅವನು ಒತ್ತಾಯಮಾಡಿದರೂ ಸಾಧ್ಯವಾಗದೆ ಇರಲು ಹಾಕುವುದಾಗಿ ಬೆದರಿಸಿದನೆಂದೂ, ಕಳೆದ ೫ನೇ ತಾರೀಖು ರಾತ್ರಿ ಪುನಃ ಸಡಗರಲಂಡವರ ಅಲ್ಲಿಗೆ ಹೋಗಿ ಮದುವೆ ಪ್ರಸ್ತಾಪ ಮಾಡಿದಾಗ ಅವನಿಗೆ ಸಮಾಧಾನವನ್ನು ಹೇಳುತ್ತಿದ್ದರೂ ಸಹ, ಅವನು ಕೈಬಾಂಬನ್ನು ಎಸೆದನೆಂದೂ, ಹುಡುಗಿಯು ೧೭ ವರ್ಷದ ತಮ್ಮನಿಗೆ ಅದು ಬಿದ್ದು ಅವನು ಸತ್ತನೆಂದೂ ವರದಿಯಾಗಿದೆ ಗಲಾಟೆಯಾದುದನ್ನು ಕೇಳಿದ ಇತರ ಜನರು ಅಲ್ಲಿಗೆ ಬಂದು ವಿಚಾರಿಸಲಾಗಿ ಅವನು ತನ್ನ ಹತ್ತಿರ ಇದ್ದ ಇನ್ನೂ ಬಾಂಬುಗಳ ಪೈಕಿ ಕೆಲವನ್ನು ಎಸೆದುದರಿಂದ ೧೧ ಜನರಿಗೆ ಗಾಯವಾಯಿತು ಮಾರನೆ ದಿನ ಆವರು ಸಮೀಪದಲ್ಲಿದ್ದ ಗುಡ್ಡದ ಮೇಲೆ .... ಪೊಲೀಸರು ಬಂದು ಅವನನ್ನು ಕೇಳಿದಾಗ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಅವನು ತನ್ನಲ್ಲಿ ಉಳಿದಿದ್ದ ಬಾಂಬುಗಳನ್ನು ಸಿಡಿಸಿ, ತನ್ನ ಬಲಗೈಯಿಂದ ಕತ್ತಿಯಿಂದ ಇರಿದುಕೊಳ್ಳಲು ಪ್ರಯತ್ನಿಸಿದಾಗ ಪೊಲೀಸರು ಹಿಡಿದು ಅಲ್ಲಿನ ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ತನಿಖೆ ಕ್ರಮ ನಡೆಯುತ್ತಿದೆ ಅವನು ಪಿ ಎಸ್ ಎ ಗೆ ಸೇರಿದ್ದವನೆಂದು ಹೇಳಲಾಗಿದೆ

ಮಾಜಿ ಈಜಿಪ್ಟ್ ಪ್ರಧಾನಿಯ ಮರಣ

ಈಜಿಪ್ಟಿನ ಮಾಜಿ ಪ್ರಧಾನಿ ಇಸ್ಮೈಲ್ ಸಿದ್ದಿಕಿ ಪಾಷಾರವರು ನೆನ್ನೆ ಫ್ರಾನ್ಸಿನಲ್ಲಿ ಕಾಲವಾದರು

ವಿದ್ಯುಚ್ಛಕ್ತಿ ಕಾರ್ಮಿಕರ ಮುಷ್ಕರದ ಪ್ರಾರಂಭ

ಸ್ವಂ ವ ಪ್ರೋ[ ] ಬೆಂಗಳೂರು ೧೦

ಸರ್ಕಾರದ ವಿದ್ಯುಚ್ಛಕ್ತಿ ಕಾರ್ಖಾನೆಯ ನೌಕರರು ೧೯೦೦ ಜನ ಕಾರ್ಮಿಕರು ಇಂದು ಪ್ರಾತಃಕಾಲದಿಂದ ಮುಷ್ಕರ ಹೂಡಿದ್ದಾರೆ ಅವರ ಪೈಕಿ ೪೦೦ ಜನರು ಮುಂದಿನ ರೇಗೆ ಸೇರದುಕೊಂಡು ನಗರದ ಹಲವು ಭಾಗಗಳಲ್ಲಿ ತಿರುಗಿ ಈಗ ಆನಂದರಾವ್ ಸರ್ಕಲ್ ನ ಬಳಿ ಬಂದು ಸೇರಿದ್ದಾರೆ ಪೊಲೀಸರಿಂದ ಎಚ್ಚರಿಕೆ ಕ್ರಮವು ತೆಗೆದುಕೊಳ್ಳಲ್ಪಟ್ಟಿದೆ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಈ ದಿನ ಬೆಳಗಿನ ೧೧ ಗಂಟೆಗೆ ಕಾರ್ಮಿಕ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರೊಡನೆ ಮಾತುಕತೆ ನಡೆಸಿದರು ತಮ್ಮ ಬೇಡಿಕೆಗಳನ್ನು ಕಾರ್ಮಿಕರು ಅವರ ಮುಂದೆ ಇಟ್ಟರು

ಬಂದೂಕಗಳನ್ನು ಒಪ್ಪಿಸಲು ಹೈದರಾಬಾದು ಆಜ್ಞೆ

ಈ ತಿಂಗಳು ೧೫ನೇ ತಾರೀಖಿನೊಳಗೆ ಹೈದರಾಬಾದು ಸಂಸ್ಥಾನದ ಪ್ರಜೆಗಳು ರಹದಾರಿಯಿಲ್ಲದೆ ಇಟ್ಟುಕೊಂಡಿರುವ ಕೋವಿ ಮದ್ದುಗುಂಡುಗಳನ್ನು ಹತ್ತಿರದ ಪೊಲೀಸ್ ಠಾಣೆಗಳಿಗೆ ಒಪ್ಪಿಸಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞಾಪಿಸಿದ್ದಾರೆ

ಮುಷ್ಕರ ಹೂಡಲಿದ್ದ ರೈಲ್ವೆ ನೌಕರರ ವಶ

ಅಮೆರಿಕದ ರಾಷ್ಟ್ರಪತಿ ಎರಡು ಲಕ್ಷದ ೫೦೦೦೦ ನೌಕರರುಳ್ಳ ರೈಲ್ವೆ ಮಾರ್ಗಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ನಡೆಸಬೇಕೆಂದು ಅಧ್ಯಕ್ಷ ಟ್ರೂಮನ್ನರು ಸೈನ್ಯ ಇಲಾಖೆಯವರಿಗೆ ತಿಳಿಸಿರುತ್ತಾರೆ ರೈಲಿನ ಕಾರ್ಮಿಕರು ಮುಷ್ಕರ ಹೂಡಬೇಕೆಂದಿದ್ದುದನ್ನು ತಪ್ಪಿಸಲು ಈ ರೀತಿ ಆಜ್ಞೆ ಮಾಡಲಾಗಿದೆ

ಹುಡುಗಿ ತಪ್ಪಿಸಿಕೊಂಡಿದ್ದಾಳೆ

ರಾಜಾಜಿನಗರ ಎಂಬ ಬಡಾವಣೆಯ ವಯಸ್ಸಿನ ಹುಡುಗಿಯು ನೆನ್ನೆಯಿಂದ ತಪ್ಪಿಸಿಕೊಂಡಿದ್ದಾಳೆ ಆಕೆಯನ್ನು ಕಂಡವರು ಮೈಸೂರು ಮಹಾರಾಜಾ ಕಾಲೇಜು ಹಾಸ್ಟೆಲಿನಲ್ಲಿರುವ ಹುಡುಗಿಯ ತಂದೆ ಸ್ಥಾನದ ಬ ಭಟ್ಟ ರಿಗೆ ತಿಳಿಸಬೇಕಾಗಿ ಕೋರಲಾಗಿದೆ

ಕೋಸಿ ನದಿ ಉಕ್ಕಿ ೩ ಲಕ್ಷ ಜನರಿಗೆ ತೊಂದರೆ

ಬಿಹಾರದಲ್ಲಿ ಹರಿಯುವ ಕೋಸಿ ನದಿಯಲ್ಲಿ ಪ್ರವಾಹವು ಉಕ್ಕಿಬಂದು ೨೦೦ ಹಳ್ಳಿಗಳಿಗೆ ನೀರು ನುಗ್ಗಿದೆ. ಇದರಿಂದ ೨೪ ಲಕ್ಷ ಜನ ನಿವಾಸಿಗಳಿಗೆ ತೊಂದರೆಯಾಗಿದೆ ಸರಿಪಡಿಸಲು ನೀರು ಎತ್ತಲು ಮಿಲಿಟರಿ ಜಂಬರೆ ೨೦ ಸಾವಿರ ಜನರು ಕೆಲಸದಲ್ಲಿ ನಿರತರಾಗಿದ್ದಾರೆ. ಪತ್ರಕಿ ನ ಬೆಳೆಗಳು ನಾಶವಾಗಿವೆ ೨೦ಲಕ್ಷ ರೂ ಆಗಿರ ನಷ್ಟವು ಸಂಭವಿಸಿದೆ ೩೦ ಸಾವಿರ ಜನರು ಸುರಕ್ಷಿತ ಪ್ರದೇಶಗಳಿಗೆ ಹೋಗುವಂತೆ ಕಾರ್ಯಗಳ ಏರ್ಪಾಡುಗಳು ನಡೆಯುತ್ತಿವೆ

ಅಮೆರಿಕದಲ್ಲಿ ಸೈನ್ಯಕ್ಕೆ ಜನಸಂಗ್ರಹ

ಅಮೆರಿಕದ ಸೇನೆ ಮತ್ತು ನೌಕಾ ಬಲಗಳಿಗೆ ಜನರನ್ನು ಸೇರಿಸಿಕೊಳ್ಳಲು ಆಜ್ಞೆ ಹೊರಡಿಸಲಾಗುತ್ತಿದೆ

ಹೆಬ್ಬೆರಳಿಗೆ ಬದಲಾಗಿ ಕಾಲಿನ ಬೆರಳು

ವೆಂಕಟಯ್ಯನ ಹೆಬ್ಬೆರಳಿನ ತುದಿ ಕತ್ತರಿಸಿ ಹೋಗಿ ಚಿಕಿತ್ಸೆ ನಡೆಸಿದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ಆ ಹುಡುಗನ ಕಾಲಿನ ಬೆರಳನ್ನು ಕತ್ತರಿಸಿ ಕೈಗೆ ಜೋಡಿಸಲಾಯಿತು. ಹೆಬ್ಬೆರಳ ಸ್ಥಾನದಲ್ಲಿ ಸೇರಿಸಿದ ಕಾಲಿನ ಬೆರಳು ಈಗ ಚೆನ್ನಾಗಿ ಕೆಲಸ ಮಾಡುತ್ತಿದೆ. ಈ ಶಸ್ತ್ರಚಿಕಿತ್ಸೆಯ ಪ್ರಸಂಗವು ಬ್ರಿಟನ್ನಿನ ಪತ್ರಿಕೆಗಳಲ್ಲಿ ವರದಿಯಾಗಿದೆ ಆ ಹುಡುಗನಿಗೆ ಈಗ ೯ ವರ್ಷ ವಯಸ್ಸಾಗಿರುವುದೆಂದು ಹೇಳಲಾಗಿದೆ ಈ ಚಿಕಿತ್ಸೆಯ ಸಹಾಯದಿಂದ ಹುಡುಗನು ಎಲ್ಲ ಕೆಲಸಗಳನ್ನು ಮಾಡಬಲ್ಲನೆಂದು ಹೇಳಲಾಗಿದೆ

ಭಾರತದಲ್ಲಿ ಅಣು ಬಾಂಬು

ಅಣು ಶಕ್ತಿಯ ಕಾರ್ಯಗಳಿಗೆ ಉಪಯೋಗವಾಗುವ ವಸ್ತುಗಳನ್ನು, ಇರುವ ಅಣು ಬಾಂಬುಗಳನ್ನು ಅಮೆರಿಕದಲ್ಲಿ ತಯಾರಿಸಲಾಗುತ್ತಿದೆ.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರು ೬೭ ೪೪ ಅಡಿಯ ಮಟ್ಟಕ್ಕೆ ಏರಿತು

ದರಖಾಸ್ತಿನ ಮೂಲಕ ಜಮೀನು ಕೊಡುವುದು ನಿಲ್ಲಬೇಕು

ಅಸ್ಪಂತರ ಪ್ರದೇಶದ ಜನ ಕೊರತೆಯಾಗಿರುವ ನೀರಿನ ಸೌಕರ್ಯಗಳು, ಕೆರೆ ಕಟ್ಟೆಗಳು ಮತ್ತು ಗೋಮಾಳಗಳ ಪೈಕಿ ಈಗಿನ ಹಲವು ಭಾಗಗಳಲ್ಲಿ ದರಖಾಸ್ತು ಮೂಲಕ ಜಮೀನುಗಳನ್ನು ಕೊಡುತ್ತಿರುವುದರಿಂದ ಸಾಮಾನ್ಯ ಜನರಿಗೂ ದನಕರುಗಳಿಗೂ ತುಂಬಾ ತೊಂದರೆಯಾಗುತ್ತಿದೆ ಈ ವರ್ಷ ಮಳೆಯಿಲ್ಲದೆ ದನಕರುಗಳು ಮೇಯಲು ಜಾಗವಿಲ್ಲದೆ ದನಕರುಗಳಿಗೆ ಮೇವಿಲ್ಲವಾಗುತ್ತಿದೆ ಜಮೀನುಗಳು ಅನೇಕ ಪ್ರಜೆಗಳಿಗೆ ಆಹಾರವಾಗಿರುತ್ತವೆ. ಮಳೆಯು ಅಭಾವವಾಗಿರುವ ಕಾಲದಲ್ಲಿ ಇಂತಹ ಜನ ಸೌಕರ್ಯದ ಸ್ಥಳಗಳಿರುವ ಪ್ರದೇಶಗಳನ್ನು ಕೆಲವರಿಗೆ ಮಾತ್ರ ಕೊಡುವುದು ತಪ್ಪು ಹಲವು ಕಡೆ ಅಭಿವೃದ್ಧಿಯಾಗಲು ಅನುಕೂಲವಾಗಿರುವ ಜಮೀನುಗಳನ್ನು ದರಖಾಸ್ತಿನ ಮೂಲಕ ಕೊಡುತ್ತಿರುವುದರಿಂದ ಸಹ ತೊಂದರೆಯಾಗಿದೆ ಆದ್ದರಿಂದ ಈ ವಿಷಯಗಳನ್ನು ಮುಖ್ಯ ಪ್ರಜಾ ಸರ್ಕಾರದವರು ಕೂಡಲೇ ಗಮನಿಸಿ ದರಖಾಸ್ತು ಕೊಡುವ ಕಾರ್ಯವನ್ನು ನಿಲ್ಲಿಸಬೇಕು—ಎಂದು ಶ್ರೀ ಎಂ ಎ ಶಾಸ್ತ್ರಿಯವರು ಬರೆದಿದ್ದಾರೆ

ಭಾರತದ ರಾಜ್ಯಾಂಗದಲ್ಲಿ ಪ್ರಜಾ ಪ್ರಭುತ್ವ ತತ್ವವಿಲ್ಲ

ಮದ್ರಾಸಿನಲ್ಲಿ ಸೇರಿದ್ದ ಅಖಿಲ ಭಾರತ ಸಮಾಜವಾದಿ ಪಕ್ಷದ ಸಮ್ಮೇಳನದಲ್ಲಿ ಭಾರತ ರಾಜ್ಯಾಂಗವು ಪ್ರಜಾ ಪ್ರಭುತ್ವ ಲಕ್ಷಣಗಳಿಂದ ಕೂಡಿಲ್ಲವೆಂದು ನಿರ್ಣಯ ಮಾಡಲಾಯಿತು. ಬೊಂಬಾಯಿನ ಸುಪ್ರಸಿದ್ಧ ನಾಯಕ ಶ್ರೀ ಅಶೋಕ ಮೆಹತಾರವರು ಅಧ್ಯಕ್ಷತೆವಹಿಸಿದ್ದರು. ಅಶೋಕ ಮೆಹತಾರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಆಗ್ನೇಯ ಏಷ್ಯಾ ರಾಷ್ಟ್ರಗಳು ತಮಗಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಮೂಹಿಕ ರೀತಿಯಲ್ಲಿ ಪರಿಗಣಿಸಿದರೆ ಉತ್ತಮವೆಂದೂ, ವಿದೇಶಾಂಗ ಮತ್ತು ರಕ್ಷಣಾ ದೃಷ್ಟಿಯಿಂದ ಅವುಗಳೆಲ್ಲವೂ ಒಂದೇ ರೀತಿಯಲ್ಲಿ ವರ್ತಿಸಿ, ರಷ್ಯದ ಅಥವ ಅಮೆರಿಕದ ಪ್ರಭಾವಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕೆಂದೂ ತಿಳಿಸಿದರು

ವಿಜಯಲಕ್ಷ್ಮಿ ಪಂಡಿತರಿಗೆ ಮೊಮ್ಮಗು

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ವಿಜಯ ಲಕ್ಷ್ಮಿ ಪಂಡಿತರ ಮಗಳು ಶ್ರೀಮತಿ ಅಶೋಕ ಮೆಹತಾರವರಿಗೆ ಗಂಡು ಮಗುವು ಆಗಿದೆ. ಅಶೋಕ ಮೆಹತಾರವರು ಈಗ ನ್ಯೂಯಾರ್ಕಿನ ಆಸ್ಪತ್ರೆಯಲ್ಲಿದ್ದಾರೆ

ಭಾರತಕ್ಕೆ ಚಲಿಸುವ ಚಿಕಿತ್ಸಾಲಯಗಳು

ಸಂಯುಕ್ತ ರಾಷ್ಟ್ರಗಳ ಆರೋಗ್ಯ ಸಂಸ್ಥೆಯವರು ಇಷ್ಟರಲ್ಲೇ ಭಾರತಕ್ಕೆ ೧೫೦ ಚಲಿಸುವ ಚಿಕಿತ್ಸಾಲಯಗಳನ್ನು ಕಳುಹಿಸಲಿರುವರೆಂದು ಗೊತ್ತಾಗಿದೆ. ಇದರಿಂದ ಗ್ರಾಮಾಂತರ ಪ್ರದೇಶಗಳ ಜನರಿಗೆ ಹೆರಿಗೆ ಮತ್ತು ಶಿಶುಪಾಲನಾ ಸೌಲಭ್ಯಗಳು ಒದಗುವಂತಾಗುವುದೆಂದೂ, ಇದಕ್ಕೆ ಸುಮಾರು ೨೫ ಲಕ್ಷ ರೂ ಗಳು ವೆಚ್ಚವಾಗುವುವೆಂದೂ ಹೇಳಲಾಗಿದೆ. ಸದರಿ ಚಿಕಿತ್ಸಾಲಯಗಳಲ್ಲಿ ವೈದ್ಯರು, ವೈದ್ಯಕೀಯ ಉಪಕರಣಗಳೇ ಮುಂತಾದುವು ಇರುವುವೆಂದೂ ತಿಳಿದುಬಂದಿದೆ

ಹುಡುಗಿ ಮಾಯವಾಗಿದ್ದಾಳೆ

ತಿಪಟೂರಿನ ಶ್ರೀ ಚಿಂತಾಮಣಿ ದಾಸರವರ ಮಗಳು [illegible] ಬಾಯಿ ಎಂಬ ಹುಡುಗಿಯು ಕಳೆದ ೧೧ನೇ ತಾರೀಖಿನಿಂದ ಕಣ್ಮರೆಯಾಗಿದ್ದಾಳೆ. ಆಕೆಯ ತಂದೆಯು ಪೋಲೀಸರಲ್ಲಿ ದೂರು ಕೊಟ್ಟಿದ್ದಾರೆ. ಆಕೆಯ ಮೇಲೆ ೨೦೦೦ ರೂ ಬೆಲೆಯಾಗುವ ಚಿನ್ನ ಬೆಳ್ಳಿಯ ಒಡವೆಗಳಿದ್ದುದಾಗಿ ಹೇಳಲಾಗಿದೆ

ರಘುಲಾಲ್ ಕೊಂ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

Edited, printed and published by A R Nagarajan, at Sadhvi Press, D Subbiah Road, Mysore.

ರಷ್ಯವನ್ನು ಬಂಜರು ಬೀಳಿಸುವ ಶಸ್ತ್ರಾಸ್ತ್ರ

ರಷ್ಯವನ್ನು ಕೆಲವು ಗಂಟೆಗಳಲ್ಲಿಯೇ ನಾಶ ಮಾಡಬಲ್ಲ ಅಣು ಬಾಂಬು ಮತ್ತು ಕ್ರಿಮಿಕೀಟಗಳ ಯುದ್ಧದ ಅಸ್ತ್ರಗಳನ್ನು ಪಶ್ಚಿಮ ರಾಷ್ಟ್ರಗಳು ತಯಾರಿಸಬೇಕೆಂದು ಪರರಾಷ್ಟ್ರ ವಿಷಯಗಳ ಬಗ್ಗೆ ಪರ್ಯಾಲೋಚನೆ ನಡೆಸುವ ಆಂಗ್ಲ ಫ್ರೆಂಚ್ ಸಂಧಿ ಕಾರ್ಯಕಾರಿ ಸಮಿತಿಯು ಪಶ್ಚಿಮ ರಾಷ್ಟ್ರಗಳಿಗೆ ಪ್ರಾರ್ಥನೆ ಸಲ್ಲಿಸಿದೆ. ರಷ್ಯದ ಅಗಾಧವಾದ ಶಕ್ತಿಯನ್ನು ಪಶ್ಚಿಮ ರಾಷ್ಟ್ರಗಳು ಎದುರಿಸಲಾರವೆಂದೂ, ಮತ್ತೊಂದು ಅಣು ಶಕ್ತಿಯ ಪರ್ಲ್‌ಹಾರ್ಬರ್ ಧಾಳಿಯು ಪಶ್ಚಿಮ ರಾಷ್ಟ್ರಗಳ ಮೇಲೆ ಆಗಬಹುದಾದ ಭೀತಿಯಿರುವ ಕಾರಣ ಅಣು ಬಾಂಬುಗಳ ತಯಾರಿಕೆಯ ನಿಷೇಧಕ್ಕೆ ಗಮನ ಕೊಡಲಾಗದೆಂದೂ ಸಮಿತಿಯು ಹೇಳಿದೆ

ಹಾವು ಕಡಿದವರನ್ನು ಬದುಕಿಸಬಲ್ಲರು

ಹಾವು ಕಡಿದು ಸತ್ತ ಮನುಷ್ಯನ ಶರೀರದಿಂದ ಪುನಃ ವಿಷವನ್ನು ಕಡಿದ ಹಾವೇ ವಾಪಸು ತೆಗೆದುಕೊಳ್ಳುವಂತೆ ಮಾಡುವ ಶಕ್ತಿಯು ನೆಲ್ಲೂರಿನ ಶ್ರೀ ರಾಮಾನುಜಾಚಾರಿಯರಿಗೆ ಇರುವುದಾಗಿ ಹೇಳಲಾಗಿದೆ. ಮಂತ್ರ ಹಾಕುವುದು ಮತ್ತು ಔಷಧೋಪಚಾರಗಳಿಂದ ಗುಣವಾಗದೇ ಇದ್ದರೆ ಇವರ ಪ್ರಭಾವದಿಂದ ಸತ್ತ ಮನುಷ್ಯನು ಬದುಕಬಲ್ಲನೆಂದು ಆ ಊರಿನ ಪತ್ರಿಕೆಯೊಂದು ತಿಳಿಸಿದೆ

ಅಕ್ರಮ ಶಿಶುಗಳಿಗೆ ವಾರದ ಭತ್ಯ

ಇಂಗ್ಲೆಂಡಿನ ಅವಿವಾಹಿತ ತಾಯಿಯರಿಗೆ ಸಾಮಾನ್ಯವಾಗಿ ಇರುತ್ತಿದ್ದ ನಾಚಿಕೆಯು ಹೋಗಿ ಈಗ ಅವರಲ್ಲಿ ಹೆಮ್ಮೆಯುಂಟಾಗುತ್ತಿರುವುದು ಕಾಣಬರುತ್ತಿದೆಯೆಂದು ಇಂಗ್ಲೆಂಡಿನ ಒಬ್ಬ ಶಾಸ್ತ್ರಿಯು ತಿಳಿಸಿರುತ್ತಾರೆ. ಪತಿತ ಸ್ತ್ರೀಯರನ್ನು ಉತ್ತೇಜಿಸುವ ಕಾರ್ಯವು ಇದರಿಂದ ಹೆಚ್ಚು ಸುಲಭವಾಗಿದೆಯೆಂದೂ ಇವರಿಗೆ ಆಗುವ ಮಕ್ಕಳಿಗೆ ೧೬ ಶಿಲಿಂಗಿನಂತೆ ವಾರದ ಭತ್ಯ ಕೊಡುತ್ತಿರುವರೆಂದೂ ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಸ್ಪೀಕರುಗಳ ಸಮ್ಮೇಳನ

ಬರುವ ಆಗಸ್ಟ್ ತಿಂಗಳ ಮೂರನೇ ವಾರದಲ್ಲಿ ದೆಹಲಿಯಲ್ಲಿ ನಡೆಯಲಿರುವ ಭಾರತ ಸಂಸ್ಥಾನಗಳ ಶಾಸನ ಸಭೆಗಳ ಅಧ್ಯಕ್ಷರ ಮತ್ತು ಸ್ಪೀಕರುಗಳ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀ ಎ. ವೆಂಕಟಪ್ಪನವರು ತೆರಳುವರು

WANTED
Immediately
A B Sc (P C. M)
An Arts(Eng or Hist. Opt)
Pay Rs 60+D A Apply in person
Head Master,
Gurukula High School,
(P. O) Chunchanakatte,
K. R. Nagar Tq.

ಪೂ|| ದೇಶಗಳಿಗೆ ಅಮೆರಿಕಾ ಪೆಟ್ರೋಲ್ ಸರಬರಾಜು ಇಲ್ಲ

ದೂರ ಪೂರ್ವ ರಾಷ್ಟ್ರಗಳಿಗೆ ಅಮೆರಿಕವು ಪೆಟ್ರೋಲ್ ಮತ್ತು ಇತರ ಯುದ್ಧಕ್ಕೆ ಬೇಕಾಗುವ ಸಾಮಗ್ರಿಗಳ ಸರಬರಾಜನ್ನು ನಿಲ್ಲಿಸಿದೆ. ಉತ್ತರ ಕೊರಿಯ ಮತ್ತು ಅದರ ಬಗ್ಗೆ ಸಹಾನುಭೂತಿಯುಳ್ಳವರ ಕೈಗೆ ಈ ವಸ್ತುಗಳು ಬೀಳದಿರುವಂತೆ ಮಾಡುವುದೇ ಇದರ ಉದ್ದೇಶ

ದೆಹಲಿಯಲ್ಲಿ ಆಹಾರ ಮಂತ್ರಿಗಳ ಸಮ್ಮೇಳನ

ಆಹಾರ ಧಾನ್ಯಗಳ ವಸೂಲಿ ಬಗ್ಗೆ ದೇಶಾದ್ಯಂತವೂ ಒಂದೇ ರೀತಿಯ ನೀತಿಯನ್ನು ಅನುಸರಿಸುವ ವಿಷಯವನ್ನು ಪರಿಶೀಲಿಸಲು ದೆಹಲಿಯಲ್ಲಿ ಎಲ್ಲ ಸಂಸ್ಥಾನಗಳ ಆಹಾರ ಮಂತ್ರಿಗಳ ಸಮ್ಮೇಳನವು ಬರುವ ತಿಂಗಳು ನಡೆಯುವುದೆಂದು ಕೇಂದ್ರ ಆಹಾರ ಮಂತ್ರಿಗಳು ತಿಳಿಸಿರುತ್ತಾರೆ

ಹೈದರಾಬಾದು ಹಣವಂತ ಲಾಹೋರಿನಲ್ಲಿ

ಬೊಂಬಾಯಿಯ ಕ್ರಿಕೆಟ್ ಆಟದ ಜಾಗದಿಂದ ಕೆಲವು ದಿನಗಳ ಹಿಂದೆ ತಪ್ಪಿಸಿಕೊಂಡು ಹೋದ ಹೈದರಾಬಾದಿನ ಹಣವಂತ ಮುಬಾರಕ್ ಅಲಿಯು ಈಗ ಲಾಹೋರಿನಲ್ಲಿರುವುದಾಗಿ ತಿಳಿದುಬಂದಿದೆ. ಅವನನ್ನು ವಾಪಸು ಕರೆತರಲು ಏರ್ಪಾಡಾಗುತ್ತಿದೆ

ಆರು ತಿಂಗಳಲ್ಲಿ ಯೂರೇನಿಯಂ ಕಾರ್ಖಾನೆ

ತಿರುವಾಂಕೂರು ಪ್ರದೇಶಗಳಲ್ಲಿ ಸಿಕ್ಕುವ ಯೂರೇನಿಯಂ ಮತ್ತು ಥೋರಿಯಂ ಲೋಹಗಳನ್ನು ಶುದ್ಧಪಡಿಸುವ ಕಾರ್ಖಾನೆಯನ್ನು ಆಲ್ವಾಯಿಯಲ್ಲಿ ಇನ್ನು ಆರು ತಿಂಗಳೊಳಗಾಗಿ ಸ್ಥಾಪಿಸಲಾಗುವುದು.

ಬೊಂಬಾಯಿ ರೈಲುಗಳಿಗೆ ಮಿಲಿಟರಿ ಕಾವಲು

ಬೊಂಬಾಯಿ ಪಕ್ಕ ಪಕ್ಕದ ಊರುಗಳಿಗೆ ಹೋಗಿ ಬರುವ ರೈಲುಗಳಿಗೆ ಮಿಲಿಟರಿ ಕಾವಲನ್ನು ಹಾಕಲಾಗುವುದು. ಈಚೆಗೆ ಈ ರೈಲುಗಳಲ್ಲಿ ಆಗುತ್ತಿರುವ ದರೋಡೆಗಳನ್ನು ತಪ್ಪಿಸಲು ಈ ಏರ್ಪಾಡಾಗಿದೆ

ಸಣ್ಣ ಎಳೆ ಹತ್ತಿಯ ಬೆಳೆಗೆ ನಿಷೇಧ

ಸಣ್ಣ ಎಳೆಯ ಹತ್ತಿಯ ಬೆಳೆಯನ್ನು ಸಂಸ್ಥಾನದಲ್ಲಿ ಐದು ವರ್ಷಕಾಲ ನಿಷೇಧಿಸಲಾಗಿದೆ. ಚಿತ್ರದುರ್ಗದ ಹಲವು ಭಾಗಗಳು, ಅರಸೀಕೆರೆ, ಬೇಲೂರು, ಮಂಡ್ಯ, ಮೈಸೂರು ಮುಂತಾದ ಕಡೆಗಳಲ್ಲಿ ಈ ಬೆಳೆಯನ್ನು ತೆಗೆಯಲಾಗುತ್ತಿದೆ

ಮಾನ್ಯ ಚಂದಾದಾರರಲ್ಲಿ ವಿನಂತಿ

ಕೆಲವು ಮಾನ್ಯ ಚಂದಾದಾರರು ಹಣ ಪಾವತಿ ಮಾಡಿ ರಶೀತಿಯನ್ನೇ ತೆಗೆದುಕೊಳ್ಳದೆ ನಂಬಿಕೆ ಮೇಲೆ ಬಿಟ್ಟುಬಿಟ್ಟಿರುವ ನಿದರ್ಶನವು ನಮ್ಮ ಗೋಚರಕ್ಕೆ ಬಂದಿದೆ. ಇದರಿಂದ ಉಭಯತ್ರರಿಗೂ ತೊಂದರೆಯಾಗುವ ಸಂಭವವಿರುವುದರಿಂದ ದಯವಿಟ್ಟು ರಶೀತಿಯನ್ನು ಪಡೆದೇ ಹಣ ಪಾವತಿ ಮಾಡಬೇಕಾಗಿ ಮತ್ತೊಮ್ಮೆ ವಿನಂತಿ

ಸಾಧ್ವಿ ಏಜೆಂಟರು,
ನ್ಯೂಸ್ ಪೇಪರ್ ಹೌಸ್,
ಮೈಸೂರು

ಪದಾರ್ಥಗಳ ಬೆಲೆ ಇದ್ದಕ್ಕಿದ್ದಂತೆ ಏರಿದೆ

ಈಚೆಗೆ ಪದಾರ್ಥಗಳ ಬೆಲೆಗಳು ಇದ್ದಕ್ಕಿದ್ದಂತೆಯೇ ಏರುತ್ತಿವೆ. ಹೊರಗಿನಿಂದ ಬರತಕ್ಕ ಕರ್ಪೂರ, ಸಾಂಬ್ರಾಣಿ ಮುಂತಾದ ಸರಕುಗಳು, ಕಬ್ಬಿಣದ ಸಾಮಾನುಗಳು ಇವೇ ಅಲ್ಲದೆ ಜೀವನಕ್ಕೆ ಅತ್ಯವಶ್ಯಕವಾದ ಆಹಾರ ಪದಾರ್ಥಗಳು ಮತ್ತು ಬಟ್ಟೆಗಳ ಬೆಲೆಗಳನ್ನು ಹೆಚ್ಚಿಸಲಾಗಿದೆ. ಕೊರಿಯಾ ಯುದ್ಧವು ಪ್ರಾರಂಭವಾದೊಡನೆ ಮೈಸೂರು ದೇಶದಲ್ಲಿ ಬೆಲೆಗಳು ಏಕೆ ಇಷ್ಟಾಗಿ ಏರಬೇಕೋ ತಿಳಿಯದು. ಹಿಂದೆ ಕೊಂಡಿದ್ದ ಪದಾರ್ಥಗಳು ಇನ್ನೂ ವರ್ತಕರ ಅಂಗಡಿಯಲ್ಲಿ ಉಳಿದಿರುವಾಗ ಮತ್ತು ಹೊಸದಾಗಿ ಸರಕುಗಳನ್ನು ತರಿಸದೇ ಇರುವಾಗ ಬೆಲೆ ಏರುತ್ತಿರುವುದನ್ನು ನೋಡಿದರೆ ಲಂಚ ಡಿವಾಳಗಾರರ ಕೈವಾಡವೇ ಇದಕ್ಕೆ ಕಾರಣವೆಂದು ಗೊತ್ತಾಗುತ್ತದೆ. ಸರ್ಕಾರದವರು ವರ್ತಕರುಗಳಿಂದ ದಾಸ್ತಾನು ಪಟ್ಟಿಗಳನ್ನು ತರಿಸಿಕೊಂಡು ಸಾಮಾನಿನ ಬೆಲೆಯನ್ನು ನಿಗದಿ ಮಾಡಿ ಮಾರಾಟ ಮಾಡಬೇಕೆಂದು ನಿರ್ಧರಿಸಬೇಕಾದುದು ಅತ್ಯಂತ ಅವಶ್ಯಕ ಮತ್ತು ಜರೂರು ಕೆಲಸವಾಗಿರುತ್ತದೆ ಮತ್ತು ನಿಗದಿಯಾದುದಕ್ಕಿಂತಲೂ ಹೆಚ್ಚಿನ ಬೆಲೆಗೆ ಮಾರಿದರೆ ಉಗ್ರ ಶಿಕ್ಷೆಯನ್ನು ವಿಧಿಸಬೇಕು. ಅಲ್ಲದೆ ಅಕ್ರಮ ದಾಸ್ತಾನು, ಕಾಳಸಂತೆ ಮಾರಾಟ ಇವುಗಳಲ್ಲಿ ತೊಡಗಿರುವವರನ್ನು ಪತ್ತೆಹಚ್ಚಲು ಸಾರ್ವಜನಿಕರಿಗೆ ಅವಕಾಶವಾಗಬೇಕು. ಪತ್ತೆ ಹಚ್ಚಿದಂತಹವರಿಗೆ ಪ್ರತಿಫಲವಾಗಿ ಪತ್ತೆಯಾದ ಮಾಲಿನಲ್ಲಿ ಭಾಗಾಂಶವನ್ನು ಕೊಡಬೇಕು—ಎಂಬುದಾಗಿ ರಾಜಧಾನಿಯ ಆಹಾರ ಸಮಿತಿಯ ಸದಸ್ಯರಾದ ಶ್ರೀ ಎಂ. ಸಿ. ನರಸಿಂಹಯ್ಯನವರು ಬರೆದಿರುತ್ತಾರೆ

ಒಲಂಪಿಯಾ
13—7—50ರಿಂದ ದಿನದಿ 3 ಆಟಗಳು
ಚಿತ್ರರಂಗದ ಮುನ್ನ ಪ್ರೇಮಿಗಳಾದ ಸುರಯ್ಯ, ಶರೀ ದಿವಾನ್, ಯಾಕೂಬ್ ಅಭಿನಯಿಸಿರುವ
ಫಸಲಿ ಬ್ರದರ್ಸ್‌ರವರ ಅಮೋಘ ಜುಬಿಲಿ ಕಲಾಕೃತಿ
* ದುನಿಯಾ *
14-7 50ರಿಂದ ಬೆಳಗಿನ ಪ್ರದರ್ಶನ
ಭಾರತಿ, ಅಶೋಕ್ [illegible] ಪಾತ್ರವಹಿಸಿರುವ ನ್ಯೂ ಥಿಯೇಟರ್ಸ್‌ರವರ
- ಕಾಶೀನಾಥ್ -

ಹಲ್ಲಿನಲ್ಲಿ ರಕ್ತ ಸೋರುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನು ಜಾಗ್ರತೆಯಾಗಿ ನಿವಾರಿಸುವುದು
ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಈ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6
ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುವುದು.
ರಮಣಿ ಟ್ರೇಡಿಂಗ್ ಕಂಪೆನಿ,
೧೩೯೮/ಬಿ. ಕೃಷ್ಣಮೂರ್ತಿಪುರಂ,
ಮೈಸೂರು
ನಮ್ಮ ಪ್ರತಿನಿಧಿಗಳು:—
ಎಸ್. ವಿ. ಕೆ. ಸ್ವಾಮಿ,
೨೮೭ ದಿವಾನ್ಸ್ ರೋಡ್, ಮೈಸೂರು

ರೀಗಸಂ. 798 ।ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೧೧-೭-೫೦ [ಸಂಚಿಕೆ ೬೨೭

ಗೋವರಾಜಬಂದಿಗಳ ವಿಮೋಚನೆಗೆ ಆಜ್ಞೆ

ಶ್ರೀಮನ್ ಮಹಾರಾಜರಿಗೆ ವಿಶೇಷ ರೀತಿಯ ಭತ್ಯ

ಮೈಸೂರು ೧೧

ಮೈಸೂರಿನ ಶ್ರೀಮನ್ ಮಹಾರಾಜರಿಗೆ ಈಗ ಕೊಡುತ್ತಿರುವ ೨೬ ಲಕ್ಷ ರೂ ವೇತನದ ಜೊತೆಗೆ ೩ ಲಕ್ಷ ರೂ ವಿಶೇಷ ರೀತಿಯ ಭತ್ಯವನ್ನು ಕೊಡಲು ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಯವರು ನಿರ್ಧರಿಸಿದ್ದಾರೆ. ಮಹಾರಾಜರು ರಾಜಪ್ರಮುಖ ಪದವಿಯ ಕರ್ತವ್ಯವನ್ನು ಪಾಲಿಸುತ್ತ ಅನೇಕ ಮುಖ್ಯ ಕಾರ್ಯಗಳನ್ನು ನಡೆಸಬೇಕಾಗಿರುವುದರಿಂದ ಈ ಭತ್ಯವನ್ನು ಕೊಡಲಾಗುವುದೆಂದು ಹೇಳಲಾಗಿದೆ.

ರೆಸ್ಟೊರೆಂಟ್ ಮಾರ್ಕೆಟ್ಟಿನ ಪರಿಶೀಲನೆ

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಹೊಸ ಸಂತೇಪೇಟೆಯಲ್ಲಿ ರಸ್ಸೆಲ್ ಮಾರ್ಕೆಟ್ಟಿಗೆ ಸಂಬಂಧಿಸಿದ ಕಟ್ಟಡ, ಪದಾರ್ಥಗಳ ಮಾರಾಟಗಾಗಿ ಇರುವ ಸ್ಥಳಗಳು, ಗಾಡಿಗಳ ಸ್ಥಳ ಮುಂತಾದುವುಗಳನ್ನು ಪರಿಶೀಲನೆ ನಡೆಸಿದರು. ಅವರೊಡನೆ ಕಾರ್ಪೊರೇಷನ್ ಅಧಿಕಾರಿಗಳು, ಪೌರಸಭೆ ಮತ್ತು ಟ್ರಸ್ಟ್ ಬೋರ್ಡ್ ಅಧಿಕಾರಿಗಳು ಇದ್ದರು.

ಚಾಮರಾಜ ಮೊಹಲ್ಲಾ ಮಹಾಜನ ಸಭಾ

ರಾಜಧಾನಿಯ ಚಾಮರಾಜ ಮೊಹಲ್ಲಾ ಮಹಾಜನ ಸಭೆಯ ಸಾಧಾರಣ ಸಭೆಯು ಇದೇ ತಿಂಗಳು ೨೩ನೇ ತಾ॥ ಭಾನುವಾರ ಮಧ್ಯಾಹ್ನ ೪ ಗಂಟೆಗೆ ಕೃಷ್ಣಮೂರ್ತಿ ಪುರದಲ್ಲಿರುವ ಶ್ರೀ ಎಲ್ ಕೇಶವರಾಯರ ಮನೆಯಲ್ಲಿ ನಡೆಯುತ್ತದೆ. ಸದಸ್ಯರೆಲ್ಲರೂ ಬರುವಿಕೆ ಅವಶ್ಯವೆಂದು ಸಂಘದ ಕಾರ್ಯದರ್ಶಿಯವರು ಕೋರುತ್ತಾರೆ.

ವನ ಮಹೋತ್ಸವ

ರಾಜಧಾನಿಯ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ನೆನ್ನೆ ಸಂಜೆ ವಿದ್ಯಾ ಇಲಾಖೆಯ ಡೈರೆಕ್ಟರರಾದ ಶ್ರೀ ಗುರುದೇವರ ಅಧ್ಯಕ್ಷತೆಯಲ್ಲಿ ವನಮಹೋತ್ಸವವನ್ನು ಆಚರಿಸಲಾಯಿತು. ಅಧ್ಯಕ್ಷರೂ, ಮುಜರಾಯಿ ಸೆಕ್ರೆಟರಿ ಶ್ರೀ ಜೆ. ಎಸ್ ಪಾಟೀಲರೂ ಮತ್ತು ಕಾಲೇಜು ಸಮಿತಿ ಅಧ್ಯಕ್ಷರೂ ಸಸಿಗಳನ್ನು ನೆಟ್ಟರು.

ಅಂತರ್ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯ ಕಾರ್ಯ ವಿವರಣೆ

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಸೇವಾ ಸಂಸ್ಥೆಯ ಸಮಿತಿಯ ಸಂಬಂಧವಾಗಿ ಸದರಿ ಸಂಸ್ಥೆಯ ವ್ಯವಸ್ಥಾಪಕರು ನೆನ್ನೆ ದಿನ ಇಂಡಿಯಾ ಕಾಫಿ ಬಾರಿನಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಿದ್ದರು. ಉಪಾಧ್ಯಕ್ಷರಾದ ಪಂಡಿತ ಶ್ರೀ ಆರ್. ವಾಸುದೇವ ಮೂರ್ತಿಯವರು ಸ್ವಾಗತ ಭಾಷಣ ಮಾಡಿದರು.

ಅನಂತರ ಸೇವಾಸಮಿತಿಯ ಅಮೆರಿಕದ ಸಮಿತಿ ಡೈರೆಕ್ಟರರಾದ ಮಿ॥ ಡೀ ಆರ್ ವೀರ್ವಿಂಗರವರು ಮಾತನಾಡಿ ಸಮಾಜದ ಅಭ್ಯುದಯದಲ್ಲಿ ವಿಶ್ವವಿದ್ಯಾಲಯದ ಪಾತ್ರವೇನೆಂಬುದನ್ನು ಚರ್ಚಿಸಲು ಈ ಗೋಷ್ಠಿಯನ್ನು ಏರ್ಪಡಿಸಲಾಗಿದೆಯೆಂದು ತಿಳಿಸಿದರು. ವಿದ್ಯಾರ್ಥಿ ಸೇವಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ॥ ಕಿಗ್ಸ್‌ಪಾರ್ಕ್ ವಾರಂಟೇಸರವರು ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಪರಿಹಾರ ಒದಗಿಸುವ ಬಗ್ಗೆ ಸದರಿ ಸಂಸ್ಥೆಯು ನಡೆಸುತ್ತಿರುವ ಕಾರ್ಯವನ್ನು ವಿವರಿಸಿದರು.

ಆಸ್ಪತ್ರೆಗಳು ರೋಗಿಗಳಿಗೆ ನಿಜವಾದ ಸ್ವರ್ಗವಾಗಬೇಕು

ಸಚಿವ ಸಿದ್ಧಲಿಂಗಯ್ಯನವರ ಭಾಷಣ

ಬೆಂಗಳೂರು ೧೦

ಇಲ್ಲಿನ ವಾಣಿವಿಲಾಸ ಹೆರಿಗೆ ಆಸ್ಪತ್ರೆಯಲ್ಲಿ ಶ್ರೀಮತಿ ಅಕ್ಕಯ್ಯಮ್ಮನವರ ನಾಮಾಂಕಿತವಾದ ವಿಭಾಗದ ಪ್ರಾರಂಭೋತ್ಸವವನ್ನು ನೆನ್ನೆ ವಿದ್ಯಾ ಮತ್ತು ಆರೋಗ್ಯ ಸಚಿವರಾದ ಶ್ರೀ ಟಿ ಸಿದ್ಧಲಿಂಗಯ್ಯನವರು ನೆರವೇರಿಸಿದರು. ಅವರು ಭಾಷಣ ಮಾಡುತ್ತಾ, ರೋಗಿಗಳು ಆಸ್ಪತ್ರೆಯ ತಮ್ಮ ಕಷ್ಟವನ್ನು ನೀಗುವ ಸ್ವರ್ಗವೆಂದು ಭಾವಿಸಿ ಬರುವರೆಂದೂ, ಆಸ್ಪತ್ರೆಗಳು ನಿಜವಾಗಿಯೂ ರೋಗಿಗಳ ಸ್ವರ್ಗವಾಗಬೇಕೆಂದೂ, ವೈದ್ಯರು ಮತ್ತು ಇತರರು ರೋಗಿಗಳನ್ನು ಚಿಕಿತ್ಸೆ ಮಾಡುವಾಗ ಅವರಿಗೆ ದುಃಖದ ಯೋಚನೆ ಜೊತೆಗೆ ಸೇವಾ ದೃಷ್ಟಿಯೂ ಇರಬೇಕೆಂದೂ ಹೇಳಿದರು. ಶ್ರೀಮಂತರಲ್ಲಿ ಧರ್ಮ ಮಾಡುವ ಬುದ್ಧಿಯು ಬೆಳೆದುಬರಬೇಕೆಂದು ಆಶಿಸಿದರು.

ಇಜ್ಜಲು ಮೂಟೆಯಲ್ಲಿ ಚಿನ್ನದ ಗಟ್ಟಿ ಪತ್ತೆ

ನೆನ್ನೆ ದಿನ ಪರ್ಷಿಯಾ ಕೊಲ್ಲಿಯಿಂದ ಬೊಂಬಾಯಿಗೆ ಬಂದ ಮೂರು ಜನ ಅರಬ್ಬರನ್ನು ಸುಂಕದ ಅಧಿಕಾರಿಗಳು ಶೋಧಿಸಲಾಗಿ, ಅವರ ಬಳಿ ಇದ್ದ ಕಲ್ಲಿದ್ದಲು ಮೂಟೆಯಲ್ಲಿ ಬಚ್ಚಿಟ್ಟಿದ್ದ ೮೦ ಸಾವಿರ ರೂ ಬೆಲೆ ಬಾಳುವ ಚಿನ್ನದ ಗಟ್ಟಿಗಳು ದೊರೆತುವೆಂದು ವರದಿಯಾಗಿದೆ.

ಕೊರಿಯಾ ಯುದ್ಧಕ್ಕೆ ರಷ್ಯದ ಅತ್ಯಾಧುನಿಕ ವಿಮಾನಗಳು

ಕೊರಿಯಾ ಯುದ್ಧದಲ್ಲಿ ಉತ್ತರ ಕೊರಿಯನ್ನರು ರಷ್ಯದ ಅತ್ಯಾಧುನಿಕ ಜೆಟ್ (ಜಾಕೆಟ್ಸ್) ಎಂಬ ಹೊಸ ವಿಮಾನಗಳನ್ನು ಉಪಯೋಗಿಸುತ್ತಿದ್ದಾರೆಂದು ಪ್ರಕಟಿಸಲಾಗಿದೆ.

ಅಚ್ಯುತ ಪಟವರ್ಧನರ ರಾಜೀನಾಮೆ

ಅಖಿಲ ಭಾರತ ಸಮಾಜವಾದಿ ಪಕ್ಷಕ್ಕೆ ಅಚ್ಯುತ ಪಟವರ್ಧನರು ರಾಜೀನಾಮೆ ಸಲ್ಲಿಸಿರುವುದರಿಂದ ಸಂಸ್ಥೆಯಲ್ಲಿ ಒಡಕು ಉಂಟಾಗಿದೆಯೆಂದು ಹೇಳಲಾಗಿದೆ.

ಮೈಸೂರು ಸರ್ಕಾರವು ಸಾಲ ಎತ್ತುವ ಸಂಭವ ಕಡಿಮೆ

ಹಣಕಾಸಿನ ಮಂತ್ರಿಗಳ ವಿವರಣೆ

ಸ್ವಂ ಮು ಪ್ರೋ] ಬೆಂಗಳೂರು ೧೧

ಸಂಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಸಾಲದ ವಿಷಯವನ್ನು ಸರ್ಕಾರದವರು ಇನ್ನೂ ತೀರ್ಮಾನಿಸಿಲ್ಲವೆಂದು ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ದೆಹಲಿಯಲ್ಲಿ ಅವರು ರಾಷ್ಟ್ರಾಧ್ಯಕ್ಷರು, ಪ್ರಧಾನಿ ಮತ್ತು ಕೇಂದ್ರ ಯೋಜನಾ ಸಮಿತಿಯನ್ನು ಭೇಟಿ ಮಾಡಿದ್ದರು. ಮೈಸೂರು ಸಂಸ್ಥಾನದ ಸಿವಿಲ್ ಸರ್ವೀಸಿನ ಬಗ್ಗೆ ಕೇಂದ್ರ ಸರ್ಕಾರದವರು ಹೆಚ್ಚು ಉದಾರವಾಗಿ ಪರಿಗಣಿಸುವರೆಂದೂ, ಡೆಲ್ಲಿಯಲ್ಲೇ ಆರಿಕೆಯ ಸಮಿತಿಯು ಸಂಸ್ಥಾನಕ್ಕೆ ಬರುವುದೆಂದೂ ಅವರು ತಿಳಿಸಿದರು.

ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಆಗಮನ

ಕೇಂದ್ರ ಸರ್ಕಾರದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮತ್ತು ಪ್ರಾದೇಶಿಕ ಉದ್ಯೋಗ ವಿನಿಮಯದ ಡೈರೆಕ್ಟರವರು ಇದೇ ತಿಂಗಳು ೨೮ ಮತ್ತು ೨೯ನೇ ತಾರೀಖುಗಳಲ್ಲಿ ಸಂಸ್ಥಾನಕ್ಕೆ ಭೇಟಿ ಕೊಡುವರು. ಸಂಸ್ಥಾನದ ಹಲವು ಉನ್ನತಾಧಿಕಾರಿಗಳು ಬೆಂಗಳೂರಿನಲ್ಲೂ, ಹಲವರು ಮೈಸೂರಿನಲ್ಲೂ ಅವರನ್ನು ಭೇಟಿಮಾಡುವ ಸಂಭವ ಕಾಣುತ್ತದೆ.

ಶ್ರೀನಗರದಲ್ಲಿ ಭೂಕಂಪ

ಶ್ರೀನಗರ ಮತ್ತು ಕಾಶ್ಮೀರ ಕಣಿವೆಗಳಲ್ಲಿ ನೆನ್ನೆ ರಾತ್ರಿ ೧೦ ಗಂಟೆಗೆ ೨ ಬಾರಿ ಭೂಕಂಪಗಳಾದವು. ಜೀಲಂ ನದಿಯ ದೋಣಿಗಳ ಮೇಲೆ ವಾಸಿಸುವ ಜನರಿಗೆ ಇದರ ಪರಿಣಾಮವು ತಿಳಿಯಿತು. ಯಾವ ನಷ್ಟವೂ ಉಂಟಾಗಲಿಲ್ಲ.

ಗೋವಾ ರಾಜಕೀಯ ಬಂದಿಗಳೆಲ್ಲರ ಬಿಡುಗಡೆ

ಗೋವಾ ಮುಂತಾದ ಇತರ ಪೋರ್ಚುಗೀಸ್ ವಸಾಹತುಗಳಲ್ಲಿರುವ ಎಲ್ಲಾ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡುವಂತೆ ಪೋರ್ಚುಗಲ್ಲಿನ ಸರ್ಕಾರವು ಆಜ್ಞೆ ಮಾಡಿದೆ. ಗೋವಾದಲ್ಲಿ ೨೦ ಜನರು ಜೈಲಿನಲ್ಲಿದ್ದಾರೆ.

ಸಂಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ

ಸ್ವಂ ಮು ಪ್ರೋ] ಬೆಂಗಳೂರು ೧

ಸಂಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರು ಬರುವ ಅಕ್ಟೋಬರಿನಲ್ಲಿ ಭೇಟಿಯಿತ್ತು ಮುಕ್ಕಾಂ ಮಾಡುವರೆಂದು ತಿಳಿದುಬಂದಿದೆ.

ವಿಶ್ವ ಸಂಸ್ಥೆ ಬಗ್ಗೆ ರಷ್ಯ ಪತ್ರಿಕೆಗಳ ಟೀಕೆ

ಕೊರಿಯಾ ಯುದ್ಧದ ಪ್ರಶ್ನೆಯಲ್ಲಿ ರಷ್ಯದ ಪತ್ರಿಕೆಗಳು ವಿಶ್ವಸಂಸ್ಥೆಯ ಕಾರ್ಯಕಲಾಪಗಳನ್ನು ಉಗ್ರವಾಗಿ ಟೀಕಿಸಿವೆ. ಈ ಸಂಸ್ಥೆಯು ಅಮೆರಿಕದ ಕೈಗೊಂಬೆಯಾಗಿದೆಯೆಂದು ಅವು ಹೇಳಿವೆ.

ಗಂಡು ವೇಷದ ಸ್ತ್ರೀಯು ಮತ್ತೊಬ್ಬಳನ್ನು ವರಿಸಿದಳು

ಗಂಡು ವೇಷವನ್ನು ಧರಿಸಿ ಫರ್ಮಾನ್ ಖಾನ್ ಎಂಬ ಹೆಸರು ಇಟ್ಟುಕೊಂಡಿದ್ದ ಒಬ್ಬ ಆಸ್ಸಾಮಿನ ಸ್ತ್ರೀಯು ಮತ್ತೊಬ್ಬ ೧೮ ವರ್ಷದ ಹುಡುಗಿಯನ್ನು ವಿವಾಹ ಮಾಡಿಕೊಂಡ ಅಪರಾಧಕ್ಕಾಗಿ ಅಲ್ಲಿನ ನ್ಯಾಯಾಲಯವು ಆಕೆಗೆ ಜೈಲು ಶಿಕ್ಷೆ ವಿಧಿಸಿದೆ. ಆಕೆಯ "ಪತ್ನಿ"ಯ ವಿವಾಹವು ಅತ್ಯಂತ ಸುಖಪ್ರದವಾಗಿತ್ತೆಂದು ಹೇಳಿದಳು.

ಸತತವಾಗಿ ಬಾಂಬು ಹಾಕಲು ಅಮೆರಿಕ ವಿಮಾನಗಳಿಗೆ ಆಜ್ಞೆ

ಕೊರಿಯದ ಕ್ಷಿಪ್ರ ಕ್ಷೇತ್ರದಲ್ಲಿರುವ ಎಲ್ಲ ಸ್ಥಳಗಳ ಮೇಲೆ ದಿನವೆಲ್ಲಾ ಬಿಡುವಿಲ್ಲದೆ ಬಾಂಬುಗಳನ್ನು ಹಾಕಬೇಕೆಂದೂ ವಾಹನಗಳನ್ನು ಲಕ್ಷಿಸಬೇಕೆಂದೂ ಅಮೆರಿಕದ ವಿಮಾನ ಅಧಿಕಾರಿಗಳ ಆಜ್ಞೆಯಾಗಿದೆ.

ಪೂಜಾರಿಗೆ ಗಾಯ ಮಾಡಿ ದೇವರ ಒಡವೆಗಳ ದರೋಡೆ

ಬೊಂಬಾಯಿನ ಕುದುರೆ ಜೂಜು ನಡೆಯುವ ಸ್ಥಳದ ಹತ್ತಿರ ಇರುವ ಮಹಾಲಕ್ಷ್ಮಿ ದೇವಾಲಯಕ್ಕೆ ನೆನ್ನೆ ಬೆಳಿಗ್ಗೆ ಇಬ್ಬರು ದರೋಡೆಕಾರರು ಶಸ್ತ್ರಧಾರಿಗಳಾಗಿ ನುಗ್ಗಿ ಪೂಜಾರಿಯ ತಲೆಗೆ ಏಟು ಹಾಕಿ ಬಂದಿದ್ದ ಜನರನ್ನು ಬಾಗಿಲಲ್ಲಿ ಕಾವಲಿಟ್ಟು ತಾವು ಒಳಗೆ ಹೋಗಿ ಬಗಿಲನ್ನು ಮುಚ್ಚಿ ದೇವರಿಗೆ ತೊಡಿಸಿದ್ದ ಆಭರಣವನ್ನು ಕೊಡಬೇಕೆಂದು ಪೂಜಾರಿಯನ್ನು ಕೇಳಿದಾಗ ಅವನು ಸಮ್ಮತಿಸದಿರಲು ಅವನನ್ನು ಗುಂಡಿನಿಂದ ಗಾಯಗೊಳಿಸಿ, ಸುಮಾರು ೫ ಸಾವಿರ ರೂ ಬಾಳುವ ಒಡವೆಗಳನ್ನು ಅಪಹರಿಸಿಕೊಂಡು ಹೋದರೆಂದು ಹೇಳಲಾಗಿದೆ. ಪೂಜಾರಿಯನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರಿನ ಮಟ್ಟವು ೬೦-೩ ಅಡಿಗಳಷ್ಟಿದೆ.

ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ

ಕಲಕತ್ತೆಯಲ್ಲಿ ಕಾಂಗ್ರೆಸ್ಸ್ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಮಾಡುತ್ತಿದ್ದ ಪೊಲೀಸ್ ಅಧಿಕಾರಿಯನ್ನು ಇಂಡುವನ್ನು ಕಳೆದ ತಿಂಗಳು ೩ನೇ ತಾ॥ ಹೊಡೆದುದಕ್ಕಾಗಿ ಮೂವರು ಪೊಲೀಸರ ಮೇಲೆ ಇಲ್ಲಿನ ಪ್ರಧಾನ ನ್ಯಾಯಾಧಿಕಾರಿಗಳು ೧೫ ದಿವಸಗಳ ಕಾಲ ಸಜೆಯನ್ನು ವಿಧಿಸಿರುವರು.

ಕೊರಿಯಾದಲ್ಲಿ ಅನೇಕ ಅಮೆರಿಕನ್ನರ ಕೈ ಸೆರೆ

ಕೊರಿಯಾದಲ್ಲಿ ಮೊನ್ನೆ ದಿನ ಮೊಟ್ಟಮೊದಲಾಗಿ ಅಮೇರಿಕದ ಟ್ಯಾಂಕುಗಳು ಕಾಳಗಕ್ಕೆ ಪ್ರಾರಂಭಿಸಿದವು ಇವುಗಳಿಗೆ ಸಹಾಯವಾಗಿ ಜೆಟ್ ವಿಮಾನಗಳು ಕಮ್ಯೂನಿಸ್ಟ್ ಸೈನ್ಯಗಳ ದೀರ್ಘ ಸರಬರಾಜು ಸಾಲುಗಳ ಮೇಲೆ ಬಾಂಬುಗಳನ್ನು ಸುರಿದವು ಉತ್ತರ ಕೊರಿಯದ ಸೈನ್ಯಗಳು ಈಗ ದಕ್ಷಿಣ ರಾಜ್ಯದ ಹೊರ ರಾಜಧಾನಿ ಟೈಜೋನ್‌ಗೆ ಕೇವಲ ೩೦ ಮೈಲಿ ದೂರದಲ್ಲಿವೆ ೪೦ ಉ ಕೊರಿಯನ್ನರ ಟ್ಯಾಂಕುಗಳನ್ನು ನಾಶಪಡಿಸಲಾಗಿದೆ [illegible] ಎಂಬುದು ಶತ್ರು ವಶವಾಗಿದೆ ಪೀಕಿಂಗ್ ರೇಡಿಯೋವಿನ ಹೇಳಿಕೆ ಪ್ರಕಾರ ಅನೇಕ ಅಮೆರಿಕ ಸೈನ್ಯಗಳು ಉತ್ತರ ಕೊರಿಯಾದವರ ಕೈಸೆರೆಯಾಗಿವೆ ಒಂದು ಕಡೆ ಸುತ್ತುವರಿಯಲ್ಪಟ್ಟಿದ್ದ ಅಮೆರಿಕ ಸೇನೆಗಳು ತಪ್ಪಿಸಿಕೊಂಡುಬಂದವು ವಿಶ್ವದಲ್ಲೆಲ್ಲಾ ಕೊರಿಯಾ ಯುದ್ಧವು ಹರಡುವ ಸಂಭವವಿಲ್ಲವೆಂದು ಭದ್ರತಾ ಸಮಿತಿ ಅಧ್ಯಕ್ಷರು ಸೂಚಿಸಿದ್ದಾರೆ ಉತ್ತರ ಕೊರಿಯವನ್ನು ಗೆಲ್ಲಬೇಕಾದರೆ ೧೦ ಲಕ್ಷ ಅಮೆರಿಕ ಸೈನಿಕರು ೧ ವರ್ಷ ಕಾದಾಟ ಸತತ ಹೋರಾಟ ನಡೆಸಬೇಕಾಗುವುದೆಂದು ಅಮೆರಿಕದ ಸೇನಾನಿಯೊಬ್ಬನ ಹೇಳಿಕೆಯಿಂದ ಗೊತ್ತಾಗುತ್ತಿದೆ

ಪಂಡಿತರ ಹಣದ ಪರ್ಸು ಪಕ್ಷಿಯಿಂದ ಅಪಹಾರ

ಗೌಹಾತಿ ಶಾಲೆಯ ಪಂಡಿತರೊಬ್ಬರ ಜೇಬಿನಲ್ಲಿದ್ದ ಹಣದ ಪರ್ಸನ್ನು ಪಕ್ಷಿಯೊಂದು ಹಾರಿ ಬಂದು ಕೊಕ್ಕಿನಲ್ಲಿ ಕಚ್ಚಿಕೊಂಡು ಹೋಗಿ ತನ್ನ ಗೂಡಿನಲ್ಲಿಟ್ಟು ಅದರ ಮೇಲೆ ಮೊಟ್ಟೆಗಳನ್ನು ಇಟ್ಟ ವರದಿಯು ಬಂದಿದೆ ಪಂಡಿತರು ಮರದ ಕೆಳಗೆ ಪಂಚೆ ತೆಗೆದು ಹಾಗೆಯೇ ವಿಶ್ರಮಿಸುತ್ತಿದ್ದಾಗ ಈ ಘಟನೆಯು ನಡೆಯಿತು ಅನಂತರ ಅವರು ಮರಕ್ಕೆ ಹತ್ತಿ ಅದನ್ನು ತೆಗೆದುಕೊಂಡರು

ಚಾಮುಂಡೇಶ್ವರಿ
ಟಾಕೀಸ್
12-7-50ರಿಂದ ಪ್ರತಿ ದಿನ 3 ಆಟಗಳು
* ದೇವದಾಸಿ *
(ಹಿಂದಿ)
ಪಾತ್ರ-ಪೃಥ್ವಿರಾಜ್, ಕೆ ಸಿ ಡೇ, ಮತ್ತು ಮೊನಿಕಾ ದೇಸಾಯಿ

ಒಲಂಪಿಯಾ
13—7—50ರಿಂದ ದಿನವಹಿ 3 ಆಟಗಳು
ಚಿತ್ರರಂಗದ ಯುಗ್ಮ ಪ್ರೇಮಿಗಳಾದ ಸುರಯ್ಯಾ, ಕರ್ ದಿವಾನ್, ಯಾಕೂಬ್ ಅಭಿನಯಿಸಿರುವ
ಫಜಲಿ ಬ್ರದರ್ಸರವರ ಅನೋಖಿ ಜೂಬಿಲಿ ಕಲಾಕೃತಿ
- ದುನಿಯಾ -
14-7 50ರಿಂದ ಬೆಳಗಿನ ಪ್ರದರ್ಶನ
ಭಾರತಿ, ಅಸಿತ್ ಬರನ್ ಪಾತ್ರವಹಿಸಿರುವ
ನ್ಯೂ ಥಿಯೇಟರ್ಸ್‌ರವರ
• ಕಾಶೀನಾಥ್ •

Edited, printed and published by A K Nagarajan, at Sadhvi Press, D Subbiah Road, Mysore

ಕಾಡು ಮೃಗಗಳಿಗೆ ಹಾಲು ಮತ್ತು ಸಸ್ಯಾಹಾರ

ಜುನಘಡದ ಮೃಗಾಲಯದಲ್ಲಿರುವ ೧೪ ಕಾಡು ಮೃಗಗಳು ಕಳೆದ ಹಲವು ದಿನಗಳಿಂದಲೂ ಆಹಾರ ವಿಲ್ಲದೆ ಇವೆ ಇವುಗಳಲ್ಲಿ ಸಿಂಹ, ಹುಲಿ, ಚಿರತೆಗಳೂ ಇವೆ ಇವುಗಳಿಗೆ ಸಸ್ಯಾಹಾರವನ್ನು ಕೊಡುವ ಪ್ರಯತ್ನ ನಡೆಯಿತು ಅದು ಸಫಲವಾಗದೆ ಹಾಲನ್ನು ಕೊಡಲು ಹೋದಾಗ ಕಾಡು ಮೃಗಗಳು ಪಂಜರಗಳೊಳಗೆ ಹಿಂಗಾಲು ಪಂಜಗಳನ್ನೆತ್ತಿ ತಮ್ಮ ಅಸಮಾಧಾನವನ್ನು ತೋರಿಸಿದವು ಅತ್ಯಂತ ಹಿಂದುಗಳಿಗೆ ಪವಿತ್ರವೆನಿಸಿದ ಪುರುಷೋತ್ತಮ ಮಾಸವಾದ ಈ ದಿನಗಳಲ್ಲಿ ಕಸಾಯಿ ಖಾನೆಗಳನ್ನು ಮುಚ್ಚಲಾಗಿರುವುದರಿಂದ ಮೃಗಾಲಯಕ್ಕೆ ಒದಗುತ್ತಿದ್ದ ೮ ಮಣ ಮಾಂಸವು ಸಿಕ್ಕದೆ ಪ್ರಾಣಿಗಳಿಗೆ ತೊಂದರೆಯಾಗಿದೆ

೧೭ ಗ್ರಂಥಗಳುಳ್ಳ ಗಾಂಧೀಜಿ ಜೀವನ ಚರಿತ್ರೆ

ಮಹಾತ್ಮ ಗಾಂಧಿಯ ಪರಮ ಆಪ್ತ ಕಾರ್ಯದರ್ಶಿಗಳಾಗಿದ್ದ ಪ್ಯಾರೇಲಾಲರು ೧೭ ಗ್ರಂಥಗಳಾಗುವ ಗಾಂಧೀಜಿ ಜೀವನ ಚರಿತ್ರೆಯನ್ನು ಬರೆಯಲು ಏರ್ಪಾಡು ಮಾಡುತ್ತಿದ್ದಾರೆ

ಇಂಡೋಚೀಣ ಗಡಿ ಬಳಿ ೩೦ ಸಾವಿರ ಚೀಣಾ ಕಮ್ಯೂನಿಸ್ಟರು

ಇಂಡೋಚೀಣದ ಗಡಿ ಬಳಿ ೨೦ರಿಂದ ೩೦ ಸಾವಿರ ಕಮ್ಯೂನಿಸ್ಟರು ಸಿದ್ಧತೆ ಮಾಡಿಕೊಂಡು ಇರುವುದಾಗಿ ವರದಿಯಾಗಿದೆ

ಗಣೇಶಾ ಟಾಕೀಸ್
12-7-50 ರಿಂದ ಪ್ರತಿದಿನ 3 ಆಟಗಳು
ಪ್ರಖ್ಯಾತ ನಟನಾದ ಮೈಸೂರು ಸಾಬು ನಟಿಸಿರುವ
ಎಲಿಫೆಂಟ್ - - ಬಾಯ್
ಮುಂದಿನ ಬದಲಾವಣೆ -
ಬಡಿ ಬಹೆನ್
(ಹಿಂದಿ)

ರಾಜಕಮಲ್,
ಮೈಸೂರು
ರಂಜಾನ್ ಹಬ್ಬದ ಪ್ರಯುಕ್ತ
ಸ್ಪೆಷಲ್ ಪ್ರೋಗ್ರಾಂ
14-7-50 ರಿಂದ ಅಪೂರ್ವ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲ್ಮಿಸ್ತಾನರವರ ಹಿಂದಿ ಚಿತ್ರ
• ಸಮಾಧಿ •
ಭೂಮಿಕೆ — ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್ ಮತ್ತು ಮುಬಾರಕ್
—: ಈಗ ನಡೆಯುತ್ತಿದೆ :—
ರಾಜಕಮಲ್ ಕಲಾ ಮಂದಿರ್‌ರವರ
* ಭೂಲ್ *
(ಹಿಂದಿ)

ಷಹಾಪುರದ ರಾಜಮಾತೆ ಮೇಲೆ ದಾವಾ

ರಾಜಾಸ್ಥಾನಕ್ಕೆ ಸೇರಿದ ಷಹಾಪುರದ ರಾಜಮಾತೆಗೆ ರಾಜಸ್ಥಾನದ ಹೈಕೋರ್ಟಿಗೆ ಹಾಜರಾಗ ಬೇಕೆಂದು ಸಮನ್ಸನ್ನು ಕಳುಹಿಸಲಾಗಿದೆ ಗುತ್ತಿಗೆದಾರನೊಬ್ಬನನ್ನು ಅಕ್ರಮವಾಗಿ ಹಿಡಿಸಿ ಅವನು ಬೆಳೆದಿದ್ದ ಪೈರನ್ನು ಕಿತ್ತುಕೊಂಡಳೆಂಬುದಾಗಿ ಆಕೆಯ ಮೇಲೆ ದೂರು ಕೊಡಲಾಗಿತ್ತು ಸಮನ್ಸು ಕೊಡಲು ರಾಜಪ್ರಮುಖರ ಸಮ್ಮತಿ ದೊರೆತಿದೆ

ಖಾನೇಷುಮಾರಿಯಲ್ಲಿ ಸಾಧುಗಳ ಸ್ಥಾನ

ಸಾಧು ಮತ್ತು ಸನ್ಯಾಸಿಗಳನ್ನು ಮತೀಯ ಮತ್ತು ಧರ್ಮಾರ್ಥ ಸೇವೆಯ ಜನರ ಗುಂಪಿಗೆ ಬರುವ ವರ್ಷ ತೆಗೆದುಕೊಳ್ಳಲಾಗುವ ಖಾನೇಷುಮಾರಿ ಲೆಕ್ಕದಲ್ಲಿ ಸೇರಿಸಲಾಗುವುದು ಇದ ವರೆಗೆ ಅವರನ್ನು ಮೂರು ವಿಭಾಗವಾಗಿ ವಿಂಗಡಿಸಿ, ಸಾರ್ವಜನಿಕರಿಗೆ ಉಪಯುಕ್ತ, ಅನುಪಯುಕ್ತ ಮತ್ತು ಭಿಕಾರಿಗಳೆಂದು ಭಾವಿಸಲಾಗುತ್ತಿತ್ತು

ಲಂಡನ್ನಿನಲ್ಲಿ ಲಾರಿ ಡ್ರೈವರುಗಳ ಮುಷ್ಕರ

ಲಂಡನ್ನಿನ ೩೦ ಸಾವಿರ ಲಾರಿ ಡ್ರೈವರುಗಳು ಮುಷ್ಕರ ಹೂಡಲು ನಿಶ್ಚಯಿಸಿದ್ದಾರೆ ಪರಿಸ್ಥಿತಿಯು ಹದಗೆಡದಂತೆ ನೋಡಿಕೊಳ್ಳಲು ಸಾವಿರಗಟ್ಟಲೆ ಸೈನಿಕರು ಮತ್ತು ವೈಮಾನಿಕರು ಸಿದ್ಧವಾಗಲು ಸರ್ಕಾರದ ಆಜ್ಞೆಯಾಗಿದೆ

SRI GAYATHRI
TALKIES
Daily 3 Shows
From 12-7-50 for 2 days
R K O s
most interesting picture
THE SET UP
With — Robert Ryne and
Andrew Totter
— Next Change —
'Man-eater of Kumaon'
With — Sabu

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು
ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ [illegible] ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6
ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.
ರಮಣಿ ಟ್ರೇಡಿಂಗ್ ಕಂಪನಿ,
[illegible], ಕೃಷ್ಣಮೂರ್ತಿಪುರಂ,
ಮೈಸೂರು
ಮುಖ್ಯ ಪ್ರತಿನಿಧಿಗಳು.-
ಎಸ್. ಪಿ. ಕೆ. ಸ್ವಾಮಿ,
[illegible] ರೋಡ್, ಮೈಸೂರು.

ಲಂಡನ್ ಪ್ರಥಮ ನಗರವೆಂಬ ಬಿರುದು ಹೋಯಿತು

ಅತ್ಯಂತ ಹೆಚ್ಚಿನ ಜನ ಸಂಖ್ಯೆಯುಳ್ಳ ನಗರವೆಂದ ಕರೆಸಿಕೊಳ್ಳುತ್ತಿದ್ದ ಲಂಡನ್ ಪಟ್ಟಣವು ತನ್ನ ಪ್ರಶಸ್ತಿಯನ್ನು ಕಳೆದುಕೊಂಡಿರುವುದಾಗಿ ಹೇಳಲಾಗಿದೆ ನ್ಯೂಯಾರ್ಕಿಗೆ ಅದು ಈಗ ದೊರೆತಿದೆ ಲಂಡನ್ನಿನ ಪ್ರಜಾ ಸಂಖ್ಯೆ ೮೩ ಲಕ್ಷ

Mal No 440 Eng

ಚೈನಾ ತುರ್ಕಿಸ್ತಾನ

ನಾವು ವಾಸಿಸುತ್ತಿರುವ ವಿಲಕ್ಷಣವಾದ ಗೋಳವೇ ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ವಿಸ್ಮಯದ ಯಾವುದೇ ಒಂದು ಭಾಗವಾದ ಚೀನಾ ತುರ್ಕಿಸ್ತಾನ ಈ ಪ್ರದೇಶವು ಮರಳಿನಂತೆ ಒಣಗಿ ನಿಂತಿದೆ ಇಲ್ಲಿ ಮಳೆಯು ಬೀಳುವುದೇ ಇರುವುದಿಲ್ಲ ಹಾಗೇನಾದರೂ ಒಂದು ವೇಳೆ ಸ್ವಲ್ಪ ಹನಿಯುದುರಿದರೆ ಅದೇ ಅಪಘಾತವಾಗಿ ಪರಿಣಮಿಸುವುದು ಏಕೆಂದರೆ ಮಣ್ಣಿನಿಂದ ಕಟ್ಟಿದ ಗೋಡೆಗಳು ಈ ಸಣ್ಣ ಸಣ್ಣ ಹನಿಗಳಿಗೇ ಕರಗಿ ಹೋಗಿ ಮನೆಗಳು ನಾಶವಾಗುವುವು ಈ ಹಿಂದೆ ಒಂದು ಸಾರಿ ಬಂದ ಮಳೆಯಲ್ಲಿ 'ಕಾಸ್ಗರ್' ಪಟ್ಟಣವು ಪೂರ್ಣ ಗುರುತೂ ಸಿಕ್ಕದಂತೆ ಅಳಿದು ಹೋಯಿತು ಈ ದೇಶದಲ್ಲಿ ಭೂಮಿಯು ಬಹಳ ಫಲವತ್ತಾಗಿದೆಯಲ್ಲದೆ ಸುಮಾರು ೧೪೦೦ ವರುಷಗಳ ಹಿಂದೆ ಹಾಕಿದ ವ್ಯವಸಾಯ ಯೋಜನೆಗಳು ಫಲಕಾರಿಯಾಗಿ ಈಗಲೂ ಹೆಚ್ಚು ಕೆಲಸ ಮಾಡುತ್ತಿವೆ ಸಾಗುವಳಿಯಾಗುವ ಜಮೀನುಗಳಿಗೆ ನಾಲೆಗಳ ಮೂಲಕ ನೀರು ಸರಬರಾಜಾಗುವುದು ಅನೇಕವೇಳೆ ೩-೪ ನಾಲೆಗಳು ಒಂದರಮೇಲೊಂದು ಓಡುವುವು. ಇವು ಎಂಜಿನಿಯರಿಂಗ್‌ನ ಅದ್ಭುತ ಸಾಹಸವಾಗಿದ್ದು ನೋಡುವವರ ಮೆಚ್ಚಿಗೆಯನ್ನು ಪಡೆಯದೇ ಇರುವುದಿಲ್ಲ ಇಲ್ಲಿಯ ಜನಗಳೂ ಕೂಡ ಬಹಳ ಮೂಢರಾಗಿರುವುದು ಮತ್ತೊಂದು ಗಮನಾರ್ಹ ವಿಷಯ ಲೀಗ್ ಆಫ್ ನೇಷನ್ಸ್‌ನವರು ಮಲೇರಿಯಾ ಕಾಯಿಲೆಯಿಂದ ನರಳುವವರುಗಳಿಗೆ ಸರಿಯಾದ ಚಿಕಿತ್ಸೆ ಮಾಡಲು ಕ್ರೈಸ್ತರಿಂದೊಡಗೂಡಿದ ಸಮಿತಿಯೊಂದನ್ನು ಏರ್ಪಡಿಸಿದ್ದರು ಪ್ರಪಂಚದ ಎರಡನೇ ಮಹಾ ಸಂಗ್ರಾಮದ ಅಂತ್ಯದವರೆವಿಗೂ ಈ ಜನಗಳು ಮಲೇರಿಯಾ ಸಮಿತಿಯಿಂದ ನಿರ್ಧಾರ ಮಾಡಲ್ಪಟ್ಟಿದ್ದ ಕ್ವಿನೈನ್ ಔಷಧಿಯನ್ನು ತೆಗೆದುಕೊಳ್ಳಲು ತಿರಸ್ಕರಿಸುತ್ತಿದ್ದರು ಅವರು ಈ ಸಲಹೆಯನ್ನು ಸ್ವೀಕರಿಸಿದ್ದರೆ ಮಲೇರಿಯಾದಿಂದ ತೊಂದರೆಪಡುವ ಅನೇಕರ ಗೋಳನ್ನು ತಪ್ಪಿಸಬಹುದಾಗಿತ್ತು ಪ್ರತಿವರ್ಷವೂ ಮಲೇರಿಯಾದಿಂದ ನರಳುವವರು ೧೫ ರಿಂದ ೩೦ ಡೋಸ್ ಕ್ವಿನೈನ್ ಔಷಧಿಯನ್ನು ೫ ರಿಂದ ೭ ದಿವಸಗಳವರೆಗೆ ತೆಗೆದುಕೊಂಡಿದ್ದರೆ ಸಾಕಾಗುತ್ತಿತ್ತು ಸಮಿತಿಯು ೧೯೩೮ ರಲ್ಲಿ ಪ್ರಕಟಿಸಿದಂತೆ ಮಲೇರಿಯಾ ಜ್ವರದಿಂದ ನರಳುವವರಿಲ್ಲದಿದ್ದರೂ ಆ ಕಾಲದಲ್ಲಿ ೬ ಗ್ರೇನ್ ಕ್ವಿನೈನ್ ಔಷಧಿಯನ್ನು ತೆಗೆದುಕೊಂಡರೆ ಅತ್ಯಂತ ಪರಿಣಾಮಕಾರಿಯಾಗಿಯೂ ಗುಣಕಾರಿಯಾಗಿಯೂ ಇರುವುದೆಂದ ತಿಳಿಸಲ್ಪಟ್ಟಿದೆ

... 792 ... ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೪] ಬುಧವಾರ ೧೨-೭-೫೦ [ಸಂಚಿಕೆ ೩೨೮

ಕೊರಿಯಾ ಯುದ್ಧಕ್ಕೆ ಇತರ ದೇಶಗಳ ಸೈನ್ಯ

ಪ್ರಪಂಚವು ಶಸ್ತ್ರಗಳಲ್ಲಿ ಪುನಃ ಮುಳುಗಬಾರದು

ಅಂ|| ರಾ|| ವಿದ್ಯಾರ್ಥಿ ಗೋಷ್ಠಿಯಲ್ಲಿ ಮಹಾರಾಜರ ಭಾಷಣ

ಮೈಸೂರು ೧೨

ಪಾಶ್ಚಿಮಾತ್ಯ ದೇಶಗಳು ಆಕ್ರಮಣ ಮತ್ತು ಹೋರಾಟಗಳಿಂದ ಜೀವಿಸುತ್ತಿವೆ ಮತ್ತು ಪೂರ್ವ ರಾಷ್ಟ್ರಗಳಲ್ಲಿರುವ ಜೀವನದ ರೀತಿ ನೀತಿಯ ಬಗ್ಗೆ ಅವುಗಳು ಜೇವಾಪ್ಯತವಾಗಿವೆ ಉಭಯತ್ರರಿಗೂ ಭವಿಷ್ಯದ ಬಗ್ಗೆ ಹಲವು ಬಾರಿ ನಿರಾಶೆಯಾಗುವುದು ಸಹಜವಾಗಿದೆ. ಕಳೆದ ಯುದ್ಧದ ನಂತರ ಶಾಶ್ವತ ಅಂತರ ರಾಷ್ಟ್ರೀಯ ಸೌಹಾರ್ದತೆಯು ಮೂಡುವುದೆಂದು ನಂಬಲಾಗಿತ್ತು. ವಿವಿಧ ರಾಷ್ಟ್ರಗಳಲ್ಲಿ ಹೊಸ ಸಮೃದ್ಧಿ ಏರ್ಪಟ್ಟು ಸಹಕಾರವು ಹುಟ್ಟುವುದೆಂದು ಭಾವಿಸಲಾಗಿತ್ತು. ಆದರೆ ಈಗ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಉಂಟಾಗಿರುವ ಆಘಾತಕಾರಿ ಘಟನೆಗಳಿಂದ ಭಾವುಗಳು ಮಿಶ್ರವಾಗಬಾರದು. ಸಾರ್ವಭೌಮತ್ವವಿಲ್ಲದ ಜೀವ ಮಾನವ ವರ್ಗಕ್ಕೆ ಶ್ರೀಹಿತವಾದ ಬೆಳಕು ಬಂದಿರುವಂತೆ ಮಾಡುವುದು ಪ್ರಪಂಚದ ಉನ್ನತ ರಾಜನೀತಿಜ್ಞರ ಕರ್ತವ್ಯ. ಆದ್ದರಿಂದ ಈ ವಿದ್ಯಾರ್ಥಿ ಗೋಷ್ಠಿಯು ತನ್ನ ಕರ್ತವ್ಯಗಳ ಬಗ್ಗೆ ಏನೇನು ಕಾರ್ಯಕ್ರಮವನ್ನು ಇಟ್ಟುಕೊಂಡಿರುವುದೋ ಅದರೊಡನೆ ಈಗಿನ ಮತ್ತು ಮುಂದಿನ ತಲೆಮಾರುಗಳ ವಿದ್ಯಾರ್ಥಿಗಳಿಗೆ ಪ್ರಪಂಚದ ಜನರೆಲ್ಲರೂ ಭ್ರಾತೃ ಭಾವದಿಂದ ಇರಬೇಕಾದುದು ಅಗತ್ಯವೆಂಬುದನ್ನು ಪಾಠರೂಪದಲ್ಲಿ ಕಲಿಸಬೇಕಾದುದು ಅಗತ್ಯವಾಗಿದೆ- ಎಂದು ಶ್ರೀಮನ್ ಮಹಾರಾಜರು ಈ ದಿನ ಜಗನ್ಮೋಹನ ಬಂಗಲೆಯಲ್ಲಿ ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳ ಗೋಷ್ಠಿಯ ಪ್ರಾರಂಭ ಭಾಷಣ ಮಾಡುತ್ತಾ ತಿಳಿಸಿದರು.

ಪ್ರಾರ್ಥನೆಯಾದನಂತರ ಡಾ|| ಸಿ. ಆರ್. ರೆಡ್ಡಿಯವರು ಸ್ವಾಗತ ಭಾಷಣ ಮಾಡಿದರು. ಸಂತರ ಅಮೇರಿಕ ಸಮಿತಿಯ ಪ್ರೆಸಿಡೆಂಟರಾದ ಮಿ|| ಕಾಲ್ ಎಂಡರ್ಸನ್‌ರವರೂ, ಪ್ರಧಾನ ಕಾರ್ಯದರ್ಶಿ ಡಾ|| ಸಿಗ್ವರ್ಟ್ ವ್ಯಾಲೆಂಟೈನ್‌ರವರೂ ಭಾಷಣ ಮಾಡಿದರು. ಶ್ರೀಮನ್ ಮಹಾರಾಜರು ಅನಂತರ ಭಾಷಣ ಮಾಡಿದರು. ಮೈಸೂರು ಸಂಸ್ಥಾನದ ಪ್ರಯೋಗ ವಿಜ್ಞಾನ ಶಾಲೆಯುಗಳಲ್ಲಿ ಒಂದು ಶಕ್ತಿ ವಿದ್ಯಾರ್ಥಿಗಳಿಗಾಗಿ ವಾರ್ಷಿಕ ಕಟ್ಟಲು ೩೦ ಸಾವಿರ ರೂಗಳನ್ನು ಅಂತರ ರಾಷ್ಟ್ರೀಯ ನಿಧಿಯಿಂದ ಕೊಟ್ಟುದಕ್ಕಾಗಿ ಅವರು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ನಮ್ಮ ದೇಶದಲ್ಲಿ ಈ ಗೋಷ್ಠಿಯು ಸೇರಿರುದುದು ಇದೇ ಮೊದಲೆಂದೂ ಪ್ರಪಂಚದ ಪ್ರಥಮ ಯುದ್ಧವಾದ ನಂತರ ವಿದ್ಯಾರ್ಥಿಗಳಲ್ಲಿ ಉಂಟಾದ ದುಃಖ ಮನೋಭಾವವನ್ನು ಹೋಗಲಾಡಿಸಲು ಈ ಗೋಷ್ಠಿಯು ಸ್ಥಾಪಿಸಲ್ಪಟ್ಟಿತೆಂದೂ, ಈಗ ಅದು ಭೂಗೋಳದ ಎರಡು ಭಾಗಗಳಿಗೂ ತನ್ನ ಕಾರ್ಯವನ್ನು ಪ್ರಸರಿಸಿ ವಿದ್ಯಾ ಮತ್ತು ಸಂಸ್ಕೃತಿಯ ಕಾರ್ಯ ಚಟುವಟಿಕೆಯನ್ನು ತೋರಿಸುತ್ತಿದೆಯೆಂದೂ ಶ್ರೀಮನ್ ಮಹಾರಾಜರು ತಿಳಿಸಿದರು.

ಇಂಗ್ಲೆಂಡಿನಲ್ಲಿ ೪೦೦ ಎಣ್ಣೆ ಬಾವಿಗಳು

ಇಂಗ್ಲೆಂಡಿನಲ್ಲಿ ೪೦೦ ಎಣ್ಣೆ ಬಾವಿಗಳಿರುವುದಾಗಿ ಗೊತ್ತಾಗಿದೆ.

ಸಂಸ್ಥಾನದಲ್ಲಿ ಡಾ|| ಹರ್ಡಿಕರರ ಪ್ರವಾಸ

ಮೈಸೂರು ೧೨

ಸೇವಾದಳದ ಸ್ಥಾಪಕರಾದ ಡಾ|| ಹರ್ಡಿಕರರು ಈ ತಿಂಗಳ ೨೨ರಿಂದ ಹತ್ತು ದಿನಗಳ ವರೆಗೆ ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರು. ಕೊರಿಯಾ ಯುದ್ಧದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಯುವಜನರಿಗೆ ತಿಳಿಸುವುದಕ್ಕಾಗಿಯೇ ಈ ಪ್ರವಾಸವನ್ನು ಕೈಗೊಳ್ಳಲಾಗಿದೆ. ಜಿಲ್ಲೆಗಳ ಮುಖ್ಯ ಪಟ್ಟಣಗಳಿಗೆ ಭೇಟಿಯಿತ್ತು ಅಲ್ಲಿನ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಸಂಬೋಧಿಸಿ ಅವರು ಭಾಷಣ ಮಾಡುವರು. ಸಂಸ್ಥಾನದ ಯುವಜನ ಪ್ರತಿನಿಧಿ ಸಂಸ್ಥೆಗಳೂ, ಇತರ ಮಾನ್ಯರೂ ಸೇವಾದಳ ಹರ್ಡಿಕರರ ಕಾರ್ಯಕ್ರಮವು ಸುಲಲಿತವಾಗುವಂತೆ ಏರ್ಪಡಿಸಲು ಸಾಧ್ಯವಾಗುವಂತೆ ಮಾಡಬೇಕಾಗಿದೆ. ಅದಕ್ಕಾಗಿ ೧೯ನೇ ತಾರೀಖಿನೊಳಗಾಗಿ "ಭಾರತ ಸೇವಾದಳ ಕೇಂದ್ರ ಕಛೇರಿ ೫೦, ಅರಳೆ ಪೇಟೆ, ಬೆಂಗಳೂರು ಪೇಟೆ" ವಿಳಾಸಕ್ಕೆ ತಂತಿ ಅಥವಾ ಪತ್ರಮೂಲಕ ತಿಳಿಸಬೇಕೆಂದು ಸೇವಾದಳ ಸಂಘಟನಾ ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ.

ಕಲ್ಕತ್ತಾ, ದೆಹಲಿಗಳಿಗೆ ವಿದ್ಯಾ ಮಂತ್ರಿಗಳ ಪ್ರಯಾಣ

ವಿದ್ಯಾ ಸಚಿವರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಕಲ್ಕತ್ತಾದಲ್ಲಿ ಸೇರುವ ಅಖಿಲ ಭಾರತ ಮಾಧ್ಯಮಿಕ ಶಿಕ್ಷಣ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಅಲ್ಲಿಗೆ ೨೧ನೇ ತಾ|| ತೆರಳುವರು. ೨೭ನೇ ತಾರೀಖು ಅಲ್ಲಿಂದ ದೆಹಲಿಗೆ ಪ್ರಯಾಣ ಮಾಡಿ ಮೂಲ ಶಿಕ್ಷಣ ಸಂಬಂಧವಾಗಿ ಅಲ್ಲಿನ ಅಧಿಕಾರಿಗಳೊಡನೆ ಮಾತುಕತೆ ನಡೆಸಿ ೩೦ನೇ ತಾರೀಖು ವಾಪಸು ಬರುವರು.

ಕಾಂ|| ಅಧ್ಯಕ್ಷತೆಗೆ ಪುರುಷೋತ್ತಮ ದಾಸ್ ಟಂಡನ್

ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಮತ್ತು ಅಲ್ಲಿನ ಶಾಸನ ಸಭೆಯ ಸ್ಪೀಕರರೂ ಆದ ಬಾಬು ಪುರುಷೋತ್ತಮ ದಾಸ್ ಟಂಡನ್‌ರವರ ಹೆಸರನ್ನು ಬರುವ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷತೆಗೆ ಸೂಚಿಸಲಾಗುವುದು.

ವಿದ್ಯುಚ್ಛಕ್ತಿ ಕಾರ್ಮಿಕರ ಮುಷ್ಕರ ಕೊನೆಗೊಂಡಿತು

ಕಾರ್ಮಿಕರಿಗೆ ಒಂದು ತಿಂಗಳ ಸಂಬಳದ ಹೆಚ್ಚಿನ ಭತ್ಯ ಸಿಗುವುದು

(ಸ್ವಂತ ವರದಿಗಾರ) ಬೆಂಗಳೂರು ೧೨

ಸರ್ಕಾರದ ವಿದ್ಯುಚ್ಛಕ್ತಿ ಶಾಖೆಯ ಕಾರ್ಮಿಕರ ಮುಷ್ಕರವು ಈ ಪ್ರಾತಃಕಾಲ ಕೊನೆಗೊಂಡಿತು. ಕಾರ್ಮಿಕರ ಸಂಬಳದಷ್ಟು ಎಕ್ಸ್ ಗ್ರೇಷಿಯಾ ಭತ್ಯವನ್ನು ಕೊಡುವುದಾಗಿ ಸರ್ಕಾರದವರ ಇತ್ತ ಭರವಸೆ ಮೇಲೆ ಮುಷ್ಕರದ ಮುಕ್ತಾಯವಾಯಿತು. ಇಂದು ಬೆಳಗ್ಗೆ ೧೧೦೦ ಜನರೂ ಕೆಲಸದ ಮೇಲೆ ಬಂದಿರುತ್ತಾರೆ.

ಸೆರೆಯಾದ ಅಮೆರಿಕನ್ನರ ಕೊಲೆ

ಕೊರಿಯಾ ಯುದ್ಧದಲ್ಲಿ ಸೆರೆ ಸಿಕ್ಕಿದ ೯ ಅಮೆರಿಕನರನ್ನು ಉತ್ತರ ಕೊರಿಯನ್ನರು ನಿರ್ದಯದಿಂದ ಅವರ ಕೈಗಳನ್ನು ಹಿಂದಕ್ಕೆ ಕಟ್ಟಿ ತಲೆಗೆ ಗುಂಡಿಕ್ಕಿ ಕೊಲ್ಲುತ್ತಿದ್ದರೆ ಈಗಾಗಲೇ ಈ ರೀತಿ ಕೊಲ್ಲಲ್ಪಟ್ಟವರ ೬ ಹೆಣಗಳು ಸಿಕ್ಕಿವೆಯೆಂದು ವರದಿಯಾಗಿದೆ.

ಕೊರಿಯಾ ಯುದ್ಧಕ್ಕೆ ಇತರ ರಾಷ್ಟ್ರಗಳ ಸೈನ್ಯಗಳು

ಕೊರಿಯಾ ಯುದ್ಧದಲ್ಲಿ ಭಾಗವಹಿಸುತ್ತಿರುವ ಅಮೆರಿಕದ ಸೈನ್ಯಗಳ ಜೊತೆಗೆ ವಿಶ್ವಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳ ಸೈನ್ಯಗಳೂ ಬಂದು ಸೇರುವುದಾಗಿ ಡಾ|| ಓವರ್ ಬ್ರಾಡ್ಲಿಯವರು ಹೇಳಿದ್ದಾರೆ. ೩೦ ಸಾವಿರ ಜನರನ್ನು ಕಳುಹಿಸುವುದಾಗಿ ಚೀಣಾದ ರಾಷ್ಟ್ರೀಯರು ಹೇಳುತ್ತಿದ್ದಾರೆ. ಡೀಜಾನ್‌ಗೆ ೯ ಮೈಲಿ ಉತ್ತರಕ್ಕಿರುವ ಕುಂಸ ನದಿ ಕಡೆಗೆ ಅಮೆರಿಕನ್ನರನ್ನು ಅಟ್ಟುತ್ತಿದೆ. ಅಮೆರಿಕನ್ನರು ಭದ್ರವಾದ ಒಂದು ಸ್ಥಾನವನ್ನು ಏರ್ಪಡಿಸಿಕೊಳ್ಳುತ್ತಿರುವುದಾಗಿ ವರದಿಯಾಗಿದೆ. ಅಮೆರಿಕ ಸೈನ್ಯಗಳ ಬಲಕ್ಕೆ ಉತ್ತರ ಕೊರಿಯದವರ ಅರವತ್ತು ಸೈನ್ಯಗಳು ಯುದ್ಧ ಮಾಡುತ್ತಿರುವುದಾಗಿಯೂ, ಅದನ್ನು ಹತ್ತು ಟ್ಯಾಂಕುಗಳು ಕಾದುಕೊಟ್ಟು ಮಾಡುತ್ತಿರುವುದಾಗಿಯೂ ಹೇಳಲಾಗಿದೆ.

೪೨ ಜನ ಭಿಕ್ಷುಕರ ಬಂಧನ

ರಾಜಧಾನಿಯ ಭಿಕ್ಷುಕರ ಗೃಹದ ಸೂಪರಿಂಟೆಂಡೆಂಟರೂ ಮತ್ತು ಪೊಲೀಸ್ ಇನ್ಸ್‌ಪೆಕ್ಟರೂ ಆದ ಶ್ರೀ ಎ. ಕೃಷ್ಣನವರೂ ಕಾರ್ಪೊರೇಷನ್ನಿನ ನೆನ್ನೆ ದಿನ ಪೊಲೀಸರ ಸಹಾಯದೊಡನೆ ೪೨ ಮಂದಿ ಭಿಕ್ಷುಕರನ್ನು ಹಿಡಿದು ಭಿಕ್ಷುಕರ ಗೃಹದಲ್ಲಿ ಇಟ್ಟರು.

ಮಹಾವನೇಆಕ್ರಮಣಗಳಿಗಾಗಿ ವೃದ್ಧರ ಉಪವಾಸ

೮೦ ವರ್ಷ ಕಾಂಗ್ರೆಸ್ ಸಹಿತ ಪಕ್ಷದ ೭೦ ವರ್ಷದ ಎಂ. ಜ್ವಾಲಾನಾಥ ಭಟ್ಟಾಚಾರ್ಯರು ಹೂಗ್ಲಿ ಕಾಂಗ್ರೆಸ್ ಸಮಿತಿಗಳ ಚುನಾವಣೆಗಳಲ್ಲಿನ ಅಕ್ರಮ ತಡೆಗಳಿಗಾಗಿ ೧ ವಾರದಿಂದ ಉಪವಾಸ ಮಾಡುತ್ತಿದ್ದಾರೆ.

ಕೋಟೆ ದ್ವಾರವು ಕುಸಿದು ಒಬ್ಬನ ಮರಣ

ಪಾಟಿಯಾಲಾದ ಪುರಾತನ ಪ್ರಸಿದ್ಧವಾದ ಕೋಟೆಯ ದ್ವಾರವು ನೆನ್ನೆ ಸಾಯಂಕಾಲ ಅದರ ಕೆಳಗೆ ಹಾದು ಹೋಗುತ್ತಿದ್ದ ಸೈಕಲ್ ಸವಾರನೊಬ್ಬನ ಮೇಲೆ ಕುಸಿದು ಬಿದ್ದು ಅವನು ಸ್ಥಳದಲ್ಲಿಯೇ ಸತ್ತನು.

೩೩೦ ದಿನ ಪ್ರವಾಸ ಮಾಡಿದ ಅಂಚೆ ಕಾಗದ

೮೫ ಮೈಲಿ ಪ್ರವಾಸ ಮಾಡಲು ಅಂಚೆ ಕಾಗದವೊಂದು ೩೩೦ ದಿವಸಗಳನ್ನು ತೆಗೆದುಕೊಂಡಿತೆಂದು ಹೇಳಲಾಗಿದೆ. ಅದನ್ನು ಪಾಟ್ನಾ ಜಿಲ್ಲೆಯ ಬರ್ಹ ಎಂಬಲ್ಲಿ ಪೆಟ್ಟಿಗೆಗೆ ಕಳೆದ ವರ್ಷ ನವಂಬರ್ ೨೭ರಲ್ಲಿ ಹಾಕಲಾಯಿತು. ಭಾಗಲ್ಪುರ ವಿಳಾಸಕ್ಕೆ ಅದು ಕಳೆದ ೭ನೇ ತಾರೀಖು ತಲುಪಿತು.

ಪ್ರದೋಷ ಸಂಗೀತ

ಗಾನ ವಿಹಾರದ ಬಿಡಾರಂ ಕೃಷ್ಣಪ್ಪನವರ ಪ್ರಶಸ್ತ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಈ ದಿನ ಸಂಜೆ ೬-೩೦ ಗಂಟೆಗೆ ವಿ|| ಎಂ. ಎಸ್. ವೆಂಕಟರಾಂ ರವರ ಹಾಡುಗಾರಿಕೆಯು ವಿ|| ಎ. ವಿ. ಕೃಷ್ಣಮಾಚಾರ್ಯರ ಪಿಟೀಲು, ವಿ|| ಎ. ವಿ. ರಂಗನಾಥರಾವ್‌ರವರ ಮೃದಂಗ ಮತ್ತು ವಿ|| ಎಚ್. ಟಿ. ನಾಗಪ್ಪನವರ ಖಂಜರಿಯೊಡನೆ ನಡೆಯುವುದು.

ಪ್ರಧಾನರೊಡನೆ ದಾಸಪ್ಪನವರ ಭೇಟಿ

ಕಾರ್ಮಿಕ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಈ ದಿನ ಬೆಳಗ್ಗೆ ಶ್ರೀ ಸುಬ್ಬರಾಮಯ್ಯನವರನ್ನು ಭೇಟಿ ಮಾಡಿ ಸಂಸ್ಥಾನದ ಆಡಳಿತದ ಬಗ್ಗೆ ತಾವು ದೆಹಲಿಯಲ್ಲಿ ನಡೆಸಿದ ಮಾತುಕತೆಗಳ ಅಂಶವನ್ನು ಅರಿಕೆ ಮಾಡಿಕೊಂಡರು.

ಕೊರಿಯಾ ಬಗ್ಗೆ ಭಾರತ ಪಾರ್ಲಿಮೆಂಟಿನಲ್ಲಿ ಚರ್ಚೆ

ಈ ತಿಂಗಳು ೩೧ರಿಂದ ೩ ವಾರಗಳ ಕಾಲ ಭಾರತದ ಪಾರ್ಲಿಮೆಂಟಿನ ಅಧಿವೇಶನವು ಸೇರಿ ಕೊರಿಯಾ ಯುದ್ಧದ ಪರಿಸ್ಥಿತಿ ಮತ್ತು ಅದರಲ್ಲಿ ಭಾರತದ ಪಾತ್ರ ಇವುಗಳನ್ನು ಕುರಿತು ಚರ್ಚಿಸಲಾಗುವುದು.

ಕೆಳ ದರ್ಜೆ ಪೋಲೀಸರ ಸಂಘ ಸ್ಥಾಪನೆಗೆ ಅಡ್ಡಿ

ಪಶ್ಚಿಮ ಬಂಗಾಲದ ಗೌರ್ನರರಾದ ಅಬ್ದುಲ್ ರಹಮಾನ್‌ರವರು ಒಂದು ಪ್ರಕಟನೆ ಹೊರಡಿಸಿ, ಅಲ್ಲಿನ ಕೆಳದರ್ಜೆ ಪೋಲೀಸರು ಸಂಘವನ್ನು ಸ್ಥಾಪಿಸಿಕೊಳ್ಳಕೂಡದೆಂದು ತಿಳಿಸಿದ್ದಾರೆ. ಆ ಪೋಲೀಸರು ಈಗಲೇ ತಮ್ಮ ಕುಂದುಕೊರತೆಗಳ ವಿಚಾರಕ್ಕೆಗೋಸ್ಕರ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದರು.

ಪಾಕಿಸ್ತಾನದಲ್ಲಿ ಅಮೇರಿಕಕ್ಕೆ ನೆಲೆಸ್ಥಾನಗಳಿಲ್ಲ

ಇರಾನಿನ ಗಡಿ ಭಾಗದಲ್ಲಿ ರಕ್ಷಣಾ ಕ್ಷೇತ್ರಗಳನ್ನು ಏರ್ಪಾಡು ಮಾಡಲು ಮತ್ತು ನೆಲೆಗಳನ್ನು ಹೊಂದಲು ಅಮೇರಿಕಕ್ಕೆ ಪಾಕಿಸ್ತಾನವು ಅವಕಾಶ ಕೊಡುವ ವಿಷಯವಾಗಿ ಅಲ್ಲಿನ ಸರ್ಕಾರದವರಿಗೂ ಸಾವು ಕ್ಯವಹರಿಸುದಾಗಿ ವರದಿಯಾಗಿರುವುದು ನಿಜವಲ್ಲವೆಂದ ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿಖಾನರು ತಿಳಿಸಿದ್ದಾರೆ

ಭಾರತ, ಪಾಕಿಸ್ತಾನ ನಾಣ್ಯಗಳ ಬೆಲೆಯ ಭೇದಕ್ಕೆ ವಿರೋಧ

ಭಾರತದ ನಾಣ್ಯವಾದ ರೂಪಾಯಿಗೆ ವ್ಯತ್ಯಾಸವಾಗುವ ಬೆಲೆಯನ್ನು ಪಾಕಿಸ್ತಾನವು ಇಡುವುದಾದರೆ ಅದನ್ನು ಇಲ್ಲಿನ ಸರ್ಕಾರದವರು ವಿರೋಧಿಸುವುದಾಗಿ ಹೇಳಲಾಗಿದೆ

ಭಾರತದಲ್ಲಿ ಪಾಂಚ ವಾರ್ಷಿಕ ಯೋಜನೆ

ಭಾರತದ ಅಭಿವೃದ್ಧಿಯ ಪಾಂಚ ವಾರ್ಷಿಕ ಯೋಜನೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ ಜಾರಿಗೆ ತರುವ ಬಗ್ಗೆ ಪ್ರಮುಖ ಕಾರ್ಯಕ್ರಮಗಳನ್ನು ಯೋಜನಾ ಸಮಿತಿಯವರು ಸಿದ್ಧಗೊಳಿಸಿದ್ದಾರೆ

ಮನೆ ಬಾಡಿಗೆಗೆ ಇದೆ

ಮೈಸೂರು ಚಾಮರಾಜ ಮೊಹಲ್ಲಾ ಸೋಮಾರ್ ಬೀದಿಯಲ್ಲಿರುವ ಟಿನ್ ಶೀಟಿನ ಮನೆಯು ಬಾಡಿಗೆಗೆ ಇದೆ. ನಲ್ಲಿ, ದೀಪ, ಫ್ಲಷ್‌ಗಳಿಂದ ಕೂಡಿದ ವಿಶಾಲವಾದ ಮನೆ. ವಿವರಗಳಿಗೆ ಕೆಳಗಿನ ವಿಳಾಸದಲ್ಲಿ ಬೆಳಗ್ಗೆ ೭ ರಿಂದ ೯ ಘಂಟೆಯೊಳಗೆ ವಿಚಾರಿಸಿ —

1167, ಬಸ್ಸಪ್ಪನವರ ಬೀದಿ,
ಚಾಮರಾಜಪುರಂ, ಮೈಸೂರು

ಫುಟ್‌ಬಾಲ್ ಪಂದ್ಯ ನೋಡುವ ಕುತೂಹಲದಲ್ಲಿ ಪ್ರಾಣ ನೀಗಿದ

ಕೆಲವು ದಿವಸಗಳ ಹಿಂದೆ ಗೌಹಾತಿಯ ಬಳಿ ಶಿಲ್ಲಾಂಗಿನಲ್ಲಿನಡೆಯುತ್ತಿದ್ದ ಫುಟ್‌ಬಾಲ್ ಪಂದ್ಯವನ್ನು ನೋಡಲು ಒಬ್ಬ ಹುಡುಗನು ಬಹಳ ಕುತೂಹಲದಿಂದ ಒಂದು ಮರದ ಕೊಂಬೆಯನ್ನೇರಿ ಕುಳಿತಿದ್ದ. ಆ ಪಂದ್ಯದ ವೇಳೆಯಲ್ಲಿ ಅನೇಕ ಮಂದಿ ಆ ಮರವನ್ನೇರಿದ್ದರಿಂದ ಭಾರವನ್ನು ತಡೆಯಲಾರದೆ ಮರವು ಕೆಳಗೆ ಉರುಳಿತು. ಅದರಿಂದ ಅನೇಕ ಮಂದಿಗೆ ಗಾಯವಾಯಿತು. ಅವರುಗಳನ್ನು ಆಸ್ಪತ್ರೆಗೆ ಸೇರಿಸಲಾಗಿ ಅಲ್ಲಿ ಒಬ್ಬನು ಮೃತಪಟ್ಟನು

ವಾರ್ಷಿಕೋತ್ಸವ

ರಾಜಧಾನಿಯ ಮಧುರ ಕಲಾ ಮಂದಿರದ ದ್ವಿತೀಯ ವಾರ್ಷಿಕೋತ್ಸವವು ಕಳೆದ ಭಾನುವಾರ ಟೌನ್‌ಹಾಲಿನಲ್ಲಿ ನಡೆಯಿತು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಅಧ್ಯಾಪಕರಾದ ಶ್ರೀ ಯು ಎಸ್ ಕೃಷ್ಣರಾವ್‌ರವರು ಅಧ್ಯಕ್ಷತೆ ವಹಿಸಿದ್ದರು

ಮೇಲ್ಕಂಡ ಮಧುರ ಕಲಾ ಮಂದಿರದ ಆಶ್ರಯದಲ್ಲಿ ಮೊನ್ನೆ ದಿನ ಮಹಾರಾಣಿ ಕಾಲೇಜಿನ ಪ್ರಾಂಸಿಪಾಲ್ ಬಿ ಎ ಹಾಲಿನಲ್ಲಿ 'ಭರತ ನಾಟ್ಯ' ಎಂಬ ವಿಷಯವಾಗಿ, ಪ್ರದರ್ಶನಸಹಿತ ಶ್ರೀ ಯು ಎಸ್ ಕೃಷ್ಣರಾವ್‌ರು ಭಾಷಣ ಮಾಡಿದರು

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಗೆ ಈ ವರ್ಷ ಸೇರಿಸಿಕೊಳ್ಳಲಾದ ಸದಸ್ಯರ ಸಂಖ್ಯೆಯು ೩ ಕೋಟಿಯಾಗಿದೆ. ಇನ್ನು ಜನರ ಪ್ರತಿನಿಧಿಗಳಾಗಿ ೩ ಸಾವಿರ ಸದಸ್ಯರು ನಾಸಿಕ್ ಅಧಿವೇಶನದಲ್ಲಿ ಭಾಗವಹಿಸುವರು

ಪ್ರಪಂಚದ ಪ್ರಥಮ ರೈಲ್ವೆ ಮಹಿಳಾ ಡ್ರೈವರ್

ಜೆಕೊಸ್ಲೋವೇಕಿಯಾದಲ್ಲಿ ೧೭ ವರ್ಷದ ಯುವತಿ ಮಿರೋಸ್ಲಾವ್ನಿ ರೋಜಾ ಎಂಬುವಳಿಗೆ ರೈಲ್ವೆ ಇಂಜಿನ್ ನಡೆಸುವ ಶಿಕ್ಷಣ ಕೊಡಲಾಗುತ್ತಿದೆ. ಇವಳು ಪ್ರಪಂಚದ ಪ್ರಥಮ ವಿದ್ಯುತ್ ಇಂಜಿನ್ ಡ್ರೈವರಳಾಗುವಳೆಂದು ಹೇಳಲಾಗಿದೆ

ಕೋತಿಗಳನ್ನು ಹೊಡೆಯಲು ಬಾರುಮಾಡಿದ್ದ ಬಂದೂಕದಿಂದ ತನಗೇ ಏಟು

ಕೆಲವು ದಿವಸಗಳ ಹಿಂದೆ ಕಾಶಿಯ ಯುವಕನೊಬ್ಬನು ಎರಡು ಕೋತಿಗಳನ್ನು ಹೊಡೆಯಲು ತನ್ನ ಬಂದೂಕವನ್ನು ಬಾರು ಮಾಡಿಕೊಳ್ಳುತ್ತಿರುವಲ್ಲಿ ಆ ಕೋತಿಗಳು ಹಠಾತ್ತನೆ ಅವನ ಮೇಲೆ ಬೀಳಲು ಬಂದುವು. ಅವನು ಗಾಬರಿಗೊಂಡು ಮನೆಯ ಛಾವಣಿ ಮೇಲಿನಿಂದ ಕೆಳಕ್ಕೆ ಬಿದ್ದುಬಿಟ್ಟನು. ಅವನ ಕೈಲಿದ್ದ ಬಂದೂಕವು ನೇರವಾಗಿ ಅವನ ಎದೆಯ ಮೇಲೆ ಬಿದ್ದು ಗುಂಡು ಹಾರಿ ಗೋಲಿಯು ಅವನ ಎದೆಯನ್ನು ಹೊಕ್ಕಿತು. ಅವನನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಚಾಮುಂಡೇಶ್ವರಿ ಟಾಕೀಸ್

12-7-50ರಿಂದ ಪ್ರತಿ ದಿನ 3 ಆಟಗಳು

❋ ದೇವದಾಸಿ ❋

(ಹಿಂದಿ)

ಪಾತ್ರ-ಪೃಥ್ವಿರಾಜ್, ಕೆ. ಸಿ. ಡೇ, ಮತ್ತು ಮೋನಿಕಾ ದೇಸಾಯ್

ಮೈಸೂರ್ ಪಂಚಾಯಿತಿಯ ಮೇಲೆ ಅತ್ಯಾಚಾರದ ಮೊಕದ್ದಮೆ ವಜಾ

ಚಾಮರಾಜನಗರದ ತಾಲ್ಲೂಕು ಕಿಲ್ಪುರದ ಪಾಪೇಗೌಡ ಎಂಬಾತನು ೬-೧೦-೪೯ರಲ್ಲಿ ಅದೇ ಊರಿನ ಪಾಪೇಗೌಡನ ಎಂಬಾತನ ೧೫ ವರ್ಷದ ಮಗಳು ಪಾರ್ವತಮ್ಮ ಎಂಬಾಕೆಯ ಮೇಲೆ ಅತ್ಯಾಚಾರ ನಡೆಸಿದನೆಂದು ಅಲ್ಲಿನ ಪೋಲೀಸರು ತಂದ ಮೊಕದ್ದಮೆಯು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲ್ಪಟ್ಟಿತ್ತು. ಮೈಸೂರು ಅಸಿಸ್ಟೆಂಟ್ ಸೆಷನ್ಸ್ ಜಡ್ಜ್‌ರ ಸಮ್ಮುಖದಲ್ಲಿ ನೆನ್ನೆ ದಿನ ಇದರ ಬಗ್ಗೆ ವಿಚಾರಣೆ ನಡೆದು ಅತ್ಯಾಚಾರದ ಆಪಾದನೆ ರುಜುವಾತಾಗದ್ದರಿಂದ ಆಪಾದಿತನನ್ನು ಖುಲಾಸೆ ಮಾಡಲಾಯಿತು

ಒಲಂಪಿಯಾ

13—7—50ರಿಂದ ದಿನಕ್ಕೆ 3 ಆಟಗಳು

ಚಿತ್ರರಂಗದ ಮುಗ್ಧ ಪ್ರೇಮಿಗಳಾದ ಸುರಯ್ಯಾ, ಶರೀ ಮಿರ್ಜಾ, ಯಾಕುಬ್ ಅಭಿನಯಿಸಿದ

ಸಕಲ ಪ್ರೇಕ್ಷಕರ ಮನೋಲ್ಲಾಸ ಚಾಚಿಲಿ ಕಲಾಕೃತಿ

- ದುನಿಯಾ -

14-7-50ರಿಂದ ಬೆಳಗಿನ ಪ್ರದರ್ಶನ ಭಾರತಿ, ಅರೀಬ್ ಬರ್ ಪಾತ್ರವಹಿಸಿರುವ ನ್ಯೂ ಥಿಯೇಟರ್ಸ್‌ರವರ

• ಕಾಶೀನಾಥ್ •

ಗಣೇಶಾ ಟಾಕೀಸ್

12-7-50 ರಿಂದ ಪ್ರತಿದಿನ 3 ಆಟಗಳು

ಪ್ರಖ್ಯಾತ ನಟನಾದ ಮೈಸೂರು ಸಾಬು ನಟಿಸಿರುವ

ಎಲಿಫೆಂಟ್ - ಬಾಯ್

ಮುಂದಿನ ಆಕರ್ಷಣೆ -

ಬಡಿ ಬಹೆನ್

(ಹಿಂದಿ)

ಸರ್ಕಾರದ ಸಾಬೂನಿನ ಕಾರ್ಖಾನೆ, ಬೆಂಗಳೂರು

ಪ್ರಸಿದ್ಧ ಪತ್ರಿಕೆ

ಕಚ್ಚಾ ಸಾಮಾನುಗಳ ಬೆಲೆ ಏರುವುದರಿಂದ ಸಾಬೂನಿನ ಮಾರಾಟದ ದರಗಳನ್ನು ಕಾರ್ಖಾನೆಯವರು ಮನಸ್ಸಿಲ್ಲದೇ ಇದ್ದರೂ, ಹೆಚ್ಚಿಸಬೇಕಾಗಿ ಬಂದಿದೆ. ೧೯೫೦ ನೇ ಜುಲೈ ೧ ರಿಂದ ಕಾರ್ಖಾನೆಯು ಕೆಳಗೆ ಕಂಡ ಸರಕುಗಳಿಗೆ ಪರಿಷ್ಕರಿಸಿದ ದರಗಳನ್ನು ಜಾರಿಗೆ ತಂದಿರುವುದನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತರಲಾಗಿದೆ -

ಪದಾರ್ಥದ ಹೆಸರು	ಒಟ್ಟು ವಿಕ್ರಯದ ದರ	ಚಿಲ್ಲರೆ ವಿಕ್ರಯದ ದರ
೧ ಚಾಯಿಲೆಟ್ ಸೋಪುಗಳು	೧ ಡಜನ್ನಿಗೆ	೧ ಕೇಕಿಗೆ
ಮೈಸೂರು ಸ್ಯಾಂಡಲ್ ಸೋಪು (ಸ್ಪೆಷಲ್)	೧೯ ೧೨ ೦	೧ ೧೧ ೩
ಮೈಸೂರು ಜಾಸ್ಮಿನ್ ಸೋಪು	೭ ೦ ೦	೦ ೯ ೯
ಮೈಸೂರು ಲ್ಯಾವೆಂಡರ್ ಸೋಪು	೭ ೦ ೦	೦ ೯ ೯
ಮೈಸೂರು ಸ್ಯಾಂಡಲ್ ಸೋಪು	೭ ೦ ೦	೦ ೯ ೯
ಮೈಸೂರು ಸ್ಯಾಂಡಲ್ ಬಾತ್ ಟ್ಯಾಬ್ಲೆಟ್ ದೊಡ್ಡದು	೧೪ ೪ ೦	೧ ೪ ೦
ಮೈಸೂರು ಲ್ಯಾವೆಂಡರ್ ಬಾತ್ "	೧೪ ೪ ೦	೧ ೪ ೦
ಮೈಸೂರು ಜಾಸ್ಮಿನ್ " "	೧೪ ೦ ೦	೧ ೩ ೬
ಮೈಸೂರು ಗೆಸ್ಟ್ ಟ್ಯಾಬ್ಲೆಟ್ಸ್ ದೊಡ್ಡದು	೩ ೪ ೦	೦ ೫ ೦
ಮೈಸೂರು ಗೆಸ್ಟ್ ಟ್ಯಾಬ್ಲೆಟ್ಸ್ ಮಧ್ಯಮ	೧ ೧೨ ೦	೦ ೨ ೬
೨ ವಾಷಿಂಗ್ ಸೋಪು	ಗ್ರೋಸಿಗೆ	ಕೇಕಿಗೆ
ಮೈಸೂರು ವಾಷಿಂಗ್ ಸೋಪು ೨ ಔನ್ಸ್	೩೦ ೦ ೦	೦ ೩ ೩
ಮೈಸೂರು ವಾಷಿಂಗ್ ಸೋಪು ೪ ಔನ್ಸ್	೩೮ ೦ ೦	೦ ೩ ೬
ಮೈಸೂರು ವಾಷಿಂಗ್ ಸೋಪುಬಾರು	೭೪ ೧೨ ೦	೧ ೪ ೯

ಒಂದು ಬಾರಿನ ಚಿಲ್ಲರೆಗೆ ಬಾರ್ ಒಂದಕ್ಕೆ

ಕಳುಹಿಸತಕ್ಕ ಪ್ರದೇಶಗಳು ಹತ್ತಿರ ಇರುವ ರೈಲ್ವೆ ಸ್ಟೇಷನ್ನಿಗೆ ತಲುಪಿಸಿ ಕೊಡುವ (F O R) ದರಗಳನ್ನು ಗಮನಿಸಿ ಮಾಡಲಾಗಿದೆ, ಮಾರಾಟದ ತೆರಿಗೆ ಬೇರೆಯಾಗಿ ಕೊಡಬೇಕು

ಎಲ್ಲಾ ವಿಚಾರಗಳಿಗೂ ನಮ್ಮ ಸೋಪ್ ವಿಭಾಗದಲ್ಲಿ ವಿಚಾರಿಸಿ –

ಮೈಸೂರು ಮತ್ತು ಕೊಡಗಿಗೆ:-

ಮೆ॥ ದೇಶಮುಖ್ಯ ಅಂಡ್ ಸನ್ಸ್, ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್, ಅವೆನ್ಯೂ ರೋಡು, ಬೆಂಗಳೂರು ಸಿಟಿ

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು, ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು, 70 ಅವೆನ್ಯೂ ರಸ್ತೆ, ಬೆಂಗಳೂರು.

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟಿಫಿಕೇಷನ್

ತಾ॥ 8—7—1950

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಸಿಟಿ ಮುನಿಸಿಪಾಲಿಟಿ ದೇವರಾಜ ಮಾರ್ಕೆಟ್ಟಿನಲ್ಲಿ ನಂಬರು ೧೪ ೧೫ನೇ ಅಂಗಡಿ ಮಳಿಗೆಗಳನ್ನು (ಮಹಡಿಯ ಮೇಲೆ ಇರತಕ್ಕವುಗಳು) ವರ್ಷವೊಂದಕ್ಕೆ ಬಾಡಿಗೆಗೆ ಪಡೆಯುವ ಹಕ್ಕನ್ನು ೧೯೫೦ನೇ ಇಸ್ವಿ ಜುಲೈ ಮಾಹೆ ತಾರೀಖು ೨೦ನೇ ಗುರುವಾರ ದಿವಸ ೧೧ ಘಂಟೆಗೆ ದೇವರಾಜ ಮಾರ್ಕೆಟ್ಟಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಮಳಿಗೆಗಳನ್ನು ಬಾಡಿಗೆಗೆ ಪಡೆಯಲು ಇಷ್ಟಪಡುವವರು ಹರಾಜು ಕಾಲಕ್ಕೆ ಹಾಜರಾಗಿ ಭಾಗವಹಿಸಬಹುದು. ಹೆಚ್ಚಿನ ಸಂಗತಿಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ವೇಳೆಯ ಕಾಲದಲ್ಲಿ ತಿಳಿಯಬಹುದು

ಮುನಿಸಿಪಲ್ ಕಮಿಷನರ್
ಮೈಸೂರು ಸಿಟಿ

ಮಾಸ್ಟ ಚಂದಾದಾರರಲ್ಲಿ ವಿನಂತಿ

ಕೆಲವು ಮಾಸ್ಟ ಚಂದಾದಾರರು ಹಣ ಕಳುಹಿಸದಿರುವುದರಿಂದ ಚಂದಾ ಬಾಕಿಯು ತಿಳಿದು ಬರಲು ಇರುವ ಕವರಿನ ಮೇಲೆ ಬರೆದಿರುವ ನಮ್ಮ ಗ್ರಾಹಕರಿಗೆ ಬಂದಿದೆ. ಇದರಿಂದ ಉಭಯತ್ರರಿಗೂ ತೊಂದರೆಯಾಗುವ ಸಂಭವವಿರುವುದರಿಂದ ಈ ಬಾಕಿ ಚಂದಾವನ್ನು ಕೂಡಲೇ ಪಾವತಿ ಮಾಡಬೇಕಾಗಿ ಮತ್ತೊಮ್ಮೆ ವಿನಂತಿ

ಸಾಧ್ವಿ ಏಜೆಂಟರು,
ನ್ಯೂಸ್ ಪೇಪರ್ ಹೌಸ್,
ಮೈಸೂರು

Edited, printed and published by A K Nagarajan, at Sadhvi Press, D Subbiah Road, Mysore

ಫೋನ್ ನಂ 798 ಸಿಪಂಡಿ/ಮಾಹರಂ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೩-೭-೫೦ [ಸಂಚಿಕೆ ೩೭

ಪುಟ್ಟರಾಜೆ ಅರಸಿನವರ ಅರ್ಜಿ ಕೋರ್ಟಿನಲ್ಲಿ ವಜಾ

ರೇಷ್ಮೆ ವ್ಯವಸಾಯಗಾರರ ಸಮ್ಮೇಳನ

ಚಂತಾಮಣಿ ೧೨

ಇಲ್ಲಿನ ಫಿಲೇಚರ್ ರೇಷ್ಮೆ ಕಾರ್ಖಾನೆಯ ಆವರಣದಲ್ಲಿ ಸಂಸ್ಥಾನದ ರೇಷ್ಮೆ ವ್ಯವಸಾಯಗಾರರ ಸಮ್ಮೇಳನವು ನೆನ್ನೆ ನಡೆಯಿತು. ಕೇಂದ್ರ ಶಾಸನ ಸಭೆಯ ಸದಸ್ಯರಾದ ಶ್ರೀ ಕೆ ಹನುಮಂತಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಸಾವಿರಾರು ಜನ ರೇಷ್ಮೆ ವ್ಯವಸಾಯಗಾರರು ಸೇರಿದ್ದರು.

ಪ್ರಾರ್ಥನೆ ಮತ್ತು ಬಾವುಟವಂದನೆಯಾದ ನಂತರ ಶ್ರೀ ಚಳ್ಳಗೆ ಲಿಂಗಣ್ಣನವರು ಸ್ವಾಗತ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಪರವಾಗಿ ಶ್ರೀ ಪುಟ್ಟ ಸ್ವಾಮ್ಯಯ್ಯನವರು ಭಾಷಣಮಾಡಿ, ಇಂದಿನ ಪರಿಸ್ಥಿತಿಯಲ್ಲಿ ರೇಷ್ಮೆಯ ವ್ಯವಸಾಯಕ್ಕೆ ಆಗಬೇಕಾದ ಸೌಲಭ್ಯಗಳನ್ನು ಸೂಚಿಸಿದರು.

ಗೃಹ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ರೇಷ್ಮೆ ಕೈಗಾರಿಕೆಗೆ ಈಗ ಉಂಟಾಗಿರುವ ಪರಿಸ್ಥಿತಿಯನ್ನು ಪರಿಹರಿಸಿ ಅದು ಮುಂದೆ ಲಾಭದಾಯಕವಾಗಿಯೂ ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗಿಯೂ ಆಗಲು ವ್ಯವಸಾಯಗಾರರು ಸಹಕಾರ ಪದ್ಧತಿಯಿಂದ ಉತ್ತಮವಾದ ಸೊಪ್ಪು, ಬೀಜ, ಮೊಟ್ಟೆ, ಮುಂತಾದುವುಗಳನ್ನು ಉಪಯೋಗಿಸುವುದರಲ್ಲಿ ತೊಡಗಬೇಕೆಂದು ಸೂಚಿಸಿದರು. ಸರ್ಕಾರದವರು ಜಪಾನ್ ಮುಂತಾದ ದೇಶಗಳ ಪದ್ಧತಿಗಳನ್ನು ನಿಪುಣರ ಮೂಲಕ ಪರಿಶೀಲನೆ ಮಾಡಿಸಿ ಇಲ್ಲಿಯೂ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ಆಧುನಿಕ ಸಂಶೋಧನಾ ಕ್ರಮಗಳನ್ನು ಕೈಗೊಳ್ಳಲಿರುವ ಅಂಶವನ್ನು ತಿಳಿಸಿದರು.

ಸಮ್ಮೇಳನದಲ್ಲಿ ಚರ್ಚೆಗಾಗಿ ೨೪ ನಿರ್ಣಯಗಳು ಬಂದಿದ್ದವು. ಅವುಗಳ ಪೈಕಿ ಕೆಲವನ್ನು ಮಾತ್ರ ಚರ್ಚಿಸಿ ಉಳಿದವುಗಳನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು. ರೇಷ್ಮೆ ವ್ಯವಸಾಯಗಾರರ ಹಿತಸಾಧನೆಗೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಸ್ಥಾಯಿ ಸಮಿತಿಯನ್ನು ರಚಿಸಲಾಯಿತು. ರೇಷ್ಮೆ ಕೈಗಾರಿಕೆಯ ಮೇಲೆ ಯಾವ ಬಗೆಯ ಹತೋಟಿಯನ್ನೂ ಹಾಕಬಾರದೆಂದು ಕೋರಲಾಯಿತು.

ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಈ ಕೈಗಾರಿಕೆಯ ಅಭಿವೃದ್ಧಿಗಾಗಿ ನಮ್ಮ ಮತ್ತು ಕೇಂದ್ರ ಸರ್ಕಾರಗಳ ಮೂಲಕ ಅವಶ್ಯಕವಾದ ಏರ್ಪಾಡುಗಳನ್ನು ಮಾಡಿಸಲು ಒತ್ತಾಯ ಪಡಿಸುವುದಾಗಿ ತಿಳಿಸಿದರು.

ದೆಹಲಿಗೆ ರಾಜಾಜಿ

ಕೇಂದ್ರ ಮಂತ್ರಿಮಂಡಲದ ಸಚಿವರಾಗಿ ನೇಮಿಸಲ್ಪಟ್ಟಿರುವ ಶ್ರೀ ಸಿ ರಾಜಗೋಪಾಲಾಚಾರಿಯವರು ಇಂದು ಮದರಾಸಿನಿಂದ ದೆಹಲಿಗೆ ತೆರಳಿ ಈ ವಾರಾಂತ್ಯದಲ್ಲಿ ಅಧಿಕಾರ ಸ್ವೀಕರಿಸುವರೆಂದು ಹೇಳಲಾಗಿದೆ.

ಭೋಪಟ್ಕರ್ ಮುಂತಾದವರ ಬಿಡುಗಡೆಗೆ ಅರ್ಜಿ

ಹಿಂದೂಮಹಾಸಭೆಯ ಮಾಜಿ ಅಧ್ಯಕ್ಷ ಎಲ್ ಬಿ ಭೋಪಟ್ಕರ್, ಶ್ರೀಗಳಾದ ಜಿ ವಿ ಕೇತ್ಕರ್ ದಾವೆ ಮುಂತಾದವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಬೊಂಬಾಯಿ ಹೈ ಕೋರ್ಟಿನ ಅರ್ಜಿಯಾಗಿದೆ.

ಬಿಳಿಗಿರಿ ರಂಗನ ಬೆಟ್ಟದ ನಿವಾಸಿಗಳಿಗೆ ಸೌಲಭ್ಯ

ಚಾಮರಾಜನಗರ ೧೨

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನೆನ್ನೆ ಶ್ರೀ ಬಿಳಿಗಿರಿ ರಂಗಸ್ವಾಮಿ ಬೆಟ್ಟಕ್ಕೆ ಭೇಟಿಯಿತ್ತರು. ಅಲ್ಲಿ ರೇಷ್ಮೆ ಇಲಾಖೆಯವರು ನಡೆಸುತ್ತಿರುವ ಸಂಶೋಧನಾ ಕೇಂದ್ರವನ್ನು ಪರಿಶೀಲಿಸಿ ಅದಕ್ಕೆ ಬೇಕಾದ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಸಲಹೆಗಳನ್ನಿತ್ತರು. ಬೆಟ್ಟದ ನಿವಾಸಿಗಳ ಆಹಾರದ ಕೊರತೆಯನ್ನು ಪರಿಹರಿಸಲು ಚಾಮರಾಜ ನಗರದಿಂದ ಸರ್ಕಾರದ ವೆಚ್ಚದಲ್ಲಿಯೇ ಆಹಾರ ಧಾನ್ಯವನ್ನು ಒದಗಿಸುವಂತೆ ಅಪ್ಪಣೆ ಮಾಡಿದರು. ಅಲ್ಲಿನ ನಿವಾಸಿಗಳು ತಮ್ಮ ಮನೆಗಳನ್ನು ದುರುಸ್ತು ಮಾಡಿಕೊಳ್ಳಲು ಅನುಮತಿಯಿತ್ತರು ಮತ್ತು ಊರಿನ ಅಭಿವೃದ್ಧಿಗಾಗಿ ಒಂದು ಸಾವಿರ ರೂಪಾಯಿಯನ್ನು ಮಂಜೂರು ಮಾಡಿದರು. ಈ ಬೆಟ್ಟದ ಹವಾಗುಣ ಮತ್ತು ನೈಸರ್ಗಿಕ ಸೌಂದರ್ಯವು ಮನೋಹರವಾಗಿರುವುದರಿಂದ ಅದನ್ನು ನಂದೀ ಬೆಟ್ಟದಂತೆಯೇ ಅಭಿವೃದ್ಧಿ ಪಡಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬೆಟ್ಟದ ಮಧ್ಯ ಭಾಗದಲ್ಲಿರುವ ಕ್ಯಾತೇದೇವರ ಗುಡಿ ಎಂಬ ಸ್ಥಳದಲ್ಲಿ ಸಾರ್ವಜನಿಕರ ವಿಶ್ರಾಂತಿಗಾಗಿ ಬಂದು ಇಳಿದುಕೊಳ್ಳಲು ತಕ್ಕ ಅನುಕೂಲಗಳನ್ನು ಕಲ್ಪಿಸಬೇಕೆಂದೂ ತಿಳಿಸಿದರು. ಬೆಟ್ಟದ ಮೇಲಿನವರೆಗಿರುವ ರಸ್ತೆಯನ್ನು ಉತ್ತಮ ಪಡಿಸಿ ವಾಹನಗಳ ಸಂಚಾರಕ್ಕೆ ಅನುಕೂಲ ಪಡಿಸಬೇಕೆಂದೂ ಹೇಳಿದರು. ಸಧ್ಯದಲ್ಲಿಯೇ ಬೆಟ್ಟದ ಮೇಲಕ್ಕೆ ಬಸ್ಸಿನ ಸೌಲಭ್ಯವೂ ಸಹ ಏರ್ಪಾಡಾಗಲಿರುವುದೆಂದು ತಿಳಿದುಬಂದಿದೆ.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಿದ್ದನಗುಡಿ ಬೀದಿಯ ಶ್ರೀರಾಮಲಿಂಗೇಶ್ವರ ಚೌಡೇಶ್ವರಿ ದೇವಾಲಯದಲ್ಲಿ ಆಷಾಢಮಾಸ್ಯ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಶ್ರೀ ಸಂಬಂಧವರ್ತಿಗಳಿಂದ "ನಂದನಾರ್" ಎಂಬ ಹರಿಕಥೆಯನ್ನು ದೇವಾಂಗ ಸಂಘದವರು ಏರ್ಪಡಿಸಿದ್ದಾರೆ. ದೇವರಿಗೆ ಈಶ್ವರ ಪಾರ್ವತಿ ಅಲಂಕಾರವನ್ನು ಮಾಡಲಾಗುವುದು.

ವಿಶೇಷ ನ್ಯಾಯಾಸ್ಥಾನದ ನೇಮಕ ಅಕ್ರಮ

ಶಿರಾ ಗಲಭೆ ಕೇಸಿನ ಬಗ್ಗೆ ವಕೀಲರ ಅರ್ಜಿ ಹೈಕೋರ್ಟಿಗೆ

ಸ್ವಂ ವ ಪ್ರೋ] ಬೆಂಗಳೂರು ೧೨

ಶಿರಾದಲ್ಲಿ ೧। ವರ್ಷಗಳ ಹಿಂದೆ ನಡೆದ ಕೋಮುವಾರು ಗಲಭೆಗಳ ಬಗ್ಗೆ ಆದ ವಿಶೇಷ ನ್ಯಾಯಾಧೀಶರ ತೀರ್ಪು ಹೈಕೋರ್ಟಿನಲ್ಲಿ ಈ ದಿನ ಪುನರ್ವಿಮರ್ಶೆಗೆ ಬರಬೇಕಾಗಿದ್ದಿತು. ಶಿಕ್ಷೆಯಾದವರ ಪರವಾಗಿ ಮದ್ರಾಸಿನ ವಕೀಲರುಗಳಾದ ಶ್ರೀ ಆರ್ ಜಯರಾಮಯ್ಯರ್ ಮತ್ತು ಜಿ ಆರ್ ಪಟ್ಟಾಭಿರಾಮನ್‌ರವರು ಮ್ಯಾಂಡಮಸ್ ಮತ್ತು ಸರ್ಷಿಯೊರಾರಿ ನಿಬಂಧನೆಗಳ ಪ್ರಕಾರ ಆಜ್ಞೆಯಾಗಬೇಕೆಂದು ಅರ್ಜಿಯನ್ನು ಸಲ್ಲಿಸಿ ಅದರ ಮೇಲೆ ವಾದ ಮಾಡಿದರು. ಶಿರಾದಲ್ಲಿ ನಡೆದ ಗಲಭೆ ಬಗ್ಗೆ ವಿಶೇಷ ನ್ಯಾಯಾಸ್ಥಾನವನ್ನು ಸ್ಥಾಪಿಸಲು ರಾಜ್ಯಾಂಗದ ಪ್ರಕಾರ ಇಲ್ಲಿನ ಸರ್ಕಾರಕ್ಕೆ ಅಧಿಕಾರವಿಲ್ಲವೆಂದೂ ಸುಪ್ರೀಂಕೋರ್ಟಿಗೆ ಮಾತ್ರ ಆ ಅಧಿಕಾರವಿರುವುದೆಂದೂ ಅವರು ವಾದಮಾಡಿದರು. ಅವರ ವಾದವನ್ನು ಕೇಳಿದ ಜಸ್ಟಿಸ್ ಶ್ರೀ ಸಿ ಎ ಮಲ್ಲಪ್ಪ ಮತ್ತು ಶ್ರೀ ಆರ್ ವೆಂಕಟರಾಮಯ್ಯನವರುಗಳು ಅರ್ಜಿಯನ್ನು ಪುರಸ್ಕರಿಸಿರುವುದಾಗಿ ತಿಳಿಸಿದರು.

ರಕ್ಷಗಂಬಳಿ ಬಗ್ಗೆ ಮಾತುಕತೆ

ರಕ್ಷಗಂಬಳಿ ತಯಾರಿಕೆ ಮುಂತಾದ ವಿಷಯಗಳ ಬಗ್ಗೆ ಮೈಸೂರು ಸರ್ಕಾರದ ಮಂತ್ರಿಗಳೂ ಮದ್ರಾಸಿನ ಅಧಿಕಾರಿಗಳೂ ಈ ದಿನ ಕೈಗಾರಿಕಾ ಸಚಿವರ ಕೊಠಡಿಯಲ್ಲಿ ಮಾತುಕತೆ ನಡೆಸಿದರು.

○ ಕೇಂದ್ರಕ್ಕೆ ಸೇರಿದ ಟೆಲಿಫೋನ್ ಇಲಾಖೆಯ ನೌಕರರು ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಅದಕ್ಕೆ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷರಾಗಿದ್ದಾರೆ.

ಅ॥ ಭಾರತ ಕಾಂ॥ ಅಧಿವೇಶನ ಸೆಪ್ಟೆಂಬರ್ ೧೭, ೧೮ರಲ್ಲಿ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಸೆಪ್ಟೆಂಬರ್ ೧೭ ಮತ್ತು ೧೮ರಲ್ಲಿ ನಾಸಿಕದಲ್ಲಿ ಸೇರುವುದು. ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಬರುವ ತಿಂಗಳು ೨೭ರಲ್ಲಿ ನಡೆಯುವುದು.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರಿನ ಮಟ್ಟವು ೭೭ ಅಡಿಯಿತ್ತು.

ಮೇದಪ್ಪನವರ ಮೇಲೆ ಪುಟ್ಟರಾಜೆ ಅರಸರ ಅರ್ಜಿ ವಜಾ

ಸ್ವಂ ವ ಪ್ರೋ] ಬೆಂಗಳೂರು ೧೨

ಸಂಸ್ಥಾನದ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪನವರ ಮೇಲೆ ಶ್ರೀ ಆರ್ ಪುಟ್ಟರಾಜೇ ಅರಸಿನವರು ಮಾನ ನಷ್ಟಕ್ಕಾಗಿ ಅಲ್ಲಿನ ಜಿಲ್ಲಾ ನ್ಯಾಯಾಧೀಶರ ಮುಂದೆ ಹೂಡಿದ್ದ ಮೊಕದ್ದಮೆಯಲ್ಲಿ ನ್ಯಾಯಾಧೀಶ ಶ್ರೀ ಬಿ. ಟಿ ಕೇಶವಯ್ಯನವರು ಈ ದಿನ ತೀರ್ಪಿತ್ತು, ಅರ್ಜಿಯನ್ನು ಪುರಸ್ಕರಿಸಲು ಸಾಕಾದಷ್ಟು ಕಾರಣಗಳಿಲ್ಲವೆಂದು ಕ್ರಿ ಪ್ರೊ ಕೋ ೨೦೩ನೇ ಸೆಕ್ಷನ್ ಪ್ರಕಾರ ವಜಾ ಮಾಡಿರುವರು.

ಸಂಸ್ಥಾನಕ್ಕೆ ಜಪಾನ್ ಗೃಹಕೈಗಾರಿಕೆ ಯಂತ್ರೋಪಕರಣಗಳು

ಜಪಾನಿನಿಂದ ಎಣ್ಣೆ ತೆಗೆಯುವ, ಬತ್ತ ತೆಗೆಯುವ ಯಂತ್ರ, ಮುದ್ರಣ, ಚಿಂಕ್ವಿಷ್ ಕ್ರೆಸರ್ ಲೂಮ್ ವೈರ್‌ಕೇಬಲ್, ಇವೇ ಮುಂತಾದ ಗೃಹ ಕೈಗಾರಿಕಾ ಯಂತ್ರೋಪಕರಣಗಳನ್ನು ಸಂಸ್ಥಾನಕ್ಕೆ ಆಮದು ಮಾಡಿಕೊಂಡು ಅವುಗಳನ್ನು ಪ್ರದರ್ಶಿಸುವ ಬಗ್ಗೆ ನೆನ್ನೆ ದಿನ ಕೋಲಾರ ತಾಲ್ಲೂಕಿನ ವೇಮಗಲ್‌ನಲ್ಲಿ ನಡೆದ ಅಖಿಲ ಮೈಸೂರು ಗೃಹ ಕೈಗಾರಿಕಾ ಸಮಿತಿಯಲ್ಲಿ ನಿರ್ಧಾರವಾಯಿತು. ಸರ್ಕಾರದ ಅಡಿಷನಲ್ ಕೈಗಾರಿಕಾ ಡೈರೆಕ್ಟರಾದ ಶ್ರೀ ಕೆ ನಾರಾಯಣ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಅವುಗಳನ್ನು ತರಿಸಲು ೩೬ ಸಾವಿರ ರೂ ಗಳನ್ನು ಒದಗಿಸಬೇಕೆಂದು ಗೊತ್ತಾಯಿತು.

ಸಚಿವರ ಬಳಿ ಮರಾಮತ್ತು ಇಲಾಖೆ ನೌಕರರ ನಿಯೋಗ

ಮರಾಮತ್ತು ಸಚಿವರಾದ ಶ್ರೀ ಟಿ ಮರಿಯಪ್ಪನವರ ಬಳಿ ಈದಿನ ಆ ಇಲಾಖೆಯ ಸಬ್ ಓವರ್‌ಸೀಯರು ಮತ್ತು ಓವರ್‌ಸೀಯರುಗಳು ನಿಯೋಗ ಹೋಗಿ ತಮ್ಮ ಅಂತಸ್ತು, ಸಂಬಳಗಳ ಪುನರ್ವಿಮರ್ಶೆ ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಸಚಿವರು ಅವರುಗಳ ಸ್ಥಿತಿಯನ್ನು ಉತ್ತಮ ಪಡಿಸುವ ಬಗ್ಗೆ ಶೀಘ್ರದಲ್ಲೇ ಏರ್ಪಾಡು ಮಾಡುವುದಾಗಿ ಭರವಸೆಯಿತ್ತರೆಂದು ಹೇಳಲಾಗಿದೆ.

ಕಾಂಗ್ರೆಸ್ ಚುನಾವಣೆ ಬಗ್ಗೆ ಕೋರ್ಟಿಗೆ ಹೋಗಕೂಡದು

ಕಾಂಗ್ರೆಸ್ ಚುನಾವಣೆಗಳ ಬಗ್ಗೆ ನ್ಯಾಯಾಲಯಗಳನ್ನು ಹತ್ತಿದ ಕಾಂಗ್ರೆಸ್ಸಿಗರು ತಮ್ಮ ಸದಸ್ಯತನವನ್ನು ಕೂಡಲೇ ಕಳೆದುಕೊಳ್ಳುವುದಾಗಿ ಅಖಿಲ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯ ಮಾಡಿದೆ.

ಲಾಟರಿಯಲ್ಲಿ ಮೋಟಾರು ಕೊಡುವುದಾಗಿ ಹೇಳುತ್ತಿದ್ದವನ ಬಂಧನ

ತಿರುಚನಾಪಳ್ಳಿಯ ನಲ್ಲರಾಜು ನಾಯ್ಡು ಎಂಬುವನು ಎಂ ಡಿ ಯು ೧೩೩೩ನೇ ನಂಬರಿನ ಕಾರನ್ನು ಲಾಟರಿಯಲ್ಲಿ ಕೊಡಲಾಗುವುದೆಂದು ಹೇಳಿ ಮುಂಬೈನಲ್ಲಿ ಪ್ರಚಾರ ನಡೆಸಿ, ಆ ಬಗ್ಗೆ ಜನರಿಗೆ ಟಿಕೆಟ್ಟುಗಳನ್ನೂ ಮಾರುತ್ತಿದ್ದನೆಂದೂ, ಅವನ ಮೋಸ ಕೃತ್ಯವು ಪೋಲೀಸರಿಗೆ ಪತ್ತೆಯಾಗಿ ಕಾರು ಸಮೇತ ಅವನನ್ನು ಬಂಧಿಸಿದ್ದಾರೆಂದೂ ತಿಳಿದುಬಂದಿದೆ.

○ ಪ್ರಪಂಚದ ಎರಡನೆ ಮಹಾ ಯುದ್ಧದ ಅಂತ್ಯ ಕಾಲದಲ್ಲಿ ಕಂಡುಹಿಡಿಯಲ್ಪಟ್ಟ ಬೆಂಕಿ ಕಾರುವ ಹೊಸ ಬಾಂಬನ್ನು ಅಮೆರಿಕದವರು ಕೊರಿಯಾ ಯುದ್ಧದಲ್ಲಿ ಉಪಯೋಗಿಸುತ್ತಿದ್ದಾರೆ.

ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸ್ಥಾನ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಚೀನ ಸಂಘ ಸಂಸ್ಥಾನ ರಾಷ್ಟ್ರಗಳ ಸ್ಥಾನವಾದ ಚೀನಾಕ್ಕೆ ಸೇರಿದ್ದಾಗಿರುವ ಖಾಯಂ ಸದಸ್ಯತ್ವವನ್ನು ಭಾರತಕ್ಕೆ ಕೊಡುವ ಬಗ್ಗೆ ಅಮೆರಿಕವು ಆಸಕ್ತಿ ಹೊಂದಿದೆಯೆಂದೂ, ಲೇಕ್ ಸಕ್ಸಸ್ಸಿನಲ್ಲಿ ಈ ಬಗ್ಗೆ ಪ್ರಯತ್ನ ನಡೆಯುತ್ತಿದೆಯೆಂದೂ ಹೇಳಲಾಗಿದೆ. ಈ ಸ್ಥಾನವು ಭಾರತಕ್ಕೆ ಲಭ್ಯವಾದರೆ ವೀಟೋ ಅಧಿಕಾರವೂ ಅದಕ್ಕೆ ಸಿಗುವುದು. ಚೀನಾದಲ್ಲಿ ಅರಾಜಕತೆಯುಂಟಾಗಿರುವುದರಿಂದಲೂ, ಸ್ವತಂತ್ರ ಭಾರತವು ಏಷ್ಯಾದಲ್ಲಿ ಪ್ರಮುಖ ರಾಷ್ಟ್ರವಾಗಿರುವುದರಿಂದಲೂ ಈ ಹೊಸ ಏರ್ಪಾಡಿಗೆ ಅವಕಾಶವಾಗಿದೆ. ಈ ವಿಷಯದಲ್ಲಿ ಭಾರತ ಸರ್ಕಾರವು ಬಹಳ ಎಚ್ಚರಿಕೆಯಿಂದ ವರ್ತಿಸುತ್ತಿದೆ. ನೆರೆಹಾದ ರಷ್ಯಾವನ್ನು ಎದುರಿಸುವ ವಿರೋಧ ಕಟ್ಟಿಕೊಳ್ಳಲು ತಯಾರಾಗಿಲ್ಲ

ಮಕ್ಕಳ ಹಾಡುಗಳು

ರಾಜಧಾನಿಯ ವಿಕ್ಟೋರಿಯಾ ಗರ್ಲ್ಸ್ ಹೈಸ್ಕೂಲಿನ ಸಂಗೀತ ಅಧ್ಯಾಪಕರಾದ ಶ್ರೀ ಎಸ್ ಆರ್ ಶ್ರೀನಿವಾಸ ಭಟ್ಟಾಚಾರ್ಯರು ರಚಿಸಿರುವ "ಮಕ್ಕಳ ಹಾಡುಗಳು" ಎಂಬ ಪುಸ್ತಕವು ಪ್ರಕಟವಾಗಿದೆ. ಶ್ರೀಯುತರು ಸರಳ ಶೈಲಿ ಮತ್ತು ಸ್ವರ ಸಹಿತವಾದ ಕೃತಿಗಳನ್ನು ರಚಿಸಿದ್ದಾರೆ. ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪುಸ್ತಕವು ಬಹಳ ಉಪಯುಕ್ತವಾಗಿದೆ. ಇದರ ಬೆಲೆ ೦-೨-೬. ದೊರೆಯುವ ಸ್ಥಳ- ಲೇಖಕರು ಸಂಗೀತ ಎಸ್. ಆರ್. ಶ್ರೀನಿವಾಸಾಚಾರ್ಯರು, ನಂ. ೮೬೩ "ಕಮಲಾನಿಧಿ" ಕೆಂಪನಂಜಾಂಬಾ ಅಗ್ರಹಾರ, ಮೈಸೂರು.

SRI GAYATHRI
TALKIES
Daily 3 Shows
From 14-7-50 for 2 days
MAN - EATER OF KUMAON
ಮ್ಯಾನ್ ಈಟರ್ ಆಫ್ ಕುಮಾನ್
With:— Mysore Sabu
Morning Shows 15th & 16th
M. G. M's
Unfinished Dance

Mysore Government
INSURANCE DEPARTMENT
(PUBLIC BRANCH)

Application having been received for the issue of a Duplicate Policy No 69422/c on the life of *Mr S. Muniswamy Rao*, it is hereby notified that the duplicate will be issued unless valid objection therefor, is received by the undersigned within one month from this date.

Bangalore, 12-7-1950 — B. M. KRISHNAN, Secretary.

ರಷ್ಯಕ್ಕೆ ೬ ಸಾವಿರ ಕೋಟಿ ಡಾಲರ್ ಯುದ್ಧ ನಷ್ಟ

ಗಳಿಂದ ಈಚೆಗೆ ಯುದ್ಧ ನಷ್ಟಕ್ಕಾಗಿ ಜರ್ಮನಿಯಿಂದ ರಷ್ಯವು ೬ ಸಾವಿರ ಕೋಟಿ ಡಾಲರುಗಳನ್ನು ವಸೂಲು ಮಾಡಿಕೊಂಡಿರುವುದಾಗಿ ಹೇಳಲಾಗಿದೆ

ಸಮುದ್ರದ ಮೇಲೆಯೇ ೬೭ ಶಿಶುಗಳ ಜನನ

ಇಂಡೋನೇಷ್ಯದಿಂದ ಹಾಲೆಂಡಿಗೆ ಹೋದ ಅಟ್ಲಾಂಟಿಸ್ ಎಂಬ ಡಚ್ ಹಡಗಿನಲ್ಲಿ ಹಲವು ಡಚ್ ಸೈನಿಕರ ಪತ್ನಿಯರು ಪ್ರಯಾಣ ಮಾಡಿದರು. ಆ ಹಡಗು ಜಕಾರ್ತವನ್ನು ಬಿಟ್ಟು ಹಾಲೆಂಡಿಗೆ ಸೇರುವುದರೊಳಗಾಗಿ ೬೭ ಶಿಶುಗಳು ಜನಿಸಿದವು. ಜಕಾರ್ತವನ್ನು ಬಿಡುವಾಗಲೂ ಮತ್ತು ಆಂಸ್ಟರ್ಡಾಮನ್ನು ಸೇರುವಾಗಲೂ ಮೂರು ಮೂರು ಶಿಶುಗಳು ಜನಿಸಿದುವು

ದೇವರ ಒಡವೆಗಳ ಕಳುವಿನ ಬಗ್ಗೆ ನಾಲ್ವರ ದಸ್ತಗಿರಿ

ಹೊಂಬಾಳೆ ಮಹಾಲಕ್ಷ್ಮೀ ದೇವಾಲಯದಲ್ಲಿ ಆಭರಣಗಳು ಕಳುವಾದ ಸಂಬಂಧದಲ್ಲಿ ೪ ಜನರ ದಸ್ತಗಿರಿಯಾಗಿದೆ

ಮನೆ ಬಾಡಿಗೆಗೆ ಇದೆ

ಕೆಂಪಯ್ಯ ರಾಮಯ್ಯನವರ ಬೀದಿಯ ಗಳಲಲ್ಲೇ ನಂಬರ್ ಮನೆಯು ಹಿಂಭಾಗ ಪಡಸಾಲೆ, ಕೈತೋಟ, ಪ್ರತಿ ಅನುಕೂಲವಿರುವ ಮನೆ ಬಾಡಿಗೆಗೆ ಇದೆ ಸ್ಥಳದಲ್ಲೇ ವಿಚಾರಿಸಿ

ಕೇಂದ್ರ ನೌಕರರ ಬೇಡಿಕೆಗಳು ಈಡೇರದಿದ್ದರೆ ಮುಷ್ಕರ

ಕೇಂದ್ರ ಸರ್ಕಾರದ ವಿವಿಧ ಶಾಖೆಗಳ ನೌಕರರ ಬೇಡಿಕೆಗಳನ್ನು ಈಡೇರಿಸದಿದ್ದ ಮುಷ್ಕರ ಹೂಡಲು ಬ್ಯಾಲಟ್ಟನ್ನು ತೆಗೆದುಕೊಳ್ಳಲಾಗುವುದೆಂದು ಪ್ರಕ್ರಮಾಳ ಜಾರಾಯಣರು ತಿಳಿಸಿರುತ್ತಾರೆ.

ಮಂಗಳೂರಿನಲ್ಲಿ ವಿಮಾನ ನಿಲ್ದಾಣ

ಮಂಗಳೂರಿನಲ್ಲಿ ವಿಮಾನ ನಿಲ್ದಾಣವೊಂದನ್ನು ನಿರ್ಮಿಸಲು ಭಾರತ ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ಹೇಳಲಾಗಿದೆ.

ಮೊಕಾರ್ಥರರ ನೇಮಕಕ್ಕೆ ರಷ್ಯದ ವಿರೋಧ

ಕೊರಿಯಾ ಯುದ್ಧದಲ್ಲಿ ಜ॥ ಮೆಕಾರ್ಥರನ್ನು ವಿಶ್ವ ಸಂಸ್ಥೆ ಪ್ರಧಾನ ಸೇನಾಪತಿಯನ್ನಾಗಿ ನೇಮಿಸಿರುವುದು ಅಕ್ರಮವೆಂದು ರಷ್ಯವು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಟೆಲಿಗ್ರಾಂ ಕಳುಹಿಸಿದೆ.

ಗಣೇಶಾ ಟಾಕೀಸ್
14-7-50 ರಿಂದ ಪ್ರತಿದಿನ 3 ಆಟಗಳು
ರಂಜಾನ್ ಸ್ಪೆಷಲ್ ಪ್ರೋಗ್ರಾಂ
ಬಡೀ ಬಹೆನ್
(ಹಿಂದಿ)
ಪಾತ್ರ:- ಸುರಯ್ಯಾ, ಗೀತಾ ಬಾಲಿ, ರೆಹಮಾನ್, ಉಲ್ಲಾಸ್

ಪ್ರಭುದೇವಾ ಟಾಕೀಸ್
14-7-50 ರ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು
ನಳ ದಮಯಂತಿ
(ತೆಲುಗು)
ಮುಖ್ಯ ಪಾತ್ರ:- ತ್ರಿರಂಜನಿ, ಮಾಧವ ಪೆದ್ದಿ, ಅದ್ದಂಕಿ ಮೊದಲಾದವರು

ರಾಜಕಮಲ್, ಮೈಸೂರು



ರಂಜಾನ್ ಹಬ್ಬದ ಪ್ರಯುಕ್ತ
ಸ್ಪೆಷಲ್ ಪ್ರೋಗ್ರಾಂ
14-7-50 ರಿಂದ ಅಪೂರ್ವ ಪ್ರಾರಂಭ ದಿನಕ್ಕೆ 3 ಪ್ರದರ್ಶನಗಳು
ಫಿಲ್ಮಿಸ್ತಾನದವರ ಹಿಂದಿ ಚಿತ್ರ
ಸಮಾಧಿ
—ಭೂಮಿಕೆ:—
ಅಶೋಕ ಕುಮಾರ್, ನಳಿನಿ, ಕುಲದೀಪ್ ಕೌರ್, ಶ್ಯಾಮ್
14-7-50 ರಿಂದ ಬೆಳಗಿನ ಪ್ರದರ್ಶನ 4 ದಿನಗಳು ಮಾತ್ರ
ಪಾಮಿಕ್ ಆಪ್ರ
(ಹಿಂದಿ)
ಭೂಮಿಕೆ:-ಪ್ರೇಮ್, ಸ್ವರ್ಣಲತಾ

ಭಾರತ ಪಾಕಿಸ್ತಾನಗಳ ಮೇಲೆ ಆಕ್ರಮಣವಿಲ್ಲ

ಭಾರತ ಮತ್ತು ಪಾಕಿಸ್ತಾನಗಳ ಮೇಲೆ ಭೂ ಯುದ್ಧವು ಅಸಂಭವವೆಂದು ಇಂಗ್ಲೆಂಡಿನ ಪ್ರಧಾನ ಸೇನಾನಿ ಮಾ॥ವಿಲಿಯಂ ಸ್ಲಿಂರವರು ಹೇಳಿದ್ದಾರೆ. ಪಾಕಿಸ್ತಾನ ಮತ್ತು ಭಾರತಗಳು ಜಂಟಿ ರಕ್ಷಣಾ ಸಮಿತಿಯನ್ನು ರಚಿಸಿಕೊಳ್ಳಬೇಕೆಂದು ಅವರು ಸಲಹೆ ಮಾಡುತ್ತಾರೆ

ಪಶ್ಚಿಮ ಜರ್ಮನಿಯಲ್ಲಿ ಸೇನಾ ನಿರ್ಮಾಣ

ಮಿತ್ರ ರಾಷ್ಟ್ರಗಳು ಪಶ್ಚಿಮ ಜರ್ಮನಿಯಲ್ಲಿ ೩೦ ಸಾವಿರ ಜನ ಜರ್ಮನರ ಸೇನೆಯನ್ನು ನಿರ್ಮಾಣ ಮಾಡಲು ಅಪ್ಪಣೆ ಮಾಡಿರುವುದಾಗಿ ಮಾಸ್ಕೋ ರೇಡಿಯೋವು ಹೇಳಿದೆ. ಈ ಸೈನ್ಯಗಳಿಗೆ ಟ್ಯಾಂಕುಗಳು ಮತ್ತು ಯಂತ್ರಗಳ ಪ್ರಯೋಗ ಮಾಡಲು ಅವಕಾಶ ಕೊಡಲಾಗುವುದು

ವನಸ್ಪತಿ ತುಪ್ಪದ ಮಹಪಾಪ ಕಾರ್ಯ!

ವನಸ್ಪತಿ ತುಪ್ಪದ ಪ್ರಾದುರ್ಭಾವದ ಪರಿಣಾಮವಾಗಿ ಬೆಣ್ಣೆ ವ್ಯಾಪಾರಿಗಳಿಗೆ ಬೆಣ್ಣೆ ಹೆಸರಿನಲ್ಲಿ ಯಾವ ಹೊಲಸು ಬೇಕಾದರೂ ಬೆರಸಿ ಒಳ್ಳೆ ತುಪ್ಪದ ಬೆಲೆಗೆ ಮಾರುವ ಧೈರ್ಯ ಬಂದು ಬೆಣ್ಣೆಯು ಅಭಾವ ಸ್ಥಿತಿಗಿಳಿಯುವಂತಾಗಿದೆ

ತುಪ್ಪದ ವ್ಯಾಪಾರಿಗಳ ಮತ್ತು ತಯಾರಿಕೆಗಾರರ ಸಂಖ್ಯೆ ದಿನೇ ದಿನೇ ವೃದ್ಧಿ ಹೊಂದಿ ಚಿಕ್ಕಿನಲ್ಲಿ ಬೆರೆಯುವ ಎಲ್ಲ ಪದಾರ್ಥಗಳನ್ನೂ ತುಪ್ಪ ಮಾಡುವ ಯುಕ್ತಿಯ ವಿದ್ಯೆ ಸಿದ್ಧಿಸಿದೆ

ಧಲಹಾರ, ಮಂದಿರಗಳಲ್ಲಿ ಇಂಥಾ ತುಪ್ಪಗಳ ಅಥವಾ ಇವಕ್ಕೂ ಪುಷ್ಟಿಕೊಡುವ ಇತರ ಪದಾರ್ಥಗಳ ಉಪಯೋಗದಿಂದ ಭಕ್ಷ್ಯಗಳು ತಯಾರಾಗಿ ತುಪ್ಪದಿಂದ ತಯಾರಿಸಿದ ರುಚಿ, ರುಚಿ ಮತ್ತು ಆರೋಗ್ಯಕರ ವಸ್ತುಗಳೆಂದು ಪ್ರತಿ ಕ್ಷಣದಲ್ಲಿಯೂ ಯಾವ ಅತಂಕವೂ ಇಲ್ಲದೆ ಮಾರಾಟ ಮಾಡುವ ಧೈರ್ಯ ಮತ್ತು ಸವಲತ್ತುಗಳುಂಟಾಗಿವೆ

ಇಂಥಾ ಆಹಾರಗಳ ಸೇವನೆಯಿಂದ ವೈದ್ಯರಿಗೆ ಗಿರಾಕಿಗಳು ಹೆಚ್ಚಿ, ದಿನೇ ದಿನೇ ಅವರ ಚಟುವಟಿಕೆಯನ್ನು ವೃದ್ಧಿಗೊಳಿಸುತ್ತಿವೆ

ಪರೋಪಕಾರಕ್ಕೇ! ಜನ್ಮ ತಾಳಿರುವ ಇಂಥಾ ಪವಿತ್ರ ಪದ್ಧತಿಯನ್ನು ಕೆಲವು ಜಿಲ್ಲಾ ವೈದ್ಯಾಧಿಕಾರಿಗಳು ಬಹುಶಃ ವಿಸ್ಮೃತದ ಅರಿವಿಲ್ಲದ್ದರಿಂದಲೋ ಏನೋ ಬಹಿಷ್ಕರಿಸಬೇಕೆಂದು ಉದ್ದೇಶ ತೆಗೆದಿರುವುದು ಸರ್ವೇಸಾಧ್ಯತ್ವವನ್ನುಂಟುಮಾಡುತ್ತೆ. ಇದನ್ನು ನೋಡಿಯೋ ಏನೋ ಒಬ್ಬೆಬ್ಬ ಕೇಂದ್ರ ಶಾಸನ ಸಭಾ ಸದಸ್ಯರು ಶ್ರಮಿಸುವಂತೆ ತೋರಿಬರುತ್ತಲಿದೆ ಇದೆ

ಇಂಥಾ ಪದಾರ್ಥಗಳ ವಿಷಯದಲ್ಲಿ ಪ್ರಾಕೃತಿಕ ಸಾರ್ವಜನಿಕರಿಂದ ಅಭಿಪ್ರಾಯವನ್ನು ಪಡೆದು, ಎಲ್ಲ ಪದಾರ್ಥಗಳ ಈ ಕಾಪಲೆ ರಕ್ಷಣೆಯನ್ನು ಕೊಡಬೇಕಾಗಿದೆ, ಅಪ್ಪ ಚರ್ಚಾ

ವನಸ್ಪತಿ ಹಿತಚಿಂತಕ.
ಶ್ರೀ ಎಸ್.ಎಸ್. ಸುಬ್ರಹ್ಮಣ್ಯಶಾಸ್ತ್ರಿ, ಫಿರ್ಯಾದಿ ಭಾಷಣ, ಮೈಸೂರು

Edited, printed and published by A. R. Nagarajan, at Sadhvi Press, D Subbiah Road, Mysore.

[illegible] 792 [illegible] ಬಿಡಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶುಕ್ರವಾರ ೧೪-೭-೫೦ [ಸಂಚಿಕೆ ೩೩೦

– ಸಂಸ್ಥಾನದಲ್ಲಿ – ಅಕ್ಕಿ ಬೆಲೆ ಹೆಚ್ಚುವುದು

ರಾಷ್ಟ್ರಧ್ವಜಕ್ಕೆ ಅಪಮಾನ ವಾಗದಂತೆ ಎಚ್ಚರಿಕೆ ಕ್ರಮ

ರಾಷ್ಟ್ರಧ್ವಜಕ್ಕೆ ಅಪಮಾನವಾಗದಂತೆಯೂ ಮತ್ತು ಅದರ ದುರುಪಯೋಗವಾಗದಂತೆಯೂ ನೋಡಿಕೊಳ್ಳಬೇಕೆಂದು ಮದ್ರಾಸು ಸರ್ಕಾರದವರು ಜಿಲ್ಲಾಧಿಕಾರಿಗಳು ಮತ್ತು ಪೋಲೀಸು ಅಧಿಕಾರಿಗಳಿಗೆ ಸೂಚನೆಯಿತ್ತಿರುವರು. ರಾಷ್ಟ್ರಧ್ವಜದ ಮಹತ್ವವನ್ನು ಅರಿಯದ ಜನರಿಂದ ಅದಕ್ಕೆ ಅಪಮಾನವಾದ ವರದಿಗಳು ಅಲ್ಲಿನ ಸರ್ಕಾರಕ್ಕೆ ಬಂದಿದ್ದುದರಿಂದ ಮೇಲ್ಕಂಡಂತೆ ವಿಶೇಷ ಸೂಚನೆಯನ್ನು ಕೊಡಲಾಗಿದೆ

ಮತದಾರರ ಪಟ್ಟಿಯಲ್ಲಿ ಪಾಟಿಯಾಲಾ ರಾಜರು

ಹೊಸದಾಗಿ ಪ್ರಕಟವಾಗಿರುವ ಮತದಾರರ ಪಟ್ಟಿಯಲ್ಲಿ ಪಾಟಿಯಾಲಾ ಮಹಾರಾಜರ ಹೆಸರನ್ನು ಬರೆಯಲಾಗಿದೆ. ಅವರನ್ನೂ ಅವರ ಮನೆತನದವರನ್ನೂ ಇನಾಮುದಾರರೆಂದು ಕರೆಯಲಾಗಿದೆ

ಜ್ವಾಲಾಮುಖಿ ಕಾವಿನಿಂದ ಅಡಿಗೆ

ಭೂಮಿಯ ಗರ್ಭದೊಳಗಿರುವ ಕರಗಿದ ಲೋಹಗಳಿಂದ ಉತ್ಪತ್ತಿಯಾಗುವ ಕಾವಿನಿಂದ ಅಡಿಗೆ ಕೆಲಸಗಳನ್ನು ಕೆಲವು ವರ್ಗಗಳಲ್ಲೇ ಮಾಡಿಕೊಳ್ಳಲು ಅವಕಾಶವಾಗುವುದೆಂದು ವಿಜ್ಞಾನಿಗಳು ತಿಳಿಸಿರುತ್ತಾರೆ. ಡೈನಮೊಗಳನ್ನು ನಡೆಸಲು ಜ್ವಾಲಾಮುಖಿಗಳ ಹವೆಯನ್ನು ಉಪಯೋಗಿಸಬಹುದೆಂದು ಅವರು ಹೇಳಿರುತ್ತಾರೆ

ಬ್ರಿಟನ್ನಿನಲ್ಲಿ ಮುಂಜಾಗ್ರತೆ ಕ್ರಮ

ಬ್ರಿಟನ್ನಿನಲ್ಲಿ ಯಾವ ಆಕಸ್ಮಿಕ ಘಟನೆಗಳು ನಡೆದರೂ ಅವುಗಳನ್ನು ಎದುರಿಸಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗಿದೆಯೆಂದು ಅಲ್ಲಿನ ರಕ್ಷಣಾ ಮಂತ್ರಿ ಇಮ್ಯಾನ್ಯುಯಲ್ ಷಿನ್ವೆಲ್ಲರು ತಿಳಿಸಿರುವರು

ಕೊರಿಯಾ ಯುದ್ಧಕ್ಕೆ ೧೦೦ ಕೋಟಿ ಡಾಲರ್ ವೆಚ್ಚ

ಕೊರಿಯ ಯುದ್ಧಕ್ಕೆ ನೂರು ಕೋಟಿ ಡಾಲರುಗಳ ವೆಚ್ಚಕ್ಕಾಗಿ ಅಮೆರಿಕದ ರಕ್ಷಣಾ ಇಲಾಖೆಯು ಅಲ್ಲಿನ ಕಾಂಗ್ರೆಸ್ಸಿನ ಮುಂದೆ ಬರುವ ವಾರ ಬೇಡಿಕೆಯನ್ನು ಸಲ್ಲಿಸುವುದಾಗಿದೆ

ಕಾಂಗ್ರೆಸ್ ಅಧ್ಯಕ್ಷತೆಗೆ ತೀವ್ರ ಸ್ಪರ್ಧೆ

ನಾಸಿಕದಲ್ಲಿ ಸೇರುವ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಗೆ ಈ ಬಾರಿ ತೀವ್ರ ಸ್ಪರ್ಧೆಯಾಗುವುದೆಂದು ಹೇಳಲಾಗಿದೆ. ಉತ್ತರ ಪ್ರದೇಶದ ಕಾಂಗ್ರೆಸ್ ಪ್ರತಿನಿಧಿಗಳು ಬಾಬು ಪುರುಷೋತ್ತಮದಾಸ್ ಟಂಡನರವರ ಹೆಸರನ್ನು ಸೂಚಿಸುವರು ಇತರೇ ಎಲ್ಲ ಪ್ರಾಂತಗಳ ಪ್ರತಿನಿಧಿಗಳಿಗಿಂತಲೂ ಹೆಚ್ಚು ಸಂಖ್ಯೆಯುಳ್ಳವರಾಗಿದ್ದಾರೆ ಬೊಂಬಾಯಿ ಕಾಂಗ್ರೆಸ್ಸಿನವರು ಶಂಕರರಾವ್ ದೇವರ ಹೆಸರನ್ನು ಸೂಚಿಸುವರೆಂದೂ ಹೇಳಲಾಗಿದೆ. ಆಚಾರ್ಯ ಕೃಪಲಾನಿಯವರನ್ನೂ ಪುನಃ ಕಾಂಗ್ರೆಸ್ ಗದ್ದುಗೆಗೆ ಏರಿಸಬೇಕೆಂದು ಪ್ರಯತ್ನ ನಡೆದಿದೆ.

ಮಾರ್ಷಲ್ ಸ್ಟಾಲಿನ್ನರಿಗೆ ನೆಹರೂರವರ ಸಂದೇಶ

ರಷ್ಯದ ಮುಖ್ಯ ಮಂತ್ರಿ ಮಾರ್ಷಲ್ ಸ್ಟಾಲಿನ್ನರಿಗೆ ಒಂದು ಸಂದೇಶವನ್ನು ಪ್ರಧಾನಿ ನೆಹರೂರವರು ಬರೆದು ಭಾರತದ ರಾಯಭಾರಿ ಮೂಲಕ ರಷ್ಯದ ವಿದೇಶಾಂಗ ಸಚಿವರಾದ ಆಂಡ್ರಿಗ್ರೊಮಿಕೊರವರಿಗೆ ಕಳುಹಿಸಿದ್ದಾರೆ

ಮದ್ರಾಸಿಗೆ ಪಟೇಲರ ಭೇಟಿ

ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಂಗಡದಲ್ಲಿರುವ ಗುಂಪುಗಳ ಪರಸ್ಪರ ವ್ಯತ್ಯಾಸಗಳನ್ನು ಸರಿಪಡಿಸಲು ಶೀಘ್ರದಲ್ಲೇ ಅಲ್ಲಿಗೆ ಸರ್ದಾರ್ ಪಟೇಲರು ಭೇಟಿಯಾಗುವುದಾಗಿ ಗೊತ್ತಾಗಿದೆ

ಅಮೆರಿಕಾ ನೌಕೆ ಮುಳುಗಿತು

ಉತ್ತರ ಕೊರಿಯಕ್ಕೆ ಸೇರಿದ ಸಬ್ ಮೆರೀನೊಂದು ಅಮೆರಿಕದ ವಿಮಾನವಾಹಿಕೆಯೊಂದನ್ನು ಕೊರಿಯಾ ತೀರದಲ್ಲಿ ಮುಳುಗಿಸಿರುವುದಾಗಿ ವರದಿಯಾಗಿದೆ.

ಅಮೆರಿಕ ಪಡೆಯ ನಾಶ

ದಕ್ಷಿಣ ಕೊರಿಯದಲ್ಲಿ ಒಂದು ಕಡೆ ಒಂದು ಅಮೆರಿಕ ಪಡೆಯು ಉತ್ತರ ಕೊರಿಯದವರಿಂದ ಸುತ್ತುವರಿಯಲ್ಪಟ್ಟು ಪೂರ್ಣವಾಗಿ ನಾಶವಾಯಿತೆಂದು ಪೀಕಿಂಗ್ ರೇಡಿಯೊ ವರದಿಮಾಡಿದೆ

ಗುಜರಾತಿನಲ್ಲಿ ಅತಿ ವೃಷ್ಟಿ

ಗುಜರಾತಿನಲ್ಲಿ ಅನೇಕ ದಿನಗಳಿಂದ ಮಳೆಯಿಲ್ಲದೆ ಬಹಳ ತೊಂದರೆಯಾಗಿತ್ತು ಕಳೆದ ಮೂರು ದಿವಸಗಳಿಂದ ಅಲ್ಲಿ ಮೂವತ್ತು ಅಂಗುಲದಷ್ಟು ಮಳೆಯಾಗಿ ಕೃಷಿ ಬೆಳೆಗಳು ಕೊಚ್ಚಿಹೋಗಿವೆ ಮತ್ತು ಅನೇಕ ಮನೆಗಳು ಕುಸಿದು ಬಿದ್ದಿವೆ.

ಸಹಕಾರಿ ವ್ಯವಸಾಯ ಕೇಂದ್ರಗಳ ಯೋಜನೆ

ಸಂಸ್ಥಾನದ ೮ ಪ್ರದೇಶಗಳಲ್ಲಿ ಸಹಕಾರ ರೀತ್ಯಾ ವ್ಯವಸಾಯ ಕೇಂದ್ರಗಳನ್ನು ತೆಗೆಯುವ ಬಗ್ಗೆ ಆಗಿರುವ ಯೋಜನೆಗೆ ಸರ್ಕಾರದ ಅಂಗೀಕಾರವು ದೊರೆತಿದೆ ಇದಕ್ಕಾಗಿ ೧ ಲಕ್ಷ ರೂ ಮಂಜೂರಾಗಿದೆ

§ ನೆನ್ನೆ ಶ್ರೀರಂಗಪಟ್ಟಣದ ರಸ್ತೆಯಲ್ಲಿ ಬಿದ್ದಿದ್ದ ಮಹಮದ್ ಸೀರಾಜ್ ಎಂಬವನನ್ನು ರಾಜಧಾನಿಯ ಕ್ರೈಂ ಬ್ರಾಂಚ್ ಪೋಲೀಸರು ಕಂಡು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿ, ಅವನು ಅಲ್ಲಿ ಮೃತಪೊಂದಿದನೆಂದು ತಿಳಿದುಬಂದಿದೆ.

ಶಾಸನ ಸಭಾ ಅಧಿವೇಶನ ಅಕ್ಟೋಬರ್ ೩ರಲ್ಲಿ

ಮೈಸೂರು ೧೪

ಸಂಸ್ಥಾನದ ಶಾಸನ ಸಭಾಧಿವೇಶನವು ಬರುವ ಅಕ್ಟೋಬರ್ ೩ನೇ ತಾರೀಖಿನಿಂದ ಜಗನ್ಮೋಹನ ಬಂಗಲೆಯಲ್ಲಿ ನಡೆಯುವುದು

ವಿಶ್ವವಿದ್ಯಾಲಯದ ಅಸಿ ರಿಜಿಸ್ಟ್ರಾರ್

ಮೈಸೂರು ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರಾಗಿ ಶ್ರೀ ಎಲ್. ಕರಿಯಪ್ಪಗೌಡರನ್ನು ವರ್ಗ ಮಾಡಿದ್ದು ಕದ್ದಾಗಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಪರ್ಸನಲ್ ಅಸಿಸ್ಟೆಂಟಾದ ಶ್ರೀ ಎಂ. ನಾರಾಯಣಮೂರ್ತಿಯವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ

ದಳವಾಯ್ ಹೈಸ್ಕೂಲಿನ ಶಂಕುಸ್ಥಾಪನೆ

ರಾಜಧಾನಿಯ ದಳವಾಯಿ ಹೈಸ್ಕೂಲಿನ ಶಂಕು ಸ್ಥಾಪನಾ ಮಹೋತ್ಸವವು ನೆನ್ನೆ ಪ್ರಾತಃಕಾಲ ಶಾಲೆಯ ಉತ್ತರ ಭಾಗದಲ್ಲಿ ನೆರವೇರಿಸಲ್ಪಟ್ಟಿತು ರಾಜಧಾನಿಯ ಪ್ರಮುಖ ವರ್ತಕರಾದ ಶ್ರೀ ಕೆ ಪಿ ಮೊದಲಿಯಾರರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯಾದನಂತರ ಶಾಲೆಯ ಕಾರ್ಯದರ್ಶಿ ಶ್ರೀ ವೈ ಶ್ರೀನಿವಾಸಯ್ಯನವರು ವರದಿಯನ್ನು ಓದಿದರು. ಶಾಲಾ ಸಮಿತಿ ಅಧ್ಯಕ್ಷರಾದ ಶ್ರೀ ಸಿ ನರಸಿಂಹಯ್ಯನವರು ಶಾಲೆಯ ಪುರೋಭಿವೃದ್ಧಿಯನ್ನು ಕುರಿತು ತಿಳಿಸಿ, 'ಶ್ರೀ ಕೆ. ಪಿ. ಮೊದಲಿಯಾರರ ಔದಾರ್ಯವನ್ನು ಕೊಂಡಾಡಿದರು ನಂತರ ಅಧ್ಯಕ್ಷರು ಅಸ್ತಿಭಾರಶಿಲೆಯನ್ನು ಹಾಕಿದರು

ಬೆಂಗಳೂರಿಗೆ ಹರೇಕೃಷ್ಣ ಮೆಹತಾಬ್

ಕೇಂದ್ರ ಕೈಗಾರಿಕೆ ಮತ್ತು ವಾಣಿಜ್ಯ ಸಚಿವರಾದ ಶ್ರೀ ಹರೇ ಕೃಷ್ಣ ಮೆಹತಾಬ್ ರವರು ಬೆಂಗಳೂರಿಗೆ ಈ ತಿಂಗಳ ೩ನೇ ವಾರದಲ್ಲಿ ಆಗಮಿಸುವರೆಂದು ಗೊತ್ತಾಗಿದೆ

ಹತ್ತು ಲಕ್ಷ ಡಾಲರ್‌ನ ರತ್ನಗಂಬಳಿ ಅಮೆರಿಕಕ್ಕೆ ರಫ್ತು

ವರ್ಷಕ್ಕೆ ೧೦ ಲಕ್ಷ ಡಾಲರ್ ಬೆಲೆಯುಳ್ಳ ರತ್ನಗಂಬಳಿಯನ್ನು ಅಮೆರಿಕಕ್ಕೆ ರಫ್ತು ಮಾಡುವ ಗುರಿಯುಳ್ಳ ಯೋಜನೆಯನ್ನು ಮದ್ರಾಸು ಮತ್ತು ಮೈಸೂರು ಸರ್ಕಾರದವರು ತಯಾರಿಸುತ್ತಿರುವರು.

ಸಂಸ್ಥಾನದಲ್ಲಿ ಅಕ್ಕಿ ಬೆಲೆ ಹೆಚ್ಚಿಸಲಾಗುವುದು

ಸ್ವಂ. ವ. ವರದಿಗಾರ] ಬೆಂಗಳೂರು ೧೪

ಸಂಸ್ಥಾನದಲ್ಲಿ ಅಕ್ಕಿಯ ಬೆಲೆಯನ್ನು ಹೆಚ್ಚಿಸಲಾಗುವುದೆಂದೂ, ರೂಪಾಯಿಗೆ ದಪ್ಪಕ್ಕಿಯನ್ನು ೨। ಸೇರಿನಂತೆಯೂ ಸಣ್ಣಕ್ಕಿಯನ್ನು ೨।। ಸೇರಿನಂತೆಯೂ ಮಾರಲಾಗುವುದೆಂದೂ, ಒಂದೆರಡು ದಿನಗಳಲ್ಲಿ ಈ ಬಗ್ಗೆ ಆಜ್ಞೆಯಾಗುವುದೆಂದೂ ಕೇಳಲಾಗಿದೆ

ಪುಟ್ಟರಾಜ ಅರಸರ ಅರ್ಜಿ ಬಗ್ಗೆ ನ್ಯಾಯಾಧೀಶರ ಟೀಕೆ

ಸ್ಪೆಷಲ್ ನ್ಯಾಯಾಧೀಶ, ಶ್ರೀ ಪಿ. ಮೇದಪ್ಪನವರ ಮೇಲೆ ಶ್ರೀ ಆರ್. ಪುಟ್ಟರಾಜ ಅರಸರು ಕೊಟ್ಟಿದ್ದ ಮೊಕದ್ದಮೆಯನ್ನು ನೆನ್ನೆ ವಜಾ ಮಾಡುತ್ತಾ, ಜಿಲ್ಲಾ ಸ್ಪೆಷಲ್ ಜಡ್ಜ್ ಆದ ಶ್ರೀ ಬಿ. ಟಿ. ಕೇಶವಯ್ಯಂಗಾರರು ಈ ರೀತಿ ಟೀಕೆ ಮಾಡಿದ್ದಾರೆ. ಯಾವಾಗಲೋ ನಡೆದುಹೋದ ಹಳೆಯ ಘಟನೆಗಳ ಬಗ್ಗೆ ಈಗ ದೂರು ಕೊಡಲಾಗಿದೆ. ಆಪಾದನೆಗಳು ದುರುದ್ದೇಶಪೂರಿತವು. ಶ್ರೀ ಮೇದಪ್ಪನವರಿಗೂ ಅರ್ಜಿದಾರರಿಗೂ ಹಿಂದೆ, ಕೆಲವು ಅಧಿಕಾರಗಳ ಸಂಬಂಧವಿದ್ದು, ಅವರ ವಾಗ್ವಾದವು ಮೊಕದ್ದಮೆಯಲ್ಲಿ ಪರ್ಯವಸಾನವಾಯಿತು. ಸೇಡು ತೀರಿಸಿಕೊಳ್ಳುವ ಭಾವನೆಯಿಂದ ಆಪಾದನೆಗಳನ್ನು ಮಾಡಿರುವುದಾಗಿ ಭಾಸವಾಗುವುದು- ಎಂದು ನ್ಯಾಯಾಧೀಶರು ಅಭಿಪ್ರಾಯ ಪಟ್ಟಿದ್ದಾರೆ.

ಪುಟ್ಟರಾಜ ಅರಸರ ಸಂಬಳದ ಬಾಕಿ

ಶ್ರೀ ಪುಟ್ಟರಾಜ ಅರಸಿನವರು ಕೇಂದ್ರ ಸರ್ಕಾರದಲ್ಲಿ ತಮ್ಮ ನಿವೃತ್ತಿ ಬಗ್ಗೆ ಕೊಟ್ಟಿದ್ದ ಅಪೇಕ್ಷಿತ ಕಾಲದಲ್ಲಿ ಅವರನ್ನು ಕೆಲಸ ಮಾಡಿರುವುದಾಗಿ ಪರಿಗಣಿಸಲಾಗಿತ್ತೆ? ಆ ದಿನಗಳ ಸಂಬಳವನ್ನು ಅವರಿಗೆ ಮೈಸೂರು ಸರ್ಕಾರದವರು ಈಚೆಗೆ ಪಾವತಿ ಮಾಡಿರುವುದಾಗಿ ವರದಿಯಾಗಿದೆ

ಸಂಸ್ಥಾನದಲ್ಲಿ ಸಣ್ಣ ಕೈಗಾರಿಕೆಗಳ ಖಾನೇಷುಮಾರಿ

ಸಂಸ್ಥಾನಾದ್ಯಂತ ಸಣ್ಣ ಪುಟ್ಟ ಕೈಗಾರಿಕೆಗಳ ಖಾನೇಷುಮಾರಿಯನ್ನು ಇದೇ ೨೦ನೇ ತಾರೀಖಿನಿಂದ ೧೦ ದಿನಗಳವರೆಗೆ ತೆಗೆದುಕೊಳ್ಳಲಾಗುವುದು

§ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ದೇಹಸ್ಥಿತಿ ಉತ್ತಮವಾಗುತ್ತಿದೆಯೆಂದು ತಿಳಿದುಬಂದಿದೆ

○ ಈ ತಿಂಗಳು ೨೧ನೇ ತಾರೀಖು ಸಂಸ್ಥಾನದ ಅರಣ್ಯ ಸಮ್ಮೇಳನವು ಮಲ್ಲೇಶ್ವರದಲ್ಲಿ ನಡೆಯುವುದು ಶ್ರೀ ಆರ್. ಚನ್ನಿಗರಾಮಯ್ಯನವರು ಪ್ರಾರಂಭ ಭಾಷಣವನ್ನು ಮಾಡುವರು

○ ೧೯೫೦-೫೧ಕ್ಕೆ ಕೇಂದ್ರ ಸರ್ಕಾರದವರು ೧।। ಕೋಟಿ ರೂ ಗಳ ಗ್ರಾಂಟನ್ನು ಆಹಾರ ಧಾನ್ಯಕ್ಕಾಗಿ ಮೈಸೂರು ಸರ್ಕಾರಕ್ಕೆ ಕೊಟ್ಟಿರುತ್ತಾರೆ.

○ ಸರ್ಕಾರದ ಆದೇಶವನ್ನು [illegible] ಸಮಾಜವಾದಿ ಪಕ್ಷಕ್ಕೆ ಇಲ್ಲವೆಂದು ಅಶೋಕ ಮೆಹತಾರವರು ಹೇಳಿದ್ದಾರೆ

ಕನ್ನಂಬಾಡಿ ನೀರಿನ ಮಟ್ಟ

ಇಂದಿನ ಕೃಷ್ಣರಾಜ ಸಾಗರದಲ್ಲಿ ನೀರಿನ ಮಟ್ಟವು ೭೪-೮೦ ಅಡಿಯಿತ್ತು

ಬೊಂಬಾಯಿ ಹೈಕೋರ್ಟ್ ಆಜ್ಞೆಯಿಂದ ಅನೇಕ ಬಂದಿಗಳ ಬಿಡುಗಡೆ

ಬೊಂಬಾಯಿ ಹೈಕೋರ್ಟಿನವರು ಕಳೆದ 'ಎರಡು' ದಿವಸಗಳಲ್ಲಿ ಆ ಪ್ರಾಂತದಲ್ಲಿ ೨೭ ಜನ ಭಾರತೀಯ [illegible] ಪೈಕಿ ೬೬ ಜನರನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಿದ್ದಾರೆ ಇತರ ೧೩ ಜನರನ್ನು ಬಿಡಲು ಕೋರ್ಟಿನವರು ಸಮ್ಮತಿಸಲಿಲ್ಲ ಬಿಡುಗಡೆಯಾದವರ ಪೈಕಿ ಅನೇಕರು ಕಮ್ಯೂನಿಸ್ಟರು ಹಿಂದೂ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ|| ಸಾವರ್ಕರರು ಪೂನಾ ದಲ್ಲಿದ್ದು, [illegible] ರಾಜಕೀಯವನ್ನು [illegible] ಬಿಡುಗಡೆ ಮಾಡಬಹುದೆಂದು ಹೈಕೋರ್ಟಿನವರು ತಿಳಿಸಿದ್ದಾರೆ

ಬಾವೊದಯರ ಕೊಲೆಗಾಗಿ ಪಿತೂರಿಯ ಪತ್ತೆ

ಇಂಡೋಚೀಣಾದ ಅಧ್ಯಕ್ಷ ಬಾವೊದಯಿ, ವಿಯಟ್ನಾಮಿನ ಸಂಸ್ಥಾನದ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ಇವರನ್ನು ಕೊಲ್ಲಬೇಕೆಂದು ಮಾಡಿಕೊಂಡಿದ್ದ ಪಿತೂರಿಯನ್ನು ಪತ್ತೆ ಮಾಡಲಾಗಿದೆ ಕೊಲೆ ಮಾಡಲು ಸಿದ್ಧರಿದ್ದ ವ್ಹಿಯಟ್ ಮಿನ್ ಪಂಗಡದವರು ಒಂದು ಕಡೆ ಮಲಗಿ ನಿದ್ರಿಸುತ್ತಿದ್ದಾಗ ಅವರ ಮೇಲೆ ಪೋಲೀಸರು ಧಾಳಿ ನಡೆಸಿ ಅವರೆಲ್ಲರನ್ನೂ ದಸ್ತಗಿರಿ ಮಾಡಲಾಗಿದೆ.

ಮೈಸೂರು ಜಿಲ್ಲೆ ಚಿಲ್ಲರೆ ವ್ಯಾಪಾರಿಗಳಿಗೆ ಹೆಚ್ಚು ಬಟ್ಟೆ

ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳ ಬಟ್ಟೆಯ ಒಟ್ಟು ವ್ಯಾಪಾರಿಗಳು ತಮ್ಮ ಗಿರಾಕಿಗಳಿಗೆ ಕೊಡಬಹುದಾಗಿದ್ದ ೫೦೦ ಗಜ ಬಟ್ಟೆಯ ಪ್ರಮಾಣವನ್ನು ೧೫೦೦ ಗಜಗಳಿಗೆ ಹೆಚ್ಚಿಸಲಾಗಿದೆ

ಬೀದಿದೀಪವಿಲ್ಲದ ತೊಂದರೆ

ರಾಜಧಾನಿಯ ಶ್ರೀ ಸುಬ್ಬಯ್ಯ ಶೆಟ್ಟಿಯವರು ಕಿಂಡರ್‌ಗಾರ್ಟನ್ ನರ್ಸರಿ ಸ್ಕೂಲ್ ಬಳಿ ಇರುವ ಬೀದಿ ದೀಪ ಹೋಗಿ ಸುಮಾರು ೧೫-೨೦ ದಿವಸಗಳಾದುವು ಈ ಬಗ್ಗೆ ಸಂಬಂಧಪಟ್ಟವರಲ್ಲಿ ತಿಳಿಸಿದ್ದಾಯ್ತು. ಇದುವರೆವಿಗೂ ಯಾವ ಕ್ರಮವನ್ನೂ ಕೈಗೊಂಡಿಲ್ಲ ಇದರಿಂದ ರಾತ್ರಿ ಹೊತ್ತು ವಾಹನಗಳ ಅಪಘಾತಗಳಾಗುವ ಸಂಭವವೂ ಇರುತ್ತೆ. ಕೂಡಲೆ ಇತ್ತ [illegible] ಹಾಕಿಸುತ್ತಾರೆಂದು [illegible]

ಮನೆ ಬಾಡಿಗೆಗೆ ಇದೆ

ಕೊತ್ವಾಲ ರಾಮಯ್ಯನವರ ಬೀದಿಯ ೧೫೮ನೇ ನಂಬರ್ ಮನೆಯ ಹಿಂಭಾಗ [illegible], [illegible], ಇತರ ಅನುಕೂಲವಿರು ವ ಮನೆ ಬಾಡಿಗೆಗೆ ಇದೆ [illegible]

ಚಾಮುಂಡೇಶ್ವರಿ ಟಾಕೀಸ್

16-7-50 ರಿಂದ ದಿನವಹಿ 3 ಆಟಗಳು

ಎ. ವಿ. ಎಂ. ರವರ ತಮಿಳು ಚಿತ್ರ

ಡೆಮರ್ - ಲ್ಯಾಂಡ್

ಮುಖ್ಯ ಪಾತ್ರ - ಟಿ ಆರ್ ಮಹಾಲಿಂಗಂ, ಸಾರಂಗಪಾಣಿ, ಬೇಬಿ [illegible]

ಲಲಿತ-ಪದ್ಮಿನಿ ಮುಂತಾದವರು

ಪಾಕಿಸ್ತಾನ ಮತ್ತು ಅಫ್ಘನ್ ಗಡಿಯಲ್ಲಿ ತೀವ್ರ ಘರ್ಷಣೆ

ಪಾಕಿಸ್ತಾನಕ್ಕೆ ಸೇರಿದ ಬಲೂಚಿಸ್ತಾನದ ಗಡಿಯನ್ನು ಆಫ್ಘನ್ ಸೈನ್ಯಗಳು ದಾಟಿ ಬಂದು ರಕ್ಷಣಾ ದಳದ ಅಧಿಕಾರಿಯೊಬ್ಬನನ್ನು ಗುಂಡಿನಿಂದ ಕೊಂದು ಇಬ್ಬರನ್ನು ಗಾಯಗೊಳಿಸಿದುದಾಗಿಯೂ, ನಂತರ ಪಾಕಿಸ್ತಾನದವರಿಗೂ ಅವರಿಗೂ ಘರ್ಷಣೆಯಾಗಿ ೪ ಮಂದಿ ಅಫ್ಘನ್ನರು ಮೃತಪಟ್ಟು ೩ ಮಂದಿ ಸೆರೆಯಾದುದಾಗಿಯೂ ವರದಿಯಾಗಿದೆ ಪಾಕಿಸ್ತಾನವು ಅಫ್ಘಾನಿಸ್ತಾನಕ್ಕೆ ತೀವ್ರ ಪ್ರತಿಭಟನೆಯನ್ನು ಕಳುಹಿಸಿ ಪರಿಹಾರವನ್ನು ಕೇಳಿದೆ

ಮಳೆಯಿಂದ ಗಣಿ ಗೋಡೆ ಕುಸಿದು ೭ ಜನರ ಮರಣ

ವಿಂಧ್ಯ ಪ್ರದೇಶದ ಪನ್ನದ ಗಣಿಯೊಂದರಲ್ಲಿ ಕಾರ್ಮಿಕರು ನೆನ್ನೆ ಅಗೆಯುತ್ತಿದ್ದಾಗ ಧಾರಾಕಾರ ಮಳೆಯು ಬಂದು ಗಣಿ ಗೋಡೆ ಕುಸಿದು ಬಿದ್ದು ೭ ಮಂದಿ ಕೆಲಸಗಾರರು ಮೃತಪಟ್ಟರು ೫ ಮಂದಿಗೆ ಗಾಯಗಳಾಗಿವೆ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಯಿತು

ವಿದೇಶಗಳಿಗೆ ಮದ್ರಾಸಿನ ಹಪ್ಪಳದ ರಫ್ತು

ತಿರುನೇಲ್ವೇಲಿಯಲ್ಲಿ ಮೊನ್ನೆ ನಡೆದ ಮುನಿಸಿಪಲ್ ಪ್ರದರ್ಶನದಲ್ಲಿ ಮದರಾಸಿನ ಆಹಾರ ಮಂತ್ರಿಗಳು ಭಾಷಣ ಮಾಡಿ ಮದರಾಸಿನ ಹಪ್ಪಳದ ಪ್ರಾಶಸ್ತ್ಯವನ್ನು ಹೊಗಳಿ, ಅದು ಅಲ್ಲಿಂದ ವಿದೇಶಗಳಿಗೂ ರಫ್ತು ಮಾಡಲ್ಪಟ್ಟು ವಿಶೇಷವಾಗಿ ಬಳಸಲ್ಪಡುತ್ತಿದೆಯೆಂದು ತಿಳಿಸಿದರು

ಪೂರ್ವ ಯೂರೋಪಿನಲ್ಲಿ ರಷ್ಯದ ಹೊಸ ತಂತ್ರ

ಪಶ್ಚಿಮ ರಾಷ್ಟ್ರಗಳ ಗಮನವು ಕೊರಿಯಾ ಕಡೆಗೆ ಇರುವಾಗಲೇ ಪೂರ್ವ ಯೂರೋಪಿನಲ್ಲಿ ರಷ್ಯವು ಸೈನ್ಯಗಳನ್ನು ಶೇಖರಿಸುತ್ತಿದೆ ಈಗಾಗಲೇ ೩೫ ಡಿವಿಜನ್‌ಗಳನ್ನು ಪೂರ್ವ ಗಡಿಗಳಿಗೆ ಕಳುಹಿಸಲಾಗಿದೆ

ಪ್ರಜಾರಾಜ್ಯ ಲಾವಣಿ ಕಾಣಿಕೆ

ರಾಜಧಾನಿಯ ಲಾವಣಿ ವಿದ್ವಾನ್ ಶ್ರೀ ವಿಷಕಂಠ ರಾಯರು 'ಪ್ರಜಾರಾಜ್ಯ ಲಾವಣಿ ಕಾಣಿಕೆ" ಎಂಬ ಕರದರ್ಪಣವನ್ನು ಮುದ್ರಿಸಿ ಪ್ರಕಟಿಸಿರುತ್ತಾರೆ ಗ್ರಂಥದಲ್ಲಿ ಪ್ರಜಾ ರಾಜ್ಯದ ಸ್ಥಾಪನೆ ಬಗ್ಗೆ ಲಾವಣಿಗಳನ್ನು ಬರೆಯಲಾಗಿದೆ ಅನೇಕ ಮುಖಂಡರ ಚಿತ್ರಗಳನ್ನು ಅದರಲ್ಲಿ ಕೊಡಲಾಗಿದೆ ಮುಖ ಪತ್ರದಲ್ಲಿ ದಿವಂಗತ ಪೈಲ್ವಾನ್ ಪಾಪಣ್ಣನವರ ಚಿತ್ರವು ಇದೆ ಇದರ ಬೆಲೆ ೪ ಆಣೆ ಪ್ರಜಾರಾಜ್ಯ ಗಳಿಸಿದವರು ಮತ್ತು ಸಾರ್ವಜನಿಕರು ಅವಶ್ಯಕವಾಗಿ ಓದಬೇಕಾದ ಗ್ರಂಥವಿದು

ಗಣೇಶಾ ಟಾಕೀಸ್

14-7-50 ರಿಂದ ಪ್ರತಿದಿನ 3 ಆಟಗಳು

ರಂಜಾನ್ ಸ್ಪೆಷಲ್ ಪ್ರೋಗ್ರಾಂ

ಬಡೀ ಬಹೆನ್

(ಹಿಂದಿ)

ಪಾತ್ರ ಸುರಯ್ಯಾ, ಗುಲಾಬ್, ಗೀತಾ ಬಾಲಿ, ರೆಹಮಾನ್, ಉಲ್ಹಾಸ್

ಷರತ್ತಿನ ಮೇಲೆ ಸಾವರ್ಕರರ ಬಿಡುಗಡೆ

ಬೊಂಬಾಯಿ ಸರ್ಕಾರದವರು ತಮ್ಮ ಮೇಲೆ ವಿಧಿಸಿದ್ದ ಷರತ್ತುಗಳನ್ನು ಅಂಗೀಕರಿಸಿ ಹಿಂದೂ ಮಹಾಸಭಾ ನಾಯಕರಾದ ಶ್ರೀ ವಿ ಡಿ ಸಾವರ್ಕರರು ಒಂದು ವರ್ಷ ಕಾಲ, ಇಲ್ಲವೆ ಮುಂದಿನ ಸಾರ್ವತ್ರಿಕ ಚುನಾವಣೆಗಳು ಅಥವಾ ಮೂರನೇ ಮಹಾ ಯುದ್ಧ - ಇವುಗಳ ಪೈಕಿ ಯಾವುದು ಮೊದಲು ಸಂಭವಿಸುವುದೋ ಅಲ್ಲಿಯವರೆಗೆ ತಾವು ರಾಜಕೀಯದಲ್ಲಿ ಭಾಗವಹಿಸುವುದಿಲ್ಲವೆಂದು ಬರೆದು ಕೊಟ್ಟಿರುವರೆಂದು ವರದಿಯಾಗಿದೆ ಅದರ ಮೇಲೆ ನೆನ್ನೆ ದಿನ ಅವರನ್ನು ಬಿಡುಗಡೆ ಮಾಡಲಾಯಿತು ಅವರು ಬೊಂಬಾಯಿನಲ್ಲೇ ಇರುವರೆಂದು ಹೇಳಲಾಗಿದೆ

ಕನ್ನಡ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ಹರಿಜನ

ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿದ್ವತ್ ಪರೀಕ್ಷೆಯಲ್ಲಿ [illegible] ಸರ್ಕಾರಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾದ ಶ್ರೀ ನಂಜಯ್ಯನವರು ಉತ್ತೀರ್ಣರಾಗಿದ್ದಾರೆ ಹರಿಜನ ಪಂಗಡದವರಲ್ಲಿ ಇವರು ಮೊದಲನೆಯವರು.

ವನ ಮಹೋತ್ಸವ

ರಾಜಧಾನಿಯ ಸೆಂಟ್ ಫಿಲೊಮಿನಾ ಕಾಲೇಜಿನ "ಅಧಿಕ ಆಹಾರ ಉತ್ಪತ್ತಿ ಸಂಘದ' ಆಶ್ರಯದಲ್ಲಿ ಕಳೆದ ಶನಿವಾರ ಕಾಲೇಜಿನ ಆವರಣದಲ್ಲಿ ನಡೆದ ವನ ಮಹೋತ್ಸವದ ಸಂಬಂಧವಾಗಿ ಪೌರಸಭಾ ಕಮಿಷನರ್ ಶ್ರೀ ಸಿ ನರಸಿಂಹ ಮೂರ್ತಿಯವರು ಒಂದು ಗೋಲ್ಡ್ ಮೋಹರ್ ಗಿಡವನ್ನು ನೆಟ್ಟರು ಕಾಲೇಜಿನ ಲೆಕ್ಚರರೂ, ಪ್ರಿನ್ಸಿಪಾಲರೂ, ಇತರರೂ ನೆರಳು ಕೊಡುವ ವೃಕ್ಷಗಳನ್ನೂ, ನಿಂಬೆ ಹಣ್ಣೇ ಮುಂತಾದ ಫಲ ಬಿಡುವ ಸಸಿಗಳನ್ನೂ ನೆಟ್ಟರು

ರಘುಲಾಲ್ & ಕೋ.

ಔಷಧ ವ್ಯಾಪಾರಿಗಳು.

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 [illegible] ರಸ್ತೆ, ಬೆಂಗಳೂರು.

ಬಂಗಲೆ ಖರೀದಿಗೆ

ಅಥವಾ

ಬಾಡಿಗೆಗೆ ದೊರೆಯುತ್ತದೆ

ಮೈಸೂರು ವಾಣೀವಿಲಾಸ ಮೊಹಲ್ಲಾ, [illegible], ಹಳ್ಳಿ ಮತ್ತು ಮೋಟಾರು ಗ್ಯಾರೇಜ್ ಉಳ್ಳ, ಪೂರ್ತಿ ಹೊಸ ಬಂಗಲೆ ಕೊಂಡುಕೊಳ್ಳುವವರಿಗೆ ಕೂಡಲೇ ಸ್ವಾಧೀನ ಸಹ ಕೊಡಲಾಗುವುದು ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಎಚ್. ಸುಬ್ಬರಾವ್,

569. ದಿವಾನ್ಸ್ ರೋಡ್, ಮೈಸೂರು

ಪ್ರಭುದೇವಾ ಟಾಕೀಸ್

14—7—50ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ನಳ ದಮಯಂತಿ

(ತೆಲುಗು)

ಮುಖ್ಯ ಪಾತ್ರ - ಶ್ರೀರಂಜನಿ, ಮಾಧವ ಪೆದ್ದಿ, ಅಡ್ಡಂಕಿ ಮುಂತಾದವರು

- ಮುಂದಿನ ಬಿಡುಗಡೆ -

• ಭಕ್ತ ಪುಂಡಲೀಕ • (ಹಿಂದಿ)

ರಣಜಿತ್ * 14-7-50 ರಿಂದ ಪ್ರತಿ ದಿನ 3 ಆಟಗಳು

ರಂಜಾನ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ

ಸರ್‌ತಾಜ್ (ಹಿಂದಿ) SARTAJ

ಮೋತೀಲಾಲ್, ಮನೋರಮಾ, [illegible]

ಬೆಳಗಿನ ಪ್ರದರ್ಶನ 14-7-50 ರಿಂದ 4 ದಿನಗಳು ಮಾತ್ರ

* ಬನ್ಸರಿ * - [illegible] -

808

808 ರಾಜಾ

ಬಾರು ಸಾಬೂನು

ಬಹಳ [illegible]

ಮತ್ತು [illegible] ಕೆಲಸಗಳಿಗೂ

[illegible]

[illegible] ಸೋಪ್

[illegible], ಮೈಸೂರು.

Edited, printed and published by A K Nagarajan, at Sadhvi Press, D Subbiah Road, Mysore

ಸಾಧ್ವಿ
ಸಂಪುಟ ೪] ಶನಿವಾರ ೧೫-೭-೫೦ [ಸಂಚಿಕೆ ೩೩೧

ನೆಹರೂ ಮನವಿಗೆ ಪುರಸ್ಕಾರವಿಲ್ಲವೇ?

ಮೈಸೂರು ಜಿಲ್ಲೆಯಲ್ಲಿ ಗೃಹ ಸಚಿವರ ಪ್ರವಾಸ

ಮೈಸೂರು ೧೫

[illegible]

ನಗರಾಭಿವೃದ್ಧಿ ಸಮಿತಿಗೆ ಪ್ರತ್ಯೇಕ ಅಧ್ಯಕ್ಷರಿರಬೇಕು

ಮೈಸೂರು ಪೌರಸಭೆಯ ನಿರ್ಣಯಕ್ಕೆ ಸರ್ಕಾರದ ಉತ್ತರ

[illegible]

ಅಣುಬಾಂಬು ಹಾಕಿದರೆ ತೃತೀಯ ಯುದ್ಧ ಕಟ್ಟಿಟ್ಟದ್ದು

[illegible]

ವಿಶ್ವೇಶ್ವರಯ್ಯ ನಾಲೆಗೆ ನೀರು

[illegible]

ರಾಜೇಶ್ವರಿ ಸನ್ನಿಧಿಯಲ್ಲಿ ಸೀರೆ

[illegible]

ವಿದ್ಯುದ್ಯೋಜನೆಗಳಿಗೆ ಕೇಂದ್ರದಿಂದ ೧ ಕೋಟಿರೂ.

[illegible]

ತೃತೀಯ ಮಹಾಯುದ್ಧದ ಬಗ್ಗೆ ಅರ್ಜೆಂಟೈನಾ ಅಧ್ಯಕ್ಷರು

[illegible]

ಕೊರಿಯಾಕ್ಕೆ ಇತರ ರಾಷ್ಟ್ರ ಸೇನೆಗಳಿಗಾಗಿ ಟ್ರಿಗ್ವಿಲೀ ಕರೆ

[illegible]

ಕನ್ನಂಬಾಡಿ ನೀರಿನ ಮಟ್ಟ

[illegible]

ನೆಹರೂ ಶಾಂತಿ ಪ್ರಯತ್ನಕ್ಕೆ ಜಯವಾಗದೇ?

[illegible]

ಕಾಶ್ಮೀರದಲ್ಲಿ ಭಾರಿ ವಿಮಾನ ದಾಳಿಗಳ ರದ್ದು

[illegible]

ಪ್ಯಾರಿಸ್ನಲ್ಲಿ ನೆಹರು ಮನವಿ

[illegible]

ದ. ಕೊರಿಯ ಶಾಸನ ಸಭಾ ಸದಸ್ಯರ ಮೇಲೆ ಗುಂಡು

[illegible]

ಮೈಸೂರು ಕಾರ್ಮಿಕ ಅಧಿಕಾರಿಗೆ ಅಮೆರಿಕದ ವಿದ್ಯಾರ್ಥಿ ವೇತನ

[illegible]

ಶಾಸನ ಸಭಾ ಸದಸ್ಯರಿಗೆ ಸರ್ಕಾರಿ ಪ್ರಕಟಣೆಗಳು

[illegible]

ಚೀಣಾ ಕಮ್ಯೂನಿಸ್ಟರಿಂದ ದ್ವೀಪಗಳ ಆಕ್ರಮಣ

ಹಾಂಗ್ಕಾಂಗಿನ ಪಶ್ಚಿಮ ಭಾಗದಲ್ಲಿರುವ ೮೦ ದ್ವೀಪಗಳನ್ನು ಚೀಣಾದ ಕಮ್ಯೂನಿಸ್ಟರು ಆಕ್ರಮಿಸಿರುವುದಾಗಿ ವರದಿಯಾಗಿದೆ. ಇವು ಹಾಂಗ್ಕಾಂಗ್ ನಗರಕ್ಕೆ ಪ್ರಾಂತದಲ್ಲಿವೆ. ಅಲ್ಲಿನ ರಕ್ಷಣಾ ಸೈನಿಕರಿಲ್ಲ ಆತಂಕ ಸಾಧಿಸಲಾಗಿದೆ

೧೨೦೦ ಕೊರಿಯಾ ಕಮ್ಯೂನಿಸ್ಟರಿಗೆ ಗಲ್ಲು

ಮುಂಜಾಗ್ರತೆ ಕ್ರಮದ ಅಂಗವಾಗಿ ೧೨೦೦ ದಕ್ಷಿಣ ಕೊರಿಯಾ ಕಮ್ಯೂನಿಸ್ಟರನ್ನು ಗುಂಡು ಹೊಡೆದು ಕೊಲ್ಲಲಾಗಿದೆಯೆಂದು ದ ಕೊರಿಯಾ ಪೊಲೀಸ್ ಮುಖ್ಯಾಧಿಕಾರಿಯು ತಿಳಿಸಿರುತ್ತಾರೆ

ವಿಮಾನಗಳನ್ನು ತಂಪಾಗಿಡಲು ಯಂತ್ರ

ಬೇಸಿಗೆ ಕಾಲದಲ್ಲಿ ಪ್ರಯಾಣಿಕರ ವಿಮಾನಗಳನ್ನು ತಂಪಾಗಿಡುವ ಸಲುವಾಗಿ ೩೭ ಸಾವಿರ ರೂ ಖರ್ಚಿನಿಂದ ಹವಾಯಂತ್ರಗಳನ್ನು ಭಾರತ ಸರ್ಕಾರದವರು ಅಳವಡಿಸಿ ಮಾಡಿಕೊಂಡಿದ್ದಾರೆ ಇವನ್ನು ದೆಹಲಿಯ ಪಾಲಂ ಮತ್ತು ವಿಲಿಂಗ್ಡನ್ ನಿಲ್ದಾಣಗಳಲ್ಲಿಡಲಾಗುವುದು

ವಿವಿಧ ರೇಷ್ಮೆ ಸೀರೆಗಳಿಗೆ
9 ಗಜದ ಪೂನಾ ನಾಗಪುರ ಸೀರೆಗಳಿಗೆ
M. V. ಭೋಜಯ್ಯ ಬಿ ಎ
ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

ಮನೆ ಬಿಕರಿಗಿದೆ

ಮೈಸೂರು ಚಾಮರಾಜ ಮೊಹಲ್ಲಾ ಕೋರ್ಟ್ ಬೀದಿಯಲ್ಲಿರುವ ೪೬ನೇ ನಂಬರಿನ ಮನೆಯು ಬಿಕರಿಗೆ ಇದೆ, ನಲ್ಲಿ, ಲೈಟ್, ಫ್ಲಷ್‌ಗಳಿಂದ ಕೂಡಿದ ವಿಶಾಲವಾದ ಹಾರಿಸಿ ಮನೆ ವಿವರಗಳಿಗೆ ಕೆಳಗಿನ ವಿಳಾಸದಲ್ಲಿ ಬೆಳಗ್ಗೆ ೭ ರಿಂದ ೯ ಘಂಟೆಯೊಳಗೆ ವಿಚಾರಿಸಿ —

1167, ಲಕ್ಷ್ಮೀಪತಿಯವರ ಬೀದಿ,
ಚಾಮರಾಜ ಪುರಂ, ಮೈಸೂರು

ವೈಜಯಂತಿಮಾಲಾ ಬಗ್ಗೆ ಹೈಕೋರ್ಟಿನ ಹೊಸ ಅಜ್ಞೆ

ಬಹುಮಾನ ವಿತರಣೆ ಸಮಾರಂಭಗಳಲ್ಲಿ ನೃತ್ಯ ಮಾಡುವ ಸಮಯದಲ್ಲಿ ಮೈನರ್ ವೈಜಯಂತಿ ಮಾಲಾಳಿಗೆ ಕಡಿಮೆ ಸಂಭಾವನೆಯಾಗುವಂತಹ ಆಹ್ವಾನಗಳನ್ನು ಒಪ್ಪಿಕೊಳ್ಳಬಾರದೆಂದು ಆಕೆಯ ಗಾರ್ಡಿಯನ್ನರಿಗೆ ಹೈಕೋರ್ಟಿನವರು ಸೂಚನೆಯಿತ್ತಿದ್ದಾರೆ ಆಕೆಯು ಪ್ರತಿ ನೃತ್ಯಕ್ಕೂ ನಗರದಲ್ಲಿ ೧೫೦೦ ಹೊರಗಡೆ ೨೦೦೦ ರೂ ತೆಗೆದುಕೊಳ್ಳಬೇಕೆಂದು ಆಜ್ಞೆಯಾಗಿದೆ

ಚಾಮರಾಜ ನಾಯುಡರ ಮೇಲೆ ಕಂಟೆಂಪ್ಟ್ ಅಪಾದನೆ

ತಮಿಳು ನಾಡು ಕಾಂಗ್ರೆಸ್ಸಿನ ಚುನಾವಣೆ ನಡೆಸಕೂಡದೆಂದು ಮದರಾಸಿನ ಕೋರ್ಟಿನವರು ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಅತಿಕ್ರಮಿಸಿ ಚುನಾವಣೆ ನಡೆಸಿದರೆಂದು ಶ್ರೀ ಏಳುಮಲೈ ಎಂಬುವರ ಪರವಾಗಿ ಮದರಾಸಿನ ಎರಡನೇ ಸಿವಿಲ್ ಕೋರ್ಟಿನಲ್ಲಿ ಶ್ರೀ ಕಾಮರಾಜನಾಯುಡರ ಮೇಲೆ ಕಂಟೆಂಪ್ಟ್ ಅರ್ಜಿಯನ್ನು ದಾಖಲ್ ಮಾಡಲಾಗಿತ್ತು ಸದರಿ ಅರ್ಜಿಯನ್ನು ಅಂಗೀಕರಿಸಲಾಗಿದೆ

ಅಮೇರಿಕಾ ಸೈನ್ಯಕ್ಕೆ ಪಾಕಿಸ್ತಾನ ಸೈನ್ಯದ ಸಹಾಯ

ಕೊರಿಯಾದಲ್ಲಿ ಕಾದಾಡುತ್ತಿರುವ ಅಮೇರಿಕಾ ಸೈನ್ಯಗಳ ಸಹಾಯಕ್ಕಾಗಿ ಪಾಕಿಸ್ತಾನದ ಭೂ ಸೈನ್ಯಗಳನ್ನು ಕಳುಹಿಸುವುದಾಗಿ ಗೊತ್ತಾಗಿದೆ

ಪ್ರಭಾ 14-7-50ರಿಂದ ಅಮೋಘ 2ನೇ ವಾರ
ರಂಜಾನ್ ಹಬ್ಬಕ್ಕಾಗಿ ಸ್ಪೆಷಲ್ ಪ್ರೋಗ್ರಾಂ
ದಿನವಹಿ 3 ಆಟಗಳು
ರಂಜಿತ್ ರವರ **- ನಜಾರೆ -**
ನೋಡಿದವರೇ ಪುನಃ ನೋಡುತ್ತಿರುವ, ಹಾಸ್ಯ, ಸಂಗೀತ ಮತ್ತು ನೃತ್ಯಗಳನ್ನೊಳಗೊಂಡ ಹಿಂದೀ ಚಿತ್ರ
ಪಾತ್ರ — ಶಶಿಕಲಾ, ಅಶೋಕ್, ಆಗಾ

ಅಣು ಬಾಂಬು ಹಾಕದಂತೆ ಟ್ರೂಮನ್ನರಿಗೆ ನೆಹರೂ ಪತ್ರ

ಕೊರಿಯಾ ಯುದ್ಧದಲ್ಲಿ ಅಮೇರಿಕವು ಅಣು ಬಾಂಬುಗಳನ್ನು ಪ್ರಯೋಗಿಸಿದರೆ ಇಡೀ ಏಷ್ಯದಲ್ಲಿ ಅದರ ಬಗ್ಗೆ ತೀವ್ರ ಪ್ರತಿಕ್ರಿಯೆಯುಂಟಾಗಿ ಅನೇಕ ಅಂತರರಾಷ್ಟ್ರೀಯ ಜಟಿಲ ಸಮಸ್ಯೆಗಳು ಉದ್ಭವಿಸುವುದಾಗಿ ಪ್ರಧಾನಿ ನೆಹರೂರವರು ಅಧ್ಯಕ್ಷ ಟ್ರೂಮನ್ನರಿಗೆ ಪತ್ರ ಬರೆದು ತಿಳಿಸಿದ್ದಾರೆ ವಿಶ್ವ ಸಂಸ್ಥೆಯ ಪರವಾಗಿ ಅಮೇರಿಕವು ಕೊರಿಯಾ ಯುದ್ಧ ನಡೆಸುತ್ತಿರುವುದಾಗಿ ಹೇಳುತ್ತಿರುವುದರಿಂದ ಭದ್ರತಾ ಸಮಿತಿಯ ಅಭಿಪ್ರಾಯವನ್ನು ಈ ವಿಷಯದಲ್ಲಿ ತಿಳಿದುಕೊಳ್ಳದೆ ಅಣುಬಾಂಬು ಪ್ರಯೋಗದ ಬಗ್ಗೆ ನಿರ್ಧಾರಕ್ಕೆ ಬರುವುದು ಉಚಿತವಲ್ಲವೆಂದು ನೆಹರೂರವರು ಹೇಳಿದ್ದಾರೆ ಸ್ಟಾಲಿನ್ನರಿಗೆ ಬರೆದಂತೆಯೇ ಅಮೇರಿಕದ ವಿದೇಶಾಂಗ ಸಚಿವರಾದ ಮಿ॥ ಏಚಿಸನ್ನರಿಗೂ ಅವರು ಪತ್ರ ಬರೆದಿರುತ್ತಾರೆ

ಟಿಬೆಟ್ಟಿನೊಳಗೆ ಕಮ್ಯೂನಿಸ್ಟ ಸೇನೆ ನುಗ್ಗಿತೇ?

ಟಿಬೆಟ್ ಪ್ರಾಂತದೊಳಗೆ ೨೦ ಸಾವಿರ ಕಮ್ಯೂನಿಸ್ಟ್ ಚೀಣದ ಸೇನೆಗಳು ನುಗ್ಗಿರುವುದಾಗಿ ಸಾರ್ವ್ಯಾಸಾ ಪತ್ರಿಕೆಯೊಂದು ವರದಿ ಮಾಡಿದೆ

ಚಾಮುಂಡೇಶ್ವರಿ ಟಾಕೀಸ್
15-7-50 ರಿಂದ ದಿನವಹಿ 3 ಆಟಗಳು
ಎ ವಿ ಎಂ ರವರ ತಮಿಳು ಚಿತ್ರ
ವೇದಾಳ - ಉಲಗಮ್ ? [ಡೆರ್ರ್ - ಲ್ಯಾಂಡ್]
ಮುಖ್ಯಪಾತ್ರ, ಟಿ ಆರ್ ಮಹಾಲಿಂಗಂ, ಶಾರಂಗಪಾಣಿ ಡಿ ಬಿ ಕಮಲ, ಲಲಿತ–ಪದ್ಮಿನಿ ಮುಂತಾದವರು

ಸರಕುಗಳು ತುಂಬಿದ ಹಡಗು ಅಗ್ನಿಗೆ ಆಹುತಿ

ಹೆಲಿಗೋನಿಯಾ ಟೈಲ್ ಎಂಬ ೯ ಸಾವಿರ ಟನ್ ತೂಕದ ಹಡಗು ೨ ಸಾವಿರ ಬೇಲುಗಳ ಹತ್ತಿ ಮತ್ತು ೧ ಸಾವಿರ ಪೀಪಾಯಿಗಳ ಬಿಟುಮೆನ್ ಅನ್ನು ತುಂಬಿಕೊಂಡು ಕರಾಚಿಯಿಂದ ಮೊನ್ನೆ ಬೊಂಬಾಯಿ ರೇವಿಗೆ ತಲುಪಿದಾಗ ಆಕಸ್ಮಿಕ ಬೆಂಕಿಯುಂಟಾಗಿ ಹಡಗು ಅಗ್ನಿಗೆ ಆಹುತಿಯಾಯಿತು ೨ ಗಂಟೆ ಕಾಲ ಅಗ್ನಿ ಶಮನದ ಕಾರ್ಯ ನಡೆದು ಬೆಂಕಿಯನ್ನು ಹತೋಟಿಗೆ ತರಲಾಯಿತು

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟಿಫಿಕೇಷನ್

ತಾರೀಖು 14-7-1950

ಮೈಸೂರು ಸಿಟಿಯಲ್ಲಿ ಈ ಕೆಳಗೆ ನಮೂದಿಸಿರುವ ಎಲ್ಲಾ ರೇಷನ್ ಡಿಪೋಗಳು ಇದೇ ಮಾಹೆ 17ನೇ ತಾರೀಖು ಸೋಮವಾರ ರಂಜಾನ್ ಹಬ್ಬದ ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ ಆದರೆ 16-7-1950ನೇ ಭಾನುವಾರ ಬೆಳಿಗ್ಗೆ ಮಾತ್ರ ರೇಷನ್ ಕಾರ್ಡುದಾರರ ಸೌಕರ್ಯದ ಬಗ್ಗೆ ತೆಗೆಯಲ್ಪಡುತ್ತವೆ

ಲಷ್ಕರ್ ಮೊಹಲ್ಲಾ ಡಿಪೋಗಳು ನಂಬರು 3, 7, 8, 11, 14, 17, 19

ಮಂಡಿ ಮೊಹಲ್ಲಾ ಡಿಪೋಗಳು – ನಂಬರು 2, 3, 4, 5, 8, 10, 11, 16, 17 ಕ್ರಸೆಂಟ್ ಸ್ಟೋರ್ಸ್ ಮತ್ತು ಮುಸ್ಲಿಂ ಕೋ ಆಪರೇಟಿವ್ ಸೊಸೈಟಿ

(ಸಹಿ) ಡಿ. ಜೆ ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

Edited, printed and published by A R Nagarajan, at Sadhvi Press, D Subbiah Road, Mysore.

ರಾಜಕಮಲ್, ಮೈಸೂರು

ರಂಜಾನ್ ಹಬ್ಬದ ಪ್ರಯುಕ್ತ
ಸ್ಪೆಷಲ್ ಪ್ರೋಗ್ರಾಂ
14-7-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ
• ಸಮಾಧಿ •
— ಭೂಮಿಕೆ —
ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್, ಮುಬಾರಕ್

14-7-50ರಿಂದ ಬೆಳಗಿನ ಪ್ರದರ್ಶನ 4 ದಿನಗಳು ಮಾತ್ರ
ಮಾ ಬಿಕ್ ಚಿತ್ರ
(ಹಿಂದಿ)
ಭೂಮಿಕೆ - ಶೇಖರ್, ಸ್ವರ್ಣಲತಾ

ಪ್ರಭುದೇವಾ ಟಾಕೀಸ್
14—7—50ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು
ನಳ ದಮಯಂತಿ
(ತೆಲುಗು)
ಮುಖ್ಯ ಪಾತ್ರ -ಶ್ರೀರಂಜನಿ, ಮಾಧವ ಪೆದ್ದಿ, ಅದ್ದಂಕಿ ಮುಂತಾದವರು
- ಮುಂದಿನ ಆಕರ್ಷಣೆ -
• ಭಕ್ತ ಪುಂಡಲೀಕ • (ಹಿಂದಿ)

Please Note:-
This picture is certified as suitable for public exhibition throughout India before Adults
SRI GAYATHRI TALKIES
From 15-7-50 . Daily 3 Shows
The first Great Story of the Dark Continent's forbidden Diamond Country
ROPE OF SAND
(A PARAMOUNT RELEASE)
With —Burt Lancaster, Corinne Calvet

ಪುಟ ಸಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೫] ಭಾನುವಾರ ೧೬-೭-೫೦ [ಸಂಚಿಕೆ ೩೮

೩ ದಿನದಲ್ಲಿ ಅಮೆರಿಕಾ ಕೊರಿಯದಿಂದ ವಾಪ್ಸು

ರಷ್ಯದ ಅಧಿಕಾರಿಗಳಿಂದ ನೆಹ್ರೂ ಪತ್ರದ ಪರಿಶೀಲನೆ

ರಷ್ಯದ ಮುಖ್ಯ ಮಂತ್ರಿ ಮಾರ್ಷಲ್ ಸ್ಟಾಲಿನ್ನರಿಗೆ ಪ್ರಧಾನಿ ನೆಹರೂರವರು ಬರೆದ ವೈಯಕ್ತಿಕ ಪತ್ರವನ್ನು ಉನ್ನತ ರಷ್ಯದ ಅಧಿಕಾರಿಗಳು ಪರಿಶೀಲಿಸುತ್ತಿರುವುದಾಗಿ ಹೇಳಲಾಗಿದೆ. ನೆಹರೂರವರ ಪ್ರಯತ್ನವನ್ನು ರಷ್ಯದಲ್ಲಿ ಪ್ರಶಂಸೆ ಮಾಡಲಾಗುತ್ತಿದ್ದರೂ ಸಹ ಕೊರಿಯಾ ಬಗ್ಗೆ ರಷ್ಯ-ಅಮೆರಿಕಾಗಳಿಗೆ ಇರುವ ಭಿನ್ನತೆಯನ್ನು ಸರಿಪಡಿಸಲು ಅಸಾಧ್ಯವೆಂದೂ ಅದ್ದರಿಂದ ಸಂಧಾನಕ್ಕೆ ಅವಕಾಶವಾಗುವುದಿಲ್ಲವೆಂದೂ ಹೇಳಲಾಗಿದೆ

ಹೆಂಗಸರು ಕಾರ್ಖಾನೆಗೆ, ಗಂಡಸರು ಯುದ್ಧಕ್ಕೆ

ಉತ್ತರ ಕೊರಿಯದಲ್ಲಿ ಹೆಂಗಸರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವುದರಿಂದಲೂ, ಗಂಡಸರನ್ನು ಯುದ್ಧರಂಗಕ್ಕೆ ಕಳುಹಿಸಲಾಗುತ್ತಿದೆಯೆಂದೂ ಹೇಳಲಾಗಿದೆ ೫॥ ಲಕ್ಷ ಕೊರಿಯಾ ಯುವಕರು ಯುದ್ಧಕ್ಕೆ ಸೇರಲು ಸ್ವಯಂಪ್ರೇರಿತರಾಗಿ ಮುಂದೆ ಬಂದಿರುವರೆಂದೂ, ೩ ಲಕ್ಷ ಜನ ಸ್ತ್ರೀಯರೂ ಇರುವರೆಂದೂ ಹೇಳಲಾಗಿದೆ

ಬ್ಯಾಸ್ಟೈಲ್ ದಿನಾಚರಣೆ ಬಗ್ಗೆ ಕಮ್ಯೂನಿಸ್ಟರ ಪ್ರದರ್ಶನ

ಬ್ಯಾಸ್ಟೈಲ್ ದಿನಾಚರಣೆಯನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಪ್ಯಾರಿಸ್ಸಿನ ಸಾವಿರ ಕಮ್ಯೂನಿಸ್ಟರು ಮೆರವಣಿಗೆ ನಡೆಸಿ "ಕೊರಿಯಾವು ಕೊರಿಯನ್ನರಿಗೆ" ಎಂದು ಘೋಷಿಸುತ್ತಾ, ಪ್ರದರ್ಶನ ನಡೆಸಿದರು

ಪಾಕಿಸ್ತಾನ ಪ್ರಧಾನಿ ಮೇಲೆ ರಷ್ಯಾಪತ್ರಿಕೆಯವ್ಯಂಗ್ಯನುಡಿ

ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿಖಾನರನ್ನು ರಷ್ಯದ ಪ್ರಮುಖ ಪತ್ರಿಕೆಯೊಂದು ವ್ಯಂಗ್ಯವಾಗಿ ಟೀಕಿಸಿ, ಆಂಗ್ಲೋ ಅಮೆರಿಕ ಸಾಮ್ರಾಜ್ಯಶಾಹಿಯ ಸೇವೆಯಲ್ಲಿ ಅವರ ಅವಾಸರ ಉತ್ಸಾಹವನ್ನು ತೋರಿಸುತ್ತಿರುವುದಾಗಿ ಹೇಳಿದೆ

ಅಣು ಬಾಂಬು ಹಾಕದಂತೆ ಲಕ್ಷ ಅಮೆರಿಕನ್ನರ ಮನವಿ

ಅಣು ಬಾಂಬನ್ನು ಹಾಕದಂತೆ ಪ್ರಾರ್ಥಿಸುವ ಅರ್ಜಿಗೆ ೧ ಲಕ್ಷ ಅಮೆರಿಕನ್ನರು ರುಜು ಹಾಕಿದ್ದಾರೆ ಇದನ್ನು ಅಮೆರಿಕದ ವಿದೇಶಾಂಗ ಸಚಿವರು ಖಂಡಿಸಿದ್ದಾರೆ.

ಆಟದಲ್ಲಿ ಸೋತ ಸುದ್ದಿ ಕೇಳಿ ಪ್ರೇಯಸಿಯ ಕೊಲೆ

ಬೊಸ್ನಿ ಪ್ರಿಮರ್ ಮತ್ತು ಸ್ಪೇನುಗಳಿಗೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಸ್ಪೇನಿನವರು ಒಂದು ಗೋಲನ್ನು ಹೊಡೆದರೆಂದು ರೇಡಿಯೊದಲ್ಲಿ ಸುದ್ದಿ ಕೇಳುತ್ತಿದ್ದ ಮನುಷ್ಯನೊಬ್ಬನು ಹುಚ್ಚು ಹಿಡಿದಂತಾಗಿ ಬಳಿಯಲ್ಲಿದ್ದ ತನ್ನ ಪ್ರೇಯಸಿಯನ್ನು ಗುಂಡು ಹೊಡೆದು ಕೊಂದನು

ಆಹಾರ ಪರಿಸ್ಥಿತಿ ಬಗ್ಗೆ ಜಿಲ್ಲಾ ಅಧಿಕಾರಿಗಳ ಸಭೆ

ಸಂಸ್ಥಾನದ ಆಹಾರದ ಬಗ್ಗೆ ಸಮಾಲೋಚನೆ ನಡೆಸಲು ಜಿಲ್ಲಾಧಿಕಾರಿಗಳ ಸಭೆಯನ್ನು ೮ ತಾ ರ ಕರೆಯಲಾಗಿದೆ; ಮೈಸೂರಿನ ಶ್ರೀ ಎಚ್ ಸಿ ದಾಸಪ್ಪನವರು ೨೨ನೇ ತಾ॥ ಬೆಂಗಳೂರಿನಲ್ಲಿ ಕರೆದಿದ್ದಾರೆ

ಭಾರತಕ್ಕೆ ಗೋವಾ ಸೇರುವುದಿಲ್ಲವೇ ?

ಕೆಲವು ದಿವಸಗಳ ಹಿಂದೆ ಭಾರತ ಸರ್ಕಾರದವರು ಪೋರ್ಚುಗಲ್ಲಿಗೆ ಪತ್ರ ಬರೆದು, ಗೋವಾ ಮೊದಲಾದ ಭಾರತದಲ್ಲಿರುವ ಪೋರ್ಚುಗೀಸ ಸ್ವಾಸ್ತ್ಯಗಳನ್ನು ಭಾರತಕ್ಕೆ ಒಪ್ಪಿಸುವ ಬಗ್ಗೆ ಮಾತುಕತೆ ನಡೆಸುವಂತೆ ಸಲಹೆ ಮಾಡಿದ್ದರು ಪೋರ್ಚುಗಲ್ ಸರ್ಕಾರದವರು ಉತ್ತರವಿತ್ತು, ಆ ಬಗ್ಗೆ ಯಾವ ವ್ಯವಹಾರವೂ ಅಗತ್ಯವಿಲ್ಲವೆಂದೂ, ಅದನ್ನು ನಿರ್ಣಯಿಸಲಾಗುವುದಿಲ್ಲವೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ

ಬಾಲ್ಟಿಕ್ ರಾಜ್ಯಗಳ ಬಗ್ಗೆ ಟಿಟೋರ ಹೊಸ ವರ್ತನೆ

ಬಾಲ್ಟಿಕ್ ರಾಜ್ಯಗಳ ಬಗ್ಗೆ ಇಟ್ಟುಕೊಂಡಿದ್ದ ವರ್ತನೆಯನ್ನು ಯುಗೋಸ್ಲೇವಿಯಾದ ಮುಖ್ಯ ಮಂತ್ರಿ ಮಾರ್ಷಲ್ ಟಿಟೋರವರು ಬದಲಾಯಿಸಿ, ಅವರೊಡನೆ ಸಮಾಧಾನ ಮಾಡಿಕೊಳ್ಳಲೆತ್ನಿಸುತ್ತಿರುವರು ಗ್ರೀಕ್ ವಿಮಾನ ಸಂಚಾರಕ್ಕೆ ಅವರು ಅವಕಾಶ ಕಲ್ಪಿಸಿಕೊಟ್ಟಿರುವರು

ಮೋರಿ ರಾಣಿಯವರ ಒಡವೆ ಕದ್ದವನಿಗೆ ಜೈಲು

ಕಳೆದ ತಿಂಗಳು ಇಂಗ್ಲೆಂಡಿನ ರಾಜಮಾತೆ ಮೇರಿಯವರ ಅರಮನೆ ಕಾವಲುಗಾರನನ್ನು ಕೊಂದು, ಆಭರಣಗಳನ್ನು ಕದ್ದಿರುವ ೨೬ ವರ್ಷದ ಒಬ್ಬನಿಗೆ ಹೋಮಗಾರನನ್ನು ಕಳೆದ ಗುರುವಾರ ಎಂಟು ತಿಂಗಳ ಕಾರಾಗೃಹವಾಸ ಶಿಕ್ಷೆಗೆ ಗುರಿಪಡಿಸಲಾಯಿತು

ಉತ್ತರ ಐರ್ಲೆಂಡನ್ನು ಕೊಂಡು ಐರಾವಿಗೆ ದಾನ

ಅರ್ಧ ಅಮೆರಿಕ ಅರ್ಧ ಐರಿಷ್ ಪ್ರಜೆಯಾದ ಜೆ ಹ್ಯಾರೀಲಿ ಎಂಬ ಭಾರಿ ಶ್ರೀಮಂತನು, ಸಂಯುಕ್ತ ಐರ್ಲೆಂಡಿನ ಗುರಿ ಸಾಧನೆಗೆ ತನ್ನದೇ ಆದ ಒಂದು ಪ್ರಯತ್ನ ಮಾಡುವುದಾಗಿ ವರದಿಯಾಗಿದೆ ಉತ್ತರ ಐರ್ಲೆಂಡನ್ನು ೧೧೦ ಲಕ್ಷ ಡಾಲರುಗಳಿಗೆ ಕ್ರಯಕ್ಕೆ ಕೊಂಡು ಅದನ್ನು ಐರಾವಿಗೆ ದಾನ ಮಾಡಲು ನಿಶ್ಚಯಿಸಿದ್ದನು ಆದರೆ ಆ ಕೆಲಸದ ಮುಕ್ತಾಯಕ್ಕೆ ೬ ಕೋಟಿ ಡಾಲರುಗಳಿಂದ ತನ್ನ ಪ್ರಯತ್ನವನ್ನು ಅವನು ಕೈಬಿಟ್ಟನೆಂದು ಹೇಳಲಾಗಿದೆ

ಯುವರಾಜರ ರಕ್ತದ ದಾನದಿಂದ ಪ್ರವಾಹ ಇಳಿಯಿತು

ರಾಜಕೋಟೆ ಬಳಿ ಹರಿಯುವ ಆಜಿ ನದಿಯಲ್ಲಿ ವಿಪರೀತವಾಗಿ ಪ್ರವಾಹವೇರಿ ಬಂದಾಗ ಕಳೆದ ಗುರುವಾರ ಅಲ್ಲಿನ ಯುವರಾಜರು ಪ್ರಾಚೀನ ಪದ್ಧತಿಯಂತೆ ತಮ್ಮ ಕೈಯಿಂದ ಕಿರು ಬೆರಳಿನಿಂದ ರಕ್ತದ ಹಲವು ತೊಟ್ಟುಗಳನ್ನು ತೆಗೆದು ಪ್ರವಾಹದ ನೀರಿನ ಮೇಲೆ ಚೆಲ್ಲಿ, ರತ್ನದ ಜೊತೆಗೆ ಮುತ್ತು ವಸ್ತ್ರ ಮತ್ತು ತೆಂಗಿನ ಫಲವನ್ನು ಅರ್ಪಿಸಿದಾಗ ಪ್ರವಾಹವು ೬ ಅಡಿ ಮಟ್ಟ ಇಳಿಯಿತೆಂದು ವರದಿಯಾಗಿದೆ ೨೫ ವರ್ಷಗಳ ಹಿಂದೆ ಈ ಯುವರಾಜರ ತಂದೆಯವರು ರಕ್ತದ ಅರ್ಪಣೆ ಮಾಡಿದ್ದಾಗಲೂ ಇದೇ ರೀತಿ ಪ್ರವಾಹವು ಇಳಿದಿತ್ತು

ಪ್ರಪಂಚದ ಅತ್ಯಂತ ಕುಬ್ಜ ದಂಪತಿಗಳು

೩ ಅಡಿ ಎತ್ತರದ ಪ್ಯಾರಿಸಿನ ಎಂಬ ಗುಜ್ಜನೊಡನೆ ೩॥ ಅಡಿ ಗುಜ್ಜಿಯೊಬ್ಬಳ ವಿವಾಹವು ಮೊನ್ನೆ ಟಬ್‌ಬರ್ಗದಲ್ಲಿ ಸ್ವಿಟ್ಜರ್ಲೆಂಡ್ ಧರ್ಮ ಶಾಸ್ತ್ರದ ರೀತ್ಯಾ ನಡೆಯಿತು ಪ್ರಪಂಚದಲ್ಲೆಲ್ಲಾ ಅತ್ಯಂತ ಚಿಕ್ಕ ದಂಪತಿಗಳವರೆಂದು ಹೇಳಲಾಗಿದೆ. ಪ್ಯಾರಿಸಿನಗರು ಭಾರತ ಸ್ವಾಸ್ಥ್ಯಗಳ ಮನೋರಂಜಕರಾದ ಆರ್ ಬಿ ಗ್ಯಾರಿಸನ ವಿದೂಷಕರಾಗಿ ದುಡಿಯುತ್ತಿದ್ದು ಬರ್ಮಾ ಮತ್ತು ಆಗ್ನೇಯ ಏಷ್ಯಾ ಯುದ್ಧ ಕಾಲದಲ್ಲಿ ಕೆಲಸಮಾಡಿದ್ದಾರೆ

ಮಂಗಗಳ ಮೇಲೆ ಹೋರಾಟ ಮಾಡಲು ಸೂಚನೆ

ಕಲ್ಕತ್ತಾದಲ್ಲಿ ಕೋತಿಗಳ ಹಾವಳಿಯನ್ನು ತಪ್ಪಿಸಲು ಅಲ್ಲಿನ ಪೌರಸಭೆಯವರು ಅವುಗಳ ಮೇಲೆ ಕಾಳಗ ಹೂಡಬೇಕೆಂದು ಮುನಿಸಿಪಲ್ ಅಧಿಕಾರಿಗಳು ಸೂಚಿಸುತ್ತಿರುವರು

ಜಗಜೀವನ ರಾಮರವರ ಬಳಿ ಕಾರ್ಮಿಕರ ನಿಯೋಗ

ಧನ್‌ಬಾದ ೧೫

ಭಾರತ ಸರ್ಕಾರದ ಕಾರ್ಮಿಕ ಮಂತ್ರಿ ಶ್ರೀ ಜಗಜೀವನ ರಾಮರವರು ಜರಿಯಾಗೆ ಬಂದಾಗ ಅವರಲ್ಲಿ ತಮ್ಮ ಕುಂದುಕೊರತೆಗಳನ್ನು ಸಲ್ಲಿಸುವ ಸಲುವಾಗಿ ನಿಯೋಗವೊಂದನ್ನು ಕಳುಹಿಸಬೇಕೆಂದು ಇಂಡಿಯನ್ ಕಲ್ಲಿದ್ದಲು ಕಾರ್ಮಿಕರ ಸಂಘದ ಸಭೆಯಲ್ಲಿ ನಿರ್ಣಯಿಸಲಾಗಿದೆ. ಸಭೆಗೆ ೩ ಸಾವಿರ ಕಾರ್ಮಿಕರು ಬಂದಿದ್ದರು.

೩ ದಿನಗಳಲ್ಲಿ ಅಮೆರಿಕನರು ಕೊರಿಯದಿಂದ ಹೊರಕ್ಕೆ

ಇನ್ನು ೭೨ ಗಂಟೆಗಳಲ್ಲಿಯೇ ಅಮೆರಿಕನವರು ಕೊರಿಯವನ್ನು ಬಿಡಬೇಕಾಗುವುದೆಂದು ಅಮೆರಿಕದ ರಕ್ಷಣಾ ಇಲಾಖೆಯ ಪ್ರತಿನಿಧಿಗಳು ತಿಳಿಸಿದ್ದಾರೆ

ತೃತೀಯ ಯುದ್ಧ ಸನ್ನಿಹಿತವೆಂದು ಚರ್ಚಿಲ್

ಕೊರಿಯಾ ಘಟನೆಗಳನ್ನು ಪರಿಶೀಲಿಸಿದರೆ ತೃತೀಯ ಮಹಾ ಯುದ್ಧವು ಸನ್ನಿಹಿತವಾಗುತ್ತಿರುವುದಾಗಿ ಗೊತ್ತಾಗುವುದೆಂದು ಬ್ರಿಟನ್ನಿನ ಮಾಜಿ ಪ್ರಧಾನಿ ಚರ್ಚಿಲ್ಲರು ಹೇಳಿರುತ್ತಾರೆ

ಟೈಜೋನಿನಿಂದ ದಕ್ಷಿಣ ಕೊರಿಯ ಸರ್ಕಾರದ ಓಟ

ದಕ್ಷಿಣ ಕೊರಿಯಾ ಸರ್ಕಾರದವರು ಹೊಸ ರಾಜಧಾನಿ ಟೈಜೋನಿನಿಂದ ಬಿಟ್ಟು ಹೊರಟು ಇನ್ನೂ ದಕ್ಷಿಣ ಪ್ರದೇಶಕ್ಕೆ ಹೋದರೆಂದು ಹೇಳಲಾಗಿದೆ

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರಿನ ಮಟ್ಟವು ೭೫-೩೦ ಅಡಿಗಳಷ್ಟಿದೆ

ಮಾರಾಟ ತೆರಿಗೆ ಕಾನೂನಿಗೆ ತಿದ್ದುಪಡಿ

ಸಂಸ್ಥಾನದ ಮಾರಾಟ ತೆರಿಗೆ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ ಅದರ ಪ್ರಕಾರ ನೆಲಗಡಲೆ, ಅಡಿಕೆ, ಕಾಫಿ, ಏಲಕ್ಕಿ ಮತ್ತು ಹೊಗೆ ಸೊಪ್ಪು ಇವುಗಳನ್ನು ದೇಶದಿಂದ ಹೊರಕ್ಕೆ ಸಾಗಿಸುವ ಪ್ರಮಾಣಕ್ಕೆ ಮಾತ್ರ ತೆರಿಗೆಯನ್ನು ವಿಧಿಸಲಾಗುವುದು

ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆ ಮೇಲೆ ಪುಟ್ಟರಾಜು ಅರಸರ ರಿವಿಷನ್ ಅರ್ಜಿ

ಶ್ರೀ ಪುಟ್ಟರಾಜು ಅರಸರವರು ಶ್ರೀ ಬಿ ಮೋದಲಪ್ಪನವರ ಮೇಲೆ ಹೂಡಲಾಗಿದ್ದ ಮಾನನಷ್ಟ ಮೊಕದ್ದಮೆ ಬಗ್ಗೆ ಅರ್ಜಿಯನ್ನು ಜಿ-೧೮.೧೦. ಜಿಲ್ಲಾ ಮ್ಯಾಜಿಸ್ಟ್ರೇಟರು ತಿರಸ್ಕರಿಸಿರುವುದರಿಂದ, ಅವರ ಆಜ್ಞೆಯ ಮೇಲೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಶ್ರೀ ಅರ್ ಪುಟ್ಟರಾಜ ಅರಸರವರು ರಿವಿಷನ್ ಅರ್ಜಿಯೊಂದನ್ನು ಸಲ್ಲಿಸಿರುವರು

ಕಾಟಿಯೂರಿ ಮತ್ತು ಗುಲಾಬಿ ರಸಂ ಇಟ್ಟಿಗಳನ್ನು ಮೈಸೂರು ಸಂಸ್ಥಾನಕ್ಕೆ ಆಮದು ಮಾಡಲಾಗದೆಂದು ಕಳೆದ ಜನವರಿಯಲ್ಲಿ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ರದ್ದು ಮಾಡಲಾಗಿದೆ

ಮೈಸೂರು ತಾಲ್ಲೂಕಿನಲ್ಲಿ ಕಾಲರಾ ವ್ಯಾಧಿಯೇ ?

ಮೈಸೂರು ತಾಲ್ಲೂಕು ವರುಣ ಹೋಬಳಿ ಮೋಳಿಕ ಹಳ್ಳಿ ಗ್ರಾಮದಲ್ಲಿ ಕಳೆದ ಮೂರು ನಾಲ್ಕು ದಿವಸಗಳಿಂದ ಕಾಲರಾ ವ್ಯಾಧಿಯು ವ್ಯಾಪಿಸಿ ಕೆಲವರು ಈಗಾಗಲೇ ಮೃತಾಧೀನರಾಗಿರುತ್ತಾರೆಂದೂ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದನ್ನು ತಡೆಗಟ್ಟಲು ಊರಿನವರು ಉಪಯೋಗಿಸುತ್ತಿರುವ ನೀರಿನ ಬಾವಿಗಳಿಗೂ ಮತ್ತು ಕಟ್ಟೆಗಳಿಗೂ ಕ್ರಿಮಿ ನಾಶಕ ಔಷಧಿಯನ್ನು ಹಾಕಿಸಿ, ಆರೋಗ್ಯರಕ್ಷಣೆಗೆ ಮುಂತಾದ ನಾಗರಿಕನಿರ್ವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಶ್ರೀ ಎಂ ಸಿ. ನರಸಿಂಹಯ್ಯನವರು ತಿಳಿಸಿರುತ್ತಾರೆ ಅಲ್ಲದೆ ಪಕ್ಕದ ಹಳ್ಳಿಯಾದ ಒಕ್ಕಳ್ಳಿಗೂ ಇದು ವ್ಯಾಪಿಸಿರುವುದಾಗಿ ಅವರು ತಿಳಿಸುತ್ತಾರೆ

ವಾರ ಭವಿಷ್ಯ

ತಾ॥ ೧೬-೭-೫೦ರಿಂದ ೨೨-೭-೫೦ ವರೆಗೆ

ಮೇಷ—ಆರೋಗ್ಯ ಉತ್ತಮ ಸಂಘ ಏಕರ ಪರಿಚಯ ಪ್ರೀಯರಿಂದ ಲಾಭ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಮಿಶ್ರ ಪರಿಣಾಮ ಯಶಸ್ಸು ಮತ್ತು ಸನ್ಮಾನ. ಧಾರ್ಮಿಕ ಕಾರ್ಯಗಳು ತಾ॥೨೦, ೨೧ ಅಶುಭಗಳಿಗಾಗಿ ಖರ್ಚು

ವೃಷಭ—ಸಂಸಾರದಲ್ಲಿ ಸಹಕಾರ ಮತ್ತು ಸುಖ ಆರೋಗ್ಯ ಉತ್ತಮ ಸಂತೋಷ ವ್ಯಾಪಾರ, ಉದ್ಯೋಗಗಳಲ್ಲಿ ಜಯ. ನೌಕರಿಯಲ್ಲಿ ಉತ್ತಮ ಧನ ಲಾಭ ಲೇಖಕರಿಗೆ ಯಶಸ್ಸು ಪ್ರವಾಸ ತಾ॥೧೯, ೨೦ ಮುಚ್ಚಿದ ಪತ್ರಾಗಮನ

ಮಿಥುನ—ಅನಾರೋಗ್ಯ ಅಪಘಾತ ಭಯ ಮನಸ್ಸಿಗೆ ಅಶಾಂತಿ ನೌಕರಿಯಲ್ಲಿ ಹೀನ ಕಳುವಿನ ಭಯ. ಅಪೇಕ್ಷಾ ಭಂಗ ತಾ॥೨೦-೨೧ ಗಡಿಬಿಡಿ

ಕರ್ಕ—ಆರೋಗ್ಯ ಉತ್ತಮ ವಿದ್ಯುಕ್ತ ಪರ ಭೇಟಿ ವ್ಯಾಪಾರ ವ್ಯವಹಾರಗಳಲ್ಲಿ ಜಯ ನೌಕರಿಯಲ್ಲಿ ಸುಖ ಧಾರ್ಮಿಕ ಕಾರ್ಯಗಳು ಸಂಸಾರದಲ್ಲಿ ಸುಖ ಆಕಸ್ಮಿಕ ಪ್ರವಾಸ ಬಿಕಟ ಲಾಭ ವಾರ್ತೆ.

ಸಿಂಹ—ಆರೋಗ್ಯ ಉತ್ತಮ ಯಶಸ್ಸು ಎದುರಾಳಿಗಳ ಅಪಜಯ ನೌಕರಿಯಲ್ಲಿ ಜಯ. ಪ್ರವಾಸ ವಿದ್ಯಾರ್ಥಿ ಮತ್ತು ಲೇಖಕರಿಗೆ ಯಶಸ್ಸು ಧಾರ್ಮಿಕ ಕಾರ್ಯಗಳು ಧನ ಲಾಭ

ಕನ್ಯಾ—ಅನಾರೋಗ್ಯ ವ್ಯಾಪಾರ ಉದ್ಯೋಗಗಳಲ್ಲಿ ಸುಖ. ನೌಕರಿಯಲ್ಲಿ ಅಪಜಯ. ಶೀಘ್ರ ಸಂಕಟದಿಂದ ಬಿಡುಗಡೆ, ಖರ್ಚು ಅಪಘಾತ ಭಯ ತಾ॥ ೧೭, ೧೮, ೧೯ ತಕರಾರು

ತುಲಾ—ಹಾನಿ ನೌಕರಿಯಲ್ಲಿ ಬಡತಿ ಕಷ್ಟ, ನಂಬಿಕೆಯ ದ್ರೋಹ ವ್ಯಾಪಾರ ವ್ಯವಹಾರಗಳಲ್ಲಿ ಕಷ್ಟ ಕಳುವಿನ ಭಯ ಖರ್ಚು ಸಂಸಾರದಲ್ಲಿ ಕಲಹ ತಾ॥ ೨೦ ೨೧ ಪ್ರೇಶ.

ವೃಶ್ಚಿಕ—ಆರೋಗ್ಯ ಉತ್ತಮ ಧನ ಲಾಭ ಸುಖ ಪ್ರವಾಸ ನೌಕರಿಯಲ್ಲಿ ಜಯ ಪ್ರಾಪ್ತ ಧಾರ್ಮಿಕ ಕಾರ್ಯ ಮಹನೀಯರುಗಳ ಉತ್ತೇಜನ. ತಾ॥ ೧೬, ೨೦ ಶುಭ ವಾರ್ತೆ. ಅಪ್ತರ ಭೇಟಿ.

ಧನು—ಆರೋಗ್ಯ ಉತ್ತಮ ಉತ್ಸಾಹ ಹಬ್ಬಗಳು ಪತ್ರಾಗಮನ ನೌಕರಿಯಲ್ಲಿ ಜಯ ಎದುರಾಳಿಗಳ ಸೋಲು, ಲಾಭ ತಾ॥ ೧೮,೧೯ ಅಲ್ಪ ಪ್ರವಾಸ ಅಪ್ರತೀಕ್ಷಿತ ಲಾಭ

ಮಕರ—ಅರೋಗ್ಯ ಉತ್ತಮ ಎದುರಾಳಿಗಳ ಸೋಲು ಮನಸ್ಸಿಗೆ ಹರ್ಷ ನೌಕರಿಯಲ್ಲಿ ಜಯ ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ಲೇಖಕರಿಗೆ ಗೌರವ ತಾ॥ ೧೭, ೨೦ ಧನ ಲಾಭ ಕೋರ್ಟ ಕಛೇರಿಗಳಲ್ಲಿ ಜಯ ಲಾಭ

ಕುಂಭ—ಅರೋಗ್ಯದಲ್ಲಿ ಎಚ್ಚರಿಕೆ, ದುಃಖದಾಯಕ ಘಟನೆ ವ್ಯಾಪಾರ, ಉದ್ಯೋಗಗಳಲ್ಲಿ ಗಡಿಬಿಡಿ ಖರ್ಚು, ಅಪಘಾತ ಭಯ ಮನಸ್ಸು ತಾ॥ ೨೨, ೨೧ ಅಕ ಭಯ ವಾರ್ತೆ ಶುಭ.

ಮೀನ—ಮನಸ್ಸಿಗೆ ಬೇಸರ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ನಿರುತ್ಸಾಹ ಧನಾಭಾವದಿಂದ ಕಾರ್ಯ ವಿಘ್ನ ಸಂಸಾರದಲ್ಲಿ ತೊಂದರೆ ಸಂಕಟದಿಂದ ಮುಕ್ತಿ ಖರ್ಚು ತಾ॥ ೧೬, ೧೮, ನೋವು, ಮನಸ್ಸಿಗೆ ಧೈರ್ಯ

ಕೊರಿಯಾ ಯುದ್ಧದಲ್ಲಿ ಸಂದಿಗ್ಧ ಪರಿಸ್ಥಿತಿ

ಕುಂಪಡಿಯು ಬಳಿ ಅಮೆರಿಕನ್ನರು ರಚಿಸಿರುವ ರಕ್ಷಣಾ ಸಾಲನ್ನು ಭೇದಿಸುವ ಯತ್ನದಲ್ಲಿ ಉತ್ತರ ಕೊರಿಯನ್ನರು ವಿಫಲರಾಗಿದ್ದಾರೆ. ಆದರೂ ಅವರ ಹಲಕೆಲವು ಸೈನಿಕರು ನದಿಯನ್ನು ದಾಟಿದರು. ಒದುವ ೨೪ ಗಂಟೆಗಳಲ್ಲಿ ಯುದ್ಧದಲ್ಲಿ ಸಂದಿಗ್ಧ ಪರಿಸ್ಥಿತಿಯುಂಟಾಗುವುದಾಗಿ ಹೇಳಲಾಗಿದೆ. ಈಗ ಹೆಚ್ಚು ಹೆಚ್ಚು ಸರಬರಾಜುಗಳನ್ನು ಅಮೆರಿಕನ್ನರು ಸಾಗಿಸುತ್ತಿದ್ದಾರೆ ೨೫೦ ಸಾರಿ ಅಮೆರಿಕ ಮತ್ತು ಆಸ್ಟ್ರೇಲಿಯಾ ವಿಮಾನಗಳು ಧಾಳಿ ನಡೆಸಿವೆ

ದಕ್ಷಿಣ ಮಲಕ್ಕಾ ಮೇಲೆ ಇಂಡೋನೇಷ್ಯಾ ದಂಡಯಾತ್ರೆ

ಇಂಡೋನೇಷ್ಯ ರಿಪಬ್ಲಿಕ್ಕಿನಿಂದ ಪ್ರತ್ಯೇಕವಾಗಿರುವುದಾಗಿ ಸಾರಿದ ದಕ್ಷಿಣ ಮಲಕ್ಕಾ ಪ್ರದಾಪ್ತ ಭೂಖಂಡದ ಮೇಲೆ ಬರುವ ತಿಂಗಳು ಇಂಡೋನೇಷ್ಯದ ಸೈನ್ಯಗಳು ದಂಡಯಾತ್ರೆ ಮಾಡುವುವೆಂದು ಹೇಳಲಾಗಿದೆ ಈಗಾಗಲೇ ೧೫೦೦ ಸಾವಿರ ಸೇನೆಗಳನ್ನು ಆ ದ್ವೀಪದ ಹತ್ತಿರ ಇರುವ ಪ್ರದೇಶಕ್ಕೆ ರವಾನಿಸಲಾಗಿದೆ

ಪೋಲೀಸರ ಅಧಿಕಾರಿಗಳ ಮೇಲೆ ಪೋಲೀಸರ ದಾವಾ

ಲಾಹೋರಿನ ಕೆಳ ದರ್ಜೆಯ ಪೋಲೀಸರ ಸಂಘದ ಹಲವು ಸದಸ್ಯರಿಗೆ ಕಿರುಕುಳಗಳನ್ನು ಕೊಟ್ಟರೆಂಬುದಾಗಿ ಆ ಸಂಘವು ಅಲ್ಲಿನ ಇಬ್ಬರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರ ಮೇಲೆ ಮೊಕದ್ದಮೆಯನ್ನು ಹೂಡಿದೆ ಸಂಘವನ್ನು ಸ್ಥಾಪಿಸಿದ ಮೇಲೆ ಅದರ ಅಧಿಕಾರಿ ವರ್ಗದ ಸದಸ್ಯರನ್ನು ಬೇರೆಕಡೆ ವರ್ಗಾಯಿಸಿದುದಾಗಿ ಹೇಳಲಾಗಿದೆ

ಮಂಗವು ಮೋಟಾರು ನಡೆಸಿದ ಪ್ರಸಂಗ

ಒರಿಸ್ಸಾ ಪ್ರಾಂತದ ಬಾರಾಗ್ರ-ಸಂಬಲ್ಪುರ ರಸ್ತೆಯ ಮಧ್ಯೆ ಪ್ರಯಾಣಿಕರ ಬಸ್ಸೊಂದು ಹೋಗುತ್ತಿದ್ದಾಗ ಮರದಿಂದ ಮರಕ್ಕೆ ಹಾರುತ್ತಿದ್ದ ಕಪಿಯೊಂದು ಹಾರಿ ಬಂದು ಡ್ರೈವರನ ಹತ್ತಿರ ಕುಳಿತುಕೊಂಡಿತು ಅದನ್ನು ಕಂಡು ಅವನು ಮೋಟಾರಿನ ಸ್ಟಿಯರಿಂಗನ್ನು ಬಿಟ್ಟು ಪಕ್ಕಕ್ಕೆ ಸರಿದಾಗ, ಕಪಿಯೇ ಅದನ್ನು ಹಿಡಿದು ನಡೆಸಲು ಪ್ರಾರಂಭಿಸಿತು ಬಸ್ಸು ಕೊಂಚ ದೂರ ಹರಿದು ರಸ್ತೆ ಪಕ್ಕದ ಮರಕ್ಕೆ ಢಿಕ್ಕಿ ಹೊಡೆಯಿತು. ಹೆಂಗಸರು ಒಳಗಿದ್ದ ಜನರು ಕೂಗಿಕೊಳ್ಳಲಾಗಿ ಅದು ಅಲ್ಲಿಂದ ಹಾರಿಹೋಯಿತು

೩೦ ಸಾವಿರ ಬ್ರಿಟಿಷ್ ವೈದ್ಯರ ರಾಜೀನಾಮೆಯ ಬೆದರಿಕೆ

ಹೆಚ್ಚು ಸಂಬಳ ಮತ್ತು ಭತ್ಯದ ಬಗ್ಗೆ ಸರ್ಕಾರದವರು ಕಾಲ ವಿಳಂಬ ಮಾಡಿದರೆ ೩೦ ಸಾವಿರ ವೈದ್ಯರುಗಳು ರಾಜೀನಾಮೆ ಕೊಡುವುದಾಗಿ ಬ್ರಿಟಿಷ್ ಸರಕಾರಕ್ಕೆ ತಿಳಿಸಿದ್ದಾರೆ

ಜಮೀನುದಾರಿ ರದ್ದಿಗೆ ಳ೧ಳ ಕೋಟಿ ಪರಿಹಾರ ಬೇಕು

ಮದ್ರಾಸು ಉತ್ತರ ಮತ್ತು ಮಧ್ಯ ಪ್ರದೇಶಗಳು, ಬಿಹಾರು, ಪಶ್ಚಿಮ ಬಂಗಾಳಾ ಮತ್ತು ಅಸ್ಸಾಂ ಪ್ರಾಂತಗಳಲ್ಲಿ ಜಮೀನುದಾರಿ ಪದ್ಧತಿಯು ರದ್ದಾದರೆ ೧೭ ಕೋಟಿ ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ೪೧೭ ಕೋಟಿ ಪರಿಹಾರ ದ್ರವ್ಯವನ್ನು ಕೊಡಬೇಕಾಗುವುದೆಂದು ತಿಳಿದುಬಂದಿದೆ ಅಲ್ಲದೆ ನಗದು ಹಣ ಕೊಡುವುದು ಸಾಧ್ಯವಾಗದ ವಿಷಯವೆಂದೂ ಹೇಳಲಾಗಿದೆ

ಹುಡುಗಿಯರನ್ನು ಹಿಡಿಸಿ ದುಡಿಸಿದಕ್ಕಾಗಿ ಜುಲ್ಮಾನೆ

ಕರಾಚಿಯ ವಸ್ತು ಪ್ರದರ್ಶನಾಲಯದಲ್ಲಿ ಹುಡುಗಿಯರನ್ನು ಹಿಡಿಸಿದರೆಂಬ ಆರೋಪದ ಮೇಲೆ ಇಬ್ಬರು ಮುಸ್ಲಿಂ ತರುಣರಿಗೆ ತಲಾ ೫೦೦ ಮತ್ತು ನೂರು ರೂ ಗಳ ದಂಡವನ್ನು ವಿಧಿಸಲಾಗಿದೆ.

ಒಲಿಯದ ತರುಣಿಯ ಮೂಗನ್ನು ಕಚ್ಚಿದ ಯುವಕ

ನವದೆಹಲಿಯ ರಾತ್ರಿ ಕರ ಒಂದು ತಿಬಿರದಲ್ಲಿದ್ದ ೧೭ ವರ್ಷ ವಯಸ್ಸಿನ ತರುಣಿಯನ್ನು ಪ್ರೀತಿಸುತ್ತಿದ್ದ ಬನಶಿಲಾಲ್ ಎಂಬ ಯುವಕನು, ಆಕೆಯು ಅವನನ್ನು ತಿರಸ್ಕರಿಸಿದುದರಿಂದ ಕೋಪಗೊಂಡು ರಸ್ತೆಯಲ್ಲಿ ಹೋಗುತ್ತಿದ್ದಾಗ ಆಕೆಯ ಮೂಗಿನ ತುದಿಯನ್ನು ಕಚ್ಚಿ ತುಂಡ ಮಾಡಿದನೆಂದೂ, ಅವನ ದಸ್ತಗಿರಿಯಾಗಿದೆಯೆಂದೂ ತಿಳಿದುಬಂದಿದೆ

ಜಗಜಟ್ಟಿ ಗಾಮಾ ಹೊಟ್ಟೆ ಗಿಲ್ಲದೆ ಹೊಲ ಉಳುತ್ತಿದ್ದಾನೆ

ಕುಸ್ತಿ ಪಂದ್ಯಗಳಲ್ಲಿ ಜಗತ್ತಿಗೇ ಅಗ್ರೇಸರ ನೆನಿಸಿಕೊಂಡಿರುವ ೬೭ ವರ್ಷದ ಜಗಜಟ್ಟಿ ಗಾಮನು ಪಾಕಿಸ್ತಾನದಲ್ಲಿ ಈಗ ಹೊಟ್ಟೆಗಿಲ್ಲದೆ ನರಳುತ್ತಿರುವುದಾಗಿ ಗೊತ್ತಾಗಿದೆ ರವಿ ನದಿಯ ಬಳಿ ೩ ಎಕರೆ ಜಮೀನು ತೆಗೆದುಕೊಂಡು ಸಾಗುವಳಿ ಮಾಡುತ್ತಾ, ಜೀವನ ಧಾರಣೆ ಮಾಡುತ್ತಿದ್ದಾನೆ

ಇಂಡೋನೇಷ್ಯದಲ್ಲಿದ್ದ ಡಚ್ ಸೈನ್ಯಗಳ ವಿಸರ್ಜನೆ

ಇಂಡೋನೇಷ್ಯದಲ್ಲಿದ್ದ ಡಚ್ ಸೈನ್ಯಗಳನ್ನು ರದ್ದುಗೊಳಿಸಿ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿದರು.

ಪ್ರಭುದೇವಾ ಟಾಕೀಸ್

14—7—50ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ನಳ ದಮಯಂತಿ

(ತೆಲುಗು)

ಮುಖ್ಯ ಪಾತ್ರ—ಶ್ರೀರಂಜನಿ, ಮಾಧವ ಪೆದ್ದಿ, ಅದ್ದಂಕಿ ಮುಂತಾದವರು

ತಾ॥ 21—7—50ನೇ ಶುಕ್ರವಾರದಿಂದ

• ಭಕ್ತ ಪುಂಡಲೀಕ • (ಹಿಂದಿ)

ರಾಜಕಮಲ್, ಮೈಸೂರು

ರಂಜಾನ ಹಬ್ಬದ ಪ್ರಯುಕ್ತ

ಸ್ಪೆಷಲ್ ಪ್ರೋಗ್ರಾಂ

14-7-50 ರಿಂದ ಬಿಡುಗಡೆ ಪ್ರಾರಂಭ ದಿನವೂ 3 ಪ್ರದರ್ಶನಗಳು

ಫಿಲ್ಮಿಸ್ತಾನರವರ ಹಿಂದಿ ಚಿತ್ರ

• ಸಮಾಧಿ •

— ಭೂಮಿಕೆ —

ಅಶೋಕ ಕುಮಾರ್, ನಳಿನಿ ಜಯವಂತ್, ಕುಲದೀಪ್, ಶಶಿಕಲಾ

ಗಾಯತ್ರೀ ಟಾಕೀಸ್

16—7—50ರಿಂದ ದಿನವೂ 3 ಆಟಗಳು

ರೋಪ್ ಆಫ್ ಸ್ಯಾಂಡ್

ರಘುಲಾಲ್ ಡಿ ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ, ಬೆಂಗಳೂರು.

ಮನೆ ಬಿಕರಿಗಿದೆ

ಮೈಸೂರು ಚಾಮರಾಜ ಮೊಹಲ್ಲಾ, ಕೋಟಾರ್ ಬೀದಿಯಲ್ಲಿರುವ ೪೬ನೇ ನಂಬರಿನ ಮನೆಯು ಬಿಕರಿಗೆ ಇದೆ, ಪಕ್ಕಾ ಮೆತ್ತೆ, ಗ್ಲೇಜ್ ಗಳಿಂದ ಕೂಡಿದ ವಿಶಾಲವಾದ ಕಾಂಪೌಂಡ್ ಮನೆ ವಿವರಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ಬೆಳಿಗ್ಗೆ ೭ ರಿಂದ ೯ ಘಂಟೆಯೊಳಗೆ ವಿಚಾರಿಸಿ.—

1167, ಬಸ್ಸಪ್ಪನವರ ಬೀದಿ,

ಚಾಮರಾಜ ಪುರಂ, ಮೈಸೂರು.

ಮೈ ಸೂ ರು

Edited, printed and published by A R Nagarajan, at Sadhvi Press, D Subbiah Road, Mysore.

ಸಾಧ್ವಿ

ಸಂಪುಟ ೮] ಸೋಮವಾರ ೧೭-೭-೫೦ [ಸಂಚಿಕೆ ೩೩೩

ಪ್ರಧಾನಿ ನೆಹರೂರಿಗೆ ಮಾ॥ ಸ್ಟಾಲಿನ್ನರ ಉತ್ತರ

ಪಂಡಿತ ನೆಹರೂರವರಿಗೆ ಸ್ಟಾಲಿನ್ನರ ಉತ್ತರ

ಪಂಡಿತ ಜವಹರಲಾಲ್ ನೆಹರೂರವರು ಕೊರಿಯಾದ ಬಿಕ್ಕಟ್ಟನ್ನು ಪರಿಹರಿಸುವ ಬಗ್ಗೆ ರಷ್ಯದ ಮಾರ್ಷಲ್ ಸ್ಟಾಲಿನ್ನರಿಗೆ ಬರೆದಿದ್ದ ಪತ್ರಕ್ಕೆ ಸ್ಟಾಲಿನರು ಉತ್ತರ ಇತ್ತಿರುವರೆಂದೂ, ಅಲಹಾಬಾದಿನಲ್ಲಿರುವ ಪ್ರಧಾನಿ ಪಂಡಿತ ನೆಹರೂರವರಿಗೆ ಅದನ್ನು ನವದೆಹಲಿಯಿಂದ ಈ ವೇಳೆಗೆ ಕಳುಹಿಸಿರುವುದಾಗಿಯೂ ಹೇಳಲಾಗಿದೆ

ಯುದ್ಧ ಸಿದ್ಧತೆಗೆ ತಯಾರಾಗಲು ರಷ್ಯದ ಸೂಚನೆ

ಪೂರ್ವ ಯೂರೋಪಿನಲ್ಲಿ ತನ್ನ ಕೈ ಕೆಳಗಿರುವ ಎಲ್ಲ ರಾಷ್ಟ್ರಗಳೂ ಯುದ್ಧ ಪರಿಸ್ಥಿತಿ ಒದಗಿರುವುದೆಂದು ಭಾವಿಸಿ ಅದಕ್ಕೆ ತಕ್ಕಂತೆ ತಮ್ಮ ಆರ್ಥಿಕ ಮತ್ತು ಇತರ ಎಲ್ಲ ವ್ಯವಹಾರಗಳನ್ನೂ ಅಳವಡಿಸಿಕೊಳ್ಳಬೇಕೆಂದು ರಷ್ಯವು ಆಜ್ಞಾಪಿಸಿರುವುದಾಗಿ ವರದಿಯಾಗಿದೆ. ಜೆಕೊಸ್ಲೊವೇಕಿಯಾದ ಪ್ರಸಿದ್ಧ ಸ್ಕೋಡಾ ಕಾರ್ಖಾನೆಯಲ್ಲಿ ಟ್ರಾಕ್ಟರುಗಳ ಮತ್ತು ಸ್ಪೆಷಲ್ ಟ್ಯಾಂಕುಗಳ ತಯಾರಿಕೆಯನ್ನು ದ್ವಿಗುಣಗೊಳಿಸುವಂತೆ ತಿಳಿಸಲಾಗಿದೆ

ವಿಮಾನ ಚರಂಡಿಯೊಳಗೆ ಸಿಕ್ಕಿಕೊಂಡಿತು

ಹಾಂಕಾಂಗಿನ ಸಾಂಟಾಕ್ರಾಸ್ ವಿಮಾನ ನಿಲ್ದಾಣದಲ್ಲಿ "ಮಲಾಯಾ ಪ್ರಿನ್ಸೆಸ್" ಎಂಬ ಪ್ರಯಾಣಿಕರ ವಿಮಾನವು ಮೇಲಕ್ಕೆ ಏಳಲು ಯತ್ನಿಸುತ್ತಿದ್ದ ಸಮಯದಲ್ಲಿ ಅದು ತಪ್ಪಿ ಹತ್ತಿರದ ಚರಂಡಿಯೊಳಗೆ ಬಿದ್ದು ಅದರ ಮುಂಭಾಗ ಮತ್ತು ರೆಕ್ಕೆಗಳು ಮಣ್ಣಿನಲ್ಲಿ ಹೂತುಕೊಂಡವು. ಒಳಗೆ ಕುಳಿತಿದ್ದ ಪ್ರಯಾಣಿಕರಿಗೆ ಗಾಯವೇನೂ ಆಗಲಿಲ್ಲ

ಕಿಂಪೊ ನಿಲ್ದಾಣದ ಮೇಲೆ ೫೦ ಟನ್ ಬಾಂಬು

ಉತ್ತರ ಕೊರಿಯನ್ನರಿಂದ ಆಕ್ರಮಿಸಲ್ಪಟ್ಟಿರುವ ಕಿಂಪೊ ವಿಮಾನ ನಿಲ್ದಾಣದ ಮೇಲೆ ಮೊನ್ನೆ ಅಮೆರಿಕದ ಸೂಪರ್ ಬಾಂಬರ್‌ಗಳು ೫೦ ಟನ್ನು ತೂಕದ ಸಿಡಿಮದ್ದು ಬಾಂಬುಗಳನ್ನು ಎಸೆದವು

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರಿನ ಮಟ್ಟವು ೭೫-೩೩ ಅಡಿಗಳಷ್ಟಿದೆ

ಫಾರ್ಮೋಸಾ ಮೇಲೆ ಅಮೆರಿಕದ ವಿಮಾನ ಕಾವಲು

ವಿಶ್ವ ರಾಷ್ಟ್ರಗಳ ರಕ್ಷಣೆ ಬಗ್ಗೆ ಅಧ್ಯಕ್ಷ ಟ್ರೂಮನ್ನರು ಹೊರಡಿಸಿದ ಘೋಷಣೆಗೆ ಅನುಸಾರವಾಗಿ ಫಾರ್ಮೋಸಾ ದ್ವೀಪದ ಮೇಲೆ ನಡೆಯಬಹುದಾದ ಆಕ್ರಮಣವನ್ನು ತಡೆಗಟ್ಟಲು ಅಮೆರಿಕದ ಏಳನೇ ವಿಮಾನ ಪಡೆಯನ್ನು ಫಾರ್ಮೋಸಾ ದ್ವೀಪದ ರಕ್ಷಣೆಗಾಗಿ ನೇಮಿಸಲಾಗುವುದೆಂದೂ, ಇಷ್ಟರಲ್ಲೇ ರಕ್ಷಣಾ ಕಾರ್ಯಾರಂಭವಾಗಲಿದೆಯೆಂದೂ ಜನರಲ್ ಮೆಕಾರ್ಥರರ ಕೇಂದ್ರ ಕಛೇರಿಯಿಂದ ವರದಿಯಾಗಿದೆ

ನೆಹರೂ-ಲಿಯಾಖತ್ ಭೇಟಿ ಬಂಕ್ಕಿ

ಕಾಶ್ಮೀರ ಸಮಸ್ಯೆ ಬಗ್ಗೆ ಚರ್ಚೆ ನಡೆಸಲು ಇದೇ ೨೦ನೇ ತಾರೀಖು ನೆಹರೂ ಮತ್ತು ಲಿಯಾಖತ್ ಅಲಿಯವರ ಭೇಟಿಗಾಗಿ ಸರ್ ಓವೆನ್ ಡಿಕ್ಸನ್‌ರವರು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ. ಈ ಬಗ್ಗೆ ಅವರು ಲಿಯಾಖತ್ ಅಲಿಯವರಿಗೆ ಪತ್ರ ಬರೆದಿದ್ದಾರೆ. ಈ ಭೇಟಿಯಲ್ಲಿ ಸರ್ ಓವೆನ್ ಡಿಕ್ಸನ್ನರೂ ಭಾಗವಹಿಸುವರೆಂದು ಹೇಳಲಾಗಿದೆ

ಮಿಲಿಟರಿ ಪ್ರದರ್ಶನಕ್ಕೆ ಬೆಂಕಿ ಬಿದ್ದು ೧ ಲಕ್ಷ ರೂ. ನಷ್ಟ

ಇಂಗ್ಲೆಂಡಿನ ಆಲ್ಡರ್‌ಷಾಟ್ ಎಂಬಲ್ಲಿ ಒಂದು ವ್ಯಾಯಾಮ ಶಾಲೆಗೆ ನೆನ್ನೆ ದಿನ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ಪೌಂಡುಗಳಷ್ಟು ನಷ್ಟ ಸಂಭವಿಸಿರುವುದಾಗಿ ವರದಿಯಾಗಿದೆ. ಅಲ್ಲಿನ ರಾಜ ಮತ್ತು ರಾಣಿಯರು ನೋಡುವ ಸಲುವಾಗಿ ಮೇಲ್ಮಂದ ಶಾಲೆಯಲ್ಲಿ ಕಳೆದ ಒಂದು ಮಿಲಿಟರಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅದಕ್ಕಾಗಿ ಅಲ್ಲಿ ಶೇಖರಿಸಲಾಗಿದ್ದ ಮದ್ದು ಗುಂಡುಗಳೂ, ವಿಮಾನ ಮತ್ತು ಮೋಟಾರಿನ ಭಾಗಗಳೂ, ಕೆಲವು ಕಾರುಗಳೂ ಅಸ್ಫೋಟನೆಯಿಂದ ಸುಟ್ಟು ಭಸ್ಮವಾದುವು

೧ ಔನ್ಸ್ ತೂಕದ ರೇಡಿಯೋ

ಬ್ರಿಟನ್ನಿನ ರೇಡಿಯೋ ತಯಾರಿಕೆ ಸಂಸ್ಥೆಯೊಂದು ಅತ್ಯಂತ ಚಿಕ್ಕದಾದ ರೇಡಿಯೋವನ್ನು ತಯಾರಿಸಿದೆ. ಅದರ ತೂಕ ಒಂದು ಔನ್ಸು ಇದೆ. ವಿಮಾನಗಳಲ್ಲಿ ಮಾತ್ರ ಇದಲು ಇದನ್ನು ಉಪಯೋಗಿಸಲಾಗುವುದು

ಅಂತರ್ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯಲ್ಲಿ ಚರ್ಚೆ

ಪರ್ಯಾಲೋಚನೆ ನಡೆದ ವಿಷಯಗಳ ಕುರಿತು ವರದಿ

ಮೈಸೂರು ೧೭

ಕಳೆದ ೫ ದಿನಗಳಿಂದ ಕೃಷ್ಣರಾಜ ಸಾಗರದಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯಲ್ಲಿ ನಾನಾ ದೇಶಗಳಲ್ಲಿರುವ ವಿದ್ಯಾಭ್ಯಾಸದ ಪದ್ಧತಿ ಮತ್ತು ವ್ಯವಸ್ಥೆಗಳ ಬಗ್ಗೆ ಚರ್ಚೆಗಳು ನಡೆದವು. ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಜಾ॥ ನೆಲ್ಸನ್‌ರವರು ಭಾಷಣ ಮಾಡಿ, ವಿದ್ಯಾಭ್ಯಾಸದಲ್ಲಿ ಅಲ್ಲಿನ ನೀಗ್ರೋಗಳನ್ನು ಪ್ರತ್ಯೇಕವಾಗಿಡುತ್ತಿರುವುದರ ಬಗ್ಗೆ ಬಂದಿರುವ ಟೀಕೆಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದರು

ಈಜಿಪ್ಟಿನ ಪ್ರತಿನಿಧಿ ಡಾ॥ ಅಬ್ದುಲ್ ಮಾಲಿಕ್‌ರವರು ಆ ದೇಶದಲ್ಲಿ ಹಾಗೂ ಮತ್ತು, ಮಾಧ್ಯಮಿಕ ಶಾಲೆಗಳಲ್ಲಿ ಉಚಿತ ಶಿಕ್ಷಣವನ್ನು ಕೊಡಲಾಗುತ್ತಿರುವುದೆಂದೂ, ವಿಶ್ವವಿದ್ಯಾಲಯದ ಶಿಕ್ಷಣಕ್ಕಾಗಿ ವಿಶೇಷ ಹಣವನ್ನು ಒದಗಿಸಲಾಗುತ್ತಿದೆಯೆಂದೂ, ಅದರ ಮೇಲೆ ಸರ್ಕಾರದ ಕೋಟೆಯಿಲ್ಲವೆಂದೂ ತಿಳಿಸಿದರು

ರ್ಯಾಜ್‌ಡಾಗರ್ ಎಂಬ ಅಮೆರಿಕದವರು ಹೆಚ್ಚು ಪ್ರತಿನಿಧಿಗಳು ಮಾತನಾಡಿ ಪ್ರಪಂಚದಲ್ಲಿ ವಿದ್ಯಾಭ್ಯಾಸದ ಸ್ವಾತಂತ್ರ್ಯವು ಇರಬೇಕಾದುದು ಅತ್ಯಗತ್ಯವೆಂದು ತಿಳಿಸಿದರು

ಸ್ವಾಗತ ಸಮಾರಂಭ

ರಾಜಧಾನಿಯ ಮಾರುತಿ ಮೋಟಾರು ಸರ್ವೀಸಿನ ಮಾಲೀಕರಾದ ಶ್ರೀ ಆರ್ ಮುನಿಸ್ವಾಮಿ ನಾಯುಡುರವರು ತಮ್ಮ ಸೋದರರ ಪುತ್ರಿ ಸೌ॥ ಪ್ರಮೀಳರವರನ್ನು ನೀಲಗಿರಿಯ ಬಳ್ಳಾ ಹೌಸ್ ವಿಜಯಕುಮಾರದ ಶ್ರೀ ಎಸ್ ರಂಗರಾಜು ನಾಯ್ಡುರವರ ಸಹೋದರ ಶ್ರೀ ಎಸ್ ಶೇಷುರಾಜುರವರಿಗೆ ಕೊಟ್ಟು ಕಳೆದ ಬುಧವಾರ ವಿವಾಹ ನಡೆಸಿದ ಸಂಬಂಧವಾಗಿ ನೆನ್ನೆ ಸಂಜೆ ಡಿ. ಬನುಮಯ್ಯನವರ ಶಾಲೆಯಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು

ಸಾಧುಗಳ ಹೊಡೆದಾಟದಲ್ಲಿ ಮೂಗು ಕಚ್ಚಿದ ಪ್ರಸಂಗ

ಅಸ್ಸಾಮಿನ ಬಳಿ ಕಾಶೀ ನಗರ ಸಭೆಯಲ್ಲಿ ವಿಷ್ಣು ರಾಜ್ಯದ ಮಾತಿನಲ್ಲಿ ಹೋದ ಇಬ್ಬರು ಸಾಧುಗಳು ಹೊಡೆದಾಡಿ ಒಬ್ಬನು ಮತ್ತೊಬ್ಬನ ಮೂಗನ್ನು ಕಚ್ಚಿದನು. ಅವರಿಬ್ಬರು ಪರಸ್ಪರ ಗುದ್ದಾಡಿದರು. ಪೋಲೀಸರು ಇಬ್ಬರನ್ನು ಬಂಧಿಸಿ ಮೂಗು ಕಚ್ಚಿದವನನ್ನು ಆಸ್ಪತ್ರೆಗೆ ಸಾಗಿಸಿದರು

ಬ್ರಿಟಿಷ್ ಮತ್ತು ಇಟಲಿ ನೌಕೆಗಳ ಪ್ರದರ್ಶನ

ಬ್ರಿಟಿಷ್ ಮತ್ತು ಇಟಲಿ ಯುದ್ಧ ನೌಕೆಗಳು ಬರುವ ತಿಂಗಳು ಭೂಮಧ್ಯ ಸಮುದ್ರದಲ್ಲಿ ಸಂಯುಕ್ತ ಪ್ರದರ್ಶನವನ್ನು ನಡೆಸುವುವೆಂದು ತಿಳಿದುಬಂದಿದೆ

ಇಸ್ತಾಂಬುಲ್ ಬಿಡಲು ಅಮೆರಿಕನ್ನರ ಸಿದ್ಧತೆ

ಟರ್ಕಿಯ ಹಳೆ ರಾಜಧಾನಿ ಮತ್ತು ಬಾಸ್ಪರಸ್ ಜಲಸಂಧಿ ಬಳಿ ಇರುವ ದೊಡ್ಡ ನಗರವಾದ ಇಸ್ತಾಂಬುಲ್ಲಿನ ಅಮೆರಿಕ ಕಾನ್ಸೊಲೇಟಿನಲ್ಲಿರುವ ಅಮೆರಿಕನ್ನರು ಬೇಕಾದರೂ ಅವಶ್ಯಕತೆಯುಂಟಾದರೆ ಊರನ್ನು ಬಿಡಲು ಸಿದ್ಧರಾಗಿರಬೇಕೆಂದು ಸೂಚನೆ ಕೊಡಲಾಗಿದೆ

ಇಂಜನಿಯರಿಂಗ್ ಕಾಲೇಜು ಸ್ಥಾಪನೆಗೆ ಅವಕಾಶ

ಮೈಸೂರು ೧೭

ರಾಜಧಾನಿಯ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಯವರು ಇಂಜನಿಯರಿಂಗ್ ಕಾಲೇಜು ಸ್ಥಾಪನೆ ಮಾಡಲು ಸರ್ಕಾರದ ಮನ್ನಣೆಯನ್ನು ಕೇಳಿದ್ದ ಬಗ್ಗೆ ಅದಕ್ಕೆ ಸರ್ಕಾರದವರು ಸಮ್ಮತಿಸಿ ಈ ವರ್ಷ ಪ್ರಥಮ ತರಗತಿಯನ್ನು ತೆರೆಯಲು ಅವಕಾಶವಿತ್ತಿರುವರು. ೬೦ ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು. ಎರಡನೇ ವರ್ಷದ ತರಗತಿಯ ಬಗ್ಗೆ ಸ್ವಲ್ಪ ಕಾಲದ ನಂತರ ಸರ್ಕಾರದ ಅಭಿಪ್ರಾಯವನ್ನು ತಿಳಿಸಲಾಗುವುದೆಂದು ಹೇಳಲಾಗಿದೆ

ಉಡುಪಿ ಮಠಾಧಿಪತಿಗಳ ಮೇಲೆ ಮೋಸದ ಆಪಾದನೆ

ಉಡುಪಿಯ ಕೃಷ್ಣಾಪುರದ ಮಠದ ವ್ಯಾರಣ್ಯ ತೀರ್ಥರು ೧ ಲಕ್ಷ ರೂಪಾಯಿಯಷ್ಟು ಬೆಲೆ ಬಾಳುವ ಮಠದ ವಸ್ತುಗಳಾದ ಚಿನ್ನದ ಸಂಪುಟ, ಹಾರಗಳ ಬಗ್ಗೆ ನಂಬಿಕೆ ದ್ರೋಹ ಮಾಡಿರುವರೆಂದು ಆಪಾದಿಸಿ ಮಂಗಳೂರಿನ ವಿಶೇಷ ನ್ಯಾಯಸ್ಥಾನದಲ್ಲಿ ಮದ್ರಾಸಿನ ಹಿಂದೂ ಮತಗಳ ಚಾರಿಟಿ ಕಮೀಷನರು ಮೊಕದ್ದಮೆ ಹೂಡಿರುವರು

ಜೀಪ್ ಕಾರಿನಲ್ಲಿ ಪ್ರಪಂಚದ ಪರ್ಯಟನ

ಪ್ರಪಂಚದ ಸುತ್ತಲೂ ೫೦ ಸಾವಿರ ಮೈಲಿ ದೂರವನ್ನು ಜೀಪು ಮೋಟಾರಿನಲ್ಲಿ ಪ್ರಯಾಣ ಮಾಡಲು ಸಂಕಲ್ಪಿಸಿರುವ ಇಬ್ಬರು ಬ್ರಿಟನ್ನಿನ ಮಾಜಿ ಸೈನಿಕರು ಈಗ ಬೊಂಬಾಯಿಗೆ ತಲುಪಿದ್ದಾರೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಅವರು ಲಂಡನ್ನಿನಿಂದ ಹೊರಟು ಫ್ರಾನ್ಸ್, ಸ್ಪೇನ್, ಜಿಬ್ರಾಲ್ಟರ್ ಮೂಲಕ ಈಗಾಗಲೇ ೩ ಸಾವಿರ ಮೈಲಿ ಆಫ್ರಿಕದ ಮರುಭೂಮಿಯನ್ನು ದಾಟಿ, ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದಾರೆ. ದಿನಕ್ಕೆ ೨೦೦ ಮೈಲಿಯಂತೆ ಅವರು ಪ್ರಯಾಣ ಮಾಡಿರುವರು. ಇಲ್ಲಿಂದ ಅವರು ಆಸ್ಟ್ರೇಲಿಯಾ, ದಕ್ಷಿಣ ಮತ್ತು ಉತ್ತರ ಅಮೆರಿಕಗಳು, ಕೆನಡಾಗಳಿಗೆ ಹೋಗಿ ೧೯೫೨ರಲ್ಲಿ ಸ್ವದೇಶಕ್ಕೆ ಹಿಂತಿರುಗುವರು

ವಿಶ್ವಸಂಸ್ಥೆಯ ಮನವಿಗೆ ಪುರಸ್ಕಾರವಿಲ್ಲವೇ?

ಕೊರಿಯಾದಿಗೆ ವಿಲಟರಿ ಸಹಾಯ ಕಳುಹಿಸಬೇಕೆಂದು ವಿಶ್ವ ಸಂಸ್ಥೆಯು ಕಳೆದ ಶುಕ್ರವಾರ ತನ್ನ ೫೩ ಸದಸ್ಯ ರಾಷ್ಟ್ರಗಳಿಗೆ ಮಾಡಿಕೊಂಡ ಮನವಿಯನ್ನು ಯಾವರಾಷ್ಟ್ರವೂ ಪುರಸ್ಕರಿಸಿಲ್ಲವೆಂದು ಹೇಳಲಾಗಿದೆ. ಎಲ್ಲ ರಾಷ್ಟ್ರಗಳೂ ತಮ್ಮಲ್ಲಿರುವ ಅಲ್ಪ ಸೇನಾ ಬಲಗಳು ದೇಶದ ರಕ್ಷಣೆಗಾಗಿ ಬೇಕಾಗಿರುವುದೆಂದು ಸಬೂಬು ಹೇಳಿದವೆಂದು ಗೊತ್ತಾಗಿದೆ

ವಕೀಲ ಪರೀಕ್ಷೆಯಲ್ಲಿ ಕುರುಡನಿಗೆ ಪ್ರಥಮ ಸ್ಥಾನ

ಇಂಗ್ಲೆಂಡಿನ ಲಿವರ್‌ಪೂಲ್ ವಿಶ್ವವಿದ್ಯಾಲಯದ ವಕೀಲಿ ಪರೀಕ್ಷೆಯಲ್ಲಿ ಹುಟ್ಟು ಕುರುಡ ಪೀಟರ್ ಮಾರ್ಷಲ್ ಎಂಬ ೨೧ ವರ್ಷದ ತರುಣನು ಪ್ರಥಮ ಸ್ಥಾನವನ್ನು ಪಡೆದಿರುವನು. ಶಾಲೆಯ ಸ್ಥಾಪನೆಯಾಗುತ್ತಿದ್ದಾಗ ಉಪನ್ಯಾಸ, ಟಿಪ್ಪಣಿಗಳನ್ನು ಬರೆದುಕೊಳ್ಳಲು ಆತನು ಯಂತ್ರವನ್ನು ಉಪಯೋಗಿಸುತ್ತಿದ್ದನು.

ಜಾಮೀನುದಾರನಿಂದ ೩ ಲಕ್ಷ ರೂ. ವಸೂಲಿ

೧೫ ಲಕ್ಷ ರೂ ಗಳ ವಂಚನೆಯ ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿದ್ದ ಮ್ಯಾಚ್‌ಫ್ಯಾಕ್ಟರಿಯ ಕಂಟ್ರಾಕ್ಟರ್ ಮುಬಾರಕ್ ಅಲಿಯವರು ಲಾಹೋರಿಗೆ ಓಡಿಹೋದ ಸಂದರ್ಭದಲ್ಲಿ ಈಗ ಬೊಂಬಾಯಿ ಸೆಷನ್ಸ್ ನ್ಯಾಯಾಧೀಶರು ಅವರ ಪರ ಜಾಮೀನು ಕೊಟ್ಟಿದ್ದ ಸರದಾರ್ ಅಗ್ನಿರ್ ಸಿಂಗ್‌ರವರಿಂದ ೩ ಲಕ್ಷ ರೂ ಗಳನ್ನು ವಸೂಲಿ ಮಾಡಿಕೊಳ್ಳಬೇಕೆಂದು ಆಜ್ಞೆ ಮಾಡಿದ್ದಾರೆ

ಸೈನ್ಯ ಬಲ ಹೆಚ್ಚಿಸಲು ಟ್ರೂಮನ್ನರ ನಿರ್ಧಾರ

ಕೊರಿಯಾ ಯುದ್ಧದ ಪರಿಣಾಮವಾಗಿ ಅಮೆರಿಕದಲ್ಲಿ ಸೈನ್ಯ ಬಲವನ್ನು ಹೆಚ್ಚಿಸಲು ಟ್ರೂಮನ್ನರು ನಿರ್ಧರಿಸಿರುವುದಾಗಿ ಹೇಳಲಾಗಿದೆ

ದುರ್ಲಾಭಕ್ಕಾಗಿ ೪೦ ಜನರ ದಸ್ತಗಿರಿ

ಸಂಬಾರ ಸಾಮಾನುಗಳನ್ನು ದುರ್ಲಾಭಕ್ಕೆ ಮಾರಿದ ಸಂಬಂಧವಾಗಿ ೪೦ ಜನರನ್ನು ಕಲ್ಕತ್ತದ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ಇವರಲ್ಲಿ ಒಬ್ಬ ವರ್ತಕರೂ ವ್ಯಾಪಾರಿಗಳಿದ್ದಾರೆ, ... ಬೆಲೆ ಅಲ್ಲಿ ಮಾಮೂಲಿಗಿಂತ ಇದ್ದುದು ಗಮನಾರ್ಹ

ಹಂಗೇರಿ ಯುಗೋಸ್ಲೇವಿಯಾ ಗಡಿ ಬಂದು

ಯುಗೋಸ್ಲೇವಿಯಕ್ಕೂ ಹಂಗೇರಿಗೂ ಇರುವ ೧೦ ಮೈಲಿ ಗಡಿ ಪ್ರದೇಶವನ್ನು ಹಂಗೇರಿ ಸರ್ಕಾರದವರು ಮುಚ್ಚಿರುತ್ತಾರೆ

ಬಸವೇಶ್ವರನ ಅವತಾರವೆಂದು ಸಿದ್ದೇಶ್ವರರ ಹೇಳಿಕೆ

ರಜಾಕಾರರ ಹಾವಳಿ ಕಾಲದಲ್ಲಿ ನಾನಾ ಅತ್ಯಾಚಾರ ಕೃತ್ಯಗಳಿಗೆ ಕಾರಣನಾಗಿದ್ದ ಸಿದ್ದೇಶ್ವರ ಸಿಂಧೂರ್ ಎಂಬ ಬಸವೇಶ್ವರನು ತಾನು ಬಸವೇಶ್ವರನ ಅವತಾರವೆಂದೂ ತನಗೆ ೫ ಲಕ್ಷಕ್ಕೆ ಮೇಲ್ಪಟ್ಟು ಅನುಯಾಯಿಗಳಿರುವರೆಂದೂ ಆದ್ದರಿಂದ ತನ್ನ ಶಿಕ್ಷೆಯನ್ನು ಕಳೆಯಲು ತನ್ನನ್ನು ಬೇರೆ ಜೈಲಿಗೆ ಕಳುಹಿಸಿ ವಿಶೇಷ ರೀತಿಯಲ್ಲಿ ವಿಚಾರಣೆಗೆ ಗುರಿಪಡಿಸಬೇಕೆಂದೂ ಹೈದರಾಬಾದಿನ ನ್ಯಾಯಾಲಯದ ಮುಂದೆ ಪ್ರಾರ್ಥಿಸಿಕೊಂಡನು ನ್ಯಾಯಾಧೀಶರು ಅದಕ್ಕೆ ಅನುಮತಿಯಿತ್ತಿಲ್ಲ

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

— o —

ಟ್ರಸ್ಟ್ ಸಮಿತಿಯವರಿಂದ ವಾಣಿವಿಲಾಸ ಮೊಹಲ್ಲಾ ಜಯಲಕ್ಷ್ಮೀಪುರಂ ಕಾಳಿದಾಸ ರೋಡಿನಲ್ಲಿ 4ನೇ ಬ್ಲಾಕು 38ನೇ ನಂಬರ್ ಮತ್ತು ಪ್ರಿನ್ಸೆಸ್ ರೋಡಿನಲ್ಲಿ 4ನೇ ಬ್ಲಾಕು 11/A 11/B, 11/C ಸೈಟುಗಳ ತಾರೀಖು 23-7-1950ನೇ ಭಾನುವಾರ ದಿವ 9 ಗಂಟೆ ಬೆಳಗಾಯ್ತು ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ) ಪಿ. ಗೋಪಾಲಕೃಷ್ಣ ಶೆಟ್ಟಿ,
ಅಧ್ಯಕ್ಷರು

ಉತ್ತರ ಕೊರಿಯನ್ನರ ಕಡೆ ೮ ಸಾವಿರ ಸಾವು ನೋವು

ಕೊರಿಯದಲ್ಲಿ ಉತ್ತರ ಕೊರಿಯನ್ನರ ಕಡೆ ೮ ಸಾವಿರ ಸಾವು ನೋವುಗಳಾಗಿರುವುದಾಗಿ ಅಮೆರಿಕದ ರಕ್ಷಣಾ ಇಲಾಖೆಯ ಪ್ರಚಾರ ಶಾಖೆ ಕಳೆದ ೧೫ನೇ ತಾರೀಖಿನವರೆಗೆ ಲೆಕ್ಕ ಹಾಕಿದ ಅಂಶಗಳ ಪ್ರಕಾರ ಮೇಲ್ಕಂಡಂತೆ ಸಾವು ನೋವುಗಳ ಸಂಖ್ಯೆಯಾಗುವುದು

ಚುನಾವಣೆ ಬಗ್ಗೆ ಮಹಾಸಭೆಯ “ಸಂಯುಕ್ತ” ಯತ್ನ

ಬರುವ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಒಪ್ಪಿಗೆಯಾಗುವ ಕಾರ್ಯಕ್ರಮಗಳ ಗುರಿಯನ್ನಿಟ್ಟು ಎಲ್ಲ ಪಕ್ಷಗಳನ್ನೂ ಸೇರಿಸಿಕೊಂಡು ಸ್ಪರ್ಧೆ ನಡೆಸಲು ಹಿಂದೂ ಮಹಾಸಭೆಯು ಏರ್ಪಾಡು ಮಾಡುತ್ತಿರುವುದಾಗಿ ವರದಿಯಾಗಿದೆ

ಅತಿ ವೃಷ್ಟಿಯಿಂದ ೭ ಸಾವಿರ ಜನರಿಗೆ ಆಶ್ರಯವಿಲ್ಲ

ಸೌರಾಷ್ಟ್ರಕ್ಕೆ ಸೇರಿರುವ ರಾಜಕೋಟೆ ಮತ್ತು ಭೂಜ್ ಪ್ರದೇಶಗಳಲ್ಲಿ ವಿಪರೀತ ಮಳೆಯಾಗಿ ಸುಮಾರು ೭ ಸಾವಿರ ಜನರಿಗೆ ಆಶ್ರಯವಿಲ್ಲದಂತಾಗಿದೆ ... ದಿನದಲ್ಲಿ ... ಮಳೆ ಆಗಿದೆ ೩೦೦ ಮನೆಗಳು ಕುಸಿದಿವೆ ಸಹಾಯಕ್ಕಾಗಿ ೫ ಲಕ್ಷ ರೂ ಗಳನ್ನು ಕಚ್ಛ ಸರ್ಕಾರದವರು ಒದಗಿಸಿರುತ್ತಾರೆ

ಚೀಣಾ ಮತ್ತು ಭಾರತಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾನ

ಭದ್ರತಾ ಸಮಿತಿಯಲ್ಲಿ ಖಾಯಂ ಸ್ಥಾನಗಳನ್ನು ಭಾರತ ಮತ್ತು ಕಮ್ಯೂನಿಸ್ಟ್ ಚೀಣಗಳಿಗೆ ಕೊಡಬೇಕೆಂದು ಪ್ರಧಾನಿ ನೆಹರೂರವರು ಅಮೆರಿಕಾ, ರಷ್ಯ ಮತ್ತು ಬ್ರಿಟನ್ನುಗಳಿಗೆ ತಿಳಿಸಿರುವುದಾಗಿ ಗೊತ್ತಾಗಿದೆ

ಭರತ ರಾಜಸಿಂಗರು ಮೈಸೂರು ಉಪಾಧ್ಯಾಯರ ಪ್ರತಿನಿಧಿ

ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಗೆ ಮೈಸೂರು ವಿಶ್ವ ವಿದ್ಯಾಲಯದ ಉಪಾಧ್ಯಾಯರ ಪರವಾಗಿ ಶ್ರೀ ಎಂ ಎ ಭರತ ರಾಜ ಸಿಂಗರವರನ್ನು ಪ್ರತಿನಿಧಿಯನ್ನಾಗಿ ನೇಮಿಸಲಾಗಿದೆ,

ಕೆಂಪು ಚೀಣಾ ವಿರುದ್ಧ ಪ್ರಚಾರಕ್ಕಾಗಿ ಅಗಾಧವೆಚ್ಚ

ಮಾರ್ಷಲ್ ಚಿಯಾಂಗ್ ಕೈಷೇಕರವರು ಅಮೆರಿಕಾ ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ಲಾಬಿಯಲ್ಲಿ ತಮ್ಮ ಪರವಾಗಿ ಖಾಯಂ ಆದ ಏಜೆಂಟರನ್ನು ನೇಮಿಸಿ ಅಲ್ಲಿ ಕಮ್ಯೂನಿಸ್ಟ್ ಚೀಣದ ವಿರುದ್ಧವಾಗಿ ಪ್ರಚಾರ ನಡೆಸಲು ಅವರಿಗೆ ಪ್ರತಿ ವರ್ಷವೂ ಸಿಬ್ಬಂದಿ ವೆಚ್ಚವಲ್ಲದೆ ೨೦ ಸಾವಿರ ಪೌಂಡುಗಳನ್ನು ಕೊಡುತ್ತಿರುವರೆಂದು ಹೇಳಲಾಗಿದೆ

ಪಂಚ ವಾರ್ಷಿಕ ಯೋಜನೆ ಬಗ್ಗೆ ಮುಖ್ಯ ಮಂತ್ರಿಗಳ ಸಭೆ

ಕೇಂದ್ರ ಯೋಜನಾ ಸಮಿತಿಯವರಿಂದ ತಯಾರಾಗಿರುವ ಕೈಗಾರಿಕೆ ಮತ್ತು ಪಂಚ ವಾರ್ಷಿಕ ಯೋಜನೆಗಳ ಪರಿಶೀಲನೆ ಬಗ್ಗೆ ಅಗತ್ಯ ನಿರ್ಧಾರ ಕೈಗೊಳ್ಳಲು ಬರುವ ತಿಂಗಳು ಮೊದಲನೇ ವಾರ ದೆಹಲಿಯಲ್ಲಿ ಮುಖ್ಯ ಮಂತ್ರಿಗಳ ಸಭೆ ನಡೆಯುವುದೆಂದು ತಿಳಿದುಬಂದಿದೆ

ಪೌರಸಭೆಗಳ ಸುಂಕದ ಬಾಬನ್ನು ವಜಾ ಮಾಡಬಾರದು

ಪೌರಸಭೆಗಳು ವಸೂಲು ಮಾಡುತ್ತಿರುವ ಸುಂಕವನ್ನು ವಜಾ ಮಾಡುವ ಪ್ರಶ್ನೆಯು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ ಪೌರಸಭೆಗಳಿಗೆ ಮುಖ್ಯ ವರಮಾನವು ಈ ಬಾಬಿನಿಂದಲೇ ಬರುತ್ತಿರುವ ವಿಷಯವು ಸಕಲರಿಗೂ ಗೊತ್ತಿದೆ ಆಸ್ತಿಗಳ ಮೇಲಿನ ತೆರಿಗೆಗಳನ್ನು ದ್ವಿಗುಣ ಅಥವಾ ತ್ರಿಗುಣವಾಗಿ ಹೆಚ್ಚಿಸಿದರೂ ಸಹ, ಸುಂಕದ ಮೂಲಕ ಬರುವ ಆದಾಯಕ್ಕೆ ಸಾಟಿಯಾಗಲಾರದು ತೆರಿಗೆಯು ಪ್ರತ್ಯಕ್ಷ ರೂಪದ್ದಾಗಿದ್ದು ಪೌರರಿಗೆ ಹೊರೆಯಂತೆ ಕಾಣುತ್ತದೆ ಸುಂಕವು ಹಾಗಲ್ಲ ಮಾರಾಟದ ಸರಕುಗಳ ಬೆಲೆಯ ಭಾಗಾಂಶದಲ್ಲಿ ಅದು ಸೇರಿರುವುದರಿಂದ ಜನರಿಗೆ ಅದು ನೇರವಾಗಿ ಬಾಧಿಸುವುದಿಲ್ಲ ಪೌರಸಭೆಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಆಸ್ತಿಗಳ ತೆರಿಗೆಗಳಿಂದ ಸಾಧ್ಯವಾಗುವುದಿಲ್ಲ ಆದ್ದರಿಂದ ಸುಂಕದ ಬಾಬನ್ನು ವಜಾ ಮಾಡಕೂಡದು - ಎಂದು ಗುಂಡ್ಲುಪೇಟೆಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಹೆಚ್ ಎಸ್ ರಾಮಣ್ಣನವರು ಬರೆದಿದ್ದಾರೆ

ಉಪವಾಸದಲ್ಲಿ ಹೊಸ ರಿಕಾರ್ಡ್ ಸ್ಥಾಪನೆ

ಕಳೆದ ಜೂನ್ ತಿಂಗಳಲ್ಲಿ ವಿಲ್ಲಿ ಸ್ಮಿತ್ ಎಂಬ ಅಮೆರಿಕನು ೫೦ ದಿನಗಳ ಉಪವಾಸವನ್ನು ಮಾಡಿ ರಿಕಾರ್ಡ್ ಸ್ಥಾಪಿಸಿದ್ದನು. ಇತ್ತೀಚೆಗೆ ಫ್ರಾನ್ಸಿನಲ್ಲಿ ಫಕೀರ್ ಬರ್ಮನ್ ಎಂಬ ಭಾರತೀಯ ವೈದ್ಯಶಾಸ್ತ್ರ ವಿದ್ಯಾರ್ಥಿಯು ೫೩ ದಿನಗಳ ಉಪವಾಸ ಮಾಡಿ ವಿಲ್ಲಿ ಸ್ಮಿತ್‌ನಿಗಿಂತ ಒಂದು ಗಂಟೆ ಕಾಲ ಹೆಚ್ಚಾಗಿ ಉಪವಾಸ ಮಾಡಿದ ರಿಕಾರ್ಡ್ ಸ್ಥಾಪಿಸಿರುವುದಾಗಿ ವರದಿಯಾಗಿದೆ ಫಕೀರ್ ಬರ್ಮನು ಒಂದು ಗಾಜಿನ ಪಂಜರದೊಳಗಿದ್ದುಕೊಂಡು ಅನೇಕ ವಿಧದ ಸರ್ಪಗಳನ್ನು ತನ್ನ ಜೊತೆ ಇಟ್ಟುಕೊಂಡಿದ್ದನೆಂದೂ, ಅವುಗಳಲ್ಲಿ ಅನೇಕವು ಸತ್ತುಹೋಗಿ ಹೊಸ ಹಾವುಗಳನ್ನು ತಂದಿಡಬೇಕಾಗುತ್ತಿತ್ತೆಂದೂ ಹೇಳಲಾಗಿದೆ ಅವನು ಉಪವಾಸಕಾಲದಲ್ಲಿ ಒಟ್ಟು ೭೫೦ ಸಿಗರೇಟುಗಳನ್ನು ಸೇದಿ ಮತ್ತು ದಿನಕ್ಕೆ ಸುಮಾರು ಚಾರಿ ಗ್ಯಾಲನ್ನು ನೀರು ಕುಡಿಯುತ್ತಿದ್ದನು. ಉಪವಾಸ ಮುಕ್ತಾಯವಾಗುವ ವೇಳೆಗೆ ಅವನು ಬಹಳ ಕೃಶನಾಗಿ ನಿಶ್ಶಕ್ತನಾಗಿ ಮಲಗಿದ್ದು ಕೇಳಿಯೋ ಕೇಳುತ್ತಿದ್ದನು.

ಪುರಾತನ ಶಿಲಾ ನಗರದ ಪತ್ತೆ ಪ್ರಯತ್ನ

ದಕ್ಷಿಣ ಆಫ್ರಿಕದ ಕಲಹರಿ ಮರುಭೂಮಿಯಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಇದ್ದಿತೆಂದು ಹೇಳಲಾದ ಸುಂದರ ಕಲಾಕೃತಿಯಿಂದ ಕೂಡಿದ ಒಂದು ಶಿಲಾ ನಗರವನ್ನು ಕಂಡುಹಿಡಿಯಲು ಇತ್ತೀಚೆಗೆ ಸಂಶೋಧನೆ ಪ್ರಯತ್ನಗಳು ನಡೆಯುತ್ತಿವೆ ಅಲ್ಲಿ ಅನೇಕ ಸುಂದರ ವಿಗ್ರಹಗಳೂ ಇದ್ದುವೆಂದು ಹೇಳಲಾಗಿದೆ

ಹರಿಕಥೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೯ ಗಂಟೆಗೆ ಭಾಗವತ ಕಾಲಕ್ಷೇಪದ ಅಂಗವಾಗಿ ರುಕ್ಮಿಣಿ “ಕಲ್ಯಾಣ” ಎಂಬ ಹರಿಕಥೆಯು ಬ್ರಂ॥ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ ನಡೆಯುವುದು

ರಸಿಕರಿಗೆ ಅಚ್ಚುಮೆಚ್ಚಾದುವು

ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ-ಹಾಗೂ ಸುರುಚಿ.

ಮೈಸೂರು ರೇಷ್ಮೆ — ಸಮಾಜದಲ್ಲಿ ಮೇಲ್ಮೆಯ ಕುರುಹು, ಮುಕ್ತಾಂಜಲಿಯಲ್ಲಿ ಅನುಪಮವಾದುದು

ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನಸೆಳೆವ ಮಾದರಿಗಳು
ಇಂದಿನ ಅಂದದ ರಂಗುಗಳು.

ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು.

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6
ವ್ಯಾಪಾರಸ್ಥರಿಗೆ ಭಾರೀ ಕಮಿಷನ್ ಕೊಡಲಾಗುವುದು

ರಮಣಿ ಟ್ರೇಡಿಂಗ್ ಕಂಪೆನಿ,
೧೧೫/೩, ಕೃಷ್ಣಮೂರ್ತಿಪುರಂ,
ಮೈಸೂರು

ಏಕ ಪ್ರತಿನಿಧಿಗಳು:-
ಎಸ್. ವಿ. ಕೆ. ಸ್ವಾಮಿ,
೨೪೬ ಹಿಮ್ಮತ್ ರೋಡ್, ಮೈಸೂರು.

Edited, printed and published by A. R Nagarajan, at Sadhvi Press, D Subbiah Road, Mysore

ಕ್ರೋಢಶಂ 798 "ವಂದೇ ಮಾತರಂ" ಬಿಡಿಪ್ರತಿ ೩ ಕಾಸು

ಸಾಧ್ವಿ

ಸಂಪುಟ ೮] ಮಂಗಳವಾರ ೧೮-೭-೫೦ [ಸಂಚಿಕೆ ...

ನೆಹರೂ ಸೂಚನೆಗೆ ಅಮೆರಿಕದ ಷರತ್ತು

ನೆಹರೂರವರ ಶಾಂತಿ ಪ್ರಯತ್ನಕ್ಕೆ ಸ್ಟ್ಯಾಲಿನ್ನರ ಸ್ವಾಗತ

ರಷ್ಯದ ಮಾರ್ಷಲ್ ಸ್ಟ್ಯಾಲಿನ್ನರು ಭಾರತದ ಪ್ರಧಾನಿ ನೆಹರೂರವರ ಶಾಂತಿ ಸ್ಥಾಪನಾ ಪ್ರಯತ್ನವನ್ನು ಸ್ವಾಗತಿಸಿ ಮಾತಿ ಉತ್ತರ ಬರೆದಿದ್ದಾರೆ. ಕೊರಿಯಾ ಸಮಸ್ಯೆ ಪರಿಹಾರಕ್ಕೆ ಚೀನಾದ ಜನತಾ ಪ್ರಜಾ ಸರ್ಕಾರದ ಪ್ರತಿನಿಧಿಯುಳ್ಳ ಐಕ್ಯ ರಾಷ್ಟ್ರಗಳ ಸಮ್ಮೇಳನವು ನಡೆಯುವುದಾದರೆ ಅಂಶದಲ್ಲಿ ಭಾಗವಹಿಸಲು ರಷ್ಯವು ಸಿದ್ಧವಿರುವುದೆಂದು ಅವರು ತಿಳಿಸಿದ್ದಾರೆ. ಈ ಸಮಸ್ಯೆಯು ಶೀಘ್ರದಲ್ಲಿ ಪರಿಹಾರವಾಗಬೇಕಾದರೆ ಕೊರಿಯಾದ ಪ್ರಜೆಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ಅವಶ್ಯಕವೆಂದು ಅವರು ತಿಳಿಸಿರುವರು

ಕೊರಿಯಾ ಯುದ್ಧದಲ್ಲಿ ಅಮೆರಿಕ ಏಕಾಂಗಿಯಾಗಿದೆ

ಕೊರಿಯಾದ ರಣರಂಗದಲ್ಲಿ ಅಮೆರಿಕದ ಸೈನ್ಯವು ಕ್ರಮಕ್ರಮವಾಗಿ ಹಿಮ್ಮೆಟ್ಟುತ್ತಿದೆ. ವಿಶ್ವ ಸಂಸ್ಥೆಯ ೫೩ ರಾಷ್ಟ್ರಗಳು ಈ ಯುದ್ಧಕ್ಕೆ ಬೆಂಬಲವಿತ್ತರೂ ಸೈನ್ಯ, ಸೇನೆಗಳನ್ನು ಕಳುಹಿಸಲು ಅವಕ್ಕೆ ಸಾಮರ್ಥ್ಯವಿಲ್ಲ. ಆದುದರಿಂದ ಅಮೆರಿಕಾವು ಏಕಾಂಗಿಯಾಗಿ ಹೋರಾಟ ನಡೆಸಬೇಕಾಗಿದೆಯೆಂದು ಹೊಸ ಡೆಲ್ಲಿಯ ವಾರ್ತಾ ಸಂಸ್ಥೆಯು ತಿಳಿಸುತ್ತದೆ

ದಕ್ಷಿಣ ಕೊರಿಯನ್ನರ ದಿಟ್ಟತನದ ಹೋರಾಟ

ನಿನ್ನೆ ಮಧ್ಯಾಹ್ನದಿಂದ ಈಚೆಗೆ ದಕ್ಷಿಣ ಕೊರಿಯಾದ ಸೈನ್ಯಗಳು ಅಮೆರಿಕದ ವಿಮಾನಗಳ ಸಹಾಯದಿಂದ ಉತ್ತರದವರನ್ನು ಬಹು ದಿಟ್ಟತನದಿಂದ ಎದುರಿಸಿ ಹಿಮ್ಮೆಟ್ಟಿಸುತ್ತಿರುವುದಾಗಿಯೂ, ಇದು ಆಶ್ಚರ್ಯಕರವಾದ ಯುದ್ಧದಿಂದಲೂ ಹೇಳಲಾಗಿದೆ

ನೆಹರೂರವರ ರಾಜಿ ಸಲಹೆಗೆ ಏಚಿಸನ್ನರ ಷರತ್ತು

ಕೊರಿಯಾ ಬಿಕ್ಕಟ್ಟಿನ ಮೂಲ ಅಂಶದ ಬಗ್ಗೆ ಪಡೆಕಟ್ಟಬೇಕಾದ ಯಾವ ರಾಜಿ ಸಂಧಾನದಿಂದಲಾದರೂ ಅಕ್ರಮಣಕಾರರನ್ನು ಸಂತೃಪ್ತಿಗೊಳಿಸಿದಂತಾಗಿ, ವಿಶ್ವದ ಇತರ ಕಡೆಗಳಲ್ಲಿ ಕಮ್ಯೂನಿಸ್ಟ್ ದಾಳಿಗೆ ಅವಕಾಶ ಕೊಟ್ಟಂತಾಗುವುದೆಂದು ಅಮೆರಿಕದ ಸೆಕ್ರೆಟರಿ ಆಫ್ ಸ್ಟೇಟ್ ಏಚಿಸನ್ನರು ಭಾವಿಸಿರುವುದಾಗಿ ಹೇಳಲಾಗಿದೆ. ಆದುದರಿಂದ ಅವರು ಕೊರಿಯದಿಂದ ಕಮ್ಯೂನಿಸ್ಟ್ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ಷರತ್ತನ್ನು ವಿಧಿಸಿ ಪಂಡಿತ ನೆಹರೂರವರ ಶಾಂತಿ ಸಲಹೆಗೆ ಪ್ರತಿಕ್ರಿಯೆ ಉತ್ತರ ಕೊಡಬಹುದೆಂದು ಊಹಿಸಲಾಗಿದೆ

ಮಹಾರಾಜ ಸಂಸ್ಕೃತ ಕಾಲೇಜಿನ ಸಮಿತಿ

ಮಹಾರಾಜರು ಶ್ರೀಮನ್ಮಹಾರಾಜರ ಸಂಸ್ಕೃತ ಕಾಲೇಜಿನ ಆಡಳಿತ ಸಮಿತಿಯನ್ನು ಸರ್ಕಾರದವರು ಪುನರ್ರಚಿಸಿದ್ದಾರೆ. ಸಮಿತಿಗೆ ಮಹಾರಾಜ ಸೆಕ್ರೆಟರಿ, ಶ್ರೀ ಜೆ. ಎಚ್. ಪಾಟೀಲರು ಅಧ್ಯಕ್ಷರಾಗಿ, ವಿ. ಪಿ. ಶ್ರೀಗಳವರ ಸಿ. ಆರ್. ನರಸಿಂಹ ಶಾಸ್ತ್ರಿ, ಮುಜರಾಯಿ ಕಮಿಷನರ್, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಬೆಂಗಳೂರಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು, ರಾವ್ ಬಹದ್ದೂರ್ ಎಂ. ರಾಮಸ್ವಾಮಿ, ಪಿ. ಗೋಪಾಲಕೃಷ್ಣ ಶೆಟ್ಟರು ಮತ್ತು ಇತರ ಸದಸ್ಯರುಗಳು ಸದಸ್ಯರಾಗಿರುವರು

ಅಕ್ಕಿ ಬೆಲೆ ಹೆಚ್ಚಿಸುವುದು ನ್ಯಾಯವಲ್ಲ

ಶ್ರೀ ಎಂ. ಆರ್. ಸಿ. ಬಸಪ್ಪನವರು ಹೇಳಿಕೆಯೊಂದನ್ನು ಕೊಟ್ಟು ಈ ರೀತಿ ತಿಳಿಸಿದ್ದಾರೆ

ಮೈಸೂರಿನಲ್ಲಿ ೧೯೪೭ ರಿಂದ ಈಚೆಗೆ ಪದಾರ್ಥಗಳ ಬೆಲೆಯು ಒಂದೇ ಸಮನಾಗಿ ಏರುತ್ತಿದೆ. ಹಿಂದೆ ಇದ್ದ ದೇಸಾಯಿ ಸರ್ಕಾರದ ಕಾಲದಲ್ಲಿ ಭತ್ತ, ಅಕ್ಕಿ ... ರೂ ನಿಂದ ... ರೂ ಗಳಿಗೆ ಇದ್ದ ಬೆಲೆಯು ಈಗ ... ರೂ ಗಳಿಗೆ ಏರಿದೆ. ... ಮುಂದಿನ ಕಾಲ ... ಹುಣಿಸೆ ಹಣ್ಣಿನ ಬೆಲೆ ... ಸೆಪ್ಟೆಂಬರ ವೇಳೆಯವರೆಗೂ ... ಇದ್ದುದು ಈಗ ... ಆಗಿದೆ. ... ಪದಾರ್ಥಗಳ ಬೆಲೆಯು ಒಂದಕ್ಕೆ ಹತ್ತರಷ್ಟು ಏರುತ್ತಿರುವುದರಿಂದ ಬಡ ಜನರು, ಕೂಲಿಯವರು ಮತ್ತು ರೈತರು ಜೀವನ ನಡೆಸಲು ಅತ್ಯಂತ ಕಷ್ಟವಾಗುತ್ತಿದೆ. ಆಹಾರ ಧಾನ್ಯಗಳ ಮೇಲೆ ಬೆಲೆ ಏರುವುದಕ್ಕೆ ಸರ್ಕಾರವೇ ಮುಖ್ಯ ಕಾರಣ. ... ಬೆಲೆಯಾಗಿ ... ಈ ರೂ ... ಇಂದು ... ಕೊಡುವುದಾಗಿ ... ಸರ್ಕಾರದವರು ... ಧಾನ್ಯವನ್ನು ... ಬೆಲೆಗೆ ಮಾರಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚಾದರೂ ಆಗಲಿ, ಅದ ... ಸಮಸ್ಯೆಯನ್ನು ಸರಿಯಾದ ಆಹಾರದ ಬೆಲೆಗ ... ಗಮನಿಸಬೇಕು.

ವಿಶ್ವಸಂಸ್ಥೆಯನ್ನು ಭಾರತವು ಬಹಿಷ್ಕರಿಸಲಿ

ಹಿಂದೂ ಮಹಾ ಸಭೆಯ ನಿರ್ಣಯ

ಉತ್ತರ ಕೊರಿಯಾವು ದಕ್ಷಿಣ ಕೊರಿಯದ ಮೇಲೆ ಆಕ್ರಮಣ ನಡೆಸಿತೆಂದು ಸಾರುತ್ತಿರುವ ವಿಶ್ವ ಸಂಸ್ಥೆಯು ಹಿಂದೆ ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದಾಗ ಇದೇ ರೀತಿ ಕ್ರಮವನ್ನು ಕೈಗೊಳ್ಳದಿರುವುದನ್ನು ಈ ಪ್ರಾದೇಶಿಕ ಹಿಂದೂ ಮಹಾ ಸಭೆಯ ಕಾರ್ಯಕಾರಿ ಸಮಿತಿಯು ಖಂಡಿಸಿದೆ. ಈ ಕಾರಣದಿಂದ ಭಾರತವು ಕೊರಿಯದ ಬಗ್ಗೆ ವಿಶ್ವಸಂಸ್ಥೆಯು ನಿರ್ಣಯಕ್ಕೆ ಬೆಂಬಲವೀಯಬಾರದೆಂದೂ, ವಿಶ್ವ ಸಂಸ್ಥೆಯಿಂದ ಭಾರತವು ಹೊರಗೆ ಬರಬೇಕೆಂದೂ ನೆನ್ನೆ ನಡೆದ ಸಭೆಯ ನಿರ್ಣಯ ಮಾಡಲಾಯಿತು

ಕಾಶ್ಮೀರದಲ್ಲಿ ಭಾರಿ ವಿಮಾನ ಅಪಘಾತ

ನೆನ್ನೆ ಬೆಳಿಗ್ಗೆ ಜೆಹಲಿಯಿಂದ ಶ್ರೀನಗರಕ್ಕೆ ಹೊರಟಿದ್ದ ವಿಮಾನವೊಂದು ಬನಿಹಾಲ್ ಕೋಟೆಯ ಬಳಿ ಅಪಘಾತಕ್ಕೀಡಾಗಿ ಅದರೊಳಗಿದ್ದ ೧೮ ಮಂದಿ ಪ್ರಯಾಣಿಕರು ಮತ್ತು ನಾಲ್ಕು ಮಂದಿ ವಿಮಾನದ ಸಿಬ್ಬಂದಿಯವರೂ ಮೃತಪಟ್ಟಿರುವರು. ಮೃತರಾದವರಲ್ಲಿ ಭಾರತದಲ್ಲಿ ಅಮೆರಿಕಾ ರಾಯಭಾರಿ, ಸಂಯುಕ್ತ ರಾಷ್ಟ್ರ ಪರಿಷತ್ತಿನ ಕಾಶ್ಮೀರ ಸಮಸ್ಯಾ ಪರಿಹಾರದ ಮುಖ್ಯರು ಸೇರಿದ್ದರು ಮತ್ತು ಪ್ರಧಾನಿ ಪಂಡಿತ ನೆಹರೂರವರ ಪ್ರಧಾನ ಆಪ್ತ ಕಾರ್ಯದರ್ಶಿ ಶ್ರೀ ದ್ವಾರಕಾನಾಥ ಮುಖ್ಯರವರೂ ಇದ್ದರೆಂದು ಗೊತ್ತಾಗಿದೆ

ಕನ್ನಂಬಾಡಿ ನೀರಿನ ಮಟ್ಟ ಸ್ವಲ್ಪ ಇಳಿಯಿತು

ಕೃಷ್ಣರಾಜ ಸಾಗರದ ನೀರಿನ ಮಟ್ಟವು ಈ ದಿನ ಸ್ವಲ್ಪ ಇಳಿದು ೭೫-೩೪ ಅಡಿ ಗಳಷ್ಟಿದೆ

ಗೋಪಾಲರಾವ್ ಸಮಿತಿಯವರಿಗೆ ಮೊ ೧ ತ ನ್

ಗೋಪಾಲರಾವ್ ವಿಚಾರಣಾ ಸಮಿತಿಯಲ್ಲಿ ಕೆಲಸ ಮಾಡಿದ ಸರ್ಕಾರಿ ಅಧಿಕಾರಿಗಳು ಮತ್ತು ಕೌಳಕರುಗಳಿಗೆ ನಾಲ್ಕು ತಿಂಗಳ ಸಂಬಳವನ್ನು ಬೋನಸ್ಸನ್ನು ಕೊಡಲು ಸರ್ಕಾರದವರು ಅನುಮೋದಿಸುವುದಾಗಿ ಗೊತ್ತಾಗಿದೆ

ರಾಜೇಂದ್ರ ಸಿಂಹಜಿಯವರ ಆಗಮನ

ಸ್ವಂ ವ. ಪ್ರೋ.] ಬೆಂಗಳೂರು ೧೮

ದಕ್ಷಿಣ ಭಾರತ ಸೈನ್ಯಗಳ ನಾಯಕರಾದ ಜನರಲ್ ರಾಜೇಂದ್ರ ಸಿಂಹಜಿಯವರು ಇದೇ ೨೨ನೇ ತಾರೀಖು ಇಲ್ಲಿಗೆ ಬಂದು ಸೈನ್ಯಗಳ ಪರಿಶೀಲನೆ ನಡೆಸಿ ಕಮ್ಯಾಂಡ ಸ್ಟೇಷನ್ ಮುಖಾಮುಖದವರನ್ನು ಭೇಟಿ ಮಾಡಿ, ಹಿಂದಿರುಗಿ ತೆರಳುವರು

೨೫ ಸಾವಿರ ಟೆಲಿಫೋನ್ ಯಂತ್ರ ಗಳ ಹೋಲಿಕೆ

ದಕ್ಷಿಣ ಟೆಲಿಫೋನ್ ಕಾರಖಾನೆ ಈ ವರ್ಷದಲ್ಲಿ ಇರುವರೆಗೆ ೨೫ ಸಾವಿರ ಟೆಲಿಫೋನ್ ಯಂತ್ರಗಳ ಜೋಡಣೆಯಾಗಿ ರವಾನಿಸಿದೆ. ಇದೀಗ ೩ ಸಾವಿರ ಫೋನುಗಳನ್ನು ಸಿದ್ಧಗೊಳಿಸ ಬೇಕೆಂದು ಸೂಚಿಸಲ್ಪಟ್ಟಿರ, ೩ ಸಾವಿರ ಯಂತ್ರಗಳನ್ನು ಜೋಡಿಸುವ ಅವಕಾಶವಿದೆ

ಪೊಲೀಸ್ ಅಧಿಕಾರಿಯ ಕಾನ್ಫರೆನ್ಸ್ ಮುಂದಿನ

ಸಂಸ್ಥಾನದಲ್ಲಿ ಪೊಲೀಸ್ ಅಧಿಕಾರಿಯು ಇನ್ಸ್‌ಪೆಕ್ಟರ್ ಜನರಲ್‌ರವರ ಜೊತೆಗೆ ೩ ಜಿಲ್ಲೆಗಳ ಪೊಲೀಸ್ ಸೂಪರಿಂಟೆಂಡೆಂಟ್ ಡಿ.ಎಸ್.ಪಿ.ಗಳವರು ರಿಜಾದ ಮೇಲೆ ಇರುವುದರಿಂದ, ಅವುಗಳನ್ನು ಭರ್ತಿ ಮಾಡಲು ಇರುವುದಿಲ್ಲವೆಂದೂ ಇರಾದೆಯ ಕೆಲಸಗಳನ್ನು ಆಡಳಿತಕ್ಕೆ ಹಂಚಲಾಗಿದೆಯೆಂದೂ ತಿಳಿಸಲಾಗಿದೆ. ಶ್ರೀ ಆರ್. ಮುತ್ತಣ್ಣರಾವ್ ಸಿಂಧ್ಯರವರು ನೆನ್ನೆ ದಿನದಲ್ಲಿ ಮತ್ತು ಮೈಸೂರು ಡಿವಿಜನ್ನಿನ ಡಿ. ಐ. ಜಿ. ಯವರಾಗಿ ಅಧಿಕಾರವಹಿಸಿಕೊಂಡರು. ಅವರು ಕೈಲ್ಗೆ ಪೋಲೀಸು, ಮೈಸೂರು, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಮೇಲ್ವಿಚಾರಣೆಯುಳ್ಳವರು

ಆಹಾರೋತ್ಪತ್ತಿಗೆ ೩ ಪ್ರದೇಶಗಳ ರಚನೆ

ಮೈಸೂರು ೧೮

೧೧ ಕೋಟಿ ರೂ.ಗಳ ವೆಚ್ಚದಲ್ಲಿ ಸಂಸ್ಥಾನದ ಆಹಾರೋತ್ಪತ್ತಿ ಯೋಜನೆ ಸಂಬಂಧವಾಗಿ ಸಂಸ್ಥಾನವನ್ನು ೩ ಪ್ರದೇಶಗಳಾಗಿ ವಿಂಗಡಿಸಿ, ಪ್ರತಿಯೊಂದರಲ್ಲೂ ೧ ಅಸ್ಪತ್ರೆ ಅಧಿಕಾರಿ ನೇಮಕವಾಗುವರೆಂದೂ ನಿರ್ಣಯ ವಹಿಸುವ ಆಲೋಚನೆಯು ಸರ್ಕಾರದವರಲ್ಲಿರುತ್ತದೆ. ನೀರಾವರಿ, ಪ್ರಕೃತ, ಕಾಲೇಜಿಯ ಉತ್ತರ ಮತ್ತು ದಕ್ಷಿಣ ಭಾಗಗಳು ಮತ್ತು ಇತರ ಪ್ರದೇಶಗಳೆಂದು ಮೂರು ವಿಧವಾಗಿ ವಿಂಗಡಿಸಲಾಗುವುದೆಂದು ಹೇಳಲಾಗಿದೆ

ಜೇನುಸಾಕಣೆಗೆ ಅಂಚೆ ಶಿಕ್ಷಣ ಹೊಸ ಬಗ್ಗೆ ಶಿಕ್ಷಣ ಕೊಡುವ

ಬೆಂಗಳೂರಿನ ಕೃಷಿ ಕಾಲೇಜಿನ ತ ಜ್ಞಾನಿಗೆ ಕೌಲಂಡಿಯ ಅವಿಭಾಜ್ಯ ಅಧ್ಯಾಪಕರಾದ ಮಿ. ಎ. ಇ. ಅಬ್ದುಲ್ ಸಲೀಂ ರವರು ಜೇನು ಸಾಕಣೆ ಎಂಬ ವಿಷಯವನ್ನು ಅಂಚೆ ಮೂಲಕ ಕಲಿಸಲು ೧೫ ರೂ. ಗಳ ಅಂಚೆ ಶಿಕ್ಷಣ ಪ್ರಾರಂಭಿಸಿದ್ದಾರೆ. ... ಅವರಿಗೆ ಪಾಠಗಳನ್ನು ... ರೂ. ಗಳ ದಂಡವನ್ನು ... ಮಾಡಿ ... ಇತರ ... ಶಿಕ್ಷಣ ... ಮಾಡಲಾಗಿದೆ.

ಪ್ರಪಂಚ ಪರಿಸ್ಥಿತಿಯ ಬಗ್ಗೆ ನೆಹರೂರವರ ಹೇಳಿಕೆ

ಪ್ರಪಂಚದ ವರ್ತಮಾನ ಪರಿಸ್ಥಿತಿಯು ಯಾವ ರೀತಿಯಲ್ಲಿ ರೂಪುಗೊಳ್ಳುವುದೆಂಬುದನ್ನು ಹೇಳಲು ಸಾಧ್ಯವಿಲ್ಲ ಆದರಿಂದ ಪ್ರಪಂಚ ಯುದ್ಧವಾಗಬಹುದು, ಅಥವಾ ಒಪ್ಪಂದಕ್ಕೆ ಅವಕಾಶವಾಗಬಹುದು- ಎಂಬುದಾಗಿ ಪ್ರಧಾನಿ ನೆಹರೂರವರು ಅಖಿಲಭಾರತ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿರುವರು ಭಾರತವು ಪ್ರಪಂಚದ ಎರಡು ಗುಂಪುಗಳಿಂದಲೂ ದೂರವಿರಲು ಅಪೇಕ್ಷಿಸುವುದು ಆದರೆ ಅದು ಮಾತ್ರ ಅಂತರ ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಮೌನವನ್ನು ವಹಿಸಲು ಸಾಧ್ಯವಿಲ್ಲ ಪ್ರತಿಯೊಂದು ಪ್ರಶ್ನೆಯನ್ನೂ ಅದರ ಯೋಗ್ಯತೆಯ ಮೇಲೆ ಭಾರತವು ಇತ್ಯರ್ಥಮಾಡುವುದೆಂದು ಅವರು ಹೇಳಿರುವರು

ಆಹಾರ ಸಂಯಮದ ಬಗ್ಗೆ ದೆಹಲಿಯಲ್ಲಿ ನಿರ್ಬಂಧಗಳು

ಭಾರತದ ಹಲವು ಭಾಗಗಳಲ್ಲಿ ಆಹಾರ ಸ್ಥಿತಿಯು ಕಷ್ಟಕರವಾಗಿರುವುದರಿಂದ ಕೇಂದ್ರ ಆಹಾರ ಇಲಾಖೆಯವರು ಆಹಾರದ ಉಪಯೋಗದ ಬಗ್ಗೆ ಸಂಯಮ ಕ್ರಮಗಳನ್ನು ಕೈಕೊಂಡು ಹತ್ತು ಅಂಶಗಳ ವಿಧಿ ನಿಯಮಗಳನ್ನು ಜಾರಿಗೆ ತಂದಿದ್ದಾರೆ ... ಒಪ್ಪ ರಿಗಿಂತ ಹೆಚ್ಚು ಜನರಿಗೆ ... ಸ್ವಾಗತ ಔತಣವೀಯಕೂಡದ, ... ಸಮಾರಂಭ ಸಂಬಂಧವಾಗಿ ೫೦ಕ್ಕಿಂತ ಹೆಚ್ಚು ಜನರಿಗೆ ಆಮಂತ್ರಣ ಕೊಡದ, ಹೋಟೆಲುಗಳ ಮೇಲೆ ನಿಷೇಧವಿರುವುದು ಎರಡು ಹೊತ್ತಿಗಿಂತ ಊಟಮಾಡುವ ಹೋಟೆಲುಗಳಲ್ಲಿ ಅಕ್ಕಿ ಉಪಯೋಗಿಸಕೂಡದು, ಹೋಟೆಲುಗಳಲ್ಲಿ ೬ ಬಿಸ್ಕತ್ತುಗಳಿಗಿಂತ ಹೆಚ್ಚು ರೇಷನ್ ಪದಾರ್ಥವನ್ನು ಬಡಿಸಕೂಡದು, ಇದೇ ಮುಂತಾದ ಹತ್ತು ನಿಯಮಗಳನ್ನು ಜಾರಿಮಾಡಲಾಗಿದೆ

ಪ್ರತಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆ

ಸಂಯುಕ್ತ ಸಂಸ್ಥಾನಗಳ ಯೂನಿಯನ್ನಿನ ಹಲವು ಕಾಂಗ್ರೆಸ್ಸಿಗರು ಈಗ ಇರುವ ಅಧಿಕಾರಯುತ ಕಾಂಗ್ರೆಸ್ಸಿಗೆ ಪ್ರತಿಯಾಗಿ ಮತ್ತೊಂದನ್ನು ಸ್ಥಾಪಿಸಲು ನಿರ್ಧರಿಸಿರುವರು.

ಅಣುಬಾಂಬಿನ ಬಹಿಷ್ಕಾರಕ್ಕೆ ಕೋಟಿ ಜನರ ಮನವಿ

ಅಣು ಬಾಂಬನ್ನು ಬಹಿಷ್ಕರಿಸಬೇಕೆಂದು ಸ್ಟಾಕ್‌ಹೋಂ ನಗರದ ಜನರು ಮಾಡಿರುವ ಪ್ರಾರ್ಥನೆಗೆ ೧ ಕೋಟಿ ೩೦ ಲಕ್ಷ ಜನರು ಈಗಾಗಲೇ ರುಜು ಮಾಡಿರುವುದಾಗಿ ಹೇಳಲಾಗಿದೆ

ಟೈಜೋನ್ ನಗರ ಉತ್ತರ ಕೊರಿಯನ್ನರ ವಶ

ದಕ್ಷಿಣ ಕೊರಿಯದ ತಂಗಾಮಿ ರಾಜಧಾನಿಯಾಗಿದ್ದ ಟೈಜೋನ್ ನಗರವು ಮೊನ್ನೆ ಮುಖ್ಯಾಧ್ಯಕ್ಷ ದಳದವರಿಗೂ ಅಮೆರಿಕನ್ನರ ವಶದಲ್ಲಿತ್ತು ಸ್ವಲ್ಪ ಕಾಲ ನಂತರ ಉತ್ತರ ಕೊರಿಯನ್ನರು ಅಲ್ಲಿನ ರೈಲ್ವೆ ನಿಲ್ದಾಣ ಮತ್ತು ರಸ್ತೆಗಳನ್ನು ಆಕ್ರಮಿಸಿರುವುದಾಗಿ ವರದಿಯಾಗಿದೆ

ದಕ್ಷಿಣ ಮುಲಕ್ಕ ದಂಗೆ ಅಡಗಿಸಲು ಕಾದಾಟ

ದಕ್ಷಿಣ ಮುಲಕ್ಕ ರಿಪಬ್ಲಿಕ್ಕಿನ ಸ್ಥಾಪನೆ ಮಾಡಿ, ದಂಗೆಯೆದ್ದ ಜನರನ್ನು ಅಡಗಿಸಲು ಇಂಡೋನೇಷ್ಯವು ತನ್ನ ಸೈನ್ಯವನ್ನು ಅಂಬೋಯಿನ ಮೇಲೆ ಇಳಿಸಿದೆ ಈಗಾಗಲೇ ಸ್ಥಳೀಯರಿಗೂ ಇಂಡೋನೇಷ್ಯದ ಸೈನಿಕರಿಗೂ ಕಾದಾಟಗಳಾಗಿವೆ

ಸಿಯೋಲ್ ನಗರದ ಮೇಲೆ ಅಮೆರಿಕನ್ನರ ವಿಮಾನ ಧಾಳಿ

ದಕ್ಷಿಣ ಕೊರಿಯನ್ನರ ರಾಜಧಾನಿಯಾಗಿದ್ದ ಸಿಯೋಲ್ ನಗರದ ಸೈನಿಕ ಕೇಂದ್ರಗಳ ಮೇಲೆ ೫೦ ಅಮೆರಿಕನ್ ಸೂಪರ್ ವಿಮಾನಗಳು ಮೊನ್ನೆ ೪೦೦ ಟನ್ ಬಾಂಬುಗಳನ್ನು ಹಾಕಿವೆ ಎಲ್ಲ ವಿಮಾನಗಳೂ ಸುರಕ್ಷಿತವಾಗಿ ಹಿಂತಿರುಗಿವೆ

೧೩೦ ವರ್ಷದ ದಕ್ಷಿಣ ಆಫ್ರಿಕದ ಮುದುಕ

ದಕ್ಷಿಣ ಆಫ್ರಿಕದ ಪ್ರಮುಖ ನಗರವಾದ ಜೊಹಾನ್ಸ್ ಬರ್ಗನಲ್ಲಿ ಪೀಟರ್ ಬಾಂಡ್ಲೆ ಟಿಂಗ್ಲರ್ ಎಂಬ ವೃದ್ಧನು ಮೊನ್ನೆ ದಿನ ತನ್ನ ೧೩೦ನೇ ವರ್ಷದ ಜನ್ಮ ದಿನವನ್ನು ನೆರವೇರಿಸಿಕೊಂಡನು. ಆತನ ತಂದೆಯು ಸ್ಕಾಟ್ಲೆಂಡಿನಿಂದ ಬಂದು ಅಲ್ಲಿ ನೆಲೆಸಿದ್ದರು

ಭಾರತದ ವಿದೇಶ ವ್ಯವಹಾರಗಳಿಗಾಗಿ ಸಮಿತಿ

ಅಂತರರಾಷ್ಟ್ರೀಯ ಸ್ಥಿತಿಯ ಕುಟಿಲ ವಿದ್ಯಮಾನಗಳನ್ನು ಗಮನಿಸಿ ಪ್ರಧಾನಿ ನೆಹರೂರವರು ತಾವು, ಸರ್ದಾರ್ ಪಟೇಲ್, ರಾಜಾಜಿ ಮತ್ತು ಎನ್ ಗೋಪಾಲಸ್ವಾಮಿ ಅಯ್ಯಂಗಾರ್ಯರುಳ್ಳ ಮಂತ್ರಿಮಂಡಲದ ವಿದೇಶಾಂಗ ಉಪ ಸಮಿತಿಯನ್ನು ರಚಿಸಿದ್ದಾರೆ

ಕೊರಿಯಾ ಯುದ್ಧಕ್ಕಾಗಿ ವಿಶ್ವ ಸಂಸ್ಥೆ ಪಡೆ ನಿರ್ಮಾಣ

ಕೊರಿಯಾ ಯುದ್ಧ ಬಿಕ್ಕಟ್ಟು ಉಂಟಾದ ಮೇಲೆ ಬಹುಬೇಗ ವಿಶ್ವ ಸಂಸ್ಥೆ ಸೇನೆಯನ್ನು ನಿರ್ಮಾಣ ಮಾಡುವ ವಿಷಯವನ್ನು ಆ ಸಂಸ್ಥೆಯು ಪರ್ಯಾಲೋಚಿಸುತ್ತಿರುವುದಾಗಿ ವರದಿಯಾಗಿದೆ

ಕಾಂಗ್ರೆಸ್ ಅಧಿವೇಶನಕ್ಕೆ ೧೫ ಸಾವಿರ ಜನರು

ನಾಸಿಕದಲ್ಲಿ ಸೇರಲಿರುವ ಭಾರತದ ರಾಷ್ಟ್ರೀಯ ಮಹಾ ಸಭಾಧಿವೇಶನಕ್ಕೆ ಈ ಬಾರಿ ಪ್ರತಿನಿಧಿಗಳೂ ಅತಿಥಿಗಳೂ ಸೇರಿ ಒಟ್ಟು ೧೫ ಸಾವಿರ ಜನರು ಬರುವರೆಂದು ಹೇಳಲಾಗಿದೆ,

ಅಮೆರಿಕದ ಎರಡು ಸೇನೆಗಳ ವಾಪಸು

ಉತ್ತರ ಕೊರಿಯನ್ನರ ಗೆರಿಲ್ಲಾ ಯುದ್ಧವನ್ನು ಎದುರಿಸಲು ಸಾಧ್ಯವಾಗದೆ ಅಮೆರಿಕದ ೩ ಪಿಸ್ತೂಗಳು ಹಿಮ್ಮೆಟ್ಟಿರುವುದಾಗಿ ವರದಿಯಾಗಿದೆ

ಗಡೀಪಾರಿಗೆ ವಿರುದ್ಧವಾಗಿ ಹೈ ಕೋರ್ಟಿನಲ್ಲಿ ಅರ್ಜಿ

ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಗಡೀಪಾರಾದ ಕೋಲಾರದ ಚಿನ್ನದ ಗಣಿಗಳ ಕಾರ್ಮಿಕ ನಾಯಕ ಶ್ರೀ ಎಸ್ ಬಿ ಅರೇಕಲ್‌ರವರ ಪರವಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ಮೊನ್ನೆ ಅರ್ಜಿಯನ್ನು ಸಲ್ಲಿಸಿ ಶ್ರೀಯುತರು ಸಂಸ್ಥಾನದಲ್ಲಿ ಸ್ವಾತಂತ್ರ್ಯವಾಗಿ ಸಂಚಾರ ಮಾಡಲು ಯಾವ ಅಡ್ಡಿಯೂ ಇರಕೂಡದೆಂದು ಆಜ್ಞೆಯಾಗಬೇಕೆಂದು ಪ್ರಾರ್ಥಿಸಲಾಗಿದೆ ಕಳೆದ ಜನವರಿಯಲ್ಲಿ ಹೆಚ್ಚು ಸಂಸಾರದವರನ್ನು ನೋಡುವ ನಿಮಿತ್ತ ಚಿನ್ನದ ಗಣಿಗೆ ತೆರಳಿದಾಗ ಅವರನ್ನು ಪುನಃ ಆರ ತಿಂಗಳ ಕಾಲ ಗಡೀಪಾರು ಮಾಡುವ ಆಜ್ಞೆಯಾಗಿತ್ತು

ಮಾರ್ಕ್ಸ್ ಮತ್ತು ಗೋವಿಂದನ್‌ರವರ ಬಿಡುಗಡೆಗೆ ಅರ್ಜಿ

ಬೆಂಗಳೂರು ೧೮

ಬಂಧನದಲ್ಲಿರುವ ಕೋಲಾರದ ಚಿನ್ನದ ಗಣಿ ಕಾರ್ಮಿಕ ನಾಯಕರಾದ ಕೆ ಎಸ್ ವಾರ್ಕ್ಸ ಮತ್ತು ವಿ ಎಂ ಗೋವಿಂದನ್‌ರವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ ಮೇದಪ್ಪ ಮತ್ತು ಡಾ॥ ಶ್ರೀ ಆರ್ ವೆಂಕಟರಾಮ ಯ್ಯನವರು ಅವರುಗಳ ಹೇಬಿಯಾಸ್ ಕಾರ್ಪಸ್ ಅರ್ಜಿಗಳನ್ನು ಪುರಸ್ಕರಿಸಿ ಆಜ್ಞೆ ಮಾಡಿದ್ದಾರೆ ಬಂಧನಕ್ಕಾಗಿ ಕೊಡಲಾದ ಆಜ್ಞೆಯು ಕಾನೂನು ಬಾಹಿರವೆಂದು ನ್ಯಾಯಾಧೀಶರುಗಳು ಅಭಿಪ್ರಾಯ ಪಟ್ಟಿರುತ್ತಾರೆ

ಟ್ರೂಮನ್ - ಸ್ಟಾಲಿನ್ ಭೇಟಿಗಾಗಿ ನೆಹರೂ ಮಧ್ಯಸ್ತಿಕೆಯಾಗಲಿ

ಅಂತರ ರಾಷ್ಟ್ರೀಯ ಶಾಂತಿ ಸ್ಥಾಪನೆಯ ಪ್ರಯತ್ನಕ್ಕೆ ಭಾರತದ ಪ್ರಧಾನಿಗಳ ಮಧ್ಯಸ್ತಿಕೆಯಲ್ಲಿ ರಷ್ಯದ ಮುಖ್ಯ ಮಂತ್ರಿ ಸ್ಟಾಲಿನ್ ಮತ್ತು ಅಮೆರಿಕದ ಅಧ್ಯಕ್ಷ ಟ್ರೂಮನ್ನರ ಭೇಟಿಯು ನಡೆಯುವುದು ಅತ್ಯಾವಶ್ಯಕವೆಂದು ಅಮೆರಿಕದ ಅಣು ಶಾಸ್ತ್ರ ವಿಜ್ಞಾನಿ ಡಾ॥ ಲಿಯೊಜ ಬಾರ್ಡರವರು ತಿಳಿಸಿರುತ್ತಾರೆ

ಉತ್ತರ ಕೊರಿಯನ್ನರಿಗೆ ನಷ್ಟ ಉಂಟುಮಾಡಲಾಗುವುದು

ಕೊರಿಯಾ ಯುದ್ಧದಲ್ಲಿ ಉತ್ತರ ಕೊರಿಯನ್ನರಿಗೆ ಅಪಾರ ನಷ್ಟವುಂಟುಮಾಡಿರುವುದಾಗಿ ಜನರಲ್ ಮೆಕಾರ್ಥರ್‌ರವರು ತಿಳಿಸಿರುತ್ತಾರೆ ಟ್ಯಾಂಕುಗಳನ್ನು ದೋಣಿಗಳನ್ನು ಯುದ್ಧದೋಣಿಗಳನ್ನು ನಾಶಗೊಳಿಸಲಾಗಿದೆ ಜನರಲ್ ಮಕಾರ್ಥರ್ ಉತ್ತರ ಕೊರಿಯನ್ನರ ಸಾಮಗ್ರಿಗಳನ್ನು ನಾಶಪಡಿಸಲಾಗಿದೆ

ಕೊರಿಯಾಯುದ್ಧದಲ್ಲಿ ಭಾಗವಹಿಸಲು ಬ್ರೆಜಿಲ್ ಜನರು

ಕೊರಿಯಾ ಯುದ್ಧದಲ್ಲಿ ಭಾಗವಹಿಸಲು ಅನೇಕ ಬ್ರೆಜಿಲ್ ಜನರು ಅರ್ಜಿಗಳನ್ನು ಅಲ್ಲಿನ ಅಮೆರಿಕಾ ರಾಯಭಾರಿಗಳಿಗೆ ಸಲ್ಲಿಸಿರುವರು

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ಖಾಗಲ್ಪುರ್ ಸೀರೆಗಳಿಗೆ

M. V. ಭೋಜಯ್ಯ ಅ ಎ

ಇಂಡಿಯನ್‌ಬ್ಯಾಂಕ್ ಎದುರು, ಮೈಸೂರು

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಚಾಮುಂಡೇಶ್ವರಿ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು.

70 ಅವೆನ್ಯೂ ರಸ್ತೆ, ಬೆಂಗಳೂರು

Edited, printed and published by A R Nagarajan, at Sadhvi Press D Subbiah Road, Mysore

ಬಾಳಿಕೆಗೆ, ಕಾಂತಿಗೆ ಮತ್ತು ಕಡಿಮೆ ಬೆಲೆಗೆ

ಮುರಳಿ ಕಂಪೆನಿಯವರ

ಬಾಬಾ ಸೋಪುಗಳು

ಉಗನಾತೆ ಹೊಸದಾಗಿ ಬಂದಿವೆ.

ಅತ್ಯುತ್ತಮವಾದುವು ಮತ್ತು ಜಾಗ್ರತೆಯಾಗಿ ವಸ್ತ್ರಗಳನ್ನು ಶುಭ್ರ ಮಾಡತಕ್ಕವು.

ಇದನ್ನೇ ಕೊಂಡುಕೊಳ್ಳಿರಿ

ಏಜೆಂಟ್ ಕೆ. ರಾಮಣ್ಣ ಸೆಟ್ಟಿ,

ಸಂತೇಪೇಟೆ ಮೈಸೂರು

SRI GAYATHRI

TALKIES

From 19-7-50 for 2 days

Daily 3 Shows

THE BISHOP'S WIFE

With Cary Grant

– Next Change –

ROMEO & JULIET

ರಾಜಕಮಲ್

ಮೈಸೂರು

14-7-50 ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ

• ಸಮಾಧಿ •

— ಭೂಮಿಕೆ —

ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್, ಮುಬಾರಕ್

ಸಾಧ್ವಿ
ಸಂಪುಟ ೮] ಬುಧವಾರ ೧೯-೭-೫೦ [ಸಂಚಿಕೆ

ಬೆಲೆ ಏರಿಸದಂತೆ ವರ್ತಕರಿಗೆ ಎಚ್ಚರಿಕೆ

ಪೊಲೀಸಿನವನೆಂದು ಹೇಳಿ ಕೊಂಡು ಮೋಸದ ಪ್ರಕರಣ

ಮೈಸೂರು ೧೮

[illegible]

ಸಂಸ್ಥಾನದಲ್ಲಿ ಅಕ್ಕಿ ಮತ್ತು ಕಳ್ಳಿಯ ಸಾಮಾನುಗಳ ಸಂಚಿಕೆ

[illegible]

ಹಳೆಯ ವಿದ್ಯುತ್ ಕಂಭಗಳ ಬದಲಾವಣೆ

[illegible]

ಭಾರತದ ಶಾಂತಿ ಸಲಹೆಗೆ ಅಮೇರಿಕದ ಉತ್ತರ

[illegible]

॥ ವಂದೇ ಮಾತರಂ ॥

ಸಾಧ್ವಿ

ಎಂಟನೆಯ ವಾರ್ಷಿಕೋತ್ಸವ

ತಾ|| 20-7-50ನೇ ಗುರುವಾರ
ಸಂಜೆ ಆರು ಘಂಟೆಗೆ
ಮೈಸೂರು ರಾಮರಾಜ ರಸ್ತೆಯಲ್ಲಿರುವ
ಸಹಕಾರ ಭವನದಲ್ಲಿ
"ಸಾಧ್ವಿ" ಪತ್ರಿಕೆಯ ಎಂಟನೇ
ವಾರ್ಷಿಕೋತ್ಸವವು ನಡೆಯುತ್ತದೆ.
ವಿಶ್ವವಿದ್ಯಾಲಯದ ಪ್ರೋ ಚಾನ್ಸಲರಾದ
ಡಾ|| ಸಿ. ಆರ್. ರೆಡ್ಡಿಯವರು
ಅಧ್ಯಕ್ಷತೆ ವಹಿಸುವರು
ಮತ್ತು ಮಹರ್ಷಿ ಅರವಿಂದ
ಘೋಷರ ಭಾವಚಿತ್ರದ ಅನಾವರಣ
ಮಾಡುವರು.

— ಕಾರ್ಯಕ್ರಮ —

1 ಪ್ರಾರ್ಥನೆ— [illegible]
2 ಮಂಗಳಾಚರಣೆ—ವೇ|| ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ
3 ಸ್ವಾಗತ ಮತ್ತು ಸಂದೇಶಗಳು
4 ಅರವಿಂದ ಘೋಷರ ಭಾವಚಿತ್ರದ ಅನಾವರಣ
5 ಅಧ್ಯಕ್ಷರ ಭಾಷಣ
6 ಸಂಗೀತ— ಬೆಂಗಳೂರು [illegible]

[illegible]

ಸಂಪಾದಕ —

ಭಾರತದ ವಿದ್ಯಾವಂತರು ಸ್ವದೇಶದಲ್ಲೇ ಪರದೇಶೀಯರು

ಅಂ|| ರಾ|| ವಿದ್ಯಾರ್ಥಿ ಗೋಷ್ಠಿಯಲ್ಲಿ ಭಾರತದ ಪ್ರತಿನಿಧಿಗಳ ಭಾಷಣ

ಮೈಸೂರು ೧೮

[illegible]

ಡಾ|| ಕೊರಿಯಾ ಬಳಿ ೩ ಸಬ್‌ಮೆರೀನುಗಳ ಪತ್ತೆ

[illegible]

ಜಲಜನಕ ಬಾಂಬಿನ ತಯಾರಿಕೆ ಭರದಿಂದ ಸಾಗುತ್ತಿದೆ

[illegible]

ತುಷ್ಟಿರಾಜ್ ಅರಸರ ಸಂಬಳದ ದಾವಾ

ಕಲ್ಯಾಣಿ ಶ್ರೇಷ್ಠ ನ್ಯಾಯಾಲಯದ ತೀರ್ಪು

[illegible] ಬೆಂಗಳೂರು ೧೮

[illegible]

ಕನ್ನಂಬಾಡಿ ನೀರಿನ ಮಟ್ಟ

[illegible]

ಸಾಧುಗಳಿಗೂ ಪೊಲೀಸರಿಗೂ ತೀವ್ರ ಹೊಡೆದಾಟ

[illegible]

ಪದಾರ್ಥಗಳ ಬೆಲೆ ಬಗ್ಗೆ ವ್ಯಾಪಾರಿಗಳಿಗೆ ಎಚ್ಚರಿಕೆ

[illegible]

ಪದಾರ್ಥಗಳ ಬೆಲೆ ಏರದಂತೆ ತಡೆಗಟ್ಟಬೇಕು

ಕೊರಿಯಾ ಯುದ್ಧದ ನೆಪದಿಂದ ಸಾಮಗ್ರಿಗಳ ಬೆಲೆಯು ಹಿಗ್ಗಿಯು ಕಾಲದ ಬೆಲೆಗಿಂತ ಮೂರು, ನಾಲ್ಕರಷ್ಟು ಹೆಚ್ಚಿರುವುದರಿಂದ ಬಡ ಜನರು ಜೀವನ ಮಾಡುವುದೇ ಕಷ್ಟಕರವಾಗಿದೆ. ಮೊದಲೇ ಪಡಿತರದ ಅರ್ಧ ಪ್ರಮಾಣದ ಧಾನ್ಯವನ್ನು ಕೊಂಡು ತಿನ್ನುವ ಗ್ರಾಮಾಂತರದ ಬಡವರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ಅತಿ ಆಸೆಯುಳ್ಳ ವರ್ತಕರು ಯಾವ ಅಂಜಿಕೆಯೂ ಇಲ್ಲದೆ ಬೆಲೆಯನ್ನು ಏರಿಸುತ್ತಿದ್ದಾರೆ. ಸರ್ಕಾರದವರು ಮುಂದೆ ಬಂದು ಬಚ್ಚಿಟ್ಟಿರುವ ಪದಾರ್ಥಗಳನ್ನು ತೆಗೆಯುವಂತೆ ಮಾಡಿ, ಧಾರಣೆಯನ್ನು ಗೊತ್ತುಪಡಿಸಿ, ಮಾರುವ ಏರ್ಪಾಡು ಮಾಡುವುದು ಅತ್ಯಾವಶ್ಯಕವಾಗಿದೆ ಎಂದು ಶ್ರೀ ಮಳವಳ್ಳಿ ವೀರಪ್ಪನವರು ಹೇಳುತ್ತಿದ್ದಾರೆ.

ಪ್ರಾದೇಶಿಕ ಸೈನ್ಯಕ್ಕೆ ನೌಕರರು

ಕಲ್ಕತ್ತದ ಸೆಕ್ರೆಟೇರಿಯಟ್ಟಿನಲ್ಲಿರುವ ನೌಕರರು ಅಧಿಕ ಸಂಖ್ಯೆಯಲ್ಲಿ ಪ್ರಾದೇಶಿಕ ಸೈನ್ಯಕ್ಕೆ ಸೇರಬೇಕೆಂದು ಪಶ್ಚಿಮ ಬಂಗಾಳದ ಮಂತ್ರಿ ಭೂಪತಿ ಮಜುಮದಾರರು ಹೇಳಿದ್ದಾರೆ. ಪ್ರಪಂಚವು ಭಾರಿ ಯುದ್ಧದಲ್ಲಿ ಕಾಲಿಡುತ್ತಿರುವುದರಿಂದ ಯಾರಿಗೂ ಉಳಿಗಾಲವಿಲ್ಲವೆಂದೂ, ತಮ್ಮ ತಮ್ಮ ನಾಡನ್ನು ರಕ್ಷಿಸಿಕೊಳ್ಳುವವರು ಮಾತ್ರ ಉಳಿಯಬಲ್ಲರೆಂದೂ ಅವರು ತಿಳಿಸಿದ್ದಾರೆ.

ಅ|| ಮೈ|| ಪತ್ರಿಕೋದ್ಯೋಗಿಗಳ ಸಮ್ಮೇಳನ

ಶೀಘ್ರದಲ್ಲೇ ಸೇರಲಿರುವ ಅಖಿಲ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕಾಗಿ ಸದಸ್ಯರನ್ನು ಕೂಡಿಸುವ ಕೆಲಸವು ಪ್ರಾರಂಭವಾಗಿರುವುದೆಂದೂ, ಹೊಸದಾಗಿ ಸದಸ್ಯರಾಗಲಿಚ್ಛಿಸುವವರು ಈ ತಿಂಗಳು ಅಂತ್ಯದೊಳಗೆ ೩ ರೂ. ಗಳ ಚಂದಾವನ್ನು ಕಾರ್ಯದರ್ಶಿಯವರಿಗೆ ಪಾವತಿ ಮಾಡಬೇಕೆಂದೂ, ಹಿಂದೆ ಪ್ರತಿನಿಧಿಗಳಾಗಿ ಇದ್ದವರು ಎರಡು ರೂಗಳನ್ನು ಕೊಡಬೇಕೆಂದೂ ಸಮ್ಮೇಳನದ ಕಾರ್ಯದರ್ಶಿ ಶ್ರೀ ಕೆ. ಹೇಮಣ್ಣ ರಾಯರು ತಿಳಿಸುತ್ತಾರೆ.

○ ಅಮೆರಿಕದಲ್ಲಿ ೪೦೦ ಅಣು ಬಾಂಬುಗಳನ್ನು ತಯಾರಿಸಿ ಶೇಖರಿಸಲಾಗಿದೆ.

ಬಂಗಾಳದಲ್ಲಿ ಸಂಬಾರ ಸಾಮಗ್ರಿಗಳ ಬೆಲೆ ನಿಗದಿ

ಕಲ್ಕತ್ತಾದ ಸಂಬಾರ ದಿನಸಿಗಳನ್ನು ಮಾರುವ ವರ್ತಕರಿಗೂ ಬಂಗಾಳ ಸರ್ಕಾರಕ್ಕೂ ಮೂರು ದಿನಗಳ ಮಾತುಕತೆಯಾಗಿ ಪದಾರ್ಥಗಳ ಅತ್ಯಧಿಕಾಂಶ ಬೆಲೆಯು ಬಗ್ಗೆ ಒಪ್ಪಂದವಾಗಿದೆ. ಜೂ। ೧೫ ರಲ್ಲಿ ಇದ್ದ ಒಟ್ಟು ವ್ಯಾಪಾರದ ಬೆಲೆಗೆ ಶೇಕಡ ೫ ರಷ್ಟು ಮಾತ್ರ ಹೆಚ್ಚಿಸಬೇಕೆಂದು ತಿಳಿಸಲಾಗಿದೆ.

ಡಾಂಗೆ ಮುಂತಾದ ೧೦೫ ಜನರ ಬಿಡುಗಡೆ

ಬೊ: ಬಾಯಿ ರಾಜ್ಯ ಸಭೆಯ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಎಸ್. ಎ. ಡಾಂಗೆ ಮುಂತಾದ ೫೦ ಜನ ಕಮ್ಯೂನಿಸ್ಟರನ್ನೂ ನಾಸಿಕ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಡಾಂಗೆಯವರ ಹೇಬಿಯಸ್ ಕಾರ್ಪಸ್ ಅರ್ಜಿ ಬರುವ ವಾರ ಹೈಕೋರ್ಟಿಗೆ ಬರುವುದರಲ್ಲಿತ್ತು. ಇವರಲ್ಲದೇ ಹಿಂದೂ ಮಹಾ ಸಭೆಯ ೫೫ ಜನರ ಬಿಡುಗಡೆಯೂ ಆಗಿದೆ.

○ ಕೇಂದ್ರ ಸರ್ಕಾರದ ಸಂಚಾರ ಮಂತ್ರಿ, ರಫಿ ಅಹಮದ್ ಕಿದ್ವಾಯಿಯವರು ೨೧ನೇ ತಾ|| ಬೆಂಗಳೂರಿಗೆ ಆಗಮಿಸುವರು.

† ಭಾರತ ಸರ್ಕಾರದ ನೌಕರರಿಗಾಗಿ ಅಧಿಕಾರಿಗಳನ್ನು ಚುನಾಯಿಸುವ ಸಮಿತಿಯವರು ಮುಂದಿನ ತಿಂಗಳು ಮೊದಲನೇ ವಾರದಲ್ಲಿ ಬೆಂಗಳೂರಿಗೆ ಬರಲಿರುವರೆಂದು ಗೊತ್ತಾಗಿದೆ.

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಈ ಪ್ರಸಿದ್ಧ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6 ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ರಮಣಿ ಟ್ರೇಡಿಂಗ್ ಕಂಪೆನಿ,
೧೩೯೮/೩, ಕೃಷ್ಣಮೂರ್ತಿಪುರಂ,
ಮೈಸೂರು.

೩ ಸಾವಿರ ವರ್ಷಗಳ ಹಿಂದೆ ಬರೆದ ಚಿತ್ರ

ಕ್ರಿಸ್ತಪೂರ್ವ ೧೨೦೦೦ರಲ್ಲಿ ಬರೆಯಲಾಗಿತ್ತೆಂದು ಹೇಳಲಾದ ಅತ್ಯಂತ ಪ್ರಾಚೀನವಾದ ಚಿತ್ರವು ಫ್ರಾನ್ಸಿನ ಒಂದು ಗುಹೆಯಲ್ಲಿ ಸಿಕ್ಕಿದೆ. ಕಳೆದ ಯುದ್ಧದ ಸಮಯದಲ್ಲಿ ಈ ಗುಹೆಯು ಇದ್ದುದು ಪತ್ತೆಯಾಯಿತು. ಚಿತ್ರದಲ್ಲಿ ಮನುಷ್ಯ, ಕುದುರೆ ಮುಂತಾದುವುಗಳು ಇವೆ. ಇದನ್ನು ಪ್ಯಾರಿಸ್ಸಿನಲ್ಲಿ ಇಡಲಾಗಿದೆ.

ಅಣು ಬಾಂಬಿನ ಕಾಯಿಲೆಗೆ ಔಷಧಿ

ಅಣು ಬಾಂಬಿನ ಸಿಡಿತದಿಂದ ಉಂಟಾಗುವ ಕಾಯಿಲೆಗಳಿಗೆ ಸ್ಟ್ರೆಪ್ಟೋಮೈಸಿನ್ ಎಂಬ ಔಷಧಿಯನ್ನು ಉಪಯೋಗಿಸಬಹುದೆಂದು ವಿಜ್ಞಾನಿಗಳು ಹೇಳುತ್ತಾರೆ.

ಬಟ್ಟೆ ಪ ತೋ ಟಿ ಹೋಗುವುದಿಲ್ಲ

ಸಧ್ಯದಲ್ಲಿಯೇ ಬಟ್ಟೆಯ ಪರ್ಮಿಟನ್ನು ತೆಗೆದರೆ ಅನರ್ಥವಾಗುವುದೆಂದೂ, ಆದ್ದರಿಂದ ಅದನ್ನು ತೆಗೆಯುವುದಿಲ್ಲವೆಂದೂ ಕೇಂದ್ರದ ಮಂತ್ರಿ ಹರೇಕೃಷ್ಣ ಮಹತಾಬರವರು ಹೇಳಿದ್ದಾರೆ. ಕಾಳಸಂತೆಯು ಹೋಗಬೇಕಾದರೆ ಪರ್ಮಿಟನ್ನು ತೆಗೆಯಬೇಕೆಂದು ಮಂತ್ರಿಗಳಿಗೆ ಮನವಿ ಮಾಡಲಾಗಿತ್ತು.

ಸಂಧಾನಕ್ಕೆ ಬ್ರಿಟನ್ನಿನ ಷರತ್ತು

ಕೊರಿಯಾ ಬಗ್ಗೆ ಸಂಧಾನ ನಡೆಸುವ ಮುಂಚೆ ಉತ್ತರ ಕೊರಿಯಾ ಸೇನೆಗಳು ವಾಪಸು ಹೋಗಬೇಕೆಂದೂ ಮತ್ತು ರಷ್ಯವು ಭದ್ರತಾ ಸಮಿತಿಗೆ ವಾಪಸು ಬಂದು, ಈಗ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಬೇಕೆಂದೂ ಬ್ರಿಟನ್ನು ಪ್ರಧಾನಿ ನೆಹರೂರವರ ಶಾಂತಿ ಸೂಚನೆಗೆ ಷರತ್ತು ಹಾಕುವುದಾಗಿ ಹೇಳಲಾಗಿದೆ.

ಅಮಲ್ದಾರರಿಗೆ ಸತ್ಕಾರ

ಸ್ವಂ. ವ.] ಬೇಲೂರು ೧೫

ವರ್ಗವಾಗಿರುವ ಈ ತಾಲ್ಲೂಕಿನ ಅಮಲ್ದಾರ್ ಶ್ರೀ ಎಸ್. ಬೃಹ್ಮರಾಯಪ್ಪನವರ ಗೌರವಾರ್ಥವಾಗಿ ಇಲ್ಲಿನ ಪೌರಸಭೆಯವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಜ। ಕೆ. ಎ. ರಹೀಂ, ಶ್ರೀಗಳಾದ ಆರ್. ಸೂರಪ್ಪ, ಬಿ. ಎಸ್. ಕಸ್ತೂರಿ, ಎಸ್. ಎಸ್. ನಾರಾಯಣಾಚಾರ್, ಹೆಚ್. ಪಿ. ನಂಜುಂಡಯ್ಯ ಮುಂತಾದವರು ಭಾಷಣ ಮಾಡಿ ಅಮಲ್ದಾರರು ಅಲ್ಲಿನ ಪ್ರಜೆಗಳಿಗೆ ಸಲ್ಲಿಸಿದ ಸೇವೆಗಾಗಿ ಪ್ರಶಂಸೆ ಮಾಡಿದರು. ಸತ್ಕಾರಕ್ಕೆ ಅನೇಕ ಸ್ಥಳೀಯ ಮುಖಂಡರೂ, ಅಧಿಕಾರಿಗಳೂ ಬಂದಿದ್ದರು.

ದಿನಕ್ಕೆ ೨೨ ಕೋಟಿ ಪತ್ರಿಕೆಗಳ ಮಾರಾಟ

ಪ್ರಪಂಚದಲ್ಲಿ ದಿನವಹಿ ೨೨ ಕೋಟಿ ೯೦ ಲಕ್ಷ ದಿನ ಪತ್ರಿಕೆಗಳು ಮಾರಾಟವಾಗುತ್ತವೆ. ಒಟ್ಟು ೧೬ ಕೋಟಿ ರೇಡಿಯೋಗಳು ಇವೆ. ಬ್ರಿಟನ್ನಿನಲ್ಲಿ ಪ್ರತಿ ಇಬ್ಬರು ಪ್ರಜೆಗಳಿಗೆ ೧ ಪತ್ರಿಕೆಯು ಮಾರಾಟವಾಗುತ್ತದೆ.

ಸಿಲೋನಿನ ಮಂತ್ರಿ ಮೇಲೆ ಕಲ್ಲು

ಸಿಲೋನಿನ ಹಣಕಾಸಿನ ಮಂತ್ರಿ ಶ್ರೀ ಜೆ. ಆರ್. ಜಯವರ್ಧನೆ ಮತ್ತು ಅವರ ಕುಟುಂಬದವರು ಸಭಾ ತೆಗೆದುಕೊಳ್ಳಲು ಹೋದಾಗ ಅವರ ಮೋಟಾರಿನ ಮೇಲೆ ಕಮ್ಯೂನಿಸ್ಟರು ಕಲ್ಲು ಎಸೆದರೆಂದು ತಿಳಿದುಬಂದಿದೆ.

Edited, printed and published by A. R. Nagarajan, at Sadhvi Press D. Subbiah Road, Mysore.

ಪ್ರಭಾ * ಅತ್ಯುತ್ತಮ ಬೆಳಕು ಪೂರಿತ ಚಿತ್ರ
ದಿನವಹಿ 3 ಆಟಗಳು

ಕಮಲಾ ಪ್ರೊಡಕ್ಷನ್ಸ್‌ರವರ, ಪ್ರಭಾತ್ ಸ್ಟುಡಿಯೋನಲ್ಲಿ ತಯಾರಾಗಿರುವ

* ಅಪಹರಣ *
(ಹಿಂದಿ)

ಕಮಲಾ ಕೊಟ್ನಿಸ್, ಸಪ್ರೂ, ಉಲ್ಲಾಸ್, ಕಕ್ಕೂ
ದಿಗ್ದರ್ಶನ:- ವಸಂತರಾವ್ ಪೆಯಿಂಟರ್
(ಪ್ರತಿಯೊಬ್ಬರೂ ನೋಡಲೇಬೇಕಾದ ಚಿತ್ರ)

ಪ್ರಭುದೇವಾ ಟಾಕೀಸ್

21—7—50 ನೇ ಶುಕ್ರವಾರದಿಂದ

ಅಶೋಕ ಪ್ರಾರಂಭ ದಿನವಹಿ 3 ಪ್ರದರ್ಶನಗಳು

* ಭಕ್ತ ಪುಂಡಲೀಕ *
(ಹಿಂದಿ)

ಪಾತ್ರ:- ರಾಣಿ ಪ್ರೇಮಲತಾ, ಸಗುಣಾ, ರಂಭಾ, ಸೋಫಿಯಾ, ನಜೀರ್ ಮುಂತಾದವರು.

೨ ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಪಾಸುಗಳನ್ನೂ ಮನ್ನಾ ಮಾಡಲಾಗಿದೆ.

ಫೋನ್ ನಂ. 792 ವಂದೇ ಮಾತರಂ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೨೦-೭-೫೦ [ಸಂಚಿಕೆ ೧

ಅಮೆರಿಕಾ ಸರ್ಕಾರಕ್ಕೆ ನೆಹರೂರವರ ಉತ್ತರ

ಶಾಸನ ಸಭೆಯಲ್ಲಿ ಚರ್ಚಿಸುವ ವಿಷಯಗಳು

ಮೈಸೂರು ೧೯

ಬರುವ ಅಕ್ಟೋಬರ್ ೩ನೇ ತಾರೀಖಿನಿಂದ ರಾಜಧಾನಿಯಲ್ಲಿ ಪ್ರಾರಂಭವಾಗುವ ಶಾಸನ ಸಭೆಯು ೧೫ ದಿನಗಳ ಕಾಲ ನಡೆಯುವುದು. ರಾಜ್ಯಾಂಗದಲ್ಲಿರುವಂತೆ ಕಂಟಿಂಜನ್ಸಿ ನಿಧಿಯನ್ನು ಏರ್ಪಡಿಸುವ ಬಗ್ಗೆ ಮಸೂದೆಯೊಂದನ್ನು ತರಲಾಗುವುದು. ಭೂಕಂದಾಯದ ಸುಧಾರಣೆ, ಸ್ಥಳೀಯ ಸಂಸ್ಥೆಗಳ ಪರಿಷ್ಕೃತ ಹೊಂದಾಣಿಕೆ ಕಾರ್ಯಗಳ ಬಗ್ಗೆ ಏರ್ಪಡಾದ ವಿವಿಧ ಸಮಿತಿಗಳ ವರದಿಗಳ ಆಧಾರದ ಮೇಲೆ ರಚಿತವಾಗಲಿರುವ ಮಸೂದೆಗಳೂ ಚರ್ಚೆಗೆ ಬರಲಿವೆ. ಡಾ|| ಸಿ. ಆರ್. ರೆಡ್ಡಿಯವರು ವಿಶ್ವವಿದ್ಯಾಲಯದ ಪುನರ್ವ್ಯವಸ್ಥೆ ಬಗ್ಗೆ ಕೊಟ್ಟಿರುವ ವರದಿಯ ಸಂಬಂಧವಾದ ಮಸೂದೆಯನ್ನೂ ತರಲಾಗುವುದು

ಪುರಾಣ ಮತ್ತು ಹರಿಕಥೆ

ಮುಂದಿನ ಸೋಮವಾರ ಕಾಳಮ್ಮನ ಗುಡಿ ಬೀದಿಯ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಆಡಿ ಶುಕ್ರವಾರದ ಪ್ರಯುಕ್ತ ನಾಳೆ ಸಂಜೆ ೫ ಗಂಟೆಗೆ ಮ|| ಮಾಯಗಗೌಡ ಮತ್ತು ಶ್ರೀ ಹಿರಿಯಣ್ಣಯ್ಯನವರುಗಳಿಂದ ಕೃಷ್ಣ ಸಂಧಿ ಎಂಬ ಪುರಾಣವನ್ನೂ, ೭ ಗಂಟೆಗೆ ಹಿರೇಮಠದ ಶ್ರೀ ಹೆಚ್. ಎಸ್ ಶಿವಲಿಂಗಸ್ವಾಮಿಯವರಿಂದ "ಅಕ್ಕ ಮಹಾದೇವಿ" ಎಂಬ ಹರಿಕಥೆಯನ್ನೂ ದೇವಾಂಗ ಸಂಘದವರು ಏರ್ಪಡಿಸಿರುತ್ತಾರೆ.

ಕಾಡಾನೆ ಹಿಡಿಯಲು ಸರ್ಕಾರದ ಆಜ್ಞೆ

ಕಡೂರು ಜಿಲ್ಲೆಯ ಲಕ್ಕವಳ್ಳಿ ಕಾಡುಗಳಲ್ಲಿರುವ ಕಾಡಾನೆಗಳು ಹಾವಳಿ ಮಾಡುತ್ತಾ, ಪೈರುಗಳಿಗೆ ನಷ್ಟಪಡಿಸುತ್ತಿರುವುದನ್ನು ತಡೆಯಲು, ಸರ್ಕಾರದವರು ಅವುಗಳನ್ನು ಹಿಡಿದುಹಾಕಬೇಕೆಂದು ಆಜ್ಞೆ ಮಾಡಿದ್ದಾರೆ ಗುಂಡಿ ತೋಡಿ ಹಿಡಿಯುವ ಕ್ರಮವನ್ನು ಅನುಸರಿಸಿ ಆನೆಗಳನ್ನು ಹಿಡಿಯಲೇರ್ಪಾಡು ಮಾಡಲಾಗುವುದು. ಅನಂತಪುರ ಜಿಲ್ಲೆಯ ಉರವಕೊಂಡ ಜಗದ್ಗುರುಗಳಿಗೆ ಒಂದು ಆನೆಯನ್ನು ಸರ್ಕಾರದವರು ಬಹುಮಾನವಾಗಿ ಕೊಡಲಿರುವರು.

ಸಿ. ಆರ್. ರೆಡ್ಡಿಯವರಿಂದ ಅಲಗಪ್ಪ ಕಾಲೇಜಿನ ಆರಂಭ

ಕಾರೈಕುಡಿಯಲ್ಲಿರುವ ಡಾ|| ಅಲಗಪ್ಪ ಚೆಟ್ಟಿಯಾರರ ಶಿಕ್ಷಣ ಕಾಲೇಜಿನ ಪ್ರಾರಂಭೋತ್ಸವವನ್ನು ಮೈಸೂರು ವಿಶ್ವವಿದ್ಯಾಲಯದ ಪ್ರೋ ಚಾನ್ಸೆಲರಾದ ಡಾ|| ಸಿ. ಆರ್. ರೆಡ್ಡಿಯವರು ಈ ತಿಂಗಳು ೨೭ರಲ್ಲಿ ನೆರವೇರಿಸುವರು.

ಕೊರಿಯಾಕ್ಕೆ ಬ್ರಿಟಿಷ್ ಸೈನ್ಯ?

ಆಜ್ಞೆಯು ಬಂದೊಡನೆ ೪೮ ಗಂಟೆಗಳೊಳಗೆ ಕೊರಿಯಾ ಯುದ್ಧಕ್ಕೆ ಹೊರಡಲು ಸಿಂಗಪುರದಲ್ಲಿರುವ ೮ ಬ್ರಿಟಿಷ್ ಪಡೆಗಳು ಸಿದ್ಧವಾಗಿವೆಯೆಂದು ವರದಿಯಾಗಿದೆ.

ಆಕ್ರಮಣಕಾರರನ್ನು ಓಡಿಸಲು ಟ್ರೂಮನ್ನರ ನಿರ್ಧಾರ

ಕೊರಿಯದಿಂದ ಆಕ್ರಮಣಕಾರರನ್ನು ಹೊರಕ್ಕೆ ಓಡಿಸಲು ಟ್ರೂಮನ್ನರು ನಿರ್ಧರಿಸಿ, ಅದಕ್ಕಾಗಿ ಕಾಂಗ್ರೆಸ್ಸಿನ ಅನುಮತಿಯನ್ನು ಕೇಳುವವರಾಗಿದ್ದಾರೆ.

ತೃತೀಯ ಯುದ್ಧಕ್ಕೆ ಅಮೆರಿಕದ ಸಿದ್ಧತೆ

ತೃತೀಯ ಮಹಾ ಯುದ್ಧಕ್ಕಾಗಿ ತಯಾರಿಯನ್ನು ತ್ವರಿತಗೊಳಿಸುವ ಬಗ್ಗೆ ತಕ್ಕ ಸಿದ್ಧತೆ ಮಾಡಿಕೊಳ್ಳುವ ವಿಷಯವಾಗಿ ಅಮೆರಿಕದ ರಾಷ್ಟ್ರ ಸಂಪತ್ತಿನ ರಕ್ಷಣಾ ಬೋರ್ಡಿನ ಅಧ್ಯಕ್ಷರಾದ ಸ್ಟುವರ್ಟ್ ಸಿಮಿಂಗ್ಟನರವರು ಅಲ್ಲಿನ ಕೈಗಾರಿಕಾ ಮತ್ತು ವ್ಯಾಪಾರಿ ಪ್ರತಿನಿಧಿಗಳೊಡನೆ ಚರ್ಚಿಸಿದರೆಂದು ವರದಿಯಾಗಿದೆ

ನೆಹರೂರವರ ಮೋಟಾರಿನ ಮುಂದೆ ರೈತರ ಪ್ರದರ್ಶನ

ಕಾಶಿಗೆ ಕಳೆದ ೧೭ನೇ ತಾ|| ಪ್ರಧಾನಿ ನೆಹರೂರವರು ಭೇಟಿಯಿತ್ತ ಸಮಯದಲ್ಲಿ ಮಿರ್ಜಾಪುರದ ೧೫ ಜನ ರೈತರು ಅವರ ಮೋಟಾರಿನ ಮುಂದೆ ಪ್ರದರ್ಶನ ನಡೆಸಿ, ತಮ್ಮ ೧೫೦೦ ಎಕರೆ ಜಮೀನನ್ನು ಇಲ್ಲಿನ ಸರ್ಕಾರದವರು ವಶಪಡಿಸಿಕೊಂಡಿರುವುದಾಗಿ ಬಿನ್ನವಿಸಿಕೊಂಡರು. ಹಲವರು ಕಾರಿನ ಮುಂಭಾಗದಲ್ಲಿ ಮಲಗಿಬಿಟ್ಟರು ಪ್ರಧಾನಿಯವರು ಇಳಿದುಬಂದು, ಸರ್ಕಾರದವರು ಮಾಡುವ ಕಾರ್ಯವು ಜನಹಿತ ದೃಷ್ಟಿಯಿಂದ ಆಗುವುದೆಂದು ಹೇಳಿದ ನಂತರ ಮೋಟಾರು ಮುಂದಕ್ಕೆ ಹೋಯಿತು

ಸಿಲೋನಿನ ಪ್ರಧಾನಿಯ ವಿಚಿತ್ರ ಅನುಭವ

ಸಿಲೋನಿನ ಮುಖ್ಯ ಮಂತ್ರಿ ಎಸ್ ಸೇನಾನಾಯಕೆಯವರಿಗೆ ನೆನ್ನೆ ಮುಂಜಾನೆ ವಿಚಿತ್ರ ಅನುಭವವಾಯಿತು ಅವರ ಭವನದ ಸುತ್ತಲೂ ಕಾವಲಿದ್ದ ಪಹರೆಯವರನ್ನು ಕಣ್ಣು ತಪ್ಪಿಸಿ, ಅಪರಿಚಿತ ಸ್ತ್ರೀಯೊಬ್ಬಳು ಭವನದ ನಿದ್ರಾಕೋಣೆಗೆ ಹೋಗಿ ಪ್ರಧಾನಿಯವರನ್ನು ತಾನು ತನ್ನನ್ನು ಲಂಕೆಯ ಅಧಿಪತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಜ್ಞೆಯಾಗಿದೆಯೆಂದೂ, ಆ ರೀತಿ ಮುಖ್ಯ ಮಂತ್ರಿಗಳು ನಡೆಸಿಕೊಟ್ಟರೆ ತಾನು ಅವರಿಗೆ ಅಜೀವ ಪ್ರಧಾನಿಯ ಪದವಿಯನ್ನು ಕೊಡುವುದಾಗಿಯೂ ಹೇಳಿದಳೆಂದೂ, ಪ್ರಧಾನಿಯವರು ಆಕೆಯ ಉದಾರ ವಾಗ್ದಾನವನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು, ಪೋಲೀಸ್ ಅವಳ ಅಂಕೆಯನ್ನು ಪರಿಶೀಲಿಸುವುದಾಗಿ ತಿಳಿಸಿದರೆಂದೂ ಹೇಳಲಾಗಿದೆ.

ಕೋಮುವಾರು ನೀತಿಯ ಬಗ್ಗೆ ಅರ್ಜಿ ನ್ಯಾಯಾಲಯದ ತೀರ್ಪಿಗೆ

ಮದ್ರಾಸಿನ ಕಾಲೇಜುಗಳಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶದ ಬಗ್ಗೆ ಅನುಸರಿಸುತ್ತಿರುವ ಕೋಮುವಾರು ನೀತಿಯು ರಾಜ್ಯಾಂಗದ ಮೂಲ ತತ್ವಗಳಿಗೆ ವಿರೋಧವೆಂದು ಅಲ್ಲಿನ ಶ್ರೇಷ್ಠ ನ್ಯಾಯಾಲಯದಲ್ಲಿ ತಂದಿದ್ದ ಅರ್ಜಿಗಳ ಬಗ್ಗೆ ಮೊನ್ನೆ ವಾದವಿವಾದಗಳಾದವು. ತೀರ್ಪಿಗೆ ಕಾದಿಡಲಾಗಿದೆ. ಅರ್ಜಿದಾರರ ಪರ ವಾದ ಮಾಡಿದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ವಿ. ವಿ. ಶ್ರೀನಿವಾಸಯ್ಯಂಗಾರ್ಯರು ರಾಜ್ಯಾಂಗದಲ್ಲಿ ದತ್ತವಾದ ಮೂಲಭೂತ ಹಕ್ಕುಗಳಿಗೆ ಆಜ್ಞೆಯು ವಿರೋಧವಾಗಿರುವುದೆಂದೂ ಆದ್ದರಿಂದ ಅವು ಕ್ರಮಬದ್ಧವಲ್ಲವೆಂದೂ ತಿಳಿಸಿದರು. ರಾಜ್ಯದ ಪ್ರಜೆಯೊಂದು ರಾಜ್ಯಾಂಗದಲ್ಲಿ ತಿಳಿಸಿ ಅದರಂತೆಯೇ ಹಕ್ಕು ಬಾಧ್ಯತೆಗಳನ್ನು ಗೊತ್ತುಪಡಿಸಿರುವುದಾಗಿ ಹೇಳಲಾಯಿತು. ಆದ್ದರಿಂದ ಲಿಂಗ, ಮತ ಬೇಧಗಳ ಮೇಲೆ ವ್ಯತ್ಯಾಸ ಮಾಡುವುದು ಕಾನೂನಿಗೆ ವಿರೋಧವೆಂದೂ ಅವರು ಅಭಿಪ್ರಾಯಪಟ್ಟರು. ರಾಜ್ಯಾಂಗವನ್ನು ಬರೆದವರೂ ಸಹ ಇದೇ ಅಭಿಪ್ರಾಯವನ್ನು ಇಟ್ಟುಕೊಂಡು ಅದನ್ನು ತಯಾರಿಸಿದರೆಂದು ಅವರು ಹೇಳಿದರು

ಗ್ರೀಸಿನ ಮೇಲೆ ಕಮ್ಯೂನಿಸ್ಟ್ ದಂಡಯಾತ್ರೆ?

ರಷ್ಯಾ ಮತ್ತು ಅದರ ಹಿಂಬಾಲಕ ಕಮ್ಯೂನಿಸ್ಟ್ ರಾಜ್ಯಗಳು ಗ್ರೀಸಿನ ಮೇಲೆ ಆಕ್ರಮಣ ಮಾಡುವ ಸೂಚನೆಗಳು ಕಾಣಬರುತ್ತಿವೆಯೆಂದೂ, ಈ ಬಗ್ಗೆ ತಕ್ಷಣ ಕಾರ್ಯವನ್ನು ಕೈಗೊಳ್ಳಬೇಕೆಂದೂ ವಿಶ್ವಸಂಸ್ಥೆಯ ಬಾಲ್ಕನ್ ಸಮಿತಿಯು ತಿಳಿಸಿದೆ

೫-೬ ಸಾವಿರ ರೂ. ಬೆಲೆ ಗಡಿಯಾರಗಳ ಕಳ್ಳತನ

ಸ್ವಂ ವ.] ಚಿಕ್ಕಮಗಳೂರು ೧೯

ಇಲ್ಲಿನ ಪೇಟೆಯ ಮಧ್ಯಭಾಗದಲ್ಲಿರುವ ಶ್ರೀ ಗುಲಾಬ್ ಸಿಂಗ್ ರವರ ಅಂಗಡಿಗೆ ಮೊನ್ನೆ ರಾತ್ರಿ ಕಳ್ಳರು ನುಗ್ಗಿ ೫-೬ ಸಾವಿರ ರೂ. ಬೆಲೆ ಬಾಳುವ ಗಡಿಯಾರದ ಸಾಮಾನು ಮತ್ತು ರಿಪೇರಿಗಾಗಿ ಕೊಡಲ್ಪಟ್ಟ ಕೈ ಗಡಿಯಾರಗಳನ್ನು ಅಪಹರಿಸಿದ್ದಾರೆಂದು ತಿಳಿದುಬಂದಿದೆ. ಅಂಗಡಿಯ ಮೇಲ್ಛಾವಣಿಯ ಹೆಂಚುಗಳನ್ನು ತೆಗೆದು ಕಳವು ನಡೆಸಿರುವುದಾಗಿ ಹೇಳಲಾಗಿದೆ.

[illegible]

ಫೋನ್ ನಂ. 792 "ವಂದೇ ಮಾತರಂ" ಇಂದಿನ ಪತ್ರಿಕೆ ೩ ಕಾಸು
ಸಂಪುಟ ೯] ಗುರುವಾರ ೨೦-೭-೫೦ [ಸಂಚಿಕೆ ೧

ಅಮೆರಿಕಾ ಸರ್ಕಾರಕ್ಕೆ ನೆಹರೂರವರ ಉತ್ತರ

ಶಾಸನ ಸಭೆಯಲ್ಲಿ ಚರ್ಚಿಸುವ ವಿಷಯಗಳು

ಮೈಸೂರು ೧೯

ಬರುವ ಅಕ್ಟೋಬರ್ ೩ನೇ ತಾರೀಖಿನಿಂದ ರಾಜಧಾನಿಯಲ್ಲಿ ಪ್ರಾರಂಭವಾಗುವ ಶಾಸನ ಸಭೆಯು ೧೫ ದಿನಗಳ ಕಾಲ ನಡೆಯುವುದು. ರಾಜ್ಯಾಂಗದಲ್ಲಿರುವಂತೆ ಕಂಟಿಂಜನ್ಸಿ ನಿಧಿಯನ್ನು ಏರ್ಪಡಿಸುವ ಬಗ್ಗೆ ಮಸೂದೆಯೊಂದನ್ನು ತರಲಾಗುವುದು. ಭೂಕಂದಾಯದ ಸುಧಾರಣೆ, ಸ್ಥಳೀಯ ಸಂಸ್ಥೆಗಳ ಪರಸ್ಪರ ಹೊಂದಾಣಿಕೆ ಕಾರ್ಯಗಳ ಬಗ್ಗೆ ಏರ್ಪಾಡಾದ ವಿವಿಧ ಸಮಿತಿಗಳ ವರದಿಗಳ ಆಧಾರದ ಮೇಲೆ ರಚಿತವಾಗಲಿರುವ ಮಸೂದೆಗಳೂ ಚರ್ಚೆಗೆ ಬರಲಿವೆ. ಡಾ|| ಸಿ. ಆರ್. ರೆಡ್ಡಿಯವರು ವಿಶ್ವವಿದ್ಯಾಲಯದ ಪುನರ್ವ್ಯವಸ್ಥೆ ಬಗ್ಗೆ ಕೊಟ್ಟಿರುವ ವರದಿಯ ಸಂಬಂಧವಾದ ಮಸೂದೆಯನ್ನೂ ತರಲಾಗುವುದು

ಪುರಾಣ ಮತ್ತು ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಆಡಿ ಶುಕ್ರವಾರದ ಪ್ರಯುಕ್ತ ನಾಳೆ ಸಂಜೆ ೫ ಗಂಟೆಗೆ ಮ|| ಮಾಯಗಗೌಡ ಮತ್ತು ಶ್ರೀ ಹಿರಿಯಣ್ಣಯ್ಯನವರುಗಳಿಂದ ಕೃಷ್ಣ ಸಂಧಿ ಎಂಬ ಪುರಾಣವನ್ನೂ, ೭ ಗಂಟೆಗೆ ಹಿರೇಮಠದ ಶ್ರೀ ಹೆಚ್. ಎಸ್. ಶಿವಲಿಂಗಸ್ವಾಮಿಯವರಿಂದ "ಅಕ್ಕ ಮಹಾದೇವಿ" ಎಂಬ ಹರಿಕಥೆಯನ್ನೂ ದೇವಾಂಗ ಸಂಘದವರು ಏರ್ಪಡಿಸಿರುತ್ತಾರೆ.

ಕಾಡಾನೆ ಹಿಡಿಯಲು ಸರ್ಕಾರದ ಆಜ್ಞೆ

ಕಡೂರು ಜಿಲ್ಲೆಯ ಲಕ್ಕವಳ್ಳಿ ಕಾಡಿನಲ್ಲಿರುವ ಕಾಡಾನೆಗಳು ಹಾವಳಿ ಮಾಡುತ್ತಾ, ಪೈರುಗಳಿಗೆ ನಷ್ಟಪಡಿಸುತ್ತಿರುವುದನ್ನು ತಡೆಯಲು, ಸರ್ಕಾರದವರು ಅವುಗಳನ್ನು ಹಿಡಿದುಹಾಕಬೇಕೆಂದು ಆಜ್ಞೆ ಮಾಡಿದ್ದಾರೆ ಗುಂಡಿ ತೋಡಿ ಹಿಡಿಯುವ ಕ್ರಮವನ್ನು ಅನುಸರಿಸಿ ಆನೆಗಳನ್ನು ಹಿಡಿಯಲೇರ್ಪಾಡು ಮಾಡಲಾಗುವುದು. ಅನಂತಪುರ ಜಿಲ್ಲೆಯ ಉರವಕೊಂಡ ಜಗದ್ಗುರುಗಳಿಗೆ ಒಂದು ಆನೆಯನ್ನು ಸರ್ಕಾರದವರು ಬಹುಮಾನವಾಗಿ ಕೊಡಲಿರುವರು

ಸಿ. ಆರ್. ರೆಡ್ಡಿಯವರಿಂದ ಅಲಗಪ್ಪ ಕಾಲೇಜಿನ ಆರಂಭ

ಕಾರೈಕುಡಿಯಲ್ಲಿರುವ ಡಾ|| ಅಲಗಪ್ಪ ಚೆಟ್ಟಿಯಾರರ ಶಿಕ್ಷಣ ಕಾಲೇಜಿನ ಪ್ರಾರಂಭೋತ್ಸವವನ್ನು ಮೈಸೂರು ವಿಶ್ವವಿದ್ಯಾಲಯದ ಪ್ರೋ ಚಾನ್ಸಲರಾದ ಡಾ|| ಸಿ. ಆರ್. ರೆಡ್ಡಿಯವರು ಈ ತಿಂಗಳು ೨೭ರಲ್ಲಿ ನೆರವೇರಿಸುವರು.

ಕೊರಿಯಾಕ್ಕೆ ಬ್ರಿಟಿಷ್ ಸೈನ್ಯ?

ಆಜ್ಞೆಯು ಬಂದೊಡನೆ ೪೮ ಗಂಟೆಗಳೊಳಗೆ ಕೊರಿಯಾ ಯುದ್ಧಕ್ಕೆ ಹೊರಡಲು ಸಿಂಗಪುರದಲ್ಲಿರುವ ೮ ಬ್ರಿಟಿಷ್ ಪಡೆಗಳು ಸಿದ್ಧವಾಗಿವೆಯೆಂದು ವರದಿಯಾಗಿದೆ.

ಆಕ್ರಮಣಕಾರರನ್ನು ಓಡಿಸಲು ಟ್ರೂಮನ್ನರ ನಿರ್ಧಾರ

ಕೊರಿಯದಿಂದ ಆಕ್ರಮಣಕಾರರನ್ನು ಹೊರಕ್ಕೆ ಓಡಿಸಲು ಟ್ರೂಮನ್ನರು ನಿರ್ಧರಿಸಿ, ಅದಕ್ಕಾಗಿ ಕಾಂಗ್ರೆಸ್ಸಿನ ಅನುಮತಿಯನ್ನು ಕೇಳುವವರಾಗಿದ್ದಾರೆ.

ತೃತೀಯ ಯುದ್ಧಕ್ಕೆ ಅಮೆರಿಕದ ಸಿದ್ಧತೆ

ತೃತೀಯ ಮಹಾ ಯುದ್ಧಕ್ಕಾಗಿ ತಯಾರಿಕೆಯನ್ನು ತ್ವರಿತಗೊಳಿಸುವ ಬಗ್ಗೆ ತಕ್ಕ ಸಿದ್ಧತೆ ಮಾಡಿಕೊಳ್ಳುವ ವಿಷಯವಾಗಿ ಅಮೆರಿಕದ ರಾಷ್ಟ್ರ ಸಂಪತ್ತಿನ ರಕ್ಷಣಾ ಬೋರ್ಡಿನ ಅಧ್ಯಕ್ಷರಾದ ಸ್ಟುವರ್ಟ್ ಸಿಮಿಂಗ್ಟನ್‌ರವರು ಅಲ್ಲಿನ ಕೈಗಾರಿಕಾ ಮತ್ತು ವ್ಯಾಪಾರಿ ಪ್ರತಿನಿಧಿಗಳೊಡನೆ ಚರ್ಚಿಸಿದರೆಂದು ವರದಿಯಾಗಿದೆ

ನೆಹರೂರವರ ಮೋಟಾರಿನ ಮುಂದೆ ರೈತರ ಪ್ರದರ್ಶನ

ಕಾಶಿಗೆ ಕಳೆದ ೧೭ನೇ ತಾ|| ಪ್ರಧಾನಿ ನೆಹರೂರವರು ಭೇಟಿಯಿತ್ತ ಸಮಯದಲ್ಲಿ ಮಿರ್ಜಾಪುರದ ೧೫ ಜನ ರೈತರು ಅವರ ಮೋಟಾರಿನ ಮುಂದೆ ಪ್ರದರ್ಶನ ನಡೆಸಿ, ತಮ್ಮ ೧೫೦೦ ಎಕರೆ ಜಮೀನನ್ನು ಪ್ರಾಂತ ಸರ್ಕಾರದವರು ವಶಪಡಿಸಿಕೊಂಡಿದ್ದುದಾಗಿ ಬಿನ್ನವಿಸಿಕೊಂಡರು. ಹಲವರು ಕಾರಿನ ಮುಂಭಾಗದಲ್ಲಿ ಮಲಗಿಬಿಟ್ಟರು. ಪ್ರಧಾನಿಯವರು ಇಳಿದುಬಂದು, ಸರ್ಕಾರದವರು ಮಾಡುವ ಕಾರ್ಯವು ಜನಹಿತ ದೃಷ್ಟಿಯಿಂದ ಆಗುವುದೆಂದು ಹೇಳಿದ ನಂತರ ಮೋಟಾರು ಮುಂದಕ್ಕೆ ಹೋಯಿತು

ಸಿಲೋನಿನ ಪ್ರಧಾನಿಯ ವಿಚಿತ್ರ ಅನುಭವ

ಸಿಲೋನಿನ ಮುಖ್ಯ ಮಂತ್ರಿ ಎಸ್. ಸೇನಾನಾಯಕೆಯವರಿಗೆ ನೆನ್ನೆ ಮುಂಜಾನೆ ವಿಚಿತ್ರ ಅನುಭವವಾಯಿತು. ಅವರ ಭವನದ ಸುತ್ತಲೂ ಕಾವಲಿದ್ದ ಪಹರೆಯವರನ್ನು ಕಣ್ಣು ತಪ್ಪಿಸಿ, ಅಪರಿಚಿತ ವ್ಯಕ್ತಿಯೊಬ್ಬನು ಭವನದ ನಿದ್ರಾಕೋಣೆಗೆ ಹೋಗಿ ಪ್ರಧಾನಿಯವರನ್ನು ಕಂಡು ತನ್ನನ್ನು ಲಂಕೆಯ ಅಧಿಪತಿಯನ್ನಾಗಿ ಮಾಡಿಕೊಳ್ಳಬೇಕೆಂದು ಆಜ್ಞೆಯಾಗಿದೆಯೆಂದೂ, ಆ ರೀತಿ ಮುಖ್ಯ ಮಂತ್ರಿಗಳು ನಡೆಸಿಕೊಟ್ಟರೆ ತಾನು ಅವರಿಗೆ ಜೀವಿತ ಪ್ರಧಾನಿಯ ಪದವಿಯನ್ನು [illegible] ಹೇಳಿದನೆಂದೂ, ಪ್ರಧಾನಿಯವರು ಅವನ ಉದಾರ ದಾನವನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಹೇಳಿ ಅವನ ಅರಿಕೆಯನ್ನು ಪರಿಶೀಲಿಸುವುದಾಗಿ ತಿಳಿಸಿದರೆಂದೂ ಹೇಳಲಾಗಿದೆ

ಕೋಮುವಾರು ನೀತಿಯ ಬಗ್ಗೆ ಅರ್ಜಿ ನ್ಯಾಯಾಲಯದ ತೀರ್ಪಿಗೆ

ಮದ್ರಾಸಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾವಕಾಶದ ಬಗ್ಗೆ ಅನುಸರಿಸುತ್ತಿರುವ ಕೋಮುವಾರು ನೀತಿಯು ರಾಜ್ಯಾಂಗದ ಮೂಲ ತತ್ವಗಳಿಗೆ ವಿರೋಧವೆಂದು ಅಲ್ಲಿನ ಶ್ರೇಷ್ಠ ನ್ಯಾಯಾಲಯದಲ್ಲಿ ತಂದಿದ್ದ ಅರ್ಜಿಗಳ ಬಗ್ಗೆ ಮೊನ್ನೆ ವಾದವಿವಾದಗಳಾದವು ತೀರ್ಪಿಗೆ ಕಾಯ್ದಿಡಲಾಗಿದೆ. ಅರ್ಜಿದಾರರ ಪರ ವಾದ ಮಾಡಿದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ವಿ. ವಿ. ಶ್ರೀನಿವಾಸಯ್ಯಂಗಾರ್ಯರು ರಾಜ್ಯಾಂಗದಲ್ಲಿ ದತ್ತವಾದ ಮೂಲಭೂತ ಹಕ್ಕುಗಳಿಗೆ ಈ ಆಜ್ಞೆಯು ವಿರೋಧವಾಗಿರುವುದೆಂದೂ ಆದ್ದರಿಂದ ಅದು ಕ್ರಮಬದ್ಧವಲ್ಲವೆಂದೂ ತಿಳಿಸಿದರು. ರಾಜ್ಯದ ಪ್ರಜೆಯೆಂದು ರಾಜ್ಯಾಂಗದಲ್ಲಿ ತಿಳಿಸಿ ಅದರಂತೆಯೇ ಹಕ್ಕು ಬಾಧ್ಯತೆಗಳನ್ನು ಗೊತ್ತುಪಡಿಸಿರುವುದಾಗಿ ಹೇಳಲಾಯಿತು. ಆದ್ದರಿಂದ ಲಿಂಗ, ಮತ ಭೇದಗಳ ಮೇಲೆ ವ್ಯತ್ಯಾಸ ಮಾಡುವುದು ಕಾನೂನಿಗೆ ವಿರೋಧವೆಂದೂ ಅವರು ಅಭಿಪ್ರಾಯಪಟ್ಟರು. ರಾಜ್ಯಾಂಗವನ್ನು ರಚಿಸಿದವರೂ ಸಹ ಇದೇ ಅಭಿಪ್ರಾಯವನ್ನು ಇಟ್ಟುಕೊಂಡು ಅದನ್ನು ತಯಾರಿಸಿದರೆಂದು ಅವರು ಹೇಳಿದರು

ಗ್ರೀಸಿನ ಮೇಲೆ ಕಮ್ಯೂನಿಸ್ಟ್ ದಂಡಯಾತ್ರೆ?

ರಷ್ಯಾ ಮತ್ತು ಅದರ ಹಿಂಬಾಲಕ ಕಮ್ಯೂನಿಸ್ಟ್ ರಾಜ್ಯಗಳು ಗ್ರೀಸಿನ ಮೇಲೆ ಆಕ್ರಮಣ ಮಾಡುವ ಸೂಚನೆಗಳು ಕಾಣುತ್ತಿವೆಯೆಂದೂ, ಈ ಬಗ್ಗೆ ಸೂಕ್ತ ರಕ್ಷಣಾ ಕಾರ್ಯವನ್ನು ಕೈಗೊಳ್ಳಬೇಕೆಂದೂ ವಿಶ್ವಸಂಸ್ಥೆಯ ಬಾಲ್ಕನ್ ಸಮಿತಿಯು ತಿಳಿಸಿದೆ

೫-೬ ಸಾವಿರ ರೂ.ಗಳ ಗಡಿಯಾರಗಳ ಕಳ್ಳತನ

ಸ್ವಂ ಸು.] ಚಿಕ್ಕಮಗಳೂರು ೧೯

ಇಲ್ಲಿನ ಪೇಟೆಯ ಮಧ್ಯಭಾಗದಲ್ಲಿರುವ ಶ್ರೀ ಗುಲಾಬ್ ಸಿಂಗ್‌ರವರ ಅಂಗಡಿಗೆ ಮೊನ್ನೆ ರಾತ್ರಿ ಕಳ್ಳರು ನುಗ್ಗಿ ೫-೬ ಸಾವಿರ ರೂ. ಬೆಲೆ ಬಾಳುವ ಗಡಿಯಾರದ ಸಾಮಾನು ಮತ್ತು ರಿಪೇರಿಗಾಗಿ ಕೊಡಲಾಗಿದ್ದ ಕೈ ಗಡಿಯಾರಗಳನ್ನು ಅಪಹರಿಸಿದ್ದಾರೆಂದು ತಿಳಿದುಬಂದಿದೆ. ಅಂಗಡಿಯ ಮೇಲ್ಭಾಗದ ಹೆಂಚುಗಳನ್ನು ತೆಗೆದು ಕೃತ್ಯ ನಡೆಸಿರುವುದಾಗಿ ಹೇಳಲಾಗಿದೆ.

ಅಮೆರಿಕ [illegible]

[illegible]

॥ ವಂದೇ ಮಾತರಂ ॥

ಸಾಧ್ವಿ

ಶುಕ್ರವಾರ ೨೦-೭-೧೯೫೦ನೇ ಗುರುವಾರ

ನಮ್ಮ ಧನ್ಯವಾದ

—— ೦ ——

“ಸಾಧ್ವಿ”ಯು ದಿನ ಪತ್ರಿಕೆಯಾಗಿ ಹೊರಟು ಎಂಟು ವರ್ಷಗಳು ಕಳೆದು ಇಂದಿನಿಂದ ಒಂಭತ್ತನೆಯ ವರ್ಷವು ಆರಂಭವಾಗುತ್ತದೆ. ಕಳೆದ ದಿನಗಳಲ್ಲಿ ಅದು ಶಕ್ತ್ಯನುಸಾರವಾದ ಮಟ್ಟಿಗೆ ನಾಡು ಮತ್ತು ... ಸೇವೆಯನ್ನು ಮಾಡಲು ಪ್ರಯತ್ನಿಸಿದೆ. ಮೈಸೂರು ವೃದ್ಧ ಹಿತಾ... ವೆಂಕಟಕೃಷ್ಣಯ್ಯ... ಗಳಲ್ಲಿ “ಸಾಧ್ವಿ”ಯು ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಪ್ರಾರಂಭದಲ್ಲೇ ಪತ್ರಿಕೆಯನ್ನು ನೌಕರಿ...ದಲ್ಲಿ ನಡೆಸಿಕೊಂಡು

ಬೃಹತ್ತು ದಿನೇ ದಿನೇ ಪ್ರಬಲವಾಗುತ್ತಿರುವ ವೃತ್ತಿ ಸಮಾಚಾರವು ರೀತಿಗಳನ್ನು ನಿರ್ದೇಶಿಸುತ್ತಿರುವ ಸಮಯದಲ್ಲಿ ಅದರ ಕಾರ್ಯವು ವ ಹತ್ತರವಾದುದು. ನಮ್ಮ ದೇಶದ ಅನೇಕ ಪತ್ರಿಕೆಗಳು ಈ ಗುರಿಯನ್ನಿಟ್ಟುಕೊಂಡು ದೇಶದ ಮತ್ತು ಸಮಾಜದ ಹಿತವನ್ನು ಸಾಧಿಸುತ್ತಿವೆ. ಆ ನಮ್ಮ ಸಹೋದ್ಯೋಗಿಗಳೆಲ್ಲರಿಗೂ ಈ ಸಮಯದಲ್ಲಿ ನಾವು ನಮ್ಮ ಅಭಿನಂದನೆಯನ್ನು ಸೂಚಿಸುವುದಲ್ಲದೆ ಅವುಗಳ ಉಜ್ವಲ ಸಕಲ ಸನ್ಮಂಗಳಗಳೂ ಉಂಟಾಗಲೆಂದು ಪ್ರಾರ್ಥಿಸುತ್ತೇವೆ.

ನಮ್ಮ ಪ್ರಯತ್ನಗಳಲ್ಲಿ ... ಸಹಾಯ ಮಾಡುತ್ತಿರುವ ನಮ್ಮ ಲೇಖಕರಿಗೂ ... ವಾಚಕರಿಗೂ ಜಾಹಿರಾತುದಾರರಿಗೂ, ಪ್ರಕಟನಕಾರರಿಗೂ ಸಕಲ ಹಿತೈಷಿಗಳಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಎರಡು ಮಹಾ ಸಂಗ್ರಾಮಗಳ ಕಾಟದಿಂದ ಬಳಲಿ ಬೆಂಡಾದ ಪ್ರಪಂಚವು ಅತಿ ಶೀಘ್ರದಲ್ಲಿಯೇ ಪುನಃ ಘೋರ ಸಮರದ ಅಗ್ನಿ ಕುಂಡದಲ್ಲಿ ಧುಮುಕುವ ಭೀತಿಯು ತಲೆದೋರುತ್ತಿದೆ. ಕೊರಿಯಾ ದೇಶದ ಅಂತಃಕಲಹದಿಂದ ಉದ್ಭವಿಸಿದ ಒಂದು ಸಣ್ಣ ಪ್ರಸಂಗವು ಜಗತ್ತಿನ ಮಹಾರಾಷ್ಟ್ರಗಳ ಗಮನವನ್ನು ಸೆಳೆದು ಎಲ್ಲರ ಬಾಯಲ್ಲೂ ಮತ್ತೆ ಯುದ್ಧದ ಮಾತೇ ಹೊರಡುವಂತೆ ಮಾಡಿರುತ್ತದೆ. ಈ ಸಣ್ಣ ಘರ್ಷಣೆಯು ಬೃಹದಾಕಾರವನ್ನು ತಾಳಿ ಇಡೀ ವಿಶ್ವವನ್ನೇ ದಹಿಸದಂತೆ ತಡೆಗಟ್ಟಲು ಭಾರತದ ಇಂದಿನ ಮಹಾ ನಾಯಕ ನೆಹರೂರವರು ಮುಂದೆ ಬಂದಿದ್ದಾರೆ. ಪಾಶ್ಚಿಮಾತ್ಯ ದೇಶಗಳ ಪ್ರಮುಖ ವ್ಯಕ್ತಿಗಳ ಮಾತಿಗೆ ಕಿವಿಗೊಡದೆ ಉದಾಸೀನರಾಗಿದ್ದ ಮಾರ್ಷಲ್ ಸ್ಟಾಲಿನ್ ನು ಪಂಡಿತ ನೆಹರೂರವರ ಸಲಹೆಗೆ ಸಮ್ಮತಿ ಕೊಟ್ಟು ಸಂಧಾನಕ್ಕೆ ಸಿದ್ಧನಾಗಿರುವುದರಿಂದ ಸ್ವಾತಂತ್ರ್ಯಾನಂತರ ಭಾರತದ ನೈತಿಕ ಶಕ್ತಿಯೂ ಧರ್ಮ ಭಾವನೆಯೂ ಮಾನವ ಪ್ರೇಮವೂ ಮತ್ತೆ ಗಣ್ಯ ಸ್ಥಾನವನ್ನು ಪಡೆದು ಇಡೀ ಜಗತ್ತಿಗೇ ಶಾಂತಿಯ ಹಾದಿಯನ್ನು ತೋರುವ ಕಾಲವು ಸನ್ನಿಹಿತವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಪರಮಾತ್ಮನು ಸಕಲರಿಗೂ ಸದ್ಬುದ್ಧಿಯನ್ನು ಕರುಣಿಸಿ ಪ್ರಪಂಚದಲ್ಲಿ ಶಾಶ್ವತ ಶಾಂತಿಯು ನೆಲೆಸುವಂತೆ ಅನುಗ್ರಹಿಸಲೆಂದು ಅನನ್ಯ ಭಕ್ತಿಯಿಂದ ಬೇಡುತ್ತೇವೆ.

ರಷ್ಯದ ಅನುಚಿತ ಕಾರ್ಯ

ನೆಹರೂ ಮತ್ತು ಸ್ಟಾಲಿನ್‌ರವರ ಪತ್ರವ್ಯವಹಾರವನ್ನು ರಷ್ಯವು ಪ್ರಕಟಿಸಿರುವುದು ಸಂಪ್ರದಾಯ ವಿರುದ್ಧ ಕಾರ್ಯವೆಂದು ಭಾರತದ ವಿದೇಶಾಂಗ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ,

ಬೆಂಗಳೂರು

ವಿದ್ಯಾರ್ಥಿ ಗೋಷ್ಠಿಯಲ್ಲಿ ವರ್ಣಾಶ್ರಮದ ಬಗ್ಗೆ ಚರ್ಚೆ

ಮೈಸೂರು ೧೯

ಅಂತರ ರಾಷ್ಟ್ರೀಯ ವಿದ್ಯಾರ್ಥಿಗೋಷ್ಠಿಯಲ್ಲಿ ನೆನ್ನೆ ಭಾರತದಲ್ಲಿರುವ ವರ್ಣಾಶ್ರಮ ಧರ್ಮದ ಬಗ್ಗೆ ಚರ್ಚೆ ನಡೆಯಿತು. ಅಮೇರಿಕದಲ್ಲಿ ಪ್ರತ್ಯೇಕತೆಯ ಪದ್ಧತಿಯಿರುವಂತೆ ಈ ವರ್ಣಾಶ್ರಮ ಧರ್ಮವಿರುವುದಾಗಿ ಅಮೇರಿಕದ ಪ್ರತಿನಿಧಿಗಳು ಅಭಿಪ್ರಾಯಪಟ್ಟರು. ಈ ಬಗ್ಗೆ ನಿಜಸ್ಥಿತಿಯನ್ನು ವಿವರಿಸಲು ಭಾರತೀಯ ಪ್ರತಿನಿಧಿಗಳೊಬ್ಬರು ವರ್ಣಾಶ್ರಮ ಧರ್ಮದ ಬೆಳವಣಿಗೆಯ ಚರಿತ್ರೆಯನ್ನು ವಿವರಿಸಿದರು. ಇದನ್ನು ತೆಗೆದು ಹಾಕುವ ವಿಷಯವಾಗಿ ಭಾರತೀಯ ಪ್ರತಿನಿಧಿಗಳಲ್ಲಿ ಭಿನ್ನಾಭಿಪ್ರಾಯವು ಇದ್ದಿತು. ಇದಲ್ಲದೆ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಈಗ ಇರುವ ಹಲವು ಕೊರತೆಗಳ ವಿಷಯವಾಗಿ ಚರ್ಚೆಯಾಯಿತು. ವಿದ್ಯಾಭ್ಯಾಸವು ಸಾರ್ವತ್ರಿಕವಾಗಿಲ್ಲದಿರುವುದೊಂದು ಕೊರತೆಯಾಗಿದೆಯೆಂದೂ, ಈಗ ಕೊಡಲಾಗುತ್ತಿರುವ ಶಿಕ್ಷಣವು ಸ್ಥಳೀಯ ಭಾಷೆಯಲ್ಲಿಲ್ಲವೆಂದೂ, ಆರ್ಥಿಕ ಪರಿಸ್ಥಿತಿಯಿಂದ ಅನೇಕ ಉತ್ತಮ ಯುವಕ ಯುವತಿಯರಿಗೆ ಅವಕಾಶವಾಗಿಲ್ಲವೆಂದೂ ತಿಳಿಸಲಾಯಿತು. ಈಗ ಶಿಕ್ಷಣ ಹೊಂದಿರುವವರಲ್ಲಿ ಹೆಚ್ಚು ಜನ ವಿಜ್ಞಾನ ಶಾಸ್ತ್ರಗಳನ್ನು ಓದುತ್ತಿರುವುದನ್ನು ಕಂಡು ವಿದೇಶದ ಪ್ರತಿನಿಧಿಗಳು ಆಶ್ಚರ್ಯಪಟ್ಟರು. ವಿಶ್ವವಿದ್ಯಾಲಯದಲ್ಲಿ ಆಟಪಾಟ ಮತ್ತು ವಿದ್ಯಾಭ್ಯಾಸದ ರೀತಿಗೆ ಸ್ವತಂತ್ರ ಅವಕಾಶವಿಲ್ಲದುದನ್ನು ಕಂಡು ಅಮೇರಿಕನ್ನರು ಚಕಿತರಾದರು. ಪುಸ್ತಕ ಮುಂತಾದವುಗಳ ಮೂಲಕ ವಿದ್ಯಾರ್ಥಿಗಳು ಈ ರೀತಿ ಬದಲಾವಣೆ ಮಾಡಬಹುದಾಗಿರುವ ವಿಷಯವನ್ನು ಅವರ ಗಮನಕ್ಕೆ ತರಲಾಯಿತು.

WANTED

A Tailoring Instructor immediately for Vanita Sadana Jayanagar Mysore For particulars apply to —

THE HON SECRETARY

Edited, printed and published by A R Nagarajan, at Sadhvi Press D Subbiah Road, Mysore

ರಷ್ಯ-ಬ್ರಿಟನ್ ಸಂಧಾನ

ಪ್ರಪಂಚದ ಶಾಂತಿಯ ಬಗ್ಗೆ ಪ್ರಧಾನಿ ನೆಹರೂರವರು ನಡೆಸುತ್ತಿರುವ ಶಾಂತಿ ಪ್ರಯತ್ನದಂತೆಯೇ ರಷ್ಯದಲ್ಲಿರುವ ಬ್ರಿಟನ್ನಿನ ರಾಯಭಾರಿ ಸರ್ ಡೇವಿಡ್ ಕೆಲ್ಲಿಯವರು ಅಲ್ಲಿನ ವಿದೇಶಾಂಗ ಮಂತ್ರಿಗಳೊಡನೆ ಸಂಧಾನ ನಡೆಸುತ್ತಿರುವುದಾಗಿ ವರದಿಯಾಗಿದೆ.

---

20 7-50 ರಿಂದ 2ನೇ ವಾರ

ದಿನವಹಿ 3 ಆಟಗಳು

ಒಲಿಂಪಿಯಾ

ಫಜಲಿ ಬ್ರದರ್ಸ್‌ರವರ

- ದುನಿಯಾ -

ಸುರಯ್ಯ ಕರನ್ ದಿವಾನ್ ಯಾಕೂಬ್

ಬೆಳಗಿನ ಪ್ರದರ್ಶನ 21-7 50ರಿಂದ

ಭಗವಾನ್ ಪಾತ್ರ ವಹಿಸಿರುವ **ಷೋಕಿನ್**

ಗಣೇಶಾ ಟಾಕೀಸ್

21 7 50ರಿಂದ ಪ್ರತಿ ದಿನ 3 ಆಟಗಳು

ಪ್ರಭಾತ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

ಸಂತ್ - ಧ್ಯಾನೇಶ್ವರ್

ಪಾತ್ರ ಬಾಬು ಪೆಂಧಾರ್ಕರ್ ಉಲ್ಹಾಸ್ ಮತ್ತು ಸುಮತಿ ಗುಪ್ತೆ

ರಾಜಕಮಲ್,

ಮೈಸೂರು

21 7 50 ರಿಂದ 2ನೇ ವಾರ

ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ

ಸಮಾಧಿ

— ಭೂಮಿಕೆ —

ಅಶೋಕ್ ಕುಮಾರ್ ಶ್ಯಾಮ್, ನಳಿನಿ ಜಯವಂತ್ ಕುಲದೀಪ್ ಮುಬಾರಕ್

— ಬೆಳಗಿನ ಪ್ರದರ್ಶನಗಳು —

21—7—50 ರಿಂದ 3 ದಿನಗಳು ಮಾತ್ರ

ಪ್ರೊಫೆಸರ್ ವಾಲಿ

(ಹಿಂದಿ)

ಭೂಮಿಕೆ — ಅಶೋಕ್ ಕುಮಾರ್, ಮುಕ್ತಾವಾ...

ಪ್ರಭುದೇವಾ ಟಾಕೀಸ್

21—7—50 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ ದಿನವಹಿ 3 ಪ್ರದರ್ಶನಗಳು

ಭಕ್ತ ಪುಂಡಲೀಕ

(ಹಿಂದಿ)

ಪಾತ್ರ:- ರಾಣಿ ಪ್ರೇಮಲತಾ, ಸಗುಣಾ, ರಂಭಾ, ಸೋಫಿಯಾ, ನಜೀರ್ ಮುಂತಾದವರು.

೩ ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಪಾಸುಗಳನ್ನೂ ಮನ್ನಾ ಮಾಡಲಾಗಿದೆ.

ಫೋನ್ ನಂ. 792 | ವಂದೇ ಮಾತರಂ | ಒಂದಿನ ಪತ್ರಿಕೆ ೧ ಆಣೆ

ಸಾಧ್ವಿ

ಸಂಪುಟ ೯] ಶುಕ್ರವಾರ ೨೧-೭-೫೦ [ಸಂಚಿಕೆ ೨

ನೆಹರೂ ಸಲಹೆಗೆ ಬ್ರಿಟನ್ನಿನ ನಿರಾಕರಣೆ

"ಸಾಧ್ವಿ" ಪತ್ರಿಕೆಯ ೮ನೇ ವಾರ್ಷಿಕೋತ್ಸವ

ಡಾ. ಆರ್. ರೆಡ್ಡಿಯವರಿಂದ ಶ್ರೀ ಅರವಿಂದರ ಭಾವಚಿತ್ರ ಅನಾವರಣ

ಮೈಸೂರು ೨೧

ಸಾಧ್ವಿ ಪತ್ರಿಕೆಯ ಎಂಟನೇ ವಾರ್ಷಿಕೋತ್ಸವವು ನೆನ್ನೆ ಸಂಜೆ ಜಗದ ಸ...ರ ಭವನದಲ್ಲಿ ನೆರವೇರಿಸಲ್ಪಟ್ಟಿತು. ...ವಿದ್ಯಾಲಯದ ಪ್ರೊ| ಚಾನ್ಸಲರಾದ ಡಾ|| ಸಿ. ಆರ್. ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಅರವಿಂದ ಘೋಷರ ಭಾವಚಿತ್ರದ ಅನಾವರಣವನ್ನು ಶ್ರೀ ರೆಡ್ಡಿಯವರು ನೆರವೇರಿಸಿದರು.

ಧರ್ಮಾಧಿಕಾರಿ ಜ್ಯೋತಿಷ ರತ್ನಂ ವಿದ್ವಾಂಸರೂ ವೇದಾಚಾರ್ಯರಿಂದ ವಿರಚಿತವಾದ ಸಂಸ್ಕೃತದ ಮಂಗಳಾಶಂಸನವನ್ನು ಶ್ರೀ ಕೆ. ವಿ. ಅಯ್ಯಂಗಾರರು ಓದಿದರು. ವೇ|| ಮೂರ್ತಿ ಬ್ರಂ|| ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳು ಕನ್ನಡದಲ್ಲಿ ಮಂಗಳಾಚರಣೆ ಪದ್ಯಗಳನ್ನು ಹಾಡಿದರು.

ಪತ್ರಿಕೆಯ ಸಂಚಾಲಕರಾದ ಶ್ರೀ ಅಗರಂ ರಂಗಯ್ಯನವರು ಸ್ವಾಗತ ಭಾಷಣ ಮಾಡಿ, ಸಾಧ್ವಿ ಪತ್ರಿಕೆಯು ಕಳೆದ ಎ... ವರ್ಷ ೧೪ ದಲೂ ನಡೆಸಿರುವ ಸೇವೆಯನ್ನು ಅಂಕೆ ಮಾಡಿದರು. ದಿನ ಗತ... ವೃದ್ಧ ಸೀತಾರಾಮ ಎಂ. ವೆಂಕಟ ಕೃಷ್ಣಯ್ಯನವರು ಪೋಷಿಸಿ ನಡೆಸಿಕೊಂಡು ಬಂದಿದ್ದ ಪತ್ರಿಕೆಗಳಲ್ಲಿ ಒಂದಾದ 'ಸಾಧ್ವಿ' ಯು ತನ್ನ ಎಂಟನೇ ವಾರ್ಷಿಕೋತ್ಸವವನ್ನು ನಡೆಸುವ ಸಮಯದಲ್ಲಿ ಭಾರತದ ಮಹಾ ವ್ಯಕ್ತಿಗಳಾದ ಯೋಗಿವರ್ಯ ಅರವಿಂದ ಘೋಷರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಈ ಸಮಯದಲ್ಲಿ ನೆರವೇರಿಸುವ ಔಚಿತ್ಯವನ್ನು ಶ್ರೀಯುತರು ವಿವರಿಸಿ, ಅರವಿಂದ ಘೋಷರೊಡನೆ ಹಿಂದೆ ತಾವು ಸಂಭಾಷಿಸಿದಾಗ ಅವರಿಂದ ಬಂದ ವಾಕ್ಯಗಳ ಸ್ಫೂರ್ತಿಯು ತಮ್ಮಲ್ಲಿ ಅಚ್ಚಳಿಯದೇ ಇರುವುದಾಗಿ ಅರಿಕೆ ಮಾಡಿಕೊಂಡರು. ಡಾ|| ರೆಡ್ಡಿಯವರು ಶ್ರೀ ಅರವಿಂದರ ಭಾವಚಿತ್ರ ಅನಾವರಣ ಮಾಡಬೇಕೆಂದು ಕೋರಿಕೊಂಡರು.

ಮಹರ್ಷಿ ಅರವಿಂದ ಘೋಷರವರೂ ಮತ್ತು ಅವರ ಆಶ್ರಮದ ಮಾತೆಯವರೂ ವಾರ್ಷಿಕೋತ್ಸವಕ್ಕೆ ತಮ್ಮ ಆಶೀರ್ವಾದಗಳನ್ನು ಕಳುಹಿಸಿದ್ದರು. ಭಾರತ ಸರ್ಕಾರದ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿ, ಮೈಸೂರಿನ ಸಚಿವರುಗಳಾದ ಶ್ರೀಗಳು ಹೆಚ್. ಸಿ. ದಾಸಪ್ಪ, ಕೆ. ಟಿ. ಭಾಷ್ಯಂ, ಟಿ. ಸಿದ್ಧಲಿಂಗಯ್ಯ, ಮೈಸೂರು ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ವಿ. ಎಸ್. ನಾರಾಯಣ ರಾವ್, ಬೊಂಬಾಯಿನ ಶ್ರೀನಿವಾಸ ಪ್ರಿಂಟರ್ಸ್‌ರವರ ಶ್ರೀ ಜಿ. ಎಸ್. ಅಯ್ಯರ್, ನಿವೃತ್ತ ಕೈಲ್ಸೆ ಜ|| ಮ್ಯಾ|| ಶ್ರೀ ವೈ. ಕೆ. ರಾಮಚಂದ್ರರಾವ್, ಕನ್ನಡ ಸಾಹಿತ್ಯದ ಸಂಪಾದಕರಾದ ಡಾ|| ಎ|| ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ, ಪ್ರೊ|| ಪ್ರ|| ಎ. ಎನ್. ರಂಗಸ್ವಾಮಿ ಅಯ್ಯಂಗಾರ್, ಡಾ|| ಜಿ. ಕೆ. ರಾಮಸ್ವಾಮಿ, ಓರಿಯಂಟಲ್ ಇಂಡಸ್ಟ್ರೀಸಿನ ಶ್ರೀ ಬಿ. ಎಸ್. ಸುಬ್ಬರಾವ್, ಗುಂಡ್ಲುಪೇಟೆಯ ಶ್ರೀ ಹೆಚ್. ಎಸ್. ರಾಮಣ್ಣ ಇವರುಗಳು ಶುಭ ಸಂದೇಶಗಳನ್ನು ಕಳುಹಿಸಿದ್ದರು.

ಬಳಿಕ ಪ್ರೊ| ಚಾನ್ಸಲರು ಯೋಗಿವರ್ಯರ ಭಾವಚಿತ್ರವನ್ನು ಕರತಾಡನಗಳ ಮಧ್ಯೆ

ಶ್ರೀ ಅರವಿಂದ ಯೋಗಿಗಳು

ಅನಾವರಣ ಮಾಡಿದರು. ಅವರು ಭಾಷಣ ಮಾಡುತ್ತಾ, ಅರವಿಂದಘೋಷರ ಚಿತ್ರವು ತಮ್ಮ ತಾವು ಭೇಟಿಯಾಗುತ್ತಿದ್ದದನ್ನು ತಿಳಿಸಿ, ಅವರಿಗೂ ತಮಗೂ ಇದ್ದ ಬಾಂಧವ್ಯವನ್ನು ವಿಮರ್ಶಿಸಿದರು. ಅರವಿಂದರ ಜೀವನ ಚರಿತ್ರೆಯನ್ನು ವಿವರಿಸುತ್ತಾ, ಅವರು ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರತಿಭಾನ್ವಿತರಾಗಿ ವ್ಯಾಸಂಗ ಮಾಡಿ ಐ. ಸಿ. ಎಸ್. ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಅವರು ಪಡೆದಿದ್ದರೂ ದೈಹಿಕ ದಾರ್ಢ್ಯವಿಲ್ಲವೆಂಬ ಕಾರಣದ ಮೇಲೆ ಅವರನ್ನು ತೇರ್ಗಡೆ ಮಾಡಿಸದಿದ್ದುದನ್ನು ತಿಳಿಸಿ ಇದೊಂದು ವರ ಪ್ರದಾನವೇ ಆಯಿತೆಂದು ಹೇಳಿದರು. ಬ್ರಿಟಿಷರ ಆಳ್ವಿಕೆಯಲ್ಲಿ ಸಾಮಾನ್ಯ ಅಧಿಕಾರಿಗಳಾಗಿ ನಿವೃತ್ತರಾಗುವುದು ತಪ್ಪಿ ಯೋಗಿವರ್ಯರು ಜಗತ್ತಿನ ಮತ್ತು ಮಾನವ ವರ್ಗದ ಗುರುಗಳಾಗಲು ಅವಕಾಶವಾದುದು ದೇಶದ ಸೌಭಾಗ್ಯವೆಂದು ಅಭಿಪ್ರಾಯಪಟ್ಟರು. ಘೋಷರು ಬರೋಡ ವಿಶ್ವವಿದ್ಯಾಲಯದಲ್ಲಿದ್ದ ವಿಷಯವನ್ನು ತಿಳಿಸಿ, ಆಗ ಬಂಗಾಳದ ವಿಭಜನೆಯು ಪ್ರಚಂಡ ಆಂದೋಲನ ಕಲ್ಲೋಲದ ಚಳುವಳಿಯು ಅರವಿಂದರನ್ನು ಸೆಳೆದ ವಿಚಾರವನ್ನು ವಿವರಿಸಿದರು.

ಕಲ್ಕತ್ತದ ಅಲಿಪುರದ ಬಾಂಬು ಘಟನೆ ಅರವಿಂದರ ದಸ್ತಗಿರಿ, ಜೈಲು ವಾಸ, ಜೈಲಿನಲ್ಲಿ ಅವರಿಗೆ ಉಂಟಾದ ಸಾಕ್ಷಾತ್ಕಾರ ಇವುಗಳನ್ನು ವರ್ಣಿಸಿದರು. ವೇದ ಮತ್ತು ಪುರಾಣಗಳಲ್ಲಿ ಅವರಿಗಿದ್ದ ಗಾಢ ನಂಬಿಕೆ ಮತ್ತು ಅವುಗಳನ್ನು ಅನುವ್ಯಾಖ್ಯಿಸಿ ತಂದ ಪ್ರಾಚೀನ ಋಷಿಗಳ ಜ್ಞಾನ ಸಂಸ್ಕಾರ ಮುಂತಾದವುಗಳನ್ನು ವಿವರಿಸಿದರು.

ಶ್ರೀ ಅರವಿಂದರು ಪ್ರಾಚೀನ ಋಷಿಗಳಂತೆಯೇ ಜ್ಞಾನ ದೀವಿಗೆಯನ್ನು ಹಿಡಿದೆತ್ತಿ ವೇದಗಳಲ್ಲಿ ಉತ್ಕೃಷ್ಟವಾದ ಆದರ್ಶಗಳ ಹೊಸ ಅರ್ಥವನ್ನು ನಿರೂಪಿಸಿರುವರು. ಅವರು ಬರೆದಿರುವ ಗ್ರಂಥಗಳು ಮತ್ತು ಭಾಷಣಗಳು ಸಕಲರಿಗೂ ಉಪಯುಕ್ತವಾದುವೆಂದು ತಿಳಿಸಿ ಗೀತೆಗೆ ಅವರ ವ್ಯಾಖ್ಯಾನ ... ಅವರು ಪರಮಹಂಸರ ... ಹೇಳಿದರು ... ಹಿಂಸೆಯನ್ನು ... ತಂತ್ರ ಹಿಂದೆ ಧರ್ಮವು ಮಾಡಿರುವ ಕೈಂಕರ್ಯವನ್ನು ಚಿತ್ರಿಸಿದರು.

ಈಗ ದೇಶದಲ್ಲಿ ನಿರಾಶೆಯು ಹರಡಿ ಜಡತ್ವಭಾವವು ಬೆಳೆದು ಬಂದಿರುವುದು ಶೋಚನೀಯವೆಂದು ಹೇಳಿದರು. ಇಂತಹ ಜಡತ್ವವು ತೊಲಗಿ ದೇಶವು ಮತ್ತೆ ಚೈತನ್ಯ ಹೊಂದಲು ಅರವಿಂದರಂತಹ ವ್ಯಕ್ತಿಗಳ ಮಾರ್ಗದರ್ಶನವು ಅಗತ್ಯವೆಂದು ತಿಳಿಸಿದರು. ರಾಜಕೀಯ ಪುನರ್ನವೀಕರಣ ಅವಶ್ಯಕವಾಗಿರುವುದರಿಂದ ಪರಿಶುದ್ಧ ಮನುಜರಾಗಿ ಅತ್ಯುನ್ನತಿಗೇರಲು ... ವೇದಗಳ ... ವ್ಯಾಪಿಯಾದ ಪ್ರಭಾವವನ್ನು ಹೊಂದಿರುವ ಅಂಶವನ್ನು ಶ್ರೀ ರೆಡ್ಡಿಯವರು ಒತ್ತಿ ಹೇಳಿದರು.

ಬೆಂಗಳೂರು ಗಾನ ಮಂದಿರದ ಸಂಗೀತ ವಿದುಷಿ ... ಚನ್ನಮ್ಮನವರ ಸಂಗೀತವು ವಿದ್ವಾನ್ ಹೆಚ್. ವಿ. ಕೃಷ್ಣರಾಯರ ಪಿಟೀಲು ವಾದ್ಯ ವಿದ್ವಾನ್ ಕೆ. ಎಸ್. ಗೋಪಾಲರಾಯರವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು. ಧನ್ಯವಾದಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಭಾರತದ ಕಮ್ಯೂನಿಸ್ಟರು "ಹಿಂಸಾ ಕಾರ್ಯ" ಬಿಟ್ಟರು

ಹಿಂಸೆ ಮತ್ತು ವಿಧ್ವಂಸ ಕೃತ್ಯಗಳ ಧ್ಯೇಯವನ್ನು ಭಾರತದ ಕಮ್ಯೂನಿಸ್ಟ್ ಪಕ್ಷವು ತ್ಯಜಿಸಿದೆಯೆಂದು ತಿಳಿದುಬಂದಿದೆ ... ನರು ಇನ್ನು ಮುಂದೆ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಬಹಿರಂಗವಾಗಿ ... ವಿರೋಧಿಯಾಗಿ ಕಾರ್ಯವನ್ನು ಕೈಗೊಳ್ಳುವುದಾಗಿ ಹೇಳಲಾಗಿದೆ.

ಪ್ರಧಾನಿ ನೆಹರೂ ಸಲಹೆಗೆ ಬ್ರಿಟನ್ನಿನ ತಿರಸ್ಕಾರ

ಪ್ರಧಾನಿ ನೆಹರೂರವರು ಮಾಡಿದ್ದ ಶಾಂತಿ ಸಲಹೆಯನ್ನು ಬ್ರಿಟಿಷ್ ಮುಖ್ಯಮಂತ್ರಿಗಳು ತಿರಸ್ಕರಿಸಿರುವರು. ಕೊರಿಯಾ ಆಕ್ರಮಣದ ಬಗ್ಗೆ ಭದ್ರತಾ ಸಮಿತಿ ನಿರ್ಧಾರಕ್ಕೇ ಬ್ರಿಟನ್ನು ಪೂರ್ಣವಾಗಿ ಬೆಂಬಲ ಕೊಡುವುದಾಗಿ ಅವರು ಭಾರತಕ್ಕೆ ತಿಳಿಸಿರುತ್ತಾರೆ.

ನೆಹರೂ ಲಿಯಾಕತ್ ಮತ್ತು ಡಿಕ್ಸನ್ನರ ಭೇಟಿ

ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ಡಿಕ್ಸನ್ನರು ಏರ್ಪಡಿಸಿದ್ದ ನೆಹರೂ ಲಿಯಾಕತ್‌ರವರ ಭೇಟಿಯು ನೆನ್ನೆ ನಡೆದು ನಾಲ್ಕು ಗಂಟೆಗಳ ಕಾಲ ಚರ್ಚೆಯಾಯಿತೆಂದು ವರದಿಯಾಗಿದೆ. ಲಿಯಾಕತ್‌ರವರು, ಹಿಂದಿನ ಸಲಹೆಗಿಂತ ಒಪ್ಪಂದದಿಂದ ಒಳ್ಳೆ ಪರಿಣಾಮ ಉಂಟಾಗಿದೆಯೆಂದೂ ಮತ್ತು ಈಗಿನ ಭೇಟಿಯೂ ತೃಪ್ತಿಕರವಾಗಿ ಕೊನೆಗಾಣುವ ಸೂಚನೆಯಿದೆಯೆಂದೂ ತಿಳಿಸಿದ್ದಾಗಿ ಗೊತ್ತಾಗಿದೆ. ಭೇಟಿಯ ಕಾಲದಲ್ಲಿ ಡಿಕ್ಸನ್ನರು ... ದ್ದರೆ ... ಸಮಾಲೋಚನೆ ...

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು ... ಅಡಿ ... ನೆನ್ನೆ ... ಅಡಿ ...

ಆರೋಗ್ಯಾಧಿಕಾರಿಮೇಲೆ ಸಾಹುಕಾರರಿಗೆ ಪ್ರಯೋಗವೇ ?

ಚಿತ್ರದುರ್ಗ ೨೧

ಕಳೆದ ಶನಿವಾರ ಇಲ್ಲಿನ ಜಿಲ್ಲಾ ಆರೋಗ್ಯಾಧಿಕಾರಿಗಳಾದ ಶ್ರೀ ರಂಗನಾಥರವರನ್ನು ಜಿಲ್ಲಾ ಇನ್ಸ್‌ಪೆಕ್ಟರ್ ಶ್ರೀ ... ಪ್ರಸ್ಥಾನ್ ... ಪಾದರಕ್ಷೆಯಿಂದ ಹೊಡೆದರೆಂಬ ಆಪಾದನೆ ಸಂಬಂಧವಾಗಿ ಇನ್ಸ್‌ಪೆಕ್ಟರರನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ. ಚನ್ನಗಿರಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಪ್ಲೇಗ್ ವ್ಯಾಧಿಯು ಹರಡಿ ಹತ್ತು ಜನರು ಸತ್ತರೆಂಬ ವರದಿಯು ಬಂದ ಕೂಡಲೆ ಸದರಿಯವರನ್ನು ಅಲ್ಲಿಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ನೇಮಿಸಿದಾಗ ಅವರು ನಿರಾಕರಿಸಿದರೆಂದೂ, ಅದಕ್ಕಾಗಿ ಶ್ರೀ ಮಟ್ಟಶ್ಯಾಮರವರ ಮೇಲೆ ಶಿಸ್ತಿನ ಕ್ರಮವನ್ನು ಕೈಕೊಳ್ಳಲಾಗಿ, ಅಧಿಕಾರಿಗಳ ಮೇಲೆ ಅವರು ಕೈಮಾಡಿದರೆಂದೂ ಹೇಳಲಾಗಿದೆ.

ಅರಣ್ಯಾಧಿಕಾರಿಗಳ ಸಮ್ಮೇಳನ

ಸ್ವಂತ ವರದಿ] ಬೆಂಗಳೂರು ೨೧

ಮೈಸೂರು ಸಂಸ್ಥಾನದ ಅರಣ್ಯಾಧಿಕಾರಿಗಳ ಸಮ್ಮೇಳನವು ಈ ದಿನ ಮಲ್ಲೇಶ್ವರದ ಪ್ರಯೋಗ ಶಾಲೆಯಲ್ಲಿ ಪ್ರಾರಂಭವಾಯಿತು. ಅರಣ್ಯಗಳ ಮುಖ್ಯಾಧಿಕಾರಿಗಳು ಶ್ರೀ ಪಿ. ಶ್ರೀನಿವಾಸನ್‌ರವರು ಸ್ವಾಗತ ಭಾಷಣ ಮಾಡಿದರು. ಅರಣ್ಯ ಇಲಾಖೆಯ ಮಂತ್ರಿ ಶ್ರೀ ಆರ್. ಚನ್ನಿಗರಾಮಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ, ನಮ್ಮ ಸಂಸ್ಥಾನದಲ್ಲಿ ಶೇ|| ೧೫ ರಷ್ಟು ಪ್ರದೇಶವು ಮಾತ್ರ ಅರಣ್ಯದಿಂದ ಕೂಡಿದೆಯೆಂದೂ, ಅರಣ್ಯ ಸಂಪತ್ತು ದೇಶದ ಒಟ್ಟು ವಿಸ್ತೀರ್ಣದಲ್ಲಿ ಮೂರು ಭಾಗವಿರಬೇಕೆಂದು ವಿಶ್ವ ಅಂತರ ರಾಷ್ಟ್ರೀಯ ನೀತಿಯು ತಿಳಿಸುವುದೆಂದೂ ಹೇಳಿದರು.

ಬೊಂಬಾಯಿಯಲ್ಲಿ ವಿಚಿತ್ರ ವ್ಯಾಧಿ

[illegible]

20-7-50 ರಿಂದ 2ನೇ ವಾರ
ದಿನವಹಿ 3 ಆಟಗಳು

ಒಲಿಂಪಿಯಾ

- ದುನಿಯಾ -

ಸುರಯ್ಯಾ, ಆರ್ ದೀವಾರ್, ಯಾಕೂಬ್

ಬೆಳಗಿನ ಪ್ರದರ್ಶನ 21 7 50ರಿಂದ

ಶೌಕೀನ್

ವಿವಿಧ ರೇಷ್ಮೆ ಸೀರೆಗಳಿಗೆ

M. V. ಭೋಜಯ್ಯ ಬಿ. ಎ.

ಮೈಸೂರು.

SRI GAYATHRI
TALKIES
Daily 3 Shows
From 21-7-50 for 2 days
M G M's Willam
Shakespeare's the Greatest
Love Story
ROMEO & JULIET
With - Norma Shearer &
Leslie Howard

Morning Shows
on 22nd & 23rd
The Lost Week-end

Coming — DON JUAN

ಕ್ಯಾಲಿಫೋರ್ನಿಯಾದಿಗೆ ಮೈಸೂರಿನ ಆನೆಗಳು

ಅಮೇರಿಕದ ಕ್ಯಾಲಿಫೋರ್ನಿಯ ಸಂಸ್ಥಾನಕ್ಕೆ ಮೈಸೂರು ಸಂಸ್ಥಾನದ ಎರಡು ಆನೆಗಳನ್ನು ಕೊಂಡಿರುವುದಾಗಿ ವರದಿಯಾಗಿದೆ

Edited printed and published by A R Nagarajan at Sadhvi Press D Subbiah Road Mysore

ಗಣೇಶಾ ಟಾಕೀಸ್
21-7-50ರಿಂದ ಪ್ರತಿ ದಿನ 3 ಆಟಗಳು

ಸಂತ್ - ಧ್ಯಾನೇಶ್ವರ್

ಪ್ರಭಾ
21-7-50ರಿಂದ ಅಮೋಘ ಪ್ರಾರಂಭ
ದಿನವಹಿ 3 ಆಟಗಳು

ಅಹಲ್ಯ
(ಹಿಂದಿ)

ರಣಜಿತ್

21-7-50ರಿಂದ ಪ್ರತಿ ದಿನ 3 ಆಟಗಳು

ದಿಲ್ಲಗಿ

ತಾ॥ 21-7 50ರಿಂದ 3 ದಿನ

ಖಾನ್ ದಾನಿ

ರೇಷನಿಂಗ್ ಆಫೀಸರ್‌ರವರ ಕಛೇರಿ, ಮೈಸೂರು

ಮೈಸೂರು ನಗರದಲ್ಲಿ ಧಾನ್ಯಗಳನ್ನು ಸರಬರಾಜು ಮಾಡುವುದಕ್ಕೆ ಹೊರಡಿಸಿದ ಟೆಂಡರ್ ನೋಟೀಸು A3 PR 13/50 51 ತಾ॥ 1950ನೇ ಜುಲೈ 1

[illegible]

(ಸಹಿ) ... ರೇಷನಿಂಗ್ ಆಫೀಸರ್

ಅಬೀದ್ಸರವರ ಗ್ರಾಂಡ್ ಔಟ್‌ರೈಟ್ ಹರಾಜು

23ನೇ ಜುಲೈ 1950ನೇ ಭಾನುವಾರ ಬೆಳಿಗ್ಗೆ 9-30ಕ್ಕೆ

[illegible]

ಎಲ್ಲರನ್ನೂ ಸ್ವತಃ ಹರಾಜಿನ ಅನುಭವಕ್ಕೆ ಕೋರಲಾಗಿದೆ.

ಪ್ರಭುದೇವಾ ಟಾಕೀಸ್

21—7—50 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ ದಿನವಹಿ 3 ಪ್ರದರ್ಶನಗಳು

- ಭಕ್ತ ಪುಂಡಲೀಕ -
(ಹಿಂದಿ)

ಪಾತ್ರ:- ರಾಣಿ ಪ್ರೇಮಲತಾ, ಶಗುಣಾ, ರಂಭಾ, ಸೋಫಿಯಾ,
ನಜೀರ್ ಮುಂತಾದವರು.

3 ವಾರಗಳ ಕಾಲ ಎಲ್ಲಾ ವಿಧವಾದ ಫ್ರೀ ಪಾಸುಗಳನ್ನೂ ಮುಚ್ಚಲಾಗಿದೆ.

ಪುಸ್ತಕ 79 "ವಂದೇ ಮಾತರಂ" ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಶನಿವಾರ ೨೨-೭-೫೦ [ಸಂಚಿಕೆ ೩

ಆಗಸ್ಟಿನಿಂದ ರೇಷನ್ ಧಾನ್ಯಗಳಿಗೆ ಹೆಚ್ಚು ಬೆಲೆ

ಹೊರಿಯನ್ನು ಕೊಲ್ಲಿಸಿ ಆಭರಣಗಳ ಅಪಹರಣ

ಮೈಸೂರು ೨೨

ದಿವಾನ್‌ರವರ ರಸ್ತೆಯಲ್ಲಿರುವ ಶ್ರೀ ರಾಮಗೋಪಾಲ ವೈದ್ಯಶಾಲೆಯ ಕಟ್ಟಡದಲ್ಲಿ ನೆನ್ನೆ ರಾತ್ರಿ ೩.೩೦ ಘಂಟೆ ವೇಳೆಯಲ್ಲಿ ಒಬ್ಬ ಕಳ್ಳನು ನುಗ್ಗಿ ಅಲ್ಲಿ ವಾಸವಾಗಿದ್ದ ಕಾಲೇಜಿನ ಲಕ್ಚರರ್ ಶ್ರೀ ಕುಮಾರ್ ಎಂ.ಎ.ರವರ ಪತ್ನಿಯು ನಿದ್ರಿಸುತ್ತಿದ್ದಾಗ ಅವರ ಕೈಲಿದ್ದ ಚಿನ್ನದ ಬಳೆಗಳನ್ನು ಕಳಚಿಕೊಂಡದ್ದಲ್ಲದೆ, ಕತ್ತಿನಲ್ಲಿದ್ದ ಚಿನ್ನದ ಸರವನ್ನು ತೆಗೆದುಕೊಳ್ಳುವುದರಲ್ಲಿದ್ದಾಗ ಅವರಿಗೆ ಎಚ್ಚರವಾಗಿ ನೋಡುವಲ್ಲಿ ಕಳ್ಳನು ಚೂರಿಯನ್ನು ತೋರಿಸಿ ಗಲಾಟೆ ಮಾಡಿದರೆ ಅವರನ್ನು ಸಾಯಿಸುವುದಾಗಿಯೂ ಹೆದರಿಸಿ ಸರವನ್ನೂ ಕಸಿದುಕೊಂಡು ಪರಾರಿಯಾದನೆಂದು ತಿಳಿದುಬಂದಿದೆ. ಲಕ್ಚರರೂ ಮತ್ತು ಅವರ ಪತ್ನಿಯೂ ಮಲಗಿದ್ದ ಕೊಠಡಿಯ ಕಿಟಕಿಯ ಸರಳನ್ನು ಮುರಿದುಕೊಂಡು ಕಳ್ಳನು ಈ ಕೃತ್ಯ ನಡೆಸಿದನೆಂದು ಹೇಳಲಾಗಿದೆ

ರಾಜಪ್ರಮುಖರೊಡನೆ ಮದ್ರಾಸು ಗೌರ್ನರರ ಭೇಟಿ

ಮದ್ರಾಸಿನ ಗೌರ್ನರಾದ ಭಾವನಗರದ ಮಹಾರಾಜರು ನೆನ್ನೆ ನೀಲಗಿರಿಯಿಂದ ಇಲ್ಲಿಗೆ ದಯಮಾಡಿ, ರಾಜಪ್ರಮುಖರನ್ನು ಅರಮನೆಯಲ್ಲಿ ಭೇಟಿ ಮಾಡಿದರು. ನಂತರ ಬೆಂಗಳೂರಿಗೆ ಪ್ರಯಾಣ ಮಾಡಿದರು

ಸಂಸ್ಥಾನದಲ್ಲಿ ಮೋಟಾರು ವಾಹನಗಳಿಗೆ ಹೆಚ್ಚಿನ ಪೆಟ್ರೋಲು

ಮೋಟಾರು ವಾಹನಗಳಿಗೆ ಕೊಡುವ ಮಾಸಿಕ ಪೆಟ್ರೋಲ್ ಸರಬರಾಜಿನ ಪ್ರಮಾಣವನ್ನು ಕೇಂದ್ರ ಸಂದರ್ಭವನ್ನು ಹೆಚ್ಚಿಸಿ ಭಾರತ ಸರ್ಕಾರದವರು ಹೊರಡಿಸಿರುವ ಆಜ್ಞೆಯನ್ನು ಅನುಸರಿಸಿ ಮೈಸೂರು ಸರ್ಕಾರದವರೂ ಇಲ್ಲಿನ ಮೋಟಾರು ವಾಹನಗಳಿಗೆ ಮೇಲ್ಕಂಡ ಪ್ರಮಾಣದಲ್ಲಿ ಪೆಟ್ರೋಲನ್ನು ಹೆಚ್ಚಿಸಿ ಆಜ್ಞೆ ಹೊರಡಿಸಿದ್ದಾರೆ

ಹರಿಕಥೆ

ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ೩ ಘಂಟೆಗೆ ಶ್ರೀ ಎಂ. ಎಲ್. ನಾರಾಯಣದಾಸರಿಂದ ಭಕ್ತ ನಂದನಾರ್ ಎಂಬ ಹರಿಕಥೆಯು ನಡೆಯುವುದು

ಭಾವಸಾರ ಕ್ಷತ್ರಿಯ ಸಭಾ

ತಾ|೧-೮-೫೦ ಮತ್ತು ೨-೮ ಹಂಗಳಲ್ಲು ಹೈದರಾಬಾದಿನಲ್ಲಿ ಭಾವಸಾರ ಕ್ಷತ್ರಿಯ ಮಹಾ ಸಭಾ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆ ಶ್ರೀಯುತ ಎಲ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು ಅನಂತರ ಅಧ್ಯಕ್ಷರು ಸದಸ್ಯರೊಡನೆ ಹಹಮಾಬಾದ್, ಬೊಂಬಾಯಿ, ಪೂರ್ವಖಾನ್ ಪ್ರಾಂತ್ಯಗಳಲ್ಲಿ ಪ್ರವಾಸ ಕೈಗೊಳ್ಳುವರು

ಅಮೆರಿಕದ ಸೈನ್ಯಾಧಿಕಾರಿ ಪತ್ತೆಯಿಲ್ಲ

ಕೊರಿಯ ಕದನದಲ್ಲಿ ಭಾಗವಹಿಸಿದ್ದ ಅಮೆರಿಕದ ಸೈನ್ಯಾಧಿಕಾರಿಯೊಬ್ಬರು ನೆನ್ನೆಯಿಂದ ಪತ್ತೆಯಿಲ್ಲವೆಂದು ಹೇಳಲಾಗಿದೆ. ಅವರನ್ನು ಹುಡುಕಲು ಹೊರಟಿದ್ದ ಅಮೆರಿಕದ ವಿಮಾನಗಳು ಉತ್ತರ ಕೊರಿಯನ್ನರ ಪಡೆಗಳನ್ನು ದಾಟಿ ಹೋಗಲು ಅಸಮರ್ಥವಾಗಿ ತಮ್ಮ ಪ್ರಯತ್ನದಲ್ಲಿ ವಿಫಲವಾದುವೆಂದೂ ವರದಿಯಾಗಿದೆ

ಚಾಮರಾಜನಗರದ ಪೌರಸಭಾಧ್ಯಕ್ಷತೆ

ಚಾಮರಾಜನಗರ ೨೨

ಮೊನ್ನೆ ದಿನ ಜರುಗಿದ್ದ ಇಲ್ಲಿನ ಪೌರಸಭಾಧ್ಯಕ್ಷರ ಚುನಾವಣೆಯು ಪಡೆಯುತ್ತಿ ಬಿ ಚಾಮರಾಜನಗರ ಜನ ಸುತಿಲಾಲ್ ನರಸ್ಸಿ ಶ್ರೀಯುತರು 'ಬಿ' ಡಿವಿಜನ್ನಿನಿಂದ ಚುನಾಯಿತರಾದ ಸದಸ್ಯರಾಗಿ ಅಧ್ಯಕ್ಷ ಚುನಾವಣೆಯಲ್ಲಿ ೭ ಓಟುಗಳನ್ನೂ ಇವರ ಪ್ರತಿಸ್ಪರ್ಧಿಗಳಾದ 'ಸಿ' ಡಿವಿಜನ್ನಿನ ದ. ಶ್ರೀ ವೆಂಕಟಸುಬ್ಬಶೆಟ್ಟರ ೬ ಓಟುಗಳನ್ನೂ ಗಳಿಸಿದರು. ಅಧ್ಯಕ್ಷ ಚುನಾವಣೆಯು ನಡೆದ ಮೊನ್ನೆ ದಿನವೇ ಮಧ್ಯಾಹ್ನ ಮೈಸೂರು ಜಿಲ್ಲಾ ನ್ಯಾಯಾಧೀಶರ ಕೋರ್ಟಿನಿಂದ "ಬಿ" ಡಿವಿಜನ್ ಚುನಾವಣೆಗೆ ಸ್ಟೇ ಮಾಡುವ ಆಜ್ಞೆ ದೊರೆತಿರುವುದರಿಂದ ಆಜ್ಞೆ ಮಾಡಿರುವರು. ಕಳೆದ ೭ನೇ ತಾರೀಖು "ಬಿ" ಡಿವಿಜನ್ನಿನ ಚುನಾವಣೆಯನ್ನು ರದ್ದು ಮಾಡಲಾಗಿತ್ತು. ಈಗ ಅಲ್ಲಿನ ಅಧ್ಯಕ್ಷ ಸ್ಥಾನವು ಖಾಲಿಯಾಗಿರುವುದೋ ಅಥವಾ ಶ್ರೀ ವೆಂಕಟಸುಬ್ಬಶೆಟ್ಟರು ಅಧ್ಯಕ್ಷರಾಗಿ ಮುಂದೆ ತೀರ್ಮಾನಿಸುವರೇ ಎಂಬ ಬಗ್ಗೆ ಚರ್ಚೆ ನಡೆದಿದೆ

ಬರ್ಲಿನ್ನಿಗೂ ಭಾರತದ ಆನೆ

ಒಲಿಂಪಿಕ್ ಕ್ರೀಡಾ ಸಂಗ್ರಹಾಲಯಕ್ಕೆ ಆನೆಯೊಂದನ್ನು ಕಳುಹಿಸಿಕೊಡಬೇಕೆಂದು ಭಾರತದ ಪ್ರಧಾನಿಯವರನ್ನು ತಾವು ಪ್ರಾರ್ಥಿಸುವುದಾಗಿ ಜರ್ಮನಿಯಲ್ಲಿರುವ ಭಾರತದ ಸೈನಿಕ ನಿಯೋಗದ ನಾಯಕರೊಬ್ಬರು ಹೇಳಿದ್ದಾರೆ

ಕಾಶ್ಮೀರ ಬಗ್ಗೆ ಕಮ್ಯೂನಿಸ್ಟರ ನಿರ್ಧಾರ

ಕಾಶ್ಮೀರ ದ್ವೀಪವನ್ನು ಪಡೆದು ಕೊಂಡು ಅಲ್ಲಿರುವ ಕೈಗಾರಿಕಾ ಕಾರ್ಖಾನೆ ಕೇಂದ್ರಗಳನ್ನು ನಿರ್ಮೂಲಗೊಳಿಸಲು ಚೀನಾದ ಕಮ್ಯೂನಿಸ್ಟರು ನಿರ್ಧರಿಸಿರುವುದಾಗಿ ಹೇಳಲಾಗಿದೆ

ಮಳೆಯನ್ನೇ ಹಣವಾಗಿಟ್ಟು ಜೂಜು

ಫಿಲಿಪೈನ್ಸ್‌ದಲ್ಲಿ ವಿಪರೀತ ಮಳೆಯಾಗಿ ಮಳೆಯ ಪ್ರಮಾಣದಿಂದ ಜನರು ತೊಂದರೆ ಪಡುತ್ತಿದ್ದಾರೆ. ಆದರೆ ಅಲ್ಲಿಯ ಜೂಜುಕೋರರು ಅಲ್ಲಿ ಮುಂದಿನ ಜೂಜಿಗೆ ಮಳೆಯನ್ನೇ ಪಣವಾಗಿಟ್ಟುಕೊಂಡು ತೊಡಗಿರುವರೆಂದು ತಿಳಿದುಬಂದಿದೆ

ಎಸ್. ಆರ್. ಎಸ್. ರಾಘವನ್‌ರವರಿಗೆ ಸತ್ಕಾರ

ಮೈಸೂರು ೨೨

ಭಾರತ ಸರ್ಕಾರದ ಪ್ರಕಟಣಾ ಶಾಖಾ ಸಂಪಾದಕರಾದ ಶ್ರೀ ಎಸ್. ಆರ್. ಎಸ್. ರಾಘವನ್‌ರವರ ಗೌರವಾರ್ಥವಾಗಿ ಸಾಧ್ವಿ ಪತ್ರಿಕೆಯ ಸಂಚಾಲಕರಾದ ಶ್ರೀ ಅ.ನ. ರಂಗಯ್ಯನವರು ನೆನ್ನೆ ದಿನ ತಮ್ಮ ಕಾರ್ಯಾಲಯದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಪಾಹಾರಾನಂತರ ಶ್ರೀ ರಂಗಯ್ಯನವರು ಸ್ವಾಗತ ಭಾಷಣ ಮಾಡಿ ಮಾನ್ಯ ಅತಿಥಿಗಳ ಕೀರ್ತಿಶೇಷ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರಲ್ಲಿ ಪತ್ರಿಕಾ ವೃತ್ತಿಯನ್ನು ಅವಲಂಬಿಸಿ ದೇಶಸೇವೆ ಸಲ್ಲಿಸುತ್ತಿದ್ದ ಮತ್ತು ಶ್ರೀಯುತರು ಬೊಂಬಾಯಿ ಮತ್ತು ದೆಹಲಿಗಳಲ್ಲಿ ಪತ್ರಿಕಾ ಕ್ಷೇತ್ರದಲ್ಲಿಯೂ, ಕನ್ನಡ ಸಾಹಿತ್ಯ ಮತ್ತು ಕಲಾ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುತ್ತಿರುವ ವಿಷಯಗಳನ್ನು ವಿವರಿಸಿದರು

ಅನಂತರ ಶ್ರೀ ರಾಘವನ್‌ರವರು ಭಾಷಣ ಮಾಡಿ ಶ್ರೀ ರಂಗಯ್ಯನವರ ಪ್ರತಿಭೆಯನ್ನು ಕೊಂಡಾಡಿದರು. ಮೈಸೂರಿನಲ್ಲಿ ಅವರ ಸ್ಮಾರಕವನ್ನು ಸ್ಥಾಪಿಸುವುದರ ಬಗ್ಗೆ ಇನ್ನೂ ಕಲ್ಪನೆಯಾಗಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ಇನ್ನು ಒಂದು ವರ್ಷದೊಳಗಾಗಿ ಅದು ನಿರ್ಮಾಣವಾಗಲೆಂದು ಹಾರೈಸಿದರು. ಅನಂತರ ಕರ್ನಾಟಕದ ಏಕೀಕರಣ ಸಮಸ್ಯೆ, ಹೊರನಾಡು ಕನ್ನಡಿಗರ ಆಕಾಂಕ್ಷೆ ಇವುಗಳ ವಿಷಯವಾಗಿಯೂ ಪ್ರಸ್ತಾಪಿಸಿ ಈಗ ಮೈಸೂರು ಕಾಂಗ್ರೆಸ್ಸಿಗೆ ಪ್ರದೇಶ ಸ್ವಾತಂತ್ರ್ಯ ನಗರಗಳನ್ನು ಕೊಟ್ಟರುವ ಆಂತರ್ಯ ಉತ್ತಮ ಪರಿಣಾಮವನ್ನುಂಟುಮಾಡುವುದಿಲ್ಲವೆಂದು ತಿಳಿಸಿದರು

ಶ್ರೀಮತಿ ೫ ಕನ್ನನ್ವನವರಿಂದ ರಾಷ್ಟ್ರಗೀತೆಯಾದನಂತರ ಜಯಕಾರದೊಡನೆ ಸಮಾರಂಭವು ಮುಕ್ತಾಯವಾಯಿತು

ಬ್ರಿಟನ್ನಿನಲ್ಲಿ ರಕ್ಷಣಾ ವ್ಯವಸ್ಥೆ

ಬ್ರಿಟನ್ನಿಗೆ ಆಟಂ ಬಾಂಬ್ ಧಾಳಿಯ ಭೀತಿಯು ಉಂಟಾಗಿರುವುದರಿಂದ ಹೇಗಾಗಿದೆ ಈ ಸಂಬಂಧವಾಗಿ ಅಗಾಧ ವ್ಯಕ್ತಿಯಿಂದ ರಕ್ಷಣಾ ವ್ಯವಸ್ಥೆಗಳನ್ನು ಏರ್ಪಡಿಸಬೇಕಾಗುತ್ತದೆಯೆಂದೂ, ಆಟಂ ಬಾಂಬ್ ಧಾಳಿ ಬಗ್ಗೆ ರಕ್ಷಣೆಗಾಗಿ ಆಸ್ಪತ್ರೆ ಸ್ಥಳಗಳನ್ನು ನಿರ್ಮಿಸಬೇಕಾಗುತ್ತದೆಯೆಂದೂ ವರದಿಯಾಗಿದೆ

ಧಾನ್ಯಗಳು ರೂ.ಗೆ ೧ ಸೀರು ಕಡಿಮೆಯಾಗುವುವು

ಸ್ವಂತ ವರದಿಗಾರ] ಬೆಂಗಳೂರು ೨೨

ಅಕ್ಕಿ, ರಾಗಿ, ಗೋಧಿ ಮತ್ತು ಜೋಳಗಳನ್ನು ರೂ.ಗೆ ಒಂದು ಸೀರಿನಷ್ಟು ಕಡಿಮೆಯಾಗಿ ಆಗಸ್ಟ್ ಒಂದನೇ ತಾರೀಖಿನಿಂದ ಮಾರಲು ಆಜ್ಞೆಯಾಗುತ್ತದೆಂದು ತಿಳಿದುಬಂದಿದೆ. ಇದಕ್ಕೆ ಭಾರತ ಸರ್ಕಾರದ ಒಪ್ಪಿಗೆಯು ಬಂದಿರುವುದಾಗಿ ಗೊತ್ತಾಗಿದೆ. ಈ ಬಗ್ಗೆ ಆಹಾರ ಇಲಾಖೆಯು ಶೀಘ್ರದಲ್ಲಿಯೇ ಎಲ್ಲಾ ಜಿಲ್ಲಾಧಿಕಾರಿಗಳೊಡನೆ ಈ ವಿಷಯ ಮಾತುಕತೆ ನಡೆಸುತ್ತಿದೆ.

ಎಲ್. ಎಸ್. ರಾಜು ಅವರ ಪರ ಸಾಕ್ಷಿಗಳ ಪಟ್ಟಿ

ಶ್ರೀ ಎಲ್. ಎಸ್. ರಾಜು ಅವರ ಮೇಲೆ ನಡೆಯುತ್ತಿರುವ ಮೊಕದ್ದಮೆಯಲ್ಲಿ ಅವರ ಪರವಾಗಿ ಈ ಕೆಳಗೆ ಕಂಡ ಸಾಕ್ಷಿಗಳ ಪಟ್ಟಿಯನ್ನು ಕೋರ್ಟಿಗೆ ಸಲ್ಲಿಸಲಾಗಿದೆ - ಶ್ರೀಗಳಾದ ನ್ಯಾಯಮೂರ್ತಿಗಳು ಕಪಕ ಕಲ್ಲ ರಾಜ್, ಪಿ. ಮೇಡನ್ನು, ಜೆ. ರುದ್ರಪ್ಪ, ಕೆ. ಸಿ. ಲಿಂಗೇಗೌಡ, ಟಿ. ಸುಬ್ರಹ್ಮಣ್ಯ ಮತ್ತು ಅಡ್ವೊಕೇಟ್ ಜನರಲ್ ಬಿ. ವಾಸುದೇವ ಮೂರ್ತಿ, ಮೈಸೂರು ಬ್ಯಾಂಕ್ ಮ್ಯಾನೇಜರ್ ಶ್ರೀ ಆರ್. ಸುಬ್ರಹ್ಮಣ್ಯಂ, ಮಹಾರಾಜಾ ಹೌಸ್ ಸೌಂದರರಾಜ್ ಮತ್ತು ಹಾಲಿ ನ್ಯಾಯವಾದಿ, ಬಿಕ್ಕಗಳನ್ನು ಮಾಜಿ ಮಂತ್ರಿಗಳು ಮೈಸೂರು ಬ್ಯಾಂಕ್ ಶ್ರೀಮತಿ ನಾಗಮ್ಮ ರವರುಗಳು, ಕೃಷ್ಣರಾಜೇಂದ್ರ ಗಿರಣಿ, ಟಿ. ಅಮ್ಮಲಿಂಗಂ, ಅಡ್ವೊಕೇಟ್ ದಂಡಿಗಲ್ ಮೈ ತ್ರ ಹೈಕೋರ್ಟಿನ ರಿಜಿಸ್ಟ್ರಾರ್ ಮೊಕದ್ದಮೆಯನ್ನು ಆಗಸ್ಟ್ ಮುಂದುವರಿಸಲಾಗಿದೆ

○ ಮಂಡ್ಯ ಮತ್ತು ಇವಾನ್‌ಯಲ್ಲಿ ವಿಷ ಜ್ವರ ಪ್ರಕೋಪವನ್ನು ಕಡಿಮೆಮಾಡಲು ಏರ್ಪಾಡಾಗಿರುತ್ತದೆ

○ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ತಿಂಗಳು ೩೧ನೇ ತಾರೀಖು ಹಿಂದಿರುಗುವರೆಂದು ತಿಳಿದುಬಂದಿದೆ

ತುಮಕೂರು ಮತ್ತು ಕೋಲಾರ ಗಳಲ್ಲಿ ವಿಮಾನ ಶಿಕ್ಷಣ

ಭಾರತ ಸರ್ಕಾರದ ಸಿವಿಲ್‌ಏವಿಯೇಷನ್ ಇಲಾಖೆಯ ಡೈರೆಕ್ಟರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ತುಮಕೂರು ಮತ್ತು ಕೋಲಾರಗಳಲ್ಲಿ ವಿಮಾನ ಶಿಕ್ಷಣ ಶಾಲೆಗಳನ್ನು ತೆರೆಯುವ ಸಂಭವವಿದೆಯೆಂದು ತಿಳಿಸಿದರು

ಅಮೆರಿಕನ್ನರಿಂದ ಟೈಜೋನ್ ನಾಶ

ಟೈಜೋನ್ ನಗರವನ್ನು ಅಮೆರಿಕನ್ನರು ಪೂರ್ಣವಾಗಿ ಖಾಲಿ ಮಾಡಿರುತ್ತಾರೆ. ಹೊಸ ಮಾದರಿ ವಿಧ್ವಂಸಕ ಯಂತ್ರಗಳಿಂದ ಉತ್ತರ ಕೊರಿಯನ್ನರ ಟ್ಯಾಂಕುಗಳನ್ನು ನಾಶಪಡಿಸಲಾಗಿದೆ

ಧಾನ್ಯಕ್ಕೆ ಬದಲು ಹಣ ಬೇಕೆಂದು ಕ್ಷಾಮಪೀಡಿತರ ಮುಷ್ಕರ

ಗುಜರಾತಿನಲ್ಲಿರುವ ನೌಸಾರಾ ಜಿಲ್ಲೆಯ ಕೆಲವು ಗ್ರಾಮದ ಜನರು ಧಾನ್ಯ ಕೊಡುವುದಕ್ಕೆ ಬದಲಾಗಿ ಹಣವನ್ನು ಕೊಡಲು ನಿರಾಕರಿಸುವುದರಿಂದ ಅಲ್ಲಿನ ಕ್ಷಾಮಪೀಡಿತರು ಒಂದು ತಿಂಗಳಿಂದಲೂ ತಮ್ಮ ಕೆಲಸವನ್ನು ನಿಲ್ಲಿಸಿದ್ದಾರೆ. ಅವರ ಮುಷ್ಕರಗಳಿಂದ ಕ್ಷಾಮಪೀಡಿತರನ್ನು ಕರೆಸಲು ಗ್ರಾಮಸ್ಥರು ಪ್ರಯತ್ನಿಸುತ್ತಿದ್ದಾರೆ

—ಶ್ರೀ—

ಶ್ರೀಮತೇ ರಘುನಂದನ ಪರಬ್ರಹ್ಮಣೇ ನಮಃ

'ಸಾಧ್ವೀ' ಶುಭಾಶಂಸನಂ

ಮಹೀಶೂರಪುರೀಯೇ ಸಹಸ್ರಾರಭ್ಯ ಶೇ ೨೦-೭-೫೦ ದಿನೇ ಪ್ರವರ್ತಿತೇ ಸಾಧ್ವೀ ಪತ್ರಿಕಾಯಾ ಅಷ್ಟಮ ವಾರ್ಷಿಕ ಮಹೋತ್ಸವಾವಸರೇ ಪಠಿತೇಯಂ ಮಂಗಳಾಶಂಸನ ಪದ್ಯಮಾಲಾ-

ಶ್ರೀಮದ್ರಾಮಪದಭಕ್ತಿಭಾವಿತಾ ನೀಲಜೀಮೂತಧಾಮಾ
ಶುಭಗುಣಗಣಸೇವಿತಾ ರೂಪಜಾಲಾಭಿರಾಮಾ।
ಸುರುಚಿರವರ್ಣದಾಮಾ ರಮ್ಯಸಾಕೇತಧಾಮಾ
ವಿಲಸತು ರಘುಧೀಮಾ ದೇವತಾ ರಾಮನಾಮಾ॥

ಕೃಷ್ಣೋಽಸೌ ಅರವಿಂದ ಘೋಷ ಸುಯಮಾ ಸಂಘಾತಸಾಧ್ವೀವರಂ
ಶುಭೇನ ಯೋಗಮನೇಕಧಾ ಬಹುಧಾ ಕೃತ್ಯೇರ ಪ್ರತೀತ ಸ್ತುತೇ।
ಕಾಲೀಮಸ್ಮಲಿದೋಷದೂಷಿತತಮೋ ಸಂ ವಸು ಸ್ವಾಪಿತನ್ಯ ಸಾಂಭೃತಂ
ಯೋಗೇಶ ಪ್ರತ್ಯಯಮಾನಪಲ ವಿಜಯತೇ ವಿಖ್ಯಾತ ಶಿಷ್ಯವ್ರಜಃ॥

ಕಾಲೇಽಸ್ಮಿನ್ ವಿಷಮೇಽಪಿ ಶೇಷಮವಿಶ ಕೃಚ್ಛ್ರೇಷು ಕಾರ್ಯಾನ್ವಿತ
ಸ್ತ್ರೀಯೋಗ್ಯಂ ಧನ ಜಾತಿ ಸ್ವೈರ ಕಲಹ ದ್ರೋಹಾಭಿಚಾರಾದಿಭಿಃ।
ಉದ್ಯತಾಂ ಮಹತೀಂ ವ್ಯಥಾಂ ಜನಭೃತಾಂ ಶಿಥಿಲಯ ಸೌಖ್ಯಾವಹಾಂ
ಶಾಂತಿಂ ಸನ್ನತಿಮಾತನೋತು ಪರಮಾಂ ಮೈತ್ರೀಂ ಚ ಸರ್ವೇಶ್ವರಃ॥

ಶಕ್ತ್ಯಾ ಶಿ ಭವಾನ್ ಶಕ್ತ್ಯನುಗುಣ್ಯೈ ರ್ವಾಣಿಜ್ಯ ಕೃಷ್ಯಾದಿಭಿಃ
ನಿತ್ಯಂ ನಿಮ್ನಕರ್ಮಭಿರ್ನಿರತೈ ಕೃತ್ಯೈ ರಥಾರ್ಜನಂ ಕ್ಷೇಮದೈಃ।
ದೀನಾನಾಮನುಕಂಪಯಾ ವಿತರಣಂ ಗೀರ್ವಾಣವಾಣೀ ಕೃತೇ
ರಗ್ಲಾನಿಂ ವಿನಯಂ ಬುಧೇಷು ಕರುಣಾಂ ಶ್ಲಾಘ್ಯಂ ಪದತ್ತಾಂ ಹರಿಃ॥

ಶ್ರೀಮತ್ಸ್ವೋಲ್ಲಸಿತ ಕೃಷ್ಣನಾಮ ಸುಧಯಾ ಸಂಚಾರಿತಾ ಪತ್ರಿಕಾ
ಸಾಧ್ವೀ ಕೃಷ್ಣ ಪಿತಾಮಹೇನರುಚಿರಾ ಜಾಮಾತೃ ಭಾಗಿನೇಶಲೇ
ಸ್ವಸ್ತ್ಯಾತ್ಮಾಕರ ವರ್ಷ ಶೋಭಿ ವಿಜಯ ಶಾಂ ಶ್ರಾವಣ ಧರ್ಮಾಃ ಪ್ರಜಾ-
ಸ್ವಾಸ್ಥ್ಯಂ ಶ್ರೀ ಸಮಾಗತೇ ಸುವಿಧಿನಾ ನಿತ್ಯಂ ಮಹಃ ಪ್ರತ್ಯಹಂ।

ಜ್ಞಾನವಿದ್ಯಾವಿಶಾರದಃ ಪ್ರಮುಖ ಭಕ್ತಿ ಶ್ಲಕ್ಷ್ಣಧೀರತ್ನ ಮೇಽಸ್ಮಿನ್
ಸಾಧ್ವೀ ಪತ್ರಸ್ಯ ಮಹೋತ್ಸವೇ ಶುಭ ಸುಖಯೋ ಸಂಪದೋಽಸ್ತ್ವಾದಿಶಃ।
ಶ್ರೀರಾಮ್ ರಕ್ಷ ಶ್ರೀಮಂತ ಧಾಂ ಶ್ರೀ ಭಾರತಾಂ ತತ್ ಸರ್ವ ಧಾಮ ಸ್ವರ್ಧಾ ಸುಕ್ಷೇತ್ರ ಸತ್ತ್ವಃ
ಶೌರ್ಯೇ ಕಾರುಣ್ಯ ಶೋಭಾಸೌ ವಿತ್ತ ಲಸತು ಸುಶೋಭಿ ದೀರ್ಘಜೀವೀ ಯಶಸ್ವೀ॥

ಏವಂ ಜ್ಯೋತಿಷ ಶಾಸ್ತ್ರಂ ನ್ಯಸ್ತ ಸರ್ವ ಪದವಾರ್ಧಿ ಕಾರಿಪದಯಾತಃ।
ಜ್ಯೋತಿರ್ವಿದ್ಯ ವಿದ್ವದ್ವರ್ಯಃ ಶೇಷ ಸುಧಿಷ್ಟಾಂ ಗಳಂ ಮುದಾವ್ಯತನೋತ್॥

ಏವಂ ಮಂಗಳಾಶಂಸಕಃ
ಮಹಾ ವಿದ್ವಾನ್,
ಕರೂರು ಶೇಷಾಚಾರ್ಯ
ಜ್ಯೋತಿಸ್ಸರಸ್ವ
ಸಂಸ್ಥಾನ ಧರ್ಮಾಧಿಕಾರೀ

ಅರಸೀಕೆರೆಯಲ್ಲಿ ಭಾರಿ ಕಳ್ಳತನ

ಅರಸೀಕೆರೆ ೧೯

ಇಲ್ಲಿರುವ ರೈಲ್ವೆ ಚೀಫ್‌ಗಾರ್ಡ್ ಜ॥ ಸಯ್ಯದ್ ಮೊಹಿಯುದ್ದೀನರ ಮನೆಗೆ ಕಳೆದ ಭಾನುವಾರ ನಾಲ್ವರು ಕಳ್ಳರು ಸಲಾಕಿ ಮುರಿದು ನುಗ್ಗಿ ಒಡವೆ ವಸ್ತ್ರಗಳು ಮತ್ತು ನಗದಿನಿಂದ ಕೂಡಿದ ಮೂರು ಟ್ರಂಕುಗಳನ್ನು ತೆಗೆದುಕೊಂಡು ಹೋದರೆಂದು ವರದಿಯಾಗಿದೆ ಕಳ್ಳರು ಪುನಃ ಮನೆಯೊಳಕ್ಕೆ ನುಗ್ಗಿ ನಾಲ್ಕನೆಯ ಟ್ರಂಕನ್ನು ಕದಿಯುವುದರಲ್ಲಿದ್ದಾಗ ಗಾರ್ಡರೂ ಅವರ ಪತ್ನಿಯೂ ಕೂಗಿಕೊಳ್ಳಲಾಗಿ ಕಳ್ಳರು ಅವರನ್ನು ಹೊಡೆದು ಕೆಳಕ್ಕೆ ಕೆಡಹಿ ಮನೆಯಿಂದ ಹೊರಗೆ ಬಂದರು ಜನಾಬ್ ಮೊಹಿಯುದ್ದೀನರೂ, ಅವರ ಪತ್ನಿಯವರೂ ಕೂಗಿಕೊಂಡು ಹೊರಗೆ ಬಂದು ಅವರ ಮುಖಕ್ಕೆ ಕಳ್ಳರು ಟಾರ್ಚ್‌ಲೈಟ್ ಬಿಟ್ಟು ಕಲ್ಲು ಬೀರಿದರು ಬೀಗನುಂಗೆ ಕಲ್ಲಿನೇಟು ಬಿದ್ದು ಪ್ರಜ್ಞೆ ತಪ್ಪಿ ಬಿದ್ದರು ಕಳ್ಳರು ಜನಾಬ್ ಮೊಹಿಯುದ್ದೀನರ ನ್ಯಾ ದೊಣ್ಣೆ ಮತ್ತು ಕೊಡಲಿಗಳಿಂದ ಹೊಡೆಯಲು ಅವರೂ ಪ್ರಜ್ಞೆ ತಪ್ಪಿ ಬಿದ್ದರು ಅಲ್ಲಿದ್ದ ಇನ್ನೊಂದು ಟ್ರಂಕನ್ನೂ ಅವರು ತೆಗೆದುಕೊಂಡು ಹೋದರು. ಈ ಸಂಬಂಧವಾಗಿ ಮೂವರ ದಸ್ತಗಿರಿಯಾಗಿದೆ

ಹೊಲ ಉಳುವುದು ಬಿಟ್ಟು ಮೆರವಣಿಗೆ ಮಾಡಲಾಗದು

ಮಧುರೆ ತಾಲ್ಲೂಕಿನ ಒಂದು ಪ್ರದೇಶದಲ್ಲಿ ರೈತರು ಉಳುವ ಕಾರ್ಯವನ್ನು ಬಿಟ್ಟು ಮೆರವಣಿಗೆ ನಡಸುವುದು, ಸಭೆ ಕೂಡುವುದು ಮುಂತಾದ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ ಅಲ್ಲಿನ ರೈತರು ಸತ್ಯಾಗ್ರಹ ಹೂಡುವುದಾಗಿ ಬೆದರಿಸಿದ್ದರೆಂದು ಹೇಳಲಾಗಿದೆ

ಪೂರ್ವ ಬಂಗಾಳದ ನಿರಾಶ್ರಿತರ ಆಸ್ತಿ

ಪೂರ್ವ ಬಂಗಾಳದಿಂದ ಬಂದಿರುವ ನಿರಾಶ್ರಿತರು ಅಲ್ಲಿ ಬಿಟ್ಟು ಬಂದಿರುವ ಅವರ ಆಸ್ತಿಯ ಬೆಲೆ ೫ ಸಾವಿರ ಕೋಟಿ ರೂಗಳಾಗುವುದೆಂದು ಹೇಳಲಾಗಿದೆ ಅವರು ಇಷ್ಟು ಐಶ್ವರ್ಯವನ್ನು ಬಿಟ್ಟು ಬಂದಿರುವುದರಿಂದ ಅವರಿಗೆ ಸೂಕ್ತ ಪರಿಹಾರ ಕೊಡಿಸಬೇಕೆಂದು ಶ್ರೀ ಶ್ಯಾಮಪ್ರಸಾದ ಮುಖರ್ಜಿ ಮತ್ತು ೨೨ ಜನರು ಭಾರತ ಸರ್ಕಾರವನ್ನು ಪ್ರಾರ್ಥಿಸಿದ್ದಾರೆ

ರಾಂಚಿ ಬಳಿ ಭೂಮಿ ಕುಸಿಯಿತು

ಚೋಟಾ ನಾಗಪುರದಲ್ಲಿರುವ ಒಂದು ಬೆಟ್ಟದ ಮೇಲೆ ಒಂದೇ ಸಮನೆ ಮಳೆಯಾಗಿ ಅಲ್ಲಲ್ಲಿ ಬೆಟ್ಟದ ಭಾಗಗಳು ಕುಸಿದು ಬಿದ್ದು ರಸ್ತೆಗಳ ಓಡಾಟಕ್ಕೆ ಅಡಚಣೆಯಾಗಿದೆ

ಕೊರಿಯಾ ಯುದ್ಧಕ್ಕೆ ೧೨೨½ ಕೋಟಿ ಡಾಲರ್

ಅಮೆರಿಕದ ಕಾಂಗ್ರೆಸ್ ಸಭೆಯು ಕೊರಿಯಾ ಯುದ್ಧಕ್ಕಾಗಿ ೧೨೨½ ಕೋಟಿ ಡಾಲರ್ ಹಣವನ್ನು ಮಂಜೂರು ಮಾಡಿದೆ

ರಷ್ಯದ ಸಬ್ ಮೆರೀನಿಗೆ ಪ್ರತಿಯಾಗಿ ಅಣು ಸಬ್ಮೆರೀನ್

ರಷ್ಯವು ನಿರ್ಮಿಸಿರುವ ಸ್ನಾರ್ಕೆಲ್ ಮಾದರಿಯ ಸಬ್ ಮೆರೀನುಗಳನ್ನು ಎದುರಿಸಲು ತಕ್ಕುದಾಗಿರುವ ಅಣು ಶಕ್ತಿಯ ಸಬ್ ಮೆರೀನುಗಳನ್ನು ತಯಾರಿಸುವುದು ಸೂಕ್ತವೆಂದು ಅಮೆರಿಕದ ನಿಪುಣತರೊಬ್ಬರು ಹೇಳಿದ್ದಾರೆ ಇವು ಸಮುದ್ರದಲ್ಲಿ ಓಡಾಡುವಾಗ ಶಬ್ದವೇ ಆಗದೆಂದು ಹೇಳಲಾಗಿದೆ

ಮಿದುಳಿನ ಅರ್ಧ ಭಾಗ ಶಸ್ತ್ರ ಚಿಕಿತ್ಸೆಯಿಂದ ತೆಗೆಯಿತು

ಮಿದುಳಿನ ಅರ್ಧ ಭಾಗವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯಲಾದ ವಿಷಯವು ಇದೇ ಪ್ರಥಮವಾಗಿ ದಕ್ಷಿಣ ಆಫ್ರಿಕದ ರಾಜಧಾನಿ ಕೇಪ್‌ಟೌನಿನಲ್ಲಿ ನಡೆದಿದೆ ಒಂಭತ್ತು ವರ್ಷದ ಹುಡುಗಿ ಮತ್ತು ೨೧ ವರ್ಷದ ತರುಣಿಯರ ಮಿದುಳುಗಳು ಕೆಟ್ಟುಹೋಗಿ ಅವರು ನಿಸ್ತೇಜರಾಗಿದ್ದರು ಚಿಕಿತ್ಸೆಯಾದ ಮೇಲೆ ಈಗ ಅವರು ಇತರರಂತೆ ಸರಿಸಮಾನರಾಗಿರುವರು ಚಿಕಿತ್ಸೆ ನಡೆಸಿದ ವೈದ್ಯರು ಹೇಳುವ ಪ್ರಕಾರ ಅರ್ಧ ಮಿದುಳು ಹೋದರೆ ನಷ್ಟವಿಲ್ಲ

ರಘುಲಾಲ್ & ಕೋ,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ, ಬೆಂಗಳೂರು.

ಪ್ರಭುದೇವಾ ಟಾಕೀಸ್

21—7—50 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ ದಿನವೂ 3 ಪ್ರದರ್ಶನಗಳು

ಭಕ್ತ ಪುಂಡಲೀಕ

(ಹಿಂದಿ)

ಪಾತ್ರ:- ರಾಣಿ ಪ್ರೇಮಲತಾ, ಸಗುಣಾ, ರಂಭಾ, ಸೋಫಿಯಾ, ನಜೀರ್ ಮುಂತಾದವರು.

೨ ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಪಾಸುಗಳನ್ನು ರದ್ದು ಮಾಡಲಾಗಿದೆ.

ಪ್ರತಿಯೊಂದು ಕುಟುಂಬದವರೂ ತಪ್ಪದೆ ಅವಶ್ಯಕವಾಗಿ ನೋಡಲೇಬೇಕಾದ ಚಿತ್ರ.

ಮಹಿಳೆಯರಿಂದ ಆಹಾರ ಧಾನ್ಯ ಶೇಖರಣೆ

ನ್ಯೂಯಾರ್ಕಿನ ಗೃಹಿಣಿಯರು ಆಹಾರ ಧಾನ್ಯಗಳನ್ನು ಶೇಖರಿಸುತ್ತಿರುವುದಾಗಿ ಅಲ್ಲಿನ ಟೈಮ್ಸ್ ಪತ್ರಿಕೆ ಬರೆದಿದೆ ಯುದ್ಧ ಮುಂಜಾಗ್ರತೆ ಕಾರ್ಯಕ್ಕಾಗಿ ಆಹಾರ ಶೇಖರಣೆ ಮಾಡಿಕೊಳ್ಳಬೇಕೆಂದು ವ್ಯವಸಾಯಗಾರರ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ

ಯಳಂದೂರು ಜಹಗೀರು ದಾರರಿಗೆ ಅಪಘಾತ

ಯಳಂದೂರು ೧೯

ನೀಲಗಿರಿಯಲ್ಲಿ ವಾಸವಾಗಿರುವ ಯಳಂದೂರಿನ ಜಹಗೀರ್‌ದಾರ್ ಶ್ರೀ ನಾಗರಾಜರಾವ್ ಪೂರ್ಣಯ್ಯನವರನ್ನು ಯಾರೋ ದುರಾತ್ಮರು ಹಿಂಸಿಸಿ ಅವರ ಹತ್ತಿರ ಇದ್ದ ಹಣ ಕಾಸನ್ನು ಅಪಹರಿಸಿದರೆಂದು ಹೇಳಲಾಗಿದೆ

ಹಾರ್ಡೀಕರರ ಆಗಮನ

ಭಾರತ ಸೇವಾ ದಳದ ನಾಯಕರಾದ ಡಾ॥ ಹಾರ್ಡೀಕರರು ನೆನ್ನೆ ದಿನ ಬೆಂಗಳೂರಿಗೆ ಆಗಮಿಸಿದರು

ರಾಜಕಮಲ್

ಮೈಸೂರು

21-7-50 ರಿಂದ 2ನೇ ವಾರ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸಮಾಧಿ

— ಭೂಮಿಕೆ —

ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್, ಮುಬಾರಕ್

—ಬೆಳಗಿನ ಪ್ರದರ್ಶನಗಳು—

21—7—50 ರಿಂದ 3 ದಿನಗಳು ಮಾತ್ರ

ಪೊಲೀಸ್ ವಾಲಿ

(ಹಿಂದಿ)

ಭೂಮಿಕೆ—ಅನಿಲ್ ಕುಮಾರ್, ಯಮುನಾ

NOTIFICATION

The Public are hereby informed that the Palace Gajasala Premises (s i t e o n l y) in Mysore, which measure 25000 Sq. Yards approximately are for sale. The intending purchasers may send their offers to the Huzur Secretary to His Highness. Further particulars may be had from the Palace Engineer, Mysore.

H. M. PALLEGAR,
Huzur Secretary
to H H the Maharaja
of Mysore.

Edited, printed and published by A. R. Nagarajan, at Sadhvi Press D. Subbiah Road, Mysore

ನೋಂದಣಿ ೨೦ 792 WEEKLY EDITION ಬಿಡಿಪ್ರತಿಗೆ ೬ ಕಾಸು

ಸಾಧ್ವಿ

ಸಂಪುಟ ೧೫] ಭಾನುವಾರ ೨೩-೭-೫೦ [ಸಂಚಿಕೆ ೧

ಉ.ಕೊರಿಯಾ ಧಾಳಿಗೆ ಅಮೆರಿಕದ ಸಿದ್ಧತೆ

...ಕೃತಕದಲ್ಲಿ ರವಾನಿಸುತ್ತಿದ್ದ ಧಾಗಿಯ ಪತ್ತೆ

ಮೈಸೂರು ೨೨.

ರಾಜಧಾನಿಯ ಪೋಲಿಸರ್ ಒಂದು ದಿನ ಮಧ್ಯಾಹ್ನ ಬೆಳಿಗ್ಗೆ ಹೊಂದಿಯ ...ದ, ಕೆಂಪಯ್ಯ, ಮಲ್ಲಪ್ಪ, ಸಿದ್ದರಾ...ಂಗಾಡ, ಪುಟ್ಟಮಾದಯ್ಯ ಮತ್ತು ನಾ...ಯ್ಯ ಎಂಬುವರು ಸುಮಾರು ೩೦ ಸೇರು ರಾಗಿಯನ್ನು ರವಾನಿಸುತ್ತಿದ್ದಾಗ ... ...ದ್ದುದನ್ನು ಆಹಾರ ಇಲಾಖೆಯ ... ಪತ್ತೆ ಹಚ್ಚಿ ಅವರುಗಳ ಮೇಲೆ ಮೊಕದ್ದಮೆ ಹೂಡಿದ್ದಾರೆ

ಫ್ರೆಂಚ್ ಹೇರ್ ಕಟ್ಟಿಂಗ್ ಸಲೂನ್‌ಗೆ ೩ ವರ್ಷ ಕಠಿಣ ಸಜಾ

ಹಳೆಯ ಕೇರಿ ವೆಂಕಟ ಉರುಫ್ ಶರ... ಎಂಬಾತನು ಕೆಲವು ದಿವಸಗಳ ಹಿಂದೆ ರಾಜಧಾನಿಯ ... ... ಫ್ರೆಂಚ್ ಹೇರ್ ... ಆದುದರಿಂದ ಅವನಿಗೆ ಮೂರು ವರ್ಷ ಕಠಿಣ ಸಜಾ ಶಿಕ್ಷೆಗೆ ಗುರಿಯಾದನು.

ಮುಳ್ಳು ಬಿಲ್ಲಿಯರ್ಡ್ ರೂಮ್ ಲೈಸನ್ಸ್ ಕಾನೂನು ಭಂಗಕ್ಕೆ ಶಿಕ್ಷೆ

ಮುಳ್ಳು ಬಿಲ್ಲಿಯರ್ಡ್ ರೂಮಿನ ರೇಸ್ ಆರ್ಡರ್ ಪಡೆಯದೆ ಆಡಿದವರಿಗಾಗಿ ರಾಜಧಾನಿಯ ಮುಂತಿ ಮಹಮ್ಮದ್ ... ಎಂಬಾತನು ಕಳೆದ ಬುಧವಾರ ಕೋರ್ಟು ... ಮತ್ತು ೭೫ ರೂ ಜುಲ್ಮಾನೆ ... ಶಿಕ್ಷೆ ವಿಧಿಸಲ್ಪಟ್ಟನು.

ಸಂಸ್ಕೃತ ವಿದ್ಯಾಭ್ಯಾಸ ಸಂಘದ ಸಮ್ಮೇಳನ

ಮೈಸೂರು ಸಂಸ್ಕೃತ ವಿದ್ಯಾಭ್ಯಾಸ ಸಂಘದ ೧೫ನೇ ಸಮ್ಮೇಳನವು ಬರುವ ... ... ರಂದು ... ನಡೆಯುವುದು. ಶ್ರೀಮಾನ್ ... ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು

ಆಕಾಶವಾಣಿ ವಿಶೇಷ ಕಾರ್ಯಕ್ರಮ

ಮಿಸೌರಿಯ ಲಿಂಕನ್ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಡಾ|| ಶೆರ್ಮನ್ ಸ್ಕ್ರ್ಯಾನ್ಸರವರು ಈ ರಾತ್ರಿ ೭-೩೦ರಿಂದ ೭-೪೫ರವರೆಗೆ "ಅಮೆರಿಕದಲ್ಲಿ ನೀಗ್ರೋ ಸ್ವಾತಂತ್ರ್ಯ" ಎಂಬ ವಿಷಯವಾಗಿ ಇಂಗ್ಲೀಷಿನಲ್ಲಿ ಭಾಷಣವನ್ನು ಮೈಸೂರಿನ ಆಕಾಶವಾಣಿಯಿಂದ ಬಿತ್ತರಿಸುವರು

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಭೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ಕಳೆದ ಬುಧವಾರ ಶ್ರೀ ಸಿ ಜೆ ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಅನೇಕ ಮಾಲೀಕರು ಕೆಲಸಗಾರರನ್ನು ನಿಷ್ಕಾರಣವಾಗಿ ಕೆಲಸದಿಂದ ತೆಗೆದುಹಾಕುತ್ತಿರುವುದನ್ನು ಖಂಡಿಸಿ ಕೆಲಸಗಾರರಿಗೆ ರಕ್ಷಣೆ ಕೊಡಬೇಕೆಂದೂ ಮತ್ತು ಸರ್ಕಾರವು ಮೋಟಾರ್ ಟ್ರಾನ್ಸ್‌ಪೋರ್ಟ್ ಸರ್ವೀಸ್ಸುಗಳನ್ನು ವಹಿಸಿಕೊಳ್ಳಬೇಕೆಂದು ... ... ಕಾರ್ಮಿಕ ಕಾನೂನಿನ ಪ್ರಕಾರ ನೋಟೀಸು ಕೆಲಸಗಾರರಿಗೆ ಇರುವ ಹಕ್ಕುಬಾಧ್ಯತೆಗಳನ್ನು ರಕ್ಷಿಸಬೇಕೆಂದೂ ಪ್ರಾಥಮಿಕ ನಿರ್ಣಯಗಳೂ ಅಂಗೀಕೃತವಾದುವು

ನೆಹರೂ ಸಲಹೆಗೆ ಬ್ರಿಟಿಷ್ ಲೇಬರ್ ಪಕ್ಷದ ಬೆಂಬಲ

ಕೊರಿಯಾ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಕಮ್ಯೂನಿಸ್ಟ್ ಚೀಣವನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಸೇರಿಸಬೇಕೆಂಬ ನೆಹರೂರವರ ಸಲಹೆಗೆ ಬ್ರಿಟನ್ನಿನ ಕಾರ್ಮಿಕ ಪಕ್ಷದ ಬಹುಸಂಖ್ಯಾತ ಜನರು ಬೆಂಬಲವಿತ್ತಿರುವರೆಂದು ವರದಿಯಾಗಿದೆ. ನೊನ್ನೆ ದಿನ ನಡೆದ ಲೇಬರ್ ಪಕ್ಷದ ಸಭೆಯಲ್ಲಿ ಸುಮಾರು ೩೦೫ ಮಂದಿ ಸದಸ್ಯರು ... ... ನಿರ್ಧರಿಸಿದ್ದಾರೆ ... ನೆಹರೂರವರ ಸಲಹೆಯನ್ನು ಅಂಗೀಕರಿಸುವುದರಿಂದ ಬ್ರಿಟಿಷ್ ಸರ್ಕಾರಕ್ಕೇನೂ ಕೊಂದರೆಯಾಗುವುದಿಲ್ಲವೆಂದೂ, ಅದರಿಂದ ಯುದ್ಧ ಹರಡುವುದನ್ನು ತಡೆಗಟ್ಟಿದಂತಾಗುವುದೆಂದೂ ಅದರಲ್ಲಿ ತಿಳಿಸಲಾಗಿದೆ

೭೩ ದಿನಗಳಿಂದಲೂ ಜೈಲಿನಲ್ಲಿ ಉಪವಾಸ

ಗುರುದಾಸಪುರದ ಸಬ್ ಜೈಲಿನಲ್ಲಿ ೩ನೇ ತರಗತಿಯಲ್ಲಿ ತಮ್ಮನ್ನು ಇಟ್ಟಿರುವುದನ್ನು ಪ್ರತಿಭಟಿಸುವ ಸಲುವಾಗಿ ಸಮಾಜವಾದಿ ಕಾರ್ಯಕರ್ತ ... ... ಎಂಬುವರು ಕಳೆದ ೭೩ ದಿನಗಳಿಂದ ... ಉಪವಾಸ ಮಾಡುತ್ತಿದ್ದಾರೆ. ... ... ಸತ್ಯಾಗ್ರಹದ ಸಂಬಂಧವಾಗಿ ಅವರಿಗೆ ೩ ವರ್ಷ ಶಿಕ್ಷೆಯಾಗಿದೆ

ಸುಹ್ರಾವರ್ದಿಯ ಪ್ರವಾಸಕ್ಕೆ ಪೂರ್ವ ಬಂಗಾಳದ ನಿಷೇಧ

ಪಾಕಿಸ್ತಾನದ ಅವಾಮಿ ಲೀಗಿನ ಅಧ್ಯಕ್ಷರೂ, ಅವಿಭಕ್ತ ಬಂಗಾಳದ ಮಾಜಿ ಮುಖ್ಯ ಮಂತ್ರಿಗಳೂ ಆದ ಜೆಚ್ ಎಸ್ ಸುಹ್ರಾವರ್ದಿಯವರು ಪೂರ್ವ ಬಂಗಾಳದಲ್ಲಿ ಪ್ರವಾಸ ಮಾಡಕೂಡದೆಂದು ಅಲ್ಲಿನ ಸರ್ಕಾರದವರು ನಿಷೇಧಿಸಿದ್ದಾರೆ

ಕೃಷ್ಣರಾಜ ಸಾಗರದ ನೀರಿನ ಮಟ್ಟ ೭೭ ಅಡಿಯಷ್ಟು ಹೆಚ್ಚಿದೆ

ಕೃಷ್ಣರಾಜ ಸಾಗರದ ನೀರಿನ ಮಟ್ಟವು ಶುಕ್ರವಾರ ... ದಿನ ೭೭ ಅಡಿಯಷ್ಟು ಹೆಚ್ಚಿ ೮೩-೦೦ ಅಡಿಗಳಷ್ಟಿದೆ

ನೆಹರೂರವರ ಮನವಿಗೆ ಟ್ರೂಮನ್ನಿನ ನಿರಾಕರಣೆ

ಕಮ್ಯೂನಿಸ್ಟ್ ಚೀಣಕ್ಕೆ ಭದ್ರತಾ ಸಮಿತಿಯಲ್ಲಿ ಪ್ರಾತಿನಿಧ್ಯವನ್ನು ದೊರಕಿಸಿಕೊಟ್ಟು ಆ ಮೂಲಕ ಕೊರಿಯಾ ಯುದ್ಧವನ್ನು ತಡೆಗಟ್ಟಬೇಕೆಂದು ಪಂಡಿತ ನೆಹರೂರವರು ಟ್ರೂಮನ್ನಿನ ಪ್ರಧಾನಿಯವರಿಗೆ ಮಾಡಿದ್ದ ಮನವಿಯನ್ನು ಅವರು ನಿರಾಕರಿಸಿರುವುದಾಗಿ ವರದಿಯಾಗಿದೆ

ಹೆಚ್ಚು ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ಪ್ರಯಾಣ

ರಾಜಧಾನಿಯ ಮಹಾರಾಣಿಯರ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀ ಎಂ ಎಸ್ ಶ್ರೀಕಂಠಯ್ಯನವರು ಹೆಚ್ಚಿನ ಉತ್ತಮ ದರ್ಜೆಯ ವ್ಯಾಸಂಗಕ್ಕೆ ನೊನ್ನೆ ಬೆಳಗ್ಗೆ ಅಮೆರಿಕಕ್ಕೆ ತೆರಳಿದರು. ಶ್ರೀಯುತರನ್ನು ರೈಲ್ವೆ ನಿಲ್ದಾಣದಲ್ಲಿ ಅವರ ಬಹು ಸಂಖ್ಯೆಯ ವಿದ್ಯಾರ್ಥಿಗಳೂ, ಸಹೋದ್ಯೋಗಿಗಳೂ ಮತ್ತು ಬಂಧುಮಿತ್ರರೂ ಶುಭಕೋರಿ ಬೀಳ್ಕೊಟ್ಟರು

ಕಳೆದ ವಾರದ ಶೀಘ್ರ ಪಡೆಯಲು ಅವಕಾಶ

ಲೇಬರ್ ಕಾರ್ಡು ಹೋಲ್ಡರುಗಳು ಕಳೆದ ವಾರದ ರೇಷನನ್ನು ... ... ಮುಂದೆ ಪಡೆಯಲು ಅವಕಾಶವಿಲ್ಲವೆಂದು ಹೇಳಲಾಗುತ್ತಿದ್ದ ಈಗ ... ... ತಿಳಿಸಲಾಗಿದೆ

ಸಂಗೀತ ಕಛೇರಿ

ದಿ ... ... ಸಂಘದ ಆಶ್ರಯದಲ್ಲಿ ಈ ಸಂಜೆ ೭ ಘಂಟೆಗೆ ... ... ನಡೆಯುವುದು.

ಆಯುರ್ವೇದ ಕಾಲೇಜಿಗೆ ಸೇರುವ ಅವಧಿ ಹೆಚ್ಚಳ

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿಗಳು ಸೇರುವ ಅವಧಿಯನ್ನು ಇದೇ ತಿಂಗಳ ... ತಾರೀಖಿನ ವರೆಗೆ ಹೆಚ್ಚಿಸಲಾಗಿದೆಯೆಂದು ಕಾಲೇಜಿನ ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ

ಕೊರಿಯದಲ್ಲಿ ಅಮೆರಿಕಾ ಧಾಳಿಗೆ ಕಾಲ ಸನ್ನಿಹಿತ

ಕೊರಿಯದಲ್ಲಿ ಅಮೆರಿಕ ಮತ್ತು ದಕ್ಷಿಣ ಕೊರಿಯದ ಸೈನ್ಯಗಳು ಪ್ರತಿ ಧಾಳಿ ಮಾಡಲು ಅಮೆರಿಕಾ ಕೌಂಟರ್ ... ... ಜನರಲ್ ಮ್ಯಾಕ್‌ಆರ್ಥರ್ ... ... ಉತ್ತರ ಕೊರಿಯನ್ನರ ... ... ಅಮೆರಿಕದ ... ... ಉತ್ತರ ಕೊರಿಯನ್ನರ ಸೈನ್ಯ ಸಂಖ್ಯೆಗೆ ಅಮೆರಿಕದ ... ... ಉತ್ತರ ಕೊರಿಯನ್ನರು ೧೨೦ ಮೈಲಿಯಷ್ಟು ಪ್ರದೇಶವನ್ನು ಆಕ್ರಮಿಸಿರುವರು ... ... ಸ್ಥಿತಿಯು ... ... ಹೇಳಲಾಗಿದೆ

ಫಾರ್ಮೋಸಾ ಮೇಲಿನ ಧಾಳಿಗೆ ಸಿದ್ಧತೆ

ರಾಷ್ಟ್ರೀಯ ಚೀಣದ ಕೇಂದ್ರವಾದ ಫಾರ್ಮೋಸಾ ದ್ವೀಪದ ಮೇಲೆ ಧಾಳಿ ನಡೆಸುವ ಪೂರ್ವಭಾವಿಯಾಗಿ ಕಮ್ಯೂನಿಸ್ಟರು ರಾಷ್ಟ್ರೀಯ ಚೀಣದ ... ದ್ವೀಪದ ಮೇಲೆ ನೆನ್ನೆ ದಿನ ೧೫೦೦ ಬಾರಿ ಗುಂಡು ಹಾರಿಸಿದರೆಂದೂ, ಫಾರ್ಮೋಸಾದ ಮೇಲೆ ಧಾಳಿ ನಡೆಸಲು ಪ್ರಾಂತೀಯ ಸಮುದ್ರ ತೀರದಲ್ಲಿ ೧೫೦೦೦ ಕಮ್ಯೂನಿಸ್ಟ್ ಸೈನಿಕರು ಸಿದ್ಧವಾಗಿರುವರೆಂದೂ ವರದಿಯಾಗಿದೆ

ಕ್ಯಾಲಾಪಿನಲ್ಲಿ ರಕ್ತದ ಮಳೆ

ಕಳೆದ ಸೋಮವಾರ ಮಧ್ಯಾಹ್ನ ... ... ನಗರದ ಅನೇಕ ಪ್ರದೇಶಗಳಲ್ಲಿ ಕೆಲವು ನಿಮಿಷಗಳ ಕಾಲ ರಕ್ತದ ಮಳೆಯು ಬಂದಿತೆಂದೂ, ಆ ವೇಳೆಯಲ್ಲಿ ರಸ್ತೆಯಲ್ಲಿ ತಿರುಗಾಡುತ್ತಿದ್ದ ಅನೇಕ ಜನರ ಬಟ್ಟೆಗಳ ಮೇಲೆ ರಕ್ತದ ಕಲೆಯಂತೆ ಗುರುತುಗಳು ಬಿದ್ದುವೆಂದೂ ವರದಿಯಾಗಿದೆ.

○ ಟರ್ಕಿಯ ಮಂತ್ರಿವಾದ ... ... ಎಂಬುವರು ನೊನ್ನೆ ... ... ೩ ಮೈಲಿ ಸ್ಟೈಲ್ ... ...

ಬಸ್ಸಿನ ಓವರ್ ಲೋಡಿಗಾಗಿ ಜುಲ್ಮಾನೆ

ಸ್ವಂ. ವ] ಭದ್ರಾವತಿ ೨೦

ಕಳೆದ ಸೋಮವಾರ ... ... ರಾಜರ ... ... ಹೆಚ್ಚಾಗಿ ... ... ಬಸ್ಸಿನವರಿಗೆ ೧೫ ರೂ ಜುಲ್ಮಾನೆ ವಿಧಿಸಲಾಯಿತು.

ನಾಟಕದ ಪಾತ್ರಧಾರಿಗೆ ಬಹುಮಾನ

ಕಳೆದ ಶನಿವಾರ ... ... ಅಧ್ಯಕ್ಷತೆಯಲ್ಲಿ 'ಸತ್ಯ ಸಂಕಲ್ಪ' ಎಂಬ ನಾಟಕವನ್ನು ಆಡಿದರು. ನಾಟಕದಲ್ಲಿ ಪಾತ್ರ ವಹಿಸಿದ್ದ ಶ್ರೀ ಎಸ್ ಎಸ್ ... ಎಂಬುವರಿಗೆ ... ... ಶ್ರೀ ಪಿ ... ... ಒಂದು ಬೆಳ್ಳಿ ಬಟ್ಟಲನ್ನು ಬಹುಮಾನವಾಗಿ ಕೊಟ್ಟರು

||ಶ್ರೀ||

ಅರವಿಂದ ಪಾದಾರವಿಂದ

ಕಾಣಿಕೆ

"ಸಾಧ್ವಿ" ದಿನಪತ್ರಿಕೆಯ ಎಂಟನೇ ವಾರ್ಷಿಕೋತ್ಸವದಲ್ಲಿ

ಹಾಡಿದ ಪದಗಳು

———

(ಭಾಮಿನೀ ಷಟ್ಪದಿ)

ಜ್ಞಾನಯೋಗದ ಮಹಿಮೆ ಮಂತ್ರ
ಧ್ಯಾನ ನಿಷ್ಠೆಯ ಹಿರಿಮೆ ಹರಿಗುಣ
ಗಾನ ಸೌಖ್ಯದ ಸೀಮೆ, ಸಾಕ್ಷಾತ್ಕಾರದಲಿ ನಲವು||
ಜ್ಞಾನಿ ಕರ್ಮಠ ಭಕ್ತ ಸಾಧಕ
ಸಾಧುಜನಗಳೊಳಗೆಲ್ಲರೊಳಗಿಹ
ಶ್ರೀಪದಯುಗಲೇಶಾಂಕದೊಳಗಿಹ ಗುರುವೆ ಅರವಿಂದ ||೧||

ಬಂಗ ಸಂಸ್ಕೃತ ಫ್ರೆಂಚು ಲ್ಯಾಟಿನ್
ಆಂಗ್ಲ ಗ್ರೀಕೆಂಬಾರು ಭಾಷೆಯ
ಸಾಂಗಗೊಳಿಸುತ ಲೈಸಿಯಸ್ಸಿನ ಪ್ರಥಮ ಶ್ರೇಣಿಯಲಿ||
ಅಂಗ ನೀನುತ್ತೀರ್ಣನಾಗಲ್ಕಾಂ
ಗಲೇಯರು ಕುದುರೆಯಾಟದ
ಭಂಗಗೊಳಿಸಿದರಳಿಟ ವಿದ್ಯೆಕೈಸ್ಸು ವಿಫಲಗಳು ||೨||

ಶಕ್ತಿಗಳ್ಲದೆ ಓದುಬರಹವು
ಭುಕ್ತಿಗಳ್ಗೆಂಬುದನು ತಿಳುಹಿದಿ
ಶಕ್ತಿಯಿಂ ಇಂಗ್ಲೇಷಿನಧ್ಯಕ್ಷತೆಯನುಳಿ ಯುಕ್ತಿ||
ಯುಕ್ತಿಯಿಂದ ಬರೋಡೆಯುಳಿದಾ
ಶಕ್ತಿಯಿಂದಲಿ ವಂಗವಿಭಜನೆ
ಯುಕ್ತ ತಳುವಳಿಕ್ರಾಂತಿಕಾರಕ್ಕೆ ಗುರುವು ನೀನಾದೆ ||೩||

ಹರಿಯು ಕೃಷ್ಣಾಕೃತಿಯ ತಾಳಿದ
ಸೆರೆಮನೆಯ ಪ್ರಿಯಗಾಳ್ಯು ಸಿರಿಮನೆ
ಹರಿಯ ಸಾಕ್ಷಾತ್ಕಾರ ಸರ್ವಂ ಬ್ರಹ್ಮವೆಂಬ||
ಅರಿವು ತೋರಲು ರಾಜಕೀಯವು
ಹರಿಗಹಿಸಲಧ್ಯಾತ್ಮತತ್ತ್ವದ
ಹರಿಸಸಾಧ್ವಿಯ ಪೊಂಡಿಯೋಗದೆ ನಿಜ್ಯ ನೆಲಸಿಹುದು ||೪||

(ವಾರ್ಧಿಕ ಷಟ್ಪದಿ)

ಸರುಷ ಸಾಲ್ವತ್ತರಿಂ ಯೋಗಸಾಧನೆಯೊಳಗೆ
ಗುರುವರನೆ ನಿಂ ಕಳಳು ಹೃದಯದಂ ಹರ್ನಾಣಿ
ಹಿರಿದಾಗಿ ನೋಡ್ಪಂತೆ ಮಾನವಕೋಟಿಗೆ ನೀನೆ ದಿವ್ಯದಿಂತಿದಂಕರದಿಂ
ಪರಿಕರವನರಿಯುತ್ತೆ ಪರ್ದೈತ್ಯ ಮೂರುದಿನ
ಹರಿಯ ಕರಹಿಸೊಂದೆಹಾಬಿನಲಿ ನೀನೆ
ಅರಿತಂತೆನಿನ್ನ ತಿಯ ಸಾಧಕರುಹಾನೆಂಬು
ಹರಿಯುಮುಂದಿಯುಬಳೆಯುರೆ ||೫||
ದೇಹಾಭಿಮಾನಿಗೆ ಕೈಕಹಾಸೊರಿವುದು
ದೇಹಾಭಿಮಾನಿಗೇ ಧರ್ಮಕಲಿಸಾಗುವುದು
ದೇಹಾಭಿಮಾನದಿಂದಿಹಾಮಮೋಕ್ಷಗಳುವೇ ತ್ಸಂಕಲ್ಪಸಿದ್ಧಿ ಯಹುದು||
ದೇಹಾಭಿಮಾನ ದೈವೋಪಾಸ್ತಿ ಸಾಧನಕ್ಕೆ
ದೇಹವಾಸನೆದಾಯಿದಾನ ವಮನವಹರ್ಷ
ಆ ತಿವಾನಂದರಾಧುನಿಕ ಸಿದ್ಧರು ಗುರುವೆ ಅರವಿಂದ ನಿನ್ನ ಸಮರು ||೬||
ಸ್ವಾರಾಜ್ಯ ಪಡೆವುದೇ ಮಾನವರ ಗುರಿಯಲ್ಲ
ಘೋರತರಿಳಗೊಂಬು ಸಾಧನವು ಪಾತ್ರವು,
ಗಾರವದ ರಾಷ್ಟ್ರ ಪುನರುಜ್ಜೀವನದ ನೀತಿ ಯುಸ್ಯಾತಂತ್ರ್ಯ ನಿಜದ ನೋಡೆ||

ಪಾರತಂತ್ರ್ಯದೊಳಾದ ಪರುಷೇರುಗಳ
ಸಂಹರಿಸಿ ರಕ್ಷಣಾಕಾರ್ಯಕ್ಕೈಯ್ಯಿರೆಂದೊರೆದೆಯ್ಯ
ಕಾರುಣ್ಯನಿಧಿಯೆ ಮುದದು ಭವನದನದಿಲ್ಲ ಅರವಿಂದ ಯೋಗಿವರ್ಯ ||೭||
ಹಲವಾರು ಜನಗಳು ಪ್ರೀತಿಯ ಮನಸುಳ್ಳವರು,
ಬಿಡಿಯುಳಿಯೊಲುವರಾಗಿ ವಿಶ್ವಶಾಂತಿಯ ಪದದಿ
ಎಸೆಯುತಹಾದಾಂಬುಗಳ ವಿಷವಾಯುವ ಪ ಹರಿಸಿ ಜಗವಕೊಲ್ಲಲು ಜಗಿದಿರೆ||
ಒಸೆದು ಗಾಂಧಿಮಹಾತ್ಮ ವೈರಿಯು ನೀಂತೆಣಿದಿರಾ,
ಹಸನಾದ ಶಾಂತಿದೂತನು ಜವಾಹರಲಾಲು
ಗೊಸಗೆಯುತ್ತಿರೆ ವಿಶ್ವ ಶಾಂತಿಸಮ್ಮೇಳನವು ಭಾರತದ ಪುಣ್ಯವೆಮ್ಮ ||೮||
ಅರವಿಂದ ಗುರುದೇವ ನಮಿಸುವೆವು ನಿಮ್ಮಡಿಗೆ
ಧರೆಯು ಮಾನವ ಕಡಿಯ, ನಮರರೆಂದೆನಿಸುವ,
ಹಿಂದೆನಿಹ ಸಂಕ್ಷಿತಿಯಿಯುಮಿಹಿಳಲದ ಪಾರಗವನ್ನು, ಕಷ್ಟವೇ ಧೈವವೆಂಬ||
ಅರಣಿಯೊಂದಿಡೆ ಜಗಿತ, ಮನವು ಸತ್ಯದ ನೆಲೆಗೆ ಚಿರವಾಗಿ ನಿಲುವಂತೆ ಮಹದನುಗ್ರಹಗೈಯ್ಯುತಿರಿ,
ಕಳಾರೂಪದಿಂ ಪಾಕಯ್ಯಾಡೆಳಸಿದೀವರ ಸಾಧ್ವಿಮಂದಿರದಲ್ಲಿ ||೯||

ಗಾಯತ್ರೀಯಜ್ಞದೀಕ್ಷಿತ ವಿದ್ಯಾ,

ಜೆ. ಆರ್. ಗವರಿ.

ಮದ್ರಾಸಿನದ ನಾಟಕಗಳಿಗೆ ಮನರಂಜನೆ ತೆರಿಗೆ ವಜಾ

ಮದ್ರಾಸಿನಲ್ಲಿ ನಾಟಕಗಳ ಮೇಲೆ ಮನರಂಜನೆಯನ್ನು ವಜಾ ಮಾಡುವ ವಿಷಯವು ಆಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಕೇಳಲಾಗಿದೆ

ಕೊರಿಯಾ ಯುದ್ಧಕ್ಕೆ ಥೈಲ್ಯಾಂಡಿನ ಸೈನ್ಯ

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಕೊರಿಯ ಯುದ್ಧಕ್ಕೆ ಸೈನ್ಯಗಳನ್ನು ಕಳುಹಿಸಬೇಕೆಂದು ಭದ್ರತಾ ಸಮಿತಿಯು ಹೊರಡಿಸಿದ್ದ ಮನವಿಯ ಪ್ರಕಾರ ಥೈಲ್ಯಾಂಡ್ ಸರ್ಕಾರವು ನಾಲ್ಕು ಸಾವಿರ ಸುಸಜ್ಜಿತ ಸೈನಿಕರನ್ನು ಕಳುಹಿಸುವುದಾಗಿ ತಿಳಿಸಿದೆ

ಅರಮನೆ ಕಛೇರಿಯಲ್ಲಿ ವಯಸ್ಕರ ಶಿಕ್ಷಣ ಸಮಿತಿ

ತಾ|| ೧೯-೭-೫೦ನೇ ಶನಿವಾರ ಸಾಯಂಕಾಲ ಅರಮನೆ ಕಛೇರಿಯಲ್ಲಿ, ಹಜೂರು ಸೆಕ್ರೆಟರಿಗಳಾದ ಶ್ರೀ ಎಚ್. ಎ. ಪಾಳೆಗಾರರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ತರಗತಿಗಳ ಪ್ರಾರಂಭೋತ್ಸವ ಮತ್ತು ಕಳೆದ ಸಾಲಿನಲ್ಲಿ ಅಧ್ಯಕ್ಷರಾದವರಿಗೆ ಯೋಗ್ಯತಾಪತ್ರಗಳನ್ನು ಹಂಚುವ ಸಮಾರಂಭವು ನೆರವೇರಿತು. ದೇವತಾ ಪ್ರಾರ್ಥನೆಯಾದ ನಂತರ ಪೌರಸಭಾಧ್ಯಕ್ಷರು ಸ್ವಾಗತ ಭಾಷಣವನ್ನು ಮಾಡಿದರು ಅಧ್ಯಕ್ಷರ ಯೋಗ್ಯತಾ ಪತ್ರವನ್ನು ಹಂಚಿದ ಮೇಲೆ ಈ ಸಾಲಿಗೆ ೩ ತರಗತಿಗಳನ್ನೂ, ವಿದ್ಯಾ ಮಂದಿರಗಳನ್ನೂ ತೆರೆಯಲಾಯಿತು ನಂತರ ಶ್ರೀ ಎಸ್. ಪಿ ಶ್ರೀನಿವಾಸರಾಯರು ವಯಸ್ಕರ ಶಿಕ್ಷಣದ ವಿಚಾರವಾಗಿಯೂ, ಅಧ್ಯಕ್ಷರು ವಯಸ್ಕರ ಶಿಕ್ಷಣದ ಅಗತ್ಯ ಎಂಬ ವಿಚಾರವಾಗಿಯೂ ಭಾಷಣ ಮಾಡಿದರು ವಯಸ್ಕರ ಶಿಕ್ಷಣದ ಚಲನ ಚಿತ್ರ ಪ್ರದರ್ಶನವಾದ ಮೇಲೆ ರಾಷ್ಟ್ರ ಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ವಾರ ಭವಿಷ್ಯ

ತಾ|| ೨೩-೭ ರಿಂದ ೩೦ ರ ವರೆಗೆ

ಮೇಷ—ಆರೋಗ್ಯ ಉತ್ತಮ ಸ್ತ್ರೀಗೆ ಸ್ವಲ್ಪ ಅಶಾಂತಿ ಪ್ರವಾಸ ಧನಭ ವಿದ್ಯಾರ್ಥಿ ವ ತ್ತು ಲೇಖಕರಿಗೆ ಕ್ಕ, ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಉತ್ತಮ ತಾ| ೨೪ ೨೫ ಗೊಂದಲ ಬರ್ಚ

ವೃಷಭ—ಆರೋಗ್ಯ ಉತ್ತಮ ಜ ಸೇವೆ ಧಾರ್ಮಿಕ ಕಾರ್ಯಗಳು ಸಾರ ಉದ್ಯೋಗ ನೌಕರಿಗಳಲ್ಲಿ ಅಪ್ತೇಷ್ಟರ ಭೇಟಿ ವಿದ್ಯಾರ್ಥಿಗಳಿಗೆ ತಾ|| ೨೭, ೨೮, ಖರ್ಚ

ಮಿಥುನ—ಅನಾರೋಗ್ಯ ಚಿಂತೆ ಹಣಕಾಸಿನ ಸ್ಥಿತಿ ಉತ್ತಮ ಸಹಾಯ ಮನೆಯಲ್ಲಿ ಕಲಹ ತೊ ತಾ|| ೨೩ ೨೭, ಮಹತ್ವದ ಪತ್ರ ನ ಮನಸ್ಸಿಗೆ ಶಾಂತಿ

ಕರ್ಕ—ಆರೋಗ್ಯ ಉತ್ತಮ ಷ್ಟ ಕಾರ್ಯ ಸಿದ್ಧಿ ಎದುರಾಳಿಗಳ ಯ ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಉತ್ತಮ ಸ್ಥಿತಿ ಮಹತ್ವದ ಪತ್ರ ಮನ ಕಾರ್ಯಸಿದ್ಧಿ ಆಪ್ತರ ಭೇಟಿ ೨೪ ೨೫ ಸನ್ಮಾನ

ಸಿಂಹ ಎದುರಾಳಿಗಳ ಅಧಿಕ ಉತ್ಸಾಹ ನೌಕರಿಯಲ್ಲಿ ಯಶಸ್ಸು ವಾರದಲ್ಲಿ ಧನಲಾಭ ಧಾರ್ಮಿಕ ಕಾರ್ಯಗಳು ತಾ|| ೨೩ ೨೭ ಆಕಸ್ಮಿಕ ಪ್ರಯೋಜನ ಪಡೆಯುವರು

ಕನ್ಯಾ—ಅನಾರೋಗ್ಯ ಉದ್ಯೋಗ ವ್ಯಾಪಾರಗಳಲ್ಲಿ ತೊಂದರೆ ಭಯ ಶತ್ರು ತಾ|| ೨೬, ೨೭ ಖರ್ಚ

ತುಲಾ—ತೊಂದರೆ ಚಿಂತೆ ಕಾರ್ಯ ವಿಫಲ ತಾ|| ೨೪, ೨೫, ಸಂಕಟ ನಾಶ

ವೃಶ್ಚಿಕ ಸಜ್ಜನರ ಸ್ನೇಹ ಪ್ರಾಪ್ತಿ ಆರೋಗ್ಯ ಉತ್ತಮ ಮನಸ್ಸಿಗೆ ಉತ್ತಮ ಯಶಸ್ಸು ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಲಾಭ ತಾ|| ೨೩, ೨೭ ಶುಭವು ಆಪ್ತರ ಭೇಟಿ ಸನ್ಮಾನ

ಧನು—ಆರೋಗ್ಯ ಉತ್ತಮ ಧಾರ್ಮಿಕ ಕಾರ್ಯ ವ್ಯಾಪಾರ, ಉದ್ಯೋಗಗಳಲ್ಲಿ ಪ್ರಗತಿ ಕೌಟುಂಬಿಕ ಸುಖ ವಿದ್ಯಾರ್ಥಿಗಳಿಗೆ ಯಶಸ್ಸು ಮಹತ್ವದ ಪ್ರಯತ್ನಕ್ಕೆ ಅನುಕೂಲ ತಾ|| ೨೪ ಖರ್ಚು, ಗೊಂದಲ

ಮಕರ—ಆರೋಗ್ಯ ಉತ್ತಮ ರ ಭೇಟಿ ಹಠದಾಯಕ ಘಟನೆಗಳು ವಿದ್ಯಾರ್ಥಿಗಳ ಉನ್ನತಿ ಸನ್ಮಾನ ಕತ ಕ ಲಾಭ ತಾ|| ೨೪, ೨೫ ಮಿತ್ರ ಉತ್ತೇಜನ ಬಾಕಿ ವಸೂಲಿ

ಕುಂಭ—ಆರೋಗ್ಯದ ಬಗ್ಗೆ ಎಚ್ಚರಿಕೆ ಉತ್ತಮ ಚಿಂತಾ ನಾಶ, ರ ಭೇಟಿ ತಾ|| ೨೬, ೨೭ ಚಿಂತಾ ಮಿತ್ರ ಭೇಟಿ

ಮೀನ—ಅನಾರೋಗ್ಯ ನಿರಾಶೆ ಪಾರ, ಉದ್ಯೋಗ, ನೌಕರಿಗಳಲ್ಲಿ ತಾ|| ೨೦, ೨೮ ಮಿತ್ರ ಸಹಾಯ ತಾ ನಾಶ

ಶ್ರೀ

ಗಣೇಶಾ ಟಾಕೀಸ್

on 24th & 25th July 1950 for 2 days only

THE EXILE

(ದಿ ಎಕ್ಸೈಲ್)

(In Sepiatone)

With:-Douglas Fairbanks (Jr) & Maria Montez

on 26-7-50

Sccudda Hoo - - Sccudda Hay

(In Technicolor)

ರಾಜಕಮಲ್,

ಮೈಸೂರು

21-7-50 ರಿಂದ 2ನೇ ವಾರ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸಮಾಧಿ

— ಭೂಮಿಕೆ —

ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್, ಮುಬಾರಕ್

ಪ್ರಭುದೇವಾ ಟಾಕೀಸ್

21—7—50 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ ದಿನವೂ 3 ಪ್ರದರ್ಶನಗಳು

✱ ಭಕ್ತ ಪುಂಡಲೀಕ ✱

(ಹಿಂದಿ)

ಪಾತ್ರ:- ರಾಣಿ ಪ್ರೇಮಲತಾ, ಸುಗಣಾ, ರಂಭಾ, ಸೋಫಿಯಾ, ನಜೀರ್ ಮುಂತಾದವರು.

ಎ ವಾಲೆಗಳ ಕಾಲ ಎಲ್ಲ ವಿಧವಾದ ಶ್ರೀ ಪಾಪುಗಳನ್ನೂ ಮುಕ್ತಾ ಮಾಡಬೇಕಾಗಿದೆ

ಪ್ರತಿಯೊಂದು ಕುಟುಂಬದವರೂ ತಪ್ಪದೆ ಅವಶ್ಯಕವಾಗಿ ನೋಡಲೇಬೇಕಾದ ಚಿತ್ರ.

ವಿವಿಧ ರೇಷ್ಮೆ ಸೀರೆಗಳು

9 ಗಜದ ಪೂನಾ ನಾಗಪುರ ಸೀರೆ

M. V. ಭೋಜಯ್ಯ ಬ

ಇಂಡಿಯಬ್ಯಾಂಕ್ ಎದುರು, ಮೈಸೂ

Edited, printed and published by A R Nagarajan, at Sadhvi Press D Subbiah Road, Mysore

ಫೋನ್ ನಂ. 792 'ಸಾಧ್ವೀ' ಮೈಸೂರು ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಸೋಮವಾರ ೨೬-೬-೫೦ [ಸಂಚಿಕೆ ೪

ಜಗಚ್ಛಾಂತಿಗೆ ನೆಹರೂ ಪ್ರಯತ್ನ ನಿಲ್ಲದಿರಲಿ

ಬೆಲ್ಜಿಯಂ ದೊರೆಗಳು ಸ್ವದೇಶಕ್ಕೆ

ಬೆಲ್ಜಿಯಮ್ಮಿನ ದೊರೆ ಲಿಯೋಪಾಲ್ಡರು ೬ರು ವರ್ಷಗಳಿಂದ ದೇಶಭ್ರಷ್ಟರಾಗಿದ್ದು ಈಗ ಪುನಃ ರಾಜ ಪದವಿಯನ್ನು ಸ್ವೀಕರಿಸಲು ರಾಜಧಾನಿ ಬ್ರುಸೆಲ್ಸ್ ನಗರಕ್ಕೆ ವಿಮಾನದಲ್ಲಿ ವಾಪಸು ಬಂದಿರುವರು ಅವರ ಆಗಮನದ ಗೌರವಾರ್ಥವಾಗಿ ೧೦ ವಿಮಾನಗಳು ಮುಖರಿ ಮಾಡಿದವು ಸೈನಿಕರೂ, ಕಾವಲುಗಾರರೂ ಸಜ್ಜಾಗಿ ನಿಂತಿದ್ದರು

ಬೆಲ್ಜಿಯಮ್ಮಿನ ಮಾಜಿ ಪ್ರಧಾನಿ ಪಾಲ್ ಸ್ಪಾಕ್‌ರವರು ೨೦೦೦ ಸಮಾಜವಾದಿಗಳ ಮುಖಂಡರಾಗಿ ರಾಜಧಾನಿಯಾದ ಬ್ರುಸೆಲ್ಸ್ ನಗರದಲ್ಲಿ ರಾಜರು ತಮ್ಮ ದೇಶಕ್ಕೆ ಹಿಂತಿರುಗುವುದನ್ನು ಪ್ರತಿಭಟಿಸುತ್ತಾ ಮೆರವಣಿಗೆ ನಡೆಸಿದರು ಸರ್ಕಾರದಲ್ಲಿದ್ದ ೯ ಜನ ಸಮಾಜವಾದಿ ಪಕ್ಷದ ಮಂತ್ರಿಗಳು ರಾಜೀನಾಮೆಯಿತ್ತಿರುವರು ಲಿಯೊಪಾಲ್ಡ್ ದೊರೆಗಳನ್ನು ಬೆಲ್ಜಿಯಮ್ಮಿನ ಅರಸರನ್ನಾಗಿ ಪರಿಗಣಿಸುವುದಿಲ್ಲವೆಂದು ಇವರು ಮುಖ್ಯ ಮಂತ್ರಿಗೆ ತಂತಿ ಕಳುಹಿಸಿರುವರು

ಅಂಚೆ ನೌಕರರ ಮುಷ್ಕರದ ಬಗ್ಗೆ ಜೈಪ್ರಕಾಶರ ಹೇಳಿಕೆ

ಬೊಂಬಾಯಿ ಅಂಚೆ ನೌಕರರ ಸಭೆಯು ನೆನ್ನೆ ದಿವಸ ಸೇರಿತ್ತು. ಆ ಸಂದರ್ಭದಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘದ ಅಧ್ಯಕ್ಷ ಶ್ರೀ ಜಯಪ್ರಕಾಶ ನಾರಾಯಣರು ಭಾಷಣ ಮಾಡುತ್ತಾ ಅಂಚೆ ನೌಕರರು ತಮ್ಮ ಕುಂದು ಕೊರತೆಗಳ ಬಗ್ಗೆ ೩ ವರ್ಷದ ಕೆಳಗೆ ಸಲ್ಲಿಸಿದ ಬೇಡಿಕೆಗಳಿಗೆ ಸರ್ಕಾರದವರು ಇನ್ನೂ ಗಮನ ಕೊಟ್ಟಿಲ್ಲವೆಂದೂ, ಈ ಕಾರಣದಿಂದ ಅಂಚೆ ನೌಕರರು ಮುಷ್ಕರವನ್ನು ಪ್ರಾರಂಭಿಸುವ ಬಗ್ಗೆ ಬರುವ ತಿಂಗಳು ೧೭ ನೇ ತಾರೀಖು ದೆಹಲಿಯಲ್ಲಿ ಅಂಚೆ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸಭೆಯನ್ನು ಸೇರಿಸಿ ಮುಂದಿನ ನಿರ್ಧಾರವನ್ನು ಕೈಗೊಳ್ಳಬೇಕಾಗುವುದೆಂದೂ ತಿಳಿಸಿದರು.

೬೦೦೦ ರೂ ನೋಟುಗಳು ಗೆದ್ದಲಿನ ಪಾಲು

ಮಿರ್ಜಾಪುರದ ಒಬ್ಬ ವರ್ತಕನು ಕೆಲವು ದಿವಸಗಳ ಹಿಂದೆ ಆರು ಸಾವಿರ ರೂಗಳ ಕರೆನ್ಸಿ ನೋಟುಗಳನ್ನು ತನ್ನ ಮನೆಯ ಮಾಳಿಗೆಯ ಅಂತಸ್ತಿನ ಒಂದು ಗೂಡಿನಲ್ಲಿ ಬಹಳ ಭದ್ರವಾಗಿಟ್ಟಿದ್ದನು ೩ ತಿಂಗಳ ನಂತರ ಅವನು ಪುನಃ ಆ ಗೂಡಿನಲ್ಲಿ ನೋಡಲಾಗಿ ಅದರ ಪೂರ್ತಿಯಾಗಿ ಗೆದ್ದಲುಗಳು ತುಂಬಿ ನೋಟುಗಳು ಮಾಯವಾಗಿದ್ದವು

ವ್ಯವಸಾಯದ ನೀರಿಗಾಗಿ ಕಳವಳಕ್ಕೆ ಕಾರಣವಿಲ್ಲ

ಕೃಷ್ಣರಾಜ ಸಾಗರದಲ್ಲಿ ನೀರು ಬತ್ತಿಹೋಗಿ, ಕುಡಿಗೆ ತುಂಬುವ ಸೂಚನೆಗಳು ಕಂಡು ಬರುತ್ತಿರುವುದರ ಬಗ್ಗೆ ಮುಖ್ಯ ಮಂತ್ರಿ ಶ್ರೀ ಟಿ ಮರಿಯಪ್ಪನವರು ತೃಪ್ತಿಯನ್ನು ಸೂಚಿಸಿ, ಆಗಸ್ಟ್ ತಿಂಗಳಿನಲ್ಲಿ ಅಣೆಕಟ್ಟಿನಲ್ಲಿ ನೀರು ೧೨೪ ಅಡಿಯನ್ನು ಬರುವುದೆಂದೂ ಅಭಿಪ್ರಾಯಪಟ್ಟಿರುವರು ಈ ವರ್ಷದಲ್ಲಿ ಕಳವಳಕ್ಕೆ ಕಾರಣವಿಲ್ಲವೆಂದೂ, ವ್ಯವಸಾಯವು ಎಂದಿನಂತೆ ತೊಂದರೆಯಿಲ್ಲದೆ ನಡೆಯುವುದೆಂದೂ ಅವರು ತಿಳಿಸಿರುವರು

ಸಹಕಾರ ಪ್ರಚಾರ

ಟಿ ನರಸೀಪುರ ೨೩

ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಈ ದಿನ ಇಲ್ಲಿನ ಕೃಷ್ಣಂ ರಾಜೇಂದ್ರ ಒಡೆಯರ್ ಸಹಕಾರ ಸಂಘದಲ್ಲಿ ಸಹಕಾರ ಪ್ರಚಾರೋಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸಂಸ್ಥಾನದ ಕೇಂದ್ರ ಪ್ರಚಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾಸರವರು ಅಗ್ರಾಸನವನ್ನು ವಹಿಸಿದ್ದರು ಜಿಲ್ಲಾ ಸಂಘದ ಅಧ್ಯಕ್ಷರಾದ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ ರವರು ಉಪನ್ಯಾಸಕರ ಭಾಷಣಮಾಡಿ ಉಪನ್ಯಾಸಕರ ಪರಿಚಯ ಮಾಡಿಕೊಟ್ಟು, ಸಂಘದ ಉದ್ದೇಶವನ್ನು ವಿವರಿಸಿದರು. ತಾಲ್ಲೂಕುಗಳಲ್ಲಿಯೂ, ಗ್ರಾಮಗಳಲ್ಲಿಯೂ ಪ್ರಚಾರ ಸಂಘಗಳನ್ನು ಸ್ಥಾಪಿಸಲಾಗುವುದೆಂದು ತಿಳಿಸಿದರು

ಶ್ರೀಗಳಾದ ಎಂ ಎಸ್ ರಾಮಸ್ವಾಮಿ, ಎಂ ಎನ್ ಜೋಯಿಸ್, ಎಸ್ ರಂಗರಾವ್, ರಾವ್ ಬಹದ್ದೂರ್ ಎಂ ರಾಮಸ್ವಾಮಿ ಅಗರಂ ರಂಗಯ್ಯ, ಬಾಗಲೂರು ಅಬ್ಸೆಂಟ್ ಬ್ಯಾಂಕಿನ ಶ್ರೀ ವೆಂಕಟಸುಬ್ಬಯ್ಯ, ಕೋಲಾರದ ಶ್ರೀ ವೆಂಕಟರಾಮಯ್ಯ ಮತ್ತು ಹಿರಿಯಣ್ಣಾರ್ ಶ್ರೀ ನಾರಾಯಣಶೆಟ್ಟಿ ಇವರುಗಳು ಭಾಷಣಮಾಡಿ ಸಹಕಾರ ತತ್ವದ ಪ್ರಚಾರವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಮಾಡಬೇಕಾಗಿರುವ ಅವಶ್ಯಕತೆಯನ್ನು ವಿವರಿಸಿದರು ದೇಶದ ಸ್ವಾತಂತ್ರ್ಯವು ದೊರಕಿರುವುದರಿಂದ ಇನ್ನು ಮುಂದೆ ರಾಷ್ಟ್ರೀಯ ಪುನರ್ರಚನಾ ಕಾರ್ಯವು ಸಹಕಾರ ತತ್ವದ ತಳಹದಿಯಮೇಲೆ ನಡೆಯಬೇಕೆಂದು ಸೂಚಿಸಿದರು.

ಕಾರ್ಯದರ್ಶಿಗಳಾದ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ ಸಭಾರಂಭವು ಮುಕ್ತಾಯವಾಯಿತು

ಆಕಾಶವಾಣಿ ವಿಶೇಷ ಕಾರ್ಯಕ್ರಮ

ಅಖಿಲ ಭಾರತ ರೇಡಿಯೋವಿನ ಮೈಸೂರು ಕೇಂದ್ರದಿಂದ ಈ ರಾತ್ರಿ ೮ ರಿಂದ ೮-೩೦ ಘಂಟೆವರೆಗೆ "ಸಮಾಜೋನ್ನತಿಯಲ್ಲಿ ವಿಶ್ವವಿದ್ಯಾಲಯದ ಪಾತ್ರ" ಎಂಬ ವಿಷಯವಾಗಿ ಚರ್ಚೆ ನಡೆಯುವುದು ಅಂತರ ರಾಷ್ಟ್ರೀಯ ವಿದ್ಯಾರ್ಥಿ ಸಮ್ಮೇಳನದ ಹಲವು ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸುವರು.

ಶಾಂತಿಸ್ಥಾಪನೆ ಬಗ್ಗೆ ನೆಹರೂ ಪ್ರಯತ್ನ ಮುಂದುವರಿಯಲಿ

ಕೊರಿಯಾ ಬಿಕ್ಕಟ್ಟಿನ ಪರಿಹಾರ ಮತ್ತು ವಿಶ್ವ ಶಾಂತಿ ಸ್ಥಾಪನಾ ಕಾರ್ಯದಲ್ಲಿ ಪಂಡಿತ ನೆಹರೂರವರು ಕೈಗೊಂಡಿರುವ ಪ್ರಯತ್ನಗಳನ್ನು ಜನರು ಸಂಪೂರ್ಣ ಅನುಮೋದನೆ ಪ್ರಶಂಸಿಸಿ ಅಲ್ಲಿರುವ ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ ತಮ್ಮ ಪ್ರಯತ್ನವನ್ನು ಅಷ್ಟಕ್ಕೇ ಬಿಟ್ಟುಬಿಡದೆ ಮುಂದುವರಿಸಬೇಕೆಂದು ಪಂಡಿತ ನೆಹರೂರವರನ್ನು ಒತ್ತಾಯ ಪಡಿಸಬೇಕೆಂದೂ ಮೇಲ್ಕಂಡ ಪತ್ರದಲ್ಲಿ ನಮೂದಿಸಲಾಗಿದೆ

ರಾಜಾಜಿಯವರು ಆರ್ಥಿಕ ಸಮಿತಿ ಅಧ್ಯಕ್ಷರು

ಭಾರತ ಸರ್ಕಾರದಲ್ಲಿ ನೂತನ ಸಚಿವರಾಗಿರುವ ಶ್ರೀ ಸಿ ರಾಜಗೋಪಾಲಾಚಾರಿಯವರನ್ನು ಮಂತ್ರಿಮಂಡಳದ ಆರ್ಥಿಕ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತೆಂದು ಗೊತ್ತಾಗಿದೆ

ಹೈದರಾಬಾದಿನಲ್ಲಿ ೫೭೫ ಬಂದಿಗಳ ಬಿಡುಗಡೆ

ಯಾವ ವಿಧವಾದ ಅಪಾದನೆಯೂ ಇಲ್ಲದೆ ಬಂಧನದಲ್ಲಿರುವ ಎಲ್ಲ ಕೈದಿಗಳನ್ನೂ ಬಿಡುಗಡೆ ಮಾಡಲು ಹೈದರಾಬಾದ್ ಸರ್ಕಾರದವರು ಆಲೋಚಿಸಿದ್ದಾರೆ ಈ ನೀತಿಗನುಸಾರವಾಗಿ ನೆನ್ನೆ ದಿನ ತೆಲಂಗಾಣದ ಜಿಲ್ಲಾ ಜೈಲಿನಿಂದ ೫೭೫ ಮಂದಿ ಕೈದಿಗಳನ್ನು ಬಿಡುಗಡೆ ಮಾಡಲಾಯಿತು

ರಷ್ಯ ಬಗ್ಗೆ ಫ್ರೆಂಚ್ ಮಾಜಿ ಮಂತ್ರಿ ಎಚ್ಚರಿಕೆ

ರಷ್ಯವು ಈಗ ಪ್ರಪಂಚದಲ್ಲೆಲ್ಲಾ ಅತ್ಯಂತ ಬಲಯುತ ಸೈನ್ಯಗಳನ್ನು ಹೊಂದಿದೆಯೆಂದು ಫ್ರಾನ್ಸಿನ ಮಾಜಿ ಮುಖ್ಯ ಮಂತ್ರಿ ಪಾಲ್ ರೇನಾಡ್‌ರವರು ತಿಳಿಸಿದ್ದಾರೆ ಅಲ್ಲಿ ೧೭೦ ಪದಾತಿ ಸೈನ್ಯಗಳು, ೩೫ ಶಸ್ತ್ರ ವಾಹನಗಳು ಮತ್ತು ೭೦ ಕೋಟಿ ಸೈನ್ಯಗಳೂ ಇರುವುದಾಗಿಯೂ ರಷ್ಯವು ಹಗಲಿರುಳೂ ಶಸ್ತ್ರಾಸ್ತ್ರಗಳನ್ನು ತಯಾರಿಸಲು ದುಡಿಯುತ್ತಿರುವುದಾಗಿಯೂ ಅವರು ತಿಳಿಸಿ ಕೊರಿಯಾ ಒಗ್ಗ ಐರೋಪ್ಯರು ಉದಾಸೀನರಾಗಬಾರದೆಂದು ಹೇಳಿದ್ದಾರೆ

ಕಾಂಗ್ರೆಸ್ ಅಧ್ಯಕ್ಷರೇ ಮುಖ್ಯ ಪ್ರಧಾನರಾಗಬೇಕು

ಭಾರತ ಸರ್ಕಾರದ ಮಾಜಿ ಸಚಿವರಾದ ಶ್ರೀ ಮೋಹನಲಾಲ್ ಸಕ್ಸೇನಾರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಂದು ಸಲಹೆಯನ್ನು ಮಾಡುತ್ತಾ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರೇ ಭಾರತದ ಮುಖ್ಯ ಪ್ರಧಾನಿಗಳಾಗಿರಬೇಕೆಂದು ಸಲಹೆ ಮಾಡಿದ್ದಾರೆ ಅಲ್ಲದೆ ಪ್ರಧಾನ ಸಚಿವರು ಮತ್ತು ಉಪಪ್ರಧಾನ ಸಚಿವರನ್ನುಳಿದು ಮಂತ್ರಿ ಮಂಡಲದ ಇತರ ಸದಸ್ಯರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿರಬಾರದೆಂದೂ ಮುಂತಾಗಿ ಶ್ರೀ ಸಕ್ಸೇನಾರವರು ಇತರ ಎಂಟು ಸಲಹೆಗಳನ್ನು ಮುಂದಿಟ್ಟಿರುವರೆಂದು ಗೊತ್ತಾಗಿದೆ.

ನಾಯಿಕೊಡೆ ವಿಷ ಸೇವಿಸಿ ೭ ಮಂದಿಯ ಮರಣ

ನಾಯಿಕೊಡೆಯ ವಿಷ ಮಿಶ್ರಿತ ಅಡಿಗೆಯನ್ನು ಸೇವಿಸಿದ ಏಳು ಮಂದಿಯನ್ನು ನೀಲಗಿರಿಯ ಆಸ್ಪತ್ರೆಗೆ ಸೇರಿಸಲಾಗಿ ಅವರು ಅಲ್ಲಿ ಮೃತಪಟ್ಟರೆಂದೂ, ಮತ್ತೆ ಐದು ಮಂದಿಯು ಚಿಕಿತ್ಸೆ ಹೊಂದಿ ಚೇತರಿಸಿಕೊಳ್ಳುತ್ತಿರುವರೆಂದೂ ಹೇಳಲಾಗಿದೆ

○ ಭಾರತದ ರೈಲ್ವೆ ಮಾರ್ಗಗಳನ್ನು ಆರು ವಿಭಾಗವಾಗಿ ವಿಂಗಡಿಸುವುದು ಯೋಗ್ಯವೆಂದೂ, ಪ್ರಯಾಣಿಕರನ್ನು ಈ ಬಗ್ಗೆ ಕೇಳಿದಾಕ್ಷಣ ಸಂತರ ಅತ್ಯಗತ್ಯ ಸರ್ಕಾರದವರಾಗುವುದೆಂದೂ ರೈಲ್ವೆಗಳ ಚೀಫ್ ಕಮೀಷನರರಾದ ಕೆ ಸಿ ಬಕ್ಷಿಯವರು ತಿಳಿಸಿರುತ್ತಾರೆ

ಕನ್ನಂಬಾಡಿ ನೀರಿನ ಮಟ್ಟ ೧೦೦ ಅಡಿಗಳಿಗೆ ಏರಿತು

ಕೃಷ್ಣರಾಜ ಸಾಗರದ ನೀರಿನ ಮಟ್ಟವು ಈ ದಿನ ೧೦೦-೬ ಅಡಿಗಳಿಗೆ ಏರಿದೆ

ಹರಿಕಥೆ ಮತ್ತು ಸಂಗೀತ

ಚಾಮರಾಜಪೇಟೆ ಶ್ರೀ ಕೃಷ್ಣಮಂದಿರದ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರತಿವರ್ಷದಂತೆ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಹರಿಕಥಾ ವಿದ್ವಾನ್ ಗರುಡ ರಾಮಕೃಷ್ಣ ಶಾಸ್ತ್ರಿಗಳಿಂದ ಹರಿಕಥೆಯು ನಡೆಯುವುದು. ನಾಳಿದ್ದು ಸಂಜೆ ೭ಕ್ಕೆ ಪ್ರಮೋದ ಪ್ರಯುಕ್ತ ಶ್ರೀ ಕೆ. ಆರ್ ರಾಮಸ್ವಾಮಿಯವರ ಸಂಗೀತವು ಸಹಿತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ. ಎರಡು ದಿನಗಳಲ್ಲೂ ಸರ್ವರಿಗೂ ಪ್ರವೇಶವುಂಟು.

ಗಾಂಧರ್ವ ಗಾಯನ ಶಾಲೆ

ರಾಜಧಾನಿಯ ಗೊಲ್ಲಗೇರಿಯಲ್ಲಿ ಹೊಸದಾಗಿ ತೆರೆಯಲ್ಪಟ್ಟಿರುವ ಈ ಶಾಲೆಯು ಜೂನ್ ತಿಂಗಳಿನಿಂದ ವಿದ್ವತ್ ಸಂಗೀತ ತರಗತಿಗಳನ್ನು ಪ್ರಾರಂಭಿಸಲಾಗಿದೆ ಸೇರಲು ಇಚ್ಛಿಸುವವರು ಈ ಶಾಲೆ ಪಂಡಿತರಿಗೆ ಶ್ರೀ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಪೆಟ್ರೋಲ್ ಪಂಪಿನ ಹತ್ತಿರದಲ್ಲಿ ವಿಚಾರಿಸಬಹುದು

ಚಿಕ್ಕಪೇಟೆ ಪುರದ ಸಂಕೇತಿ ಸಂಘ

ಮೇಲ್ಕಂಡ ಸಂಘದ ಕಾರ್ಯಕಾರಿ ಸಭೆಯು ಜರುಗಿದ ನೆನ್ನೆ ಶ್ರೀ ಎಸ್ ರಾಮಸ್ವಾಮಿಯವರ ಮನೆಯಲ್ಲಿ ಶ್ರೀ॥ ಎಸ್. ರಾಮಸ್ವಾಮಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾರ್ಥಿ ವೇತನಕ್ಕಾಗಿ ಬಂದಿದ್ದ ೩೭ ಅರ್ಜಿಗಳ ಪೈಕಿ ೨೬ ಜನ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಲಾಯಿತು. ಈ ಪೈಕಿ ಒಬ್ಬ ವಿದ್ಯಾರ್ಥಿಗೆ ಶ್ರೀ॥ಟಿ ಸಾವರ್ ವಿಶೇಷ ವಿದ್ಯಾರ್ಥಿ ವೇತನವನ್ನು ಕೊಡಲಾಗಿದೆ. ಮಹಾಜನಗಳು ಸಂಘಕ್ಕೆ ಸದಸ್ಯರಾಗಿ ಹೆಚ್ಚಿಗೆ ಧನ ಸಹಾಯ ಮಾಡಬೇಕಾಗಿ ಶ್ರೀ॥ಆರ್. ವೈ. ಸುಬ್ರಹ್ಮಣ್ಯ ದೀಕ್ಷಿತರು ಪ್ರಾರ್ಥಿಸಿರುತ್ತಾರೆ

೧೯೫೭ ರೊಳಗೆ ಅಮೆರಿಕಾ ರಷ್ಯಾ ಯುದ್ಧವೇ ?

೧೯೫೭ರೊಳಗೆ ಅಮೆರಿಕದ ಮೇಲೆ ಯುದ್ಧ ನಡೆಸಲು ರಷ್ಯವು ೩೪೦ ವರ್ಷ ದಲ್ಲಿ ತೀರ್ಮಾನಿಸಿತ್ತೆಂದು ಹೇಳಲಾಗಿದೆ ಈ ವಿಷಯವನ್ನು ಅಮೆರಿಕದ ಅಧಿಕಾರಿ ಯೊಬ್ಬರು ಪತ್ರಿಕೆ ರೂಪದಲ್ಲಿ ಪ್ರಕಟಿಸಿ ರಷ್ಯದ ರಾಜಕೀಯ ಸಭೆಯಲ್ಲಿ ೧೯೪೯ ನೇ ಜನವರಿಯಲ್ಲಿ ಈ ಬಗ್ಗೆ ತೀರ್ಮಾನ ವಾಗಿದ್ದ ಅಂಶವನ್ನು ತಿಳಿಸಿದ್ದಾರೆ

ಹೈದರಾಬಾದಿನಲ್ಲಿ ಮಾದಕ ದ್ರವ್ಯಗಳ ರೇಡ್

ಹೈದರಾಬಾದಿನ ಅಬ್ಕಾರಿ ಶಾಖೆಯ ಸಂಸ್ಥಾನಗಳಾದ ದೊಂಬಾಯಿ ಮತ್ತು ಮದ್ರಾಸುಗಳಿಂದ ಬಾರಿಗೆ ಬಂದಿರುವ ಪಾನ ನಿರೋಧಕ್ಕೆ ಬೆಂಬಲ ಕೊಡಲು ಅಲ್ಲಿನ ಸರ್ಕಾರ ದಿನ ದಿಂದ ಎಲ್ಲೆಗಳ ಸುತ್ತಲೂ ಪಾನ ನಿರೋಧದ ಪ್ರದೇಶವನ್ನು ವಿಸ್ತರಿಸುವುದಲ್ಲದೇ ಸಾರಾಯಿ ಅಫೀಮು ಮತ್ತು ಗಾಂಜಾಗಳನ್ನು ರೀತಿ ಮಾಡುವುದಾಗಿ ರೆವಿನ್ಯೂ ಮಂತ್ರಿ ಬಿ ರಾಮಕೃಷ್ಣರಾಯರು ತಿಳಿಸಿರುತ್ತಾರೆ ಇದಕ್ಕಾಗಿ ಸರ್ಕಾರಕ್ಕೆ ೩೨ ಲಕ್ಷರೂ ಗಳು ಖರ್ಚಾಗುತ್ತದೆ

ದೊಡ್ಡ ಆಕಾರದ ಬಸ್ಸುಗಳಿಗೆ ತಿರುಗಿರುಯಲ್ಲಿ ನಿಯಮಾಯಿತಿ

ರಸ್ತೆಗಳಲ್ಲಿ ಸಂಚರಿಸುವ [illegible] ಹೆಚ್ಚು ಜನರನ್ನು ಕೂಡಿಸಿಕೊ[illegible] ವಿಶಾಲವಾಗಿ ಜಾಗಗಳನ್ನು [illegible] ಮದ್ರಾಸ್ ಸರ್ಕಾರದವರು ಬಸ್ಸಿನವರಿಗೆ ಪ್ರೋತ್ಸಾಹವೀಯುವವರಾಗಿದ್ದಾರೆ ಇದಕ್ಕಾಗಿ ಅವರು ಮೊದಲನೆ ಏರ್ಪಾಡಿನಿಂದ ಬಸ್ಸು ಹೆಚ್ಚು ಸ್ಥಾಗಳಿಗೆ ಅಧಿಮೆಯ ತೆರಿಗೆಯನ್ನು ವಿಧಿಸಲು ಆಲೋಚಿಸುತ್ತಿರುವರು.

ಬಸ್ಸಿನಲ್ಲಿ ಗೋ ಮಾಂಸದ ಆಮದು ತಪ್ಪಬೇಕು

ಮೈಸೂರು ನಗರದಲ್ಲಿ ಗೋವಧೆಯ ನ್ನು ನಿಷೇಧಿಸಿದ್ದರೂ ಹೊರಗಿನಿಂದ ಗೋಮಾಂಸವನ್ನು ನಗರಕ್ಕೆ ಆಮದು ಮಾಡಲು ಅವಕಾಶ ಕೊಟ್ಟಿರುವುದರಿಂದ ಅನೇಕ ತೊಂದರೆಗಳು ಸಂಭವಿಸುತ್ತಿರುವುವು ಮಾಂಸವನ್ನು ಬಸ್ಸುಗಳಲ್ಲಿ ತರಲಾಗುತ್ತಿರುವುದರಿಂದ ಪ್ರಯಾಣಿಕರಿಗೆ ತುಂಬಾ ಅಸಹ್ಯವಾಗುತ್ತಿದೆ ಈ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಪ್ರಯಾಣಿಕರ ತೊಂದರೆಯನ್ನು ನಿವಾರಿಸಬೇಕೆಂದು ನಗರದ ಆಹಾರ ಸಮಿತಿ ಸದಸ್ಯರಾದ ಶ್ರೀ ಎಂ ೬ ಪರಸಿಂಹಯ್ಯನವರು ಬರೆದಿರುತ್ತಾರೆ

ಪಶ್ಚಿಮ ಬಂಗಾಳಾದಲ್ಲಿ ಪ್ರತಿ ಕಾಂಗ್ರೆಸ್ ಸ್ಥಾಪನೆ

ಉತ್ತರ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದ ಪ್ರತಿ ಕಾಂಗ್ರೆಸ್ ಸಂಸ್ಥೆಯ ಮಾದರಿಯಲ್ಲಿ ಪಶ್ಚಿಮ ಬಂಗಾಳದಲ್ಲೂ ಒಂದು ಕಾಂಗ್ರೆಸ್ಸನ್ನು ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿರುವುವೆಂದು ಗೊತ್ತಾಗಿದೆ ಬಂಗಾಳದ ಕಾಂಗ್ರೆಸ್ಸಿಗೆ ರಾಜೀನಾಮೆ ಸಲ್ಲಿಸಿದ ಅನೇಕ ಮಂದಿಯನ್ನೂ ಮತ್ತು ಡಾ॥ ಶ್ಯಾಮಪ್ರಸಾದ ಮುಖರ್ಜಿಯವರನ್ನೂ ಆದರಿ ಸಂಸ್ಥೆಗೆ ಸೇರಿಸಿಕೊಳ್ಳುವ ಪ್ರಯತ್ನಗಳು ನಾಗುತ್ತಿವೆ. ಉತ್ತರ ಪ್ರದೇಶದ ಪ್ರತಿ ಸರ್ಕಾರ ಸ್ಥಾಪಕರಾದ ಕ್ರಾಂತಿಕಾರಿ ನಾಯಕರಾದ ಶ್ರೀ ತ್ರಿಲೋಕ ಸಿಂಗ್ ಎಂಬುವರು ಈ ಸಂಬಂಧವಾಗಿ ಕಲ್ಕತ್ತೆಗೆ ತೆರಳಿರುವರೆಂದು ಗೊತ್ತಾಗಿದೆ

ಘೂರ್ಕ ಸೈನಿಕರ ಅಜ್ಞಾತ ಪ್ರವಾಸ

ಸುಮಾರು ೫೦೦ ಮಂದಿ ಘೂರ್ಕ ಸೈನಿಕರು ಎಸ್. ಎಸ್. ಟಿರಾ ಹಡಗಿನಲ್ಲಿ ಕಲ್ಕತ್ತಾದಿಂದ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದರ ಅವರು ಹೋಗುವ ಪ್ರದೇಶವಾವುದೆಂಬುದು ತಿಳಿದು ಬಂದಿಲ್ಲ

ಕಲಾ ಕ್ಷೇತ್ರ

ರಾಜಧಾನಿಯ ಕಲ ವಿದ್ಯಾರ್ಥಿಗಳು ಕಲಾ ಕ್ಷೇತ್ರ ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ನೆನ್ನೆ ದಿನ ದಿವಾನರ ರಸ್ತೆಯ ವೆಸ್ಟ್ಎಂಡ್ ಲಾಡ್ಜಿನಲ್ಲಿ ಸಭೆ ಸೇರಿದ್ದರು ಶ್ರೀ ಜ ನಾಗೇಂದ್ರಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು ಕಲಾ ಕ್ಷೇತ್ರ ಸಂಸ್ಥೆಯ ಕಾರ್ಯಕಾರಿ ವರ್ಗದ ಚುನಾವಣೆಯು ನಡೆದು ಶ್ರೀ ಎಂ ಆ ಗುರುರವರು ಅಧ್ಯಕ್ಷರಾಗಿಯೂ, ಶ್ರೀ ಸಿ ಆರ್. ತಿಪ್ಪೇಸ್ವಾಮಿಯವರು ಕಾರ್ಯದರ್ಶಿಯಾಗಿಯೂ ಮತ್ತು ನಾಲ್ಕು ಮಂದಿ ಸದಸ್ಯರೂ ಆರಿಸಲ್ಪಟ್ಟರು

ಚಿಕ್ಕೂರು ವೈದ್ಯಕೀಯ ಕಾಲೆಗೆ ಕೇಂದ್ರದ ಸಹಾಯ

ಸಂಸ್ಥಾನ ಸರ್ಕಾರದ ಆಡಳಿತದಲ್ಲಿರುವ ಚಿಕ್ಕೂರು ವೈದ್ಯಕೀಯ ಕಾಲೆಗೆ ಕೇಂದ್ರ ಸರ್ಕಾರದವರು ಆಡಳಿತದ ವೆಚ್ಚದ ಕೊರತೆಯನ್ನು ತುಂಬಿಕೊಡುವುದಕ್ಕಾಗಿ ೩,೦ ಸಾವಿರ ರೂ.ಗಳ ಸಹಾಯವನ್ನು ಮಾಡುವರೆಂದು ಗೊತ್ತಾಗಿದೆ

ಸ್ಟಾಲಿನ್ನರಿಗೆ ಬ್ರಿಟಿಷ್ ಮಂತ್ರಿಯ ಬಿನ್ನಹ

ಭದ್ರತಾ ಸಮಿತಿಗೆ ವಾಪಸು ರಷ್ಯವು ಬರಬೇಕೆಂದೂ ಮತ್ತು ಉತ್ತರ ಕೊರಿಯನ್ನರು ಯುದ್ಧ ನಿಲ್ಲಿಸುವಂತೆ ಪ್ರೇರೇಪಿಸಬೇಕೆಂದೂ ಮಾರ್ಷಲ್ ಸ್ಟಾಲಿನ್ನರಿಗೆ ಬ್ರಿಟನ್ನಿನ ಆರೋಗ್ಯ ಮಂತ್ರಿ ಅನ್ಯೂರಿನ್ ಬೆವಾನರು ಮನವಿ ಮಾಡಿಕೊಂಡಿದ್ದಾರೆ.

ಕೊರಿಯಾಕ್ಕೆ ಬ್ರಿಟಿಷ್ ಸೈನ್ಯ

ಈ ದಿನ ಬ್ರಿಟಿಷ್ ಸರ್ಕಾರದವರು ಪೂರ್ವ ದೇಶದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ತಮ್ಮ ಸೈನಿಕರನ್ನು ಕಳುಹಿಸಲು ನಿರ್ಧಾರ ಮಾಡಲಿರುವುದಾಗಿ ಗೊತ್ತಾಗಿದೆ.

ಅಮೆರಿಕದ ಜಯಕ್ಕೆ ಜಪಾನರ ಪ್ರಾರ್ಥನೆ

ಜಪಾನ್ ಸ್ತ್ರೀಯರು ಮತ್ತು ಮಕ್ಕಳು ದೇವಾಲಯಗಳಲ್ಲಿ ಹಾಲುಮುದ್ದೆಯನ್ನು ಅರ್ಪಿಸುತ್ತ ಕೊರಿಯಾ ಯುದ್ಧದಲ್ಲಿ ಅಮೆರಿಕದವರಿಗೆ ಜಯವಾಗಲೆಂದು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿರುವುದಾಗಿ ವರದಿಯಾಗಿದೆ

ಬಿಕ್ಕಟ್ಟಿನ ಪರಿಹಾರಕ್ಕಾಗಿ ರಾಮಾಯಣ ಪಾರಾಯಣ

ಮಧ್ಯ ಭಾರತದ ರಾಜಧಾನಿಯನ್ನು ಚುನಾಯಿಸುವ ಬಗ್ಗೆ ಉಂಟಾಗಿರುವ ಬಿಕ್ಕಟ್ಟಿನ ಸ್ಥಿತಿಯನ್ನು ನಿವಾರಿಸುವ ಸಲುವಾಗಿ ಇಂದೂರಿನ ಬಳಿ ಸರ್ದಾರ್‌ಪುರದ ಜನರು ಅಲ್ಲಿನ ಶಿವಾಲಯದಲ್ಲಿ ಅಖಂಡ ರಾಮಾಯಣ ಪಾರಾಯಣವನ್ನು ಕೈಗೊಂಡಿರುವರೆಂದು ವರದಿಯಾಗಿದೆ

ಖಗೋಳದಲ್ಲಿ ಮತ್ತೊಂದು ನಕ್ಷತ್ರ

೧೯ನೇ ವರ್ಗಕ್ಕೆ ಸೇರಿದ ಹೊಸ ನಕ್ಷತ್ರವೊಂದನ್ನು ಕೇಂಬ್ರಿಜ್ಜಿನ ವಿಶ್ವ ವೀಕ್ಷಣಾಲಯದ ಡಾ॥ ಕೆ. ರೀಮನ್‌ರವರು ಕಂಡುಹಿಡಿದಿರುವರು

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀರಾಮಾನುಜಾಚಾರ್ಯರ ರಸ್ತೆ,

ಬೆಂಗಳೂರು.

ಕಾಂಗ್ರೆಸ್ ಅಧಿವೇಶನದ ದಿನಗಳ ಬದಲಾವಣೆಯಿಲ್ಲ

ಕಾಂಗ್ರೆಸ್ ಅಧಿವೇಶನದ ದಿನಗಳಲ್ಲಿ ಬದಲಾವಣೆಯಿಲ್ಲವೆಂದು ಪ್ರಧಾನ ಕಾರ್ಯದರ್ಶಿ ಕಲಾ ವೆಂಕಟರಾಯರು ತಿಳಿಸಿರುತ್ತಾರೆ ಈ ಸಾರಿ ಅಧ್ಯಕ್ಷ ಚುನಾವಣೆಗೆ ಬಾಬು ಪುರುಷೋತ್ತಮದಾಸ್ ಟಾಂಡನ್, ಗೋವಿಂದ ವಲ್ಲಭ ಪಂತ್, ಆಚಾರ್ಯ ಕೃಪಾಲಿನಿ, ಶಂಕರ್‌ರಾವ್ ದೇವ್ ಮತ್ತು ಎನ್ ಜಿ ರಂಗಾರವರು ಸ್ಪರ್ಧಿಸುವರು

ರಷ್ಯದಿಂದ ಸಹಾಯ ಬರುತ್ತಿರುವುದಾಗಿ ಹೇಳಿಕೆ

ಕಮ್ಯೂನಿಸ್ಟರ ಹತೋಟಿಯಲ್ಲಿರುವ ಸಿಯೋಲ್ ರೇಡಿಯೊವು ಉತ್ತರ ಕೊರಿಯನ್ನರಿಗೆ ರಷ್ಯದ ಸಹಾಯವು ಬರುತ್ತಿರುವುದಾಗಿ ತಿಳಿಸಿದೆ

ಪ್ರಪಂಚ ವಿದ್ಯಾರ್ಥಿ ಸಮ್ಮೇಳನ

ಪ್ರಪಂಚದ ವಿದ್ಯಾರ್ಥಿ ಸಮ್ಮೇಳನವು ಮದ್ರಾಸಿನ ಬದಲು ದೊಂಬಾಯಿಯಲ್ಲಿ ಬರುವ ತಿಂಗಳು ೧೧ರಲ್ಲಿ ಸೇರಿ ೭ ದಿನಗಳ ಕಾಲ ನಡೆಯುವುದು ೧೨೦ ಜನ ಪ್ರತಿನಿಧಿಗಳು ಪ್ರಪಂಚದ ಎಲ್ಲ ಕಡೆಗಳಿಂದಲೂ ಆಗಮಿಸುವರು

ತಾಮ್ರದ ನಾಣ್ಯ ನುಂಗಿ ಮಗುವಿನ ಸಾವು

ಅರಸೀಕೆರೆಯ ಅರಸರ್‌ಪೇಟೆ ಶಾಲೆಯ ಹರಿಜನ ಮಗುವೊಂದು ಆಟದ ಕಾಲದಲ್ಲಿ ತಾಮ್ರದ ನಾಣ್ಯವನ್ನು ನುಂಗಿ ಸಾವನ್ನಪ್ಪಿತೆಂದು ಹೇಳಲಾಗಿದೆ. ನಾಣ್ಯವನ್ನು ತೆಗೆಯಲಾದರೂ ಬದುಕುವು ಬದುಕಲಿಲ್ಲ

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, ಉಬ್ಬಸ, ಪಡಿಶಾನುಕೂಲಿ ಮತ್ತು ಗಲಗ್ರಂಥಿಗೆ (TONSIL) ಖಾತರಿಯಾದ ಔಷಧ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ವ ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-0-0

ಆರ್. ಎಸ್. ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು.

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

ಅನುಭವವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6 ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ರಮಣಿ ಟ್ರೇಡಿಂಗ್ ಕಂಪೆನಿ,

ನಂಬರ್/೩, ಕೃಷ್ಣಮೂರ್ತಿಪುರಂ,

ಮೈಸೂರು

ಶ್ರೀ

ಗಣೇಶಾ ಟಾಕೀಸ್

on 24th & 25th July 1950

for 2 days only

THE EXILE

(ದಿ ಎಕ್ಸೈಲ್)

(In Sepiatone

With -Douglas Fairbanks (Jr) & Maria Montez

on 26 7 50

Scudda Hoo - - Scudda Hay

(In Technicolor)

MYSORE CITY MUNICIPALITY

NOTICE

Sealed quotation will be received up to 4 p m. on 31-7-50 by the Municipal Engineer for construction of Model houses as per Type A. B. D. at places to be selected and intimated at a later date by the Municipal Engineer, as also sealed tenders accompanied with chellan for having remitted Rs 200 as earnest money in the Municipal Treasury, for the work of constructing a compound wall alround the dry cattle shed in the Municipal Sewage Farm

For details of plan and estimate please see the detailed notification on the office notice board

[Sd] V. K. Mahadevan.
Municipal Engineer.

Edited, printed and published by A. R. Nagarajan, at Sadhvi Press D Subbiah Road, Mysore.

ಪುಸ್ತಕ 792 "ವಂದೇ ಮಾತರಂ" ಬಿಡಿ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೯] ಮಂಗಳವಾರ ೨೫-೭-೫೦ [ಸಂಚಿಕೆ ೫

ಅಮೆರಿಕಾ ಸರ್ಕಾರಕ್ಕೆ ನೆಹರೂ ರಹಸ್ಯ ಪತ್ರ

ಚಾಮರಾಜನಗರದ ಚುನಾವಣೆ ಬಗ್ಗೆ ತಡೆ 'ಆಜ್ಞೆ'

ಮೈಸೂರು ೨೫

ಚಾಮರಾಜನಗರದ ಬಿ ಕಿವಿಲ್ ಚುನಾವಣೆಯು ಅಕ್ರಮವೆಂದು ಹೇಳಿ ಅದನ್ನು ರದ್ದು ಪಡಿಸಿ ಮೈಸೂರು ಜಿಲ್ಲಾ ನ್ಯಾಯಾಧೀಶರ ಕೋರ್ಟ್ ಕೇಸ್ ನ ಮೇಲೆ ಅಲ್ಲಿನ ಪೌರಸಭಾಧ್ಯಕ್ಷ ಶ್ರೀ ಬಿ. ನಾರಾಯಣರವರು ಹೈಕೋರ್ಟ್ ನಲ್ಲಿ ಅಪ್ಪೀಲು ಮಾಡಲಾಗಿ ಈ ವಿಷಯವು ಇತ್ಯರ್ಥ ವಾಗುವವರೆಗೆ ಜಿಲ್ಲಾ ನ್ಯಾಯಾಧೀಶರ ತೀರ್ಪನ್ನು ಜಾರಿಗೊಳಿಸಬಾರದೆಂದು ನ್ಯಾಯಮೂರ್ತಿ ಶ್ರೀ ಟಿ ಎಲ್ ಮಲ್ಲಪ್ಪನವರು ಇನ್ನೆ ತಡೆ ಆಜ್ಞೆ ಕೊಟ್ಟಿರುವರು

ಪುರಾಣ ಮತ್ತು ಹರಿಕಥೆ

ರಾಜಧಾನಿಯ ಪಂಚಿ ಪೊಡಲ್ಲ ಕಾಳಪ್ಪನ ಗುಡಿ ಬೀದಿ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ಸಂಜೆ ೫ ಗಂಟೆಗೆ ಶ್ರೀ ಮಾಯಾಗೌಡರು ಮತ್ತು ಹಿರಿಯ ವ್ಯಾಖ್ಯಾನಕಾರರುಗಳಿಂದ "ವಿದುರ ನೀತಿ" ಪುರಾಣವೂ ಸಾಯಂಕಾಲ ೭ ಘಂಟೆಗೆ ಶ್ರೀ ಹಿರೇಮಠದ ಹೆಚ್ ಎಲ್ ಶಿವಲಿಂಗಸ್ವಾಮಿಗಳಿಂದ "ದತ್ತಾತ್ರೇಯ" ಎಂಬ ಹರಿಕಥೆಯೂ ಮತ್ತು ಅನಂತರ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಅಲಂಕಾರವೂ ನಡೆಯಲು ಏರ್ಪಾಡಾಗಿದೆ

ಈ ರಾತ್ರಿ ೯ ಗಂಟೆಗೆ ಪ್ರಥಮೈಕಾದಶಿ ಪ್ರಯುಕ್ತ "ಅರ್ಜುನ ತೀರ್ಥ ಯಾತ್ರೆ–ಚಿತ್ರಾಂಗದಾ ಕಲ್ಯಾಣ" ಎಂಬ ಹರಿಕಥೆಯು ನರಸಿಂಹರಾಜ ಮೊಹಲ್ಲೆಯ ಶ್ರೀನಿವಾಸ ದೇವಾಲಯದಲ್ಲಿ ವೇ॥ ಬ್ರಂ॥ ಆರ್ ನಾರಾಯಣದಾಸರಿಂದ ನಡೆಯುವುದು

ಅಶೋಕಾ ರಸ್ತೆಯಲ್ಲಿರುವ ಗೀತಾ ಪ್ರಚಾರಿಣಿ ಸಭೆಯಲ್ಲೂ ಸಹ ಈ ರಾತ್ರಿ ೧೦ ಗಂಟೆಗೆ ವೇ॥ ವಿ॥ ಶಂಕರಭಟ್ ವ.ಎಲ್ ಗಳಿಂದ "ಭದ್ರಾಚಲ ರಾಮದಾಸ" ಎಂಬ ಹರಿಕಥೆಯು ನಡೆಯುವುದು

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ಈ ರಾತ್ರಿ ೮-೩೦ಕ್ಕೆ ಬ್ರಂ॥ ಶ್ರೀ ಗಣಪತಿ ರಾಮಶಾಸ್ತ್ರಿ ಶಾಸ್ತ್ರಿಗಳಿಂದ "ಭಕ್ತ ಚಂದ್ರಹಾಸ" ನಾಳೆ ರಾತ್ರಿ ೯ ಗಂಟೆಗೆ ಬ್ರಂ ಶ್ರೀ ಸೀತಾ ಮಾಧವ ದಾಸರಿಂದ "ಇಂದ್ರಕೀಲ" ಎಂಬ ಹರಿಕಥೆಗಳು ನಡೆಯುವುವು

ಪ್ರಬಲ ದಾಳಿಗೆ ಉ. ಕೊರಿಯನ್ನರ ಸಿದ್ಧತೆ

ದಕ್ಷಿಣ ಕೊರಿಯಾದಲ್ಲಿ ಅಮೆರಿಕದ ಸ್ಥಾನಗಳ ಮೇಲೆ ಪ್ರಬಲ ದಾಳಿಯನ್ನು ಆರಂಭಿಸಲು ಉತ್ತರ ಕೊರಿಯನ್ನರು ಸೈನ್ಯ ಸಂಗ್ರಹ ಮಾಡುತ್ತಿದ್ದಾರೆ ದಕ್ಷಿಣ ತೀರಕ್ಕೆ ೩೫ ಮೈಲಿ ಇರುವ ಕ್ವಾಂಗ್ಜು ನಗರವನ್ನು ಅವರು ಹಿಡಿದಿದ್ದಾರೆ ಇದರಿಂದ ಅಮೆರಿಕದ ಸೈನ್ಯಗಳಿಗೆ ಸರಬರಾಜು ಬರುತ್ತಿದ್ದ ರೇವುಗಳೆಲ್ಲವೂ ಅಪಾಯಕ್ಕೆ ಒಳಗಾಗಿವೆ

ತ್ವರಿತ ಶಸ್ತ್ರಧಾರಣೆಗೆ ರಾಷ್ಟ್ರಗಳ ವಿಚಾರ

ಉತ್ತರ ಅಟ್ಲಾಂಟಿಕ್ ಕೌರಿಗೆ ಸೇರಿ ಮಾಡಿರುವ ರಾಷ್ಟ್ರಗಳು ತ್ವರಿತವಾಗಿ ಶಸ್ತ್ರಧಾರಣೆ ಮಾಡುವ ವಿಷಯವನ್ನು ಈ ದಿನ ಲಂಡನ್ನಿನಲ್ಲಿ ನಡೆಯುವ ಪಶ್ಚ ರಾಷ್ಟ್ರಗಳ ಸಮ್ಮೇಳನದಲ್ಲಿ ಚರ್ಚಿಸಲಾಗುವುದು ಕೊರಿಯದ ಪರಿಸ್ಥಿತಿಯು ಶಾಂತಿ ಭಂಗಕ್ಕೆ ಎಡೆಕೊಟ್ಟರೆ ಈ ವಿಚಾರಕ್ಕೆ ಅವಕಾಶವುಂಟಾಗುವುದು

ಶಾಲಾ ಬಾಲಕಿಯರ ಪ್ರದರ್ಶನ

ಸ್ವಂ ಸು ಪ್ರೋ॥] ಬೆಂ ಗಳೂರು ೨೫

ಇಲ್ಲಿನ ಒಂದು ಶಾಲೆಯಲ್ಲಿ ನಡೆದ ಅಶ್ಲೀಲ ವರ್ತನೆಯ ಪ್ರಸಂಗವನ್ನು ಪ್ರತಿಭಟಿಸುವ ಸಲುವಾಗಿ ನಗರದ ನಾನಾ ವಿದ್ಯಾಶಾಲೆಗಳ ಉಪಾಧ್ಯಾಯಿನಿಯರೂ, ವಿದ್ಯಾರ್ಥಿನಿಯರೂ ಸೇರಿ ಒಟ್ಟು ೯೦೦ ಜನರು ಪ್ರತಿಭಟನೆ ಜನರು ಮುಖ್ಯ ಬೀದಿಗಳಲ್ಲಿ ಈ ದಿನ ಮೆರವಣಿಗೆ ಮಾಡಿ ಪ್ರದರ್ಶನ ನಡೆಸಿದರು

ಒಂದು ಟನ್ನ್ ಹೆಚ್ಚು ಪಡಿತರ

ಬರುವ ತಿಂಗಳಿಂದ ಪಡಿತರ ಧಾನ್ಯದ ಬೆಲೆಯನ್ನು ಹೆಚ್ಚಿಸುವುದರ ಜೊತೆಗೆ ಈಗ ಕೊಡುತ್ತಿರುವ ರೇಷನ್ ಧಾನ್ಯಕ್ಕಿಂತ ಒಂದು ಟನ್ನಿನಷ್ಟು ಅಕ್ಕಿಯಲ್ಲದ ಇತರ ಧಾನ್ಯವನ್ನು ಹೆಚ್ಚಾಗಿ ಕೊಡಲು ಸರಕಾರದವರು ಆಲೋಚಿಸುತ್ತಿರುವುದಾಗಿ ತಿಳಿದುಬಂದಿದೆ

○ ವಿದ್ಯುಚ್ಛಕ್ತಿಯ ಹೊಸ ಯೋಜನೆಗಳಿಗಾಗಿ ಭಾರತ ಸರ್ಕಾರದಿಂದ ೨ ಕೋಟಿ ರೂ ಸಾಲ ಕೇಳುವ ವಿಷಯವನ್ನು ಪ್ರಸ್ತಾಪಿಸಲು ಶ್ರೀ ಕೆ ಟಿ ಭಾಷ್ಯಂರವರು ಆಗಸ್ಟ್ ಮೊದಲನೇ ವಾರದಲ್ಲಿ ದೆಹಲಿಗೆ ತೆರಳಲಿರುವರು

○ ಭಾರತ ಸೇವಾ ದಳದವರು ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ೫ ಸಾವಿರ ಸ್ವಯಂ ಸೇವಕ ರ‍್ಯಾಲಿಯನ್ನು ಸೇರಿಸಲು ನಿರ್ಧರಿಸಿರುವರು

ಶಾಂತಿ ಮನವಿಗೆ ೨೫ ಕೋಟಿ ಪ್ರಜೆಗಳ ರುಜು

ಪ್ರಪಂಚದ ಶಾಂತಿಯನ್ನು ಕಾಪಾಡಬೇಕೆಂದು ಪ್ರಾರ್ಥಿಸುವ ಸ್ಟಾಕ್ ಹೋಂ ನಗರದ ಶಾಂತಿ ಮನವಿಗೆ ಈಗಾಗಲೇ ಪ್ರಪಂಚದ ೨೫ ಕೋಟಿ ಜನರು ರುಜು ಹಾಕಿರುವುದಾಗಿ ಹೇಳಲಾಗಿದೆ

ದಕ್ಷಿಣ ಕೊರಿಯಾ ಮಹಿಳೆಯರು ಯುದ್ಧಕ್ಕೆ ಸಿದ್ಧ

ದಕ್ಷಿಣ ಕೊರಿಯದ ಮಹಿಳೆಯರು ರಣಕ್ಷೇತ್ರಕ್ಕೆ ಹೋಗಿ ಹೋರಾಡಲು ಸಿದ್ಧರಿರುವುದಾಗಿ ಅಲ್ಲಿನ ಮಹಿಳಾ ಸಂಸ್ಥೆಯೊಂದರ ಅಧ್ಯಕ್ಷಿಣಿ ಶ್ರೀಮತಿ ಕಿಂಸ ಇರವರು ತಿಳಿಸಿರುವರೆಂದು ವರದಿಯಾಗಿದೆ ಪ್ರಕೃತದಲ್ಲಿ ಮಹಿಳೆಯರನ್ನು ರಣಾಂಗಣಕ್ಕೆ ಕಳುಹಿಸುವ ಪರಿಸ್ಥಿತಿಯೇನೂ ಬಂದಿಲ್ಲವೆಂದು ...

ಅಂತರ ಪಾರ್ಲಿಮೆಂಟರಿ ಯೂನಿಯನ್

ಬೆಂಗಳೂರು ೨೫

ಐರ್ಲೆಂಡಿನ ರಾಜಧಾನಿ ಡಬ್ಲಿನ್ ನಗರದಲ್ಲಿ ಅಂತರ ಪಾರ್ಲಿಮೆಂಟರಿ ಯೂನಿಯನ್ನಿನ ೩೯ನೇ ಸಮ್ಮೇಳನವು ಬರುವ ಸೆಪ್ಟೆಂಬರ್ ೭ರಲ್ಲಿ ಸೇರುವುದು ಇದಕ್ಕಾಗಿ ಹೋಗುವ ಭಾರತದ ಪ್ರತಿನಿಧಿಗಳ ಪೈಕಿ ಶ್ರೀ ಕೆ ಹನುಮಂತಯ್ಯನವರನ್ನೂ ಆರಿಸಲಾಗಿದೆ

ಅತ್ಯಲ್ಪ ವೆಚ್ಚದಿಂದ ವರ್ಣ ರಂಜಿತ ಫಿಲಂ ತಯಾರಿಕೆ

ಬಿಳಿ ಮತ್ತು ಕರಿಯ ಬಣ್ಣಗಳಿಂದ ತಯಾರಾಗುವ ಫಿಲಂಗಳನ್ನು ಅತ್ಯಲ್ಪ ಖರ್ಚಿನಿಂದ ಸರ್ವ ವರ್ಣರಂಜಿತ ಫಿಲಂಗಳನ್ನಾಗಿ ಪರಿವರ್ತಿಸುವ ವಿಧಾನವೊಂದನ್ನು ಮದ್ರಾಸಿನ ಡಾ॥ ಬಿ. ಭಗವಾನರವರು ಕಂಡುಹಿಡಿದಿರುವರು ಅವರು ಕನ್ನಡ ಚಿತ್ರ ಮಂದಿರವೊಂದರಲ್ಲಿ ಈ ವಿಧಾನವನ್ನು ಪ್ರದರ್ಶನ ಮಾಡಿ ತೋರಿಸಿದರು

ಸೂಚನೆ

ಪ್ರಥಮೈಕಾದಶಿ ಹಬ್ಬದ ಪ್ರಯುಕ್ತ ನಾಳೆ ದಿನ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ.

ದೆಹಲಿಯ ಟಾಂಗಾ ಗಾಡಿಯವರ ಮುಷ್ಕರ

ಕುದುರೆಗಳಿಗೆ ಹುರುಳಿ ಸರಬರಾಜು ನಿಲ್ಲಿಸಿರುವುದನ್ನು ಪ್ರತಿಭಟಿಸಲು ದೆಹಲಿಯ ೧೦ ಸಾವಿರ ಟಾಂಗಾ ಗಾಡಿಯವರು ಸಾಂಕೇತಿಕ ಮುಷ್ಕರವನ್ನು ನೆನ್ನೆ ದಿನ ನಡೆಸಿದರು

ಅಮೆರಿಕದ ಪ್ರಾದೇಶಿಕ ಸೈನ್ಯ ಯುದ್ಧರಂಗಕ್ಕೆ

ಅಮೆರಿಕದ ಪ್ರಾದೇಶಿಕ ಸೈನ್ಯಕ್ಕೆ ಸೇರಿದ ಜನರು ಬರುವ ತಿಂಗಳಲ್ಲಿ ಯುದ್ಧರಂಗಕ್ಕೆ ಹೋಗಲು ಸಿದ್ಧರಾಗಬೇಕೆಂದು ಸೂಚನೆ ಕೊಡಲಾಗಿದೆ

ಕನ್ನಂಬಾಡಿಯಲ್ಲಿ ೧೦೮-೦೭ ಅಡಿ ನೀರು

ಈ ದಿನ ಮಧ್ಯಾಹ್ನ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೧೦೮-೦೭ ಅಡಿ ಯಿದ್ದಿತು

ವಿಜಯನ್ನರಿಗೆ ನೆಹರೂರವರ ಮತ್ತೊಂದು ಸೂಚನೆ

ವಿಶ್ವ ಸಂಸ್ಥೆಯಲ್ಲಿ ಕಮ್ಯೂನಿಸ್ಟ್ ಚೀನಕ್ಕೆ ಸ್ಥಾನ ಕೊಡಬೇಕೆಂದು ಸಲಹೆ ಮಾಡುತ್ತ ಭಾರತದ ಪ್ರಧಾನಿ ನೆಹರೂರವರು ಅಮೆರಿಕದ ವಿದೇಶಾಂಗ ಮಂತ್ರಿ ಶ್ರೀ ಏಚಿಸನ್ನರಿಗೆ ಮತ್ತೊಂದು ರಹಸ್ಯ ಸೂಚನೆಯನ್ನು ಕಳುಹಿಸಿರುವುದಾಗಿ ಹೇಳಲಾಗಿದೆ ಅಮೆರಿಕವು ತನ್ನ ಈಗಿನ ನೀತಿಯನ್ನು ಬಿಟ್ಟು ಚೀನ, ರಷ್ಯವು ಕೊರಿಯದ ಯುದ್ಧವನ್ನು ನಿಲ್ಲಿಸುವಂತೆ ಪ್ರೇರೇಪಿಸಿದ್ದರೆ ಪ್ರಪಂಚದ ಅಭಿಪ್ರಾಯವು ರಷ್ಯದ ವಿರುದ್ಧವಾಗುವುದೆಂದೂ ಉ ಕೊರಿಯನರು ಯುದ್ಧ ನಿಲ್ಲಿಸಿ, ೩೮ನೇ ರೇಖೆಯಿಂದ ವಾಪಸು ಹೋಗಬೇಕಾದುದು ಅಗತ್ಯವೆಂದೂ ನೆಹರೂರವರು ತಿಳಿಸಿರುವುದಾಗಿ ಗೊತ್ತಾಗಿದೆ

ಬೊಲಿವಿಯಾದಲ್ಲಿ ದಂಗೆ

ಕಳೆದ ಶನಿವಾರ ಬೊಲಿವಿಯದ ಒಬ್ಬ ಸ್ವೇಚ್ಛಾಧಿಕಾರಿಯ ಮುಖಂಡತ್ವದಲ್ಲಿ ಪ್ರಾರಂಭವಾಗಿದ್ದ ಬಲ ಪಕ್ಷದವರ ದಂಗೆಯನ್ನು ಅಲ್ಲಿನ ಸರ್ಕಾರದವರು ಅಡಗಿಸಿದ್ದಾರೆ. ಅನೇಕರನ್ನು ರಾಜಧಾನಿ ಲಾಪಾಜ್ ಮತ್ತು ಇತರ ನಗರಗಳಲ್ಲಿ ಹಿಡಿಯಲಾಗಿದೆ. ಅಧ್ಯಕ್ಷರು ಈಗಿನ ಮಂತ್ರಿಮಂಡಲದಲ್ಲಿ ವಿಶ್ವಾಸ ಸೂಚಿಸಿರುವುದಲ್ಲದೆ ಅವರ ರಾಜೀನಾಮೆಯನ್ನು ಅಂಗೀಕರಿಸಲು ಒಪ್ಪಿಲ್ಲ

ಗ್ವಾಲಿಯರ್ ಅರಮನೆಗೆ ನಿರಾಶ್ರಿತರು ನುಗ್ಗಿದರು

ಬೊಂಬಾಯಿಯಲ್ಲಿ ವಾಸಕ್ಕೆ ಮನೆಯಿಲ್ಲದೆ ರಸ್ತೆಗಳಲ್ಲಿ ಮಲಗುತ್ತಿದ್ದ ಹಲವು ಜನರು ಕಳೆದ ಶನಿವಾರ ಅಲ್ಲಿರುವ ಗ್ವಾಲಿಯರ್ ಮಹಾರಾಜರ "ಸಮುದ್ರ ಮಹಲ್" ಎಂಬ ಅರಮನೆಗೆ ನುಗ್ಗಿದರು ಬೊಂಬಾಯಿ ಪೋಲೀಸರು ಸಮಾಧಾನ ಪಡಿಸಿ ಅವರ ಚಲನವಲನವನ್ನು ನಿಲ್ಲಿಸಿದರು ಅವರ ಪೈಕಿ ೬೩ ಜನರನ್ನು ಬಂಧಿಸಿ, ಅನೇಕರಿಗೆ ೧ ವಾರದಿಂದ ೧ ತಿಂಗಳ ಶಿಕ್ಷಾ ವಿಧಿಸಲಾಯಿತು

ಉ. ಕೊರಿಯಾ ಸೈನ್ಯದಲ್ಲಿ ಸ್ತ್ರೀಯರು ಮತ್ತು ಬಾಲಕರು

ಉತ್ತರ ಕೊರಿಯನ್ನರು ಸ್ತ್ರೀಯರನ್ನೂ ಮತ್ತು ೧೫ ವರ್ಷದ ಒಳಗಿನ ಬಾಲಕರನ್ನೂ ಕಾಳಗಕ್ಕೆ ತಳ್ಳುತ್ತಿರುವುದಾಗಿ ದಕ್ಷಿಣ ಕೊರಿಯಾ ಅಧಿಕಾರಿಯೊಬ್ಬರು ಆಪಾದಿಸಿದ್ದಾರೆ ಯುದ್ಧ ಮಾಡಲ್ಲ ಪುರುಷರ ಸಂಖ್ಯೆಯ ಅಭಾವವೇ ಇದಕ್ಕೆ ಕಾರಣ ದಕ್ಷಿಣ ಕೊರಿಯನ್ನರ ಕೈಗೆ ಸಿಕ್ಕಿರುವ ಉತ್ತರದವರ ಯೋಧರು ಈ ಯುದ್ಧವು ೨ ವಾರಗಳಲ್ಲಿ ಮುಗಿಯುವುದಾಗಿ ತಿಳಿದುಕೊಂಡಿದ್ದರೆಂದು ಅಧಿಕಾರಿಗಳು ಹೇಳಿದ್ದಾರೆ

೨೦ ವರ್ಷದ ಅರಣ್ಯ ಯೋಜನೆ

ಅಂತರ ರಾಷ್ಟ್ರೀಯ ಅರಣ್ಯ ಯೋಜನೆಯ ಪ್ರಕಾರ ಪ್ರತಿ ದೇಶದಲ್ಲೂ ಶೇಕಡ ೨೫ ರಷ್ಟು ಪ್ರದೇಶವನ್ನು ಅರಣ್ಯವಾಗಿ ಉಳಿಸಿಕೊಳ್ಳಬೇಕೆಂಬ ನೀತಿಗನುಸಾರವಾಗಿ ಮೈಸೂರು ಅರಣ್ಯಾಧಿಕಾರಿಗಳ ಸಮ್ಮೇಳನದವರು ೨೦ ವರ್ಷದ ಒಂದು ಯೋಜನೆಯನ್ನು ತಯಾರಿಸಿದ್ದಾರೆ ಇದರ ಪ್ರಕಾರ ಒಟ್ಟು ನಾಲ್ಕು ಸಾವಿರ ಚದರ ಮೈಲಿ ಪ್ರದೇಶದಲ್ಲಿ ಅರಣ್ಯಗಳನ್ನು ನಿರ್ಮಿಸಲಾಗುವುದು.

ಕಾಶ್ಮೀರದ ಮಾತುಕತೆಯಲ್ಲಿ ಅತಿ ಮುಖ್ಯ ಹಂತ

ದಿಹಲಿಯಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿರುವ ಕಾಶ್ಮೀರದ ಮಾತುಕತೆಯು ಬಗ್ಗೆ ಅತಿ ಮುಖ್ಯ ಹಂತವನ್ನು ಮುಟ್ಟಿದಾಗಿದೆಯೆಂದೂ, ಇದುವರೆಗೆ ಆ ಸಮಸ್ಯೆಯು ಪರಿಹಾರಕ್ಕಾಗಿ ಎಲ್ಲರಿಗೂ ಒಪ್ಪಿಗೆಯಾಗುವ ವಿಷಯವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ತೊಡಗಲಾಗಿತ್ತೆಂದೂ, ಕಾಶ್ಮೀರದ ಜನಮತಗಣನೆ ಯಾವ ರೀತಿಯಲ್ಲಿ ಆಗಬೇಕೆಂಬ ಅಂಶವು ನಿರ್ಧಾರವಾದರೆ ಮಾತುಕತೆಯು ಸುಗಮವಾಗಿ ಮುಕ್ತಾಯವಾಗುವುದೆಂದೂ ಹೇಳಲಾಗಿದೆ.

ಅನ್ನ ಮತ್ತು ಉದ್ಯೋಗಕ್ಕಾಗಿ ರೈತರ ಪ್ರದರ್ಶನ

ಬಿಹಾರದ ಮಾಂಘೀರ್ ಜಿಲ್ಲೆಯ ಖಗೇರಿಯಾ ಸಬ್ ಡಿವಿಜನ್ ನ್ಯಾಯಾಲಯದ ಮುಂದೆ ಅದೇ ಪ್ರದೇಶದ [illegible] ಗಳ ೩೦೦ ರೈತರು ಗುಂಪುಕಟ್ಟಿಕೊಂಡು "ಅನ್ನ ಕೊಡಿ", ಮತ್ತು "ಉದ್ಯೋಗ ಕೊಡಿ" ಎಂದು ಕೂಗುತ್ತಾ ಪ್ರದರ್ಶನವನ್ನು ನಡೆಸಿದರು. ಈ ಭಾಗದಲ್ಲಿ ಆಹಾರದ ಅಭಾವವು ಉತ್ಕಟಾವಸ್ಥೆಯಲ್ಲಿದೆ. ಪ್ರದರ್ಶನಕಾರರು ಕೆಂಪು ಬಾವುಟವನ್ನು ಹಿಡಿದಿದ್ದರು. ಅಧಿಕಾರಿಗಳು ಭರವಸೆಯಿತ್ತನಂತರ ಅವರು ಚದರಿದರು.

ಕಲ್ಕತ್ತದ ಹೆಸರು ಕಾಲಿಕತಾ ಆಗಬೇಕು

ಪಶ್ಚಿಮ ಬಂಗಾಳದ ಹಲವು ಪ್ರಾಂತ್ಯಗಳ ಸ್ಥಳಗಳ ಹೆಸರುಗಳು ಆಂಗ್ಲ ಭಾಷೆಯ ಮೂಲಕ ವ್ಯತ್ಯಾಸವಾಗಿ ಉಚ್ಚರಿಸಲಾಗುತ್ತಿರುವುದನ್ನು ಪರಿಶೀಲಿಸಲು ಅಲ್ಲಿನ ಸರ್ಕಾರದವರು ನೇಮಿಸಿದ್ದ ಸಮಿತಿಯವರು ಕಲ್ಕತ್ತವನ್ನು ಕಾಲಿಕತಾ ಎಂದು ಕರೆಯಬೇಕೆಂದು ಸೂಚಿಸಿದ್ದಾರೆ. ಹೌರಾಕ್ಕೆ ಹಾವ್ರಾ ಎಂದೂ, ಗ್ಯಾಂಜೀಸ್ ಬದಲು ಗಂಗಾ ಎಂದೂ, ಹೀಗೆ ಇತರ ಹೆಸರುಗಳ ಬದಲಾವಣೆಗೂ ಸೂಚನೆಯಾಗಿದೆ.

ಕಮ್ಯೂನಿಸ್ಟರು ಹಿಂಸೆ ಹಾದಿ ಬಿಟ್ಟಿಲ್ಲ

ಭಾರತದ ಕಮ್ಯೂನಿಸ್ಟರು ಹಿಂಸೆ ಮತ್ತು ವಿಧ್ವಂಸಕ ಕೃತ್ಯಗಳ ಹಾದಿಯನ್ನು ಬಿಟ್ಟಿರುವರೆಂದು ಹೇಳುವುದನ್ನು ಸರ್ವಥಾ ನಂಬುವುದಿಲ್ಲವೆಂದು ಬೊಂಬಾಯಿನ ಗೃಹ ಮಂತ್ರಿ ಮೊರಾರ್ಜಿ ದೇಸಾಯಿಯವರು ತಿಳಿಸಿರುವರು. ಅವರು ಹೊಸ ನೀತಿಯನ್ನು ಅವಲಂಬಿಸುವುದಾಗಿ ತಿಳಿಸುವುದು ರಾಜಕೀಯ ಜನರನ್ನು ಮೋಸಗೊಳಿಸುವ ತಂತ್ರದ ಕೆಲಸವೆಂದು ಶ್ರೀ ದೇಸಾಯಿಯವರು ಅಭಿಪ್ರಾಯ ಪಟ್ಟಿರುವರು.

SRI GAYATHRI

TALKIES

From 26-7-50 for 2 days

Daily 3 shows

Romance & Adventure

Flattery's Hurricane

With:-Richard Widmark, Linda Darnel

Next Change DON JUAN

ಆಕ್ರಮಣ ಎದುರಿಸಲು ರಷ್ಯದ ಸರ್ವ ಸಿದ್ಧತೆ

ಆಕ್ರಮಣವನ್ನು ಎದುರಿಸಲು ರಷ್ಯವು ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವುದಾಗಿ ಕಮ್ಯೂನಿಸ್ಟ್ ಸಂಘದ ಕೇಂದ್ರ ಸಮಿತಿಯ ಪ್ರತಿನಿಧಿಯೊಬ್ಬನು ಮಾಡಿದ ಭಾಷಣವನ್ನು ರಷ್ಯದ ಎಲ್ಲ ರೇಡಿಯೋಗಳೂ ಪ್ರಸಾರ ಮಾಡಿವೆ. ಅಮೆರಿಕದ ಅಧ್ಯಕ್ಷರು ಅಲ್ಲಿನ ಕಾಂಗ್ರೆಸ್ಸಿಗೆ ಕಳುಹಿಸಿದ ಸಂದೇಶಕ್ಕೆ ಪ್ರತಿಯಾಗಿ ಈ ರೀತಿ ರಷ್ಯವು ಕ್ರಮ ಕೈಗೊಂಡಿರುವುದಾಗಿ ಹೇಳಲಾಗಿದೆ.

ನ್ಯೂಯಾರ್ಕ್ ರಕ್ಷಣೆಗೆ ಏರ್ಪಾಡು

೧ ಕೋಟಿ ೪೦ ಲಕ್ಷ ಪ್ರಜಾ ಸಂಖ್ಯೆಯುಳ್ಳ ನ್ಯೂಯಾರ್ಕ್ ನಗರ ಮತ್ತು ಸಂಸ್ಥಾನದ ರಕ್ಷಣೆಗೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಟಂ ಬಾಂಬಿನ ದಾಳಿಯಾದರೆ ರಕ್ಷಣೆ ನಡೆಸಲು [illegible] ಮಂದಿ ತಜ್ಞರ ತಂಡ [illegible] ಪ್ರತಿ [illegible] ಪ್ರದೇಶಗಳ್ಲಿ [illegible] ನ ಕೇಂದ್ರಗಳನ್ನು [illegible] ಈ ಕೇಂದ್ರಗಳಲ್ಲಿ [illegible] ಜನ ಸ್ವಯಂಸೇವಕರಿದ್ದಾರೆ.

ಧನಾಭಾವದಿಂದ ವಿಶ್ವ ಸಂಸ್ಥೆ ಸಮಿತಿ ಮುಚ್ಚುವುದು

ವಿಶ್ವ ಸಂಸ್ಥೆಯ ವಿದ್ಯಾಭ್ಯಾಸ ವಿಜ್ಞಾನ ಮತ್ತು ಸಾಂಸ್ಕೃತಿಕ ಸಮಿತಿಯು ಧನಾಭಾವದಿಂದ ಮುಚ್ಚಲ್ಪಡುವದಾಗಿ ಅದರ ಡೈರೆಕ್ಟರ್ ಜನರಲ್ ಡಾ|| ಜೇಮ್ಸ್ ಟಾರೆಸ್ ಬೊಡೆಯವರು ಹೇಳಿದ್ದಾರೆ.

||ಶ್ರೀ||

ಗಣೇಶಾ ಟಾಕೀಸ್

On 26 7 50, 3 Shows only

Scudda Hoo - Scudda Hay

(In Technicolor)

Featuring.-June Haver & Walter Brennan

(Academy Prize winners)

On27-7-50 BOOM TOWN

Edited, printed and published by A. K. Nagarajan, at Sadhvi Press D Subbiah Road, Mysore

ಅಮೆರಿಕದ ಸೈನ್ಯಾಧಿಕಾರಿ ತಪ್ಪಿಸಿಕೊಂಡರು

ಉತ್ತರ ಕೊರಿಯ ರಣಕ್ಷೇತ್ರದಲ್ಲಿ ಭಾಗವಹಿಸಿದ್ದ ಅಮೆರಿಕದ ಮೇಜರ್ ಜನರಲ್ ಡೀನ್ ಎಂಬುವರು ಕೆಲವು ದಿನಗಳಿಂದ ಪತ್ತೆಯಿಲ್ಲದಿದ್ದರು. ಅವರು ಮೊನ್ನೆ ಟೈಜೋನಿನಿಂದ ತಪ್ಪಿಸಿಕೊಂಡು ಬಂದು ಸಮೀಪದ ಗುಡ್ಡ ಪ್ರದೇಶದಲ್ಲಿರುವರೆಂದೂ, ಇಷ್ಟರಲ್ಲೇ ಅವರು ಅಮೆರಿಕ ಸೈನ್ಯದೊಡನೆ ಸೇರಿಕೊಳ್ಳುವರೆಂದೂ ಹೇಳಲಾಗಿದೆ.

ಚೀನಾದಿಂದ ಸ್ಪೇನ್ ರಾಯಭಾರಿಗೆ ಉಚ್ಚಾಟನೆ

ಚೀನವನ್ನು ಕೂಡಲೇ ಬಿಟ್ಟು ಹೊರಡಬೇಕೆಂದು ಶಾಂಘೈ ನಗರದಲ್ಲಿರುವ ಸ್ಪೇನಿನ ರಾಯಭಾರಿಗೆ ಆಜ್ಞೆ ಮಾಡಲಾಗಿದೆ.

ಕೆನಡಾ ಮಾಜಿ ಪ್ರಧಾನಿಯ ನಿಧನ

ಕೆನಡಾದ ಮಾಜಿ ಪ್ರಧಾನರಾಗಿದ್ದ ಮೆಕೆನ್ಸಿ ಕಿಂಗ್ ರವರು ಮೊನ್ನೆ ರಾತ್ರಿ ಒಟ್ಟಾವಾದಲ್ಲಿ ನ್ಯುಮೋನಿಯಾ ಖಾಯಿಲೆಯಿಂದ ಮೃತಪಟ್ಟರೆಂದು ವರದಿಯಾಗಿದೆ. ಅವರಿಗೆ ೭೫ ವರ್ಷ ವಯಸ್ಸಾಗಿತ್ತು.

ವಿಮಾನ ಬಿದ್ದು ೩೬ ಜನ ಸೈನಿಕರ ಮರಣ

ಅಮೆರಿಕದ ದಕ್ಷಿಣ ಕ್ಯಾರೊಲೀನದ ಒಂದು ತೀರ ನಗರದಲ್ಲಿ ಜನವಾಹಕ ವಿಮಾನವೊಂದು ಬಿದ್ದು ೩೬ ಜನ ಸೈನಿಕರು ಮರಣ ಹೊಂದಿದರೆಂದು ಹೇಳಲಾಗಿದೆ.

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಬಿ. ಎ.

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಾಜಕಮಲ್,

ಮೈಸೂರು

21-7-50 ರಿಂದ 2ನೇ ವಾರ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸಮಾಧಿ

—: ಭೂಮಿಕೆ —

ಅಶೋಕ್ ಕುಮಾರ್, ಕ್ಯಾಕೂ, ನಳಿನಿ ಜಯವಂತ್, ಕುಲದೀಪ್, ಮುಬಾರಕ್

ಪ್ರಭಾ ✻ 28-7-50ರಿಂದ ಅಮೋಘ ಪ್ರಾರಂಭ.

ದಿನವೂ 3 ಆಟಗಳು

ಶ್ರೀ ಶಾಂತಾರಾಮರವರ ಅತ್ಯುತ್ತಮ ಹಿಂದಿ ಕಲಾಕೃತಿ

- ದಹೇಜ್ -

(ವರದಕ್ಷಿಣೆ)

ಪಾತ್ರ-ಜಯಶ್ರೀ, ಪೃಥ್ವಿರಾಜ್, ಕರಣ್ ದಿವಾನ್, ಉಲ್ಲಾಸ್

ಎಲ್ಲಾ ಬುಕ್ಕಿಂಗ್ ಟಿಕೇಟುಗಳು ಬೆಳಿಗ್ಗೆ 10ರಿಂದ 12ರವರೆಗೆ ಮುಂಗಡವಾಗಿಯೇ ಕೊಡಲಾಗುತ್ತೆ

28, 29, 30ನೇ ತಾರೀಖಿನಲ್ಲಿ ಮಹಿಳೆಯರಿಗೆ ಪ್ರತ್ಯೇಕ ಸ್ಥಾನದ ವ್ಯವಸ್ಥೆಯುಳ್ಳ

ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೂ ಮೂರು ವಾರ ಕಾಲ ರದ್ದು ಮಾಡಲಾಗಿದೆ

THE PALACE GARAGE,

Mysore.

AUCTION SALE OF MOTOR VEHICLES

The following vehicles, which are in good running condition, will be sold in PUBLIC AUCTION at the Palace Garage, Mysore, on the 5th and 6th August 1950 between 9-30 a. m. and 12 Noon each day:-

CARS.- 1 Riley. 1½ Litre Saloon 1948, 2 Riley. 1½ Litre Saloon 1948; 3 Humber Super snipe 1947, 4 Cadillac Imperial Touring saloon 1940; 5 Buick 7 seater 1938, 6 Hillman 7 seater 1938 7 Electric Car 1920, 8. Daimler Car 1913 Model.

BUSSES:- 9 Oldsmobile Bus 26 seater 1937, 10 Rolls Royce Bus. 14 seater 1914; 11. Bedford Bus. 1933; 12 Bedford Bus 1933 13 Chevrolet Bus 1937, 14 Dodge: 1929 Model.

LORRIES:- 15 Ford Lorry. V8 1944, 16. Ford Lorry V8 1944, 17 Ford Lorry 1933 Model

STATION WAGGON:- 18 Ford Station waggon 1946 Model

Terms are strictly cash The successful bidders should deposit half the cost of the vehicle sold to them and the balance before delivery, failing which, it will be resold the next day at the risk of the original bidder and the loss, if any, will be deducted out of his deposit. Delivery is subject to the confirmation of the sale by the Huzur Secretary. The Officer in charge, Palace Garage, reserves the right to accept or reject any bid and also to withhold any vehicle at any stage before it is delivered In all matters of dispute, the orders of the Huzur Secretary shall be final

Cheques will not be accepted.

L. Mahadevaiah,
Captain,
Officer-in-charge,
Palace Garage, Mysore

ಫೋನ್ ನಂ. 798 | ವಂದೇ ಮಾತರಂ || ಬಿಡಿಪ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೨೫-೭-೫೦ [ಸಂಚಿಕೆ ೬

ಬರುವ ತಿಂಗಳಲ್ಲಿ ವಿಶೇಷ ಶಾಸನ ಸಭೆ

ಸ್ಟಾಲಿನ್‌ರವರಿಗೆ ನೆಹರೂರವರಿಂದ ಮತ್ತೊಂದು ಪತ್ರ

ಕೊರಿಯಾ ಪ್ರಶ್ನೆಯನ್ನು ವಿಶ್ವಸಂಸ್ಥೆಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳುವ ಬಗ್ಗೆ ಪಂಡಿತ ನೆಹರೂರವರು ಮತ್ತೆ ಪ್ರಯತ್ನಿಸುತ್ತಿರುವರೆಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ. ಈ ಸಂಬಂಧವಾಗಿ ಬ್ರಿಟನ್ನಿನಲ್ಲಿರುವ ಭಾರತದ ಹೈಕಮಿಷನರ್ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಅಲ್ಲಿನ ವಿದೇಶಾಂಗ ಕಛೇರಿಯವರೊಡನೆಯೂ ಮತ್ತು ರಷ್ಯದ ರಾಯಭಾರಿ ಕಛೇರಿಯವರೊಡನೆಯೂ ಮಾತುಕತೆ ನಡೆಸಿದರೆಂದು ಊಹಿಸಲಾಗಿದೆ. ಅಲ್ಲದೆ ಮಾಸ್ಕೋವಿಗೆ ರವಾನಿಸುವ ಸಲುವಾಗಿ ಪಂಡಿತ ನೆಹರೂರವರು ಮತ್ತೊಂದು ಪತ್ರವನ್ನು ಶ್ರೀ ವಿ. ಕೆ. ಕೃಷ್ಣಮೆನನ್‌ರವರಿಗೆ ಕಳುಹಿಸಿರುವರೆಂದೂ ಸುದ್ದಿ ಹರಡಿದೆ.

ಗಂಡ ಹೆಂಡಿರ ಜಗಳದಲ್ಲಿ ಮಕ್ಕಳ ಬಲಿ

ಹಜಾರಿಬಾಗಿನ ಒಬ್ಬ ಮುಸ್ಲಿಂ ರೈತ ಮತ್ತು ಅವನ ಹೆಂಡತಿಗೂ ಉಂಟಾದ ಜಗಳದ ಪರಿಣಾಮವಾಗಿ ಆತನು ಕೋಪಗೊಂಡು ತನ್ನ ಮನೆಗೆ ಹೊರಗಿನಿಂದ ಬೀಗ ಹಾಕಿ ಬೆಂಕಿ ಇಟ್ಟು ಹತ್ತಿಸಿಬಿಟ್ಟನೆಂದೂ ಅನಂತರ ತನ್ನ ಎರಡು ವರ್ಷದ ಒಬ್ಬ ಮಗನನ್ನು ಬಾವಿಗೆ ಹಾಕಿ, ಇನ್ನೊಂದು ಮಗುವಿನೊಡನೆ ತಾನೂ ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನ ಪಟ್ಟನೆಂದೂ ವರದಿಯಾಗಿದೆ. ಪೋಲೀಸರು ಬಂದು ಅವರುಗಳನ್ನು ಹೊರಗೆ ತೆಗೆಯುವಾಗ ಮಕ್ಕಳು ಮೃತಪಟ್ಟಿದ್ದವು. ಆತನನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ.

ಕೊಳದ ಸ್ನಾನದಿಂದ ಮೂಕನಿಗೆ ಬಾಯಿ ಬಂದ ಪ್ರಸಂಗ

ಸಿಂಹಳ ದ್ವೀಪದ ಕತರಗಾಮ ಎಂಬಲ್ಲಿನ ಒಬ್ಬ ಮೂಕನು ಆ ಮೇಲ್ ಹಬ್ಬದ ಸಂಬಂಧವಾಗಿ ಕೆಲವು ದಿವಸಗಳ ಕೆಳಗೆ ಅಲ್ಲಿನ ಮಾಣಿಕ್ಯಗಂಗ ಎಂಬ ಕೊಳದಲ್ಲಿ ಸ್ನಾನ ಮಾಡಲಾಗಿ ಅವನಿಗೆ ಇದ್ದಕ್ಕಿದ್ದಂತೆಯೇ ನಾಲಿಗೆ ಬಂದು ಮಾತನಾಡಲು ಉಪಕ್ರಮಿಸಿದನೆಂದು ಹೇಳಲಾಗಿದೆ.

ಇಂಜನಿಯರಿಂಗ್ ಡಿಗ್ರಿ ದ್ವಿತೀಯ ತರಗತಿಗೂ ಅನುಮತಿ

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನವರು ಇಂಜನಿಯರಿಂಗ್ ಡಿಗ್ರಿಯ ಪ್ರಥಮ ಮತ್ತು ದ್ವಿತೀಯ ವರ್ಷದ ತರಗತಿಗಳನ್ನು ತೆರೆಯಲು ಸರ್ಕಾರದವರು ಅನುಮತಿಯಿತ್ತಿರುವರೆಂದು ಗೊತ್ತಾಗಿದೆ.

ರೈಲಿನ ಅಡಿಗೆ ಸಿಕ್ಕಿದ ಬಾಲಕಿ ಮೃತ್ಯುವಿನಿಂದ ಪಾರು

ಭದ್ರಾವತಿ ೨೩

ಕಳೆದ ಭಾನುವಾರ ಇಲ್ಲಿಗೆ ಬರುತ್ತಿದ್ದ ರೈಲಿಗೆ ನಿಲ್ದಾಣದ ಬಳಿ ಕಂಬಿ ಮಧ್ಯದಲ್ಲಿ ನಿಂತಿದ್ದ ಗಂಡಸರ ಬಳಿ ಒಂದು ಹುಡುಗಿಯು ಸಿಕ್ಕಿ ಇಂಜನ್ನಿನಿಂದ ಕೆಳಗೆ ತಪ್ಪಿಸಲ್ಪಟ್ಟಳು. ಸ್ವಲ್ಪ ದೂರ ರೈಲು ಹೋದ ಮೇಲೆ ಇಂಜನ್ ಡ್ರೈವರನು ಬ್ರೇಕ್ ಹಾಕಿ ನಿಲ್ಲಿಸಿ ಕಂಬಿ ಮಧ್ಯೆಯೇ ಮಲಗಿದ್ದ ಮಗುವನ್ನು ಹೊರಕ್ಕೆ ತೆಗೆದನು. ಮಗುವಿಗೆ ಸ್ವಲ್ಪ ಗಾಯವಾಗಿದ್ದಾದರೂ ಕೂಡಲೇ ಆಸ್ಪತ್ರೆಗೆ ಸೇರಿಸಲಾಗಿ ಮೃತ್ಯುವಿನಿಂದ ಪಾರಾಯಿತು.

ರಾಜಪ್ರಮುಖರ ವರ್ಧಂತಿ

ಮೈಸೂರು ೨೩

ಶ್ರೀಮನ್ ಮಹಾರಾಜರ ೩೨ನೇ ವರ್ಷ ವರ್ಧಂತಿಯು ಬರುವ ತಿಂಗಳು ನಾಲ್ಕನೇ ತಾರೀಖು ನಡೆಯುವುದು. ಈ ಸಾರಿ ವರ್ಧಂತಿಯ ಮೆರವಣಿಗೆಯು ನಡೆಯುವುದಿಲ್ಲ. ವರ್ಧಂತಿ ಸಂಬಂಧವಾಗಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟಿನ ರಿಜಿಸ್ಟ್ರಾರಾದ ಶ್ರೀ ಸಿ. ರಾಮಸ್ವಾಮಿಯವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ರೇಷ್ಮೆ ಕಾರ್ಖಾನೆದಾರರ ಬಹಿರಂಗ ಸಭೆ

ರಾಜಧಾನಿಯ ರೇಷ್ಮೆ ಕಾರ್ಖಾನೆದಾರರ ಬಹಿರಂಗ ಸಭೆಯು ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನ ದಕ್ಷಿಣ ಭಾಗದ ಆವರಣದಲ್ಲಿ ರೇಷ್ಮೆ ಕಾರ್ಖಾನೆದಾರರ ಸಂಘದ ಆಶ್ರಯದಲ್ಲಿ ನಡೆಯುವುದು.

ಚುನಾವಣಾ ಕ್ಷೇತ್ರ ನಿರ್ದೇಶನ ಸಮಿತಿಯ ಪ್ರವಾಸ

ಸಾರ್ವತ್ರಿಕ ಚುನಾವಣೆ ಸಂಬಂಧವಾಗಿ ಕ್ಷೇತ್ರಗಳ ನಿರ್ದೇಶನದ ಬಗ್ಗೆ ಮಹಾಜನರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಕೇಂದ್ರ ಪಾರ್ಲಿಮೆಂಟಿನ ಮೈಸೂರು ಸಂಸ್ಥಾನದ ಸಲಹಾ ಸಮಿತಿಯವರು ಜಿಲ್ಲೆಗಳ ಮುಖ್ಯ ನಗರಗಳಿಗೆ ಭೇಟಿ ಕೊಡುವರು. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಗೊತ್ತುಪಡಿಸುವ ತಾರೀಖಿನಲ್ಲಿ ಪ್ರಮುಖ ಜನರ ಸಭೆಯು ನಡೆಯುವುದು. ಈ ವಿಷಯದ ಬಗ್ಗೆ ಆಸಕ್ತಿಯುಳ್ಳವರು ತಮ್ಮ ಅಭಿಪ್ರಾಯಗಳನ್ನು ಜಿಲ್ಲಾಧಿಕಾರಿಗಳಿಗೆ ಬರೆದು ಕಳುಹಿಸಬೇಕೆಂದು ಸಮಿತಿಯ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಪ್ರಾರ್ಥಿಸುತ್ತಾರೆ.

ಮಹಾ ಮಂಗಳಾರತಿ

ನಜರಬಾದಿನ ಶ್ರೀ ದುರ್ಗಾದೇವಿಯವರ ದೇವಾಲಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಆಷಾಢ ಶುಕ್ರವಾರದ ಪ್ರಯುಕ್ತ ಮಹಾ ಮಂಗಳಾರತಿಯು ನಡೆಯುವುದು. ಭಕ್ತ ಮಹಾಶಯರೆಲ್ಲರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಲಾರಿ ಹರಿದು ಮರಣ

ಸ್ವಂ. ವ.] ಚಾಮರಾಜನಗರ ೨೩

ಇಲ್ಲಿಂದ ಗುಡಿಹಟ್ಟಿಗೆ ಹೊರಟ ಸಂಬಲು ಹೋಗುತ್ತಿದ್ದಾಗ ಲಾರಿಯಲ್ಲಿ ಕುಳಿತಿದ್ದ ಮಾಡಲಪುರದ ಪುಟ್ಟಮಾದಪ್ಪನೆಂಬುವನು ಮೊನ್ನೆ ಲಾರಿಯಿಂದ ಬಿದ್ದು ಹಿಂಭಾಗದ ಚಕ್ರಕ್ಕೆ ಸಿಕ್ಕಿ ಮರಣ ಹೊಂದಿದನು. ಪೋಲೀಸರು ಮಹಜರು ಕ್ರಮ ನಡೆಸಿದರು.

ಮೈಸೂರು ಕಾಂಗ್ರೆಸ್ ಪ್ರಾಂತ ಸಮಿತಿಯ ರಚನೆ

ಸ್ವಂ. ವ.] ಬೆಂಗಳೂರು ೨೩

ಮೊನ್ನೆ ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯ ಸಮಿತಿ ಸಭೆಯಲ್ಲಿ ಬರುವ ತಿಂಗಳು ೨೬ನೇ ತಾ॥ ಹೊಸ ಅಂಗರಚನೆ ಪ್ರಕಾರ ರಚಿತವಾಗುವ ಮೈಸೂರು ಪ್ರಾಂತ ಕಾಂಗ್ರೆಸ್ಸಿನ ಸಮಿತಿಯನ್ನು ಸ್ಥಾಪಿಸಿ, ಆ ದಿನವೇ ಪ್ರಾಂತಾಧ್ಯಕ್ಷರ ಮತ್ತು ಎ. ಐ. ಸಿ. ಸಿ. ಸಭೆಯ ಪ್ರತಿನಿಧಿಗಳ ಚುನಾವಣೆಗಳನ್ನು ನಡಸಬೇಕೆಂದು ಇತ್ಯರ್ಥವಾಯಿತು. ಅದಕ್ಕೆ ಕರೆಯಲ್ಲಿ ಪ್ರಾಂತ ಸಮಿತಿ ಮತ್ತು ಎಂ. ಸಿ. ಸಿ. ಸಭೆಗಳನ್ನು ನಡೆಸಬೇಕೆಂದೂ, ಪ್ರಾಂತ ಸಮಿತಿ ಸಭೆಯು ನಡೆದ ನಂತರ ಎಂ. ಪಿ. ಸಿ. ಸಿ. ವಿಸರ್ಜನೆಯಾಗುವುದೆಂದೂ ನಿರ್ಧಾರವಾಯಿತು. ಕಾಂಗ್ರೆಸ್ಸಿನಲ್ಲಿ ಜನರ ವಿಶ್ವಾಸವನ್ನು ಕಳೆದುಕೊಳ್ಳದಿರುವಂತೆ ಮಾಡಲು ಮಂತ್ರಿಮಂಡಲದಲ್ಲಿರುವ ಮಾಜಿ ಅಧ್ಯಕ್ಷರುಗಳು ಅಧಿಕಾರದಿಂದ ಹೊರಕ್ಕೆ ಬರಬೇಕೆಂದು ಶ್ರೀ ಕೆ. ಎಸ್. [illegible]ರು ಕಳುಹಿಸಿದ್ದ ನಿರ್ಣಯವು ಚರ್ಚೆಯಲ್ಲಿ ಮುಖ್ಯವಾಯಿತು. ಶ್ರೀಮತಿ ಲಕ್ಷ್ಮಮ್ಮ [illegible], ಕೆ. ಎಸ್. ಕೃಷ್ಣಯ್ಯಂಗಾರ್ ಮತ್ತು ಎ. ವೆಂಕಟಪ್ಪನವರುಗಳು ಚುನಾಯಿತರನ್ನು ರಚಿಸಲಾಯಿತು.

ವನಸ್ಪತಿ ತುಪ್ಪದ ವಿರೋಧ ಮಸೂದೆಗೆ ಬೆಂಬಲ

ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದೇ ಕಾಂಗ್ರೆಸ್ಸಿನ ನೀತಿಯಾಗಿರುವುದರಿಂದ ವನಸ್ಪತಿ ತುಪ್ಪದ ತಯಾರಿಕೆಯ ವಿರೋಧವನ್ನು ಮಾಡಲು ಪಾರ್ಲಿಮೆಂಟಿನಲ್ಲಿ ಬರುವ ಮಸೂದೆಗೆ ಬೆಂಬಲ ಕೊಡಬೇಕೆಂದು ಮೈ॥ ಕಾಂ॥ ಕಾರ್ಯಸಮಿತಿಯಲ್ಲಿ ನಿರ್ಣಯವಾಗಿರುತ್ತದೆ.

ಬಿ. ವಾಸುದೇವಮೂರ್ತಿಯವರು ಹೈಕೋರ್ಟ್ ಜಡ್ಜಿಗಳು?

ಸ್ವಂ. ವ. ಫೋ.] ಬೆಂಗಳೂರು ೨೩

ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟ ಶ್ರೀ ಆರ್. ಪುಟ್ಟರಾಜ ಅರಸಿನವರ ಸ್ಥಾನದಲ್ಲಿ ಅಡ್ವೋಕೇಟ್ ಜನರಲ್ ಶ್ರೀ ಬಿ. ವಾಸುದೇವಮೂರ್ತಿಯವರನ್ನು ನ್ಯಾಯಮೂರ್ತಿಯನ್ನಾಗಿ ನೇಮಿಸಿ ಇಷ್ಟರಲ್ಲೇ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರಿಂದ ಆಜ್ಞೆ ಹೊರಬೀಳುವ ನಿರೀಕ್ಷೆಯುಂಟು.

ಚುನಾವಣಾ ಕ್ಷೇತ್ರನಿರ್ದೇಶದ ಬಗ್ಗೆ ವಿಶೇಷ ಶಾಸನ ಸಭಾಧಿವೇಶನ

ಸ್ವಂ. ವ. ಫೋ.] ಬೆಂಗಳೂರು ೨೩

ಮಹಾ ಚುನಾವಣೆ ಸಂಬಂಧವಾಗಿ ಕ್ಷೇತ್ರಗಳ ನಿರ್ದೇಶನದ ಬಗ್ಗೆ ಶಾಸನ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲು ವಿಶೇಷ ಅಧಿವೇಶನವನ್ನು ಬರುವ ತಿಂಗಳು ೨೮, ೨೯ ಮತ್ತು ೩೦ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ಸೇರಿಸಲಾಗುವುದೆಂದು ತಿಳಿದುಬಂದಿದೆ.

○ ಪೋಲೀಸ್ ಐ. ಜಿ. ಆದ ಶ್ರೀಯುತ ಕೆ. ಸೋಮಣ್ಣನವರಿಗೆ ಇದೇ ೨೧ರಿಂದ ಮತ್ತೊಂದು ತಿಂಗಳು ಕಾಲ ರಜಾ ಕೊಡಲಾಗಿದೆ.

† ಸಂಸ್ಥಾನದ ಒಬ್ಬ ಉನ್ನತ ಪೋಲೀಸು ಅಧಿಕಾರಿಗಳ ವರ್ತನೆ ಸಂಬಂಧವಾಗಿ ಸರ್ಕಾರದವರು ತನಿಖೆ ನಡೆಸಲು ಜ॥ ಆರ್. ವೆಂಕಟರಮಣಯ್ಯನವರನ್ನು ನೇಮಿಸಿರುವರು.

ಕೊರಿಯಾ ಯುದ್ಧಕ್ಕೆ ಬ್ರಿಟನ್, ಟರ್ಕಿ ಆಸ್ಟ್ರೇಲಿಯಾ ಸೈನ್ಯಗಳು

ಬ್ರಿಟನ್ನಿನ ರಕ್ಷಣಾ ಮಂತ್ರಿ ಇಮ್ಯಾನ್ಯುಯಲ್ ಷಿನ್‌ವೆಲ್‌ರವರು ನಿನ್ನೆ ದಿನ ಕಾಮನ್ಸ್ ಸಭೆಯಲ್ಲಿ ಭಾಷಣ ಮಾಡುತ್ತಾ ಕೊರಿಯಾ ಯುದ್ಧದಲ್ಲಿ ಅಮೇರಿಕನ್ನರಿಗೆ ನೆರವು ನೀಡುವ ಸಲುವಾಗಿ ಸೈನ್ಯಗಳನ್ನು ಕಳುಹಿಸಲು ಬ್ರಿಟನ್ ನಿರ್ಧರಿಸಿರುವುದೆಂದು ತಿಳಿಸಿದನು. ಬ್ರಿಟನ್ನಿನ ದೂರ ಪ್ರಾಚ್ಯದ ನೌಕಾ ಪಡೆಗಳನ್ನೂ ಕೊರಿಯಾ ದಿಗ್ಬಂಧನ ಕಾರ್ಯಾಚರಣೆಗಾಗಿ ಬಳಸಲಾಗುತ್ತದೆಂದೂ ಅವರು ಹೇಳಿದರು. ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಟರ್ಕಿ ರಾಷ್ಟ್ರಗಳೂ ಕೊರಿಯಾದ ವಿಶ್ವಸಂಸ್ಥೆ ಸೈನ್ಯಗಳ ನೆರವಿಗೆ ತಮ್ಮ ಸೈನ್ಯಗಳನ್ನು ಕಳುಹಿಸಲು ನಿರ್ಧರಿಸಿವೆ. ಪಾಕಿಸ್ತಾನವೂ ಈ ವಿಷಯವನ್ನು ಪರ್ಯಾಲೋಚಿಸುವುದಾಗಿದೆ.

ಅಕ್ಕಿಯ ಬೆಲೆ ಹೆಚ್ಚುವುದು

೧ ಪೌನ್ಸು ಗೋಧಿ ಹೆಚ್ಚಿನ ಪಡಿತರ

ಸ್ವಂ. ವ. ಫೋ.) ಬೆಂಗಳೂರು ೨೩

ಈಗಾಗಲೇ ನಮ್ಮ ಪತ್ರಿಕೆಯಲ್ಲಿ ತಿಳಿಸಲಾಗಿರುವಂತೆ ಅಕ್ಕಿಯ ಬೆಲೆಯನ್ನು ಹೆಚ್ಚಿಸಲಾಗುವುದೆಂದೂ, ರೇಷನ್‌ದಾರರಿಗೆ ೧ ಪೌನ್ಸು ಗೋಧಿಯ ಹೆಚ್ಚು ಪಡಿತರವನ್ನು ಕೊಡಲಾಗುವುದೆಂದೂ ಮೊನ್ನೆ ಇಲ್ಲಿ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ಕಾರದ ತೀರ್ಮಾನ ತಿಳಿಸಲಾಯಿತು. ಆಹಾರ ಧಾನ್ಯಕ್ಕಾಗಿ ಈಗಾಗಲೇ ಸಂಸ್ಥಾನದ ಬೊಕ್ಕಸದಿಂದ ೨॥ ಕೋಟಿ ರೂ. ಗಳಷ್ಟು ಸಬ್ಸಿಡಿಯನ್ನು ಕೊಡಲಾಗಿದೆಯೆಂದೂ ಅದು ಮುಂದುವರಿದರೆ ಸಂಸ್ಥಾನದ ಸ್ಥಿತಿಗೆ ಧಕ್ಕೆ ಬರುವುದೆಂದೂ ತಿಳಿಸಲಾಯಿತು. ಅನಂತರದ ಮುಂದೆ ರೂ. ಗೆ ೩ ಸೇರಿನ ಅಕ್ಕಿಯನ್ನು ೨॥ ಸೇರು, ೨॥ ಸೇರಿನದನ್ನು ೨ ಸೇರು ಬರುವ ತಿಂಗಳು ೧ರಿಂದ ಇಳಿಸಲಾಗುವುದೆಂದು ಸೂಚಿಸಲಾಯಿತು.

ಬೃಂದಾವನದಲ್ಲಿ ದೀಪೋತ್ಸವ

ಮೈಸೂರು ೨೩

ಇನ್ನು ಮುಂದೆ ಶನಿವಾರ ಮತ್ತು ಭಾನುವಾರಗಳಲ್ಲಿ ಎಂದಿನಂತೆ ಬೃಂದಾವನದಲ್ಲಿ ದೀಪೋತ್ಸವವು ನಡೆಯುವುದೆಂದು ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದ ನೀರಿನ ಮಟ್ಟ ಈ ದಿನ ೧೧೭-೨೫ ಅಡಿಗಳಿಗೆ ಏರಿದೆ

೩ ಕೋಟಿ ರೂ.ವನ್ನು ಸಮುದ್ರದಿಂದ ಎತ್ತಲು ಪ್ರಯತ್ನ

ಅಟ್ಲಾಂಟಿಕದ ಸ್ಕಾಟ್ಲೆಂಡ್ ತೀರದಲ್ಲಿ ೩॥ ಕೋಟಿ ರೂ.ಗಳ ಬೆಲೆ ಬಾಳುವ ಧಾತುವಿನ ನಿಧಿಯನ್ನು ಸಮುದ್ರದಿಂದ ತೆಗೆಯಲು ಪ್ರಯತ್ನ ನಡೆದಿದೆ. ೧೬೫೨ರಲ್ಲಿ ಈ ನಿಧಿಯನ್ನು ಹೊತ್ತುಕೊಂಡು ಹೋಗುತ್ತಿದ್ದ ಹಡಗು ಆ ಪ್ರದೇಶದಲ್ಲಿ ಮುಳುಗಿತೆಂದು ಹೇಳಲಾಗಿದೆ. ಚಿನ್ನ ಮತ್ತು ವಜ್ರಗಳಿಂದ ಕೆತ್ತಲ್ಪಟ್ಟ ನವಿಲುಗಳು ಅದರಲ್ಲಿದ್ದುವೆಂದು ತಿಳಿದುಬಂದಿದೆ.

ಕೆನಡಾ ಮಂತ್ರಿ ನೀರಿನ ಪಾಲು

ಕೆನಡಾ ರಾಜ್ಯದ ಉಪ ಮಂತ್ರಿಯೊಬ್ಬರು ಸೈಬೀರಿಯಾದ ಸಮುದ್ರದಲ್ಲಿ ವಿಹಾರಾರ್ಥವಾಗಿ ದೋಣಿಯಲ್ಲಿ ಹೋಗುತ್ತಿದ್ದಾಗ ಮುಳುಗಿಹೋದರೆಂದು ವರದಿಯಾಗಿದೆ.

ಲಾಟರಿಗೆ ಹಣ ಕೊಡಿಸಿದ್ದುದಕ್ಕಾಗಿ ಆತ್ಮಹತ್ಯೆ

ಜರ್ಮನಿಯ ಮಿಸೆಸ್ ಕಾಬ್ಲರ್ ಎಂಬಾಕೆಯು ತನ್ನ ಪಕ್ಕದ ಮನೆಯವರು ಕೊಂಡಿದ್ದ ಲಾಟರಿ ಟಿಕೆಟ್ಟಿನ ಭಾಗಾಂಶವನ್ನು ಕೊಳ್ಳಲು ಅಪೇಕ್ಷೆಪಟ್ಟು ಅದಕ್ಕಾಗಿ ೧೦ ಮಾರ್ಕುಗಳನ್ನು ಕೊಡುವಂತೆ ತನ್ನ ಗಂಡನನ್ನು ಕೇಳಲು ಅದಕ್ಕೆ ಅತನು ನಕ್ಕುಬಿಟ್ಟು ಹಣವನ್ನು ಕೊಡಲು ನಿರಾಕರಿಸಿದನೆಂದೂ ಅಕಸ್ಮಾತ್ತಾಗಿ ಮೇಲ್ಕಂಡ ಲಾಟರಿ ಟಿಕೆಟ್ಟಿಗೆ ೧೦ ಲಕ್ಷ ಮಾರ್ಕುಗಳ ಬಹುಮಾನ ಬಂದಿತೆಂದು ಕೇಳಿ ಕಾಬ್ಲರಳು ಆತ್ಮಹತ್ಯ ಮಾಡಿಕೊಂಡಳೆಂದೂ ವರದಿಯಾಗಿದೆ.

ಚಾಮರಾಜ ನಗರದ ಚಂದಾದಾರರಲ್ಲಿ ವಿನಂತಿ

ನಮ್ಮ ಪತ್ರಿಕೆಯ ಅನೇಕ ಚಂದಾದಾರರು 3 4 ತಿಂಗಳಾದರೂ ಚಂದಾ ಹಣವನ್ನು ಪಾವತಿ ಮಾಡದ ಪ್ರಯುಕ್ತ ದಯವಿಟ್ಟು ಈಗಲಾದರೂ ಪಾವತಿ ಮಾಡುವರೆಂದು ನಂಬಲಾಗಿದೆ.

ಕೆ. ಎಸ್. ಸೀತಾರಾಂ
ನ್ಯೂಸ್ ಏಜೆಂಟ್, ಚಾಮರಾಜನಗರ

ಕಛೇರಿಗೆ ತಡವಾಗಿ ಬರುವ ಅಧಿಕಾರಿಗಳ ಮೇಲೆ ಕ್ರಮ

ಮದರಾಸ್ ಸರ್ಕಾರದ ಅನೇಕ ಕಛೇರಿಗಳಲ್ಲಿ ಅಧಿಕಾರಿಗಳು ತಡವಾಗಿ ಕೆಲಸಕ್ಕೆ ಬರುತ್ತಿರುವ ಅಂಶವು ಸರ್ಕಾರದವರ ಗಮನಕ್ಕೆ ಬಂದು ಅವರು ಆ ಸಂಬಂಧವಾಗಿ ಎಲ್ಲ ಇಲಾಖೆಗಳ ಮುಖ್ಯಾಧಿಕಾರಿಗಳಿಗೂ ಸೂಚನೆಯಿತ್ತಿದ್ದಾರೆ. ಇನ್ನು ಮುಂದೆ ವಿನಾ ಕಾರಣವಾಗಿ ಯಾವುದೇ ಅಧಿಕಾರಿಯಾದರೂ ತಡವಾಗಿ ಬಂದರೆ ಅಂತಹವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ. ಹಾಗೆ ಬರುವುದರಿಂದ ಸರ್ಕಾರಿ ಕೆಲಸದ ನಿರ್ವಹಣೆಯಲ್ಲಿ ಲೋಪವಾಗುವುದಲ್ಲದೆ ಮತ್ತು ಅದು ಅವರ ಕೈಕೆಳಗಿನ ನೌಕರರಿಗೆ ಮೇಲ್ಪಂಕ್ತಿಯಾಗುವುದೆಂದೂ ವರ್ಣಿಸಲಾಗಿದೆ.

॥ಶ್ರೀ॥

ಗಣೇಶಾ ಟಾಕೀಸ್

On 27-7-50 3 shows only
MGM's BOOM TOWN
Featuring - Spencer Tracy and Hedy Lamarr

On 28 7-50 3 shows only
Marie Walewska
With. - Charles Boyer & Greta Garbo

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಈಸ್ಟ್ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

ರಾಜಕಮಲ್,
ಮೈಸೂರು
28-7 50 ರಿಂದ 1ನೇ ವಾರ
ದಿನ ಪತಿ 3 ಪ್ರದರ್ಶನಗಳು
ಫಿಲ್ಮಿಸ್ತಾನದವರ ಹಿಂದಿ ಚಿತ್ರ
ಸಮಾಧಿ
— ಭೂಮಿಕೆ
ಅಶೋಕ ಕುಮಾರ್, ಶ್ಯಾಮ್, ನಳಿನಿ ಜಯವಂತ್, ಕುಲದೀಪ್, ಮುಬಾರಕ್

-:ಬೆಳಗಿನ ಪ್ರದರ್ಶನಗಳು:-
28-7-50ರಿಂದ 3 ದಿನಗಳು ಮಾತ್ರ
ನಾದಿಯಾ ಪಾತ್ರವಹಿಸಿರುವ
ಲೇಡಿ ರಾಬಿನ್‌ಹುಡ್

ವಿವಿಧ ರೇಷ್ಮೆ ಸೀರೆಗಳಿಗೆ
9 ಗಜದ ಪೂನಾ ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.
ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

ಒಲಂಪಿಯಾ
27-7-50 ರಿಂದ 3ನೇ ವಾರ
ದುನಿಯಾ -
ಪ್ರೋಗ್ರಾಂ ಬದಲಾವಣೆ 3-8-50 ರಿಂದ
• ಅಫ್ಸರ್ •
ಪಾತ್ರ ಸುರಯ್ಯ ಮತ್ತು ದೇವಾನಂದ್

ಬೆಳಗಿನ ಪ್ರದರ್ಶನ 28-7-50ರಿಂದ
ಸುರೇಂದ್ರ, ಖುರ್ಷಿದ್ ಪಾತ್ರವಹಿಸಿರುವ
ಸೊಹರಾಬ್ ಮೋದಿಯವರ
ಮಂಜಧಾರ್

Edited, printed and published by A K Nagarajan, at Sadhvi Press D Subbiah Road, Mysore

The National Institute of Engineering,
Mysore.

Applications for admission to the B. E. Degree Course, to be newly opened in the Institute, must be sent so as to reach the Principal, before 3 P.M. on Monday the 31st July 1950.

Minimum qualification:- Intermediate with P. C. M. Optionals.

Applications should be in the candidates' own hand-writing and contain the name and address of Parent or Guardian and should be accompanied by certified copies of Marks Card and Transfer Certificate. Incomplete applications will not be cosidered.

Students who have. of their own accord, already, sent in applications, with the above details, need not apply again.

Particulars regarding fees etc., to be paid on admission can be seen on the Notice Board of the Institute.

The number of seats is limited.

S RAMASWAMY.
Principal.

SRI GAYATHRI TALKIES
From 28-7-50 Daily 3 Shows
Warner's mighty romance produced in Technicolor
DON JUAN ಡಾನ್ ಜುವಾನ್
With.- Errol Flynn

Morning Shows on 29th & 30th July 1950
Look For The Silver Lining
A Warner's Technicolor Hit

ರಣಜಿತ್ *
28-7-50ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಮಹತ್ವ ಸಂದೇಶವನ್ನೂ ಹಾಗೂ ಅಪೂರ್ವ ಮನರಂಜನೆಯನ್ನೂ ನೀಡುವ ಕಲಾಕೃತಿ
ಕಿಶೋರ್ ಸಾಹುರವರ ಅಮೋಘ ಸಾಮಾಜಿಕ ಹಿಂದಿ ಚಿತ್ರ
ಹಿಂದುಸ್ತಾನ್ ಚಿತ್ರ ಲಿ ರವರ
-ಹಮಾರ ಘರ್-
ಪಾತ್ರ—† ವೀರಾ, † ದುರ್ಗಾ ಖೋಟೆ, † ಯಶೋಧರ ಕಟ್ಜು, † ಆಗಾ † ಜೀವನ್, † ಜಾನಕಿ ದಾಸ್, † ರಮೇಶ ಗುಪ್ತ † ಉಮಾಕಾಂತ
ಈಗ ಬೊಂಬಾಯಿನಲ್ಲಿ 39ನೇ ವಾರ ನಡೆಯುತ್ತಿದೆ!
[ಫ್ರೀಂಲ್ಯಾಂಡ್ ರವರ ಹಂಚಿಕೆ

ಪ್ರಭುದೇವಾ ಟಾಕೀಸ್
28-7-50ರಿಂದ ಅಮೋಘವಾದ 2ನೆಯ ವಾರ
* ಭಕ್ತ ಪುಂಡಲೀಕ *
(ಹಿಂದಿ)
ಪ್ರತಿಯೊಂದು ಆಟ ಒಬ್ಬರೂ ತಪ್ಪದೇ ಅವಶ್ಯವಾಗಿ ನೋಡಲೇಬೇಕಾದ ಚಿತ್ರ
೨ ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಪಾಸುಗಳನ್ನೂ ರದ್ದು ಮಾಡಲಾಗಿದೆ.

ಪ್ರಭಾ * ನಾಳೆಯಿಂದ ಆರಂಭ
[ಫೋನ್ 569] ದಿನವೂ 3 ಆಟಗಳು
ಶ್ರೀ ಶಾಂತಾರಾಂರವರ ಅತ್ಯುತ್ತಮ ಹಿಂದಿ ಕಲಾಕೃತಿ
* ದಹೇಜ್ *
(ವರದಕ್ಷಿಣೆ)
ಪಾತ್ರ—ಜಯಶ್ರೀ, ಪೃಥ್ವಿರಾಜ್, ಕರಣ್ ದಿವಾನ್, ಉಲ್ಹಾಸ್
ಮಿ ಸೂ. ಬಾಲ್ಕನಿ ಟಿಕೇಟುಗಳು ಬೆಳಗ್ಗೆ 10ರಿಂದ 12ರವರೆಗೆ ಮುಂಗಡವಾಗಿಯೇ ಕೊಡಲಾಗುತ್ತೆ
28, 29, 30ನೇ ತಾರೀಕುಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಸ್ಥಾನದ ವ್ಯವಸ್ಥೆಯಿಲ್ಲ
ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮೂರು ವಾರ ಕಾಲ ರದ್ದು ಮಾಡಲಾಗಿದೆ

ಪೋಸ್ಟು ನಂ 792 ರಿಜಿಸ್ಟರ್ಡ ನಂಬರು [illegible]

ಸಾಧ್ವಿ

ಸಂಪುಟ ೯] ಶುಕ್ರವಾರ ೨೮-೭-೫೦ [ಸಂಚಿಕೆ ೭

ಬೆಲ್ಜಿಯಂ ಅರಮನೆ ಮುಂದೆ ರಕ್ತ ಪ್ರವಾಹ

ವಿಶ್ವೇಶ್ವರಯ್ಯ ನಾಲೆಯಲ್ಲಿ ಇಂದಿನಿಂದಲೇ ನೀರು

ಸ್ವಂ ಸು ಪ್ರೋ] ಬೆಂಗಳೂರು ೨೮

ಕನ್ನಂಬಾಡಿ ಕಟ್ಟೆಯು ತುಂಬುತ್ತಾ ಬಂದಿರುವುದರಿಂದ ಆಗಸ್ಟ್ ೫ನೇ ತಾರೀಖಿನಿಂದ ವಿಶ್ವೇಶ್ವರಯ್ಯ ನಾಲೆಯಲ್ಲಿ ಸತತವಾಗಿ ನೀರನ್ನು ಬಿಡಲಾಗುವುದೆಂದು ಸರ್ಕಾರದವರು ಹೊರಡಿಸಿದ್ದ ಆಜ್ಞೆಯನ್ನು ಬದಲಾಯಿಸಿ, ಇಂದಿನಿಂದಲೇ ಅದರಲ್ಲಿ ನೀರು ಬಿಡುವಂತೆ ಆಜ್ಞೆ ಮಾಡಿರುತ್ತಾರೆ.

ಫುಟ್ ಬಾಲ್ ಬೋರ್ಡಿನ ಅರ್ಜಿ ವಜಾ

ಅರ್ಯುರ್ ಅಂಜಾನಿ ಟೀಮಿನ ಸಾಮಾನ್ಯ ಸಭೆಯನ್ನು ನಡೆಸದಂತೆ ಇಂಜಂಕ್ಷನ್ ಕೊಡಬೇಕೆಂದು ಕೇಳಿ ಶ್ರೀ ಎಸ್. ಆರ್. ಮೂರ್ತಿಯವರು ಹಾಕಿದ್ದ ಅರ್ಜಿಯನ್ನು ಈ ದಿನ ಸಬಾರ್ಡಿನೇಟ್ ಜಡ್ಜರವರು ನಿರಾಕರಿಸಿದ್ದಾರೆ. ಮೊಕದ್ದಮೆಯನ್ನು ಆಗಸ್ಟ್ ೧೬ ಕ್ಕೆ ಮುಂದುವರಿಸಿದ್ದಾರೆ. ಮೂರ್ತಿಯವರು ಟೀಮಿನ ಸದಸ್ಯರಾಗಿಲ್ಲದಿರುವುದರಿಂದಲೂ ಈಗಾಗಲೇ ಕರೆಯಲಾಗಿರುವ ಸಭೆಗೆ ಅನೇಕರು ಬರಲಿರುವುದರಿಂದಲೂ ಈ ವಿಷಯದಲ್ಲಿ ಕೋರ್ಟಿನವರು ಪ್ರವೇಶಿಸಲು ಅವಕಾಶವಿಲ್ಲವೆಂದೂ ಅವರು ತಿಳಿಸಿದ್ದಾರೆ

ಪುಟ್ಟರಾಜೆ ಅರಸರ ಅಪೀಲು

ಶ್ರೀ ಪಿ. ಮೇದಪ್ಪನವರ ಮೇಲೆ ನಿವೃತ್ತ ನ್ಯಾಯಾಧೀಶರಾದ ಶ್ರೀ ಪುಟ್ಟರಾಜೇ ಅರಸಿನವರು ಹೂಡಿದ್ದ ಮಾನ ನಷ್ಟದ ಮೊಕದ್ದಮೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ವಜಾಮಾಡಿರುವುದರಿಂದ ಅವರು ಜಿಲ್ಲಾ ಕೋರ್ಟಿನಲ್ಲಿ ಅಪೀಲು ಹೂಡಿರುವರು

ವಿಶ್ವ ವಿದ್ಯಾಲಯ ಮಂಡಲಿ ವರದಿ ಪರಿಶೀಲನೆಗೆ ಮೈಸೂರಿನ ಸಮಿತಿ

ಡಾ॥ ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿದ್ದ ಭಾರತ ವಿಶ್ವವಿದ್ಯಾಲಯ ಮಂಡಲಿಯ ವರದಿಯನ್ನು ಮೈಸೂರು ಸಂಸ್ಥಾನಕ್ಕೆ ಅನ್ವಯಿಸಲು ಎಷ್ಟು ಮಟ್ಟಿಗೆ ಸಾಧ್ಯವಾಗುವುದೆಂಬುದನ್ನು ಪರಿಶೀಲಿಸಲು ಸರ್ಕಾರದವರು ಕೆಳಗೆ ಕಂಡ ಸದಸ್ಯರ ಸಮಿತಿಯನ್ನು ರಚಿಸಿದ್ದಾರೆ.—ಡಾ॥ ಎಂ ವಿ ಗೋಪಾಲಸ್ವಾಮಿ, ಡಾ॥ ಎಸ್ ರಾಮಚಂದ್ರರಾವ್, ಶ್ರೀ ಎ. ಎಲ್. ಮುದಲಿಯಾರ್, ಶ್ರೀಗಳು ಎಂ ನಾರಾಯಣರಾವ್, ಎಂ ಪಿ ಎಲ್ ಶಾಸ್ತ್ರಿ ಮತ್ತು ಎಸ್ ರಂಗರಾಮಯ್ಯ

ಭಾನುವಾರ ಬೆಳಿಗ್ಗೆ ಡಿಪೋಗಳು ಬಂದ್

ಈ ತಿಂಗಳು ೩೦ನೇ ತಾ ನೀಡಿಕ-ವಾರ ದಾಸ್ತಾನು ತಪಸೀಲಿಗಾಗಿ ಪಡಿತರ ರೇಷನ್ ಡಿಪೋಗಳನ್ನು ಮುಚ್ಚಲಾಗುವುದರಿಂದ ೩೦ನೇ ತಾ॥ ಭಾನುವಾರ ಬೆಳಿಗ್ಗೆ ರೇಷನ್ ತೆಗೆದುಕೊಳ್ಳಲು ಕಾರ್ಡುದಾರರಿಗೆ ಅವಕಾಶ ಕಲ್ಪಿಸಲು ಡಿಪೋಗಳನ್ನು ತೆರೆದಿಡಲಾಗುವುದೆಂದು ತಿಳಿಸಲಾಗಿದೆ

ಹೊಡೆದಾಟಕ್ಕಾಗಿ ಜುಲ್ಮಾನೆ

ಕಳೆದ ತಿಂಗಳು ೧೧ ನೇ ತಾರೀಖು ರಾಜಧಾನಿಯ ಚನ್ನ [illegible] ಕೊಪ್ಪಲಿನ ಹೊಸಬೀದಿಯಲ್ಲಿ ಸೊಪ್ಪಿನ ತೋಟದ ಬಗ್ಗೆ [illegible] ಕೃಷ್ಣಪ್ಪ, ತಿಮ್ಮ, ಮತ್ತು ಕರಿ ಪುಟ್ಟಮಾದಯ್ಯನ ಮಗ ಚೆನ್ನೈನಿಂಗಯ್ಯ ಎಂಬುವರು ಹೊಡೆದಾಡಿದರೆಂಬ ಕಾರಣದ ಮೇಲೆ ನಗರ ನ್ಯಾಯಾಧೀಶರು ಅಪಾದಿತರಿಗೆ-ತಲಾ ೨೦ ರೂ ಜುಲ್ಮಾನೆ ವಿಧಿಸಿರುವರು

ಕಾಲೇಜು ಸೀಟುಗಳ ಬಗ್ಗೆ ಕೋಮುವಾರು ಆಜ್ಞೆ ನ್ಯಾಯಬದ್ಧವಲ್ಲ

ಮದ್ರಾಸ್ ಹೈ ಕೋರ್ಟಿನ ತೀರ್ಪು

ಕಾಲೇಜುಗಳ ಪ್ರವೇಶಕ್ಕೆ ಅವಕಾಶದ ಬಗ್ಗೆ ಜಾತಿ ಪ ಗಡ ನ ತ್ತು ೭ ದೇಶ ಗನ್ನು ಆಧಾರವಾಗಿ ಇಟ್ಟುಕೊಳ್ಳುವುದು ನ್ಯಾಯ ಬದ್ಧವಾಗಿಲ್ಲವೆಂದು ನೆನ್ನೆ ಮದ್ರಾಸು ಹೈ ಕೋರ್ಟಿನ ಪೂರ್ಣ ಬೆಂಚ್ ತೀರ್ಪು ಕೊಡಲ್ಪಟ್ಟಿತು ಅಲ್ಲಿನ ವೈದ್ಯಕೀಯ ಕಾಲೇಜಿಗೆ ಪ್ರವೇಶ ಸಿಗದ ಒಬ್ಬ ವಿದ್ಯಾರ್ಥಿನಿ ಮತ್ತು ಇಂಜನಿಯರಿಂಗ್ ಕಾಲೇಜಿಗೆ ಪ್ರವೇಶ ಸಿಗದ ಒಬ್ಬ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಗಳ ಸಂಬಂಧವಾಗಿ ಮೇಲ್ಕಂಡ ತೀರ್ಪಿತ್ತಿರುವುದು. ಜಾತಿ ವರ್ಣ ಮುಂತಾದ ಭೇದ ಭಾವನೆಯಿಲ್ಲದೆ ಪ್ರವೇಶದ ಅರ್ಜಿಗಳನ್ನು ಪರಿಶೀಲಿಸಬೇಕೆ ದೂ, ಆಯ್ಕೆ ಮಾಡಲು ದೇಶೀಯ ಭಾಷೆ ಮುಂತಾದ ವಿಷಯಗಳನ್ನು ಗೊತ್ತುಪಡಿಸುವುದು ಹೈ ಕೋರ್ಟಿನ ಕೆಲಸವಲ್ಲವೆಂದೂ, ಆದರೆ ಜಾತಿ ಮುಂತಾದ ಬೇಧದ ದೃಷ್ಟಿಯಿಂದ ಆಯ್ಕೆ ನಡೆಸಬೇಕೆಂದೂ [illegible] ವಿಚಾರಣೆಯಲ್ಲಿ [illegible] ವಾದಿಸಿದ್ದ ಅಡ್ವೊಕೇಟ್ ಜನರಲ್ ಶ್ರೀ ವಿಶ್ವನಾಥ ಶಾಸ್ತ್ರಿಗಳು ಈ ಬಗ್ಗೆ ಸರ್ಕಾರದ ಕೋಮುವಾರು ಆಜ್ಞೆಯು ನ್ಯಾಯಬದ್ಧವಾದದೆ, ರಾಜ್ಯಾಂಗದ ೧೫ (೧) ಕಲಮಿನ ಪ್ರಕಾರ ಇದು ಸರಿಯಾಗಿದೆ ಎಂದು ವಾದಿಸಿರುವರು

ಮೇಲ್ಕಂಡ ತೀರ್ಪಿನ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಅಪೀಲು ಹೂಡಲು ಅಡ್ವೊಕೇಟ್ ಜನರಲ್ಲರಿಗೆ ಅನುಮತಿ ಕೊಡಲಾಯಿತು

ಭೂಮಿ ಕುಸಿದು ಸಂಚಾರಕ್ಕೆ ಅಡಚಣೆ

ಚಿಕ್ಕಮಗಳೂರು ೨೮

ಇಲ್ಲಿಂದ ಮಂಗಳೂರಿಗೆ ಹೋಗುವ ರಸ್ತೆಯ ೩೦ನೇ ಮೈಲಿಯಿಂದ ೩೫ನೇ ಮೈಲಿವರೆಗೆ ವಿಪರೀತ ಮಳೆಯಾಗಿ ಬೆಟ್ಟದ ಭಾಗವು ಎರಡು ಕಡೆ ಕುಸಿದು ಸುಮಾರು ೫೦ ಅಡಿಯಷ್ಟು ರಸ್ತೆಯು ತುಂಬ ಮಣ್ಣು ತುಂಬಿಕೊಂಡು ಸಂಚಾರಕ್ಕೆ ಅಡಚಣೆ ಯಾಗಿರುವುದೆಂದು ವರದಿಯಾಗಿದೆ ಅದನ್ನು ದುರಸ್ತು ಪಡಿಸಲು ಸುಮಾರು ಒಂದು ವಾರ ಹಿಡಿಯುವುದೆಂದೂ, ಈ ಅವಧಿಯಲ್ಲಿ ಪ್ರಯಾಣಿಕರು ಮತ್ತು ಲಾರಿಗಳ ರವಾನೆಗಾಗಿ ಟ್ರಾನ್ಸ್‌ಷಿಪ್‌ಮೆಂಟ್ ವ್ಯವಸ್ಥೆ ಮಾಡಲಾಗುತ್ತಿದೆಯೆಂದೂ ಹೇಳಲಾಗಿದೆ

ಡಿಪೋ ಲೈಸೆನ್ಸ್ ರದ್ದು, ಠೇವಣಿ ಮುಟ್ಟುಗೋಲು

ಮೈಸೂರು ೨೮

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಎರಡನೇ ಡಿಪೋ ಲೈಸೆನ್ಸುದಾರರಾದ ಶ್ರೀ ಎಸ್. ರಂಗಣ್ಣನವರ ಅಂಗಡಿಯ ಲೆಕ್ಕಪತ್ರ ತೃಪ್ತಿಕರವಾಗಿಲ್ಲದಿದ್ದುದರಿಂದಲೂ ಮತ್ತು ಅಲ್ಲಿ ರೇಷನ್ ಪದಾರ್ಥಗಳ ದುರುಪಯೋಗವಾಗುತ್ತಿದ್ದುದರಿಂದಲೂ ಪಡಿತರ-ರೇಷನಿಂಗ್ ಅಧಿಕಾರಿಗಳು ಈ ದಿನ ಅವರ ಲೈಸೆನ್ಸನ್ನು ರದ್ದು ಮಾಡಿ ಅವರು ಕೊಟ್ಟಿದ್ದ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವರು

ದಸರಾ ಸಭಾ ಪ್ರಚಾರ-ಸಮಿತಿ

ಸೆಪ್ಟೆಂಬರದಲ್ಲಿ ದಸರಾ ಸಭಾ ಪ್ರಚಾರ ಸಮಿತಿಯನ್ನು ಒಂದು ವರ್ಷ ಕಾಲಕ್ಕೆ ಪುನರ್ರಚಿಸಿ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್ ಚನ್ನಿಗರಾಮಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಸೈನಾರಿಟಿ ಡಿಪಾರ್ಟ್‌ಮೆಂಟಿನ ಡೈರೆಕ್ಟರಾದ ಶ್ರೀ ಕೆ ಚಿಕ್ಕನಾರಾಯಣ ಸ್ವಾಮಿಯವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯದ ಪ್ರಿನ್ಸಿಪಾಲರಾದ ಶ್ರೀ ಕೆ ವಿ ಪುಟ್ಟಣ್ಣನವರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಿದ್ದಾರೆ ಸಮಿತಿಯಲ್ಲಿ ೨೨ ಮಂದಿ ಸದಸ್ಯರಿರುವರು

ಪುರಾಣ ಮತ್ತು ಹರಿಕಥೆ

ರಾಜಧಾನಿಯ ಶಾಂತವ್ವನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಾಲಯದಲ್ಲಿ ಪ್ರತಿ ನಿತ್ಯವೂ ಸಂಜೆ ೫ ರಿಂದ ೭ ಗಂಟೆವರೆಗೆ ಶ್ರೀ ವಾಸುದೇವಾಚಾರ್ಯರು ಮತ್ತು ಶ್ರೀ ಹಿರಣ್ಮಯ್ಯನವರುಗಳಿಂದ ಮಹಾಭಾರತ ಪುರಾಣವನ್ನು, ಈ ಸಂಜೆ ೭ ಗಂಟೆ ಮೇಲೆ ಬ್ರಾ॥ ಶ್ರೀ ಕಂಬಂಧ ಮೂರ್ತಿಗಳಿಂದ "ತಿರುಪತಿ ಶಂಕರ" ಎಂಬ ಹರಿಕಥೆಯನ್ನೂ ಅಲ್ಲಿ ಭಕ್ತರಿಗೆ ಅತ್ಯ ಪೂರ್ಣ ಅಲಂಕಾರದಿಂದ ದೇವಾಲಯದವರು ಏರ್ಪಡಿಸಿರುತ್ತಾರೆ

ಪೌರಸಭಾಧ್ಯಕ್ಷರು

ಗುಂಡ್ಲುಪೇಟೆ ೨೮

ನೆನ್ನೆ ನಡೆದ ಈ ಊರಿನ ಪೌರಸಭೆಯ ಅಧ್ಯಕ್ಷರ ಚುನಾವಣೆಯಲ್ಲಿ ಜನಾಬ್ ಜಿ. ಎ. ಅಬ್ದುಲ್ ಗಪ್ಫೂರ್ ಸಾಹೇಬರು ಪ್ರತಿಸ್ಪರ್ಧಿಯಿಲ್ಲದೇ ಆರಿಸಲ್ಪಟ್ಟರು. ಇವರ ಗೌರವಾರ್ಥವಾಗಿ ಶ್ರೀ [illegible] ಶೆಟ್ಟಿ ಶ್ರೀ ಕೆ [illegible] ಗೌಡರು ಒಂದು [illegible]

ಬೆಲ್ಜಿಯಂ ಅರಮನೆಗೆ ಸಮತಾವಾದಿಗಳ ನುಗ್ಗುವಿಕೆ

[illegible] ಬೆಲ್ಜಿಯಂ [illegible] ಅರಮನೆಗೆ [illegible] ಸಮತಾವಾದಿ ಪ್ರದರ್ಶಕರು ನೆನ್ನೆ ರಾತ್ರಿ ನುಗ್ಗಿದರು ಅವರನ್ನು [illegible] ಸಂಬಂಧವಾಗಿ ಪ್ರದರ್ಶಕರ ಮುಖಂಡರು [illegible] ಪೊಲೀಸರು [illegible] ಈ [illegible] ಪ್ರದರ್ಶಕರನ್ನು ಪೊಲೀಸರು [illegible] ಅರಮನೆ ಮುಂಭಾಗದಲ್ಲಿ [illegible] ರಕ್ತ [illegible] ಪ್ರದರ್ಶಕರು [illegible]

ಯುದ್ಧರಂಗಕ್ಕೆ ಮತ್ತೊಮ್ಮೆ ಮೆಕಾರ್ಥರರ ಭೇಟಿ

ಕೊರಿಯಾ ರಣರಂಗಕ್ಕೆ ವಿಶ್ವಸಂಸ್ಥೆಯ ಸೇನಾನಿ ಜನರಲ್ ಮೆಕಾರ್ಥರರು ಮತ್ತೊಮ್ಮೆ ಭೇಟಿಯಿತ್ತು [illegible] ಯುದ್ಧದ ಬಗ್ಗೆ [illegible] ಬಂದ ಬಗ್ಗೆ [illegible] ಅವರು [illegible] ಮತ್ತೊಂದು ಭಾರಿ ಸಿದ್ಧರಾಗುತ್ತಿದ್ದಾರೆ [illegible]

ಅಣು ಬಾಂಬನ್ನು ಪ್ರಯೋಗಿಸುವುದಿಲ್ಲವೆಂದು ಭರವಸೆ

ಕೊರಿಯಾದಲ್ಲಿ ಅಣು ಬಾಂಬನ್ನು ಪ್ರಯೋಗಿಸುವ ವಿಷಯದಲ್ಲಿ [illegible] ಅಧ್ಯಕ್ಷ ಟ್ರೂಮನ್ [illegible] ಅವರು [illegible]

ಕನ್ನಂಬಾಡಿ ಕಟ್ಟೆ ಈ ದಿನ ತುಂಬುವ ನಿರೀಕ್ಷೆ

ಕೃಷ್ಣರಾಜಸಾಗರದ ಶೇಖರ ಮಟ್ಟವು ಈವರೆಗೆ ೧೨೩-೬೪ ಅಡಿಗಳಿಗೆ ಏರಿದೆ [illegible] ೧-೬೦ ಅಡಿಗಳು ತುಂಬ [illegible] ಮುಟ್ಟಬಹುದೆಂದು [illegible]

ನಾಯಿ ಬಾಧಾ ಸಪ್ತಾಹ

[illegible]

ಸ್ಪ್ಯಾಪರ್ಸ್ ಮತ್ತು ವ್ಯೈಪರ್ಸ್ ಕೈಸ್ಸದ ದೋಣಿ ಮುಳುಗಿತು

ಶಂಕನಗೂಡಿನಲ್ಲಿ ಮೊಕ್ಕಾಂ ಮಾಡಿರುವ ಸ್ಯಾಪರ್ ವತ್ತು ವೈಪರ್ ತಿಕ್ಷಣ ಪಡೆಯುವರು ಕೆಲವು ದಿವಸಗಳ ಹಿಂದೆ ಕಪಿಲಾ ನದಿಯನ್ನು ದೋಣಿಯಲ್ಲಿ ಕುಳಿತು ದಾಟುತ್ತಿರುವಾಗ ಅಕಸ್ಮಾತ್ ದೋಣಿಯು ಮುಳುಗಿ ಒಬ್ಬನು ವ್ಯಾಸನಿಸ್ಟನೆಂದು ವರದಿಯಾಗಿದೆ ಇತರರು ಈಜಿಕೊಂಡು ಬಂದು ದಡ ಸೇರಿದರೆಂದ ಗೊತ್ತಾಗಿದೆ

ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರು

ಕೃಷ್ಣರಾಜ ಸಾಗರದಿಂದ ಕೆಳವುಟ್ಟದ ನಾಲೆಗಳಿಗೆ ಈ ತಿಂಗಳು ೧೦ ರಿಂದ ನೀರನ್ನು ಬಿಡಲಾಗಿದೆ ವಿಶ್ವೇಶ್ವರಯ್ಯ ನಾಲೆಗೆ ೧೫ನೇ ತಾ॥ ಹಿಂದ ಒಂದು ವಾರದ ವರೆಗೆ ಒದಗಿಸಿರುವ ನೀರನ್ನು ಬರುವ ತಿಂಗಳು ೫ ನೇ ತಾ॥ ಹಿಂದ ಕಡತವಾಗಿ ಕೊಡಲು ಗ ವುದು ರೈತರು ವ್ಯವಸಾಯದಲ್ಲಿ ನಿರತರಾಗಬಹುದೆಂದೂ, ನೀರು ಸರಬರಾಜಿನ ಬಗ್ಗೆ ಮುಂದಾಗುತ್ತ ತಿಳಿಸುವರೆಂದೂ ಅವರು ಸಹಕರಿಸಬೇಕೆಂದೂ ಸರ್ಕಾರದವರು ಕೋರಿರುತ್ತಾರೆ

The National Institute of Engineering,

Mysore.

Applications for admission to the B. E. Degree Course, to be newly opened in the Institute, must be sent so as to reach the Principal, before 3 P M. on Monday the 31st July 1950.

Minimum qualification.- Intermediate with P C M Optionals

Applications should be in the candidates' own hand-writing and contain the name and address of Parent or Guardian and should be accompanied by certified copies of Marks Card and Transfer Certificate Incomplete applications will not be considered

Students who have of their own accord, already, sent in applications, with the above details, need not apply again

Particulars regarding fees etc, to be paid on admission can be seen on the Notice Board of the Institute

The number of seats is limited.

S RAMASWAMY
Principal

Edited, printed and published by A. R. Nagarajan, at Sadhvi Press D Subbiah Road, Mysore

ಕೊರಿಯಾದಲ್ಲಿ ಕಮ್ಯೂನಿಸ್ಟ್ ಮುಂದೋಟಕ್ಕೆ ತಡೆ

ನೆನ್ನೆ ದಿನ ಅಮೆರಿಕದ ಕೋರ್ ಸ್ವೈನ್ನ ಪಡೆಗಳು ಕೊರಿಯದ ದಕ್ಷಿಣ ಭಾಗಕ್ಕೆ ಬಂದು ಪಶ್ಚಿಮ ತೀರದಲ್ಲಿ ಕಮ್ಯೂನಿಸ್ಟರ ಧಾಳಿಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸುತ್ತಿವೆಯೆಂದು ವರದಿಯಾಗಿದೆ ಕೊರಿಯದ ಪಶ್ಚಿಮ ಕರಾವಳಿಯಲ್ಲಿ ದಕ್ಷಿಣ ಕೊರಿಯಾದ ಪೋಲೀಸ್ ಮತ್ತು ನೌಕಾ ಪಡೆಗಳವರು ಅವರ್ವಾ ಎಂಬ ಕ್ಷೇತ್ರದಿಂದ ಕಮ್ಯೂನಿಸ್ಟರನ್ನು [illegible] ಓಡಿಸಿರುವರು

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು

ಕೃಷ್ಣರಾಜ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪನಿ

(ಬೆಂಗಳೂರು.)

ಔಷಧ ವ್ಯಾಪಾರಿಗಳು

70 ಅವೆನ್ಯೂ ಶ್ರೀನಿವಾಸಬಜಾರ್,

ಬೆಂಗಳೂರು.

ರಣಜಿತ್

ಚಿಕ್ಕಪೇಟೆ ಸಾಮಾಜಿಕ ಹಿಂದಿ ಚಿತ್ರ

- ಬಹಾರ ಫೂರ್ -

(ಈಗ ಬೊಂಬಾಯಿಯಲ್ಲಿ 4 ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ)

ಪಾತ್ರ-ದಾರಿ: ಕರನ್, ಕಿಶೋರ್ ಕುಮಾರ್, ಪಂಡರಿಬಾಯಿ

ಬೆಳಗಿನ ಪ್ರದರ್ಶನ 28 7-50 ರಿಂದ 3 ದಿನಗಳು ಮಾತ್ರ

ಕುಮಾರ್ ಪಾತ್ರವಹಿಸಿರುವ ಬಾಬರ್

॥ಶ್ರೀ॥

ಗಣೇಶಾ ಟಾಕೀಸ್

On 29-7-50 2 shows only

HOUSE OF STRANGERS

Featuring - Edward G Robinson and Susan Hayward

On 30-7-50 TAP ROOTS (In Technicolor)

ಒಲಿಂಪಿಯಾ

27 7-50 ರಿಂದ 3ನೇ ವಾರ

ದುಸಿಯ

ಮಂಗಳವಾರ ಬದಲಾವಣೆ 3-8-50 ರಿಂದ

• ಅಫ್ ಸರ್ •

ಪಾತ್ರ ಸುರಯ್ಯ ಮತ್ತು ದೇವಾನಂದ್

ಬೆಳಗಿನ ಪ್ರದರ್ಶನ 28 7 50ರಿಂದ

ಸುರೇಂದ್ರ, ಮುನವ್ವರ್ ಸುಲ್ತಾನ ಪಾತ್ರವಹಿಸಿರುವ

ಮಂಜಧಾರ್

28-7-50ರಿಂದ ಆಮೋದ ಪ್ರಾರಂಭ ಪ್ರತಿ ದಿನ 3 ಆಟಗಳು

ಅಬಿದಾ ರವರ

ಭಾರಿ ಹರಾಜು ಮಾರಾಟ

30-7-50ನೇ ಭಾನುವಾರ ಬೆಳಿಗ್ಗೆ 9-30 ಕ್ಕೆ

ಸ್ಯಾಂಕ್ಕ ಟ್ಯಾಂಕಿನ ಬಳಿ ಇರುವ ಪೋರ್ ರೂಮುಗಳಲ್ಲಿ

ದಾಟಿ ಮರದ ಬಾಕ್ ಕೇಸ್, ತೇಗದ ಮರದ ಮೇಜು, ಡ್ರೆಸ್ಸಿಂಗ್ ಟೇಬಲ್, ಸ್ಪ್ರಿಂಗ್ ಕುರ್ಚಿಗಳ ಸೋಫಾ ಕುರ್ಚಿಗಳು, ಬೆಡ್ ರೂಮ್ ಲ್ಯಾಂಪ್, ಸಿಂಗಲ್ ಮತ್ತು ಡಬ್ಬಲ್ ಮಂಚಗಳು, ಮೇಜುಗಳು, ಕುರ್ಚಿಗಳು, ಟೀಪಾಯಿಗಳು, ತೊಟ್ಟಿಲುಗಳು, ಮುಂತಾದ ಪೀಠೋಪಕರಣಗಳು, ಚೆನ್ನಾಗಿ ನಡೆಯುತ್ತಿರುವ ಬಾಕೆಟ್ ಮತ್ತು ಡ್ರಿಲ್ ಯಂತ್ರಗಳು, ಟೈಲರ್ ಮೆಷೀನು, ಒಂದು ದೊಡ್ಡ ದಾಟಿ ಮರದ ಕಬ್ಬಿಣದ ಕಪಾಟು, ಗಾಜಿನ ಸಾಮಾನುಗಳು, ಅಡಿಗೆ ಪಾತ್ರೆಗಳು, ಚಿನ್ನದ ಹರಳಿನ ಆಭರಣಗಳು ಮತ್ತು ಕೆಟ್ಟಿಗಳು ಮುಂತಾದವು ಹೆಂಡಗಳು, ಹಾಸಿಗೆಗಳು, ರತ್ನಗಂಬಳಿಗಳು, ಅಳಿಲು ಮೇಜು ಮತ್ತು ಧ್ವನಿಯುಳ್ಳ ಗಡಿಯಾರ ಸುಂದರವಾದ ಒಂದು ಗಾಜಿನ ಪೆಟ್ಟಿಗೆ ಇತರ ಅನೇಕ ಉಪಯುಕ್ತ ವಸ್ತುಗಳು

ಮೇಲ್ಕಂಡ ಪದಾರ್ಥಗಳನ್ನು ನಾಳೆ [29-7 50] ದಿನ ಮಧ್ಯಾಹ್ನ 3 ರಿಂದ 6 ಘಂಟೆವರೆಗೆ ಪರೀಕ್ಷಿಸಬಹುದು

ಪ್ರಭಾ * ಇಂದಿನಿಂದ ಆರಂಭ

[ಫೋನ್ 569] ದಿನವಹಿ 3 ಆಟಗಳು

ಶ್ರೀ ಶಾಂತಾರಾಮರವರ ಅತ್ಯುತ್ತಮ ಹಿಂದಿ ಕಲಾಕೃತಿ

* ದಹೇಜ್ *

(ವರದಕ್ಷಿಣೆ)

ಪಾತ್ರ- ಜಯಶ್ರೀ, ಪೃಥ್ವಿರಾಜ್, ಕರನ್ ದಿವಾನ್, ಉಲ್ಲಾಸ್

ವಿ ಸೂ ಚಾಲ್ಮಿಸ ಟಿಕೆಟುಗಳು ಬೆಳಿಗ್ಗೆ 10ರಿಂದ 12ರವರೆಗೆ ಮುಂಗಡವಾಗಿಯೂ ಕೊಡಲಾಗುತ್ತೆ

28, 29, 30ನೇ ತಾರೀಖು ಸ್ತ್ರೀ ಮಹಿಳೆಯರಿಗೆ ಪ್ರತ್ಯೇಕ ಸ್ಥಳದ ವ್ಯವಸ್ಥೆಯುಂಟು

ಎಲ್ಲ ನಿರ್ಮಾಣ ಶಾಂತಿ ಮಂಟಪ ಮತ್ತು ಶ್ರೀ ಪಾಸುಗಳನ್ನೂ ಮೂರು ವಾರ ಕಾಲ ರದ್ದು ಮಾಡಲಾಗಿದೆ

THE PALACE GARAGE,

Mysore

AUCTION SALE OF MOTOR VEHICLES

The following vehicles, which are in good running condition, will be sold in PUBLIC AUCTION at the Palace Garage, Mysore, on the 5th and 6th August 1950 between 9-30 a m and 12 Noon each day -

CARS- 1 Riley 1½ Litre Saloon 1948, 2 Riley 1½ Litre Saloon 1948 3 Humber Super snipe 1947, 4 Cadillac Imperial Touring saloon 1940 5 Buick 7 seater 1938 6 Hillman 7 seater 1938 7 Electric Car 1920, 8 Daimler Car 1913 Model

BUSSES - 9 Oldsmobile Bus 26 seater 1937 10 Rolls Royce Bus 14 seater 1914 11 Bedford Bus 1933 12. Bedford Bus 1932 13 Chevrolet Bus 1937 14 Dodge 1929 Model

LORRIES - 15 Ford Lorry V8 1944 16 Ford Lorry V8 1944 17 Ford Lorry 1933 Model

STATION WAGGON - 18 Ford Station waggon 1940 Model

Terms are strictly cash The successful bidders should deposit half the cost of the vehicle sold to them and the balance before delivery, failing which, it will be resold the next day at the risk of the original bidder and the loss, if any, will be deducted out of his deposit Delivery is subject to the confirmation of the sale by the Huzur Secretary The Officer in charge, Palace Garage, reserves the right to accept or reject any bid and also to withhold any vehicle at any stage before it is delivered. In all matters of dispute, the orders of the Huzur Secretary shall be final.

Cheques will not be accepted

L. Mahadevaiah,
Captain,
Officer-in-charge,
Palace Garage, Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೫] ಭಾನುವಾರ ೩೦-೭-೫೦ [ಸಂಚಿಕೆ ೨

ಶಿವಸಮುದ್ರ ವಿದ್ಯುಚ್ಛಕ್ತಿ ಕೇಂದ್ರಕ್ಕೆ ಪ್ರವಾಹ ಭೀತಿ

ಜೂಜಾಡುವವರ ರಕ್ಷಣೆಗೆ ಮಾರಮ್ಮ!

ಪಡುವಾರಹಳ್ಳಿಯಲ್ಲಿ ಮಹಿಳೆಯೊಬ್ಬಳ ಅಭಿನಯದ ಪ್ರಸಂಗ

ಮೈಸೂರು ೨೯

ಪ್ರಥಮೈಕಾದಶಿ ರಾತ್ರಿ ಇಲ್ಲಿನ ಪಡುವಾರಹಳ್ಳಿಯ ಮಾರಿಗುಡಿಯಲ್ಲಿ ಕೆಲವು ಜನರು ಜೂಜಾಡುತ್ತಿದ್ದುದು ಪೋಲೀಸರಿಗೆ ತಿಳಿದು, ತಕ್ಕ ಸಿಬ್ಬಂದಿಯೊಡನೆ ಅವರು ಅಲ್ಲಿಗೆ ಹೋಗಿ ಆಟಗಾರರನ್ನು ಹಠಾತ್ತನೆ ಹಿಡಿಯಲೆತ್ನಿಸಿದಾಗ ಗ್ರಾಮಸ್ಥರು ಬಂದು ನೆರೆದರು. ಆ ವೇಳೆ ಒಬ್ಬ ಹೆಂಗಸು ತನ್ನ ಮೇಲೆ ಮಾರಮ್ಮನು ಬಂದಿತೆಂದು ಕೂಗಿಕೊಂಡು ಪೋಲೀಸರನ್ನು ದೂಷಿಸಲು ತೊಡಗಿ, ಅವರ ಅಲ್ಲಿಂದ ಹೊರಡಬೇಕೆಂದು "ಅಪ್ಪಣೆ" ಮಾಡಿದಳು. ಪೊ॥ ಇ॥ ಕೃಷ್ಣಮೂರ್ತಿಯವರು ತಮ್ಮ ಎರಡು ಕೈಗಳನ್ನೂ ಪೋಲೀಸು ಕಾನ್ಸ್ಟೇಬಲ್ಲುಗಳು ಹಿಡಿದುಕೊಳ್ಳುವಂತೆ ಸಂಜ್ಞೆ ಮಾಡಿ, ತಮ್ಮ ಮೇಲೆ ಬೇರೇ ದೇವರು ಬಂದಿತೆಂದು ಅಭಿನಯಿಸುತ್ತಾ, ಪೋಲೀಸರ ತಂಡದಿಗೆ ಏನಾಯಿತೆಂದು ವಿಚಾರಿಸಲು — ಮಾರಮ್ಮನು ಬಂದ ದೇಕೆಂದು ಪ್ರಶ್ನೆ ಮಾಡಿದಾಗ, ಆ ಹೆಂಗಸು ಸುಮ್ಮನಾದಳು. ನಂತರ ಜೂಜಾಡುವವರೆಲ್ಲರನ್ನೂ ದಸ್ತಗಿರಿ ಮಾಡಿ, ಅವರ ಬಳಿ ಇದ್ದ ಹಣವನ್ನು ವಶಪಡಿಸಿಕೊಳ್ಳಲಾಯಿತು.

ವಿದ್ಯಾರ್ಥಿ ಗೋಷ್ಠಿಯವರಿಂದ ವನ ಮಹೋತ್ಸವ

ಕೃಷ್ಣರಾಜ ಸಾಗರದಲ್ಲಿ ಸೇರಿರುವ ಅಂತರ ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿಯ ಪ್ರತಿನಿಧಿಗಳು ನೆನ್ನೆ ಅಲ್ಲಿ ವನ ಮಹೋತ್ಸವವನ್ನು ಆಚರಿಸಿದರು. ಗೋಷ್ಠಿಯ ಡೈರೆಕ್ಟರ್ ಜನರಲ್‌ರವರು, ಪ್ರತಿನಿಧಿಗಳೂ, ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ ಎಂ. ಎಲ್. ಲಕ್ಷ್ಮಣರಾಯರೂ ಭಾಗವಹಿಸಿದ್ದರು. ಒಟ್ಟು ೬೦ ಗಿಡಗಳನ್ನು ನೆಡಲಾಯಿತು.

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರು ಜಹಗೀರ್‌ದಾರ್ ಶ್ರೀ ಪರಸಿಂಗರಾವ್ ಪೂರ್ಣಯ್ಯ ಸ್ಮಾರಕ ವಿದ್ಯಾರ್ಥಿನಿಧಿಯ ಕಳೆದ ವರ್ಷದ ವರದಿಯ ಪ್ರತಿಯೊಂದು ನಮ್ಮ ಕೈ ಸೇರಿದೆ. ಈ ನಿಧಿಯು ೧೯೨೦ರಲ್ಲಿ ಸ್ಥಾಪಿತವಾಗಿ ಇದುವರೆಗೆ ೩೦,೮೭೨ ರೂ. ಚಂದಾ ವಸೂಲಾಗಿ ಎಲ್ಲ ಕೋಮುಗಳ ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪು ಕೊಟ್ಟು ಕೆಲವು ಕೈಗಾರಿಕೆ ಶಿಕ್ಷಣ ಶಾಲೆಗಳಲ್ಲಿ ವ್ಯಾಸಂಗ ಮಾಡಲು ೨೭೪೮೨ ರೂ.ಗಳನ್ನು ಹಂಚಲಾಗಿದೆ. ಯಳಂದೂರಿನ ಶ್ರೇಯೋಭಿವೃದ್ಧಿಯನ್ನು ಬಯಸುವ ಎಲ್ಲ ಮಹನೀಯರೂ, ಈ ನಿಧಿಗೆ ವಿಶೇಷ ಸಹಾಯ ಮಾಡಿ ಯಳಂದೂರಿನ ಎಲ್ಲ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮುಂದೆಯೂ ವಿದ್ಯಾಭ್ಯಾಸವನ್ನು ಏರ್ಪಡಿಸಲು ಅನುಕೂಲಪಡಿಸಬೇಕೆಂದು ಪ್ರಾರ್ಥಿಸಲಾಗಿದೆ.

ಸಂಗೀತ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ವಿ. ಬಿ. ಕೆ. ಪದ್ಮನಾಭರಾಯರ ಸಂಗೀತವನ್ನು ವಿ॥ ಟಿ. ಗ. ಪುರುಷೋತ್ತಮ ...ರಾಜಪ್ಪನವರ ಪಿಟೀಲು ಮತ್ತು ಅ॥ ವಿ॥ ತಿಮ್ಮಪ್ಪನವರ ಮೃದಂಗದೊಡನೆ ಏರ್ಪಡಿಸಲಾಗಿದೆ.

ಭದ್ರಾ ನದಿಯ ಪ್ರವಾಹದಿಂದ ೫ ಮನೆಗಳ ನಾಶ

ಸ್ವಂ. ಸು.] ಭದ್ರಾವತಿ ೨೯

ಒಂದು ವಾರದಿಂದ ಈ ಪ್ರದೇಶದಲ್ಲಿ ವಿಪರೀತ ಮಳೆಯಾಗಿ ಭದ್ರಾ ನದಿಯಲ್ಲಿ ಪ್ರವಾಹವು ೧೯ ಅಡಿಗಳಿಗೆ ಏರಿದ ದರಿಂದ ನಗರದಲ್ಲಿ ೫ ಮನೆಗಳು ಕುಸಿದ ಬಿದ್ದವು. ೧೦ ಸಾವಿರ ರೂ. ನಷ್ಟದ ಅಂದಾಜಾಗಿದೆ. ದಡದಲ್ಲಿ ವಾಸವಿರುವ ಜನರು ಸುರಕ್ಷಿತ ಪ್ರದೇಶಗಳಿಗೆ ಹೋಗುವಂತೆ ತಿಳಿಸಲಾಗಿದೆ.

ಔತಣ ಕೂಟಗಳಿಗೆ ಬಿಹಾರ್ ಸಚಿವರ ಬಹಿಷ್ಕಾರ

ದೇಶದಲ್ಲಿ ಅನಾವಶ್ಯಕವಾಗಿ ಔತಣ ಕೂಟಗಳನ್ನು ಏರ್ಪಡಿಸಿ ಅಮೂಲ್ಯ ಬಹಳಷ್ಟು ಆಹಾರ ಪದಾರ್ಥಗಳು ದುರ್ವ್ಯಯವಾಗುತ್ತಿವೆಯೆಂದೂ, ಅನೇಕ ಮಂದಿ ಹೊಟ್ಟೆಗಿಲ್ಲದೆ ಸಾಯುತ್ತಿರುವ ಸಂದರ್ಭದಲ್ಲಿ ಇಂತಹ ಔತಣ ಕೂಟಗಳು ಅನುಚಿತವೆಂದೂ, ಬಿಹಾರಿನ ಪುನರ್ವಸತಿ ಶಾಖಾ ಸಚಿವ ಶ್ರೀ ಅಬ್ದುಲ್ ಕ್ವಯೂಂ ಅನ್ಸಾರಿಯವರು ಹೇಳಿ, ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುವವರೆಗೆ ತಾವು ಯಾವ ಔತಣ ಕೂಟದಲ್ಲೂ ಭಾಗವಹಿಸುವುದಿಲ್ಲವೆಂದು ತಿಳಿಸಿದ್ದಾರೆ.

ದಕ್ಷಿಣ ಅಮೆರಿಕದಲ್ಲಿ ಭಾರಿ ವಿಮಾನ ಅನಾಹುತ

ದಕ್ಷಿಣ ಅಮೆರಿಕದ ಬ್ರೆಜಿಲ್ ರಾಜ್ಯದ ಸಾವೊಪೊಲೊ ಎಂಬ ನಗರದ ಬಳಿ ವಿಮಾನವೊಂದು ಅಪಘಾತಕ್ಕೆ ಈಡಾದ ಫಲವಾಗಿ ೪೩ ಮಂದಿ ಪ್ರಯಾಣಿಕರೂ, ೭ ಮಂದಿ ಪೈಲಟ್ಟುಗಳೂ ಮೃತಪಟ್ಟರೆಂದು ವರದಿಯಾಗಿದೆ.

ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಅಧಿಕಾರಿಗಳು

ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಪ್ರಿನ್ಸಿಪಾಲ್ ಅಸಿಸ್ಟೆಂಟರಾದ ಶ್ರೀ ಎಂ. ವೀರಪ್ಪನವರನ್ನು ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ.

◯ ಸಂಸ್ಥಾನದಲ್ಲಿರುವ ಭಾರತ ಸೇವಾದಳದ ಪುನರ್ವ್ಯವಸ್ಥೆಗಾಗಿ ಸರ್ಕಾರದವರು ೫ ಸಾವಿರ ರೂ.ಗಳ ದ್ರವ್ಯ ಸಹಾಯವನ್ನು ಮಾಡಿದ್ದಾರೆ.

ವಿಶ್ವ ಯಾತ್ರೆಗೆ ೧೧ ವರ್ಷದ ಬಾಲಕನ ಸಂಕಲ್ಪ

ಕೆನಡಾದ ಕೊಲಂಬಿಯಾ ಪ್ರಾಂತದಲ್ಲಿ ವಾಸವಾಗಿರುವ ಭಗವಾನ್ ಸಿಂಗ್ ಎಂಬ ೧೧ ವರ್ಷದ ಬಾಲಕನು ಪ್ರಪಂಚದ ಪರ್ಯಟನೆಗಾಗಿ ಮೊನ್ನೆ ತನ್ನ ಊರಿನಿಂದ ಹೊರಟಿರುವನು. ಬ್ರಿಟಿಷ್ ರಾಜರು, ಪೋಪರು ಮೊದಲಾದ ಮುಖ್ಯರನ್ನು ಅವನು ಭೇಟಿ ಮಾಡುವನೆಂದು ಹೇಳಲಾಗಿದೆ. ಕೊರಿಯಾದಲ್ಲೂ ಸಹ ಸಂಚರಿಸಬೇಕೆಂಬ ಚಪಲವು! ಅವನಿಗೆ ಇದೆ. ದೆಹಲಿಯಲ್ಲಿರುವ ತನ್ನ ಸಹೋದರನ ವಿವಾಹಕ್ಕಾಗಿ ಬರುವ ತಿಂಗಳು ಭಾರತಕ್ಕೆ ಅವನು ಬರುವನೆಂದು ಹೇಳಲಾಗಿದೆ.

ಯೋಜನಾ ಸಮಿತಿ ಅಧಿಕಾರಿಗಳಾಗಿ ಮೈಸೂರಿನವರ ನೇಮಕ

ರಾಜಧಾನಿಯ ಶ್ರೀ ಕೆ. ಎಸ್. ಕೃಷ್ಣಸ್ವಾಮಿಯವರನ್ನು ಕೇಂದ್ರ ಯೋಜನಾ ಸಮಿತಿಯ ಸಂಶೋಧನಾಧಿಕಾರಿಗಳನ್ನಾಗಿ ೬೦೦ ರೂ.ಗಳ ಸಂಬಳದ ಮೇಲೆ ನೇಮಿಸಲಾಗಿದೆ. ಅವರು ತಮ್ಮ ಹುದ್ದೆಯನ್ನು ಸ್ವೀಕರಿಸಲು ನೆನ್ನೆ ದೆಹಲಿಗೆ ಪ್ರಯಾಣ ಬೆಳೆಸಿದರು. ಉಚ್ಚ ಶಿಕ್ಷಣಕ್ಕಾಗಿ ಅವರು ಭಾರತ ಸರ್ಕಾರದ ವಿದ್ಯಾರ್ಥಿ ವೇತನವನ್ನು ಪಡೆದು ಇಂಗ್ಲೆಂಡಿಗೆ ಹೋಗಿ ಬಂದಿದ್ದರು. ಬೊಂಬಾಯಿನ ಶಾಸ್ತ್ರ ಅರ್ಥಶಾಸ್ತ್ರ ಶಾಲೆಯಲ್ಲಿ ಅವರು ಅಧ್ಯಾಪಕರಾಗಿದ್ದರು.

ಕನ್ನಂಬಾಡಿ ಕಟ್ಟೆಯಲ್ಲಿ ನೀರು ಇನ್ನೂ ಇಳಿದಿದೆ

ಕೃಷ್ಣರಾಜ ಸಾಗರದಲ್ಲಿ ನೀರು ಇಳಿದು ಈವತ್ತು ೧೨೨ ಅಡಿಯಷ್ಟಿದೆ. ಕಾವೇರಿಯಲ್ಲಿ ೧೫-೦೫೦ ನೀರಿದೆ. ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥಗಳಲ್ಲಿ ಪ್ರವಾಹವು ಸ್ವಲ್ಪ ಕಡಿಮೆಯಾಗುತ್ತಿದೆ.

ಆರಂಭ ಭಾಷಣ

ವಾಣೀವಿಲಾಸ ರಸ್ತೆಯಲ್ಲಿರುವ ಕ್ಯಾತಸಹಳ್ಳಿ ಪಾಠಶಾಲೆ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಈ ಸಂಜೆ ೬ ಗಂಟೆಗೆ ಸಿದ್ಧಗಂಗಾ ಮಠಾಧ್ಯಕ್ಷ ಶ್ರೀ ಶಿವಕುಮಾರಸ್ವಾಮಿಗಳು ಮಾಡುವರು. ಗವಿಮಠಾಧ್ಯಕ್ಷ ಶ್ರೀ ಗೌರಿಶಂಕರ ಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಪ್ರವಾಹದಿಂದ ಶಿವಸಮುದ್ರ ವಿದ್ಯುತ್ ಕೇಂದ್ರಕ್ಕೆ ಭೀತಿ

ಸ್ವಂ. ಸು.] ಬೆಂಗಳೂರು ೩೦

ಕಾವೇರಿ ಮತ್ತು ಕಬಿನಿ ನದಿಗಳು ಉಕ್ಕಿ ಹರಿದು ಶಿವಸಮುದ್ರದಲ್ಲಿರುವ ವಿದ್ಯುತ್ ಕೇಂದ್ರಕ್ಕೆ ಭೀತಿಯುಂಟುಮಾಡುವುದಾಗಿ ಹೇಳಲಾಗಿದೆ. ೨ ಲಕ್ಷ ಕ್ಯೂಸೆಕ್ಸ್‌ನಷ್ಟಿದ್ದು, ಇದೇ ರೀತಿ ನೀರಿನ ಒತ್ತಡವು ಮುಂದುವರಿದರೆ, ವಿದ್ಯುತ್ ಕೇಂದ್ರಕ್ಕೆ ರಕ್ಷಣೆ ಕೊಡುತ್ತಿರುವ ಮದ್ದೂರು ಕೊಳ್ಳೇಗಾಲ ರಸ್ತೆಯ ಮೇಲೆ ನೀರು ನುಗ್ಗಿ ಕೇಂದ್ರವನ್ನು ನಷ್ಟಪಡಿಸುವುದೆಂದು ಹೆದರಲಾಗಿದೆ. ವಿದ್ಯುಚ್ಛಕ್ತಿಯ ಮುಖ್ಯಾಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ. ರಕ್ಷಣೆಗಾಗಿ ಮರಳು ಚೀಲಗಳನ್ನು ಇಡಲಾಗುತ್ತಿದೆ. ೧೯೨೪ರಲ್ಲಿ ಈ ವರ್ಷಕ್ಕಿಂತಲೂ ಇನ್ನೂ ಹೆಚ್ಚಿನ ಪ್ರವಾಹವು ಬಂದಿತ್ತೆಂದು ಹೇಳಲಾಗಿದೆ.

ಈಗ ದೇಶಾದ್ಯಂತವೂ ಜಾರಿಯಲ್ಲಿರುವ ಪ್ರಿವೆಂಟಿವ್ ಡಿಟೆಂಷನ್ ಶಾಸನವನ್ನು ಆ ವರ್ಷವಾಗಿ ಜಾರಿಗೆ ತರಬೇಕಾಗುತ್ತಿದೆಂದೂ, ಅದನ್ನು ಬದಲಾಯಿಸಿ ಹೊಸ ನುಡಿಯನ್ನು ತರುವ ಯೋಚನೆ ಕೇಂದ್ರ ಸರ್ಕಾರಕ್ಕಿದೆಯೆಂದೂ ತಿಳಿದುಬಂದಿದೆ

ಹಳ್ಳ ದಾಟುವಾಗ ಪ್ರವಾಹಕ್ಕೆ ಜೀಪು ಸಿಕ್ಕಿತು

ಜಡ್ಡುವಿನ ಬಳಿ ೧ ಸಣ್ಣ ಹಳ್ಳವನ್ನು ಜೀಪ್ ಕಾರೊಂದು ದಾಟುತ್ತಿದ್ದಾಗ ಪ್ರವಾಹವು ಉಕ್ಕಿ ಬಂದು ಕಾರು ಕೊಚ್ಚಿಹೋಯಿತು. ಅದರಲ್ಲಿದ್ದ ಮೂವರಲ್ಲಿ ಇಬ್ಬರು ಸತ್ತುಹೋದರು. ಜೀಪಿನ ಡ್ರೈವರ್ ಬದುಕಿಕೊಂಡನು

ಚಾಮುಂಡೇಶ್ವರಿ ಟಾಕೀಸ್

5-8-50 ರಿಂದ ದಿನವೂ 3 ಆಟಗಳು

ಶಹನಾಜ್

(ಹಿಂದಿ)

ಪಾತ್ರ:- ಬೇಗಂ ಪ್ಯಾರ ಮತ್ತು ಅಲ್ಲಾರ

THE PALACE GARAGE,
Mysore.

AUCTION SALE OF MOTOR VEHICLES

The following vehicles, which are in good running condition will be sold in PUBLIC AUCTION at the Palace Garage, Mysore, on the 5th and 6th August 1950 between 9-30 a.m. and 12 Noon each day:—

CARS:— 1 Riley 1½ Liter Saloon 1948, 2 Riley 1½ Litre Saloon 1948, 3 Humber Super snipe 1947, 4 Cadillac Imperial Touring saloon 1940, 5 Buick 7 seater 1938, 6 Hillman 7 seater 1938 7 Electric Car 1920 8 Daimler Car 1913 Model

BUSSES— 9 Oldsmobile Bus 26 seater 1937, 10 Rolls Royce Bus 14 seater 1914, 11 Bedford Bus 1933, 12. Bedford Bus 1932 13 Chevorlet Bus 1937, 14 Dodge 1929 Model

LORRIES— 15 Ford Lorry V 8 1944, 16 Ford Lorry V 8 1944, 17 Ford Lorry 1933 Model

STATION WAGGON— 18 Ford Station waggon 1946 Model.

Terms are strictly cash. The successful bidders should deposit half the cost of the vehicle sold to them and the balance before delivery, failing which, it will be resold the next day at the risk of the original bidder and the loss, if any, will be deducted out of his deposit Delivery is subject to the confirmation of the sale by the Huzur Secretary The Officer-in-charge, Palace Garage, reserves the right to accept or reject any bid and also to withold any vehicle at any stage before it is delivered In all matters of dispute the orders of the Huzur Secretary shall be final Cheques will not be accepted

L. Mahadevaiah,
Captain, Officer—in—charge,
Palace Garage, Mysore

ACCOUNTS HIGHER

Qns & Ans 1941–1950
Problems only Rs 1—4—0
J. MANUMALL & SONS or
RAMACHANDRA BOOK DEPOT,
Mysore.

ಒಲಿಂಪಿಯಾ

3-8-50ರಿಂದ ಪ್ರತಿ ದಿನ 3 ಆಟಗಳು

ಸ್ವರಚಿತ್ರ್ರಿಯವಾದ ಯುವಕ, ಆತನ ಪರಿಚಯವೇ ಎಲ್ಲರಿಗೂ ರಹಸ್ಯ ಭೇದಕನಾಗಿ ಚಿತ್ರಿತನಾಗಿ ಮಾಡಿದ್ದಿತು ಸುರೈಯ್ಯ ಮತ್ತು ದೇವಾನಂದ್ ಅಭಿನಯಿಸಿರುವ ನವಕೇತನರವರ

ಅಫ್ಸರ್

(ಅಥವಾ ಅಧಿಕಾರಿ)

ಸಹಾಯಕ ವರ್ಗ: ರುಮಾದೇವಿ, ಮನಮೋಹನ ಕೃಷ್ಣ.

ಬೆಳಗಿನ ಪ್ರದರ್ಶನ 4-8-50 ರಿಂದ ರಿಪಬ್ಲಿಕ್ ಪಿಕ್ಚರ್ಸ್‌ರವರ

ಡಿಕ್‌ಟ್ರೇಸಿ Vs. ಕ್ರೈಂ ಇಂಕ್

15 ಭಾಗಗಳ ಫೂರ್ಣ ಸೀರಿಯಲ್

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ತಿಂಬಳ ನರಸಿಂಹ ಪಂಡಿತರ ಮತಕ ಸನದ

ಸಂತಾನ ಸಿಂಧೂರ

ಬಹಿಷ್ಠ ಸಂಬಂಧದ ತೊಟ್ಟು ನೋವಿಗೆ ಗ್ಯಾರಂಟೀ ಔಷಧ. ಕ್ರಯ.- ೧ ಸೆಟ್ ರೂ. ೩—೪—೦ ಪ್ಯಾಕಿಂಗ್ ಮತ್ತು ಟಿ. ಪಿ. ಬಾ ಇತರೆ.

ತಯಾರಕರು:-

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು

ಇವರು ಮೈಸೂರು ಸಿಟಿ ಕೃಷ್ಣರಾಜ್ ಬೊಲೀಸ್ ಸ್ಟೇಷನ್ ಎದುರು ತೆಗೆಸ್ಪಿನ ಲೋಕದ ಹಿಡಿ 'ಸಂತಾನ ಸಿಂಧೂರ' ಆಫೀಸಿನಲ್ಲಿ 2-8-50ರ ಮೊದಲ್ಗೊಂಡು 6-8-50ರ ವರೆಗೆ ಕ್ಯಾಂಪ್ ಮಾಡುತ್ತಾರೆ

ಬೆಳಗಿನ ೮-೩೦-೧೧ ರಿಂದ ೧೧, ಮಧ್ಯಾಹ್ನ ೩ ರಿಂದ ೫ ಘಂಟೆ

ಹೆಡ್ ಆಫೀಸ್:-ಅಂಬಳೆ ಪೋಸ್ಟ್, ಯಳಂ ದೂರು ತಾಲ್ಲೋಕ್

॥ಶ್ರೀ॥

ಗಣೇಶಾ ಟಾಕೀಸ್

5-8-50ರಿಂದ ದಿನವೂ 3 ಆಟಗಳು

ಪ್ರೇಮ ಮುಡಿ

(ತಮಿಳು)

ಪಾತ್ರ ವರ್ಗದಲ್ಲಿ ಭಾರತೀ ಮಾಧುರಿ ದೇವಿ, ಕಾಳಿ ಎನ್ ರತ್ನಂ, ಲಲಿತಾ ಮತ್ತು ಪದ್ಮಿನಿ

T R ಮಹಾಲಿಂಗ, T.R ರಾಜಕುಮಾರಿ ಪಾತ್ರವಹಿಸಿರುವ

ಇಧಯ ಗೀತಂ

ತಮಿಳು ಚಿತ್ರವು

ಶ್ರೀ

ಗಣೇಶಾ, ಚಾಮುಂಡೇಶ್ವರಿ ಟಾಕೀಸುಗಳಲ್ಲಿ ಶೀಘ್ರದಲ್ಲಿಯೇ ಪ್ರದರ್ಶನಕ್ಕೆ ಬರಲಿದೆ

SRI GAYATHRI

Daily 3 Shows
From 4-8-50 for 2 days
M G M's

PIRATE

With -Gene Kelly

From 6-8-50

Neptune's Daughter

(In Technicolor)
Starring - Esther Williams & Red Skelton

MorningShows on 5th & 6th

Hunch Back - of Notredame

With - Maureen O'Hara

ಪ್ರಭಾ

4—8—50ರಿಂದ 2ನೇ ವಾರ
ದಿನವೂ 3 ಆಟಗಳು

ಬಳುವಳಿಯ ಮೋಹಕ್ಕೊಳಗಾದವರ ಪೈಶಾಚಿಕ ವರ್ತನೆಯ ಕರಾಳವಧಿಯ ಪರಿಣಾಮವನ್ನು ಪ್ರತಿಬಿಂಬಿಸುವ ರಾಜಕಮಲ್ ಕಲಾಮಂದಿರ್‌ರವರ ಅತ್ಯದ್ಭುತ ಹಿಂದಿ ಚಿತ್ರ

✻ ದಹೇಜ್ ✻

(ಅಥವಾ ಬಳುವಳಿ)

ಪಾತ್ರ:-ಜಯಶ್ರೀ, ಪೃಥ್ವಿರಾಜ್, ಕರನ್ ದಿವಾನ್, ಉಲ್ಲಾಸ್
ಪ್ರತಿಯೊಬ್ಬರೂ ನೋಡಿ ತಮ್ಮ ತಮ್ಮ ಹೃದಯಗಳನ್ನು ಒರೆ ಹಚ್ಚಿಕೊಳ್ಳಬೇಕು

ಪ್ರತಿ ಸಂಸಾರವೂ ತಪ್ಪದೆ ನೋಡಿ ನಲಿಯಬೇಕಾದ ಕಿಶೋರ್ ಸಾಹುರವರ ಹಿಂದಿ ಚಿತ್ರ

ಹಮಾರ ಘರ್

HAMARA GHAR

ಪಾತ್ರ:- ದುರ್ಗಾಖೋಟೆ, ಯಶೋಧರ ಕಾಟ್ಜು, ಆಗಾ, ರಮೇಶ ಗುಪ್ತ, ಉಮಾಕಾಂತ ದೇಸಾಯ್,

4-8-50ರಿಂದ 2ನೇ ವಾರ
ದಿನವೂ 3 ಆಟಗಳು

ಮೈಸೂರು: ರಣಜಿತ್
ಬೆಂಗಳೂರು: ಮೆಜೆಸ್ಟಿಕ್
ಚಿತ್ರಮಂದಿರಗಳಲ್ಲಿ
(ಪ್ರಿಂಟ್ಯಾಂಡರವರ ಜೊತೆ

ಮಕ್ಕಳು, ಮಕ್ಕಳ, ಮಕ್ಕಳಿಗೆ ಬೇಕಾದ ಛತ್ರಿಗಳು

ಮಕ್ಕಳಿಗೆ ತೊಡಿಸುವ ದೇಬಿ ರಗ್ಗು, ಮಕ್ಕಳ ಹಾಸಿಗೆಗೆ ಹಾಸುವ ರಬ್ಬರ್ ಷೀಟು, ಮಕ್ಕಳ ತೊಟ್ಟಿಲಿಗೆ ಕಟ್ಟುವ ಸೊಳ್ಳೆಪರದೆ ಮಕ್ಕಳಿಗೋಸ್ಕರ ಮಾಡಿರುವ ಮೃದುವಾದ ಟವಲು, ಇವೆಲ್ಲಾ ಚಾಮುಂಡಿ ಕಂಪೆನಿಯಲ್ಲಿ ಸಿಗುತ್ತವೆ- ಬ್ಯಾಂಕ್ ರೋಡ್, ಮೈಸೂರು

Edited, printed and published by A R. Nagarajan, at Sadhvi Press D Subbiah Road, Mysore

ಸೋದರಂ 792 ॥ವಂದೇ ಮಾತರಂ॥ ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೯] ಶನಿವಾರ ೫-೮-೫೦ [ಸಂಚಿಕೆ ೧೫

ಭಾರತ-ರಷ್ಯಾಗಳಿಗೆ ರಹಸ್ಯ ಒಪ್ಪಂದವಿಲ್ಲ

ಕೊರಿಯಾ ರಣರಂಗದಲ್ಲಿ ನಾಯಿಗಳ ಮೇಲೆ ಧಾಳಿ

ಕೆಲವು ದಿವಸಗಳ ಹಿಂದೆ ಕೊರಿಯಾ ರಣ ಕ್ಷೇತ್ರದ ಕಾವಲುಗಾರಿಕೆ ಪ್ರದೇಶದಲ್ಲಿ ಅಮೆರಿಕದ ಸೈನಿಕರು ಕೇಳುತ್ತಿದ್ದ ಸದ್ದುಗುಂಪುಗಳನ್ನು ಉತ್ತರ ಕೊರಿಯದ ಕಮ್ಯೂನಿಸ್ಟರು ಅಡಗಿಸಿಕೊಂಡು ಬಂದು ಮುಂದೆ ಅಮೆರಿಕನರನ್ನು ಕೊಂದು ಅವರನ್ನು ಗಾಯಗೊಳಿಸಿದರೆಂದು ವರದಿಯಾಗಿದೆ. ಈ ಘಟನೆಯು ನಡೆದ ನಂತರ ಆ ಪ್ರದೇಶಕ್ಕೆ ರಾತ್ರಿ ೯ ಘಂಟೆಯಿಂದ ಬೆಳಗಿನ ಜಾವದವರೆಗೆ ಯಾರು ಬಂದರೂ ಹಿಂದು ಮುಂದು ನೋಡದೆ ಕೊಲ್ಲಬೇಕೆಂದು ಅವರಿಗೆ ಸೂಚನೆ ಕೊಡಲಾಗಿತ್ತು. ಅದೇ ಪ್ರಕಾರ ಮಾರನೇ ದಿನ ರಾತ್ರಿ ಸೈನಿಕರೆಲ್ಲರೂ ಬಂದೂಕುಗಳನ್ನು ಹಾರಿಸಲು ಸಿದ್ಧರಾಗಿ ಕಾದು ಕುಳಿತಿದ್ದರು. ಬೆಳದಿಂಗಳು ಚೆನ್ನಾಗಿ ಬೀಳುತ್ತಿತ್ತು. ದೂರದಿಂದ ಯಾರೋ ಅಂಬೆಗಾಲಿಟ್ಟುಕೊಂಡು ಬರುತ್ತಿರುವುದು ಕಂಡು ಬಂದಿತು. ಸೈನಿಕರು ಅವನ್ನು ಶತ್ರುಗಳೆಂದು ಭಾವಿಸಿ, ಬಂದೂಕುಗಳನ್ನು ಸುಮಾರು ಐದು ಘಂಟೆಗಳ ಕಾಲ ಹಾರಿಸಿದರು. ಬೆಳಕು ಹರಿಯುತ್ತಲೇ ನೋಡಲಾಗಿ ಅಲ್ಲಿ ಯಾರೂ ಇಲ್ಲದೆ ಹಲವು ನಾಯಿಗಳು ಮಾತ್ರ ಸತ್ತು ಬಿದ್ದಿದ್ದುದು ಪತ್ತೆಯಾಯಿತು.

ಭಾರತದ ನೀತಿಯ ಬಗ್ಗೆ ನೆಹರೂರವರ ಸಮರ್ಥನೆ

ಕೇಂದ್ರ ಪಾರ್ಲಿಮೆಂಟಿನಲ್ಲಿ ಕೊರಿಯಾ ಯುದ್ಧದ ಬಗ್ಗೆ ಭಾರತ ಸರ್ಕಾರದ ನೀತಿಯನ್ನು ಕುರಿತು ಪ್ರಸ್ತಾಪಿಸುತ್ತಾ ಪ್ರಧಾನಿ ನೆಹರೂರವರು ತಾವು ಹಿಡಿದಿರುವ ಮಾರ್ಗವೇ ಸರಿಯಾದುದೆಂದೂ, ಅದನ್ನೇ ಎಲ್ಲರೂ ಹಿಡಿದರೆ ಪ್ರಪಂಚದ ಸಮಸ್ಯೆಗಳು ಸುಲಭವಾಗಿ ಬಗೆಹರಿಯುವುವೆಂಬ ಬಗ್ಗೆ ಸ್ವಲ್ಪವೂ ಸಂದೇಹವಿಲ್ಲವೆಂದೂ ಹೇಳಿದರು.

ಪಾಕ್ ನಿರಾಶ್ರಿತರ ಪರಿಹಾರ ಸಮಿತಿಯಲ್ಲಿ ಗಲಾಟೆ

ಪಾಕಿಸ್ತಾನ ಸರ್ಕಾರದವರು ಕರಾಚಿಯಲ್ಲಿ ೧೪ ಮಂದಿ ಸದಸ್ಯರಿಂದ ಕೂಡಿದ ಒಂದು ನಿರಾಶ್ರಿತರ ಪರಿಹಾರ ಸಮಿತಿಯನ್ನು ರಚಿಸಿರುವರೆಂದೂ, ಹೈದರಾಬಾದಿನಿಂದ ತಪ್ಪಿಸಿಕೊಂಡು ಹೋದ, ಅಲ್ಲಿನ ಮಾಜಿ ಪ್ರಧಾನಿ ಮೀರ್ ಲಾಯಿಕಾಲಿಯು ಮೇಲ್ಕಂಡ ಸಮಿತಿಯ ಒಬ್ಬ ಸದಸ್ಯನಾಗಿರುವನೆಂದೂ ಹೇಳಲಾಗಿದೆ.

ಭದ್ರತಾ ಸಮಿತಿಯಲ್ಲಿ ಅಮೆರಿಕದ ನಿರ್ಣಯಕ್ಕೆ ಮಾನ್ಯತೆ

ಉತ್ತರ ಕೊರಿಯದ ಆಕ್ರಮಣಕಾರರಿಗೆ ಸಹಾಯ ಮಾಡಕೂಡದೆಂದು ಅಮೆರಿಕದ ಪ್ರತಿನಿಧಿಯು ಭದ್ರತಾ ಸಮಿತಿಗೆ ಕಳುಹಿಸಿದ್ದ ನಿರ್ಣಯದ ಪರಿಶೀಲನೆ ಮೊದಲು ಆಗಬೇಕೆಂದು ಸಮಿತಿಯಲ್ಲಿ ಬಹುಮತದ ತೀರ್ಮಾನವಾಯಿತು. ರಷ್ಯದ ಪ್ರತಿನಿಧಿಯು ತಾವು ಕಳುಹಿದ ನಿರ್ಣಯವನ್ನು ಮೊದಲು ಚರ್ಚಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಫಲಿಸಲಿಲ್ಲ. ಭಾರತ ಮತ್ತು ಯುಗೊಸ್ಲೇವಿಯಾ ಪ್ರತಿನಿಧಿಗಳು ಈ ಸಂಬಂಧದಲ್ಲಿ ಓಟು ಕೊಡದೆ ತಟಸ್ಥರಾಗಿದ್ದರು.

ಮದ್ರಾಸಿನ ಮತ್ತೊಂದು ಕಾಲೇಜಿನ ಬಹಿಷ್ಕಾರ

ಮದ್ರಾಸಿನ ಪಚ್ಚೆಯಪ್ಪ ಕಾಲೇಜಿನ ವಿದ್ಯಾರ್ಥಿಗಳನ್ನು ಅನುಸರಿಸಿ ಅಲ್ಲಿನ ಸರ್ಕಾರಿ ಆರ್ಟ್ಸ್ ಕಾಲೇಜಿನವರಾದ ವಿದ್ಯಾರ್ಥಿಗಳು ನೆನ್ನೆ ಕಾಲೇಜಿಗೆ ಹೋಗದೆ "ಕೋಮುವಾರು ಆಜ್ಞೆ" ಬೇಕೆಂದು ಬೋರ್ಡುಗಳನ್ನು ಬರೆದು ಪ್ರದರ್ಶನ ಮಾಡಿದರು. ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕೆಂದೂ, ರಾಜ್ಯಾಂಗದಲ್ಲಿ ತಿದ್ದುಪಡಿಯಾಗಬೇಕೆಂದೂ ನಿರ್ಣಯ ಮಾಡಿದರು. ಸ್ವಲ್ಪ ಹೊತ್ತಿನ ನಂತರ ಕಾಲೇಜಿಗೆ ಅನೇಕ ಹುಡುಗರು ಹೋದರು.

ಟೆಲಿಫೋನ್ ಮೂಲಕ 'ನಿಕಾ'

ಕರಾಚಿಯಲ್ಲಿರುವ ಮಿಲಿಟರಿ ಅಧಿಕಾರಿ ಹಮೀದ್ ಹುಸೇನರು ಕಾನ್ಪುರದ ನಿವಾಸಿ ಅಖಾ ಬೇಗಂರವರೊಡನೆ ಟೆಲಿಫೋನ್ ಮೂಲಕ ನೆನ್ನೆ ಮದುವೆಯಾದರು. ತಾವು ಪಾಕಿಸ್ತಾನವನ್ನು ಬಿಟ್ಟು ಬರಲು ಸಾಧ್ಯವಿಲ್ಲವಾದುದರಿಂದ ಟೆಲಿಫೋನ್ ಮೂಲಕವೇ "ನಿಕಾ" ಮಾಡಿಕೊಂಡರೆಂದು ವರದಿಯಾಗಿದೆ.

ರಕ್ತದ ಮಳೆ

ಆಂಧ್ರ ದೇಶದ ಒಂಗೋಲಿನಲ್ಲಿ ರಕ್ತದ ಮಳೆಯು ಬಂದ ಪ್ರಸಂಗವು ವರದಿಯಾಗಿದೆ. ಅಲ್ಲಿನ ಬಯಲು ಪ್ರದೇಶದಲ್ಲಿ ಹರಿಯುತ್ತಿದ್ದ ಕಾಲುವೆಯ ಬಾಲಕರ ಬಟ್ಟೆಯನ್ನು ಇದರಿಂದ ತೋಯ್ದು ಹೋಗಿಬಿಟ್ಟಿತು. ವೈದ್ಯರೊಬ್ಬರು ಮಳೆಯ ಹನಿಯನ್ನು ಪರೀಕ್ಷಿಸಿ ಅದು ಸಹಜವಾದ ರಕ್ತವೇ ಎಂದು ನಿರ್ಧರಿಸಿದರು.

ರಜಪುತಾಣಿಯಲ್ಲಿದ್ದ ಸಕ್ಕರೆ ಚೀಲಗಳ ಪತ್ತೆ

ರಾಜಧಾನಿಯ ಶ್ರೀ ರಾಮ ಸ್ಟೋರ್ಸ್ ಎಂಬುವರ ಹೆಸರಿಗೆ ಬಂದಿರುವ ನೀರು ಪೆಟ್ಟಿಗೆಗಳನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ನೆನ್ನೆ ಶೋಧಿಸಿದಾಗ ಅವುಗಳಲ್ಲಿ ಸಕ್ಕರೆಯಿದ್ದುದು ಪತ್ತೆಯಾಗಿದೆ. ತನಿಖೆ ನಡೆಯುತ್ತಿದೆ.

ಗಣ್ಯ ಸಾವು

ಬಿ. ಸುಬ್ಬಯ್ಯ ಶೆಟ್ಟಿಯವರು ಮಲ್ಲೇಶ್ವರಂ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೯ ಗಂಟೆಗೆ ಬ್ರಿಗೇಡ್ ಶ್ರೀ ಸೀತಾರಾಮ ಭಟ್ಟರವರಿಂದ 'ಸತ್ಯಮೂರ್ತಿ' ಎಂಬ ವಿಚಾರದ ಸನ್ಮಾನ ಸಭೆ ನಡೆಯುವುದು.

ಸ್ವಾತಂತ್ರ್ಯ ದಿನಾಚರಣೆಗೆ ರಜಾ

ಕಾರ್ಯಕ್ರಮದ ಬಗ್ಗೆ ಸರ್ಕಾರದ ಸೂಚನೆ

ಸ್ವಂ. ಸು. ಪ್ರೋ] ಬೆಂಗಳೂರು ೫

ಈ ವರ್ಷವೂ ಸಹ ಹಿಂದಿನಂತೆ ಸಂಸ್ಥಾನದಲ್ಲಿ ಈ ತಿಂಗಳು ೧೫ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯನ್ನು ಹೆಚ್ಚು ಆಡಂಬರವಿಲ್ಲದೆ ನಡೆಸಬೇಕೆಂದು ಸರ್ಕಾರದವರು ತಿಳಿಸಿರುತ್ತಾರೆ. ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳ ಮೇಲೂ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂದು ತಿಳಿಸಲಾಗಿದೆ. ಬೆಂಗಳೂರಿನಲ್ಲಿ ಆ ದಿನ ನಡೆಯುವ ಧ್ವಜಾರೋಹಣ ಸಮಾರಂಭವನ್ನು ಮುಖ್ಯ ಮಂತ್ರಿಗಳು ನೆರವೇರಿಸುವರು. ಆ ದಿನ ಜಿಲ್ಲಾ ಆಫೀಸು, ಕೋರ್ಟು, ಶಾಲಾ ಮತ್ತು ಸಾರ್ವಜನಿಕ ಸಂಸ್ಥೆಗಳಿಗೂ ರಜಾ ಕೊಡಲಾಗುವುದು. ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆದಿನ ಸಂಬಳ ಸಹಿತ ರಜವನ್ನು ಕೊಡಬೇಕೆಂದು ಪ್ರಾರ್ಥಿಸಲಾಗಿದೆ. ಕಾರ್ಮಿಕರು ಅದರ ಹಿಂದಿನ ಅಥವಾ ಮುಂದಿನ ಭಾನುವಾರಗಳಲ್ಲಿ ಕೆಲಸ ಮಾಡಿ ಉತ್ಪತ್ತಿಯು ಕಡಿಮೆಯಾಗದಂತೆ ಮಾಡಬೇಕೆಂದು ಕೋರಲಾಗಿದೆ.

ಪಿ. ಶಂಕರಶೆಟ್ಟರು ಅಡ್ವೊಕೇಟ್ ಜನರಲ್ಲರೇ?

ಈ ದಿನ ಶ್ರೀ ಕೆ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ಸಭೆಯು ನಡೆದು ಅಡ್ವೊಕೇಟ್ ಜನರಲ್ಲರ ನೇಮಕದ ವಿಷಯವು ಚರ್ಚೆಯಾಯಿತು. ಮೈಸೂರಿನ ಶ್ರೀ ಪಿ. ಶಂಕರಶೆಟ್ಟರು ಆ ಸ್ಥಾನಕ್ಕೆ ನೇಮಕವಾಗಬಹುದೆಂದು ತಿಳಿಯಲಾಗಿದೆ.

ಶ್ರೀ ಬಿ. ವಾಸುದೇವ ಮೂರ್ತಿಯವರು ಗುರುವಾರ ಹೈಕೋರ್ಟಿನ ನ್ಯಾಯಾಧೀಶರಾಗಿ ಅಧಿಕಾರ ವಹಿಸಿದರು.

ರಿಸ್ಟ್ರೋಯೇಷನ್ ಪ್ಲಾನ್ ಸ್ಕೀಮ್

ಮೈಸೂರು ತಾಲ್ಲೂಕು ಕಛೇರಿಯಲ್ಲಿ, ಸಬ್ ಡಿವಿಷನ್ ಅಧಿಕಾರಿಗಳಾದ ಶ್ರೀ ವಿಜಯರಾಘವ ರೆಡ್ಡಿಯವರು ಮೇಲ್ಕಂಡ ಪ್ಲಾನಿನ ಪ್ರಾರಂಭೋತ್ಸವವನ್ನು ಈ ಬೆಳಗ್ಗೆ ನೆರವೇರಿಸಿದರು. ಶ್ರೀ ಎಚ್. ಕೆ. ಪುಟ್ಟರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಉಪ ಚುನಾವಣೆಗೆ ಉಮೇದುವಾರರು

ಸ್ವಂ. ಸು. ಪ್ರೋ] ಬೆಂಗಳೂರು ೫

ಶಾಸನ ಸಭೆಗೆ ನಡೆಯಬೇಕಾಗಿರುವ ಉಪ ಚುನಾವಣೆ ಸಂಬಂಧವಾಗಿ ಈ ದಿನ ನಾಮ ಪತ್ರವನ್ನು ಸ್ವೀಕರಿಸಲು ಕಡೆಯ ದಿನ. ಇಂದು ನಗರದ ೧ ಜಾಗಕ್ಕೆ ಕಾಂಗ್ರೆಸ್ಸಿನ ಪರವಾಗಿ ಶ್ರೀ ವಿ. ಎಚ್. ನಾರಾಯಣರಾಯರೂ, ಸ್ವತಂತ್ರರಾಗಿ ಶ್ರೀ ಟಿ. ಎಸ್. ಕೃಷ್ಣಸ್ವಾಮಿ ಶೆಟ್ಟಿ, ಶ್ರೀ ನಾಗಲಿಂಗ ಸಂಜೀವಯ್ಯ, ಡಾ॥ ಕೆ. ಆರ್. ಶ್ರೀಕಂಠೇಶ್ವರ್ ಮತ್ತು ಶ್ರೀ ಜಿ. ವಿ. ರಾಮಸ್ವಾಮಿ ರವರೂ ಅರ್ಜಿ ಸಲ್ಲಿಸಿರುವರು. ಜಿಲ್ಲೆಯ ಒಂದು ಸ್ಥಾನಕ್ಕೆ ಕಾಂಗ್ರೆಸ್ಸಿನ ಪರ ಶ್ರೀ ಕೆ. ರಾಮಯ್ಯ ರೆಡ್ಡಿಯವರೂ, ಸ್ವತಂತ್ರರಾಗಿ ಶ್ರೀ ಬಿ. ಚನ್ನಭೈರೇಗೌಡರೂ ನಿಂತಿರುವರು.

ಭಾರತ ರಷ್ಯಗಳಿಗೆ ರಹಸ್ಯ ಒಪ್ಪಂದವಿಲ್ಲವೆಂದು ನೆಹರು

ಕೇಂದ್ರ ಪಾರ್ಲಿಮೆಂಟಿನಲ್ಲಿ ಕೊರಿಯಾ ಬಗ್ಗೆ ನೆನ್ನೆ ಸರ್ಕಾರದ ನೀತಿಯನ್ನು ಕುರಿತು ನಡೆದ ಚರ್ಚೆಯು ಮುಗಿಯಿತು. ಕೊನೆಗೆ ನೀತಿಯು ಅಂಗೀಕೃತವಾಯಿತು. ಈ ಸ್ವಾಮು ಪ್ರಸಾದ ಶಂಬುನಾಥರವರು ಸರ್ಕಾರದ ನೀತಿಯನ್ನು ತೀವ್ರವಾಗಿ ಟೀಕಿಸಿ, ಕೊರಿಯಾದಲ್ಲಿ ಮಹಾರಾಷ್ಟ್ರಗಳು ಪ್ರವೇಶಿಸಕೂಡದೆಂದು ಭಾರತವು ಹೇಳಬೇಕಾಗಿತ್ತೆಂದು ತಿಳಿಸಿದರು. ರಾಜಾಜಿಯವರು ಮಾತನಾಡಿ ವಿಶ್ವಸಂಸ್ಥೆಯು ಏಷ್ಯಾ ರಾಷ್ಟ್ರಗಳಿಗೆ ಒಂದು ಕೈಗೊಂಬೆಯಾಗಿದೆಯೆಂದು ತಿಳಿಸಿ, ನೆಹರೂರವರ ನೀತಿಯನ್ನು ಸಮರ್ಥಿಸಿದರು. ಚರ್ಚೆಗೆ ಉತ್ತರ ಕೊಡುತ್ತಾ ಪ್ರಧಾನಿಯವರು ಭದ್ರತಾ ಸಮಿತಿಯಲ್ಲಿ ಸ್ಥಾನವನ್ನು ಗಳಿಸಿಕೊಳ್ಳಲು ಭಾರತವು ಆತುರವಾಗಿಲ್ಲವೆಂದೂ, ಭಾರತಕ್ಕೂ ರಷ್ಯಕ್ಕೂ ಯಾವ ವಿಧವಾದ ರಹಸ್ಯ ಒಪ್ಪಂದವೂ ಆಗಿಲ್ಲವೆಂದೂ ತಿಳಿಸಿದರು.

ಗಂಡನ ಹಿಂಸೆ ತಡೆಯಲಾರದೆ ಪತ್ನಿಯ ಆತ್ಮಹತ್ಯೆ

ರಾಜಧಾನಿಯ ಬೆಳ್ಳಿಕಟ್ಟೆಗೆ ಸಮೀಪದಲ್ಲಿ ವಾಸವಾಗಿರುವ ಕೆಂಚಯ್ಯನೆಂಬುವರ ಪತ್ನಿ ಬೋರಮ್ಮ ಎಂಬ ೧೮ ವರ್ಷದ ಹುಡುಗಿಯು ಗಂಡನ ಹಿಂಸೆಯನ್ನು ತಾಳಲಾರದೆ ನೆನ್ನೆ ಬೆಳಗಿನ ಝಾವ ೫ ೫ ಗಂಟೆಯಲ್ಲಿ ಸೀಮೆಯೆಣ್ಣೆ ಸುರಿದು ಬೆಂಕಿ ಹಚ್ಚಿಕೊಂಡಳೆಂದೂ, ಆಸ್ಪತ್ರೆಗೆ ಸಾಗಿಸಿದರೂ, ಗುಣವಾಗದೆ ಮೃತಳಾದಳೆಂದೂ ವರದಿಯಾಗಿದೆ. ಆಕೆಗೆ ಮದುವೆಯಾಗಿ ಮೂರು ತಿಂಗಳು ಮಾತ್ರವಾಗಿತ್ತು.

ಇಂಜಿನ್ನಿಗೆ ಸಿಕ್ಕಿ ಕೈಲಿದ್ದ ಕಾರ್ಮಿಕನ ಮರಣ

ನೆನ್ನೆ ಮಧ್ಯಾಹ್ನ ರೈಲ್ವೆ ಸ್ಟೇಷನ್ ಬಳಿ ಒಂದು ಇಂಜಿನ್ನು ಹಿಮ್ಮುಖವಾಗಿ ಬರುತ್ತಿದ್ದಾಗ ಅದಕ್ಕೆ ಅಕಸ್ಮಾತ್ ಕಾಯಿಂಟ್ಸ್‌ಮನ್ ತಿಮ್ಮಯ್ಯನೆಂಬುವನು ಸಿಕ್ಕಿ ಗಾಯಗೊಂಡನು. ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸುವಾಗ ಅಲ್ಲಿ ಅವನು ಮರಣ ಹೊಂದಿದನೆಂದು ವರದಿಯಾಗಿದೆ.

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕ ಸಂಘದ ದಿನಾಚರಣೆ

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ದಿನಾಚರಣೆಯು ನಾಳೆ ಮಧ್ಯಾಹ್ನ ೩ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯುವುದು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವ

ಮೈಸೂರು ೫

ಶ್ರೀಮನ್ ಮಹಾರಾಜರವರ ೩೨ನೇ ವರ್ಧಂತಿ ಉತ್ಸವವು ನಗರದ ನಾನಾ ಭಾಗಗಳಲ್ಲಿ ನೆನ್ನೆ ಮತ್ತು ಇಂದು ನಡೆದವು ಶಾಲೆಗಳಲ್ಲಿ ಈ ದಿನ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಕನ್ನೇಗೌಡನ ಕೊಪ್ಪಲಿನ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಈ ಬೆಳಿಗ್ಗೆ ಸಮಾರಂಭವೊಂದು ಶ್ರೀ ಅರಸಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ದೇವತಾ ಪ್ರಾರ್ಥನೆ ಮುಖ್ಯಾಂದ ಸಂಧಾಷಣೆಗಳಾದ ನಂತರ ಆದಿಕರ್ನಾಟಕ ಪಾಠಶಾಲೆಯ ಹೆಡ್ಮಾಸ್ಟರ್ ಶ್ರೀ ಗುಂಡಪ್ಪನವರು ೩೨ ದು ವರ್ಷದ ಸಂಕ್ಷಿಪ್ತ ಚರಿತ್ರೆಯ ಬಗ್ಗೆ ಭಾಷಣ ಮಾಡಿದರು ಅಧ್ಯಕ್ಷರು ಉತ್ಸವದ ಮಹತ್ವವನ್ನು ವಿವರಿಸಿ ಬಾಲಕಿಯರಿಗೆ ಹಿತ ವಚನಗಳನ್ನು ನುಡಿದರು ರಾಷ್ಟ್ರಗೀತೆ ವಂದನಾರ್ಪಣೆ ಪತ್ರ ಪುಷ್ಪ ತಾಂಬೂಲಾದಿಗಳ ವಿನಿಯೋಗದ ನಂತರ ಸಮಾರಂಭವು ಮುಕ್ತಾಯವಾಯಿತು

ವಿದ್ಯಾ ಸಚಿವರಾದ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ರಾಜಧಾನಿಯ ವಿದ್ಯಾ ವರ್ಧಕ ಹೈಸ್ಕೂಲಿನಲ್ಲಿ ಉತ್ಸವವನ್ನು ಆಚರಿಸಲಾಯಿತು ಸಚಿವರು ಸೂಕ್ತ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಹಿತ ವಚನವನ್ನು ನುಡಿದರು ಅಧ್ಯಕ್ಷ ಶ್ರೀ ಎಸ ಚನ್ನಯ್ಯನವರು ಬಂದಿದ್ದ ಅತಿಥಿಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನೂರಡಿ ರಸ್ತೆಯಲ್ಲಿರುವ ಧೌಪ್ರಿ ಹೋಂ ಬಾಳೆ ರಂಗಯ್ಯನವರ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳು ನೆನ್ನೆ ಸಭೆ ನಡೆಸಿ ಶ್ರೀಮನ್ ಮಹಾರಾಜರ ಶ್ರೇಯ ಪ್ರಾರ್ಥನೆ ಮಾಡಿದರು.

ಚಾಮುಂಡಿಪುರದ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ನೆನ್ನೆ ಬೆಳಿಗ್ಗೆ ೮೦೦ ಮಂದಿ ವಿದ್ಯಾರ್ಥಿಗಳು ಉತ್ಸವವನ್ನು ಆಚರಿಸಿದರು ಶ್ರೇಯಃ ಪ್ರಾರ್ಥನೆಗಳು ನಡೆದ ನಂತರ ಸಿಹಿ ತಿಂಡಿಯನ್ನು ಹಂಚಲಾಯಿತು

ಮೈಸೂರು. ಪ್ರಸನ್ನ ಹಾಲಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಫಾರ್ ಮೈನ್ಸ್ ಅಂಬಳೆ ಗ್ರಾಂಡ್ ಫಂಡಿಕೆ ಎ ನಿ ಸ ಸ ದ

ಸಂತಾನ ಸಿಂಧೂರ

ಬಹಿಷ್ಠ ಸಂಬಂಧದ ಹೊಟ್ಟೆ ನೋವಿಗೆ ಗ್ಯಾರಂಟೀ ಔಷಧ ಕ್ರಯ ೧ ಸೀಸ ರೂ ೨ ೦ ೦ ಪ್ಯಾಕಿಂಗ್ ಮತ್ತು ಟ ಖ ರ್ಚು ಅತಿ

ತಯಾರಕರು

ಎ ರಾಮಸ್ವಾಮಿ ಅಯ್ಯರ್,

ಅಂಬಳೆ ಯಳಂದೂರು

ಇವರು ಮೈಸೂರು ಸಿಟಿ ಕೃಷ್ಣರಾಜ ಪೊಲೀಸ್ ಸ್ಟೇಷನ್ ಎದುರು ನೆಲ್ಸಿನ ಕೊಳದ ಬೀದಿ 'ಸಂತಾನ ಸಿಂಧೂರ' ಆಫೀಸಿನಲ್ಲಿ 2-8-50ರ ಬಾಗಾಯ್ತು 6-8 50ರ ವರೆಗೆ ಕ್ಯಾಂಪ್ ಮಾಡುತ್ತಾರೆ

ನೋಡತಕ್ಕ ಕಾಲ-ಬೆಳಿಗ್ಗೆ ೮ರಿಂದ ೧೧ ಮಧ್ಯಾಹ್ನ ೨ ರಿಂದ ೫ ಘಂಟೆ

ಹೆಡ್ ಆಫೀಸ್ ಅಂಬಳೆ ಪೋಸ್ಟ್, ಯಳಂದೂರು ತಾಲ್ಲೋಕ್

ಬೊಂಬಾಯಿಯಲ್ಲಿ ಕಾಳಸಂತೆ ವ್ಯಾಪಾರವಿಲ್ಲವೇ

ಬೊಂಬಾಯಿ ಸರಬರಾಜು ಶಾಖಾ ಮಂತ್ರಿಗಳು ಅಲ್ಲಿ ಕಾಳ ಸಂತೆ ವ್ಯಾಪಾರವೇ ಇಲ್ಲವೆಂದು ಹೇಳಿರುವ ಬಗ್ಗೆ ಅಲ್ಲಿನ ನಾಗರಿಕನೊಬ್ಬನು ಸಚಿವರಿಗೆ ಸವಾಲ್ ಹಾಕಿ ತನಗೆ ಒಂದು ನಿಯಮಿತ ಅವಧಿಯನ್ನು ಕೊಟ್ಟರೆ ಅದರೊಳಗೆ ಕಾಳ ಸಂತೆಯಲ್ಲಿ ಒಂದು ಸಾವಿರ ಟನ್ ಆಹಾರ ಬೇಕಾದ ಷ ತ ನು ಕೊಡ ವುದಾಗಿ ತಿಳಿಸಿರುವನೆಂದೂ ಇಷ್ಟು ಮಂತ್ರಿಗಳು ಬಿಟ್ಟ ಆತನ ಸಹಾಯದಿಂದಾಗಿ ಸಂಗ್ರಹದ ರಾಶಿಗಳನ್ನು ಹಿಡಿಯಲಾಗುವುದಾಗಿ ತಿಳಿಸುವರೆಂದೂ ವರದಿಯಾಗಿದೆ

ಕಾಲೇಜು ವ್ಯಾಸಂಗದ ಬಗ್ಗೆ ಅಂಕಿ ಅಂಶಗಳು

ಭಾರತದ ಕಾಲೇಜುಗಳಲ್ಲಿ ವ್ಯಾಸಂಗದ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸಲು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ಹೇಳಲಾಗಿದೆ ಈ ಬಗ್ಗೆ ಸಾಧಾರಣ ಸರ್ವೇಯನ್ನು ಮಾಡಲಾಗುವುದು ನೌಕರಿಯಲ್ಲಿರುವ ಪಂಡಿತರು, ಉಪಾಧ್ಯಾಯರು ವಿದ್ಯಾರ್ಥಿ ವೇತನಗಳು ಮುಂತಾದ ವಿಷಗಳ ಬಗ್ಗೆ ವಿವರಗಳ ಶೇಖರಣೆಯನ್ನು ಮಾಡಲಾಗುವುದು

ನವಗ್ರಹ ವಿಗ್ರಹಗಳ ಭಿನ್ನ

ತಿರುಚಿರಾಪಳ್ಳಿಯ ಒಳ ಕುಳಿತಲೈ ಎಂಬಲ್ಲಿ ಶಿವ ದೇವಾಲಯದಲ್ಲಿ ಕೆಲವು ದಿನಗಳ ಹಿಂದೆ ಯಾರೋ ದುಷ್ಕರ್ಮಿಗಳು ಉತ್ಸವದ ವಿಗ್ರಹವನ್ನು ಕಿತ್ತುಹಾಕಿ ನವಗ್ರಹ ವಿಗ್ರಹಗಳನ್ನು ಭಿನ್ನ ಮಾಡಿರುವರೆಂದು ವರದಿಯಾಗಿದೆ

ಶ್ರೀ

ಗಣೇಶಾ ಟಾಕೀಸ್

5-8-50ರಿಂದ ದಿನವಹಿ 3 ಆಟಗಳು

ಪ್ರೊ ಮುಡಿ

(ತಮಿಳು)

ಪಾತ್ರ ವಹಿಸಿದ್ದ ಭಾರತಿ ಮಾಧುರಿ ದೇವಿ, ಕಾಳಿ ಎನ್ ರತ್ನಂ ಬಳಿಕಾ ಮತ್ತು ಪದ್ಮಿನಿ

ರಾಜಕಮಲ್,

ಮೈ ಸೂ ರು

4-8 50ನೇ ಶುಕ್ರವಾರದಿಂದ

ಆಶ್ಚರ್ಯ ಪ್ರಾರಂಭ ದಿನವಹಿ 3ಆಟಗಳು

ಕೀಲು ಗುರ್ರಂ

(ತೆಲುಗು ಚಿತ್ರ)

ಅಂಜಲಿ ದೇವಿ ನಾಗೇಶ್ವರರಾವ್ ಸುಬ್ಬರಾವ್

ಬೆಳಗಿನ ಪ್ರದರ್ಶನಗಳು 4-8 50ರಿಂದ 3 ದಿನಗಳು ಮಾತ್ರ

- ಅಲಿಬಾಬಾ -

ಪ್ರಕಾಶ್, ಶಾಂತಾ ಪಟೇಲ್ ಪಾತ್ರವಹಿಸಿರುವ ಹಿಂದಿ ಚಿತ್ರ

Edited, printed and published by A K Nagarajan, at Sadhvi Press D Subbiah Road, Mysore

ಸಾರನಾಥದಲ್ಲಿ ಪ್ರಾಣಿ ಬಲಿಗೆ ನಿಷೇಧ

ಕಾಶಿಯ ಬಳಿ ಬೌದ್ಧ ಕ್ಷೇತ್ರವಾದ ಸಾರನಾಥದಲ್ಲಿ ಕುರಿ, ಕೋಳಿ ಮೊದಲಾದ ಪ್ರಾಣಿಗಳ ಬಲಿ ಕೊಡಕೂಡದೆಂದು ಕಾಶಿ ಡಿವಿಜನ್ನಿನ ಕಮಿಷನರು ಆಜ್ಞೆ ಮಾಡಿರುತ್ತಾರೆ

THE COORG & MYSOSE COFFEE (1937) LTD

— o —

Applications are invited from contractors to run a canteen Terms etc on application

THE MANAGER,
CHAMUNDI CURING WORKS,
Mysore

ರಘುಲಾಲ್ & ಕೋ,

ಔಷಧ ವ್ಯಾಪಾರಗಳು

ಸಯ್ಯಾಜಿರಾವ್ ರಸ್ತೆ, ಮೈಸೂರು

ರಘುಲಾಲ್ ಅಂಡ್ ಕಂಪನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ರಸ್ತೆ (ವಿನಾಯಕಾರ್ಯರ ರಸ್ತೆ) ಬೆಂಗಳೂರು.

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ನಾಗಪುರ್ ಸೀರೆಗಳಿಗೆ

M. V. ಭೋಜಯ್ಯ ಅ ಎ

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಕ್ರಯಕ್ಕಿದೆ

ಡೋರ್ ನಂ 2531, ಚಾಮುಂಡಿ ಎಕ್ಸ್‌ಟೆನ್ಶನ್ ಮಳಿಗೆ ಮತ್ತು ಮನೆ

— ವಿವರಗಳಿಗೆ —

ಆರ್ ಗುಂಡೂರಾವ್,

ಪ್ಲೀಡರ್, ಶ್ರೀರಾಂಪೇಟೆ, ಮೈಸೂರು

ಚಾಮುಂಡೇಶ್ವರಿ ಟಾಕೀಸ್

5-8-50 ರಿಂದ ದಿನವಹಿ 3 ಆಟಗಳು

ಮಹಿಳೆಯರೂ ದೇಶೀಯರೆಲ್ಲರೂ ತಪ್ಪದೆ ನೋಡಲೇಬೇಕಾದ ಚಿತ್ರ

ಶಹನಾಜ್

(ಹಿಂದಿ)

ಪಾತ್ರ ಬೇಗಂ ಪ್ಯಾರ ಮತ್ತು ಅಖ್ತಾರಿ ಅವಿಸ್ಮರಣೀಯ ಕಥಾನಕ ಹಿತ್ಕರ ಸಂಗೀತ

SRI LAKSHMI, ★ From 5—8—1950
MYSORE Daily 3 Shows

THE BANDIT OF SHERWOOD FOREST

(Technicolor

Starring Cornel Wilde Anita Louise and Others

ಮೈಸೂರು ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್,
ಗಾಂಧಿ ಚೌಕ, ಮೈಸೂರು

ನೋಟೀಸ್

ಈ ಕೆಳಗೆ ಕಂಡ ಕೇಸುಗಳಲ್ಲಿ ಪ್ರತಿವಾದಿಯಿಂದ ಬರಬೇಕಾಗಿರುವ ಮೊಬಲಗುಗಳಿಗಾಗಿ ಮೈಸೂರು ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರರವರ ಕೋರ್ಟಿನಲ್ಲಿ ದಾವಾ ದಾಖಲಿಸ್ಪಡಿ ಸದರಿ ಕೇಸುಗಳು 12-8-50ಕ್ಕೆ ಹಿಯರಿಂಗು ಇರುತ್ತೆ ಸದರಿ ಕೇಸುಗಳಲ್ಲಿನ ಪ್ರತಿವಾದಿಗಳು ತನೋಟೀಫಿಕೇಷನ್ನನ್ನು ಸೈಕಲ್ ನೋಟೀಸುಎಂದು ಭಾವಿಸಿ ಮೇಲ್ಕಂಡ ಹಿಯರಿಂಗು ತಾರೀಖಿಗೆ ಅಸಿಸ್ಟೆಂಟ್ ರಿಜಿಸ್ಟ್ರಾರರವರ ಕೋರ್ಟಿಗೆ ಹಾಜರಾಗತಕ್ಕದ್ದು ತಪ್ಪಿದಲ್ಲಿ ಸದರಿಯವರುಗಳ ಮೇಲೆ ಏಕ ಪಕ್ಷದ ಡಿಕ್ರಿ (Ex parte decree) ಪಡೆಯಲಾಗುತ್ತೆ ನಂತರ ಬರಬಹುದಾದ ಯಾವ ತಕರಾರನ್ನೂ ಅಂಗೀಕರಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೆ

ಸೀರಿಯಲ್ ನಂ	ಕೇಸ್ ನಂಬರು	ಪ್ರತಿವಾದಿಯ ಹೆಸರು, ವಿಳಾಸ
1	812 of 48-49	ಕೆ ಶ್ರೀನಿವಾಸಮೂರ್ತಿ, ಮಡಿವಾಳ್ ಪ್ಯಾಲೇಸ್ ಹಿಂದೆ ಚಾಮುಂಡಿಪುರಂ, ಮೈಸೂರು
2)	861 of 48-49	ಎ ಶ್ರೀನಿವಾಸನ್ S/o ಎ ದೇಶಿಕಾಚಾರ್, 2780 ೩ನೇ ಮೆಯಿನ್ ರೋಡು ವಾಣಿವಿಲಾಸ ಮೊಹಲ್ಲಾ ಮೈಸೂರು.
3	2 of 49 50	ಎಚ್ ನರಸಿಂಗರಾವ್ ಫರಾಶ ವಾರೆಸ್ಸಾರ್ ಅಂಡ ಕಮಿಂಗ್ಸ ಸಾಮಗಂಡಲು ಗೋಲ್ಡನ್ ನೂರು ತಾಲ್ಲೋಕು
4	91 of 49 50	— do —
5)	155 of 49 50	ಎ ರಾಮಸ್ವಾಮಯ್ಯ, ರಿಟೈರ್ಡ್ ರೆವಿನ್ಯೂ ಕ್ಲಾರ್ಕ್ 2981/1 ೨ನೇ ಮೈನ್ ರೋಡು ವಾಣೀವಿಲಾಸ ಮೊಹಲ್ಲಾ ಮೈಸೂರು
6	163 of 49 50	ಎ ಚನ್ನಪ್ಪ ನಾಯುಡು ಪ್ರಾಯೋಟ್ಸ್ ಮನ್ ಫೂಟ್ ಸ್ಟೋರ್, ಮೈಸೂರು
	254 of 49 50	ಕೆ ರಂಗಯ್ಯಂಗಾರ್ ಗೌ ರೈಸ್ ಆಫೀಸರ್ಸ್ ಏಜಂಟ್, ಮಾಗಡೀ ರೋಡು ಮಲ್ಲೇಶ್ವರಂ ಬೆಂಗಳೂರು

ಜಿ. ವಿ. ದೇಶಿಕಾಚಾರ್,
ಗೌ ಕಾರ್ಯದರ್ಶಿ

ಪೋನ್ ನಂ. 792 ವಂದೇ ಮಾತರಂ ಬಿಡಿಪ್ರತಿ ೬ ಕಾಸು

ಸಾಧ್ವಿ

ಸಂಪುಟ ೫] ಮಂಗಳವಾರ ೮-೮-೫೦ [ಸಂಚಿಕೆ ೧೭

ಬರ್ಮಾದಿಂದ ಭಾರತಕ್ಕೆ ಸಾವಿರ ಟನ್ ಅಕ್ಕಿ

ರಾಜ್ಯಾಂಗದ ಬದಲಾವಣೆಗಾಗಿ ಮದ್ರಾಸಿನ ನಿಯೋಗ

ಕೊಯಮತ್ತೂರು- ರಾಜ್ಯಾಂಗ ಪ್ರಕಾರ ಅಲ್ಪಸಂಖ್ಯಾತರಿಗೆ ಅವಕಾಶವಿಲ್ಲವು ಹೈಕೋರ್ಟಿನ ತೀರ್ಪಿನಿಂದ ಅಲ್ಲಿಯಾಗಿ ಅನೇಕರಿಗೆ ತೊಂದರೆಯಾಗಿದೆಯೆಂದೂ, ಆದರ ಬಗ್ಗೆ ರಾಜ್ಯಾಂಗದಲ್ಲಿಯೇ ಬದಲಾವಣೆ ಮಾಡುವುದು ಅವಶ್ಯಕವೆಂದೂ ಅದಕ್ಕಾಗಿ ಪ್ರಧಾನಿ ನೆಹರೂರವರಲ್ಲಿ ಮದ್ರಾಸಿನಿಂದ ಒಂದು ನಿಯೋಗವನ್ನು ಕಳುಹಿಸಬೇಕೆಂದೂ, ಅಲ್ಲಿನ ಮುಖ್ಯ ಮಂತ್ರಿಗಳನ್ನು ಕಮಿಟಿ ನಾಡು ಕಾಂಗ್ರೆಸ್ಸಿನ ೩ ಜನ ಸದಸ್ಯರು ಪ್ರಾರ್ಥಿಸಿರುತ್ತಾರೆ

ರಷ್ಯದ ಯಂತ್ರ ಸಾಮಾಗ್ರಿಗಳೆಲ್ಲವನ್ನುರುಳಿಸಲಾಯಿತು

ಪೂರ್ವ ಜರ್ಮನಿಯಿಂದ ರಷ್ಯನರು ಯುದ್ಧ ಪರಿಹಾರ ರೂಪವಾಗಿ ಪಡೆದ ಯಂತ್ರ ಸಾಮಾಗ್ರಿಗಳನ್ನು ರೈಲು ಗಾಡಿಯಲ್ಲಿ ಕೊಂಡೊಯ್ಯುತ್ತಿದ್ದಾಗ ಪೋಲೆಂಡಿನ ವಿಧ್ವಂಸಕಾರರು ರೈಲನ್ನು ಉರುಳಿಸಿ ಸಾಮಾಗ್ರಿಗಳನ್ನೆಲ್ಲಾ ನಾಶ ಪಡಿಸಿದರೆಂದು ಹೇಳಲಾಗಿದೆ

ಗಡಿನಾಡಿನ ರೈತರ ಮೇಲೆ ಗುಂಡು

ಗಡಿನಾಡು ಪ್ರಾಂತದಲ್ಲಿ ಒಂದು ಕಡೆ ರೈತರಿಗೂ ಪೋಲೀಸರಿಗೂ ಹೊಡೆದಾಟವಾಗಿ ಪೋಲೀಸರು ಗುಂಡು ಹಾರಿಸಿದುದರ ಪರಿಣಾಮವಾಗಿ ೮ ಜನ ರೈತರು ಮಡಿದರು ಊರಿಗೆ ಅಲ್ಲಿ ಜಮೀನು ಕಂದಾಯವನ್ನು ಹೆಚ್ಚಿಸಲಾಗಿ, ಅದನ್ನು ಕೊಡಲು ರೈತರು ತಿರಸ್ಕರಿಸಿದುದರಿಂದ ಪೋಲೀಸರು ಉಗ್ರ ಕ್ರಮಗಳನ್ನು ಕೈಗೊಂಡರೆಂದು ಹೇಳಲಾಗಿದೆ

ರಷ್ಯವನ್ನೆದುರಿಸಲು ಬ್ರಿಟನ್ ಅಮೆರಿಕಗಳಿಗೆ ಸಾಧ್ಯವಿಲ್ಲ

ಅಮೆರಿಕದ ಸೆನೆಟರರ ಹೇಳಿಕೆ

ರಷ್ಯಕ್ಕೂ ಅಮೆರಿಕಾ ಬ್ರಿಟನ್‌ಗಳಿಗೂ ಭೂ ಯುದ್ಧ ಸಂಭವಿಸಿದರೆ ಕೆಲ ಕಾಲ ರಷ್ಯನರ ಕೈ ಮೇಲಾಗುವುದೆಂದೂ ಆದಕಾರಣ ಪಶ್ಚಿಮ ಯುರೋಪ್ಯ ರಾಷ್ಟ್ರಗಳೆಲ್ಲವೂ ತಮ್ಮ ತಮ್ಮ ಸೇನಾಬಲಗಳನ್ನೂ ಶಸ್ತ್ರಾಸ್ತ್ರಗಳನ್ನೂ ಹೆಚ್ಚಿಸಿಕೊಳ್ಳಬೇಕೆಂದೂ ಅಮೆರಿಕದ ಸೆನೆಟರ್ ಬ್ರಿಡ್ಜಿಂಗ್ಸ್‌ರವರು ಹೇಳಿರುತ್ತಾರೆ ವಿಮಾನಗಳಲ್ಲಿ ಅಮೆರಿಕಕ್ಕೆ ಹೆಚ್ಚು ಪ್ರಾಬಲ್ಯವಿದೆ ರಷ್ಯದ ಭೂಸೈನ್ಯವು ೨೦೦ ಡಿವಿಜನ್‌ಗಳಷ್ಟಿದ್ದು ಪಶ್ಚಿಮ ಯುರೋಪಿನಲ್ಲಿ ಕಾದಲು ಸಿದ್ಧವಿದೆ. ೪೦ ಸಾವಿರ ಟ್ಯಾಂಕುಗಳಿವೆ ರಷ್ಯದೊಡನೆ ಭೂ ಯುದ್ಧ ನಡೆಸಲು ಬ್ರಿಟನ್, ಅಮೇರಿಕಗಳಿಗೆ ಸಾಧ್ಯವೇ ಇಲ್ಲ-ಎಂದು ಅವರ ಅಭಿಪ್ರಾಯ ಪಟ್ಟಿರುತ್ತಾರೆ

ಕೊಳದಲ್ಲಿ ಮುಳುಗಿದ ಶವ

ಚನ್ನರಾಯಪಟ್ಟಣದ ಕೊಪ್ಪಲಿನ ಬಳಿ ಬಸ್ತಿನ ಕಟ್ಟೆಯಲ್ಲಿ ಈ ದಿನ ಸುಮಾರು ೩ ವರ್ಷ ವಯಸ್ಸಿನ ಹೆಣ್ಣು ಮಗುವೊಂದನ್ನು ಮೃತಪಟ್ಟಿದ್ದುದನ್ನು ಲಕ್ಷ್ಮೀಪುರಂ ಪೋಲೀಸರು ಪತ್ತೆ ಹಚ್ಚಿ ಮಹಜರು ನಡೆಸಿದರು. ಮಗುವಿನ ಕೈಯಲ್ಲಿ ನಾಲ್ಕು ಬಳೆಗಳಿದ್ದುವು ಎಡಗೈ ಮೇಲೆ ಹುಟ್ಟುಗಾಯದ ಗುರುತು ಇತ್ತು. ವಾರಸುದಾರರು ಪತ್ತೆಯಿಲ್ಲ

ನ್ಯಾಯಾಧೀಶರುಗಳಿಗೆ ಘೇರಾವೊಯೇ?

ಮೈಸೂರು ೮

ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಟಿ ಎನ್ ಮಲ್ಲಪ್ಪನವರು ನೆನ್ನೆ ಬೆಳಗ್ಗೆ ನಗರದಲ್ಲಿರುವ ಮುಖ್ಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಪರಿಶೀಲನೆಗೆ ಆಗಮಿಸಿದ್ದರು ಸಬಾರ್ಡಿನೇಟ್ ಜಡ್ಜರಾದ ಶ್ರೀ ಸಿ ವಿ ಚನ್ನಪ್ಪನವರನ್ನ ಕರೆ ಕಳುಹಿಸಿ ಅವರಿಂದ ಕೆಲವು ಕಾರ್ಯಗಳನ್ನು ಅವರ ಗಮನಕ್ಕೆ ತಂದು ಎಷ್ಟು ಕೆಲಸ ನಡೆದಿರುವುದಾಗಿ ಪ್ರಶ್ನೆ ಮಾಡಿದರೆಂದೂ ಶ್ರೀ ಚೆನ್ನಬಸಪ್ಪನವರ ೭ ಕಾರ್ಯಗಳನ್ನು ನೋಡಿ ಹೋಗಬೇಕೆಂದು ತಿಳಿಸಿದರೆಂದೂ ಆದರೆ ವೇಳೆ ಇಲ್ಲದೆ ನ್ಯಾಯಾಧೀಶರಿಗೂ ಹೋಗಲು ಬಿಡದ "ಘೇರಾವ್" (ದಾರಿ ಮುಚ್ಚು) ಎಂಬ ಪದದ ಪ್ರಯೋಗವಾಯಿತೆಂದೂ ನಂತರ ಸಬಾರ್ಡಿನೇಟ್ ಜಡ್ಜರು ಅಲ್ಲಿಂದ ಹೊರಟು ಒಂದರೊಡನೂ ಪುನಃ ಹೇಳಿ ಕಳುಹಿದಾಗ ಅವರು ಹಿಂತಿರುಗಿ ಬರಲಿಲ್ಲವೆಂದೂ ವರದಿಯಾಗಿದೆ ಈ ವಿಷಯ ನ್ಯಾಯಾಲಯದ ಆವರಣದಲ್ಲಿ ವಿಶೇಷ ಕೋಲಾಹಲವನ್ನುಂಟು ಮಾಡುತ್ತಿದೆ

ಮಿತ್ರ ಮೇಳ

ವಿ ರಾಮಯ್ಯ ಕಾಲೇಜಿನ ಮಿತ್ರ ಮೇಳದ ಆರಂಭೋತ್ಸವವು ನಾಳೆ ಸಂಜೆ ೫-೩೦ ಗಂಟೆಗೆ ಕಾಲೇಜಿನ ಹಾಲಿನಲ್ಲಿ ಬಿ ಎ ಹಾಲಿನಲ್ಲಿ ನೆರವೇರಿಸಲ್ಪಡುವುದು ನಿವೃತ್ತ ಸಂಸ್ಕೃತ ಪ್ರೊ। ಶ್ರೀ ಹಿ ಆರ್ ನರಸಿಂಹ ಶಾಸ್ತ್ರಿಗಳು ಆರಂಭ ಭಾಷಣ ಮಾಡುವರು ಡಾ। ಎ ವಂ ನ ಟೇಶ್ವರವರು ಅಧ್ಯಕ್ಷತೆ ವಹಿಸುವರು

ಚಾತುರ್ಮಾಸ್ಯ ಸಂಕಲ್ಪ

ಶ್ರೀ ಸಾಗರಕಟ್ಟೆ ಮಠದ ಶ್ರೀ ಶ್ರೀಮತ್ಪ್ರಜ್ಞಾಧಿರಾಜ ತೀರ್ಥ ಶ್ರೀಪಾದಂಗಳವರು ೩-೮-೫೦ನೇ ಗುರುವಾರ ಸಾಗರಕಟ್ಟೆಯಲ್ಲಿ ಚಾತುರ್ಮಾಸ್ಯ ಸಂಕಲ್ಪಕ್ಕೆ ಕುಳಿತಿರುತ್ತಾರೆ ಬೆಳಗ್ಗೆ ಶ್ರೀ ಶ್ರೀಗಳವರಿಗೆ ಪಾದ ಪೂಜೆ ಆದ ನಂತರ ದೇವತಾರ್ಚನೆ ಮುಗಿದನಂತರ ವಿದ್ವಾಂಸರುಗಳೇ ಮೊದಲಾಗಿ ಅನೇಕ ಭಕ್ತರುಗಳಿಗೆ ತೀರ್ಥ ಪ್ರಸಾದವಾದ ನಂತರ ಮಧ್ಯಾಹ್ನ ವೇ। ಬ್ರ।। ವಿದ್ವಾನ್ ಶ್ರೀ ರಾಘವಾಚಾರ್ಯರವರಿಂದ ಶ್ರೀ ಮಧ್ವ ಮುನೀಶ್ವರರ ಚರಿತ್ರೆ ಉಪನ್ಯಾಸವಾಯಿತು ನಂತರ ಪಂಡಿತರಿಗೆ ಫಲ ಮಂತ್ರಾಕ್ಷತೆ ಕೊಟ್ಟು ಶ್ರೀ ಶ್ರೀಗಳವರು ಆಶೀರ್ವಾದಾನುಗ್ರಹ ಮಾಡಿದರು

ಅಡ್ವೊಕೇಟ್ ಜನರಲ್ಲರ ನೇಮಕ

ಸ್ವಂ ವರದಿಗಾರ] ಬೆಂಗಳೂರು ೮

ಬೆಂಗಳೂರಿನ ಪ್ರಮುಖ ವಕೀಲರಾದ ಶ್ರೀ ಎ ಆರ್ ಸೋಮನಾಥ ಅಯ್ಯರವರನ್ನು ಅಡ್ವೊಕೇಟ್ ಜನರಲ್ಲರನ್ನಾಗಿ ೩ ವರ್ಷಕ್ಕೆ ನೇಮಿಸಿ ಈ ದಿನ ಆಜ್ಞೆಯಾಗಿದೆ

ಸಂಸ್ಥಾನದಲ್ಲೂ ಪೆಟ್ರೋಲ್ ಪಡಿತರ ರದ್ದು

ಸಂಸ್ಥಾನದಲ್ಲಿ ಪೆಟ್ರೋಲ್ ಪಡಿತರವನ್ನು ವಜಾ ಮಾಡುವ ವಿಷಯವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದೂ, ಪ್ರಾಯಶಃ ಈ ತಿಂಗಳು ೧೫ನೇ ತಾರೀಖಿನ ವೇಳೆಗೆ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಹೇಳಲಾಗಿದೆ

ಪಬ್ಲಿಕ್ ಸರ್ವಿಸ್ ಕಮಿಷನ್

ಈ ದಿನ ಮಂತ್ರಿ ಮಂಡಲದ ಸಭೆಯಲ್ಲಿ ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸ್ಥಾಪನೆ ವಿಷಯವು ಚರ್ಚಿಸಲ್ಪಟ್ಟಿತು ನಾಳೆಯೂ ಚರ್ಚೆಯು ನಡೆಯುವುದು

ಪೂಣೇಗಾರರ ನಿಧನ

ಶಾಸನ ಸಭೆಗಳ ಮಾಜಿ ಕಾರ್ಯದರ್ಶಿ ಶ್ರೀ ಫಿರೋಜ್ ಷಾ ಪೂಣೇಗಾರರು ನೆನ್ನೆ ದಿನ ಹೃದಯ ಕ್ರಿಯೆ ನಿಂತು ಕಾಲವಾದರು ಅವರ್ಕ್ಯದ ೬೪ ಇವರ 'ಘೂನದ ಗೋಪುರ'ದ ೬೪ ದಲ್ಲಿ ಅಂತ್ಯ ಕ್ರಿಯೆಯು ನಡೆಯುವುದು

ಲಂಚಕ್ಕಾಗಿ ಭಾರೀ ಉದ್ಯೋಗಸ್ಥರ ವಜಾ

ಭಾರತ ಸರ್ಕಾರದ ವ್ಯವಸಾಯ ಇಲಾಖೆಯಲ್ಲಿ ಗೊಬ್ಬರ ಗೋಡೌನ ಡೈರೆಕ್ಟರ್ ಆಗಿದ್ದ ಡಿ ಎಸ್ ಟಿ ಸ್ವಾಮಿಯವರು ಲಂಚ ಪಡೆದರೆಂದು ಅವರನ್ನು ವಜಾ ಮಾಡಲಾಗಿದೆ

ಭಾರೀ ಐಕ್ಯತೆಯನ್ನುಳಿಸಲು ಕಮ್ಯೂನಿಸ್ಟರ ಸಂಚು

ಭಾರತ ಬರ್ಮಾ ಮತ್ತು ಇಂಡೊನೇಷ್ಯಗಳಲ್ಲಿರುವ ಸರ್ಕಾರಗಳನ್ನುರುಳಿಸಲು ಕಮ್ಯೂನಿಸ್ಟರು ರಹಸ್ಯವಾಗಿ ಸಂಚು ನಡೆಸುತ್ತಿರುವುದಾಗಿ ಆಗ್ನೇಯ ಏಷ್ಯದ ಬ್ರಿಟಿಷ್ ಕಮಿಷನರ್ ಜನರಲ್ಲರಾದ ಮಾಲ್ಕಂ ಮ್ಯಾಕ್ ಡೊನಾಲ್ಡ್‌ರು ತಿಳಿಸಿರುತ್ತಾರೆ

ಬಾಮನಗರ-ಮೈಸೂರು ಹಾಸನ ರೈಲ್ವೆ ಮಾರ್ಗ

ಭಾರತ ಸರ್ಕಾರದ ರೈಲ್ವೆ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಶ್ರೀಗಳಾದ ಕೆ ಹೆಚ್ ಮಂಜಪ್ಪ ಮತ್ತು ಟಿ ಚನ್ನಯ್ಯನವರ ಪ್ರಶ್ನೆಗೆ ಲಿಖಿತ ಮೂಲಕ ಉತ್ತರವಿತ್ತು ಬಾಮನಗರ-ಹಳೆಮಂಗಳ ರೈಲ್ವೆಯು ಚಾಮರಾಜನಗರ-ಮೈಸೂರು ಹಾಸನ ರೈಲ್ವೆಯು ಒಂದು ಭಾಗವಾಗಿರುವುದೆಂದು ತಿಳಿಸಿದರು ಆದರೆ ರೈಲ್ವೆಯು ಪ್ರಾಥಮಿಕ ಮತ್ತು ಇಂಜನಿಯರಿಂಗ್ ಸರ್ವೆಯು ಮುಗಿದು, ಅದಕ್ಕಾಗಿ ಸುಮಾರು ೪।। ಲಕ್ಷ ರೂ ವೆಚ್ಚವಾಗಿದೆಯೆಂದೂ, ಚಾಮರಾಜನಗರ-ಮೈಸೂರು ಹಾಸನ ರೈಲ್ವೆ ನಿರ್ಮಾಣಕ್ಕೆ ೪ ಕೋಟಿ ರೂ ವೆಚ್ಚವಾಗಲಿ ಚಾಮರಾಜನಗರ-ಹಳೆಮಂಗಲ ಭಾಗಕ್ಕೇ ೩। ಕೋಟಿ ರೂ ಖರ್ಚಾಗುವುದೆಂದೂ ತಿಳಿಸಿದರು.

ಕೋಲಾರದ ಚಿನ್ನದ ಗಣಿಗಳ ಮಾಲೀಕರ ಪರಿವರ್ತನೆ

ಕೋಲಾರದ ಚಿನ್ನದ ಗಣಿಗಳ ಅಧ್ಯಕ್ಷರಾದ ಶ್ರೀ ಎಂ ಎ ಶ್ರೀನಿವಾಸನವರು ಆ ಕಂಪೆನಿಗಳನ್ನು ಕೊಂಡು ರಾಷ್ಟ್ರೀಕರಣವು ಕಂಪೆನಿಗಳಿಂದ ಮಾಡಲು ರಾಷ್ಟ್ರದ ಕಂಪೆನಿಗಳಾಗಿ ಪರಿವರ್ತಿಸಲು ಸಲುವಾಗಿ ಲಂಡನ್ನಿಗೆ ತೆರಳಿದ್ದು ಕಾರ್ಯವು ಜರುಗುತ್ತಿದೆ

ಭಾರತಕ್ಕೆ ಬರ್ಮಾದಿಂದ ಸಾವಿರ ಟನ್ ಅಕ್ಕಿ ದಾನ

ಭಾರತದ ಬರಗಾಲದ ಪ್ರದೇಶಗಳಲ್ಲಿ ಉಂಟಾಗಿರುವ ಆಹಾರ ಕೊರತೆಯನ್ನು ನಿವಾರಿಸಲು ಬರ್ಮಾ ಸರ್ಕಾರದವರು ಒಂದು ಸಾವಿರ ಟನ್ ಅಕ್ಕಿಯನ್ನು ನಮ್ಮ ದೇಶಕ್ಕೆ ಕೊಡುವುದಾಗಿ ಗೊತ್ತಾಗಿದೆ ಈ ಅಕ್ಕಿಯನ್ನು ಕಳುಹಿಸುವ ಖರ್ಚನ್ನು ಬರ್ಮಾ ಸರ್ಕಾರದವರೇ ವಹಿಸಿಕೊಳ್ಳುವರು ಎಂದು ತಿಳಿದುಬಂದಿದೆ

೪೪೦ ಕೋಟಿ ಪೌಂಡ್ ಆಹಾರ ಧಾನ್ಯ ಕೊರತೆ

ಬರುವ ವರ್ಷದ ಅಂತ್ಯದ ಹೊತ್ತಿಗೆ ೪೪೦ ಪೌಂಡ್ ಆಹಾರ ಧಾನ್ಯದ ಕೊರತೆಯಾಗುವುದೆಂದು ಕೇಂದ್ರ ಆಹಾರ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ

ರಾಷ್ಟ್ರ ಪ್ರಮುಖರುಗಳ ವಿಚಾರಣೆ

ಸಮಾಜವಾದಿಗಳ ಪಕ್ಷದ ಮೈಸೂರು ಶಾಖೆಯ ಅಧ್ಯಕ್ಷರಾದ ಶ್ರೀ ಕೆ ಎಸ್ ಸಂಜೀವಯ್ಯರು ಟೌನ್ ಹಾಲ್ ಮೈದಾನದಲ್ಲಿ "ರಾಷ್ಟ್ರ ಪ್ರಮುಖರ ಪ್ರಚಾರದ ವಿಚಾರಣೆ" ನೆರವೇರಿಸಲಾಗುವುದು ಪ್ರಮುಖರು ಪ್ರಾಂತೀಯ ಪಕ್ಷದ ಅಧ್ಯಕ್ಷರಾದ ಶ್ರೀ ಸಿ ಜಿ ಕೆ ರೆಡ್ಡಿಯವರು ಅಗ್ರಾಸನವನ್ನು ವಹಿಸುವರು ಸಮಾಜವಾದಿ ಮುಖಂಡರುಗಳಾದ ಶ್ರೀ ಎಸ್ ನಾಗಭೂಷಣ, ಬಿ ಶ್ರೀಕಂಠಪ್ಪ ಬಿ. ಕೆ ಗೌಡ, ಚೆನ್ನಗಿರಿ ರಾಮಚಂದ್ರ, ವೈ ಆರ್ ಪರಮೇಶ್ವರಪ್ಪ ಮತ್ತು ಟಿ ವಿ ಶ್ರೀನಿವಾಸರಾವ್ ಮೊದಲಾದವರು ಭಾಷಣ ಮಾಡುವರು ಆಗಸ್ಟ್ ೯ನೇ ತಾರೀಖು ಟೌನ್ ಹಾಲ್ ಮೈದಾನದಲ್ಲಿ ಸಂಜೆ ೫-೩೦ ಗಂಟೆಗೆ ಪಕ್ಷದ ಕಛೇರಿಯಲ್ಲಿ ಸಾರ್ವಜನಿಕರ ಸಭೆಯು ಸೇರುವುದಾಗಿ ಕಾರ್ಯದರ್ಶಿ ಶ್ರೀ ಕೆ ಶಂಕರಪ್ಪನವರು ತಿಳಿಸಿರುತ್ತಾರೆ

ಬೆಂಕಿಯನ್ನು ಪ್ರಯೋಗಿಸಿ ಒಡವೆಗಳ ಅಪಹರಣ

ಅಲಹಾಬಾದಿನ ಒಬ್ಬ ಹುಡುಗಿಯು ಏಳೆಂಟು ಸಾವಿರ ರೂ ಬೆಲೆ ಬಾಳುವ ಒಡವೆಗಳನ್ನು ಅಪಹರಿಸುವ ಕಲುವಾಗಿ ೭ ಜನರ ಇಡೀ ಸಂಸಾರದವರಿಗೆ ಊಟದಲ್ಲಿ ಹುಚ್ಚು ಔಷಧಿ ಬೆರೆಸಿದ ಪ್ರಸಂಗವು ವರದಿಯಾಗಿದೆ. ಅದನ್ನು ಸೇವಿಸಿದ ಕುಟುಂಬದವರೆಲ್ಲರೂ ಪ್ರಜ್ಞೆ ತಪ್ಪಿ ಬಿದ್ದಾಗ ಆಕೆಯು ಒಡವೆಗಳನ್ನು ಅಪಹರಿಸಿಕೊಂಡು ಹೋದಳೆಂದೂ, ಅವರನ್ನು ಆಸ್ಪತ್ರೆಗೆ ಸಾಗಿಸಿದ ನಂತರ ಎಲ್ಲರಿಗೂ ಪ್ರಜ್ಞೆ ಬಂದಿತೆಂದೂ ಹೇಳಲಾಗಿದೆ

ಸಮುದ್ರದ ನೀರಿನಿಂದ ವಿದ್ಯುಚ್ಛಕ್ತಿ ಉತ್ಪತ್ತಿ

ಫ್ರೆಂಚ್ ಸರ್ಕಾರದವರು ಐವರಿ ಕೋಸ್ಟಿನ ಅಬಿಡ್ಜಾನ್ ಎಂಬ ಪಟ್ಟಣದ ಸಮುದ್ರ ನೀರಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಯಂತ್ರಗಳನ್ನು ಸ್ಥಾಪಿಸಲಿರುವರೆಂದು ವರದಿಯಾಗಿದೆ. ಆ ಯಂತ್ರದ ಸಹಾಯದಿಂದ ಸಮುದ್ರದ ಕೆಳದಲ್ಲಿರುವ ಶೀತ ಜಲವನ್ನು ಮೇಲ್ಭಾಗದಲ್ಲಿರುವ ಉಷ್ಣ ಜಲದೊಡನೆ ಮಿಶ್ರ ಮಾಡುವುದರಿಂದಲೇ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದೆಂದು ಹೇಳಲಾಗಿದೆ

ಅದೃಷ್ಟಶಾಲಿದ ತಪ್ಪಿ

ಹೊಸದಿಲ್ಲಿ ಬಳಿ ಒಂದು ವಿಮಾನ ಪ್ರಯಾಣದಲ್ಲಿ ಪ್ರಯಾಣಿಕರೊಂದಿಗೆ ಹಲವು ಜನರು ಅಲ್ಲಿದ್ದ ಒಂದು ಸರೋವರದಲ್ಲಿ ಸಿಲುಕಿ ಶಬ್ದ ವರಗಳನ್ನು ಗಾತ್ರದ ಹಲವು ಕ್ಷೇತ್ರಗಳನ್ನು ಕಂಡುದಾಗಿ ವರದಿಯಾಗಿದೆ

ಹೃದಯಾಘಾತಕ್ಕೆ ಹೊಂಗೆ ಸೊಪ್ಪಿನ ಗೊಬ್ಬರ

ಚಾಮರಾಜನಗರದ ತಾಲ್ಲೂಕಿನ ಕೃಷಿಕರು ಹೆಚ್ಚು ಜಮೀನುಗಳಿಗೆ ಹೊಂಗೆ ಸೊಪ್ಪಿನ ಗೊಬ್ಬರವನ್ನು ಹಾಕಲು, ಇರುವರಿಗೆ ಅವನ್ನು ಕಂಟ್ರ್ಯಾಕ್ಟಿನಲ್ಲಿ ಪಡೆದ ಕೃಷಿಯು ಇಲಾಖೆಯ ಬಳಿ ತಪ್ಪಿನ ಬೆಲೆಯು ಮತ್ತು ಕೊಟ್ಟು ಕೊಂಡುಕೊಳ್ಳಬೇಕಾಗಿದ್ದಿತು. ಹೆಚ್ಚು ಬೆಲೆ ಯೋಜನೆ ಪ್ರಕಾರ ಕೃಷಿಕರಿಗೆ ಸುಲಭ ದರದಲ್ಲಿ ಮೇಲ್ಕಂಡ ಗೊಬ್ಬರವು ಸಿಕ್ಕುವಂತೆ ಮಾಡುವ ಸಲುವಾಗಿ ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಕಂಟ್ರ್ಯಾಕ್ಟು ಪದ್ಧತಿಯನ್ನು ತಪ್ಪಿಸಿ, ರೈತರೇ ನೇರವಾಗಿ ಒಂದು ಗಾಡಿ ಸೊಪ್ಪಿಗೆ ಎಂಟು ಆಣೆ ಕೊಟ್ಟು ಕೃಷಿಕರು ಪಡೆದು ಕಾಡಿನಿಂದ ಹೊಂಗೆ ಸೊಪ್ಪನ್ನು ತರಬಹುದೆಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಮನೆ ಬಿಕರಿಗಿದೆ

ಮೈಸೂರು ಚಾಮರಾಜ ಮೊಹಲ್ಲಾ ಹೊಸಕೇರಿ ಬೀದಿಯಲ್ಲಿರುವ ೧೧೬೭ನೇ ನಂಬರಿನ ಮನೆಯು ಬಿಕರಿಗೆ ಇದೆ. ನಲ್ಲಿ, ದೀಪ, ಫ್ಲಷ್‌ಗಳಿಂದ ಕೂಡಿದ ವಿಶಾಲವಾದ ಕಾರಿನ ಮನೆ. ವಿವರಗಳಿಗೆ ಕೆಳಗೆ ಕಂಡ ವಿಳಾಸದಲ್ಲಿ ಬೆಳಿಗ್ಗೆ ೭ರಿಂದ ೯ ಘಂಟೆಯೊಳಗೆ ವಿಚಾರಿಸಿ —

1167, ಬಿಟ್ಟಣ್ಣ ಶೆಟ್ಟರ ಬೀದಿ, ಚಾಮರಾಜ ಪುರಂ, ಮೈಸೂರು

ಅಮೆರಿಕನ್ನರಿಂದ ಪ್ರಬಲ ಧಾಳಿಯು ಆರಂಭ

ಅಮೆರಿಕದ ಸೌಕೆಗಳೂ ೨೪ನೇ ಡಿವಿಷನ್ ಸೈನ್ಯಗಳೂ ಕೊರಿಯದ ನೈಋತ್ಯ ಭಾಗದಲ್ಲಿರುವ ಚಿಂಜು ಪ್ರದೇಶದಲ್ಲಿ ಧಾಳಿ ಮಾಡುತ್ತಿರುವುದಾಗಿ ಮ್ಯಾಕ್‌ಆರ್ಥರರ ಕೇಂದ್ರದಿಂದ ವರದಿಯಾಗಿದೆ. ಅಮೆರಿಕ ಸೈನ್ಯಗಳು ಮುನ್ನುಗ್ಗುವ ಪ್ರಯತ್ನದಲ್ಲಿರುವುದಾಗಿಯೂ ಯುದ್ಧವು ಸ್ಥಗಿತ ಸೂಚನೆಯುಳ್ಳದ್ದೆಂದೂ ತಿಳಿಸಲಾಗಿದೆ

ಶಾಸನ ಸಭಾಧ್ಯಕ್ಷತೆಗೆ ಟಂಡನ್‌ರವರ ರಾಜೀನಾಮೆ

ಉತ್ತರ ಪ್ರದೇಶ ಪ್ರಾಂತದ ಶಾಸನ ಸಭೆಯ ಅಧ್ಯಕ್ಷರಾಗಿದ್ದ ಬಾಬು ಪುರುಷೋತ್ತಮ ದಾಸ್ ಟಂಡನ್‌ರವರ ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿರುವ

ಸೇವಾ ಗ್ರಾಮಕ್ಕೆ ನೂಲಿನ ಕಾಣಿಕೆ

ವಾರ್ಧಾ ಸ್ಟೇಷನ್ ಗಾಂಧಿಯವರಿಂದ ಸ್ಥಾಪಿತವಾದ ಸೇವಾಗ್ರಾಮದ ಕೆಲಸ ... ಮುಂದುವರಿಸಲು ... ಇರುವುದಿಲ್ಲ. ಆದರೆ ಇದಕ್ಕಾಗಿ ಸಾರ್ವಜನಿಕರಿಂದ ಚಂದಾ ಹಣ ಕೇಳುವ ಉದ್ದೇಶವೂ ಇಲ್ಲವಾದ್ದರಿಂದ ಆದಕ್ಕಾಗಿ ಕೈರಾಟೆಯಿಂದ ತೆಗೆದ ನೂಲನ್ನು ಮಾತ್ರ ಸ್ವೀಕರಿಸಲಾಗುವುದು. ಇದರಿಂದ ನೂಲುವ ಕೈಗಾರಿಕೆಗೆ ಉತ್ತೇಜನ ದೊರೆಯುತ್ತದಲ್ಲದೆ ಮಹಾತ್ಮರ ಉದ್ದೇಶವನ್ನು ಈಡೇರಿಸಿದಂತಾಗುವುದು. ಆದ್ದರಿಂದ ಕೈರಾಟೆಯಲ್ಲಿ ನೂಲು ತೆಗೆಯುವವರೆಲ್ಲರೂ ಒಂದೊಂದು ಲಡಿ ನೂಲನ್ನು ಕೊಟ್ಟು ಸಹಾಯ ಮಾಡಬೇಕೆಂದು ಕೋರಲಾಗಿದೆ

ಕುಬೇರನ ಕವನಗಳು

ಬೆಳಗೊಳದ ಮೈಸೂರ್ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್‌ನ ಶ್ರೀ ಎಚ್. ಡಿ. ಕೃಷ್ಣರಾಯರು ರಾಯರ ದೇಶಭಕ್ತಿ ... ಕವನಗಳ ಒಂದು ಸಣ್ಣ ಪುಸ್ತಕವನ್ನು ಪ್ರಕಟಿಸಿದ್ದಾರೆ. ಶ್ರೀಯುತರು ಮತ್ತು ಪ್ರಪಂಚದ ಸನ್ನಿವೇಶಗಳನ್ನು ಭಾವನಾ ದೃಷ್ಟಿಯ ದರ್ಶನದಿಂದ ಸರಳ ರೀತಿಯಲ್ಲಿ ಕವನಗಳನ್ನು ರಚಿಸಿದ್ದಾರೆ. ಪುಸ್ತಕವು ಸರ್ವ ಜನಾದರಣೀಯವಾಗಿದೆ. ಅದರ ಬೆಲೆ ಎಂಟು ಆಣೆ. ಕೃಷ್ಣರಾಜ ಸಾಗರ ಪೋಸ್ಟ್, ಬೆಳಗೊಳ ಈ ವಿಳಾಸಕ್ಕೆ ಬರೆದು ಪಡೆಯಬಹುದು

ರಾಜಕಮಲ್,
ಮೈಸೂರು
4 8 50ನೇ ಶುಕ್ರವಾರದಿಂದ
ಅಪೇಕ್ಷಿತ ಪ್ರಾರಂಭ ದಿನವಹಿ 3 ಆಟಗಳು
ಕೀಲುಗುರ್ರಂ
(ತೆಲುಗು ಚಿತ್ರ)
ಅಂಜಲಿ ದೇವಿ ನಾಗೇಶ್ವರರಾವ್, ಕುಟುಂಬರಾವ್

ನೇಪಾಳದ ಮಾಜಿ ಸೈನ್ಯಾಧಿಪತಿಗಳ ದಸ್ತಗಿರಿ

ನೇಪಾಳದ ಕಾಂಗ್ರೆಸ್ಸಿನವರ ಹೂಡಿರುವ ಪ್ರಜಾ ಚಳವಳಿಯೊಡನೆ ಸಂಪರ್ಕವಿಟ್ಟುಕೊಂಡಿದ್ದರೆಂಬ ಕಾರಣದ ಮೇಲೆ ಅಲ್ಲಿನ ಮಾಜಿ ಸೈನ್ಯಾಧಿಪತಿಗಳಾದ ಜನರಲ್ ... ಬಹದೂರ್ ರಾಣಾರವರು ದಸ್ತಗಿರಿಯಾಗಿದ್ದಾರೆ. ಅವರಿಗೆ ೭... ವಿಧಿಸಲಾಗಿದೆ

ಪತ್ರಪತ್ಯಕ್ಕೆ ಮುಂಚೆ ಅಂತ್ಯಕ್ರಿಯೆಗೆ ಹಣ

ಉತ್ತರ ಇಟಲಿಯ ... ಎಂಬುವನ ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಅಲ್ಲಿನ ಪಾದ್ರಿಯ ಹತ್ತಿರ ಹೋಗಿ ತನ್ನ ಅಂತ್ಯಕ್ರಿಯೆಯನ್ನು ನಡೆಸಲು ಬೇಕಾಗುವ ಹಣ ಮತ್ತು ಸತ್ತ ನಂತರ ಶಾಂತಿ ವಾಕ್ಯಗಳನ್ನು ನುಡಿಯಲು ದಕ್ಷಿಣೆಗಳನ್ನು ಕೊಟ್ಟು ನಂತರ ಕೃತ್ಯವನ್ನು ನಡೆಸಿಕೊಂಡಿರುವನೆಂದು ವರದಿಯಾಗಿದೆ

ತಿಲಕರ ಜಯಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಶುಕ್ರವಾರ ಲೋಕಮಾನ್ಯ ಬಾಲಗಂಗಾಧರ ತಿಲಕ್‌ರವರ ಜಯಂತಿ ಶ್ರೀ ಆರ್ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಗಳಾದ ... ತಮ್ಮೇಗೌಡ ಮುಂತಾದವರು ಭಾಷಣ ಮಾಡಿ ತಿಲಕರ ಜೀವನ ಚರಿತ್ರೆ ಬೋಧಿಸಿಕೊಟ್ಟರು. ವಂದೇ ಮಾತರಂ ಗೀತೆಯೊಡನೆ ಸಭಾರಂಭವು ಮುಕ್ತಾಯವಾಯಿತು

ಇಬ್ಬರು ಉಮೇದುವಾರರ ಅರ್ಜಿಗಳ ತಿರಸ್ಕಾರ

ಬೆಂಗಳೂರು ನಗರ ಏಂದ ಶಾಸನ ಸಭೆಗೆ ನಡೆಯಲಿರುವ ಚುನಾವಣೆಯ ಒಂದು ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ೭ ಮಂದಿ ಉಮೇದುವಾರರ ಪೈಕಿ ಡಾ|| ಸಿ| ಡಿ ಎನ್ ಕೃಷ್ಣಮೂರ್ತಿ ಮತ್ತು ಶ್ರೀ ಎಂ ಕೃಷ್ಣಸ್ವಾಮಿ ಪಿಳ್ಳೆಯವರ ಅರ್ಜಿಗಳನ್ನು ಚುನಾವಣಾಧಿಕಾರಿಗಳು ಅವು ಕ್ರಮಬದ್ಧವಾಗಿಲ್ಲವೆಂದು ತಿರಸ್ಕರಿಸಿರುತ್ತಾರೆ

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ನಾಗಪುರ್ ಸೀರೆಗಳಿಗೆ

M V ಭೋಜಯ್ಯ ಬಿ ಎ

ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಚಂದಾದಾರರಲ್ಲಿ ವಿನಂತಿ

ರಶೀತಿ ಇಲ್ಲದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲವೆಂಬುದನ್ನು ಮಾನ್ಯ ಚಂದಾದಾರರು ಗಮನಿಸಬೇಕಾಗಿ ವಿನಂತಿ

ಸಾಧ್ವಿ ಏಜೆಂಟರು

ನ್ಯೂಸ್ ಪೇಪರ್ ಹೌಸ್ ಮೈಸೂರು

Edited printed and published by A R Nagarajan at Sadhvi Press D Subbiah Road, Mysore

ಪೂರ್ವ ಬಂಗಾಳಕ್ಕೆ ೬ ಲಕ್ಷ ಹಿಂದುಗಳ ವಾಪಸು

ಬಂಗಾಳದ ಬಗ್ಗೆ ಒಪ್ಪಂದವಾದಂದಿನಿಂದ ಇದುವರೆಗೆ ಆರು ಲಕ್ಷ ಹಿಂದುಗಳು ಪೂರ್ವ ಬಂಗಾಳಕ್ಕೆ ಮರಳಿದ್ದಾರೆಂದು ನೆಹರೂರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು. ಈ ಸಮಸ್ಯೆಯ ಪರಿಹಾರಕ್ಕೆ ಯುದ್ಧ ಹೂಡುವುದು ಅಥವಾ ಜನಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನಿಸುವುದ ವ್ಯವಹಾರವ ದೃಷ್ಟಿಯಿಂದ ಸರಿಯಾದದ್ದಲ್ಲವೆಂದು ಅವರ ಹೇಳಿರುವರು

ಸುಬ್ರಾಯನಕೆರೆ ರೇಡಿಯೋ ಅವ್ಯವಸ್ಥೆ

ರಾಜಧಾನಿಯ ಸುಬ್ಬರಾಯನಕೆರೆ ರೇಡಿಯೋವು ಕೆಟ್ಟುಹೋಗಿ ತಿಂಗಳಾದರೂ ಅದನ್ನು ಇನ್ನೂ ಸರಿಪಡಿಸಿರುವುದಿಲ್ಲ. ಇದರಿಂದ ಪ್ರತಿ ದಿನವೂ ಅಲ್ಲಿ ಸೇರುವ ನೂರಾರು ಜನರಿಗೆ ಆಶಾಭಂಗವಾಗುತ್ತಿದೆ. ನಗರದಲ್ಲಿನ ಬಿ ಕೇಂದ್ರದಲ್ಲಿರುವ ಸರ್ಕಾರೀ ರೇಡಿಯೋ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಗಮನ ಕೊಡದೇ ಇರುವುದ ವಿಷಾದಕರ. ಇದನ್ನು ಕೂಡಲೆ ಸರಿಪಡಿಸಿ ಸಾರ್ವಜನಿಕರಿಗೆ ಸೌಕರ್ಯ ಉಂಟು ಮಾಡಬೇಕು ಎಂದು ವಾಚಕರೊಬ್ಬರು ಪತ್ರ ಬರೆದು ಕೋರಿರುತ್ತಾರೆ

ಪ್ರಕಟಣೆ

ಸಗರ ದದೇವನ ಕೋಟೆ ತಾಲ್ಲೂಕು ಸರಗೂರು ಹೋಬಳಿ ಮುಳ್ಳೂರು ಗ್ರಾಮದಲ್ಲಿರುವ ಚೆನ್ನಬಸಮ್ಮ ಉರುಫ್ ಅಮ್ಮಣ್ಣಮ್ಮ ಎಂಬುವರಿಗೆ ಗಂಡ ಸಂತಾನವಿಲ್ಲದೆ ತಮ್ಮ ಹಾಸಾ ಹೊಟ್ಟೆಯಲ್ಲಿ ೧ನೇ ದೇವೀರಮ್ಮ, ೨ನೇ ನಾಗಮ್ಮ ಮತ್ತು ೩ನೇ ಪಾರ್ವತಮ್ಮ ಎಂಬ ಮೂರು ಜನ ಹೆಣ್ಣುಮಕ್ಕಳು ಮಾತ್ರ ಇರುತ್ತಾರೆ. ಸದರಿಯವರುಗಳಿಗೆ ಲಗ್ನವಾಗಿ ಅವರವರ ಗಂಡಂದಿರ ಆಸ್ತಿಯಿಂದ ಜೀವನ ನಡೆಸತಕ್ಕವರಾಗಿರುತ್ತಾರೆ. ಒಂದನೇ ನಾಗಳಾದ ದೇವೀರಮ್ಮನಿಗೆ ತನಗೆ ಇರತಕ್ಕ ಆಸ್ತಿಯನ್ನು ನೋಡಿ ಮಾಡಬೇಕೆಂಬ ಅಭಿಪ್ರಾಯದಿಂದ ಊರ ಸದರಿ ಆಸ್ತಿಗಳ ಮೇಲೆ ಸಾಲವಿಲ್ಲದೇ ಇರತಕ್ಕ ಆಸ್ತಿಗೆ ಸಾಲವನ್ನು ಮಾಡಿ ಆಸ್ತಿಯನ್ನು ಕಳೆಯ ತಮ್ಮ ೨, ೩ನೇ ಮಕ್ಕಳಿಗೆ ಕೊಡಬೇಕೆಂಬ ದುರುದ್ದೇಶದಿಂದ ವಿಭಾಗಿಸಿ ಕೊಡದಲ್ಲಿಯೇ ಕೆಲಸ ನಡೆಸಬೇಕೆಂಬ ಅಭಿಪ್ರಾಯವು ಇರುವುದರಿಂದ ಇವರಿಗೆ ಇರತಕ್ಕ ಆಸ್ತಿ ಮೇಲೆ ಯಾರೂ ಆಧಾರ, ಭೋಗ್ಯ, ಕ್ರಯ ವಗೈರೆ ಮಾಡಿಕೊಂಡು ಸಾಲವನ್ನು ಕೊಟ್ಟಲ್ಲಿ ಅದು ಊರ್ಜಿತವಾಗಲಾರದೆಂದು ನಾನು ಈ ಮೂಲಕ ತಿಳಿಸಿರುತ್ತೇನೆ

ಆಸ್ತಿಗಳ ವಿವರ ೧ ಮುಳ್ಳೂರು ಗ್ರಾಮದ ಗದ್ದೆ ನಾಟಿ ಚೆನ್ನಬಸಮ್ಮ ಉರುಫ್ ಅಮ್ಮಣ್ಣಮ್ಮ ಕೋಂ ಶ್ರೀಕಂಠಪ್ಪ ಸರ್ವೆ ನಂಬರು ಮುಬ್ಬ... ಎಕರೆ ಎಳೆ ಆರು ಗುಂಟೆ (೩), ಆಕಾರ ೨ ರೂಪಾಯಿ ಉಳ್ಳದ್ದು ಒಂದು, ೨ ನಂದಿನಾಥಪುರದ ೪೦ ನೇ ಖಾತೆಗೆ ಸೇರಿದ ಚೆನ್ನಬಸಮ್ಮನ ಬಾಬ್ತು ಸರ್ವೆ ... ೦ ಎಕರೆ ... ಗುಂಟೆ ... ಆಕಾರ ... ರೂಪಾಯಿ ಉಳ್ಳದ್ದು ಒಂದು ಮತ್ತು ೨ ಪೂರ್ವಕ್ಕೆ ಬಸವಣ್ಣನವರ ಶಿವನಂಜಪ್ಪನ ಮನೆ ಪಶ್ಚಿಮಕ್ಕೆ ಹೋಗುವ ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ದೊಡ್ಡರಾಮಣ್ಣನವರ ಮನೆ ಈ ಚಾತುರ್ಮಧ್ಯೆ ಇರತಕ್ಕ ಹಾಲಿ ನಿವೇಶನ ಈ ಮೂರು ಐಟಂಗಳು ಮಾತ್ರ

ಲಿಂಗಪ್ಪನ ರುಮು.

- ಮಲೇರಿಯಾ ಹಾರಿ ಸೊಳ್ಳೆ ಪರದೆಗಳು -
ಮಕ್ಕಳ ತೊಟ್ಟಿಲಿಗೆ, ಮಂಚಕ್ಕೆ, ಸಿಂಗಲ್ ಮತ್ತು ಡಬ್ಬಲ್ ಹಾಸಿಗೆಗಳಿಗೆ ಚಾಮುಂಡಿ ಕಂಪೆನಿ, ಬ್ಯಾಂಕ್ ರೋಡು, ಮೈಸೂರು

ನೋಂದಣಿ ೦. 792 ವಂದೇ ಮಾತರಂ] ಬಿಡಿಪ್ರತಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಬುಧವಾರ ೯-೮-೫೦ [ಸಂಚಿಕೆ ೧೫

ಸಂಸ್ಥಾನದಲ್ಲಿ ಆಹಾರ – ೭೮ ದಿನಕ್ಕೆ ಮಾತ್ರ –

ನಗರದಲ್ಲಿ ಕಳ್ಳತನಗಳು

ಮೈಸೂರು ೮

ನೆನ್ನೆ ರಾತ್ರಿ ನಗರದ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ ಅಂಗಡಿಯ ಬೀಗ ಒಡೆದು ಅ ಸುಮಾರು ೧೫೦ ರೂ. ಬೆಲೆಬಾಳುವ ಸಾಮಾನುಗಳನ್ನು ಯಾರೋ ಅಪಹರಿಸಿರುತ್ತಾರೆಂದು ವರದಿಯಾಗಿದೆ. ದೊಡ್ಡಪೇಟೆಯ [illegible] ಪ್ರಿಂಟಿಂಗ್ ಪ್ರೆಸ್ಸಿನ ಬಾಗಿಲನ್ನು ಒಡೆದು ಪಕ್ಕದಲ್ಲಿರುವ ಇತರ ಅಂಗಡಿಗೆ [illegible] ರೇಷ್ಮೆ ಸೀರೆ ಮುಂತಾದುವುಗಳನ್ನು ಕಳುವು ಮಾಡಲಾಗಿದೆ. ಮತ್ತೊಂದು ಸ್ಥಳದಲ್ಲಿರುವ ಎಲೆಕ್ಟ್ರಿಕ್ ಅಂಗಡಿಯು ಒಡೆಯಲ್ಪಟ್ಟು ತೆರೆಯಲಾಗಿದೆ. ಸಾಮಾನುಗಳು ಹೋಗಿಲ್ಲ.

ಕುಂಚಿಟಿಗರ ಸಂಘ

ರಾಜಧಾನಿಯ ಕುಂಚಿಟಿಗರ ಸಂಘದ ಸಾಧಾರಣ ಸಭೆಯು ಕಳೆದ ಭಾನುವಾರ ಶ್ರೀ ಡಿ. ಬಿ. ರಾಮಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಅಧಿಕಾರ ವರ್ಗದವರನ್ನು ಆರಿಸಲಾಯಿತು. ಸಂಘಕ್ಕೆ ಶ್ರೀ ಡಿ [illegible] ರಾಮಪ್ಪನವರು ಅಧ್ಯಕ್ಷರು, ಶ್ರೀ ಜಿ. ನರಸಿಂಹಯ್ಯ ಕಾರ್ಯದರ್ಶಿ, ಶ್ರೀ ಎಚ್. [illegible]ಲಿಯಪ್ಪನವರು ಖಜಾಂಚಿಗಳಾಗಿ ಆರಿಸಲ್ಪಟ್ಟರು. ವಿದ್ಯಾರ್ಥಿ ನಿಲಯಕ್ಕೆ ಶ್ರೀ ಎಚ್. ಪರಸಪ್ಪನವರು ಅಧ್ಯಕ್ಷರಾಗಿಯೂ ಶ್ರೀ ಎಂ. ಕೆ. ರಾಮಪ್ಪನವರು ಕಾರ್ಯದರ್ಶಿಗಳಾಗಿಯೂ, ಶ್ರೀ ಬಿ. ಕೃಷ್ಣಪ್ಪನವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು. ರಾಮಮಂದಿರ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಗಳಾಗಿ ಶ್ರೀಗಳು [illegible] ತಮ್ಮಯ್ಯ, ಎಲ್. ತಿಮ್ಮಯ್ಯ ಮತ್ತು ಡಿ. ನರಸಿಂಹಯ್ಯನವರು ಆರಿಸಲ್ಪಟ್ಟರು.

ವರ್ಧಂತಿ ಮಹೋತ್ಸವ

ರಾಜಧಾನಿಯ ಒಲಿಂಪಿಯಾ ಟಾಕೀಸಿನ ಬಳಿಯಿರುವ ಶ್ರೀ ಶಾರದಾ ವಿಲಾಸ ಟ್ಯುಟೋರಿಯಲ್ ಮಿಡಲ್ ಸ್ಕೂಲಿನಲ್ಲಿ ಇದೇ ಮಾಹೆ ೪ನೇ ಶುಕ್ರವಾರ ಬೆಳಿಗ್ಗೆ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮನ್ಮಹಾರಾಜರ ಜೀವನ ಚರಿತ್ರೆ [illegible] ಉಪಾಧ್ಯಾಯರುಗಳು [illegible] ಅಧ್ಯಕ್ಷ [illegible] ವಂದನಾರ್ಪಣೆಯಾದ ಮೇಲೆ ಸಿಹಿ ತಿಂಡಿ ವಿನಿಯೋಗದೊಂದಿಗೆ ಉತ್ಸವವು ಕೊನೆಗೊಂಡಿತು.

ಬ್ರಾಹ್ಮಣ ಯುವಕ ಮತ್ತು ಹರಿಜನ ಕನ್ಯೆಯ ವಿವಾಹ

ಹಮೀಳುನಾಡಿನ ಗಾಂಧಿ ಗ್ರಾಮದಲ್ಲಿರು [illegible] ಸಂಘದ ಕಾರ್ಯದರ್ಶಿ [illegible] ಎಂಬ ಬ್ರಾಹ್ಮಣ ಯುವಕನು [illegible] ಕೃಷ್ಣಮ್ಮ ಎಂಬ ಹರಿಜನ ಕನ್ಯೆಯನ್ನು ಕಳೆದ ತಿಂಗಳು ೭ನೇ [illegible] ವಿವಾಹವಾದನೆಂದು ಗೊತ್ತಾಗಿದೆ. ಗಾಂಧೀಜಿಯವರ ಅಹಿಂಸಾ ತತ್ವಗಳನ್ನು ಪರಿಪಾಲಿಸಲು [illegible] ಪ್ರಮಾಣ ಮಾಡಿರುತ್ತಾರೆ. ಅವರಿಗೆ [illegible]ನವರು ಆಶೀರ್ವಾದ ಮಾಡಿದರು.

ಸಮಾಜವಾದಿಗಳ ಸಭೆ

ಈ ದಿನ ಬೆಳಿಗ್ಗೆ ನಗರದ ಸಮಾಜವಾದಿಗಳ ಪಕ್ಷದ ಕಛೇರಿಯಲ್ಲಿ ಧ್ವಜಾರೋಹಣವೂ, ಮಧ್ಯಾಹ್ನ ಶ್ರೀ [illegible]ರವರ ಅಧ್ಯಕ್ಷತೆಯಲ್ಲಿ ಸಭೆಯೂ ನಡೆಯಿತು.

ಸಾರ್ವಜನಿಕ ಸೇವಾ ಪದಕ ನಾ ಪ ಸು

ಸ್ವಂತ ವರದಿಗಾರ] ಬೆಂಗಳೂರು ೯

ರಾಜಧಾನಿ ಉಪ [illegible] ಕೋಡುವಾವಿರಾಗಿರುವ ಶ್ರೀ ಎ. ಆರ್. ಶ್ರೀಕಂಠೇಶ್ವರನ್‌ರವರು ಸಮಾಜವಾದಿ ಪಕ್ಷಕ್ಕೆ ಸೇರಿರುವುದರಿಂದ ಅವರಿಗೆ ಕೆಲವು ದಿನಗಳ ಹಿಂದೆ ಶ್ರೀಮನ್ಮಹಾರಾಜರವರಿಂದ ಕೊಡಲಾಗಿದ್ದ ಸಾರ್ವಜನಿಕ ಸೇವಾ ಪತ್ರ ಪದಕವನ್ನು ವಾಪಸ ಕಳುಹಿಸಿರುವುದಾಗಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರಿಗೆ ತಿಳಿಸಿರುತ್ತಾರೆ.

ಸಮಾಜವಾದಿಗಳ ಬಿಡುಗಡೆ

ಸಂಸ್ಥಾನದ ಜೈಲುಗಳಲ್ಲಿರುವ ಸಮಾಜವಾದಿ ಬಂದಿಗಳನ್ನು ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದೆಂದು ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ತಿಳಿಸಿದ್ದಾರೆ.

ಕೊರಿಯಯುದ್ಧ ನಿವಾರಣೆಯಲ್ಲಿ ಮುಕ್ತಾಯವೆಂದು ಭವಿಷ್ಯ

ಕೊರಿಯಾ ಯುದ್ಧವು ಈ ತಿಂಗಳು ೧೮ರಲ್ಲಿ ಕೊನೆಗಾಣುವುದೆಂದು ಭವಿಷ್ಯವಾದಿಗಳೊಬ್ಬರು ಹೇಳುತ್ತಾರೆ. ೧೧ನೇ ತಾರೀಖು ಶುಕ್ರನು ಕರ್ಕಾಟಕ ರಾಶಿಗೆ ಪ್ರವೇಶಿಸಿ ಚಂದ್ರನ ಜೊತೆಯಾಗುವನು. ಅವನಿಬ್ಬರ ಮೇಲೂ ಗ್ರಹಣದ ಕುಜನ ದೃಷ್ಟಿ ಬಿದ್ದು ಭಾರಿ ಮಳೆ ಮತ್ತು ಪ್ರವಾಹಗಳಾಗಿ ಕೊರಿಯದಲ್ಲಿ ಅಗಾಧ ನಷ್ಟ ಸಂಭವಿಸುವುದು. ಇದರಿಂದ ಯುದ್ಧ ನಡೆಸಲು ಸಾಧ್ಯವಾಗುವುದಿಲ್ಲ.

ಬೊಂಬಾಯಿ ಕಮ್ಯೂನಿಸ್ಟ್ ಕೇಂದ್ರ ಕಛೇರಿಯ ಶೋಧನೆ

ಬೊಂಬಾಯಿ ಮಲ್ಲಿರುವ ಕೇಂದ್ರ ಕಮ್ಯೂನಿಸ್ಟ್ ಕಛೇರಿಗೆ ಪೋಲೀಸರು ನುಗ್ಗಿ ಅಲ್ಲಿ ಕಾಗದಪತ್ರಗಳನ್ನು ಶೋಧಿಸಿ, ಹಲವನ್ನು ವಶಪಡಿಸಿಕೊಂಡಿರುವುದಾಗಿ ಗೊತ್ತಾಗಿದೆ.

ಇಂಜನಿಯರಿಂಗ್ ಕಾಲೇಜಿನ ಆರಂಭ

ರಾಜಧಾನಿಯ ಸ್ಯಾಂಕಿನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಯಲ್ಲಿ ಈ ದಿನ ಮೊದಲನೇ ಮತ್ತು ಎರಡನೇ ಇಂಜನಿಯರಿಂಗ್ ಕಾಲೇಜ್ ತರಗತಿಗಳು ಆರಂಭಿಸಲ್ಪಟ್ಟವು. ರಾಜಸೇವಾಸಕ್ತ ಶ್ರೀ ಕೆ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು.

ಕೆಂಪು ಚೀಣದ ದಂಡನಾಯಕನ ದಂಗೆಯೇ ?

ಫಾರ್ಮೋಸಾ ಧ್ವಂಸಗಾಗಿ ಇದ್ದ ಕೆಂಪು ಚೀಣಾ ಸೈನ್ಯದ ದಂಡನಾಯಕರಾದ ಜನರಲ್ [illegible] ಎಂಬುವರು ತಮ್ಮ ಸರ್ಕಾರದ ವಿರುದ್ಧವಾಗಿ ದಂಗೆಯೆದ್ದಿದ್ದಾರೆಂದು ಹಾಂಕಾಂಗಿನ ಪ್ರಮುಖ ಪತ್ರಿಕೆಯೊಂದು ವರದಿ ಮಾಡಿದೆ. ಇವರ ಜೊತೆಗೆ ೩ ಲಕ್ಷ ಮಂದಿ ಸೈನಿಕರೂ ಸೇರಿದ್ದಾರೆ.

ಕಾಳಿ ಎಸ್. ರತ್ನಂರವರ ನಿಧನ

ತಮಿಳು ಸಿನಿಮಾ ಚಿತ್ರಗಳಲ್ಲಿ ಹಾಸ್ಯಗಾರ ನಟನೆಂದು ಪ್ರಖ್ಯಾತವಾಗಿರುವ ೫೩ ವರ್ಷದ ಕಾಳಿ ಎನ್. ರತ್ನಂರವರು ಕುಂಭಕೋಣದ ಬಳಿ ಇರುವ ಮಲೈ [illegible]ದಲ್ಲಿ ನೆನ್ನೆ ರಾತ್ರಿ ಕಾಲವಾದರು. ಅವನು ಬಹಳ ದಿನಗಳಿಂದಲೂ ಕಾಯಿಲೆಯಿಂದಿದ್ದನು.

ಟಿಬೆಟ್ ಕಡೆಗೆ ಕಮ್ಯೂನಿಸ್ಟ್ ಸೈನ್ಯದ ನಡೆ

ಟಿಬೆಟ್ಟಿನ ಕಡೆಗೆ ಕಮ್ಯೂನಿಸ್ಟ್ ಚೀಣಾ ಸೈನ್ಯಗಳು ಎರಡು ಕಡೆಗಳಿಂದ ನುಗ್ಗುತ್ತಿರುವುದಾಗಿ ಹಾಂಕಾಂಗ್ ವರದಿಗಳು ತಿಳಿಸುತ್ತವೆ.

ಕಡಿಮೆ ಬೆಲೆಗೆ ಧಾನ್ಯ ಪಡೆಯಲು ಪಿಕೆಟಿಂಗ್

ದಿಲ್ಲಿ ಪಟ್ಟಣದ ಹಲವು ಕಾಂಗ್ರೆಸ್ಸಿನವರು ಕಾಂಗ್ರೆಸ್ ಕಾರ್ಯದರ್ಶಿಯ ನೇತೃತ್ವದಲ್ಲಿ ಮೊನ್ನೆ ಅಲ್ಲಿನ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿ ಪದಾರ್ಥಗಳನ್ನು ಕಡಿಮೆ ಬೆಲೆಗೆ ಕೊಡಬೇಕೆಂದೂ ಮತ್ತು ಕೆಲವು ಕಡೆ ಅಸಲು ಬೆಲೆಗೂ ಕಡಿಮೆ ಧಾರಣೆಯಲ್ಲಿ [illegible] ಬೇಕೆಂದೂ ಒತ್ತಾಯಪಡಿಸಿದರೆಂದು ವರದಿಯಾಗಿದೆ. ಒಂದು ಕಡೆ ಅಂಗಡಿ ಮಾಲೀಕನಿಗೂ ಪಿಕೆಟರುಗಳಿಗೂ ವಾದ ಬೆಳೆದು ನಂತರ ಇತರ ವರ್ತಕರ ಅಂಗಡಿಗಳನ್ನು ಮುಚ್ಚಿ ಅಲ್ಲಿನ ಕಲೆಕ್ಟರಲ್ಲಿ ದೂರು ಹೇಳಿಕೊಂಡುದರ ಮೇಲೆ ಕಲೆಕ್ಟರರು ಪಿಕೆಟಿಂಗನ್ನು ನಿಲ್ಲಿಸಬೇಕೆಂದು ಆಜ್ಞೆ ಮಾಡಿದರೆಂದು ಹೇಳಲಾಗಿದೆ.

ಭಾರತದ ಖಾರಿಫ್ [illegible] ಪದಕ್ಕಾಗಿ ಊಟ ವಸತಿ ಸೌಕರ್ಯಕ್ಕಾಗಿ ದೆಹಲಿಯಲ್ಲಿ ಒಂದು ಹಾಸ್ಟೆಲನ್ನು ನಿರ್ಮಿಸಲು ಭಾರತ ಸರ್ಕಾರವು ೨೩ ಲಕ್ಷ ರೂ.ಗಳನ್ನು ಮಂಜೂರು ಮಾಡುತ್ತಿದೆ.

ಸಂಸ್ಥಾನದಲ್ಲಿ ಆಹಾರ ಧಾನ್ಯ ೭೮ ದಿನಗಳಿಗೆ ಮಾತ್ರ ಇದೆ

ಕಠಿಣ ಸ್ಥಿತಿ ಕಾದಿದೆಯೆಂದು ಮಂತ್ರಿಗಳ ಹೇಳಿಕೆ

ಬೆಂಗಳೂರು ೮

ಇನ್ನೆರಡು ತಿಂಗಳು ೧೮ ದಿನಗಳಿಗೆ ಮಾತ್ರ ಸಂಸ್ಥಾನದಲ್ಲಿರುವ ಆಹಾರ ಧಾನ್ಯದ ದಾಸ್ತಾನು ಸಾಕಾಗುವುದೆಂದೂ, ಆ ನಂತರ ಭಾರತ ಸರ್ಕಾರದವರು ನಮ್ಮ ೫೦ ಸಾವಿರ ಟನ್ ಧಾನ್ಯದ ಬೇಡಿಕೆಯನ್ನು ಕಾಲದಲ್ಲಿ ಸಲ್ಲಿಸದಿದ್ದರೆ ಕಠಿಣ ಪರಿಸ್ಥಿತಿಯು ನಮಗೆ ಕಾದಿದೆಯೆಂದೂ ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಪತ್ರಿಕಾ ಪ್ರತಿನಿಧಿಗಳಿಗಿತ್ತ ಹೇಳಿಕೆಯಲ್ಲಿ ತಿಳಿಸಿರುವರು. ಕಳೆದ ಸಾಲಿನಲ್ಲಿ ೧ ಲಕ್ಷ ೩೦ ಸಾವಿರ ಟನ್ ಆಹಾರ ಧಾನ್ಯವನ್ನು ಕೇಂದ್ರದವರು ಕೊಟ್ಟು, ಈ ಕಾಲದಲ್ಲಿ ೭೫ ಸಾವಿರ ಟನ್ನಿಗೆ ಇಳಿಸಿರುವರೆಂದು ಅವರು ಹೇಳಿದರು. ಈ ವರ್ಷ ಸಂಸ್ಥಾನಕ್ಕೆ ೧೫೩೦೦೦ ಟನ್ ಅಕ್ಕಿಯನ್ನು 'ಮಾತ್ರ ಕಳುಹಿಸಲಾಗಿದೆ. ಕನಿಷ್ಟವಾಗಿ ೫೦ ಸಾವಿರ ಟನ್ ಅಕ್ಕಿಯು ಸಂಸ್ಥಾನಕ್ಕೆ ಹೊರಗಿನಿಂದ ಬರಬೇಕೆಂದು ಅವರು ಸೂಚಿಸಿರುವರು.

ಆಹಾರ ಧಾನ್ಯದ ಬೆಲೆ ಏರಿಸಿದ್ದು ದಕ್ಕೆ ಆಹಾರ ಕಛೇರಿ ಮುಂದೆ ಪ್ರದರ್ಶನ

ಆಹಾರ ಧಾನ್ಯದ ಬೆಲೆಯನ್ನು ಹೆಚ್ಚಿಸಿ, ಅಕ್ಕಿ ಪಡಿತರದಲ್ಲಿ ಮೋಸ ಮಾಡುತ್ತಿರುವುದಕ್ಕಾಗಿ ಸಮಾಜವಾದಿ ಪಕ್ಷದ ೩೦೦ ಸದಸ್ಯರು ನೆನ್ನೆ ಆಹಾರ ಕಛೇರಿ ಮುಂದೆ ಪ್ರದರ್ಶನ ನಡೆಸಿದರು. ಅವರು ಬೀದಿಗಳಲ್ಲಿ ಮತ್ತೆ ಆಹಾರ ಕಛೇರಿ ಸಮೀಪಿಸಿದಾಗ ಪೋಲೀಸರು ಅವರನ್ನು ತಡೆದು ಅವರ ಪ್ರತಿನಿಧಿಗೆ ಮಂತ್ರಿಗಳನ್ನು ಕಾಣಲು ಅವಕಾಶವಿತ್ತರು. ಶ್ರೀ ಮರಿಯಪ್ಪನವರು ಅವರಿಗೆ ಸೂಕ್ತ ಉತ್ತರವಿತ್ತರು.

ದೇಶಾದ್ಯಂತವೂ ಆಂದೋಳನ ನಡೆಸಲು ಕಮ್ಯೂನಿಸ್ಟರ ಸಂಚು

ಕಮ್ಯೂನಿಸ್ಟ್ ಪಕ್ಷದಿಂದ ಹೊರಬಿದ್ದ ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಸಿ. ಜೋಷಿಯವರು ಒಂದು ಹೇಳಿಕೆಯನ್ನು ಕೊಟ್ಟು ದೇಶದಲ್ಲೆಲ್ಲಾ ಕೂಡಲೇ ಸಶಸ್ತ್ರ ಕಮ್ಯೂನಿಸ್ಟ್ ಗೆರಿಲ್ಲಾ ಪಡೆಗಳಿಂದ ದಾಳಿಯನ್ನು ಆರಂಭಿಸಿ ದೊಡ್ಡ ಆಂದೋಳನವನ್ನೆಬ್ಬಿಸುವುದೇ ಈಗಿನ ಕಮ್ಯೂನಿಸ್ಟ್ ಪಕ್ಷದ ಕಾರ್ಯನೀತಿಯಾಗಿರುವುದೆಂದು ತಿಳಿಸಿದ್ದಾರೆ. ತಮ್ಮನ್ನು ಹೊರಗಟ್ಟಿದ ಮೂಲ ಕಾರಣ ಆ ಪಕ್ಷದ ನೀತಿ ನಿಯಮಗಳಿಗೆ ವಿರುದ್ಧವಾಗಿರುವುದೆಂದೂ ಅವರು ಆಕ್ಷೇಪಿಸಿದ್ದಾರೆ.

ಸೀತಾ ಸ್ವಯಂವರ ಸ್ಥಳದಲ್ಲಿ ಮಂಟಪದ ನಿರ್ಮಾಣ

ಬಿಹಾರದ ಸಮೀಪದಲ್ಲಿ ನೇಪಾಳದ ಗಡಿಯಲ್ಲಿರುವ ಜನಕಪುರದಲ್ಲಿ ಹಿಂದೆ ಶ್ರೀರಾಮ ಜಾನಕಿ ಮತ್ತು ಸೀತಾದೇವಿಯವರ ವಿವಾಹವು ನಡೆದ ಸ್ಥಳದಲ್ಲಿ ಒಂದು ಮಂಟಪವನ್ನು ನಿರ್ಮಾಣ ಮಾಡಲು ನಿಧಿಯೊಂದನ್ನು ಏರ್ಪಾಡು ಮಾಡಲಾಗುತ್ತಿದೆ.

ಬಾಗ್ದಾದ್ ನಗರದಲ್ಲಿ ಹೊಸ ರಸ್ತೆಯೊಂದನ್ನು ಮಾಡುವುದಕ್ಕಾಗಿ ೫ ಸಾವಿರ ಮನೆಗಳನ್ನೂ ಅಂಗಡಿಗಳನ್ನೂ ಕೆಡವಲಾಗುವುದು.

ಕೋಮುಗಳ ವ್ಯತ್ಯಾಸದ ನಿರ್ಮೂಲಕ್ಕೆ ಶಿಫಾರಸು

ದೇಶದಲ್ಲಿರುವ ಕೋಮುವಾರು ವ್ಯತ್ಯಾಸಗಳನ್ನು ಕೊನೆಗಾಣಿಸಲು, ಮೊದಲು ಅವುಗಳನ್ನು ಅತ್ಯಂತ ಕನಿಷ್ಠ ದರ್ಜೆಗೆ ಇಳಿಸಬೇಕೆಂದು ಕೇಂದ್ರ ಸರ್ಕಾರದವರು ನೇಮಿಸಿದ್ದ ದಿವಾಕರ್ ಸಮಿತಿ ವರದಿಯಲ್ಲಿ ಶಿಫಾರಸು ಮಾಡಲಾಗಿದೆ ರಾಷ್ಟ್ರೀಯ ಭಾವನೆಯನ್ನು ದೃಢಗೊಳಿಸಲು, ಈ ವ್ಯತ್ಯಾಸಗಳಿಂದ ಅಗಾಧವಾದ ಕೆಡಕಾಗಿದೆಯೆಂದು ಸೂಚಿಸಲಾಗಿದೆ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸದಲ್ಲದೇ ಕೋಮುವಾರು ವ್ಯತ್ಯಾಸಗಳು ಮಾಯವಾಗುವುದಿಲ್ಲವೆಂದು ಸಮಿತಿಯು ಭಾವಿಸಿದೆ ಆದ್ದರಿಂದ ಅದನ್ನು ಕ್ರಮವಾಗಿ ನಿವಾರಿಸಲು ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ಸಮಿತಿಯು ಸೂಚಿಸಿ ನಿಮ್ನ ವರ್ಗದವರು, ಕಾಡು ಜನರು ಮತ್ತು ಇತರ ಹಿಂದುಳಿದವರಿಗೆ ಮಾತ್ರ ಸರ್ಕಾರಿ ನೌಕರಿ ಮತ್ತು ವಿದ್ಯಾದಾನ ಮತ್ತು ವೇತನದ ಸೌಕರ್ಯಗಳ ಸಂದರ್ಭದಲ್ಲಿ ವಿಶೇಷವಾಗಿ ಜಾತಿಯನ್ನು ಕಾಣಿಸಬೇಕೆಂದೂ, ನ್ಯಾಯಾಲಯಗಳ ಮುಂದೆ ಬರುವ ಮೊಕದ್ದಮೆಗಳಲ್ಲಿ ಜಾತಿ ಮತಗಳ ಸೂಚನೆಯನ್ನು ಬಿಟ್ಟುಬಿಡಬೇಕೆಂದೂ ಪೋಲೀಸು ಮತ್ತು ರೆವಿನ್ಯೂ ಕಾಗದ ಪತ್ರಗಳಲ್ಲಿಯೂ ಅವುಗಳನ್ನು ಬರೆಯಕೂಡದೆಂದೂ ಶಿಫಾರಸು ಮಾಡಲಾಗಿದೆ

ಕುಡಿತದ ಅಮಲಿನ ಪರೀಕ್ಷೆಗೆ ಸಾಧನ

ಜೇಬಿನಲ್ಲಿಟ್ಟುಕೊಳ್ಳಬಹುದಾದ, ಕುಡಿತದ ಪ್ರಮಾಣವನ್ನು ಅಳತೆ ಮಾಡಬಲ್ಲ ಕಾಂಟ್ರಾಕ್ಸಿ ಮೀಟರ್ ಎಂಬ ಸಾಧನವನ್ನು ಅಮೆರಿಕದ ವಿಜ್ಞಾನಿಗಳೊಬ್ಬರು ಕಂಡು ಹಿಡಿದಿರುತ್ತಾರೆ

ಬೊಂಬಾಯಿಗೆ ಹಾಲಿನ ಮರಗಳು

ವೆನಿಜೂಲಾ ದೇಶದಲ್ಲಿ ಹಾಲಿಗೆ ಬದಲು ಉಪಯೋಗಿಸುತ್ತಿರುವ ಮರದ "ಹಾಲನ್ನು" ಬೊಂಬಾಯಿನ ಜನರೂ ಉಪಯೋಗಿಸುವ ಸಲುವಾಗಿ ಆ "ಗೋ-ಮರಗ"ಳನ್ನು ಆಮದು ಮಾಡಿಕೊಳ್ಳಲಾಗುವುದೆಂದು ಹೇಳಲಾಗಿದೆ

ಅಸ್ಸಾಮಿನ ತಾತ್ಕಾಲಿಕ ಮುಖ್ಯ ಮಂತ್ರಿ

ಅಸ್ಸಾಮಿನ ಮುಖ್ಯ ಮಂತ್ರಿ ಗೋಪಿನಾಥ ಬಾರ್ಡೋಲಾಯ್‌ರವರು ನಿಧನರಾದ ಪ್ರಯುಕ್ತ ಅವರ ಜಾಗದಲ್ಲಿ ಹಂಗಾಮಿಯಾಗಿ ಹಣಕಾಸಿನ ಮಂತ್ರಿ ವಿಷ್ಣುರಾಂ ಮೇಧಿಯವರು ಮುಖ್ಯ ಮಂತ್ರಿಗಳಾಗಿರುತ್ತಾರೆ

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ
ಬೆಂಗಳೂರು

ಮಾಸ್ಕೋ ಮೇಲೆ ತಿಂಡಿಗಳ ಬಾಂಬು ಹಾಕಬೇಕು

ಮೂರನೇ ಮಹಾ ಯುದ್ಧಕ್ಕೆ ಪ್ರಲೋಭ ಅವಕಾಶ ಕೊಡುವುದಕ್ಕಿಂತ, ಕಮ್ಯೂನಿಸ್ಟರ ಆಕ್ರಮಣಕ್ಕೆ ಅದು ಸಿಕ್ಕುವುದು ಮೇಲೆಂದು ಲಂಡನ್ನಿನ ಒಂದು ಬಹಿರಂಗ ಸಭೆಯಲ್ಲಿ ಒಬ್ಬ ಪಾದ್ರಿಗಳು ಮಾತನಾಡುತ್ತಾ ತಿಳಿಸಿದರು ಯುದ್ಧವು ಕ್ರಿಸ್ತನ ಅನುಯಾಯಿಗಳಿಗೆ ತಕ್ಕದ್ದಲ್ಲದ ಕಾರ್ಯವೆಂದೂ ಅದರ ಬದಲು ಮಾಸ್ಕೋ ನಗರದ ಮೇಲೆ ತಿಂಡಿ ಪೊಟ್ಟಣಗಳ ಬಾಂಬುಗಳನ್ನು ಎಸೆದರೆ ಅದರಿಂದ ಅಲ್ಲಿನ ಜನರು ವಿಶ್ವದ ಬಗ್ಗೆ ಹೊಸ ಧ್ಯೇಯವನ್ನು ಹೊಂದಬಹುದೆಂದೂ ಅವರು ಹೇಳಿದರು

ಜಲಜನಕ ಪದಾರ್ಥಗಳ ಸಿಡಿತ

ಇಟಲಿಯ ಟ್ಯೂರಿನ್ ನಗರದ ಮೋಟಾರು ಕಾರ್ಖಾನೆಯಲ್ಲಿ ಜಲಜನಕ ಪದಾರ್ಥಗಳು ಸಿಡಿದುದರಿಂದ ಇಬ್ಬರು ಕಾರ್ಮಿಕರು ಸತ್ತಿದ್ದು ೧೫ ಮಂದಿಗೆ ಗಾಯವಾಗಿರುತ್ತದೆ ವಿನಾಶಕಸ್ಮಿಕತೆಯಿಂದ ಈ ಸಿಡಿತವು ನಡೆಯಿತೆಂದು ಹೇಳಲಾಗಿದೆ

"ಕಾಶ್ಮೀರ ಮಹಾದ್ವಾರ" ನಗರ

ಭಾರತ-ಕಾಶ್ಮೀರದ ಗಡಿ ಬಳಿ ಇರುವ ಲಖನ್‌ಪುರ ಎಂಬಲ್ಲಿ ಮಾದರಿ ಊರನ್ನು ಕಟ್ಟಿ ಅದನ್ನು ಕಾಶ್ಮೀರದ ಮಹಾದ್ವಾರವೆಂದು ಕರೆಯಲು ಕಾಶ್ಮೀರ ಸರ್ಕಾರವು ನಿರ್ಧರಿಸಿದೆ

ಟಿಬೆಟ್ ಮೇಲೆ ಆಕ್ರಮಣವಾದರೆ ಅಮೆರಿಕದ ನೆರವಿಲ್ಲ

ಕಮ್ಯೂನಿಸ್ಟ್ ಚೀನವು ಟಿಬೆಟ್ ದೇಶದ ಮೇಲೆ ಆಕ್ರಮಣ ದಾಳಿಯನ್ನು ನಡೆಸಿದರೆ ಅಲ್ಲಿನ ಸರ್ಕಾರಕ್ಕೆ ಮಿಲಿಟರಿ ಸಹಾಯವನ್ನು ಒದಗಿಸಲು ಸಾಧ್ಯವಿಲ್ಲವೆಂದು ಅಮೆರಿಕದ ವಿದೇಶಾಂಗ ಕಛೇರಿ ಅಧಿಕಾರಿಗಳು ಭಾವಿಸಿರುತ್ತಾರೆ

ರಷ್ಯದ ಹೊಸ ಸಲಹೆಗೆ ಭಾರತ ಒಪ್ಪುವುದಿಲ್ಲ

ಭದ್ರತಾ ಸಮಿತಿಯಲ್ಲಿ ಕೊರಿಯಾ ಬಗ್ಗೆ ನಡೆಯುವ ಚರ್ಚೆಗಳ ಸಮಯದಲ್ಲಿ ಉತ್ತರ ಕೊರಿಯಾದ ಪ್ರತಿನಿಧಿಯನ್ನು ಕರೆಸಬೇಕೆಂದು ರಷ್ಯದ ಪ್ರತಿನಿಧಿಯು ಮಾಡಿರುವ ಸಲಹೆಗೆ ಭಾರತವು ಬೆಂಬಲವೀಯುವುದಿಲ್ಲವೆಂದು ಹೇಳಲಾಗಿದೆ ಉತ್ತರ ಕೊರಿಯವು ಆಕ್ರಮಣಕಾರ ರಾಷ್ಟ್ರವೆಂದು ಭಾರತವು ಘೋಷಿಸಿರುವುದರಿಂದ ಆ ರಾಷ್ಟ್ರವು ಭದ್ರತಾ ಸಮಿತಿಯ ಆಜ್ಞೆಯನ್ನು ಪಾಲಿಸಿ, ಹಿಂದಕ್ಕೆ ಸೈನ್ಯ ಕರೆಸುವವರೆಗೂ ಆ ದೇಶಕ್ಕೆ ಮನ್ನಣೆ ಕೊಡುವುದು ಸರಿಯಲ್ಲವೆಂದು ಭಾರತದ ಅಭಿಪ್ರಾಯವಾಗಿದೆ

ಚಾಮುಂಡೇಶ್ವರಿ
ಟಾಕೀಸ್
10-8-50 ರಿಂದ ದಿನವೂ 3 ಆಟಗಳು
* ಸಬ್ಕ್ ಹೈ *
(ಹಿಂದಿ)
ಪಾತ್ರ -ನಾಸಿರ್ ಮತ್ತು ಸ್ವರ್ಣಲತಾ
(ಲೈಲಾ ಮಜ್ನುವಿನ ಲೈಲಾ)

೨೩ ಹೋಟೇಲುಗಳ ರಹದಾರಿ ರದ್ದು

ಚಿಕ್ಕಮಗಳೂರು ೫

ಹೋಟೇಲುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಸರ್ಕಾರದಿಂದ ಇಲ್ಲಿನ ಪೌರ ಸಭೆಗೆ ಬಂದಿರುವ ಸೂಚನೆಯ ಪ್ರಕಾರ ಆರೋಗ್ಯ ನಿಯಮಗಳಿಗನುಗುಣವಾಗಿಲ್ಲದ ೨೩ ಹೋಟೇಲುಗಳ ರಹದಾರಿಯನ್ನು ರದ್ದು ಮಾಡಿ, ಅವುಗಳನ್ನು ಮುಚ್ಚಬೇಕೆಂದು ಪೌರ ಸಭಾಧ್ಯಕ್ಷರು ಆಜ್ಞೆ ಮಾಡಿರುವರು

ಮೈಸೂರಿಗೆ ಅರ್ಜೆಂಟೈನಾ ಗೋಧಿ

ಅರ್ಜೆಂಟೈನ ದಿಂದ ಮದ್ರಾಸಿಗೆ ಈಗ ತಾನೆ ಒಂದು ಹಡಗು ೮ ಸಾವಿರ ಟನ್ ಗೋಧಿಯನ್ನು ತುಂಬಿಕೊಂಡು ಬಂದಿದೆ ಈ ಪೈಕಿ ಮೈಸೂರಿಗೆ ೩ ಸಾವಿರ ಟನ್ ಕಳುಹಿಸಲಾಗುವುದು

ಮಹಿಳಾ ಸದನ

ಕಳೆದ ಶನಿವಾರ ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿ ಸದನದ ಪ್ರಕೃತ ಸಾಲಿನ ಅಧಿಕಾರಿ ವರ್ಗದ ಚುನಾವಣೆಯು ನಡೆದು ಶ್ರೀಮತಿ ಟಿ ಎನ್ ತಂಗಮ್ಮನವರು ಅಧ್ಯಕ್ಷರಾಗಿಯೂ, ಶ್ರೀಮತಿ ಆರ್ ರಾಜಲಕ್ಷ್ಮಿ ಉಪಾಧ್ಯಕ್ಷರಾಗಿಯೂ ಶ್ರೀಮತಿಗಳಾದ ಎಂ ಡಿ ರಂಗನಾಯಕಮ್ಮ ಮತ್ತು ಎಂ ಬಿ ಜಾನಕಿಯವರುಗಳು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು

○ ಕರೆನ್ಸಿ ನೋಟುಗಳನ್ನು ತಯಾರಿಸುವ ನಾಸಿಕದ ಇಂಡಿಯಾ ಸೆಕ್ಯೂರಿಟಿ ಮುದ್ರಣಾಲಯದಿಂದ ೯೩ ಸಾವಿರ ರೂ ಬೆಲೆ ಬಾಳುವ ಹತ್ತು ರೂಪಾಯಿ ನೋಟುಗಳನ್ನು ಅಪಹರಿಸಲಾಗಿದೆಯೆಂದು ವರದಿಯಾಗಿದೆ

ರೇಷನಿಂಗ್ ಆಫೀಸರರ ಕಛೇರಿ, ಮೈಸೂರು

ನೋಟಿಫಿಕೇಷನ್ ನಂ G C D A1 59 50 51 ಮೈಸೂರು 23 7 50

— o —

ಹಲವು ಸರ್ಕಾರಿ ರಿಜರ್ವ್ ಮತ್ತು ಸಬ್ ಗೋಡೌನುಗಳಲ್ಲಿರುವ ಸುಮಾರು ೪೪೦೦೦ ಹಳೆಯ ಮತ್ತು ಅನುಪಯುಕ್ತ [ಸಿಂಗಲ್ ಮತ್ತು ಡಬ್ಬಲ್] ಗೋಣಿಚೀಲಗಳನ್ನು ೧೯೫೦ನೇ ಆಗಸ್ಟ್ ೧೭ ನೇ ತಾರೀಕು ಬೆಳಿಗ್ಗೆ ೧೧ ಘಂಟೆಗೆ ರೇಷನಿಂಗ್ ಆಫೀಸಿನಲ್ಲಿ ಬಹಿರಂಗ ಹರಾಜು ಮೂಲಕ ಮಾರಲಾಗುವುದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ

— ಮಾರಾಟದ ಷರತ್ತುಗಳು —

೧ ಹರಾಜಿನಲ್ಲಿ ಬಿಡ್ಡು ಮಾಡುವ ಅರ್ಹತೆ ಪಡೆಯಲು ಪ್ರತಿಯೊಬ್ಬ ಬಿಡ್ಡುದಾರನೂ ೫೦ ರೂ ಗಳನ್ನು ಡಿಪಾಜಿಟ್ಟು ಮಾಡಬೇಕು ಮಾರಾಟವಾದ ಕೂಡಲೇ ಈ ಮೊಬಲಗನು ವಾಪಸು ಮಾಡಲಾಗುವುದು

೨ ಜಯಶೀಲನಾದ ಬಿಡ್ಡುದಾರನು ಮಾರಾಟದ ಮೊಬಲಗಿನ ಶೇಕಡ ೨೫ ರಷ್ಟನ್ನು ಸ್ಥಳದಲ್ಲೇ ಡಿಪಾಜಿಟ್ಟು ಮಾಡಿ ಮಾರಾಟವು ಸ್ಥಿರಪಟ್ಟ ಬಗ್ಗೆ ಸುದ್ದಿ ಕೊಟ್ಟ ೩ ದಿನದೊಳಗೆ ಉಳಿದ ಮೊಬಲಗನ್ನು ಪಾವತಿ ಮಾಡಿ ಕೂಡಲೇ ಮಾಲುಗಳನ್ನು ಸಾಗಿಸಬೇಕು ಇದಕ್ಕೆ ತಪ್ಪಿದರೆ ಡಿಪಾಜಿಟ್ಟು ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅವನ ಜೊತೆಗಾರಿಕೆ ಮಾಲ್ ಚೀಲಗಳನ್ನು ಮತ್ತೆ ಹರಾಜು ಹಾಕಿ ಅದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟಕ್ಕೆ ಅವನನ್ನೇ ಗುರಿಪಡಿಸಲಾಗುವುದು

೩ ರೇಷನಿಂಗ್ ಅಧಿಕಾರಿಗಳಿಂದಲಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಬೇರೆ ಅಧಿಕಾರಿಗಳಿಂದಲಾಗಲೀ ಹರಾಜು ನಡೆಸಲ್ಪಡುವುದು ಮತ್ತು ಅದು ಮೈಸೂರು ಚೀಫ್ ರೇಷನಿಂಗ್ ಅಧಿಕಾರಿಗಳ ಮಂಜೂರಾತಿಗೆ ಒಳಪಟ್ಟಿರುತ್ತೆ ಕಾರಣವನ್ನು ಕೊಡದೆ ಯಾವುದೇ ಬಿಡ್ಡನ್ನು ಅಂಗೀಕರಿಸುವುದಕ್ಕಾಗಲೀ ತಿರಸ್ಕರಿಸುವುದಕ್ಕಾಗಲೀ ಚೀಫ್ ರೇಷನಿಂಗ್ ಅಧಿಕಾರಿಗಳು ಹಕ್ಕುಳ್ಳವರಾಗಿರುತ್ತಾರೆ ಒಂದು ಪಕ್ಷ ಹರಾಜನ್ನು ರದ್ದು ಪಡಿಸಿದಲ್ಲಿ ಬಿಡ್ಡುದಾರರ್ ಯಾವ ವಿಧವಾದ ಪ್ರತಿಫಲ ಅಥವಾ ಪರಿಹಾರಕ್ಕೂ ಬಾಧ್ಯರಲ್ಲ

೪) ಷೆಡ್ಯೂಲಿನಲ್ಲಿ ನಮೂದಿಸಲಾಗಿರುವ ವಿವಿಧ ಗೋಡೌನ ಗಳಲ್ಲಿನ ಸ್ಟಾಕುಗಳನ್ನು ಒಂದೇ ಲಾಟಿನಲ್ಲಾಗಲೀ ಬೇರೆ ಬೇರೆ ಲಾಟುಗಳಲ್ಲಾಗಲೀ ಮಾರಲು ರೇಷನಿಂಗ್ ಅಧಿಕಾರಿಗಳು ಹಕ್ಕುಳ್ಳವರಾಗಿರುವರು

೫) ಬಿಡ್ಡು ಮೊಬಲಗನ್ನು ಪೂರ್ತಿ ಪಾವತಿ ಮಾಡಿದ ನಂತರವೇ ಮಾರಾಟ ಮಾಡಲಾದ ಸ್ಟಾಕುಗಳ ರವಾನೆಗೆ ಅವಕಾಶ ಕೊಡಲಾಗುವುದು

೬) ಅಪೇಕ್ಷಿಸುವ ಬಿಡ್ಡುದಾರರು ಗೋಡೌನುಗಳಲ್ಲಿ ಕೆಲಸದ ವೇಳೆಯಲ್ಲಿ ಸ್ಟಾಕುಗಳ ಅಜಮಾಯಿಷಿ ಮಾಡಬಹುದು

೭) ಚೀಲಗಳ ಪ್ರಮಾಣ, ವಿವರ ಮತ್ತು ರಚನೆಗಳಿಗೆ ಸರ್ಕಾರದವರ ಜವಾಬ್ದಾರಿಯಿರುವುದಿಲ್ಲ

— : ಷೆಡ್ಯೂಲ್ : —

ಅಂಜುರು ನಂಬರು	ಗೋಡೌನುಗಳ ಹೆಸರುಗಳು	ವಿಳಾಸ	ಚೀಲಗಳ ಸಂಖ್ಯೆ
1	ಮುಸ್ಲಿಂ ಆರ್ಫನೇಜ್	ಅಶೋಕ ರಸ್ತೆ ಅಸ್ಗರ್ ಮೊಹಲ್ಲಾ ಮೈಸೂರು	1000
2	ಅಶ್ವಲ್	ಗಾಂಧಿ ಚೌಕ	6500
3	ಮುಂಡಿ	ಮೈಸೂರು ಕುಂಬಾರಗೇರಿ ಆಯುರ್ವೇದ ಆಸ್ಪತ್ರೆ ಹಿಂಭಾಗ	12000
4	ಕೃಷ್ಣರಾಜ್	ಮೈಸೂರು ಸಯ್ಯಾಜಿ ರಸ್ತೆ ಗಾಯತ್ರಿ ಟಾಕೀಸ್ ಬಳಿ	2000
5	ದೇವರಾಜ	ಅಲಮ್ಮನವರ ಛತ್ರ	6500
6	ಅಕ್ಬರ್ ಡಿಪೋ ನಂ 1		4000
7	ಚಾಮರಾಜ	ನಾರಾಯಣಶಾಸ್ತ್ರಿ ರಸ್ತೆ	4000
8	ಬೊಮ್ಮಯ್ಯನ ಛತ್ರ	ಹಳೇ ಸಂತೇಪೇಟೆ ಟಿ. ಬಸವಯ್ಯನವರ ಪ್ರೆಸ್ಸಿನ ಬಳಿ	4500
9	ಶ್ರೀ ರಾಮಲಿಂಗೇಶ್ವರ ಮಿಲ್ಸ್	ಅಗ್ರಹಾರ ಬಡಾವಣೆ ಮೈಸೂರು	1500
10	ಶ್ರೀ ಚಂದ್ರಶೇಖರ ಮಿಲ್	,, ,,	700
11	ಸಿ ಪಿ ಸಿ ಹಾಲ್	ಗಾಂಧಿ ಚೌಕ ಮೈಸೂರು	1400

(ಸಹಿ) ಬಿ. ಕೆ. ಚಾಮರಾಜ್,
ರೇಷನಿಂಗ್ ಆಫೀಸರ್

Edited, printed and published by A R Nagarajan, at Sadhvi Press D Subbiah Road, Mysore

ಫೋನ್ ನಂ. 792 ಸ. ದೇ. ಮೂರಾಣೆ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೧೦ ೮-೫೦ [ಸಂಚಿಕೆ ೧೯

ಗ್ವಾಲಿಯರ್ ವಿದ್ಯಾರ್ಥಿ ಗುಂಪಿನಮೇಲೆಗುಂಡು

ಸರ್ಕಾರದ ನೀತಿಯ ಟೀಕೆ

ಸಮಾಜವಾದಿಗಳ ಸಭೆಯಲ್ಲಿ ಭಾಷಣಗಳು

ಮೈಸೂರು ೧೦

ಸಂಸ್ಥಾನದ ಸಮಾಜವಾದಿ ಪಕ್ಷದ ಅಧ್ಯಕ್ಷರಾದ ಶ್ರೀ ಸಿ ಜಿ ಕೆ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೆನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು ... ಗಳಾದ ಬಿ ಶಿ ಶಂಕರಪ್ಪ ಮತ್ತು ನಾಗಭೂಷಣರವರೂ ಅಧ್ಯಕ್ಷರೂ ಭಾಷಣ ಮಾಡಿ ಇಂದಿನ ಸರ್ಕಾರದ ರೀತಿ ನೀತಿಗಳನ್ನು ಟೀಕಿಸಿದರು ಪ್ರಜಾ ಸರ್ಕಾರವು ಬಂದ ಮೇಲೆ ನಿರೀಕ್ಷಿಸಿದಷ್ಟು ಜನೋಪಕಾರ ಕಾರ್ಯವು ಆಗಿಲ್ಲವೆಂದು ಅವರು ಹೇಳಿದರು ಸರ್ಕಾರದ ಆಹಾರ ನೀತಿಯನ್ನು ಉಗ್ರವಾಗಿ ಖಂಡಿಸಿದರು ಮುಂದಿನ ಕರ್ತವ್ಯದ ಬಗ್ಗೆ ಜನರಲ್ಲಿ ಜಾಗ್ರತಿಯನ್ನುಂಟುಮಾಡಲು ಸಮಾಜವಾದಿ ಪಕ್ಷವು ಕೈಗೊಂಡಿರುವ ಯೋಜನೆಯನ್ನು ಸೂಚಿಸಿದರು

ನೆನ್ನೆ ರಾತ್ರಿ ಶ್ರೀ ಸಿ ಜಿ ಕೆ ರೆಡ್ಡಿಯವರು ಸಮಾಜವಾದಿ ಪಕ್ಷದ ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿ ತಮ್ಮ ಸಂಘದ ಧ್ಯೇಯ ಧೋರಣೆಗಳನ್ನು ವಿವರಿಸಿದರು ಸಧ್ಯದಲ್ಲಿಯೇ ಬರಲಿರುವ ಉಪ ಚುನಾವಣೆಗಳಲ್ಲಿ ಪಕ್ಷದವರು ಸ್ಪರ್ಧಿಸುವುದರ ಉದ್ದೇಶವನ್ನು ವಿಶದಪಡಿಸಿದರು ಶಾಸನ ಸಭೆಯಲ್ಲಿ ತಮ್ಮ ಪಂಗಡಕ್ಕೆ ಬಹುಮತ ದೊರೆಯದಿದ್ದರೂ ಪ್ರಗತಿಪರವಾದ ಯೋಜನೆಗಳ ಮೂಲಕ ತಮ್ಮ ಪ್ರಭಾವವನ್ನು ಬೀರುವುದಾಗಿ ಅವರು ಹೇಳಿದರು

ಉರುವಕೊಂಡ ಗುರುಗಳಿಗೆ ಆನೆಯ ಬಹುಮಾನ

ಉರುವಕೊಂಡ ಮಠಕ್ಕೆ ಮೈಸೂರು ಸರ್ಕಾರದವರು ಒಂದು ಆನೆಯನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ ಅದಕ್ಕೆ ಭುವನೇಶ್ವರಿ ಎಂದು ಹೆಸರನ್ನಿಡಲಾಗಿದೆ ... ಅದನ್ನು ಹಿಡಿಯಲಾಗಿತ್ತು

ಉಪನ್ಯಾಸ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ಸಾರ್ವಜನಿಕ ಅಭಿಪ್ರಾಯ ಎಂಬ ವಿಷಯವಾಗಿ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಭಾಷಣ ಮಾಡುವರು ವಿಶ್ವವಿದ್ಯಾನಿಲಯದ ಪ್ರೊ ಚಾನ್ಸಲರರಾದ ಡಾ॥ ಸಿ ಆರ್ ರೆಡ್ಡಿಯವರು ಅಧ್ಯಕ್ಷತೆ ವಹಿಸುವರು

ಪ್ರದೋಷ ಸಂಗೀತ

ನಾಳೆ ಶುಕ್ರವಾರ ಸಂಜೆ ಪ್ರದೋಷದ ಪ್ರಯುಕ್ತ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಶ್ರೀ ಮತಿ ಜಿ ಎ ರಂಗನಾಯಕಮ್ಮನವರ ಸಂಗೀತವು ವಿ॥ ಮಹಾದೇವಪ್ಪನವರ ಪಿಟೀಲು ಮತ್ತು ವಿ॥ ಕೇಶವಪ್ಪನವರ ಮೃದಂಗದೊಡನೆ ನಡೆಯುವುದು ಸರ್ವರಿಗೂ ಪ್ರವೇಶದ ಅವಕಾಶವಿದೆ

ಬೆಂಕಿಯಿಂದ ಮಗು ಮತ್ತು ೧೯ ದನಗಳ ನಾಶ

ಶಿರಾ ಬಳಿ ಒಂದು ಹಳ್ಳಿಯಲ್ಲಿ ಬೆಂಕಿ ಅನಾಹುತವುಂಟಾಗಿ ೧ ಮಗು ಮತ್ತು ೧೯ ದನಕರುಗಳ ನಷ್ಟವು ೬೬ ಮನೆಗಳೂ ಆಹಾರ ಧಾನ್ಯವೂ ನಾಶವಾದವು ೫೦೦೦ ರೂ ನಷ್ಟವುಂಟಾಗಿದೆ

ಕಳೆದ ಮಾರ್ಚಿಯಲ್ಲಿ ನೆಹರೂ ರಾಜೀನಾಮೆ ಕೊಡ ಬೇಕೆಂದಿದ್ದರು

ಕಳೆದ ಮಾರ್ಚಿ ತಿಂಗಳಲ್ಲಿ ಪೂರ್ವ ಮತ್ತು ಪಶ್ಚಿಮ ಬಂಗಾಳಗಳಲ್ಲಿಯುಂಟಾದ ದುರ್ಘಟನೆಗಳನ್ನು ತಹಬಂದಿಗೆ ತರುವ ಸಲುವಾಗಿ ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳು ಉಭಯ ಬಂಗಾಳಗಳಲ್ಲೂ ಪ್ರವಾಸ ಕೈಕೊಳ್ಳಬೇಕೆಂದು ನೆಹರೂರವರು ತಮ್ಮ ಸಲಹೆಯನ್ನು ಲಿಯಾಖತ್ ಅಲಿಯವರು ನಿರಾಕರಿಸಿದ ಕಾರಣ ತಾವು ಪ್ರಧಾನ ಸಚಿವರಾಗಿ ಈ ಬಗ್ಗೆ ಏನನ್ನೂ ಮಾಡಲಾಗದಿದ್ದುದಕ್ಕಾಗಿ ಬೇಸರಗೊಂಡು ಪಂಡಿತ ನೆಹರೂರವರು ಆಗಲೇ ತಮ್ಮ ಪದವಿಗೆ ರಾಜೀನಾಮೆ ಕೊಡಲು ನಿರ್ಧರಿಸಿದ್ದುದಾಗಿ ಪಾರ್ಲಿಮೆಂಟಿನಲ್ಲಿ ಅವರು ನೆನ್ನೆ ಹೇಳಿದರು ಆದರೆ ಪತ್ರಿಕೆಗೆ ಲಿಯಾಖತ್ ಅಲಿಯವರು ತಮ್ಮ ಆಹ್ವಾನವನ್ನಂಗೀಕರಿಸಿ ದೆಹಲಿಗೆ ಆಗಮಿಸಿ ಇಬ್ಬರಿಗೂ ತೃಪ್ತಿಕರವಾಗಿ ಒಪ್ಪಂದವಾದ ದರಿಂದ ನೆಹರೂರವರು ತಮ್ಮ ನಿರ್ಧಾರವನ್ನು ಬದಲಾಯಿಸಿದರೆಂದು ತಿಳಿಸಿದರು

ಕಾಶ್ಮೀರದ ಕಡೆಗೆ ಚೀಣಾದ ಕಮ್ಯೂನಿಸ್ಟ್ ಸೇನೆ

ಕಾಶ್ಮೀರದ ಈಶಾನ್ಯದಲ್ಲಿರುವ ಕಾರಾಕೋರಂ ಪರ್ವತ ಶ್ರೇಣಿಗಳ ಕಡೆಗೆ ಚೀಣಾದ ಕಮ್ಯೂನಿಸ್ಟರು ಬಂದಿರುವುದಾಗಿ ಕರಾಚಿಯ ಡಾನ್ ಪತ್ರಿಕೆಯ ರಾವಲ್ಪಿಂಡಿಯ ಸುದ್ದಿಗಾರರು ತಿಳಿಸಿರುತ್ತಾರೆ ಈಗಾಗಲೇ ೫೦೦೦ ಜನರು ವಿಮಾನಗಳಲ್ಲಿ ಬಂದಿರುವರೆಂದೂ ಪರ್ವತ ಶ್ರೇಣಿಯನ್ನು ಆಕ್ರಮಿಸಿದ ನಂತರ ಕಾಶ್ಮೀರದ ಲಡಾಕ್ ಪ್ರಾಂತವನ್ನು ಹಿಡಿಯಲು ಅವರಿಗೆ ಸುಲಭವಾಗುವುದೆಂದೂ ಹೇಳಲಾಗಿದೆ.

ಬಂಗಾಳ ವಿಭಜನೆಯ ರದ್ದು ಸಾಧ್ಯವಿಲ್ಲವೆಂದು ನೆಹರೂ

ಪಾರ್ಲಿಮೆಂಟಿನ ಅಧಿವೇಶನದಲ್ಲಿ ನೆನ್ನೆ ಬಹು ಮುಖ್ಯವಾದ ಭಾಷಣವನ್ನು ಮಾಡುತ್ತಾ, ಪ್ರಧಾನಿ ನೆಹರೂರವರು ಬಂಗಾಳದ ವಿಭಜನೆಯನ್ನು ರದ್ದುಗೊಳಿಸುವುದು, ಪಾಕಿಸ್ತಾನದಿಂದ ಪ್ರದೇಶವನ್ನು ಪಡೆಯುವುದು ಅಥವಾ ಜನವಿನಿಮಯವನ್ನು ಒದಲು ಮಾಡುವುದು ಇವೇ ಮುಂತಾದ ಸಲಹೆಗಳಿಂದ ಬಂಗಾಳದ ಸಮಸ್ಯೆಯನ್ನು ಬಗೆಹರಿಸುವ ಸೂಚನೆಗಳನ್ನೆಲ್ಲಾ ತೀವ್ರವಾಗಿ ಖಂಡಿಸಿದರು

ನೂತನ ನ್ಯಾಯಾಧೀಶರಿಗೆ ಸ್ವಾಗತ

[ಸ್ವಂ ವ ವರದಿ] ಬೆಂಗಳೂರು ೧೦

ಹೊಸ ನ್ಯಾಯಾಧೀಶರಾದ ಶ್ರೀ ಬಿ ವಾಸುದೇವ ಮೂರ್ತಿಯವರು ಈ ದಿನ ಅಧಿಕಾರವನ್ನು ವಹಿಸಿ ಶ್ರೀ ಮೇದಪ್ಪನವರ ಪೀಠದಲ್ಲಿ ಆಸನವನ್ನಲಂಕರಿಸಿದರು ಹೊಸ ಅಡ್ವೋಕೇಟ್ ಜನರಲ್ಲಾದ ಶ್ರೀ ಎ ಆರ್ ಸೋಮನಾಥ ಅಯ್ಯರ್ ರವರು ಅವರಿಗೆ ಸ್ವಾಗತವನ್ನು ಬಯಸಿದರು ಶ್ರೀ ವಾಸುದೇವ ಮೂರ್ತಿಯವರು ತಮ್ಮ ಧನ್ಯವಾದವನ್ನು ಸೂಚಿಸಿ, ದೇಶವು ಸ್ವಾತಂತ್ರ್ಯವನ್ನು ಪಡೆದಿರುವ ಈ ಸಮಯದಲ್ಲಿ ಎಲ್ಲರ ಹಕ್ಕುಬಾಧ್ಯತೆಗಳನ್ನೂ ಸಂರಕ್ಷಿಸಿ ನ್ಯಾಯ ನಿರ್ವಹಣೆ ಮಾಡುವ ಗುರುತರವಾದ ಜವಾಬ್ದಾರಿಯು ನ್ಯಾಯಾಲಯಗಳ ಮೇಲೆ ಬಿದ್ದಿರುವುದೆಂದು ಹೇಳಿದರು

ಕೋಲಾರದ ಚಿನ್ನದ ಗಣಿಗಳ ಭವಿಷ್ಯ

ಕೋಲಾರದ ಚಿನ್ನದ ಗಣಿಗಳ ಹೊಣೆಗಾರಿಕೆ ಮತ್ತು ಆಸ್ತಿಗಳನ್ನು ವಹಿಸಿಕೊಳ್ಳಲು ರೂಪಾಯಿ ಮೌಲ್ಯದ ಕಂಪೆನಿಗಳನ್ನು ಈ ವರ್ಷಾಂತ್ಯದೊಳಗೆ ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ ಈ ಹೊಸ ಕಂಪೆನಿಗಳ ಡೈರೆಕ್ಟರ ಸಮಿತಿಯಲ್ಲಿ ಮೈಸೂರು ಸರ್ಕಾರದ ಪ್ರತಿನಿಧಿಯೂ ಇರುವರು

ಡೆನ್ಮಾರ್ಕ್ ಸರ್ಕಾರ ರಾಜೀನಾಮೆ ಇತ್ತಿತು

ಡೆನ್ಮಾರ್ಕಿನ ಆರ್ಥಿಕ ಸ್ಥಿತಿಯು ಕಳವಳಕಾರಿಯಾಗಿರುವುದರಿಂದ ಅಲ್ಲಿನ ಸಮಾಜವಾದಿ ಸರ್ಕಾರವು ರಾಜೀನಾಮೆಯನ್ನಿತ್ತಿದೆ ಸರ್ಕಾರದ ವಿರೋಧ ಪಕ್ಷದವರು ಪಾರ್ಲಿಮೆಂಟಿನಲ್ಲಿ ತೀವ್ರವಾಗಿ ಪ್ರತಿಭಟಿಸಿದರೆಂದೂ, ಅದರಿಂದ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕಾಯಿತೆಂದೂ ಹೇಳಲಾಗಿದೆ

ಸ್ವಾತಂತ್ರ್ಯದಿನ ನೆಹರುರಿಂದ ಧ್ವಜಾರೋಹಣ

ಬರುವ ೧೫ನೇ ತಾ॥ ಸ್ವಾತಂತ್ರ್ಯ ದಿನದಲ್ಲಿ ಪ್ರಧಾನಿ ನೆಹರೂರವರು ಚಾರಿತ್ರಾರ್ಹವಾದ ದೆಹಲಿಯ ಕೆಂಪು ಕೋಟೆಯ ಮೇಲೆ ರಾಷ್ಟ್ರೀಯ ಬಾವುಟವನ್ನು ಹಾರಿಸುವರು ಆ ದಿನದ ಗೌರವಾರ್ಥವಾಗಿ ೩೧ ತೋಪುಗಳನ್ನು ಹಾರಿಸಲಾಗುವುದು. ಸೈನ್ಯ, ನೌಕಾಬಲ ಮತ್ತು ವಿಮಾನ ದಳದ ೭೦೦ ಜನರು ಗೌರವವನ್ನು ಸಲ್ಲಿಸುವರು

ಗ್ವಾಲಿಯರ್ ವಿದ್ಯಾರ್ಥಿಗಳ ಮೇಲೆ ಗುಂಡಿನೇಟು

ಹಲವು ಕಾಲೇಜುಗಳನ್ನು ಪ್ರತಿನಿಧಿಸುವ ಸುಮಾರು ಗ್ವಾಲಿಯರಿನ ೧೭೦೦ ಮಂದಿ ವಿದ್ಯಾರ್ಥಿಗಳು ನೆನ್ನೆ ಸೋಮವಾರ ವಿಕ್ಟೋರಿಯಾ ಮೈದಾನದಲ್ಲಿ ಸತ್ಯಾಗ್ರಹ ಮಾಡಿದ ಸಂದರ್ಭದಲ್ಲಿ, ಇದ್ದಕ್ಕಿದ್ದಂತೆ ಉದ್ರಿಕ್ತರಾದ ಗುಂಪಿನ ಮೇಲೆ ಪೊಲೀಸರು ಗುಂಡು ಹಾರಿಸಿದುದರಿಂದ ಇಬ್ಬರು ವಿದ್ಯಾರ್ಥಿಗಳು ಸತ್ತು ೭ ಮಂದಿಗೆ ಗಾಯವಾಗಿದೆ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಅಲ್ಲಿನ ಮುಖ್ಯ ಮಂತ್ರಿಗಳಿಗೆ ಸಲ್ಲಿಸಬೇಕೆಂದು ಕೇಳಿದಾಗ ಅಧಿಕಾರಿಗಳು ಅವಕಾಶ ಕೊಡದಿದ್ದುದಕ್ಕಾಗಿ ಸತ್ಯಾಗ್ರಹವನ್ನಾರಂಭಿಸಲಾಗಿತ್ತು

ಅಕ್ಟೋಬರ್ ೧೫ನೇ ತಾ॥ ಸ್ಟಾಲಿನ್ನರಿಗೆ ಗಂಡಾಂತರ ?

ಜರ್ಮನಿಯ ಪ್ರಸಿದ್ಧ ಜ್ಯೋತಿಷ ಶಾಸ್ತ್ರಜ್ಞ ಹರ್ಮ್ ಚಾಪ್ಮನರವರು ಭವಿಷ್ಯ ನುಡಿದಿರುವ ಪ್ರಕಾರ ಬರುವ ಅಕ್ಟೋಬರ್ ೧೫ರಲ್ಲಿ ರಷ್ಯದ ಸರ್ವಾಧಿಕಾರಿ ಸ್ಟಾಲಿನ್ನರಿಗೆ ಗಂಡಾಂತರವಿರುವುದಾಗಿಯೂ, ಆ ದಿನ ಅವರ ಜಾತಕದ ಪ್ರಕಾರ ಬಹು ಕ್ರೂರ ದಿನವೆಂದೂ ಗೊತ್ತಾಗಿದೆ ಅವರ ಜನ್ಮ ನಕ್ಷತ್ರದ ಸ್ಥಾನಕ್ಕೆ ಕ್ರೂರ ಗ್ರಹಗಳು ಸೆಪ್ಟೆಂಬರ್ ೨೯ರಿಂದ ಬರುವ ಅಕ್ಟೋಬರ್ ೧೫ರ ವರೆಗೂ ಕಾಡಿಸುವುದಾಗಿ ಅವರು ಹೇಳುತ್ತಾರೆ ೧೫ನೇ ತಾ॥ ಮಧ್ಯಾಹ್ನ ೨ಗಂಟೆಗೆ ಒಳಗೆ ಮಹತ್ವದ ಗಂಡಾಂತರಕ್ಕೆ ಸ್ಟಾಲಿನ್ನರು ಒಳಗಾಗಬೇಕಾಗುವುದು

ಅಡಚಣೆ ನೀತಿ ತ್ಯಜಿಸಲು ರಷ್ಯಾ ಪ್ರತಿನಿಧಿಗೆ ಎಚ್ಚರಿಕೆ

ಭದ್ರತಾ ಸಮಿತಿಯಲ್ಲಿ ರಷ್ಯವು ಕೈಗೊಂಡಿರುವ ತನ್ನ ಅಡಚಣೆಯ ಕಾರ್ಯನೀತಿಯನ್ನು ೪೮ ಗಂಟೆಗಳೊಳಗಾಗಿ ಬದಲಾಯಿಸದಿದ್ದರೆ, ಸಮಿತಿಯು ಅಧ್ಯಕ್ಷರ ವಿಮರ್ಶೆಗಾಗಿ ಮುಂದಿನ ಕಾರ್ಯವಿಧಾನವನ್ನು ಗೊತ್ತುಪಡಿಸಲು ಇತರ ಸದಸ್ಯರು ನಿರ್ಧರಿಸಬೇಕಾಗುವುದೆಂದು ಅಮೇರಿಕದ ಪ್ರತಿನಿಧಿ ವಾರೆನ್ ಆಸ್ಟಿನರವರು ನೆನ್ನೆ ರಷ್ಯದ ಪ್ರತಿನಿಧಿಗೆ ಅಂತಿಮ ಎಚ್ಚರಿಕೆಯಿತ್ತರು ಉತ್ತರ ಮತ್ತು ದಕ್ಷಿಣ ಕೊರಿಯಾಗಳ ಪ್ರತಿನಿಧಿಗಳನ್ನು ಕರೆಸಬೇಕೆಂದು ರಷ್ಯದ ಪ್ರತಿನಿಧಿ ೩॥ ಗಂಟೆಗಳ ಕಾಲ ಚರ್ಚೆ ನಡೆಸಿದ ನಂತರ ಮೇಲ್ಕಂಡಂತೆ ಎಚ್ಚರಿಕೆಯನ್ನೀಯಲಾಯಿತು

ಕೇಂದ್ರ ಸರ್ಕಾರದಿಂದ ಸಂಸ್ಥಾನಗಳಿಗೆ ಸಾಲವಿಲ್ಲ

ಎಲ್ಲಾ ಸಂಸ್ಥಾನಗಳ ಸರ್ಕಾರಗಳಿಗೂ ಭಾರತ ಸರ್ಕಾರದವರು ಸೂಚನೆಯಿತ್ತು ಕೇಂದ್ರದ ಹಣಕಾಸಿನ ಸ್ಥಿತಿಯು ಉತ್ತಮಗೊಳ್ಳುವವರೆಗೂ ಇನ್ನು ಮುಂದೆ ಹೊಸದಾಗಿ ಸಾಲ ಅಥವಾ ದ್ರವ್ಯ ಸಹಾಯವನ್ನು ಕೊಡುವುದಿಲ್ಲವೆಂದು ತಿಳಿಸಿರುತ್ತಾರೆ ಕೇಂದ್ರ ಸರ್ಕಾರದವರೇ ೧೫ ಕೋಟಿ ರೂಗಳ ಸಾಲವನ್ನು ಎತ್ತುವವರಾಗಿದ್ದು ಆ ಸಂಸ್ಥಾನ ಸರ್ಕಾರಗಳೂ ಅನಿವಾರ್ಯ ಪರಿಸ್ಥಿತಿ ಹೊರತು ಸಾಲವನ್ನು ಎತ್ತಕೂಡದೆಂದು ತಿಳಿಸಲಾಗಿದೆ ಅಭಿವೃದ್ಧಿ ಯೋಜನೆಗಳನ್ನೂ ಸಹ ಮುಂದಾ ಹಾಕಲು ಸೂಚನೆ ಕೊಡಲಾಗಿದೆ

ಪದಾರ್ಥಗಳ ಬೆಲೆ ತಗ್ಗಿಸಲು ಶಾಸನ ಬೇಕು

ಮುಳವಳ್ಳಿ ವೀರಪ್ಪನವರ ಹೇಳಿಕೆ

ಮುಳವಳ್ಳಿ ವೀರಪ್ಪನವರು ಈ ರೀತಿ ಬರೆದು ತಿಳಿಸಿದ್ದಾರೆ

ದೇಶದ ಅನ್ನ ಸಮಸ್ಯೆಯು ಅತೀಯಾಗಿ, ಹಸಿವಿನ ಕಿಚ್ಚು ಜನರನ್ನು ಅಗ್ನಿ ಕುಂಡಕ್ಕೆ ಆಹುತಿ ಮಾಡುತ್ತಿರುವುದು ಈ ಸಮಸ್ಯೆಯನ್ನು ಬಿಡಿಸಲಾರದ ಪ್ರಭುತ್ವವು ಮತ್ತಷ್ಟು ತೊಡಕನ್ನೇ ಉಂಟುಮಾಡಿ ಪ್ರಜಾ ಸಮುದಾಯದ ಜೀವ ಹಿಂಡುವ ವ್ಯಾಪಾರಸ್ಥರಿಗೆ ಆಧಾರ ಸಚಿವರು ಸ್ವಮಾತ್ಯಗಳನ್ನು ಮಾಡುತ್ತಿರುತ್ತಾರೆ ಇದನ್ನು ಸರ್ಕಾರದ ದೌರ್ಬಲ್ಯವೆಂದು ಪ್ರಜಾ ಸಮುದಾಯದ ಜೀವಹಿಂಡುವವರು ಭಾವಿಸಿರುತ್ತಾರೆ ಪದಾರ್ಥಗಳ ಬೆಲೆಯು ಗಗನವನ್ನು ಮುಟ್ಟುತ್ತಿದೆ ಹಸಿವಿನ ಬಾಧೆಗೆ ಜನರು ಸಾಯುತ್ತಿದ್ದರೂ, ಉಗ್ರಾಣಗಳಲ್ಲಿ ಧಾನ್ಯಗಳನ್ನು ಬಚ್ಚಿಡಲಾಗಿದೆ ಹಾಹಾಕಾರವು ಸನ್ನಿಹಿತವಾಗುತ್ತಿದೆ ಬಡ ಜನರೇ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಆಧಾರಸ್ತಂಭದಂತಿರುವವರು ಅವರು ಪಡುವ ಯಾತನೆಯು ಕಾಂಗ್ರೆಸ್ಸಿನವರನ್ನು ಮುಖ ಮುಚ್ಚುವಂತೆ ಮಾಡುತ್ತದೆ ಇನ್ನಾದರೂ ಪ್ರಭುತ್ವ ಪಡೆದವರು ಉಗ್ರ ಮತ್ತು ಕಠಿಣ ಶಾಸನಗಳನ್ನು ಮಾಡಿ, ಬೆಲೆಯನ್ನು ಇಳಿಸಿ, ಅಕ್ರಮವಾಗಿ ಕೂಡಿಟ್ಟುಕೊಂಡಿರುವವರ ಗೃಹಗಳನ್ನು ಶೋಧಿಸಿ ಜನರಿಗೆ ಹಂಚಿ ಹೆಚ್ಚಿಸಲಿ ಅಗತ್ಯವಾಗಿಯೂ ಹಸಿವು ಹಿಂಗುವುದು

ಈ ವರ್ಷ ೪॥ ಸಾವಿರ ಹೊಸ ಅಂಚೆ ಕಛೇರಿಗಳು

೨ ಸಾವಿರ ಪ್ರಜಾ ಸಂಖ್ಯೆ ಇರುವ ಸ್ಥಳಕ್ಕೆ ಒಂದು ಅಂಚೆ ಕಛೇರಿಯನ್ನು ಕೊಡುವ ನೀತಿಯ ಪ್ರಕಾರ ಪ್ರಕೃತ ಸಾಲಿನಲ್ಲಿ ೪೬೦೫ ಕಛೇರಿಗಳನ್ನು ಇಲಾಖೆಯವರು ತೆರೆಯುವರು ೧೯೪೭ರಿಂದ ಇದುವರೆಗೆ ೭ ಸಾವಿರ ಕಛೇರಿಗಳನ್ನು ತೆರೆಯಲಾಗಿದೆ ಮದ್ರಾಸು ಪ್ರಾಂತದಲ್ಲೇ ೨॥ ಸಾವಿರ ಕಛೇರಿಗಳಾಗವುವು

ಸಹಾಯಾರ್ಥ ಸಿನಿಮಾ

ಮೈಸೂರು ಚಾಮರಾಜ ಮೊಹಲ್ಲಾ ಸರಸ್ವತೀಪುರದಲ್ಲಿರುವ ಶ್ರೀ ಗಾಯತ್ರೀ ಸಮಾಜದ ಸಹಾಯಾರ್ಥವಾಗಿ ಒಲಂಪಿಯಾ ಟಾಕೀಸಿನವರು ತಾ|| ೧೨-೮-೫೦ನೇ ಶನಿವಾರ ಬೆಳಗ್ಗೆ ೧೧ ಘಂಟೆಗೆ "ಜವಾಬ್" ಚಿತ್ರವನ್ನು ಬೆನಿಫಿಟ್ ಷೋ ಕೊಡಲು ದಯಮಾಡಿ ಒಪ್ಪಿರುತ್ತಾರೆ ಈ ಸಹಾಯಾರ್ಥ ಪ್ರದರ್ಶನಕ್ಕೆ ದಯಮಾಡಿಸಿ ಮಹಾಜನರು ಮೇಲ್ಕಂಡ ವಿದ್ಯಾ ಸಂಸ್ಥೆಗೆ ನೆರವು ನೀಡಬೇಕೆಂದು ಸಮಾಜದ ಸಂಚಾಲಕರು ಕೋರಿರುತ್ತಾರೆ

SRI GAYATHRI
TALKIES
Daily 3 Shows
NEPTUNE'S DAUGHTER
With -Esther Williams & Red Skelton
(Extended for 2 days more 11th & 12th)

ಇಂಗ್ಲೆಂಡಿಗೆ ಸರ್ ಮಿರ್ಜಾರವರ ಪ್ರಯಾಣ

ಸಂಸ್ಥಾನದ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲರು ಈ ತಿಂಗಳ ಮಧ್ಯ ಭಾಗದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸುವರು ಹಾಗೆಯೇ ಫ್ರಾನ್ಸಿಗೂ ಸಹ ಅವರು ಹೋಗುವರು ೩ ತಿಂಗಳ ನಂತರ ವಾಪಸ್ ಬರುವರು

ಪುರಾಣ ಮತ್ತು ಹರಿಕಥೆ

[illegible] ಮಂಡಿ ಮೊಹಲ್ಲಾ [illegible] ಗಡಿ ವೀದಿಯ ಶ್ರೀರಾಮಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಮಾಮೂಲಿನಂತೆ ಪ್ರತಿ ನಿತ್ಯ ನಡೆಯುತ್ತಿರುವಂತೆ ಭಾರತ ಪುರಾಣವು ಸಾಯಂಕಾಲ ೬ ಘಂಟೆಗೆ ಶ್ರೀಗಳಾದ [illegible] ಗೌಡ ಮತ್ತು ಹಿರಣ್ಣಯ್ಯನವರಿಂದ ನಡೆಯುವುದು ಮತ್ತು ನಾಳೆ ಸಂಜೆ ೭ ಘಂಟೆಗೆ ಶ್ರೀ ಎಚ್ ಎಸ್ ಶಿವಲಿಂಗಸ್ವಾಮಿಗಳಿಂದ ಸಿದ್ಧರಾಮೇಶ್ವರ ಜನನವೆಂಬ ಹರಿಕಥೆಯೂ ಶ್ರೀ ಅಮ್ಮನವರಿಗೆ ಚಾಮುಂಡೇಶ್ವರೀ ಅಲಂಕಾರವೂ ಏರ್ಪಟ್ಟಿವೆ

ಮನೆ ಬಿಕರಿಗಿದೆ

ಮೈಸೂರು ಚಾಮರಾಜ ಮೊಹಲ್ಲಾ [illegible] ಬೀದಿಯಲ್ಲಿರುವ ೪೬ನೇ ನಂಬರಿನ ಮನೆಯು ಬಿಕರಿಗೆ ಇದೆ ನಲ್ಲಿ, ದೀಪ ಸೌಕರ್ಯಗಳಿಂದ ಕೂಡಿದ ವಿಶಾಲವಾದ ತಾರಸಿ ಮನೆ ವಿವರಗಳಿಗೆ ಕೆಳಗಿನ ವಿಳಾಸದಲ್ಲಿ ಬೆಳಗ್ಗೆ ೭ರಿಂದ ೯ ಘಂಟೆಯೊಳಗೆ ವಿಚಾರಿಸಿ —

1167, ಬಜ್ಜಣ್ಣನವರ ಬೀದಿ, ಚಾಮರಾಜಪುರಂ ಮೈಸೂರು

ಕಮ್ಯೂನಿಸ್ಟರಿಂದ ೪೦೦ ಕಾಂಗ್ರೆಸ್ಸಿನವರ ಕೊಲೆ

ತೆಲುಗು ಜಿಲ್ಲೆಗಳಲ್ಲಿ ಕಮ್ಯೂನಿಸ್ಟರು ೪೦೦ ಜನ ಕಾಂಗ್ರೆಸ್ಸಿನವರನ್ನು ಕೊಂದಿರುವುದಾಗಿ ಮದ್ರಾಸು ಶಾಸನ ಸಭಾ ಸದಸ್ಯರೊಬ್ಬರು ತಿಳಿಸಿರುವರು

ರಷ್ಯದ ಆರೋಗ್ಯ ಖಾತೆಗೆ ವೆಚ್ಚ

ರಷ್ಯವು ಪ್ರಕೃತ ಸಾಲಿನಲ್ಲಿ ೨೨೦೦ ಕೋಟಿ ರೂಬಲ್ಲು (೫೫೦೦ ಕೋಟಿರೂ) ಹಣವನ್ನು ಆರೋಗ್ಯ ಇಲಾಖೆಯ ವೆಚ್ಚಕ್ಕಾಗಿ ಕೊಡುವುದು

||ಶ್ರೀ||
ಗಣೇಶಾ ಟಾಕೀಸ್
11-8-50ರಿಂದ ದಿನವಹಿ 3 ಆಟಗಳು
- ಕೃಷ್ಣಭಕ್ತಿ -
(ತಮಿಳು)
ಪಾತ್ರ ಪಿ ಯು ಚಿನ್ನಪ್ಪ, ಟಿ ಆರ್ ರಾಜಕುಮಾರಿ, ಕೃಷ್ಣ ಮಧುರಂ ಮುಂತಾದವರು

ಪ್ರಕಟಣೆ

— ೦ —

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು

ಷೇರು ಸರ್ಟಿಫಿಕೇಟ್ ಗೈರುಹಾಜರಿ ನೋಟೀಸು

ಷೇರು ಸರ್ಟಿಫಿಕೇಟ್ ನಂ ೫೧೭೮

ಎರಡು, ಷೇರ ನಂಬರು ೫೭೦೪೯ ಮತ್ತು ೫೭೦೫೦

ಈ ಮೇಲ್ಕಂಡ ನಂಬರುಗಳ ಷೇರುಗಳ ಮೈಸೂರು ಲಕ್ಷ್ಮೀಪುರಂ ಹೊಸಕೇರಿಯಲ್ಲಿರುವ ಶ್ರೀ ಎಂ ಬಿ ವೆಂಕಟಾಚಾರ್ ಎಂಬುವರ ಹೆಸರಿನಲ್ಲಿ ಮೇಲ್ಕಂಡ ಕಂಪೆನಿಯಲ್ಲಿ ರಿಜಿಸ್ಟರಾಗಿದ್ದು ಅದು ಗೈರುಹಾಜರಿಯಾಗಿರುತ್ತೆಂದು ತಿಳಿದುಬಂದಿದೆ ಇದಕ್ಕೆ ಬದಲಾಗಿ ಬೇರೆ (Duplicate) ಸರ್ಟಿಫಿಕೇಟ್ ಬೇಕೆಂದು ಅರ್ಜಿ ಬಂದಿರುತ್ತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ಅಸಲು ಸರ್ಟಿಫಿಕೇಟುಗಳನ್ನು ಯಾವ ವಿಧದಲ್ಲಿಯೂ ಯಾರೂ ಮಾರಾಟ, ವಗೈರೆ ಮಾಡಕೂಡದು ಮತ್ತು ಈ ತಾರೀಖಿನಿಂದ ೧೫ ದಿನಗಳಲ್ಲಿ ಕಂಪೆನಿಗೆ Duplicate ಷೇರು ಸರ್ಟಿಫಿಕೇಟ್ ಕೊಡುವ ವಿಚಾರದಲ್ಲಿ ತಕರಾರು ಇದ್ದರೆ ಲಿಖಿತ ಮೂಲಕ ತಿಳಿಸತಕ್ಕದ್ದು ಇಲ್ಲದಿದ್ದಲ್ಲಿ ಮುಂದಿನ ಕ್ರಮ ನಡೆಸಲಾಗುತ್ತೆ

ಬಿ ಎಸ್. ವಿಶ್ವೇಶ್ವರಯ್ಯ,
ಕಾರ್ಯದರ್ಶಿ
೧೦-೮-೫೦

ಚಾಮುಂಡೇಶ್ವರಿ
ಟಾಕೀಸ್
10-8-50 ರಿಂದ ದಿನವಹಿ 3 ಆಟಗಳು
* ಸಬಾಯಿ *
(ಹಿಂದಿ)
ಪಾತ್ರ - ನಾಸಿರ್ ಮತ್ತು ಸ್ವರ್ಣಲತಾ
(ಸ್ವರ್ಣಾ ಮತ್ತು [illegible])

ರಾಜಕಮಲ್,
ಮೈಸೂರು
11-8-50ರಿಂದ ಅಮೋಘ 2ನೇ ವಾರ
ದಿನವಹಿ 3 ಆಟಗಳು
ಕೀಲುಗುರ್ರಂ
(ತೆಲುಗು ಚಿತ್ರ)
ಅಂಜಲಿ ದೇವಿ, ನಾಗೇಶ್ವರರಾವ್, ಸುಬ್ಬರಾವ್

-:ಬೆಳಗಿನ ಪ್ರದರ್ಶನಗಳು:-
11-8-50ರಿಂದ 3 ದಿನಗಳು ಮಾತ್ರ
ಮಿನರ್ವಾ ಮೂವಿಟೋನ್ ರವರ
- ಪುಕಾರ್ -
(ಹಿಂದಿ)
ತಾರಾಗಣ - ನಸೀಂ, ಚಂದ್ರಮೋಹನ್, ಸೊಹ್ರಾಬ್ ಮೋದಿ

ರಣಜಿತ್, ಮೈಸೂರು
11-8-50ರಿಂದ :: ಪ್ರತಿ ದಿನ ೩ ಆಟಗಳು
ಎ ವಿ. ಎಂ. ರವರ ತೆಲುಗು ಚಿತ್ರ
- ಜೀವಿತಂ -
ನಾರಾಯಣರಾವ್, ವರಲಕ್ಷ್ಮಿ, ವೈಜಯಂತಿಮಾಲಾ
ಮುಂತಾದವರ

ಪ್ರಭುದೇವಾ ಟಾಕೀಸ್
12-8-50 ನೇ ಶನಿವಾರದಿಂದ
ಅಮೋಘ ಪ್ರಾರಂಭ :: ದಿನವಹಿ ೩ ಆಟಗಳು
ವಾಹಿನಿಯವರ
ಯೋಗಿ ವೇಮನ
(ತೆಲುಗು)
ಮುಖ್ಯ ಪಾತ್ರ:- ನಾಗಯ್ಯ, ರಾಜಮ್ಮ, ಲಿಂಗಮೂರ್ತಿ
ಮುಂತಾದವರು

Edited, printed and published by A K Nagarajan, at Sadhvi Press D Subbiah Road, Mysore

ಮಕ್ಕಳು, ಮಕ್ಕಳ, ಮಕ್ಕಳಿಗೆ ಬೇಕಾದ ಛತ್ರಿಗಳು
ಮಕ್ಕಳಿಗೆ ಹೊದಿಸುವ ಬೇಬಿ ರಗ್ಗು, ಮಕ್ಕಳ ಹಾಸಿಗೆಗೆ ಹಾಸುವ ರಬ್ಬರ್ ಷೀಟು, ಮಕ್ಕಳ ತೊಟ್ಟಿಲಿಗೆ ಕಟ್ಟುವ ಸೊಳ್ಳೆಪರದೆ ಮಕ್ಕಳಿಗೋಸ್ಕರ ಮಾಡಿರುವ ಮೃದುವಾದ [illegible], ಇವೆಲ್ಲಾ [illegible] ಕಂಪೆನಿಯಲ್ಲಿ ಸಿಗುತ್ತವೆ- ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ 792 [illegible] ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಶುಕ್ರವಾರ ೧೧-೮-೫೦ [ಸಂಚಿಕೆ ೨೦

ಅಮೆರಿಕದಲ್ಲೂ ಪಡಿತರ ಪದ್ಧತಿ ಜಾರಿ

ಗ್ವಾಲಿಯರ್ ಜನರ ಮೇಲೆ ಪುನಃ ಗುಂಡು

ನೆನ್ನೆ ಗ್ವಾಲಿಯರ್ ನಗರದಲ್ಲಿ ಸೈನಿಕರು ಪುನಃ ಉದ್ರಿಕ್ತ ಜನರ ಮೇಲೆ ಗುಂಡು ಹಾರಿಸಿದರು. ಇದರ ಫಲವಾಗಿ ೫ ಜನರು ಸತ್ತು ೨೭ ಮಂದಿಗೆ ಗಾಯವಾಗಿದೆ. ಕೆಲವು ಮುಸ್ಲಿಂ ಅಂಗಡಿಗಳ ಲೂಟಿಯಾದುದಲ್ಲದೇ, ಪ್ರಾಂತ ಕಾಂಗ್ರೆಸ್ ಕಛೇರಿ ಮೇಲೆ ಗಲಭೆಕೋರರು ಧಾಳಿ ನಡೆಸಿದರೆಂದು ವರದಿಯಾಗಿದೆ.

ಮಂತ್ರಿಗಳಿಗೆ ಪಾರ್ಲಿಮೆಂಟ್ ಅಧ್ಯಕ್ಷರ ಎಚ್ಚರಿಕೆ

ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಜಿ. ವಿ. ಮೌಲಂಕರ್‌ರವರು ನೆನ್ನೆ ಕೇಂದ್ರ ಮಂತ್ರಿಗಳಿಗೆ ಎಚ್ಚರಿಕೆಯ ಸೂಚನೆಯನ್ನಿತ್ತು ಸಭೆಯು ನಡೆಯುವ ಕಾಲದಲ್ಲಿ ಅವರು ಹಾಜರಿದ್ದು ಸಭಾ ಮರ್ಯಾದೆಯನ್ನು ಪಾಲಿಸಬೇಕೆಂದು ತಿಳಿಸಿದರು. [illegible] ಮತ್ತು ಮಂತ್ರಿ ಎನ್ ವಿ ಗಾಡ್ಗೀಲ್ಲರು ಸಭೆಯ ಮುಂದೆ ಹಲವು ಪತ್ರಗಳನ್ನು ಇಡಬೇಕಾಗಿದ್ದು, ಅವರನ್ನು ಅಧ್ಯಕ್ಷರು ಕರೆದಾಗ ಮಂತ್ರಿಗಳು ಹಾಜರಿರಲಿಲ್ಲ.

"ಅನ್ನ ಅಥವಾ ಗುಂಡಿನ ಏಟು ಕೊಡಿ"

ಬಿಹಾರ್ ಪ್ರಾಂತದ ಬೆಗುಸರೈ ಎಂಬಲ್ಲಿ ಕಳೆದ ಸೋಮವಾರ ಅಲ್ಲಿನ ಹಣಕಾಸಿನ ಸಚಿವರು ಭೇಟಿ ಕೊಡುವರೆಂಬ ಸುದ್ದಿಯನ್ನು ಕೇಳಿ ಅಕ್ಕ ಪಕ್ಕದ ಗ್ರಾಮಗಳ ಸುಮಾರು ನೂರು ಜನರು ಅಲ್ಲಿಗೆ ಹೋಗಿ ನಗರದ ಬೀದಿಗಳಲ್ಲಿ ಪ್ರದರ್ಶನ ನಡೆಸಿ "ಆಹಾರ ಕೊಡಿ ಇಲ್ಲವೇ ಗುಂಡಿನಿಂದ ಹೊಡೆಯಿರಿ" ಎಂದು ಘೋಷಿಸಿದರೆಂದು ವರದಿಯಾಗಿದೆ. ಸಚಿವರು ತಮ್ಮ ಭೇಟಿಯ ಕಾರ್ಯಕ್ರಮವನ್ನು ರದ್ದು ಮಾಡಿದ್ದುದರಿಂದ ಪ್ರದರ್ಶನಕಾರರಿಗೆ ನಿರಾಶೆಯಾಯಿತು. ಸ್ಥಳೀಯ ಸರ್ಕಾರಿ ಅಧಿಕಾರಿಗಳು ಬಡವರಾದ ಪ್ರದರ್ಶನಕಾರರನ್ನು ಸಂತೈಸಿದರು.

ಪದಾರ್ಥಗಳ ಬೆಲೆ ಹತೋಟಿಗೆ ಶಾಸನ

ಪದಾರ್ಥಗಳ ಬೆಲೆಗಳು ಏರುತ್ತಿರುವುದನ್ನು ತಡೆಗಟ್ಟಲು ಶಾಸನ ಮಾಡುವುದಕ್ಕಾಗಿ ಮಸೂದೆಯೊಂದನ್ನು ತರಲಾಗುವುದೆಂದು ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ನೆನ್ನೆ ತಿಳಿಸಿದರು. ಈಗಿನ ಅಧಿವೇಶನದಲ್ಲೇ ಆ ಮುಖ್ಯ ಪ್ರಶ್ನೆಯನ್ನು ಚರ್ಚಿಸಲಾಗುವುದೆಂದು ಅವರು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ತೀವ್ರ ಆಹಾರಾಭಾವ

ಕಲ್ಕತ್ತಾ ಬಳಿ ಬರ್ದ್ವಾನ್ ಪುರದಲ್ಲಿ ಅನೇಕ ಮಂದಿ ಉಪವಾಸದಿಂದ ಸತ್ತ ಪ್ರಸಂಗವು ವರದಿಯಾಗಿದೆ. ಅಕ್ಕಿಯ ಅಭಾವವು ಬಹಳವಾಗಿ ಜನಗಳು ಗೆಡ್ಡೆ ಗೆಣಸುಗಳನ್ನು ತಿನ್ನುತ್ತಿರುವರೆಂದೂ, ಅಕ್ಕಿಯು ಕಾಳ ಸಂತೆಯಲ್ಲಿ ಒಂದು ಮಣಕ್ಕೆ ೫೦ ರೂ ವಂತೆ ಮಾರಲ್ಪಡುತ್ತಿದೆಯೆಂದೂ ವರದಿಯಾಗಿದೆ. ಕಲ್ಕತ್ತದಲ್ಲಿ ಪೂರ್ವ ಬಂಗಾಳದ ನಿರಾಶ್ರಿತನೊಬ್ಬನು ಹಸಿವನ್ನು ತಡೆಯಲಾರದೆ ಟ್ರಾಂ ಗಾಡಿಗೆ ಸಿಕ್ಕಿ ಆತ್ಮಹತ್ಯ ಮಾಡಿಕೊಂಡನೆಂದು ತಿಳಿದು ಬಂದಿದೆ.

ರಣರಂಗದಿಂದ ಉತ್ತರ ಕೊರಿಯನ್ನರ ಪಲಾಯನ

ಕೊರಿಯದ ದಕ್ಷಿಣ ತೀರದಲ್ಲಿ ಉತ್ತರ ಕೊರಿಯದ ಸೇನೆಗಳು ಹಿಮ್ಮೆಟ್ಟುತ್ತಿರುವುದಾಗಿಯೂ, ಅವು ಓಡುತ್ತಿರುವಾಗ ಶಸ್ತ್ರಾಸ್ತ್ರಗಳನ್ನು ಬಿಟ್ಟುಹೋಗುತ್ತಿರುವುದಾಗಿಯೂ ಹೇಳಲಾಗಿದೆ. ಚಿಂಜೂ ನಗರವನ್ನು ಕಮ್ಯೂನಿಸ್ಟರು ತ್ಯಜಿಸುವ ಸೂಚನೆಯಿದೆ. ಮತ್ತೊಂದು ಕಡೆ ಅವರು ಊರೊಂದನ್ನು ಹಿಡಿದಿರುವುದಾಗಿ ಹೇಳಲಾಗಿದೆ. ನಾಕ್ಟಂಗ್ ನದಿ ದಾಟಿದ ಉತ್ತರದವರ ಮೇಲೆ ಅಮೆರಿಕದ ಸೈನ್ಯಗಳು ಪ್ರಬಲವಾದ ಕಾರ್ಯಾಚರಣೆ ನಡೆಸಿದುದರಿಂದ ಉ. ಕೊರಿಯನ್ನರ ಮುನ್ನೋಟವು ನಿಧಾನವಾಗಿದೆ.

ಅಮೆರಿಕದಲ್ಲಿ ಪಿತೂರಿ ನಡೆಸಿದರೆ ಮರಣ ದಂಡನೆ

ಹೊರ ದೇಶಗಳಿಗೆ ಅನುಕೂಲ ಪಡಿಸುವುದಕ್ಕಾಗಿ ಪಿತೂರಿ ನಡೆಸಿದವರಿಗೆ ಮರಣ ದಂಡನೆ ಅಥವಾ ೩೦ ವರ್ಷದ ಸಜಾವನ್ನು ವಿಧಿಸಬೇಕೆಂದು ತರಲಾಗಿದ್ದ ನಿರ್ಣಯವು ಅಮೆರಿಕದ ಸನೆಟ್ ಸಭೆಯಲ್ಲಿ ಅಂಗೀಕೃತವಾಗಿರುತ್ತದೆ.

ಲಂಡನ್ನಿನ ಮೃಗಾಲಯಕ್ಕೆ ಬಂಗಾಳದ ಹುಲಿ ಮರಿಗಳು

ಬಂಗಾಳ ಹುಲಿಗಳ ಆವಾಸ ಸ್ಥಾನವಾದ ಸುಂದರ ವನಗಳ ಅರಣ್ಯ ಪ್ರದೇಶದಿಂದ ಹಿಡಿದು ತಂದಿರುವ ೬ ತಿಂಗಳ ೨ ಮರಿಗಳನ್ನು ಲಂಡನ್ನಿನ ಖಾಸಗಿ ಮೃಗಾಲಯದಲ್ಲಿರುವ ಸಲುವಾಗಿ ೮ ಸಾವಿರ ರೂ ಗಳಿಗೆ ಕೊಳ್ಳಲಾಗಿದೆ. ಅವನ್ನು ವಿಮಾನದಲ್ಲಿ ಸಾಗಿಸಲಾಗುವುದು. ಅವುಗಳನ್ನು ಪಂಜರದಲ್ಲಿಡದೆ ಸರಪಳಿಯಿಂದ ಕಟ್ಟಿ ಒಯ್ಯಲಾಗುವುದು.

ಏಷ್ಯಾದಲ್ಲಿ ಪೋರ್ಚುಗೀಸ್ ಸ್ವಾಮ್ಯಗಳನ್ನು ಬಿಡುವುದಿಲ್ಲ

ಪೋರ್ಚುಗಲ್ಲಿನ ಪ್ರಧಾನಿ ಡಾ॥ ಅಂಟೋನಿಯೋ ಸಾಲಜಾರ್‌ರವರು ಲಿಸ್ಬನ್ನಿನ ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತ—ಏಷ್ಯದ ಅಭ್ಯುದಯಕ್ಕಾಗಿಯೇ ಐರೋಪ್ಯರು ಏಷ್ಯದಲ್ಲಿರಬೇಕೆಂದೂ, ಏಷ್ಯದಲ್ಲಿರುವ ಪೋರ್ಚುಗೀಸ್ ಸ್ವಾಮ್ಯಗಳನ್ನು ತಮ್ಮ ಹತೋಟಿಯಲ್ಲೇ ಇಟ್ಟುಕೊಂಡಿರುವುದು ಅವಶ್ಯಕವೆಂದೂ ತಿಳಿಸಿರುವರು.

ಕಾಂಗ್ರೆಸ್ಸಿಗೆ ಬೆಂಬಲ ನೀಡಲು ಬೇಡಿಕೆ

ಕಾಂಗ್ರೆಸ್ ಅಧ್ಯಕ್ಷಿಣಿಯವರ ಪತ್ರಿಕಾ ಸಮ್ಮೇಳನ

ಸ್ವಂ. ವ. ಪ್ರೋ.] ಬೆಂಗಳೂರು ೧೧

ಈ ದಿನ ಬೆಳಗ್ಗೆ ಕಾಂಗ್ರೆಸ್ ಅಧ್ಯಕ್ಷಿಣಿ ಶ್ರೀಮತಿ ಯಶೋಧರಾ ದಾಸಪ್ಪನವರು ಪತ್ರಿಕಾ ಸಮ್ಮೇಳನವನ್ನು ನಡೆಸಿ ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರಿಗೇ ಮಹಾಜನರು ಬೆಂಬಲ ನೀಡಬೇಕೆಂದು ಬೇಡಿದರು. ಕಾಂಗ್ರೆಸ್ಸಿನಲ್ಲಿ ಇರಬಹುದಾದ ಲೋಪ ದೋಷಗಳನ್ನೇ ದೊಡ್ಡದು ಮಾಡಿ ಇತರ ಪಂಗಡದವರು ಮಾಡುವ ಪ್ರಚಾರಗಳಿಗೆ ಮರುಳಾಗಿ ಮಹಾಜನರು ಮೋಸಹೋಗಬಾರದೆಂದು ಅವರು ಕೋರಿದರು. ಶ್ರೀ ಟಿ. ಸುಬ್ರಹ್ಮಣ್ಯಂರವರೂ ಸಹ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿದರು.

○ ಕುಮಾರಾ ಪಾರ್ಕಿನ ಬಳಿ ೧೧ ಲಕ್ಷ ರೂ. ವೆಚ್ಚದಿಂದ ಕಟ್ಟಲಾಗಿರುವ ಅಂಡರ್ ಬ್ರಿಡ್ಜ್ ಸೇತುವೆಯ ಆರಂಭೋತ್ಸವವನ್ನು ಈ ದಿನ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ನೆರವೇರಿಸಿದರು.

○ ದಿನವೂ ಆಡಳಿತ ಕ್ರಮದಲ್ಲಿ ಮಂತ್ರಿಗಳು ಪ್ರವೇಶಿಸದೆ ಮದ್ರಾಸು ಬೊಂಬಾಯಿ ಗಳಲ್ಲಿರುವಂತೆ ಸರ್ಕಾರದ ನೀತಿ ಮತ್ತು ಶಾಸನ ನಿರ್ಮಾಣದಲ್ಲಿ ಮಾತ್ರ ತೊಡಗುವುದರಿಂದ ಆಡಳಿತ ಯಂತ್ರದಲ್ಲಿ ಹೆಚ್ಚು ದಕ್ಷತೆಯೂ, ಬೇಗನೆ ಉಂಟಾಗುವುದೆಂಬ ತಿಳುವಳಿಕೆಯನ್ನು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳಲ್ಲಿ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದ್ದ ಸಮಿತಿಯವರು ಮಾಡಿರುವರೆಂದು ತಿಳಿದುಬಂದಿದೆ.

○ ಶನಿವಾರಗಳಲ್ಲಿ ಬೆಳಗ್ಗೆ ೯ ರಿಂದ ಮಧ್ಯಾಹ್ನ ೧ ರ ವರೆಗೆ ಕೆಲಸ ಮಾಡುವುದರಿಂದ ತಮಗೆ ತೊಂದರೆಯುಂಟಾಗುವುದೆಂದು ಬೆಂಗಳೂರಿನ ಸರ್ಕಾರಿ ನೌಕರರ ಸಂಘದವರು ಇದಕ್ಕೆ ಬದಲಾಗಿ ಕೆಲಸದ ಕಾಲವನ್ನು ಬೆಳಗ್ಗೆ ೮ರಿಂದ ಮಧ್ಯಾಹ್ನ ೧೨ ಗಂಟೆವರೆಗೆ ಗೊತ್ತುಮಾಡಿ ಸರ್ಕಾರದವರು ಆಜ್ಞೆ ಹೊರಡಿಸಬೇಕೆಂದು ಕೋರಿದ್ದಾರೆ.

○ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ ಸಂಸ್ಥಾನಾದ್ಯಂತ ಇದೇ ೧೫ ನೇ ತಾರೀಖು ಸಾರ್ವತ್ರಿಕ ರಜಾದಿನವೆಂದು ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಶಾಸನದ ಪ್ರಕಾರ ಆಜ್ಞೆ ಹೊರಡಿಸಲಾಗಿದೆ.

ಅಮೆರಿಕದಲ್ಲೂ ಪಡಿತರ ಪದ್ಧತಿ

ನೆನ್ನೆ ಅಮೆರಿಕದ ಪ್ರತಿನಿಧಿ ಸಭೆಯಲ್ಲಿ ಅಲ್ಲಿನ ಅಧ್ಯಕ್ಷ ಟ್ರೂಮನ್ನರಿಗೆ, ದೇಶದಲ್ಲಿ ಪದಾರ್ಥಗಳನ್ನು ಪಡಿತರಗೊಳಿಸುವ ಬಗ್ಗೆಯೂ ಮತ್ತು ಪದಾರ್ಥಗಳ ಬೆಲೆಯನ್ನು ಹತೋಟಿ ಮಾಡುವ ಬಗ್ಗೆಯೂ ಅಧಿಕಾರ ಕೊಡುವ ಮಸೂದೆಯು ಮಂಜೂರಾಯಿತು.

ಭಾರತ ಸರ್ಕಾರದ ಹೊಸ ಉಪಸಚಿವರುಗಳು

ಕೇಂದ್ರ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ [illegible], ಮೇಜರ್ ಜನರಲ್ ಹಿಮ್ಮತ್ ಸಿಂಗ್ ಮತ್ತು ಶ್ರೀ [illegible]ರವರುಗಳನ್ನು ಭಾರತ ಸರ್ಕಾರದ ಉಪಸಚಿವರುಗಳನ್ನಾಗಿ ನೇಮಿಸಲಾಗಿದೆ. [illegible]

ಸಿಂಹಳದ ಗೌರ್ನರ್ ಜನರಲ್ಲರು ಆನೆಗಳಿಂದ ಪಾರು

ಸಿಲೋನಿನ ಗೌರ್ನರ್ ಜನರಲ್ ಲಾರ್ಡ್ ಸೋಲ್ಬರಿ, ಪಾರ್ಲಿಮೆಂಟಿನ ಅಧ್ಯಕ್ಷ ಸರ್ ಫ್ರಾನ್ಸಿಸ್ ಮೊಲಮೂರೆ ಮತ್ತು [illegible]ರವರುಗಳು [illegible] ಪ್ರದೇಶವೊಂದರಲ್ಲಿ ಹಿಡಿಯಲಾಗಿದ್ದ ಆನೆಗಳನ್ನು ಪಳಗಿಸುವ ಕಾರ್ಯವನ್ನು ನೋಡುತ್ತಿರುವಾಗ, ಒಂದು ಗಂಡಾನೆಯು ರೋಷದಿಂದ ಘೀಳಿಡುತ್ತಾ ಗೌರ್ನರ್ ಜನರಲ್ಲರ ಕಡೆಗೆ ನುಗ್ಗಿತು. ಅದರ ಹಿಂದೆ ಇತರ ಆನೆಗಳೂ ನುಗ್ಗಿದವು. ಅವರು ತಕ್ಷಣವೇ ಮುಳ್ಳುಬೇಲಿಯ ಸಂದಿಯಲ್ಲಿ ಅವಿತುಕೊಂಡುದರಿಂದ, ಅಪಾಯದಿಂದ ತಪ್ಪಿಸಿಕೊಂಡರು. [illegible] ಮುಖ್ಯ ಹೆಬ್ಬಾಗಿಲನ್ನು ಭದ್ರ ಮಾಡಿದರು. ಶಾಸನ ಸಭಾಧ್ಯಕ್ಷರು ಬೇಲಿಯೊಂದನ್ನು ಹಾರಿ ಹೊರಗೆ ಬಿದ್ದರು.

ದಾರಿದ್ರ್ಯ ದೆಸೆಯಿಂದ ಮಗುವಿನ ಮಾರಾಟ

ಕೊಯಮತ್ತೂರು ಜಿಲ್ಲೆಯ ಅವನಾಶಿ ತಾಲ್ಲೂಕಿನ ಒಂದು ಹಳ್ಳಿಯ ಕರುಣಮ್ಮಾಳ್ ಎಂಬುವಳು ದಾರಿದ್ರ್ಯ ದೆಸೆಯಿಂದ ತನ್ನ ಮೂರು ವರ್ಷ ವಯಸ್ಸಿನ ಗಂಡು ಮಗುವನ್ನು ಸಾಕಲಾರದೆ ಅದನ್ನು ೫ ರೂ. ಗಳಿಗೆ ಮಾರಿದ ಪ್ರಸಂಗವು ವರದಿಯಾಗಿದೆ.

ಶಾಂತಿ ಸಂದೇಶ ಸಾರಲು ಭಾರತದ ಸಾಧು

ಭಾರತದ ಗೀತಾ ಮಂದಿರ ಮತ್ತು ಸಂಘಗಳ ಸಂಸ್ಥಾಪಕರಾದ ಸ್ವಾಮಿ ವಿದ್ಯಾನಂದಜಿಯವರು ಈ ತಿಂಗಳು ಅಂತ್ಯದೊಳಗೆ ಶಾಂತಿ ಸಂದೇಶವನ್ನು ಬೀರಲು ಯೂರೋಪಿಗೆ ತೆರಳುವರು. ಪ್ರಪಂಚದ ಶಾಂತಿ ಸ್ಥಾಪನೆಗಾಗಿ [illegible] ಪ್ರಾರ್ಥನೆಯನ್ನು [illegible] ಅವರನ್ನು [illegible].

ಉಪನ್ಯಾಸ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ 'ಸಾರ್ವಜನಿಕ ಅಭಿಪ್ರಾಯ' ಎಂಬ ವಿಷಯವಾಗಿ ಶ್ರೀ ಟಿ ಎಸ್ [illegible] ಭಾಷಣ ಮಾಡುವರು. ವಿಶ್ವ ವಿದ್ಯಾಲಯದ [illegible] ಶಾಸ್ತ್ರಿ [illegible] ಅಧ್ಯಕ್ಷತೆ ವಹಿಸುವರು.

ಅಮೇರಿಕದ ಮೇಲೆ ಉತ್ತರ ಕೊರಿಯನ್ನರ ದೂರು

ಕೊರಿಯಾದಲ್ಲಿ ಅಮೇರಿಕದ ಸೈನ್ಯಗಳು ಅನೇಕ ಅಕಾನುಷಿಕ ಕೃತ್ಯಗಳನ್ನು ಮಾಡಿವೆಯೆಂದು ಭದ್ರತಾ ಸಮಿತಿಗೆ ಉತ್ತರ ಕೊರಿಯಾ ಸರ್ಕಾರವು ದೂರು ಕೊಟ್ಟಿರುತ್ತದೆ. ಒಂದು ಕಡೆಯಲ್ಲಿ ನಡೆದ ವಿಮಾನ ಧಾಳಿಯಲ್ಲಿ ೭೦೦ ಮಂದಿ ನಾಗರೀಕರು ಸತ್ತರು, ೫೦೦ ಜನರಿಗೆ ಗಾಯವಾಗಿದೆಯೆಂದೂ ಈ ದುಷ್ಕೃತ್ಯಕ್ಕೆ ಭದ್ರತಾ ಸಮಿತಿ ಮತ್ತು ಅಮೇರಿಕಗಳು ಜವಾಬ್ದಾರರೆಂದೂ ತಿಳಿಸಲಾಗಿದೆ

ಸ್ಥಳೀಯ ಭಾಷೆಗಳಲ್ಲಿ ವ್ಯವಹಾರ ನಡೆಸಲು ಸೂಚನೆ

ಬೊಂಬಾಯಿ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಳೀಯ ಸರ್ಕಾರಿ ವ್ಯವಹಾರಗಳನ್ನು ಆಯಾ ಜಿಲ್ಲೆಯ ಭಾಷೆಗಳಲ್ಲೇ ನಡೆಸುವಂತೆ ಪ್ರಾಂತ್ಯ ಸರ್ಕಾರದವರು ಸೂಚನೆ ಕೊಟ್ಟಿದ್ದಾರೆ

ಪ್ರಾರ್ಥನೆ ಮಾಡುತ್ತಿದ್ದಾಗಲೇ ಪಾದ್ರಿಯ ಮರಣ

ತಿರುಚನಾಪಳ್ಳಿಯಲ್ಲಿ ಒಬ್ಬ ಕ್ರೈಸ್ತ ಪಾದ್ರಿಯು ಕಳೆದ ಮಂಗಳವಾರ ಚರ್ಚಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಗ ಅಕಸ್ಮಾತ್ ಜ್ಞಾನ ತಪ್ಪಿ ಕೆಳಗೆ ಬಿದ್ದು ಮೃತಪಟ್ಟರೆಂದು ವರದಿಯಾಗಿದೆ

ಇನಾಂದಾರರುಗಳ ಸಭೆ

ಮೈಸೂರು ಸಂಸ್ಥಾನದ ಇನಾಂದಾರರುಗಳ ಸಂಘದ ಕಾರ್ಯ ನಿರ್ವಾಹಕ ಸಮಿತಿ ಸಭೆಯು ತಾ॥ ೬-೮-೫೦ರಲ್ಲಿ ಬೆಂಗಳೂರಿನಲ್ಲಿ ಶ್ರೀ ಎಂ. ಎಚ್. ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರದವರು ಹೊರಡಿಸಿರುವ ಗೆಜೆಟ್ ನೋಟೀಸು ... ನ್ಯಾಯಬದ್ಧವಲ್ಲವೆಂದೂ, ಇದನ್ನು ರದ್ದು ಮಾಡಲು ಹೈಕೋರ್ಟಿನಲ್ಲಿ "ಮಾಂಡಮಸ್" ಅರ್ಜಿಯನ್ನು ದಾಖಲ್ಮಾಡಬೇಕೆಂದೂ ಇನೇತರ ... ಕಾದ ನಿರ್ಣಯಗಳಾದವು. ಇನ್ನೂ ಕೆಲವು ಮುಖ್ಯ ವಿಷಯಗಳ ವ್ಯವಸ್ಥೆಗಾಗಿ ೧೯-೮-೫೦ರಲ್ಲಿ ವಿಶೇಷ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಯಿತು. ಸದರಿ ಸಭೆಗೆ ಎಲ್ಲ ಇನಾಂದಾರರುಗಳೂ, ಜೋಡಿದಾರ್ರುಗಳೂ ಅಥವಾ ಅವರ ಪ್ರತಿನಿಧಿಗಳೂ ಸಹಾ ದಯಮಾಡಿಸಿ ತಮ್ಮ ಬೆಂಬಲ ಕೊಡಬೇಕಾಗಿ ಕೋರಿದೆ

ವಿವಿಧ ರೇಷ್ಮೆ ಸೀರೆಗಳಿಗೆ
9 ಗಜದ ಪೂನಾ ನಾಗಪುರ್ ಸೀರೆಗಳಿಗೆ
M. V. ಭೋಜಯ್ಯ ಬಿ. ಎ.
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಅವಿನ್ಯೂ ರಸ್ತೆ(ವಿವಾಸುಜಾರ್ಯರ ರಸ್ತೆ)
ಬೆಂಗಳೂರು.

ಕೋಮುವಾರು ತೀರ್ಪಿನ ಮೇಲೆ ಮದ್ರಾಸ್ ಅಪೀಲು

ಉದ್ಯೋಗಿಕ ಕಾಲೇಜುಗಳಿಗೆ ಪ್ರವೇಶ ಕಲ್ಪಿಸಲು ಅನುಸರಿಸಲಾಗುತ್ತಿರುವ ಕೋಮುವಾರು ನೀತಿಯು ಅಕ್ಷಮ್ಯ, ನ್ಯಾಯಬದ್ಧವಲ್ಲವೆಂದು ಹೈಕೋರ್ಟಿನವರು ಕೊಟ್ಟಿರುವ ತೀರ್ಪಿನ ಮೇಲೆ ಮದ್ರಾಸು ಸರ್ಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿರುವರು. ಈ ಬಗ್ಗೆ ಶಾಸನ ಸಭೆಯಲ್ಲಿ ಅಲ್ಲಿನ ವಿದ್ಯಾ ಮಂತ್ರಿಗಳು ಮಾತನಾಡಿ ಸುಪ್ರೀಂ ಕೋರ್ಟಿನ ನಿರ್ಧಾರವು ಏನೇ ಆದರೂ ಪ್ರಾಂತದ ಹಿಂದುಳಿದ ಪ್ರಜೆಗಳ ವಿದ್ಯಾಭ್ಯಾಸದ ಹಿತರಕ್ಷಣೆಗಾಗಿ ಸಾಧ್ಯವಾದ ಎಲ್ಲ ಕ್ರಮಗಳನ್ನೂ ಸರ್ಕಾರದವರು ಕೈಗೊಳ್ಳುವುದಾಗಿ ತಿಳಿಸಿರುವರು

ಇಂಗ್ಲೀಷ್ ಕಡಲ್ಗಾಲುವೆ ದಾಟಿದ ಮಹಿಳೆ

ಫ್ಲಾರೆನ್ಸ್ ಚಾಡ್‌ವಿಕ್ ಎಂಬ ೩೧ ವಯಸ್ಸಿನ ಕ್ಯಾಲಿಫೋರ್ನಿಯ ಸ್ತ್ರೀ ಪ್ರಮಾಡುವವಳು ೨೩ ಮೈಲಿಯ ಇಂಗ್ಲಿಷ್ ಕಡಲ್ಗಾಲುವೆಯನ್ನು ೧೩ ಗಂಟೆ ೨೦ ನಿಮಿಷಗಳಲ್ಲಿ ಈಜಿ ಮಹಿಳೆಯರ ಈಜಿನ ರೆಕಾರ್ಡ್ ಸ್ಥಾಪಿಸಿರುವಳು. ೧೯೨೬ರಲ್ಲಿ ಗಟ್ರೂಡ್ ಎಡರ್ಲ್ ಎಂಬ ಮಹಿಳೆಯು ಇದೇ ರೀತಿ ಈಜಿದ್ದಳು. ಆ ಕಾಲುವೆಯನ್ನು ಈಜಲು ೧೪ ಗಂಟೆ ಕಾಲ ತೆಗೆದುಕೊಂಡಿದ್ದಳು

ಗೌರ್ನರರ ಎತ್ತಿನ ಗಾಡಿ ಪ್ರವಾಸ

ಪೂರ್ವ ಪಂಜಾಬಿನ ಹಿಂದುಳಿದ ಪ್ರದೇಶಗಳಲ್ಲಿ ಬಿಹಾರಿನ ಗೌರ್ನರ್ ಎಂ. ಎಸ್. ಅಣೆಯವರು ಎತ್ತಿನ ಗಾಡಿಯಲ್ಲಿ ಪ್ರವಾಸ ಮಾಡುತ್ತಿರುವರು. ಹಳ್ಳಿಗಳ ಪ್ರವಾಸವನ್ನು ಲೆಕ್ಕಿಸದೆ ಗೌರ್ನರರು ಹಳ್ಳಿಗರನ್ನು ಭೇಟಿ ಮಾಡಿ ಎಲ್ಲರಿಗೂ ಗ್ರಂಥಗಳು ... ಪ್ರಚಾರ ... ನೀಡುವುದು ಆವಶ್ಯಕ ... ಗಳವೆಂದು ಸಾರುತ್ತಿರುವರು

ಡ್ರೈವರುಗಳ ಕುಡಿತಕ್ಕೆ ನಿರ್ಬಂಧ

ಚೆಕೊಸ್ಲೊವೇಕಿಯಾದಲ್ಲಿ ವಾಹನಗಳನ್ನು ನಡೆಸುವ ಮುಂಚೆ ಮತ್ತು ನಡೆಸುವ ಕಾಲಗಳಲ್ಲಿ ಮದ್ಯಪಾನ ಮಾಡುವುದಿಲ್ಲವೆಂದು ಡ್ರೈವರುಗಳು ಪ್ರಮಾಣ ಮಾಡಿದ ನಂತರ, ಅವರಿಗೆ ಲೈಸೆನ್ಸ್ ಕೊಡಲಾಗುತ್ತಿದೆಯೆಂದು ವರದಿಯಾಗಿದೆ

ಅಮೇರಿಕದಿಂದ ಅತ್ಯಲ್ಪ ಬೆಲೆಗೆ ಆಹಾರದ ಮಾರಾಟ

ಅತ್ಯಂತ ಕಡಿಮೆ ಬೆಲೆಗೆ ಅಮೇರಿಕಾ ಸರ್ಕಾರದವರು ಆಹಾರ ಧಾನ್ಯವನ್ನು ಮಾರುವುದಾಗಿ ತಿಳಿಸಿದ್ದಾರೆ. ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸದಸ್ಯ ರಾಷ್ಟ್ರಗಳಿಗೆ ಈ ಧಾನ್ಯವನ್ನು ಕೊಡಲಾಗುವುದು ... ಸಂಸ್ಥೆಯಲ್ಲಿಲ್ಲ

ರಣಜಿತ್, ಮೈಸೂರು
11-8-50 ರಿಂದ :: ಪ್ರತಿ ದಿನ ೩ ಆಟಗಳು
ಎ. ವಿ. ಎಂ. ರವರ ತೆಲುಗು ಚಿತ್ರ
- ಜೀವಿತಂ -
ನಾರಾಯಣರಾವ್, ವರಲಕ್ಷ್ಮಿ, ವೈಜಯಂತಿಮಾಲಾ
ಮುಂತಾದವರು

13 8 50 ನೇ ಭಾನುವಾರ
ಬೆಳಿಗ್ಗೆ 9 30ಕ್ಕೆ ನಡೆಯಲಿರುವ
ಮೈಸೂರಿನ ಪ್ರಮುಖ ಹರಾಜುದಾರರಾದ
ಅಬೀದ್ ರವರ
ಶ್ರೇಷ್ಠ ದರ್ಜೆಯ ಪೀಠೋಪಕರಣಗಳು ಮತ್ತು ಇತರ ಸಾಮಾನುಗಳ
ಅಮೋಘ ಹರಾಜು ಮಾರಾಟ
ಮಾಲುಗಳನ್ನು ನಾಳೆಯೇ ಪರೀಕ್ಷಿಸಿರಿ
ಈ ಸುಸಂಧಿಯನ್ನು ಕಳೆದು ಕೊಂಡರೆ ಪಶ್ಚಾತ್ತಾಪಪಡಬೇಕಾದೀತು !!

ಪ್ರಭುದೇವಾ ಟಾಕೀಸ್
12-8-50 ನೇ ಶನಿವಾರದಿಂದ
ಅಮೋಘ ಪ್ರಾರಂಭ :: ದಿನವಹಿ ೩ ಆಟಗಳು
ವಾಹಿನಿಯವರ
ಯೋಗಿ ವೇಮನ
(ತೆಲುಗು)
ಮುಖ್ಯ ಪಾತ್ರ:- ನಾಗಯ್ಯ, ರಾಜಮ್ಮ, ಲಿಂಗಮೂರ್ತಿ
ಮುಂತಾದವರು

Edited, printed and published by A R Nagarajan, at Sadhvi Press D Subbiah Road, Mysore

ಕೊರಿಯಾ ಯುದ್ಧದಿಂದ ಅಕ್ಕಿ ಸರಬರಾಜಿಗೆ ಧಕ್ಕೆ

ಪ್ರಪಂಚದ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಅಧ್ಯಕ್ಷರಾದ ನೈಲೆಸ್ ಡಾಡ್ಸ್ ರವರು ನ್ಯೂಯಾರ್ಕಿನ ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ಕೊರಿಯಾ ಯುದ್ಧದಿಂದ ಅಕ್ಕಿ ಸರಬರಾಜಿನ ಸ್ಥಿತಿಯು ಬಹಳ ಕೆಡುವುದೆಂದು ಹೇಳಿದರು. ಕೊರಿಯದ ಅಕ್ಕಿ ಬೆಳೆಯುವ ಪ್ರದೇಶಗಳು ಬಹುಮಟ್ಟಿಗೆ ಕಮ್ಯೂನಿಸ್ಟರ ವಶವಾಗಿರುವುದರಿಂದ ಇನ್ನು ಮುಂದೆ ಅವರು ಹೆಚ್ಚುಟ್ಟುವ ಸಂಭವ ಒದಗಿದರೆ ವಿನಾಶ ಕೃತ್ಯಗಳನ್ನು ಕೈಗೊಂಡು ಬೆಳೆಗಳನ್ನು ನಷ್ಟಪಡಿಸಬಹುದಾದುದರಿಂದ ಕೊರಿಯಾಕ್ಕೆ ಅಕ್ಕಿಯನ್ನು ಹೊರಗಿನಿಂದ ಸರಬರಾಜು ಮಾಡಬೇಕಾಗುವುದೆಂದೂ ಅವರು ತಿಳಿಸಿದರು. ಹಿಂದಿನ ಯುದ್ಧಕ್ಕೆ ಮುಂಚೆ ಜಪಾನಿಗೆ ಬಹುಭಾಗ ಅಕ್ಕಿಯು ಕೊರಿಯದಿಂದ ಸರಬರಾಜಾಗುತ್ತಿತ್ತೆಂದೂ ಹೇಳಲಾಗಿದೆ

ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಿಲ್ಲ

ತುಮಕೂರು ಜಿಲ್ಲೆಯಿಂದ ನ್ಯಾಯವಿಧಾಯಕ ಸಭೆಗೆ ನಡೆಯಬೇಕಾಗಿರುವ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಗಂಗಮ್ಮನವರ ಅರ್ಜಿಯನ್ನು ತಿರಸ್ಕರಿಸಲಾಯಿತು. ಶ್ರೀಗಳಾದ ಕೆಂಪು ಹೊನ್ನಯ್ಯ, ಮುಕ್ಕಣ್ಣಪ್ಪನವರುಗಳು ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಕಾಂಗ್ರೆಸ್ ಉಮೇದುವಾರರಾದ ಶ್ರೀ ಮುದ್ದುರಾಮಯ್ಯನವರು ಪ್ರತಿಸ್ಪರ್ಧೆಯಿಲ್ಲದೆ ಚುನಾಯಿತರಾಗಿರುವರು

ಪರದೇಶದಲ್ಲಿ ಭಾರತ ರಾಜರುಗಳ ಆಸ್ತಿಗಳು

ಭಾರತದ ಅನೇಕ ರಾಜ ಕುಮಾರರು ಪರದೇಶಗಳಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿ ಲೆಕ್ಕವಿಲ್ಲದೆ ಹಣವನ್ನು ವೆಚ್ಚ ಮಾಡುತ್ತಿದ್ದಾರೆಂದೂ ಇದಕ್ಕೋಸ್ಕರ ಭಾರತ ಸರ್ಕಾರವು ಅವರನ್ನು ಪರದೇಶಗಳಲ್ಲಿ ತಮ್ಮ ಆಸ್ತಿಗಳ ಪಟ್ಟಿ ಕೊಡಬೇಕೆಂದು ಕೇಳಲಾಗಿರುವುದಾಗಿ ವರದಿಯಾಗಿದೆ

ಸಿಲೋನ್ ಮಹಿಳೆಗೆ ಮೂರು ಶಿಶುಗಳು

ಸಿಂಹಳದ ಮಹಿಳೆಯೊಬ್ಬಳು ಮೊನ್ನೆ ಕೊಲಂಬೋ ನಗರದಲ್ಲಿ ಮೂರು ಗಂಡುಮಕ್ಕಳನ್ನು ಪ್ರಸವಿಸಿದಳು. ಅಲ್ಲಿನ ಪ್ರಧಾನಿ ಸೇನಾನಾಯಕೆ, ಸಂಬಾರ ಮಂತ್ರಿ ಬಂಡಾರನಾಯಕೆ ಮತ್ತು ಮತ್ತೊಬ್ಬ ಮಂತ್ರಿ ... ನಾಯಕೆಯವರುಗಳ ಹೆಸರುಗಳನ್ನು ಆ ಮಕ್ಕಳಿಗೆ ಇಡಲಾಗಿದೆ

॥ಶ್ರೀ॥
ಗಣೇಶಾ ಟಾಕೀಸ್
11-8-50 ರಿಂದ ದಿನವಹಿ 3 ಆಟಗಳು
- ಕೃಷ್ಣಭಕ್ತಿ -
(ತಮಿಳು)
ಪಾತ್ರ - ಪಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಕೃಷ್ಣನ್, ಮಧುರಂ
ಮುಂತಾದವರು

ಫೋನ್ ನಂ. 798 ಪಂಚೀ ಮೂರಾಣೆ ಇಂದಿನ ಪತ್ರಿಕೆ ೬ ಪುಟ

ಸಾಧ್ವಿ

ಸಂಪುಟ ೯] ಶನಿವಾರ ೧೨-೮-೫೦ [ಸಂಚಿಕೆ ೨೧

ಗ್ವಾಲಿಯರ್ ಮಂತ್ರಿಗಳ ವಜಾಕ್ಕಾಗಿ ಒತ್ತಾಯ

ಗ್ವಾಲಿಯರಿನಲ್ಲಿ ಕರ್ಫ್ಯೂ, ಲಾಠಿ ಮತ್ತು ಗುಂಡಿನೇಟು

ನೆನ್ನೆ ಗ್ವಾಲಿಯರಿನಲ್ಲಿ ಪೊಲೀಸರು ಮತ್ತೆ ಎರಡು ಸಾರಿ ಗುಂಡು ಹಾರಿಸಿದರು ವಿದ್ಯಾರ್ಥಿಗಳ ಚಳುವಳಿಯು ಕೋಮು ವಾರು ಸ್ವರೂಪ ತೊಂಡಿ ಮುಸ್ಲಿಂ ಅಂಗ ಡಿಗಳ ಲೂಟಿಯಾಯಿತು ಪೊಲೀಸರು ಹಲವು ಬಾರಿ ಲಾಠಿ ಏಟುಗಳನ್ನು ಕೊ ಟ್ಟರು ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿ ಯಾಗಿದೆ ಒಂದು ಕಡೆ ಪೊಲೀಸರು ತ ಪ್ಪಾಗಿ ಗುಂಡು ಹಾರಿಸಿದುದರಿಂದ ಕಾನ್ ಸ್ಟೇಬಲ್ ಒಬ್ಬನು ಸತ್ತುಹೋದನು ಅಲ್ಲಿನ ಪರಿಸ್ಥಿತಿ ತಿಳಿಯಲೆಂದು ರಾಜಪ್ರಮು ಖರೂ ಸಂಸ್ಥಾನ ಕಾಂಗ್ರೆಸ್ ಅಧ್ಯಕ್ಷರೂ ಎ ಟಿ ಮೋಹನ್ ರೂ ಪೂನಾದಿಂದ ಹೋ ಗಿದ್ದಾರೆ ೧೮ ಜನರ ಪತ್ತೆಗಿರಿಯಾಗಿದೆ. ಈಗ ಪರಿಸ್ಥಿತಿ ಶಾಂತವಾಗಿದೆ.

ಅರವಿಂದರ ಜಯಂತಿ ಬಗ್ಗೆ ದೆಹಲಿಯ ಸಮಾರಂಭ

ಶ್ರೀ ಅರವಿಂದ ಘೋಷರ ಎಂಬತ್ತ ನೆ ವರ್ಧಂತಿಯನ್ನು ಆಚರಿಸಲು ದೆಹ ಲಿಯಲ್ಲಿ ಕೇಂದ್ರ ಆಹಾರ ಮಂತ್ರಿ ಕೆ ಎಂ ಮುನ್ಷಿಯವರ ಅಧ್ಯಕ್ಷತೆಯಲ್ಲಿ ಪ್ರ ಧಾನರುಗಳಿಂದ ಕೂಡಿದ ಸಮಿತಿಯೊಂ ದು ಏರ್ಪಾಡಾಗಿದೆ ಸಮಿತಿಯಲ್ಲಿ ಸಂಪುಟ ಗೋಪಾಲಸ್ವಾಮಿ ಅಯ್ಯಂಗಾರ್, ಜಗ ಜೀವನ ರಾಂ, ಡಾ|| ಪಟ್ಟಾಭಿ ಸೀತಾರಾ ಮಯ್ಯ ಮುಂತಾದವರಿರುವರು

ರೇಷನ್ ಇನ್ಸ್‌ಪೆಕ್ಟರಿಗೆ ಚೂರಿ ಇರಿತ

ಮಧುರೆಯಲ್ಲಿ ಅಕ್ಕಿಯನ್ನು ಕಳ್ಳತನ ದಲ್ಲಿ ಸಾಗಿಸುತ್ತಿದ್ದ ವಿಷಯವನ್ನು ಬಿಡಿಸಿ ಹಿಡಿಯಲು ಪ್ರಯತ್ನಿಸಿದ ಒಬ್ಬ ರೇಷನ್ ಇನ್ಸ್‌ಪೆಕ್ಟರನ್ನು ಚೂರಿಯಿಂದ ಇರಿಯಲಾ ಗಿದೆ ಮತ್ತೊಬ್ಬ ಇನ್ಸ್‌ಪೆಕ್ಟರು ಇದನ್ನು ತಪ್ಪಿಸಿಕೊಂಡು ಹೋಗಲು ಅವರು ಪರಾರಿಯಾದರು ಗಾಯವಾದವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ಕೃಷ್ಣರಾಜಸಾಗರಕ್ಕೆ ನೌಕಾ ಶಿಕ್ಷಣ ಶಾಲೆಯ ವರ್ಗ

ಈಗ ವಿಶಾಖ ಪಟ್ಟಣದಲ್ಲಿ ಸ್ಥಾಪಿಸ ಲಾಗಿರುವ ನೌಕಾ ಶಿಕ್ಷಣ ಶಾಲೆಯನ್ನು ಕೃಷ್ಣರಾಜ ಸಾಗರಕ್ಕೆ ವರ್ಗಾಯಿಸಲಾಗು ವುದೆಂದು ಭಾರತ ಸರ್ಕಾರದ ವಕ್ತಾರರು ನಿನ್ನೆ ತಿಳಿಸಿದರು

ಕೊಳ್ಳೂರ ಚೆಲೆ ಕಡಿಮೆಯಾಗಿರುವ ಆಹಾರದ ಯೋಜನೆಗೆ ಹೋಪರೆ

ಶ್ರೀ ಕೆ ಸಿ ರೆಡ್ಡಿ ಯವರು ಅಕ್ಕಿಯ ಬೆಲೆಯನ್ನು ಹೆಚ್ಚಿಸಿದ ಬಗ್ಗೆ ತಮ್ಮ ಅಭಿಪ್ರಾಯವನ್ನಿತ್ತು ಮಾರುವ ಬೆ ಲೆಯನ್ನು ಹೆಚ್ಚಿಸದಿದ್ದರೆ, ಸರ್ಕಾರದವ ರು ಕೊಳ್ಳುವ ಬೆಲೆಯನ್ನು ಕಡಿಮೆ ಮಾ ಡಬೇಕಾದುದು ಅಗತ್ಯವಾಗುವುದೆಂದೂ, ಅದನ್ನು ಕಡಿಮೆ ಮಾಡಿದರೆ ಹೆಚ್ಚು ಆ ಹಾರ ಬೆಳೆ ಯೋಜನೆಯು ಹಿಂದಕ್ಕೆ ಹಾಕಿದಂತಾಗುವುದೆಂದೂ ಹೇಳಿದರು

ಮೈಸೂರು ಪ್ರಾಂತ ಕಾಂಗ್ರೆಸ್ ಸಮಿತಿ

ಕಾಂಗ್ರೆಸ್ಸಿನ ಹೊಸ ಅಂಗರಚನೆ ಪ್ರ ಕಾರ ರಚಿತವಾಗುವ ಮೈಸೂರು ಪ್ರಾಂತ ಕಾಂಗ್ರೆಸ್ ಸಮಿತಿ ಸಭೆಯು ಬೆಂಗಳೂರಿ ನಲ್ಲಿ ಇದೇ ೨೭ ನೇ ತಾ|| ಸೇರುವುದು.

ವಿದ್ಯಾಭ್ಯಾಸದ ಪುನರ್ನಿರ್ಮಾಣಕ್ಕೆ ಏರ್ಪಾಡಿಗಾಗಿ ಸಮ್ಮೇಳನ

ಸಂಸ್ಥಾನ ಸರ್ಕಾರದವರಿಂದ ನಡೆಸಲು ನಿರ್ಧಾರ

ಸ್ವಂ ಸು ಪ್ರೋ] ಬೆಂಗಳೂರು. ೧೧

ಈ ದಿನ ಬೆಳಿಗ್ಗೆ ಸಂಸ್ಥಾನದ ಮಂತ್ರಿ ಮಂಡಲದ ಸಭೆಯು ಶ್ರೀ ಕೆ ಸಿ. ರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ಕೂ ಲುಗಳಲ್ಲಿ ಜಾರಿಯಲ್ಲಿರುವ ವಿದ್ಯಾಭ್ಯಾಸದ ಪ ದ್ಧತಿಯನ್ನು ಪುನರ್ನಿರ್ಮಾಣಗೊಳಿಸುವ ಆ ವಶ್ಯಕತೆ ಬಗ್ಗೆ ವಿಷಯಗಳ ಚರ್ಚೆಯಾ ಯಿತು ಡಾ|| ರಾಧಾಕೃಷ್ಣನ್ ಮುಂದ ಲಿಯಾರ್ ಮತ್ತು ಡಾ|| ಸಿ ಆರ್ ರೆಡ್ಡಿಯ ವರ ವರದಿಗಳ ಆಧಾರದ ಮೇಲೆ ವಿದ್ಯಾ ಭ್ಯಾಸದಲ್ಲಿ ಹೊಸ ಏರ್ಪಾಡು ಮಾಡುವು ದನ್ನು ಕುರಿತು ಪರ್ಯಾಲೋಚಿಸಲು ಬರು ವ ತಿಂಗಳು ಬೆಂಗಳೂರಿನಲ್ಲಿ ಸಂಸ್ಥಾನದ ವಿದ್ಯಾ ಪರಿಣತರ ಸಭೆಯನ್ನು ಸೇರಿಸಬೇ ಕೆಂದು ನಿರ್ಧಾರವಾಯಿತು

ಸ್ವಾತಂತ್ರ್ಯದ ದಿನ ರಾಷ್ಟ್ರ ಧ್ವಜದ ಪ್ರಾಮುಖ್ಯತೆ

ಬರುವ ೧೫ನೇ ತಾರೀಖು ಸ್ವಾತಂತ್ರ್ಯ ದಿನದಲ್ಲಿ ಎಲ್ಲಾ ಸರ್ಕಾರಿ ಕಟ್ಟಡಗಳ ಮೇ ಲೂ ರಾಷ್ಟ್ರೀಯ ಧ್ವಜವನ್ನು ಪ್ರಾಮುಖ್ಯ ವಾಗಿ ಹಾರಿಸಬೇಕೆಂದು ಸರ್ಕಾರದವರು ಇಲಾಖಾ ಮುಖ್ಯಾಧಿಕಾರಿಗಳಿಗೂ ಜಿಲ್ಲಾ ಧಿಕಾರಿಗಳಿಗೂ ತಿಳಿಸಿರುತ್ತಾರೆ ಮೈಸೂ ರು ಧ್ವಜವನ್ನು ಅಂದು ಉಪಯೋಗಿಸ ಬಾರದು ಸಾರ್ವಜನಿಕರೂ ಆ ದಿನ ರಾ ಷ್ಟ್ರಧ್ವಜಗಳನ್ನು ತಮ್ಮ ಮನೆಗಳ ಮೇಲೆ ಹಾರಿಸಬೇಕೆಂದು ಸರ್ಕಾರದವರು ಕೋ ರಿರುತ್ತಾರೆ.

ಕಡಿಮೆ ಬೆಲೆಯಲ್ಲಿ ಸೀಮೆಯೆಣ್ಣೆ

ಗೃಹ ಸಚಿವ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಸೀಮೆಯೆಣ್ಣೆ ಕಂಪೆನಿ ಪ್ರತಿನಿಧಿಗಳ ಸಭೆಯು ನೆನ್ನೆ ನಡೆಯಿತು ಬರ್ಮಾ ಷೆಲ್, ಎಸ್ ಓ ಸಿ, ಕಾಲ್ಟೆಕ್ಸ್‌ನ ಪ್ರತಿನಿಧಿಗಳು ಹಾಜರಿ ದ್ದರು ಸೀಮೆಯೆಣ್ಣೆ ಮಾರಲು ಉಚಿ ತ ಕಡಾಯಿಯನ್ನು ಕೊಡಲು ನಿರ್ಧಾರ ವಾಯಿತು ಕಡಿಮೆ ಬೆಲೆಯಲ್ಲಿ ಎಣ್ಣೆಯ ನ್ನು ಜನರಿಗೆ ಒದಗಿಸುವಂತೆ ಗೊತ್ತಾ ಯಿತು

೦ ಸರ್ಕಾರಿ ಅಯುರ್ವೇದ ಕಾಲೇಜಿನ ಪ ದವೀಧರರ ಸಂಘದ ಮೈಸೂರು ಶಾಖೆಯ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಕ್ಲಿ ನಿಕಲ್ ಸಭೆಯು ನಡೆಯುವುದು

ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನ

ರಾಜಧಾನಿಯಲ್ಲಿ ನಡೆಸಬೇಕೆಂದು ನಿರ್ಧಾರ

ಮೈಸೂರು ೧೧

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘ ದ ಸಭೆಯು ಈ ದಿನ ಬೆಳಿಗ್ಗೆ ಸಮಾವೇಶಗೊಂ ಡು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇ ಳನವನ್ನು ರಾಜಧಾನಿಯಲ್ಲೇ ನಡೆಸುವಂ ತೆ ಸಮ್ಮೇಳನದ ಸ್ಥಾಯೀ ಸಮಿತಿಯವರ ಕಟಿಬೆಯನ್ನು ಮನ್ನಿಸಿ ಬರುವ ಸೆಪ್ಟೆಂಬ ರ್ ತಿಂಗಳು ೨೮ನೇ ತಾ|| ಗಳಲ್ಲಿ ನಡೆಸ ಬೇಕೆಂದೂ ಇಲ್ಲಿನ ಸಂಘದ ಸದಸ್ಯರೆಲ್ಲ ರೂ ಸ್ವಾಗತ ಸಮಿತಿಯ ಸದಸ್ಯರಾಗಿರಬೇ ಕೆಂದೂ ತೀರ್ಮಾನಿಸಲಾಯಿತು ಬೆಂ ಗಳೂರಿನ ಪತ್ರಿಕೋದ್ಯೋಗಿ ಸಂಘದ ಸ್ಥಾಯೀ ಸಮಿತಿಯ ಸಹಕಾರವನ್ನು ಕೋರಲಾಯಿತು ಇದೇ ೧೫ ನೇ ತಾರೀ ಖು ಸ್ವಾತಂತ್ರ್ಯ ದಿನಾಚರಣೆಯನ್ನು ವಿ ಜೃಂಭಣೆಯಿಂದ ನೆರವೇರಿಸತಕ್ಕದ್ದೆಂದೂ, ಇನ್ನು ಮುಂದೆ ರಾಜಧಾನಿಗೆ ಭೇಟಿ ಕೊ ಡತಕ್ಕ ಮಾನ್ಯ ಮುಖಂಡರ ಸಾರ್ವಜನಿ ಕ ಭಾಷಣಗಳನ್ನು ಸಂಘದ ಆಶ್ರಯದಲ್ಲಿ ಏರ್ಪಡಿಸ ದ ಏರ್ಪಡಿಸತಕ್ಕದ್ದೆಂದೂ ನಿರ್ಧರಿಸಲಾಯಿತು

ಚಾಮುಂಡಿಪುರದ ನಿವಾಸಿಗಳ ಸಭೆ

ರಾಜಧಾನಿಯ ಚಾಮುಂಡಿ ಪುರದ ಮಹಾಜನ ಸಭೆಯು ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ ಅಲ್ಲಿನ ನಿವಾಸಿಗಳ ಸ ಭೆಯು ಶ್ರೀ ಶಂಕರ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಸೇರುವುದು ಸಭೆಯ ಲ್ಲಿಯೂ ನಿಬಂಧನೆಗಳ ಗುರಿಕೆ ಮತ್ತು ಆಹಾರ ಪರಿಸ್ಥಿತಿಯ ವಿಚಾರಗಳು ನಡೆಯುವುವು

ರಷ್ಯಕ್ಕೆ ಅಣುರಹಸ್ಯ ತಿಳಿಸಿದ ಸ್ತ್ರೀಯ ಬಂಧನ

ಅಮೆರಿಕದ ೩೪ ವರ್ಷ ವಯಸ್ಸಿನ ಮ ಹಿಳೆಯೊಬ್ಬಳು ಅಣು ರಹಸ್ಯವನ್ನು ರಷ್ಯ ವರಿಗೆ ಹೊರಗೆಡಹಿದ ಆರೋಪಕ್ಕಾಗಿ ಅವಳ ನ್ನು ಬಂಧಿಸಲಾಗಿದೆ

ನ್ಯೂಜಿಲೆಂಡಿನಲ್ಲಿ ಮರಣ ದಂಡನೆ ಶಿಕ್ಷೆ ಮತ್ತೆ ಜಾರಿ

ನ್ಯೂಜಿಲೆಂಡಿನಲ್ಲಿ ಇದುವರೆಗೆ ರದ್ದುಗೊ ಳಿಸಲಾಗಿದ್ದ ಮರಣದಂಡನೆ ಶಿಕ್ಷೆಯನ್ನು ಮತ್ತೆ ಜಾರಿಗೆ ತರಲಾಗಿದೆ

ಗ್ವಾಲಿಯರ್ ಮಂತ್ರಿಮಂಡಲದ ವಜಾಕ್ಕಾಗಿ ವಿದ್ಯಾರ್ಥಿಗಳ ಕೋರಿಕೆ

ಗ್ವಾಲಿಯರಿನಲ್ಲಿ ಗುಂಡು ಹಾರಿಸಿದ ಸಂದರ್ಭದಲ್ಲಿ ನಿಷ್ಪಕ್ಷಪಾತವಾದ ವಿಚಾರ ಣೆಯಾಗುವವರೆಗೂ ಈಗಿರುವ ಮಂತ್ರಿ ಮಂಡಲವನ್ನು ವಜಾ ಮಾಡಿ, ಗುಂಡು ಹಾರಿಸಿದ ಪೊಲೀಸು ಅಧಿಕಾರಿಗಳನ್ನು ತೆ ಗೆಯಬೇಕೆಂದು ವಿದ್ಯಾರ್ಥಿಗಳ ಪರ ಒಂ ದು ನಿಯೋಗವು ಅಲ್ಲಿನ ರಾಜಪ್ರಮುಖರು ಮತ್ತು ಎ ಟಿ ಮೋಹನ್ ರವರಲ್ಲಿ ಕೋರಿ ದ್ದರು ಅಲ್ಲದೆ ಪತ್ತೆಗಿರಿಯಾದ ವಿದ್ಯಾ ರ್ಥಿಗಳನ್ನು ಬಿಡಲು ಕೋರಲಾಯಿತು ದಸ್ತಗಿರಿಯಾದವರ ಬಿಡುಗಡೆ ವಿಷಯವ ನ್ನು ಪರಿಶೀಲಿಸುವುದಾಗಿ ರಾಜಪ್ರಮುಖ ರು ಭರವಸೆಯಿತ್ತರು ಘಟನೆಗಳ ಬಗ್ಗೆ ವಿಚಾರಣೆ ನಡೆಸಲು ಸಮಿತಿಯ ರಚನೆ ಮಾಡಬೇಕೆಂದು ಸಂಸ್ಥಾನದ ಸರ್ಕಾರಕ್ಕೆ ಸೂಚಿಸುವುದಾಗಿ ಮೋಹನ್ ರು ಆಶ್ವಾಸನ ವಿತ್ತರು

ಯುದ್ಧಕ್ಕೆ ಹೊರಟ ತುರ್ಕಿ ಸೈನ್ಯದ ವಿಮೆ

ಕೊರಿಯಾ ಯುದ್ಧಕ್ಕೆ ಹೊರಟಿರುವ ೪೫೦೦ ತುರ್ಕಿ ಸೈನ್ಯದ ಅಧಿಕಾರಿ ಮತ್ತು ಜನರಲ್ಲರ ವಿಮೆ ಮಾಡಲು ಲಂಡನ್ನಿನ ಲಾಯ್ಡ್ಸ್ ಕಂಪೆನಿಯು ನಿರ್ಧರಿಸಿದೆ. ಅ ಧಿಕಾರಿಗಳು ೧೦ ಸಾವಿರ, ಸಾರ್ಜೆಂಟ್ ಮತ್ತು ಸಣ್ಣ ಅಧಿಕಾರಿಗಳು ೫ ಸಾವಿರ ಮತ್ತು ಸಾ ಮಾನ್ಯರಿಗೆ ೧ ಸಾವಿರ ಪೌಂಡುಗಳಿಗೆ ಅಲ್ಲಿ ನ ಸರ್ಕಾರದವರೇ ವಿಮೆ ಮಾಡಲೊಪ್ಪಿದೆ

ಪತ್ರಿಕಾ ಸಂಪಾದಕರಿಗೆ ಕಲ್ಲಿನೇಟು

ಇಂದೂರಿನ "ಇಂದೂರ್ ಸಮಾಚಾ ರ್" ಎಂಬ ಪತ್ರಿಕೆಯಲ್ಲಿ ಗುಂಡಿನ ಪ್ರಕರ ಣದ ಬಗ್ಗೆ ಪ್ರಕಟವಾಗಿದ್ದ ಸುದ್ದಿಯು ಪಕ್ಷ ಪಾತವಾಗಿದ್ದುದಾಗಿ ತಿಳಿದು ವಿದ್ಯಾರ್ಥಿಗಳ ಗುಂಪೊಂದು ರೊಚ್ಚುಗೊಂಡು ನಡೆದು ಪ ತ್ರಿಕಾ ಕಛೇರಿ ಮತ್ತು ಸಂಪಾದಕರಿಗೆ ನೆ ನ್ನೆ ದಿನ ಕಲ್ಲಿನಿಂದ ಹೊಡೆದರೆಂದೂ, ಸಂ ಪಾದಕರಿಗೆ ಗಾಯವಾಯಿತೆಂದೂ, ಅನಂ ತರ ಪೊಲೀಸರು ಬಂದು ಗುಂಪನ್ನು ಚದು ರಿಸಿದರೆಂದೂ ವರದಿಯಾಗಿದೆ.

ಕೃಷ್ಣರಾಜಸಾಗರದ ಸಮಿತಿ ವರದಿ ಬರುವ ತಿಂಗಳಿನಲ್ಲಿ

ಶ್ರೀ ಕೆ ಆರ್. ಶೇಷಾಚಾರ್ಯರ ಅಧ್ಯಕ್ಷ ತೆಯಲ್ಲಿ ಸ್ಥಾಪಿತವಾಗಿರುವ ಕೃಷ್ಣರಾಜ ಸಾಗರ ನೀರಿನ ಸಮಿತಿಯು ವರದಿಯ ನ್ನು ಬರುವ ತಿಂಗಳಿನಲ್ಲಿ ಸರ್ಕಾರಕ್ಕೆ ಒಪ್ಪಿಸಲಾ ಗುವುದು

ಸರ್ಕಾರಕ್ಕೆ ಬರುವ ಅರ್ಜಿಗಳ ಬಗ್ಗೆ ಹೊಸ ನಿಬಂಧನೆ

ಇನ್ನು ಮುಂದೆ ಸರ್ಕಾರಕ್ಕೆ ಖಾಸಗಿ ಜ ನರಿಂದ ಬರುವ ಅರ್ಜಿಗಳಿಗೆ ಉತ್ತರ ನಿ ರೀಕ್ಷಿಸುವವರು ಕಳ್ಳನ್ನು ಅಂಚೆ ಸ್ಟಾಂಪು ಗಳನ್ನು ಕಳುಹಿಸತಕ್ಕದ್ದೆಂದೂ, ಅವನ್ನು ಇಡದಿದ್ದರೆ ಉತ್ತರವೀಯಲಾಗದೆಂದೂ ತಿಳಿಸಲಾಗಿದೆ

ಚೂರಿ ಇರಿತದ ಪ್ರಸಂಗ

ನೆನ್ನೆ ದಿನ ಸಂಜೆ ೪ ಘಂಟೆ ಸಮಯ ದಲ್ಲಿ ರಾಜಧಾನಿಯ ಚಿಕ್ಕಗಡಿಯಾರದ ಕ ಟ್ಟೆ ಬಳಿ ಇರುವ ಹೊಸದ ಅಂಗಡಿ ಹತ್ತಿರ ರೈಲ್ವೆ ನೌಕರರಾದ ಶ್ರೀ ಎಸ್ ಜೆ ಪಾಲ್ ಎಂಬುವರನ್ನು ಯಾರೋ ಚೂರಿಯಿಂದ ಇರಿದು ಪರಾರಿಯಾದರೆಂದು ವರದಿಯಿಂದ ತಿ ಶ್ರೀ ಪಾಲ್ ರವರನ್ನು ಆಸ್ಪತ್ರೆಗೆ ಸೇರಿ ಸಲಾಗಿದೆ

ಮತ್ತೆ ದಕ್ಷಿಣ ಕೊರಿಯಾ ಸರ್ಕಾರದ ಪಲಾಯನ

ದಕ್ಷಿಣ ಕೊರಿಯಾದ ತ್ಯಾತ್ಕಾಲಿಕ ರಾಜಧಾನಿಯಾಗಿದ್ದ ಟೇಗೂ ನಗರಕ್ಕೆ ಅಪಾಯವುಂಟಾಗಿದೆ. ಅಲ್ಲಿಂದ ಅಧ್ಯಕ್ಷ ಸಿಂಗ್ಮನ್ ರ್ಹಿಯವರು ಮೊನ್ನೆ ಹೊರಟು ಹೋದರು. ಸರ್ಕಾರದ ಇತರ ಮಂತ್ರಿಗಳೂ ಪತ್ರಿಕೆಯವರನ್ನು ಕಾಣುವುದಾಗಿ ಕೆಲ ಸಿದ್ಧರೂ, ಗೊತ್ತಾಗದಂತೆ ಪ್ರಯಾಣ ಬೆಳೆಸಿದ್ದಾರೆ. ನಗರವು ವಾಯು ಮಾರ್ಗದಿಂದ ಮತ್ತು ರಸ್ತೆಗಳ ಮೂಲಕ ಖಾಲಿ ಮಾಡಲ್ಪಡುತ್ತಿದೆ.

ಸಿದ್ಧರ ಸಹಾಯದಿಂದ ಮರುಭೂಮಿಯಲ್ಲಿ ಜಲಶೋಧನೆ

ಬಾನಿ ಮಹಾರಾಜ್ ಎಂದು ಕರೆಯಲ್ಪಡುವ ಚೇತರಾಮ್ ವ್ಯಾಸ್ ಎಂಬ ಸಿದ್ಧಪುರುಷನ ಸಹಾಯದಿಂದ ರಾಜಸ್ಥಾನ ಸ್ಟೇಟಿನ ಮರುಭೂಮಿಯ ೬ ಕಡೆಗಳಲ್ಲಿ ನೀರನ್ನು ಕಂಡುಹಿಡಿಯಲಾಗಿದೆ. ಮಾರವಾಡ ಎಂಬಲ್ಲಿ ೪ ಬಾವಿಗಳನ್ನೂ ದೇಶದಲ್ಲಿ ಒಂದನ್ನೂ ಜಯಪುರದಲ್ಲಿ ಆಗಿದ ೩ ಭಾಗಗಳಲ್ಲಿ ಎರಡನ್ನೂ ಭರೀದಾಬಾದಿನಲ್ಲಿ ಎಂಟನ್ನೂ ಅವರ ಸಹಾಯದಿಂದ ತೋಡಲಾಯಿತು. ನೀರು ಬಂದಿತು.

ತ್ರಿರಾಷ್ಟ್ರ ನಾಯಕರುಗಳ ಸಮಾಲೋಚನೆಯಿಲ್ಲ

ಕೊರಿಯಾ ಯುದ್ಧದಿಂದ ಉದ್ಭವಿಸಿದ ಅಂತರ ರಾಷ್ಟ್ರೀಯ ಬಿಕ್ಕಟ್ಟನ್ನು ಬಗೆಹರಿಸಲು ರಷ್ಯ ಅಮೆರಿಕ ಮತ್ತು ಬ್ರಿಟನ್‌ಗಳ ನಾಯಕರ ಭೇಟಿ ನಡೆಯಬೇಕೆಂದು ಟ್ರಿಗ್ವೆ ಲೀಯವರು ಮಾಡಿದ್ದ ಸಲಹೆಯು ದುಸ್ಸಾಧ್ಯವೆಂದು ಅಧ್ಯಕ್ಷ ಟ್ರೂಮನ್ನರು ತಿಳಿಸಿರುವರು.

೧೯ ಸಾವಿರ ಅಡಿ ಎತ್ತರದಲ್ಲಿ ಹಾರಾಡಬಲ್ಲ ಹಕ್ಕಿ

ಹಾಗೆಗಳಂತಿರುವ ಹಕ್ಕಿಗಳು ೧೯ ಸಾವಿರ ಅಡಿ ಎತ್ತರದಲ್ಲಿ ಹಾರಾಡುತ್ತಿದ್ದುದನ್ನು ೧೯ ಸಾವಿರ ಅಡಿ ಎತ್ತರದ ಪರ್ವತ ಪ್ರದೇಶದಲ್ಲಿ ಟಿರಕೆಗಳ ಹೆಜ್ಜೆಯ ಗುರುತುಗಳನ್ನೂ ತಾವು ಕಂಡುದಾಗಿ ಹಿಂದೂಮಹಾ ಪರ್ವತದ ತಿರಿಚ್‌ಮಿರ್ ಶಿಖರವನ್ನೇರಿದ ನಾರ್ವೆಯವರು ಹೇಳಿರುತ್ತಾರೆ.

ರಾಜಕಮಲ್,
ಮೈಸೂರು
11-8-50ರಿಂದ ಅಪೂರ್ವ 2ನೇ ವಾರ
ಕೀಲುಗುರ್ರಂ
(ತೆಲುಗು ಚಿತ್ರ)
ಅಂಜಲಿ ದೇವಿ, ನಾಗೇಶ್ವರರಾವ್, ಸುಬ್ಬರಾವ್

-: ಬೆಳಗಿನ ಪ್ರದರ್ಶನಗಳು :-
11-8-50ರಿಂದ 3 ದಿನಗಳು ಮಾತ್ರ
ಮಿನರ್ವಾ ಮೂವಿಟೋನ್ ರವರ
ಪುಕಾರ್ -
(ಹಿಂದಿ)
......ನರ್ಗಿಸ್ -ಶಾಸಿಂ, ಚಂದ್ರಮೋಹನ್, ಸೊಹ್ರಾಬ್ ಮೋದಿ

ವ್ಲಾಡಿವೊಸ್ಟಾಕಿನಲ್ಲಿ ರಷ್ಯದ ನೌಕೆಗಳ ಶೇಖರಣೆ

ಕೊರಿಯಕ್ಕೆ ೫೦೦ ಮೈಲಿ ದೂರದಲ್ಲಿರುವ ರಷ್ಯದ ಪ್ರಮುಖ ನೌಕಾ ನೆಲೆಯಾದ ವ್ಲಾಡಿವೊಸ್ಟಾಕಿಗೆ ಬಾಲ್ಟಿಕ್ ಮತ್ತು ಕಪ್ಪು ಸಮುದ್ರಗಳಿಂದ ರಷ್ಯದ ಭಾರಿ ನೌಕೆಗಳ ಸಮೂಹವು ಬರುತ್ತಿರುವುದಾಗಿ ಅಮೆರಿಕದ ವಾಣಿಜ್ಯ ನೌಕಾ ಸಂಸ್ಥೆಯು ಪ್ರಕಟಿಸಿದೆ. ಅಲ್ಲಿ ಸೈತಕರೇವನ್ನು ನಿರ್ಮಿಸಿ ಸಾಮಗ್ರಿಗಳು ಮತ್ತು ಹಡಗುಗಳನ್ನು ಶೇಖರಿಸಲಾಗುತ್ತಿದೆಯೆಂದೂ ವರದಿಯಾಗಿದೆ. ಉತ್ತರ ಕೊರಿಯಾ ತೀರದಲ್ಲೂ ರಷ್ಯದ ಹಡಗು ಕಾಣಿಸಿಕೊಂಡಿದೆ. ರಷ್ಯದ ಏಕಮಾತ್ರ ರೈಲುಮಾರ್ಗವಾದ ಟ್ರಾನ್ಸ್‌ಸೈಬೀರಿಯನ್ ರೈಲ್ವೆ ಮೂಲಕ ಸೈನ್ಯಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಸಾಗಿಸಲಾಗುತ್ತಿರುವುದರಿಂದ ಇತರ ಸಾಮಗ್ರಿಗಳ ಸಾಗಾಟಕ್ಕೆ ಅವಕಾಶವಿಲ್ಲದೆ ಹಡಗುಗಳ ಉಪಯೋಗವಾಗುತ್ತಿರುವುದಾಗಿ ಆ ಸಂಸ್ಥೆಯು ಹೇಳಿದೆ.

ನಾಯಿಯ ಮೇಲೆ ಗೋವುಗಳ ಸೇಡು

ಅಸ್ಸಾಮಿನ ಸಿಲ್ಚಾರ್ ನಗರದ ಸ್ಮಶಾನದ ಆವರಣದೊಳಗೆ ಮೊನ್ನೆ ಮೇಯುತ್ತಿದ್ದ ಕರುವೊಂದನ್ನು ಒಂದು ನಾಯಿಯು ಕಚ್ಚಿದುದಕ್ಕಾಗಿ, ಅಲ್ಲಿದ್ದ ಇತರ ಗೋವುಗಳೆಲ್ಲವೂ ಸೇರಿ ನಾಯಿಯನ್ನು ತಿವಿದು ಕೊಂದುಹಾಕಿದುವು.

ಕರ್ನಾಟಕ ಪ್ರಾಂತದ ಶಾಂತಿ ಸಮ್ಮೇಳನ

ಕರ್ನಾಟಕ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಸೂಚನೆ ಪ್ರಕಾರ ಪ್ರಥಮ ಶಾಂತಿ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಇದೇ ಅಕ್ಟೋಬರ್ ತಿಂಗಳು ೧೫ನೇ ತಾರೀಖಿನ ನಡೆಸಲಾಗುವುದೆಂದು ತಿಳಿದು ಬಂದಿದೆ.

ಭದ್ರತಾ ಸಮಿತಿ ಅಧ್ಯಕ್ಷತೆಯಿಂದ ರಷ್ಯದ ಉಚ್ಚಾಟನೆ?

ಭದ್ರತಾ ಸಮಿತಿಯಲ್ಲಿ ರಷ್ಯದ ಪ್ರತಿನಿಧಿ ಮಲ್ಲಿಕ್‌ರವರು ಅಧ್ಯಕ್ಷತೆ ವಹಿಸಿ, ಕಾರ್ಯಕಲಾಪಗಳಿಗೆ ಅಡಚಣೆಯನ್ನುಂಟುಮಾಡುತ್ತಿರುವುದರಿಂದ, ಅದನ್ನು ತಪ್ಪಿಸಲು ಮೊನ್ನೆ ಬ್ರಿಟಿಷ್ ಪ್ರತಿನಿಧಿಯು ಕಳೆದಿನಲ್ಲಿ ರಷ್ಯ ಮತ್ತು ಯುಗೋಸ್ಲೇವಿಯಾ ಪ್ರತಿನಿಧಿಗಳನ್ನು ಬಿಟ್ಟು ಉಳಿದವರೆಲ್ಲರೂ ಸಭೆಸೇರಿದ್ದರು. ಭಾರತದ ಪ್ರತಿನಿಧಿ ಬಿ. ಎನ್. ರಾಯರೂ ಹೋಗಿದ್ದರು. ಯುಗೋಸ್ಲೇವಿಯಾ ಪ್ರತಿನಿಧಿ ಮೊದಲು ಸುಮ್ಮನಿದ್ದು ಕಡೆಗೆ ಬರಲಿಲ್ಲ. ರಷ್ಯದ ಪ್ರತಿನಿಧಿಯ ಅಧ್ಯಕ್ಷತೆಯ ಮುಕ್ತಾಯ ಗೊತ್ತುಪಡಿಸಲು ಸಮಾಲೋಚನೆ ನಡೆಯುತ್ತಿದೆ.

ಪ್ರಬಂಧ ಸ್ಪರ್ಧೆ

ಬರುವ ಅಕ್ಟೋಬರ್ ೨೪ನೇ ತಾರೀಖು ನಡೆಯುವ ವಿಶ್ವಸಂಸ್ಥೆಯ ದಿನಾಚರಣೆಯ ಸಂಬಂಧವಾಗಿ ವೈಸೂರಿನ ವಿಶ್ವಸಂಸ್ಥೆ ಸಂಘದವರು ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ವಿಶ್ವಸಂಸ್ಥೆಯ ಪಾರಿಭಾಷಿಕ ಸಹಾಯ ಭಾರತಕ್ಕೆ ಅವಶ್ಯಕ ಮತ್ತು ಏಷ್ಯಾ ಮತ್ತು ದೂರಪೂರ್ವದ ಆರ್ಥಿಕ ಸಮಿತಿಯು ಹೇಗೆ ಭಾರತಕ್ಕೆ ಪರಿಣಾಮಕಾರಿಯಾಗಿ ಸಹಾಯ ಮಾಡಬಲ್ಲದು-ಎಂಬ ವಿಷಯಗಳಲ್ಲಿ ಒಂದನ್ನು ಆರಿಸಿ ಇಂಗ್ಲಿಷಿನಲ್ಲಿ ಪ್ರಬಂಧಗಳನ್ನು ಬರೆದು ೩ ರೊ ಪಿನೊಡನೆ ಅಕ್ಟೋಬರ್ ೧ನೇ ತಾರೀಖಿನೊಳಗಾಗಿ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯ ೧೧೩೮ನೇ ನಂಬರ್ ವಿಳಾಸದ ವೈಸೂರು ಸಂಘಕ್ಕೆ ಕಳುಹಿಸಬೇಕೆಂದು ಪ್ರಾರ್ಥಿಸಲಾಗಿದೆ. ನೂರು ರೂ ಗಳ ಪ್ರಥಮ ಬಹುಮಾನವನ್ನೂ ಇತರ ಬಹುಮಾನಗಳನ್ನೂ ಕೊಡಲಾಗುವುದು.

ಲಾಯಕ್ ಅಲಿ ಬಂಧನ ಅಕ್ರಮವೆಂದು ತೀರ್ಪು

ಹೈದರಾಬಾದ್ ಮಾಜಿ ಮುಖ್ಯಮಂತ್ರಿ ಲಾಯಕ್ ಅಲಿಯವರನ್ನು ಸಾರ್ವಜನಿಕ ರಕ್ಷಣಾ ಶಾಸನದಂತೆ ಬಂಧಿಸಿಟ್ಟಿರುವ ಇದೀಗಿನ ಶಾಸನಾಂಗದೆ ಅಕ್ರಮವಾಗಿದೆಯೆಂದು ಅಲ್ಲಿನ ಹೈಕೋರ್ಟಿನ ಫುಲ್‌ಬೆಂಚು ತೀರ್ಪು ಕೊಟ್ಟಿದೆ. ಈ ಬಂಧನವು ರಾಜ್ಯಾಂಗದ ಕಟ್ಟಳೆಗೆ ವಿರುದ್ಧವಾಗಿದೆಯೆಂದು ಹೇಳಲಾಗಿದೆ. ಲಾಯಕ್ ಅಲಿಯವರು ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿರುವವರೂ ದಂಡನಾರ್ಹರಲ್ಲವೆಂದು ಹೈಕೋರ್ಟ್ ತೀರ್ಮಾನಿಸಿದೆ.

ನಿರಾಶ್ರಿತರ ಮನೆಗಳ ಮೇಲೆ ಪಾಕಿಸ್ತಾನಿಗಳ ದಾಳಿ

ಪಾಕಿಸ್ತಾನದಿಂದ ಬಂದರೆಂದು ಹೇಳಲಾದ ಹಲವು ಪುಂಡರು ಕೂಚ್‌ಬಿಹಾರಿನ ಒಂದು ಹಳ್ಳಿಯ ನಿರಾಶ್ರಿತರ ೮ ವ ನೆಗಳ ಮೇಲೆ ದಾಳಿ ನಡೆಸಿ ಅನೇಕ ದನಕರುಗಳನ್ನೂ ವ್ಯವಸಾಯೋಪಕರಣಗಳನ್ನೂ ಕದ್ದು ಸಾಗಿಸಿದರೆಂದು ವರದಿಯಾಗಿದೆ. ಅಲ್ಲದೆ ಮೂವರು ನಿರಾಶ್ರಿತರನ್ನೂ ಅವರು ಎಳೆದುಕೊಂಡು ಹೋಗಲಾಗಿದೆ.

ಕೆಳಗಿಳಿಯುವ ಬದಲು ಮೇಲಕ್ಕೆ ಹೋದ ಪ್ಯಾರಾಚೂಟ್

ವಿಮಾನದಿಂದ ಧುಮುಕಿದ ರಷ್ಯದ ಪ್ಯಾರಾಚೂಟ್ ಸೈನಿಕನೊಬ್ಬನು ಕೆಳಗೆ ಇಳಿಯುವುದರ ಬದಲು ಎರಡು ಗಂಟೆ ಕಾಲ ಮೇಲು ಮೇಲಕ್ಕೆ ಅಂತರಿಕ್ಷದಲ್ಲಿ ಹಾರಿದ ಪ್ರಸಂಗವೊಂದು ಮಾಸ್ಕೋದಿಂದ ವರದಿಯಾಗಿದೆ. ಆಕಾಶದಲ್ಲಿ ಅವನು ಬರುವ ಉಷ್ಣಾಂಶದ ಏರಾಟಕ್ಕೆ ಅವನು ಸಿಕ್ಕಿದುದರಿಂದ ಅದು ಅವನನ್ನು ಮೇಲಕ್ಕೆ ಕೊಂಡೊಯ್ಯಿತು. ಕೊನೆಗೆ ಅಲ್ಲಿಂದ ೯ ಮೈಲಿ ದೂರದಲ್ಲೊಂದುಕಡೆ ಅವನು ಇಳಿದನು.

ಆಹಾರ ಸ್ಥಿತಿಯನ್ನು ಪರಿಶೀಲಿಸಲು ಪೌರಸಭಾ ವಿಶೇಷ ಅಧಿವೇಶನ

ರಾಜಧಾನಿಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಆ ಬಗ್ಗೆ ಸರ್ಕಾರಕ್ಕೆ ಸೂಚನೆ ಕೊಡಲು ಇದೇ ೧೬ನೇ ಬುಧವಾರ ಪೌರಸಭೆಯ ವಿಶೇಷ ಅಧಿವೇಶನವನ್ನು ಏರ್ಪಡಿಸಲಾಗಿದೆ.

ಅಶೋಕ ಸ್ತಂಭದ ಮುದ್ರೆಯುಳ್ಳ ಹೊಸ ನಾಣ್ಯಗಳು

ಬರುವ ೧೫ ನೇ ತಾರೀಖಿನಿಂದ ಭಾರತಾದ್ಯಂತ ಅಶೋಕ ಸ್ತಂಭದ ಮುದ್ರೆಯಿಂದ ಕೂಡಿದ ಹೊಸ ನಾಣ್ಯಗಳನ್ನು ಚಲಾವಣೆಗೆ ಕೊಡಲಾಗುವುದು. ಕಾಲಾಣೆಯ ನಾಣ್ಯ ಹಳೆಯದರಂತೆಯೇ ಇದ್ದರೂ ಉಳಿದವು ಆಕಾರ ಮತ್ತು ತೂಕದಲ್ಲಿ ಒಂದೇ ರೀತಿಯಲ್ಲಿರುವುವು. ಈಗಿರುವ ರಂಧ್ರದಿಂದ ಕೂಡಿದ ಕಾಲಾಣೆಯ ನಾಣ್ಯವನ್ನು ಒಡೆಯಲಾಗುವುದು. ಹಳೆಯ ನಾಣ್ಯಗಳು ಚಲಾವಣೆಯಲ್ಲಿದ್ದು ಕ್ರಮೇಣ ಅವುಗಳನ್ನು ವಾಪಸು ತೆಗೆದುಕೊಳ್ಳಲಾಗುವುದು.

On the gracious occasion of
INDIA'S INDEPENDENCE
SRI LAKSHMI, MYSORE
Gives you a picture of a Freedom lover who risked his life for a sacred cause
JUNGLE JIM
on Sunday the 13th August 1950
With.-Johnny Weismuller, Virginia Grey & others
See Weismuller in his most exciting role fighting with monstrous sea-serpents

ಪ್ರಭುದೇವಾ ಟಾಕೀಸ್
ದಿನಕ್ಕೆ 3 ಆಟಗಳು
12-8-50 ನೇ ಶನಿವಾರದಿಂದ
ವಾಹಿನಿಯವರ ತೆಲುಗು ಚಿತ್ರ
ಯೋಗಿ ವೇಮನ
ಪಾತ್ರ:- ನಾಗಯ್ಯ, ರಾಜಮ್ಮ, ಲಿಂಗ ಮೂರ್ತಿ ಮುಂತಾದವರು

Edited, printed and published by A R Nagarajan, at Sadhvi Press D Subbiah Road, Mysore

5, 6, 8, 9 ಗಜದ ಪ್ರಿಂಟೆಡ್ ವಾಯಿಲ್ ಸೀರೆಗಳು
ಒಳ್ಳೆ ನಮೂನೆಗಳಲ್ಲಿ ಬಂದಿವೆ ಬಂದು ನೋಡಬೇಕಾಗಿ ವಿನಂತಿ ಜಾಮೂಖಾನ್ ಕಂಪೆನಿ, ಬ್ಯಾಂಕು ರೋಡು, ಮೈಸೂರು

ಪ್ರತಿ ಸಂ 792 WEEKLY EDITION ಇಂದಿನ ಪತ್ರಿಕೆ ೭ ಪುಟ

ಸಾಧ್ವಿ

ಸಂಪುಟ ೧೫] ಭಾನುವಾರ ೧೩-೮-೫೦ [ಸಂಚಿಕೆ ೪

ಧಾನ್ಯಗಳ ದಾಸ್ತಾನಿಗೆ ಉಗ್ರ ಶಿಕ್ಷೆ ಶಾಸನ

ನಗರದ ಅಂಗಡಿಗಳ ಮುಂದೆ ಪಿಕೆಟಿಂಗ್

ಪ್ರೋತ್ಸಾಹಕ ಸಮಿತಿಯ ನಿರ್ಧಾರ
ಮೈಸೂರು ೧೩

ರಾಜಧಾನಿಯ ಸರ್ವೋದಯ ಸಮಾಜದ ಕಾರ್ಯಕರ್ತರ ಸಭೆಯು ಈ ದಿನ ಜರುಗಿ ನಗರದ ವರ್ತಕರು ಪದಾರ್ಥಗಳ ಬೆಲೆಯನ್ನು ಹೆಚ್ಚಿಸದಂತೆಯೂ ಮತ್ತು ಅಗ್ಗ ಎಂದೂ ಆದರೆ ತಿಂಗಳಿಗೆ ಹಿಂದೆ ಇದ್ದ ಬೆಲೆಗೆ ಪದಾರ್ಥಗಳನ್ನು ಮಾರಬೇಕೆಂದು ಒತ್ತಾಯ ಪಡಿಸಬೇಕೆಂದೂ ನಿರ್ಧರಿಸಲಾಯಿತು. ಅದರಂತೆ ನಡೆದುಕೊಳ್ಳದಿದ್ದಲ್ಲಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವಂತೆ ತೀರ್ಮಾನವಾಯಿತು. ಪಿಕೆಟಿಂಗ್ ನಡೆಸುವ ಬಗ್ಗೆ ಯೋಜನೆಯನ್ನು ತಯಾರಿಸಿ ಕಾರ್ಯಕ್ರಮಗಳನ್ನು ನಿಗದಿಗೊಳಿಸಲು ಶ್ರೀಗಳಾದ ಎಸ್. ಎಸ್. ಶಾಸ್ತ್ರಿ ಮತ್ತು ಕೆ. ಎಸ್. ನಾರಾಯಣಸ್ವಾಮಿಯವರುಗಳಿಗೆ ಅಧಿಕಾರ ಕೊಡಲಾಗಿದೆ.

ಶಿವಳ್ಳಿ

ಶಿವಳ್ಳಿಯ ಪಕ್ಕದಲ್ಲಿರುವ ಕಸ್ತೂರಬಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೭ ಘಂಟೆಗೆ ಶ್ರೀ ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳವರಿಂದ ಮಹಾತ್ಮರ ಅವತಾರ ಎಂಬ ವಿಷಯದ ಭಾಷಣ ನಡೆಯುವುದು.

ಸೈಕಲ್ ಕಾರ್ಡ್ ಕಳೆದು ಹೋಗಿದೆ

ಮೈಸೂರು ಸಿಟಿ, ನಾರಾಯಣ ಶಾಸ್ತ್ರಿ ರಸ್ತೆ ಗೊಲ್ಲಗೇರಿ ೭೫ ನೇ ನಂಬರಿನ ಮನೆ ಸೇರಿದ ಶ್ರೀ ಸಿ. ಎಸ್. ಸುಬ್ಬರಾಯರ ಸೈಕಲಿನ ೮೧೧೯ ನೇ ನಂಬರಿನ ಲೈಸೆನ್ಸ್ ಕಾರ್ಡು ಕಳೆದುಹೋಗಿದೆ. ಕಾರ್ಡು ಮೈಸೂರು ಕೋ ಆಪರೇಟಿವ್ ಸೊಸೈಟಿಯಲ್ಲಿ ಕಳೆದುಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು "ಸಾಧ್ವಿ" ಪತ್ರಿಕಾ ಕಛೇರಿಗೆ ತಲುಪಿಸಬೇಕಾಗಿ ಕೋರಿದೆ.

ಮೈಸೂರಿಗೆ ಪೂರ್ವ ಬಂಗಾಳದ ನಿರಾಶ್ರಿತರು

ಪೂರ್ವ ಬಂಗಾಳದಿಂದ ಭಾರತಕ್ಕೆ ಬಂದಿರುವ ಹಲವು ಮಂದಿ ವ್ಯವಸಾಯಗಾರರು ಮತ್ತು ಗ್ರಾಮವಾಸಿ ನಿರಾಶ್ರಿತರನ್ನು ಮೈಸೂರು, ಹೈದರಾಬಾದು ಮತ್ತು ಮದರಾಸುಗಳಿಗೆ ಕಳುಹಿಸಲು ಕೇಂದ್ರ ಸರ್ಕಾರದವರು ಆಲೋಚಿಸಿರುವರು.

ಶಾಸನ ಸಭೆಯಲ್ಲಿ ಸದಸ್ಯರು ಕಣ್ಣೀರಿಟ್ಟರು

ಮದ್ರಾಸು ಶಾಸನ ಸಭೆಯಲ್ಲಿ ಭಾಷಣ ಮಾಡುತ್ತಾ ಮಧುರಾ ಜಿಲ್ಲೆಯ ಸದಸ್ಯರಾದ ವೈದ್ಯನಾಥ ಅಯ್ಯರ್‌ರವರು ಅಲ್ಲಿನ ಹಳ್ಳಿಗಳಲ್ಲಿ ಆಹಾರದ ಅಭಾವದಿಂದ ಜನರು ಪಡುತ್ತಿರುವ ಕಷ್ಟವನ್ನು ವಿವರಿಸಿ ಕಡೆಗೆ ಬಂದಿದ್ದ ಹೃದಯ ವಿದ್ರಾವಕ ಕಾಗದಗಳನ್ನು ಓದುತ್ತಾ ಕಣ್ಣೀರು ಸುರಿಸಿದರು. ಹಲವು ವಾರಗಳಿಂದ ರೇಷನ್ ಅಂಗಡಿಗಳು ಮುಚ್ಚಿಬಿಟ್ಟು ಮತ್ತೆ ಅದಿಯಾಗಿ ಎಲ್ಲರೂ ಉಪವಾಸ ಮಾಡುವ ಸ್ಥಿತಿ ಅಲ್ಲಿರುವುದಾಗಿ ಅವರು ತಿಳಿಸಿದರು.

ಅಣುಬಾಂಬು ಹಾಕಿದರೆ ರಷ್ಯ ಸರ್ಕಾರ ಉರುಳುವುದು

ಅಮೆರಿಕವು ಅಣು ಬಾಂಬನ್ನು ಪ್ರಯೋಗಿಸಬೇಕೆಂದೂ, ಹಾಗೆ ಮಾಡಿದರೆ ರಷ್ಯದ ಪ್ರಭುತ್ವವನ್ನು ಅಲ್ಲಿನ ಪ್ರಜೆಗಳು ಉರುಳಿಸಲು ಸಮರ್ಥರಾಗುವರೆಂದೂ ಅಮೆರಿಕದ ಒಬ್ಬರು ಸೂಚಿಸಿದ್ದಾರೆ.

ಭಾರತಕ್ಕೆ ಒಳ್ಳೆ ಭವಿಷ್ಯ ಇರುವುದಾಗಿ ಜ್ಯೋತಿಷ್ಯರು

ಜ್ಯೋತಿಷ್ಯರೊಬ್ಬರು ಭಾರತಕ್ಕೆ ಒಳ್ಳೆಯ ಭವಿಷ್ಯವು ಕಾದಿದೆಯೆಂದು ಗುಣಿಸಿ ಹೇಳಿರುವರು. ಭಾರತವು ಯಾವ ಯುದ್ಧದಲ್ಲೂ ಸಿಕ್ಕಿಕೊಳ್ಳುವುದಿಲ್ಲವೆಂದೂ, ಪಾಕಿಸ್ತಾನದೊಡನೆ ಅದು ಸರ್ವ ಪ್ರಯತ್ನವನ್ನೂ ಮಾಡುವುದೆಂದೂ, ಸರ್ಕಾರಕ್ಕೆ ತೊಂದರೆಗಳು ಕಡಿಮೆಯಾಗಿ ಈಗಿನ ಸರ್ಕಾರವೇ ಮುಂದುವರಿಯುವುದೆಂದೂ, ಭವಿಷ್ಯಕಾರರು ಹೇಳಿರುತ್ತಾರೆ. ೧೯೫೧ನೇ ಫೆಬ್ರವರಿಯಲ್ಲಿ ಆಹಾರ ಪರಿಸ್ಥಿತಿ ಸುಧಾರಿಸುವುದು. ಪದಾರ್ಥಗಳ ಮೇಲಿನ ನಿರ್ಬಂಧಗಳು ಆ ತಿಂಗಳ ನಂತರ ಕ್ರಮವಾಗಿ ಕಡಿಮೆಯಾಗಿ ಸಡಿಲಿಸಲ್ಪಡುವುದು. ಈ ತಿಂಗಳು ಕಡೆಯ ವಾರ ಬರುವ ಅಕ್ಟೋಬರ್ ಮೊದಲನೇ ವಾರಗಳಲ್ಲಿ ದಕ್ಷಿಣ ಭಾರತದಲ್ಲಿ ಅತಿ ವೃಷ್ಟಿಯಾಗುವುದು. ಸೆಪ್ಟೆಂಬರ್ ತಿಂಗಳನಂತರ ರಾಜಕೀಯ ಕಲಹಗಳುಂಟಾಗಿ, ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಅಧಿಕ ವಿರೋಧವಾಗುವುದು ಎಂದು ಭವಿಷ್ಯದ ಸೂಚನೆಯು ತಿಳಿಸುತ್ತದೆ.

ಅಧ್ಯಕ್ಷ ಚುನಾವಣೆಯಲ್ಲಿ ನೆಹರೂ ಸ್ಪರ್ಧೆಯಿಲ್ಲ

ತಾವು ಪ್ರಧಾನ ಮಂತ್ರಿಯಾಗಿರುವುದರಿಂದ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದು ಉಚಿತವಲ್ಲವೆಂದು ನೆಹರೂರವರು ಪತ್ರಿಕೆಯವರಿಗೆ ತಿಳಿಸಿರುತ್ತಾರೆ.

ಕೊರಿಯಾ ಯುದ್ಧದ ಸೈನ್ಯಕ್ಕಾಗಿ ಲಾಟರಿ ಹಣ

ಕೊರಿಯಾ ಯುದ್ಧದಲ್ಲಿ ಭಾಗವಹಿಸುವ ಸೈನ್ಯಗಳ ಖರ್ಚಿಗಾಗಿ ರಾಷ್ಟ್ರೀಯ ಲಾಟರಿಯನ್ನು ನಡೆಸಬೇಕೆಂದು ಅಮೆರಿಕನ್ ಕಾಂಗ್ರೆಸ್ ಸಭೆಯಲ್ಲಿ ಸದಸ್ಯರೊಬ್ಬರು ಸೂಚನೆಯೊಂದನ್ನು ತಂದಿರುವರು.

ಕಪ್ಪುಹಣದ ಕಾರ್ಖಾನೆಯಲ್ಲಿ ಮುಷ್ಕರವೇ?

ಸ್ವಂ ವ.] ಭದ್ರಾವತಿ ೧೦

ಇಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕ ಸಂಘದವರು ಮುಷ್ಕರ ಸೂಚನೆಯನ್ನು ಅಧಿಕಾರಿಗಳವರಿಗೆ ಕೊಟ್ಟಿರುತ್ತಾರೆ. ಬರುವ ೧೫ ನೇ ತಾ|| ರಜೆಯ ವ್ಯಾಲೆಟ್ಟನ್ನು ತೆಗೆದುಕೊಳ್ಳಲು ಕೋರಲಾಗಿದೆ.

೧೫ ನೇ ತಾ|| ಸಂಬಳದ ಸಮೇತ ರಜಾ

ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಇದೇ ೧೫ನೇ ತಾರೀಖು ಭಾರತ ಸರ್ಕಾರದವರು ಎಲ್ಲ ಕಾರ್ಮಿಕರಿಗೂ ಸಂಬಳ ಸಮೇತ ರಜಾ ಕೊಡಲು ತೀರ್ಮಾನಿಸಿದ್ದಾರೆ. ಸಂಸ್ಥಾನಗಳ ಸರ್ಕಾರಗಳಿಗೂ ಅವರು ಸೂಚನೆ ಕೊಟ್ಟು ಅಲ್ಲಿನ ಎಲ್ಲ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳವರೂ ಆ ದಿನ ಸಂಬಳದ ಸಮೇತ ರಜ ಕೊಡುವಂತೆ ಪ್ರಾರ್ಥಿಸಬೇಕೆಂದು ತಿಳಿಸಿದ್ದಾರೆ.

೨ ಸಾವಿರ ವರ್ಷದ ಹಿಂದೆ ಸಮಾಧಿಯಾದ ಶವಗಳು

ರಷ್ಯದ ವಾಸ್ತುಶಿಲ್ಪ ಸಂಶೋಧಕರು ಮಂಗೋಲಿಯ ಸೈಬೀರಿಯಾದಲ್ಲಿ ಒಂದು ಕಡೆ ಭೂಮಿಯನ್ನು ಅಗೆಯುತ್ತಿದ್ದಾಗ ೨೫ ಅಡಿ ಕೆಳಗೆ ಒಂದು ಮಂಜಿನಗೆಡ್ಡೆ ಪೆಟ್ಟಿಗೆ ಸಿಕ್ಕಿತು. ಇದನ್ನು ಶೋಧಿಸಲಾಗಿ ಕ್ರಿಸ್ತ ಪೂರ್ವ ೫೦೦ ರಲ್ಲಿ ಮಡಿದ ಒಬ್ಬ ಸುಂದರ ತರುಣ ಮತ್ತು ತರುಣಿಯರ ಶರೀರಗಳು ಕೆಡದೆ ಹಾಗೆಯೇ ಇದ್ದುವು. ಅಲ್ಲಿ ಎಂಟು ಕುದುರೆಗಳ ಶವಗಳೂ ದೊರೆತವಲ್ಲದೆ ಅಗ ಇಡಲಾಗಿದ್ದ ಆಹಾರ ಸಾಮಗ್ರಿಗಳೂ ಹಾಲಿನ ಗಿಣ್ಣು ಸಹ ಹಾಗೆಯೇ ಇದ್ದು ವಾಸ್ತುಶಿಲ್ಪ ಶೋಧಕರು ಅವುಗಳನ್ನು ಸವಿದು ರುಚಿ ನೋಡಿದರೆಂದು ಹೇಳಲಾಗಿದೆ.

ಭಾರತಕ್ಕೆ ಪಾಕಿಸ್ತಾನದ ಗೋಧಿ

ಪಾಕಿಸ್ತಾನದ ಗೋಧಿಯನ್ನು ಭಾರತವು ಕೊಳ್ಳುವ ಬಗ್ಗೆ ಮೊನ್ನೆ ದಿನ ಕರಾಚಿಯಲ್ಲಿ ಎರಡು ರಾಷ್ಟ್ರಗಳ ಪ್ರತಿನಿಧಿಗಳಿಗೂ ಒಪ್ಪಂದವಾಗಿರುವುದಾಗಿಯೂ, ಒಪ್ಪಂದದ ವಿವರಗಳು ದೆಹಲಿ ಮತ್ತು ಕರಾಚಿಗಳಲ್ಲಿ ಏಕ ಕಾಲದಲ್ಲಿ ಪ್ರಕಟವಾಗುವುವೆಂದೂ ಹೇಳಲಾಗಿದೆ.

ಸಂಸ್ಥಾನಗಳು ಸಾಲ ಎತ್ತಬಾರದೆಂದು ತಿಳಿಸಿಲ್ಲ

ಕೇಂದ್ರ ಸರ್ಕಾರದವರು ಪ್ರಾಂತಗಳಿಗೆ ಸೂಚನೆಯಿತ್ತು ಇನ್ನು ಮುಂದೆ ಸಂಸ್ಥಾನಗಳು ಸಾಲಗಳನ್ನು ಎತ್ತಕೂಡದೆಂದು ತಿಳಿಸಿರುವುದಾಗಿ ಬಂದಿರುವ ಪತ್ರಿಕಾ ವರದಿಗಳು ನಿಜವಲ್ಲವೆಂದು ದೆಹಲಿಯ ಅಧಿಕಾರಿಗಳು ತಿಳಿಸಿರುತ್ತಾರೆ.

ದವಸಗಳ ಅಧಿಕ ದಾಸ್ತಾನಿಗೆ ಉಗ್ರ ಶಿಕ್ಷೆಯ ಶಾಸನ

ಪಾರ್ಲಿಮೆಂಟಿನಲ್ಲಿ ಆಹಾರ ಮಂತ್ರಿ ಮುನ್ಷಿಯವರು ನೆನ್ನೆ ಅವಶ್ಯಕ ಸರಬರಾಯಿಗಳ ಶಾಸನದ ತಿದ್ದುಪಡಿ ಮಸೂದೆಯನ್ನು ಮಂಡಿಸಿ, ಆಹಾರಧಾನ್ಯ, ಬಟ್ಟೆ, ಮತ್ತು ಇತರ ಅವಶ್ಯ ಪದಾರ್ಥಗಳನ್ನು ಅಧಿಕವಾಗಿ ದಾಸ್ತಾನು ಮಾಡುವವರಿಗೆ ಅತ್ಯುಗ್ರ ಶಿಕ್ಷೆ ವಿಧಿಸುವುದಾಗಿ ತಿಳಿಸಿರುತ್ತಾರೆ. ಆಹಾರ ಧಾನ್ಯಗಳನ್ನು ಹೆಚ್ಚು ದಾಸ್ತಾನು ಮಾಡುವವರಿಗೆ ಏಳು ವರ್ಷ ಕಠಿಣ ಸಜಾ, ಕೇಳಬೇಕಾಗಿರುವ ಹಣದ ಮೂರರಷ್ಟು ದಂಡವನ್ನು ವಿಧಿಸಿ, ಸಾಲಿನ ಮುಟ್ಟುಗೋಲನ್ನು ಹಾಕಿಕೊಳ್ಳಲಾಗುವುದು. ಇತರ ಆಹಾರ ವಸ್ತುಗಳ ಬಗ್ಗೆ ೩ ವರ್ಷ ಸಜಾ ಮತ್ತು ದಂಡವನ್ನು ವಿಧಿಸಲಾಗುವುದು.

ಈ ಶಾಸನದ ಮಸೂದೆಯಲ್ಲದೇ ಪದಾರ್ಥಗಳ ಬೆಲೆ ಏರುವುದನ್ನು ತಪ್ಪಿಸಲು ಪಾರ್ಲಿಮೆಂಟಿನಲ್ಲಿ ಮತ್ತೊಂದು ಮಸೂದೆಯು ಸಭೆಯ ಸರ್ವಾನುಮತದಿಂದ ಅಂಗೀಕಾರವಾಯಿತು. ಈ ಪದಾರ್ಥಗಳ ಪಟ್ಟಿಗಳನ್ನು ಪ್ರಕಟಿಸಲಾಗುವುದೆಂದು ಮಂತ್ರಿಗಳು ತಿಳಿಸಿರುವರು.

ಕೇಂದ್ರದವರಿಂದ ಗ್ವಾಲಿಯರ್ ಘಟನೆ ವಿಚಾರಣೆ

ಗ್ವಾಲಿಯರಿನಲ್ಲಿ ನಡೆದ ಗುಂಡಿನ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಭಾರತದ ಉನ್ನತಾಧಿಕಾರಿಯೊಬ್ಬರನ್ನು ನೇಮಿಸಲಾಗಿದೆಯೆಂದು ವರದಿಯಾಗಿದೆ. ನೆನ್ನೆ ದಿನ ಅಲ್ಲಿ ವಿದ್ಯಾರ್ಥಿಗಳ ಮೆರವಣಿಗೆ ಸಾಗುತ್ತಿದ್ದಾಗ ಟಿಯರ್ ಗ್ಯಾಸನ್ನು ಪ್ರಯೋಗಿಸಲಾಯಿತು. ವಿದ್ಯಾರ್ಥಿಗಳ ಸತ್ಯಾಗ್ರಹ ಪ್ರದರ್ಶನವಾಗಿ ಕಾಲೇಜಿನ ಒಳ ಸೇರಿ ನಂತರ ಮೆರವಣಿಗೆ ಹೊರಟಾಗ ಈ ಘಟನೆ ನಡೆಯಿತು.

ಕೊರಿಯಾ ಕಮೀಷನ್ನಿನ ಭಾರತ ಸದಸ್ಯರ ಅಪಮೃತ್ಯು

ವಿಶ್ವರಾಷ್ಟ್ರಗಳ ಕೊರಿಯಾ ಕಮೀಷನ್ನಿನ ಭಾರತದ ಸದಸ್ಯರಾಗಿದ್ದ ಕರ್ನಲ್ ಉನ್ನಿನಾಯರ್‌ರವರು ಕೊರಿಯದ ಟೇಗ ನ್ ಎಂಬಲ್ಲಿ ನೆನ್ನೆ ದಿನ ಇತರೊಡನೆ ಜೀಪ್ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ದಾರಿ ಭೂಮಿಯಲ್ಲಿ ಹುದುಗಿದ್ದ ಒಂದು ಮೈನಿಗೆ ತಗುಲಿ ಸಿಡಿದುದರಿಂದ ಅದಕ್ಕೆ ಸಿಕ್ಕಿ ಮೃತಪಟ್ಟರೆಂದು ವರದಿಯಾಗಿದೆ.

ದೇಶೀಯ ಕಲೆಗೆ ಪ್ರೋತ್ಸಾಹ

ಭಾರತದಲ್ಲಿ ದೇಶೀಯ ಕಲೆಗಳಿಗೆ ಪ್ರೋತ್ಸಾಹವೀಯಲು ಈ ವರ್ಷ ೧೭|| ಸಾವಿರ ರೂ ಗಳನ್ನು ತೆಗೆದಿಡಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ. ನಾಟಕಗಳೂ ಈ ಕಲೆಯಲ್ಲಿ ಸೇರಿದ ಒಂದು ಭಾಗವೆಂದು ಹೇಳಲಾಗಿದೆ.

ಬರುವ ವರ್ಷದ ಅಕ್ಟೋಬರಿನೊಳಗೆ ಆಹಾರ ಪರಿಪೂರ್ಣತೆ

ಬರುವ ವರ್ಷದ ಅಕ್ಟೋಬರಿನೊಳಗಾಗಿ ಅಧಿಕಾಹಾರ ಬೆಳೆಯ ಕನಿಷ್ಠಾವಧಿ ನಿರ್ದಿಷ್ಟ ಯೋಜನೆಯನ್ನು ಸಂಸ್ಥಾನದಲ್ಲಿ ಜಾರಿಗೆ ತಂದರೆ ಆವರೆ ಆಹಾರದ ಬಗ್ಗೆ ಸ್ವಾವಲಂಬನೆಯನ್ನು ಹೊಂದಬಹುದೆಂದು ಮೊನ್ನೆ ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಪತ್ರಿಕೆಗಳವರಿಗೆ ತಿಳಿಸಿದರು. ಈ ಯೋಜನೆಗೆ ೧ ಕೋಟಿ ರೂ ವೆಚ್ಚ ಮಾಡಲಾಗಿದೆಯೆಂದು ಅವರು ಹೇಳಿರುವರು.

ವಾರ ಭವಿಷ್ಯ

ತಾ|| ೧೩-೮-೫೦ರಿಂದ ೨೦-೮-೫೦ ರ ವರೆಗೆ

ಮೇಷ—ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ವಿಶೇಷ ಅನುಕೂಲ ಭೂ ವ್ಯವಸಾಯಗಾರರಿಗೆ ಒಳ್ಳೆಯ ಕಾಲ ಪತ್ನಿ ಮಕ್ಕಳ ಆರೋಗ್ಯ ಅನಿರೀಕ್ಷಿತ ಕಡೆಗಳಿಂದ ಧನ ಲಾಭ ೧೭ನೇ ತಾ|| ನಂತರ ಉತ್ತಮ

ವೃಷಭ ಅನಿರೀಕ್ಷಿತ ವೆಚ್ಚ, ಆದರೆ ಕಾರ್ಯ ಜಯ ವೈದ್ಯರು, ವಕೀಲರು ವ್ಯಾಪಾರಸ್ಥರಿಗೆ ಧನಲಾಭಕಳಿಮೆ ಅಗ್ನಿ, ಶಸ್ತ್ರ ಮತ್ತು ರೋಗಭಯ ೧೭ರ ನಂತರ ನಿರುದ್ಯೋಗಿಗಳಿಗೆ ಉದ್ಯೋಗ

ಮಿಥುನ—ಕಾರ್ಯಜಯ, ಧನಾದಾಯ, ಮನೆಯಲ್ಲಿ ಮಂಗಳಕಾರ್ಯ, ಯಾತ್ರಾ ಸ್ಥಳಕ್ಕೆ ಪತ್ನಿಯ ಭೇಟಿ ತಾ||೧೭ರ ವರೆಗೆ ಒಳ್ಳೆ ಆದಾಯವಿರುವುದಿಲ್ಲ

ಕರ್ಕ—ಅನಿರೀಕ್ಷಿತ ಖರ್ಚು, ದುಃಖದಾಯಕ ಘಟನೆ ಹೃದಯಕ್ಕೆ ಪ್ರಬಲಾಘಾತ, ಪ್ರವಾಸದಲ್ಲಿ ಭಯ ತಾ||೧೮,೧೯ ಅಪ್ರಿಯ ವಾರ್ತೆ, ಕಳವಳ

ಸಿಂಹ— ಉತ್ಸಾಹ, ಸಾಧು ಸಂತರ ಸೇವೆ, ಶರೀರ ಪ್ರಕೃತಿ ನೆಟ್ಟಗೆ ಶತ್ರುಗಳ ಸೋಲು ತಾ||೧೭, ೧೮ ಅಕಸ್ಮಿಕ ಪ್ರವಾಸ

ಕನ್ಯಾ— ಖರ್ಚು ಹೆಚ್ಚು, ಕುಟುಂಬಸ್ಥರ ಅಸಮಾಧಾನಕರ, ಅತಿಥಿಗಳ ಸೇವೆಗಾಗಿ ವ್ಯಯ ತಾ|| ೧೮,೧೯ ಜಾಗರಣೆ ಅವಶ್ಯ

ತುಲಾ—ಈ ವಾರದಲ್ಲಿ ನಿಮ್ಮ ಮೇಲೆ ಭಾರಿ ಒಳಸಂಚು ನಿಮ್ಮ ನಿರಪರಾಧಿತನವು ಕೊನೆಗೆ ವ್ಯಕ್ತಪಡುವುದು ತಾ|| ೧೭, ೧೮ ಶರೀರಕ್ಕೆ ಕ್ಲೇಶ, ಕಲಹ ಪ್ರವಾಸ ಅಗ್ನಿ ಭಯ,

ವೃಶ್ಚಿಕ—ಪರಾಭವ, ಪಾರತಂತ್ರ್ಯದ ಬಾಧೆ ನಿಮ್ಮ ಯೋಚಿತ ಕಾರ್ಯಗಳು ಫಲವಾಗುವುದಿಲ್ಲ ಹಣಕಾಸಿನ ಹಾನಿ ನೌಕರಿಯಲ್ಲಿ ಮೇಲಧಿಕಾರಿಗಳಿಂದ ತೊಂದರೆ ತಾ|| ೧೮ ಲೇಖ ಬಾಳುವ ವಸ್ತುವಿನ ಅಪಹಾರ ೧೭, ೧೮ ಹಣದ ಮುಗ್ಗಟ್ಟಿನ ನಿವಾರಣೆ

ಧನು—ಉತ್ತೇಜಕ ವಾರ, ಆರೋಗ್ಯ ನೆಟ್ಟಗೆ, ಧಾರ್ಮಿಕ ಸೇವೆ ಶುಭಪ್ರವಾಸ ತಾ|| ೧೧, ೧೫ ಧನಲಾಭ.

ಮಕರ—ಶತ್ರುಗಳನ್ನು ಸೋಲಿಸಲು ಶಕ್ತರಾಗುವಿರಿ ನಿಮ್ಮ ಪ್ರತಿಭೆಯ ಅವಕಾಶದವಾರ ಆರೋಗ್ಯ ನೆಟ್ಟಗೆ ಕುಟುಂಬದವರಿಗೆ ಶುಭ ಉತ್ತಮ ನೌಕರಿಯಲ್ಲಿ ಸ್ಥಾನ ತಾ|| ೧೭,೧೮ ಆಕಸ್ಮಿಕ ಲಾಭ

ಕುಂಭ—ಆರೋಗ್ಯ ನೆಟ್ಟಗೆ ಪವಿತ್ರ ಕ್ಷೇತ್ರಗಳಿಗೆ ಭೇಟಿಯ ಸಂಭವ ವ್ಯಾಪಾರಾದಿಗಳಲ್ಲಿ ಶುಭಪ್ರದ ಘಟನೆ ತಾ||೧೭, ೧೮ ಖರ್ಚು, ಅತಿಥಿ ಸತ್ಕಾರ.

ಮೀನ—ದುರ್ದೈವ, ನೌಕರಿಯಲ್ಲಿ ಅಪಮಾನ, ಆರೋಗ್ಯಕ್ಕೆ ಕ್ಲೇಶ, ಹೀನ ವಿಷಯಗಳ ಯೋಚನೆ. ತಾ||೧೭, ೧೫,೧೮ ಧನಹಾನಿ, ವಾಹನದಿಂದ ಭಯ, ದುರ್ಜನರ ಸಹವಾಸ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೩

ಭಾರತದ ಅದ್ಯಂತವೂ ಇದೇ ೧೫ನೇ ತಾರೀಖು ಮಂಗಳವಾರ ಆಚರಿಸಲಿರುವ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆ ದಿನ ಪ್ರಾತಃಕಾಲ ಒಂಭತ್ತು ಘಂಟೆಗೆ ಪೌರಸಭೆಯ ಆಶ್ರಯದಲ್ಲಿ ರಂಗಾಚಾರ್ಲು ಸ್ಮಾರಕ ಭವನದ (ಟೌನ್ ಹಾಲ್) ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನು ಏರ್ಪಡಿಸಲಾಗಿದೆ ಪುರಜನರು ಭಾಗವಹಿಸಬೇಕೆಂದು ಪೌರಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರು ಪ್ರಾರ್ಥಿಸಿದ್ದಾರೆ

ಮಹಾರಾಜಾ ಕಾಲೇಜ್ ಸಂಘದಲ್ಲಿ

ಮಹಾರಾಜ ಕಾಲೇಜು ಸಂಘದವರು ಇದೇ ೧೫ ನೇ ತಾರೀಖು ಸ್ವಾತಂತ್ರ್ಯ ದಿನೋತ್ಸವವನ್ನು ಪ್ರೊ|| ಚಾಮ್ರಾಜ ಡಾ|| ಸಿ ಆರ್ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸುವರು ಅಂದು ಬೆಳಿಗ್ಗೆ ೮ ಘಂಟೆಗೆ ಮಹಾರಾಜಾ ಕಾಲೇಜ್ ಬಯಲಿನಲ್ಲಿ ಧ್ವಜಾರೋಹಣವನ್ನೂ ಸಂಜೆ ೫ ೩೦ ಕ್ಕೆ ಅದೇ ಸ್ಥಳದಲ್ಲಿ ಡಾ|| ಸಿ ಆರ್ ರೆಡ್ಡಿಯವರ ಭಾಷಣವನ್ನೂ ಏರ್ಪಡಿಸಲಾಗಿದೆ

ವರ್ಧಂತ್ಯುತ್ಸವ

ರಾಜಧಾನಿಯ ಚಾಮರಾಜಪುರಂ ಪ್ರೈಮರಿ ಬಾಯ್ಸ್ ಸ್ಕೂಲಿನಲ್ಲಿ ಕಳೆದ ಬುಧವಾರ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವನ್ನು ನೆರವೇರಿಸಿದರು ಶ್ರೀ ಮ ಕಿ ಪಿ ಆರ್ ನಾಯುಡುರವರು ಅಧ್ಯಕ್ಷತೆ ವಹಿಸಿದ್ದರು ಭಾಷಣಗಳಾದನಂತರ ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ರಾಜಧಾನಿಯ ಸಿದ್ಧಿದ್ಯಾ ಪಾಠಶಾಲೆಯಲ್ಲಿ ನೆನ್ನೆ ದಿನ ಶಾಲಾ ಸ್ಥಾಪಕರಾದ ಧರ್ಮ ಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಪ್ರಭುಗಳ ವರ್ಧಂತಿ ಸಮಾರಂಭವನ್ನು ಆಚರಿಸಲಾಯಿತು. ಅಧ್ಯಕ್ಷರು ಮೈಸೂರು ರಾಜ ಮನೆತನದ ವಿಷಯವಾಗಿ ಭಾಷಣ ಮಾಡಿದರು ಸಿಹಿ ತಿಂಡಿ ಹಂಚಿದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ರಾಜಕಮಲ್,
ಮೈಸೂರು
11-8-50ರಿಂದ ಅಮೋಘ 2ನೇ ವಾರ
ಕೀಲುಗುರ್ರಂ
(ತೆಲುಗು ಚಿತ್ರ)
ಅಂಜಲಿ ದೇವಿ, ನಾಗೇಶ್ವರರಾವ್,
ಸುಬ್ಬರಾವ್

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.
ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅವೆನ್ಯೂ ರಸ್ತೆ (ಚಿಕ್ಕಪೇಟೆ) ರಸ್ತೆ,
ಬೆಂಗಳೂರು.

ಈಚಲು ಮರ ಬಿದ್ದು ಶಾಲಾ ಬಾಲಕರಿಗೆ ಪೆಟ್ಟು

ಕಲ್ಲಿಕೋಟೆಯ ಬಳಿ ಎಡಕ್ಕೊರನಲ್ಲಿ ಮೊನ್ನೆ ದಿನ ಮಧ್ಯಾಹ್ನ ಬಿರುಗಾಳಿಯು ಬೀಸಿದುದರಿಂದ ಎರಡು ಈಚಲ ಮರಗಳು ಉರುಳಿ ಪಕ್ಕದಲ್ಲಿದ್ದ ಶಾಲಾ ಕಟ್ಟಡದ ಮೇಲೆ ಬಿದ್ದಿತು ಇದರಿಂದ ಒಳಗಿದ್ದ ೨೩ ಮಂದಿ ಬಾಲಕರಿಗೆ ಗಾಯವಾಗಿ ಅವರನ್ನು ಚಿಕಿತ್ಸೆಗಾಗಿ ಕಲ್ಲಿಕೋಟೆಯ ಆಸ್ಪತ್ರೆಗೆ ಕಳುಹಿಸಲಾಯಿತು

ಸಹಾಯಾರ್ಥ ನೃತ್ಯ ಸಂಗೀತ, ನಾಟಕ ಪ್ರದರ್ಶನ

ರಾಜಧಾನಿಯ ಶ್ರೀ ಕೃಷ್ಣಕಲಾ ಮಂದಿರದ ಕಟ್ಟಡದ ನಿಧಿಗಾಗಿ ಈ ದಿನ ಸಂಜೆ ೬-೩೦ ಕ್ಕೆ ಟೌನ್ ಹಾಲಿನಲ್ಲಿ ನೃತ್ಯ, ಸಂಗೀತ ಮತ್ತು ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು ಸಾರ್ವಜನಿಕರ ಸಹಕಾರವನ್ನು ಕೋರಲಾಗಿದೆ

ವ ಚ ನಾ ಮೃ ತ

ಭಕ್ತ ಕವಿ ರವ ವಚನಾಮೃತಸಾರದ ೬೪ ಬಿಂದುಗಳುಳ್ಳ ಚಿಕ್ಕ ಗ್ರಂಥವನ್ನು ನಂಜನಗೂಡಿನ ಶ್ರೀ ಸುಬ್ರಹ್ಮಣ್ಯರವರು ಪ್ರಕಟಿಸಿರುತ್ತಾರೆ ಆಯುರ್ವೇದ ವಿದ್ವಾನ್ ಡಾ|| ತಗರಂ ವೆಂಕಟರಾಮಾ ಪಂಡಿತರ ೬೦ ವರ್ಷಗಳ ಅಭ್ಯುದಯೋತ್ಸವದ ಸವಿ ನೆನಪಿಗಾಗಿ ಈ ಗ್ರಂಥವನ್ನು ಪ್ರಕಾಶಕರು ಅರ್ಪಿಸಿರುತ್ತಾರೆ ಡಾ|| ರವೀಂದ್ರನಾಥ ಠಾಕೂರರು ಇಂಗ್ಲೀಷಿನಲ್ಲಿ ಬರೆದಿದ್ದ ವಚನಾಮೃತವನ್ನು ಕನ್ನಡಕ್ಕೆ ಭಾಷಾಂತರ ಮಾಡಿಕೊಡಲಾಗಿದೆ ಪುಸ್ತಕದಲ್ಲಿ ಶ್ರೀ ಪಂಡಿತರ ಭಾವ ಚಿತ್ರವು ಇದೆ

SRI GAYATHRI
TALKIES
Daily 3 Shows
TO OUR PATRONS
PLEASE NOTE -
Our one-day programme commences from to day
—:on Sunday the 13th —
MARIE ANTOINETTE
With Norma Shearer
—:on Monday the 14th —
TRADER HORN
With — Harry Carey

ಮೈಸೂರು ಸಿಟಿ ರೇಷನಿಂಗ್ ಆಫೀಸ್

ಪ್ರಕಟಣೆ

ನಂ F ೫೩/೫೦-೫೧ ತಾ|| ೧೨-೮-೫೦

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಸಹಕಾರ ಡಿಪೋ ಮತ್ತು ಸಹಕಾರ ಸಂಘಗಳು ಇದೇ ಮಾಹೆ ೧೫-೮-೫೦ನೇ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ

(ಸಹಿ) ಡಿ. ಜಿ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

ಭಟ್ಕಳ್ ಬಳಿ ನೌಕಾ ರೇವು

ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಭಟ್ಕಳ್ ಬಂದರಿನ ಬಳಿ ಹಡಗುಗಳ ಕೇಂದ್ರವನ್ನು ಪ್ರಾರಂಭಿಸಲು ಬೊಂಬಾಯಿ ಸರ್ಕಾರದವರು ೫ ಚದರ ಮೈಲಿ ಭೂ ಪ್ರದೇಶವನ್ನು ವಶಪಡಿಸಿಕೊಳ್ಳುವವರಾಗಿದ್ದಾರೆ ಅಲ್ಲಿನ ಕೈಗಾರಿಕೋದ್ಯಮಿಗಳಾದ ಶ್ರೀ ನಂತ ಮಂಗೇಶಭಟ್ಕಳರು ರಚಿಸುವ ೪೦ ಕೋಟಿ ರೂ ಬಂಡವಾಳದ ಕಂಪೆನಿಯು ನೌಕಾ ನೆಲೆಯ ನಿರ್ಮಾಣ ಕಾರ್ಯವನ್ನು ವಹಿಸಿಕೊಳ್ಳುವುದು

ಹರಿಕಥೆ ಮತ್ತು ಅಲಂಕಾರ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ರಾಮ ಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ದೇವಾಂಗ ಸಂಘದ ಆಶ್ರಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಈ ಸಂಜೆ ೭ ಘಂಟೆಗೆ ಕೊಳ್ಳೇಗಾಲದ ಕೀರ್ತನಕಲಾ ಭೂಷಣ ನಾಗಲಿಂಗಾಚಾರ್ಯರಿಂದ ಭೂ ಕೈಲಾಸವೆಂಬ ಹರಿಕಥೆ ಅಮ್ಮನವರಿಗೆ ಕಾಳಿ ಅಲಂಕಾರ ಪೂಜಾ ಉತ್ಸವ ಸರ್ವರೂ ದಯಮಾಡಿ ಬರಬೇಕಾಗಿ ಪ್ರಾರ್ಥಿಸಲಾಗಿದೆ

ನ ಗ ರಾ ಭಿ ವೃ ದ್ಧಿ ಸ ಮಿ ತಿ
ಮೈಸೂರು ೯ ೮-೧೯೫೦

ಮಾದರಿ ಮನೆಗಳ ಮಾರಾಟ
ಪ್ರಕಟಣೆ

ಮೇಲ್ಕಂಡ ಸಮಿತಿಯವರಿಂದ ನಜರ್ ಬಾದ್ ಮೊಹಲ್ಲಾ ಇಟ್ಟಿಗೆಗೂಡಿನಲ್ಲಿ ಜೂ ಗಾರ್ಡನ್ ಎದುರಿಗೆ ಕಟ್ಟಿಸಿರುವ ೧೨ ಮಾದರಿ ಮನೆಗಳ ವಿಲೆವಾರಿಗೆ ಈ ಭಾಗಾಯುತ್ತ ೨೫-೮ ೫೦ನೇ ಶುಕ್ರವಾರ ೪ ಗಂಟೆವರೆಗೆ ೨೫೦ ರೂಗಳ ಠೇವಣಿ ಸಮೇತ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ನಿರ್ಧಾರಿತವಾದ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ ಇಟ್ಟಿಗೆಗೂಡಿನಲ್ಲಿ ಮೇಲ್ಕಂಡ ಸಮಿತಿಯವರಿಂದ ಅಕ್ವೈರ್ ಮಾಡಲ್ಪಟ್ಟ ಮನೆಗಳನ್ನು ಕಳೆದುಕೊಂಡು ಖಾಲಿ ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ಬರುವ ಅರ್ಜಿಗಳಿಗೆ ಆದ್ಯತೆ ನೀಡಲಾಗುತ್ತದೆ ಮನೆ ಮಂಜೂರಾಗದ ಅರ್ಜಿದಾರರಿಗೆ ಠೇವಣಿ ಮೊಬಲಗು ವಾಪಸು ಮಾಡಲಾಗುತ್ತದೆ ಮನೆಗಳಿಗೆ ಬೆಲೆ ೪೦೦೦ ರೂಪಾಯಿಗಳು ಮಂಜೂರಾದ ಅರ್ಜಿದಾರರು ತಮಗೆ ತಿಳಿವಳಿಕೆ ಕೊಟ್ಟ ಬಳಿಕ ೧೫ ದಿನಗಳಲ್ಲಿ ಪೂರ್ತಿ ಮೊಬಲಗು ಪಾವತಿ ಮಾಡಿ ಮನೆ ಸ್ವಾಧೀನ ಪಡೆಯತಕ್ಕದ್ದು ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮನೆ ಕೊಂಡು ಕೊಂಡವರು ಹತ್ತು ವರ್ಷಗಳವರೆವಿಗೆ ಪರಾಧೀನ ಮಾಡುವುದಕ್ಕೆ ಅವಕಾಶ ಇರುವುದಿಲ್ಲ ಕಟ್ಟಡ ಬಾಡಿಗೆಗೆ ಕೊಡುವುದಕ್ಕೆ ಹಕ್ಕಿರುವುದಿಲ್ಲ ಈ ಪ್ರಕಟಣೆಗನುಗುಣವಾಗಿ ಬರುವ ಮತ್ತು ಠೇವಣಿ ಇಲ್ಲದೆ ಬರುವ ಅರ್ಜಿಗಳಿಗೆ ಬೆಲೆ ಕೊಡಲಾಗುವುದಿಲ್ಲ ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

ಪಿ. ಗೋಪಾಲಕೃಷ್ಣ ಶೆಟ್ಟಿ
ಅಧ್ಯಕ್ಷರು

Edited, printed and published by A R Nagarajan, at Sadhvi Press D Subbiah Road, Mysore

ಪುಸ್ತಕ ೦. 792 — ಬಿಡಿಯ ಪ್ರತಿ — ಬಿಡಿಯ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ-೯] ಸೋಮವಾರ ೧೮ ೮-೪೭ [ಸಂಚಿಕೆ ೨೨

ಗ್ವಾಲಿಯರ್ ಮುಷ್ಕರ ಮುಕ್ತಾಯವಾಯಿತು

ಸ್ವಾತಂತ್ರ್ಯೋತ್ಸವಗಳು

ಮೈಸೂರು ೧೮

ಸ್ವಾತಂತ್ರ್ಯೋತ್ಸವದ ಅಂಗವಾಗಿ ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣವೂ, ಸಂಜೆ ೬-೩೦ ಗಂಟೆಗೆ ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ಏರ್ಪಾಡಾಗಿವೆ.

ಮಂಡಿಮೊಹಲ್ಲಾ ಆರೋಗ್ಯ(?) ಗುಡಿ ಬೀದಿಯಲ್ಲಿರುವ ಕೇಶವಾಂಗ ಯುವಕರ ಸಂಘದಲ್ಲಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಶ್ರೀ ... ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

ಶ್ರೀ ವರಲಕ್ಷ್ಮೀ ವಿದ್ಯಾಸಂಸ್ಥೆಯವರು ಕೃಷ್ಣಮೂರ್ತಿಪುರದಲ್ಲಿರುವ ಮಕ್ಕಳ ಶಾಲೆಯಲ್ಲಿ ಶ್ರೀ ಎ ... ಅವರ ಅಧ್ಯಕ್ಷತೆಯಲ್ಲಿ ... ಸಂಜೆ ಬಹಿರಂಗ ಸಭೆಯನ್ನು ನಡೆಸುವರು.

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧೀ ಸೇವಾ ಸಂಘದಲ್ಲಿ ನಾಳೆ ಬೆಳಿಗ್ಗೆ ೭ ಗಂಟೆಗೆ ಜಿಲ್ಲಾಧಿಕಾರಿಗಳಾದ ... ಮಹಮದ್ ಅಹಮದ್‌ರವರು ಧ್ವಜಾರೋಹಣ ಮಾಡಿ ವಂದನೆಯನ್ನು ಸ್ವೀಕರಿಸುವರು. ಸಂಜೆ ೭ ಗಂಟೆಗೆ ... ಶ್ರೀ ಕೆ. ಎಸ್. ... ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ... ಸಮಾಜದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ಶ್ರೀ ಬಿ. ಸುಬ್ಬರಾಯರು ಉತ್ಸವದಿಂದ ಧ್ವಜಾರೋಹಣವೂ, ಸಂಜೆ ೬ ಗಂಟೆಗೆ ಶ್ರೀ ಟಿ. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ಏರ್ಪಾಡಾಗಿವೆ.

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೨-೩೦ ಘಂಟೆಗೆ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಗುವುದು. ಶ್ರೀ ... ಎಸ್. ... ಅವರು ಅಧ್ಯಕ್ಷತೆ ವಹಿಸುವರು.

ವಾಣೀವಿಲಾಸ ಮೊಹಲ್ಲಾ, ... ರಸ್ತೆಯಲ್ಲಿರುವ ... ವಿದ್ಯಾರ್ಥಿ ಸಂಘದಲ್ಲಿ ಶ್ರೀ ಎ. ಎಸ್. ರಾಮಚಂದ್ರ ... ಅಧ್ಯಕ್ಷತೆಯಲ್ಲಿ ಉತ್ಸವವು ನಾಳೆ ಬೆಳಿಗ್ಗೆ ೬ ಘಂಟೆಗೆ ಪ್ರಭಾತಫೇರಿ ಮತ್ತು ಧ್ವಜಾರೋಹಣದೊಡನೆ ಆರಂಭವಾಗುವುದು. ಸಂಜೆ ೬ ಘಂಟೆಗೆ ಶ್ರೀ ... ಎಸ್. ಶ್ರೀರಂಗಮ್ಮನವರ ಸಂಗೀತವು ನಡೆಯುವುದು.

... ಸಿದ್ದಲಿಂಗಯ್ಯನವರ ... ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರು ... ಶ್ರೀ ... ಅಧ್ಯಕ್ಷತೆಯಲ್ಲಿ ನಾಳೆ ... ಗಂಟೆಗೆ ಸಭೆಯನ್ನು ನಡೆಸುತ್ತಿದ್ದಾರೆ.

ಅಮೆರಿಕಕ್ಕೆ ಭಾರಿ ಸಂಕಟ ಪ್ರಾಪ್ತಿ?

... ಗೆಟ್ಟಿಸ್ ಬರ್ಗ್ ಮತ್ತು ... ನಗರಗಳ ... ಅಮೆರಿಕದ ಪ್ರಥಮ ಮತ್ತು ದ್ವಿತೀಯ ಮಹಾ ... ಯುದ್ಧ ... ಸಂಕಟದ ಕಾಲವು ... ದಗಿರುವುದಾಗಿ ಅಲ್ಲಿನ ... ಅಧಿಕಾರಿಗಳು ...

ಮೊಗಲ್‌ಸರೈ ಬಳಿ ಭಾರಿ ರೈಲ್ವೆ ಅಪಘಾತ

೨೭ ಮಂದಿ ಮರಣ: ೨೦೦ ಮಂದಿಗೆ ಗಾಯ

ಮೊನ್ನೆ ದಿನ ಮಧ್ಯ ರಾತ್ರಿಯಲ್ಲಿ ಬನಾರಸ್‌ನಲ್ಲಿ ... ಮೊಗಲ್‌ಸರೈ ರೈಲ್ವೆ ನಿಲ್ದಾಣದ ಬಳಿ ... ಗೂಡ್ಸ್ ರೈಲೊಂದು ಕಂಬಿ ತಪ್ಪಿ ಬಿದ್ದಿದ್ದು ಅದೇ ಮಾರ್ಗದಲ್ಲಿ ... ಬರುತ್ತಿದ್ದ ... ಎಕ್ಸ್‌ಪ್ರೆಸ್ ಪ್ರಯಾಣಿಕರ ರೈಲು ಗಾಡಿಗೆ ಡಿಕ್ಕಿ ಹೊಡೆದು ನಾಲ್ಕು ಬೋಗಿಗಳು ಉರುಳಿದುವೆಂದು ವರದಿಯಾಗಿದೆ. ಆ ರೈಲು ... ಬೋಗಿಯು ನದಿಯ ... ಯಲ್ಲಿ ಮುಳುಗಿರುವುದೆಂದೂ ಹೇಳಲಾಗಿದೆ. ದುರ್ಘಟನೆಯ ಪರಿಣಾಮವಾಗಿ ೨೭ ಮಂದಿ ಮರಣ, ೨೦೦ ಮಂದಿಗೆ ಗಾಯವಾಗಿರುವುದೆಂದೂ, ಗಾಯಗೊಂಡವರ ಸ್ಥಿತಿ ... ಚಿಂತಾಜನಕವಾಗಿದೆಯೆಂದೂ ... ಸ್ಥಳದಿಂದ ... ನಡೆದ ... ರೈಲ್ವೆ ಮತ್ತು ವೈದ್ಯಾಧಿಕಾರಿಗಳು ಕೆಲವು, ... ಪ್ರಥಮ ಚಿಕಿತ್ಸೆ ನಡೆಸಿ ಕೆಲವರನ್ನು ... ಮತ್ತೆ ಕೆಲವರನ್ನು ... ಚಿಕಿತ್ಸೆಗಾಗಿ ಕಳುಹಿಸಿರುವರು. ... ನಡೆದ ಪ್ರದೇಶದಲ್ಲಿ ಹಲವು ... ಗಳನ್ನು ... ಅವರಾರೂ ... ಪತ್ತೆಹಚ್ಚಲು ... ವಿಶಯವಾಗಿದೆ.

ಸೂಚನೆ

ಭಾರತ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ.

ಜಿಲ್ಲಾ ಬೋರ್ಡ್ ಸದಸ್ಯರ ಮುಷ್ಕರ ಮುಕ್ತಾಯ

ಸ ... ಜಿಲ್ಲಾ ... ಬೋರ್ಡ್ ಸಭೆಯು ಅಲ್ಲಿನ ಜಿಲ್ಲಾ ... ದಲ್ಲಿ ... ಸದಸ್ಯರಲ್ಲಿ ಒಂದು ... ಮುಷ್ಕರ ... ಪ್ರಾರಂಭವಾಯಿತು ... ಎನ್ನುವ ... ವಾಗಿಲ್ಲ. ... ಕೊನೆಗೆ ಸಮಾಧಾನ ... ಅವರು

ಮೈಸೂರು ರಾಜ್ಯ ಚಿಹ್ನೆಯಲ್ಲಿ ಬದಲಾವಣೆ

ಮೈಸೂರು ಸಂಸ್ಥಾನವು ಭಾರತದೊಡನೆ ಸೇರಿರುವುದರಿಂದ ಸಂಸ್ಥಾನದ ರಾಜ್ಯ ಚಿಹ್ನೆಯಲ್ಲಿಯೂ ಸ್ವಲ್ಪ ಬದಲಾವಣೆ ಮಾಡಲಾಗಿದೆ. ಇದುವರೆಗೆ ಅದರಲ್ಲಿ ಎರಡು ಕಡೆಗಳಲ್ಲೂ ಸಿಂಹ, ಮಧ್ಯೆ ಗಂಡುಭೇರುಂಡ ಅದರ ಮೇಲೆ ಬ್ರಿಟಿಷ್ ಚಕ್ರವರ್ತಿಯ ಕಿರೀಟಗಳ ಚಿಹ್ನೆಯಲ್ಲಿದ್ದವು. ಈಗ ಕಿರೀಟವನ್ನು ಮಾತ್ರ ತೆಗೆದು ಅದಕ್ಕೆ ಪ್ರತಿಯಾಗಿ ಅಶೋಕ ಚಕ್ರವನ್ನು ಕೆತ್ತಲಾಗಿದೆ. ಗಂಡಭೇರುಂಡದ ಕೆಳಗೆ "ಸತ್ಯಮೇವೋದ್ಧರಾಮ್ಯಹಂ" ಎಂಬ ರಾಜಧ್ಯೇಯವನ್ನೂ ಬರೆಯಲಾಗಿದೆ.

ದ. ಆಫ್ರಿಕಾದಲ್ಲಿ ರಷ್ಯಾ ಅಧಿಕಾರಿಗಳ ಸಂಖ್ಯೆ ಹೆಚ್ಚಳ

ದಕ್ಷಿಣ ಆಫ್ರಿಕದಲ್ಲಿ ಇತ್ತೀಚೆಗೆ ಕಮ್ಯೂನಿಸ್ಟರ ಚಟುವಟಿಕೆ ಜಾಸ್ತಿಯಾಗುತ್ತಿರುವುದನ್ನು ಕಂಡು ಅಲ್ಲಿನ ಸರ್ಕಾರದೊಡನೆ ಬ್ರಿಟನ್, ಫ್ರಾನ್ಸ್ ಮತ್ತು ಬೆಲ್ಜಿಯಂ ರಾಷ್ಟ್ರಗಳು ವ್ಯವಹರಿಸಿ ಅಲ್ಲಿರುವ ರಷ್ಯದ ರಾಜತಾಂತ್ರಿಕ ಅಧಿಕಾರಿಗಳನ್ನು ಅತ್ಯಲ್ಪ ಸಂಖ್ಯೆಗೆ ಇಳಿಸಬೇಕೆಂದು ಕೇಳುವುವೆಂದು ವರದಿಯಾಗಿದೆ.

ನಮ್ಮ ಶುಭಾಶಯಗಳು

ಭಾರತ ಸ್ವಾತಂತ್ರ್ಯ ಸ್ಥಾಪನೆಯೊಡನೆ ಭಾರತ ಮತ್ತು ಇಡೀ ವಿಶ್ವದಲ್ಲೂ ಶಾಂತಿ ಸೌಭಾಗ್ಯಗಳು ಸ್ಥಾಪನೆಯಾಗಲೆಂದು ಸ್ವಾತಂತ್ರ್ಯಸ್ಥಾಪನೆಯ ಪ್ರಥಮ ಸಮಾರಂಭದಲ್ಲಿ ನಾವು ಹಾರೈಸುತ್ತೇವೆ.

— ಸಂಪಾದಕ

ಕಮ್ಯೂನಿಸ್ಟರಿಗೆ ಪೌರ ಹಕ್ಕಿನ ನಿರಾಕರಣೆ

... ಸರ್ಕಾರದವರು ಅಲ್ಲಿರುವ ಕಮ್ಯೂನಿಸ್ಟರಿಗೆ ಪೌರ ಹಕ್ಕನ್ನು ನಿರಾಕರಿಸಿ ಆಜ್ಞೆ ಹೊರಡಿಸಿದ್ದಾರೆ.

ಮೈಸೂರು ಸಂಸ್ಥಾನದ ವರ್ತಕರ ಸಮ್ಮೇಳನ

ದಾವಣಗೆರೆಯ ವರ್ತಕರ ಸಭೆ ಸೇರಿ ಬರುವ ತಿಂಗಳ ಮೊದಲನೇ ವಾರದಲ್ಲಿ ಅಖಿಲ ಮೈಸೂರು ವರ್ತಕರ ಸಮ್ಮೇಳನವನ್ನು ನಡೆಸಲು ನಿರ್ಧರಿಸಿರುವರು.

ಗ್ವಾಲಿಯರ್ ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯ

ಗ್ವಾಲಿಯರಿನಲ್ಲಿ ನಡೆದ ಗುಂಡಿನ ಪ್ರಕರಣದ ಸಂಬಂಧವಾಗಿ ಅಲ್ಲಿನ ವಿದ್ಯಾರ್ಥಿಗಳು ಕೈಗೊಂಡಿದ್ದ ಮುಷ್ಕರವು ನೆನ್ನೆ ಮುಕ್ತಾಯಗೊಂಡಿತೆಂದು ವರದಿಯಾಗಿದೆ. ನಗರದಲ್ಲಿ ಶಾಂತಿ ನೆಲೆಸಿರುವುದಾದರೂ ಪೊಲೀಸ್ ಮತ್ತು ಮಿಲಿಟರಿ ಕಾವಲು ಇನ್ನೂ ಮುಂದುವರಿಯುತ್ತಿದೆ. ಗ್ವಾಲಿಯರ್‌ನಲ್ಲಿ ನೆನ್ನೆ ಪುನಃ ಕರ್ಫ್ಯೂ ಅಜ್ಞೆಯನ್ನು ಹೊರಡಿಸಲಾಯಿತು. ದಸ್ತಗಿರಿಯಾಗಿದ್ದ ಹುಡುಗರೆಲ್ಲರನ್ನೂ ಈ ದಿನ ಬಿಡಲಾಗುವುದು. ಕೇಂದ್ರ ಸರ್ಕಾರದ ವಿಚಾರಣಾಧಿಕಾರಿಗಳು ಅಲ್ಲಿಗೆ ಆಗಮಿಸಿರುತ್ತಾರೆ.

ಜಪಾನ್ ಸೈನ್ಯಗಳ ಪುನಸ್ಸ್ಥಾಪನೆಯೋ?

ಕೊರಿಯಾದ ಮಿತ್ರ ಸೈನ್ಯ ಕೇಂದ್ರದ ಅಧಿಕಾರಿ ಜ|| ಮೆಕಾರ್ಥರ್‌ರವರು, ಅಮೇರಿಕದ ಪ್ರಧಾನಿ ರಾಬರ್ಟ್ ಪ್ಯಾಟರ್ಸನ್‌ರವರೂ ಕೊರಿಯಾದ ಪರಿಸ್ಥಿತಿ ಬಗ್ಗೆ ಇತ್ತೀಚೆಗೆ ನಡೆಸುತ್ತಿರುವ ಸಮಾಲೋಚನೆಯಲ್ಲಿ ಜಪಾನ್ ಸೈನ್ಯವನ್ನು ಪುನಸ್ಸ್ಥಾಪನೆ ಮಾಡುವ ಬಗ್ಗೆಯೂ ಪರ್ಯಾಲೋಚಿಸಲಾಗುವುದೆಂದು ಹೇಳಲಾಗಿದೆ.

ಐದು ಶಿಶುಗಳ ಜನನ

ಪಟ್ಟಲ್ಪುರದ ಬಳಿ ಒಂದು ಹಳ್ಳಿಯ ರೈತ ಸ್ತ್ರೀಯೊಬ್ಬಳು ೫ ಮಕ್ಕಳನ್ನು ಮೊನ್ನೆ ಹಡೆದಳು. ಎಲ್ಲವೂ ಆರೋಗ್ಯವಾಗಿವೆ.

ನಾಸಿಕ ಕಾಂಗ್ರೆಸ್ ಅಧಿವೇಶನ ಮುಂದಕ್ಕೆ

ಸೆಪ್ಟಂಬರ್ ೧೨ ನೇ ತಾ|| ಸ್ವಾತಂತ್ರ್ಯ ಹಬ್ಬವಾಗುವುದರಿಂದಲೂ ಮತ್ತು ಅಂದು ಮಹಾರಾಷ್ಟ್ರ ಜನರಿಗೆ ಎತ್ತಿನ ಹಬ್ಬವಾದುದರಿಂದಲೂ ಕಾಂಗ್ರೆಸ್ ಅಧಿವೇಶನವನ್ನು ಸೆಪ್ಟಂಬರ್ ೧೫ನೇ ತಾರೀಖಿನ ನಂತರ ನಡೆಸಲು ಅನುಕೂಲವಾಗುವುದೆಂದು ಸ್ವಾಗತಾಧ್ಯಕ್ಷರಾದ ಬಿ. ಎಚ್. ಹಿರೇಯವರು ಸೂಚಿಸಿರುವುದಾಗಿ ವರದಿಯಾಗಿದೆ.

ಯುವಕರ ಸೇವಾ ಸಂಘ

ಪ್ರಸಂಗ ಶಾಂತಿವಾದಿಗಳ ಸಭೆಯ ಆಶ್ರಯದಲ್ಲಿ ಪಶ್ಚಿಮ ಬಂಗಾಳದಲ್ಲಿ ಒಂದು ಯುವಕರ ಸೇವಾ ಶಿಬಿರವನ್ನು ಅಕ್ಟೋಬರ್ ತಿಂಗಳಲ್ಲಿ ೩ ವಾರಕಾಲ ನಡೆಸಲಾಗುವುದು. ಅಲ್ಲಿಗೆ ನಮ್ಮ ಸಂಸ್ಥಾನದಿಂದಲೂ ೧೮-೨೫ ವರ್ಷದೊಳಗಿನ ಯುವಕರನ್ನು ಕಳುಹಿಸಲು ಏರ್ಪಾಡಾಗುತ್ತಿದೆ.

ರಾಷ್ಟ್ರ ಧ್ವಜಾರೋಹಣ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೮ ಘಂಟೆಗೆ ಸ್ವಾತಂತ್ರ್ಯ ಸಂಘದ ... ಇನ್ಸ್‌ಟಿಟ್ಯೂಟಿನಲ್ಲಿ ಅರುಣ ಪತ್ರಿಕಾ ಸಂಪಾದಕರಾದ ಶ್ರೀ ಎಚ್. ಕೆ. ಶಿವಮೂರ್ತಿಸ್ವಾಮಿಯವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು.

ಪ್ರಾರಂಭೋತ್ಸವ

ನಾಳೆ ಬೆಳಿಗ್ಗೆ ೧೦ ಗಂಟೆಗೆ ಮೈಸೂರು ... ವಿಹಾರ ಸಂಸ್ಥೆಯ ಪ್ರಾರಂಭೋತ್ಸವವು ... ಬನುಮಯ್ಯನವರ ಪ್ರೌಢಶಾಲೆಯಲ್ಲಿ ನಡೆಯುವುದು. ಪೌರ ಸಭಾಧ್ಯಕ್ಷರಾದ ಶ್ರೀ ಎಚ್. ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು.

... ಸಂಸ್ಥಾನದ ಮುಸ್ಲಿಂ ಲೀಗಿನ ಅಧ್ಯಕ್ಷರಾದ ... ಸಾಹೇಬರು ರಾಜೀನಾಮೆಯಿತ್ತಿರುವರು. ಈ ವಿಷಯದಲ್ಲಿ ... ಯಲ್ಲಿ ... ಗಲಭೆಯುಂಟಾಗುವುದಾಗಿ ... ಸೂಚನೆ ...

ಪಾಕಿಸ್ತಾನದ ಮೇಲೆ ಗುಡ್ಡಗಾಡಿನವರ ಧಾಳಿಗೆ ಆರಂಭ

ಗಡಿನಾಡು ಪ್ರದೇಶದಲ್ಲಿರುವ ಬಹವುದ್ ಖಾಲು, ಪಶೀರ್, ಮಂಹಸೂದ್ ಕುಲಗಳಿಗೆ ಸೇರಿದ ಜನಂಗದವರು ಪಾಕಿಸ್ತಾನ ಸರ್ಕಾರದ ಮೇಲೆ ಬಲವಾದ ಧಾಳಿಗಾರಂಭಿಸುತ್ತಿರುವುದಾಗಿ ಕಾಬೂಲು ರೇಡಿಯೋ ವರದಿ ಮಾಡಿದೆ. ಗಡಿ ಪ್ರದೇಶದಲ್ಲಿರುವ ರಜ್ಮಾಕ್ ಕೋಟೆಯನ್ನು ಧಾಳಿಕಾರರು ಸುತ್ತುವರಿದಿದ್ದಾರೆ ಮತ್ತು ಸರಬರಾಜಿನ ಮಾರ್ಗಗಳೆಲ್ಲವನ್ನೂ ಕತ್ತರಿಸಿದ್ದಾರೆ. ಪಾಕಿಸ್ತಾನದವರು ಕಳೆದ ತಿಂಗಳು ಇಲ್ಲಿ ಒಂದು ಹಳ್ಳಿ ಮೇಲೆ ಬಾಂಬನ್ನು ಹಾಕಿರುವರು.

ಎಸ್. ಲಾಲ್‌ರವರು ವಿಶ್ವಸಂಸ್ಥೆ ಹಂಗಾಮಿ ಕಾರ್ಯದರ್ಶಿ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟ್ರಿಗ್ವೆ ಲೀಯವರು ಕೆಲವು ಕಾಲ ರಜೆಯ ಮೇಲೆ ಹೋಗಲಿರುವುದರಿಂದ ಅವರ ಸ್ಥಾನದಲ್ಲಿ ಭಾರತದವರಾದ ಶ್ರೀ ಎಸ್. ಲಾಲ್‌ರವರನ್ನು ಹಂಗಾಮಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಟಿಬೆಟ್ ಕಡೆಗೆ ೧೮ ಲಕ್ಷ ಕಮ್ಯೂನಿಸ್ಟ್ ಸೇನೆ

ಟಿಬೆಟ್ಟಿನ ಕಡೆಗೆ ೧೮ ಲಕ್ಷ ಕಮ್ಯೂನಿಸ್ಟ್ ಸೈನ್ಯಗಳು ಕಳೆದ ೬ ವಾರಗಳಿಂದಲೂ ಹೋಗುತ್ತಿರುವುದಾಗಿ ಹಾಂಕಾಂಗಿಗೆ ವರದಿ ಬಂದಿದೆ.

ಬೊಂಬಾಯಿ ಆನಂದ ಭವನದ ಕೆಲಸಗಾರರ ಮುಷ್ಕರದ ನಿರ್ಧಾರ

ರಾಜಧಾನಿಯ: ಬೊಂಬಾಯಿ ಆನಂದ ಭವನದಲ್ಲಿ ಕೆಲಸಕ್ಕೆ ಇದ್ದ ಶ್ರೀ ಪಿ. ಕೆ. ಅನಂತಸಂಬಶಿವಾರ್ಯರವರನ್ನು ಕೆಲವು ದಿವಸಗಳ ಹಿಂದೆ ವಿನಾ ಕಾರಣವಾಗಿ ವಜಾ ಮಾಡಿ ಇರುವರಿಗೆ ಎಷ್ಟು ಪ್ರಾರ್ಥಿಸಿದರೂ ಮತ್ತೆ ಸೇರಿಸಿಕೊಂಡಿಲ್ಲದಿರಿಂದ ಇದೇ ೨೬ನೇ ಶನಿವಾರ ನಗರ ಹೋಟೆಲಿನ ಕೆಲಸಗಾರರು ಮುಷ್ಕರ ಕೈಗೊಳ್ಳಬೇಕೆಂದು ಕಳೆದ ಶುಕ್ರವಾರ ನಡೆದ ಹೋಟೇಲ್ ಕೆಲಸಗಾರರ ಸಂಘದ ಕಾರ್ಯಕಾರೀ ಸಭೆಯಲ್ಲಿ ನಿರ್ಣಯಿಸಲಾಯಿತು. ಮತ್ತು ಬೆಂಗಳೂರು ಹೋಟೇಲ್ ಕೆಲಸಗಾರರು ಹೂಡುವ ಮುಷ್ಕರಕ್ಕೆ ಸರ್ವ ವಿಧದಲ್ಲೂ ನೆರವು ನೀಡಬೇಕೆಂದೂ ತೀರ್ಮಾನಿಸಲಾಯಿತು.

SRI GAYATHRI
TALKIES
Daily 3 Shows
—on Monday the 14th.—
TRADER HORN
With.— Harry Carey
—on Tuesday the 15th—
THIS TIME FOR KEEPS
With - Esther Williams
— on Wednesday the 16—
TARZAN the APE MAN
With - Johnny Weissmuller

ಮತ್ತೆ ಯುದ್ಧ ಮಾಡಲು ಜರ್ಮನರ ನಿರಾಕರಣೆ

ಸ್ಟ್ರಾಸ್‌ಬರ್ಗಿನಲ್ಲಿ ನಡೆಯುತ್ತಿರುವ ಯೂರೋಪಿನ ೧೩ ಸ್ವತಂತ್ರ ರಾಷ್ಟ್ರಗಳ ಅಸೆಂಬ್ಲಿಯಲ್ಲಿ ಜರ್ಮನಿಯ ಕಮ್ಯೂನಿಸ್ಟ್ ವಾದಿ ಪ್ರತಿನಿಧಿಯು ಮಾತನಾಡುತ್ತಾ ಜರ್ಮನರು ಮತ್ತೆ ಶಸ್ತ್ರ ಧರಿಸಿ ಯಾವ ಯುದ್ಧದಲ್ಲಿ ಭಾಗವಹಿಸಲು ಇಷ್ಟಪಡುವುದಿಲ್ಲವೆಂದೂ, ತಮಗೆ ಕೆಲಸ ಕೊಟ್ಟು ಕೈಗಾರಿಕಾ ಉತ್ಪನ್ನಗಳನ್ನು ತಯಾರು ಮಾಡಬೇಕೆಂದು ಹೇಳಿದರೆ ತಾವು ಅದಕ್ಕೆ ಸಿದ್ಧವಾಗಿರುವುದಾಗಿಯೂ ತಿಳಿಸಿರುವರು.

ದಕ್ಷಿಣ ಕೊರಿಯಾ ಸಹಾಯಕ್ಕೆ ನಾಜಿಗಳು

ಅಧ್ಯಕ್ಷ ಮಾಜಿ ನಾಜಿ ಸೈನ್ಯದ ಶಸ್ತ್ರ ಅಧಿಕಾರಿಗಳು ನೂರುಗಟ್ಟಲೆ ಹ್ಯಾಂಬರ್ಗಿನಲ್ಲಿರುವ ಅಮೇರಿಕದ ರಾಯಭಾರಿ ಕಛೇರಿಗೆ ಬಂದು, ದಕ್ಷಿಣ ಕೊರಿಯಾ ಯುದ್ಧದಲ್ಲಿ ದಕ್ಷಿಣದವರ ಸಹಾಯಕ್ಕಾಗಿ ತಾವು ಹೋರಾಡಲು ಸಿದ್ಧರಿರುವುದಾಗಿ ತಿಳಿಸುತ್ತಿದ್ದಾರೆ. ಇವರೆಲ್ಲರೂ ಮಾಜಿ ಜರ್ಮನ್ ಸೈನ್ಯದವರ. ಆದರೆ ಜರ್ಮನಿಯಿಂದ ಯಾರನ್ನೂ ಅಲ್ಲಿಗೆ ಕಳುಹುವುದಿಲ್ಲವೆಂದು ಅವರಿಗೆ ತಿಳಿಸಲಾಗಿದೆ.

ರಾಮಲಿಂಗಂ ವಿಲ್‌ಕ್ರಮಕ್ಕೆ ಸುಪ್ರೀಂ ಕೋರ್ಟಿನ ತಡೆಆಜ್ಞೆ

ದೆಹಲಿಯ ಸುಪ್ರೀಂ ಕೋರ್ಟಿನವರು ಮೊನ್ನೆ ರಾಮಲಿಂಗಂರವರ ಆಸ್ತಿಯ ವಿಲ್ಲೆ ಮಾನಗಳ ಬಗ್ಗೆ ಮುಂದಿನ ನಡವಳಿಕೆಗಳಾವುದನ್ನೂ ನಡೆಸದಂತೆ ಆಜ್ಞೆ ಮಾಡಿದರು. ಆಸ್ತಿಯ ಅವಿಭಕ್ತ ಕುಟುಂಬಕ್ಕೆ ಸೇರಿದುದೆಂದು ಹೈಕೋರ್ಟಿಗೆ ಅರ್ಜಿ ಯನ್ನು ದಿವಂಗತರ ಮಕ್ಕಳು ಹಾಕಿದಾಗ ಅದನ್ನು ವಜಾ ಮಾಡಿದ ಮೇಲೆ ಸುಪ್ರೀಂ ಕೋರ್ಟನ್ನು ಅವರು ಹತ್ತಿದ್ದರು.

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ನಾಗಪುರ ಸೀರೆಗಳಿಗೆ
M. V. ಭೋಜಯ್ಯ ಬಿ ಎ
ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

ಕಳುವಾದ ಅಣು ರಹಸ್ಯ ಪತ್ರಗಳ ಪತ್ತೆ

ಕಳೆದ ಬುಧವಾರ ಇಂಗ್ಲೆಂಡಿನ ಎಸೆಕ್ಸ್ ಕೈರಿನಲ್ಲಿ ಹಾರ್‌ವೆಲ್‌ನಿಂದ ಅಣು ರಹಸ್ಯ ಪತ್ರಗಳು ಕಳುವಾಗಿದ್ದವಷ್ಟೆ. ೪೮ ಗಂಟೆಗಳ ಶೋಧನೆಯಿಂದ ಎಲ್ಲ ಪತ್ರಗಳೂ ಪೋಲೀಸರ ವಶವಾಗಿವೆ.

ತೆಪ್ಪದ ಮೇಲೆ ಅಟ್ಲಾಂಟಿಕ್ ಸಾಗರ ದಾಟುವ ಯತ್ನ

ಲಂಡನ್ನಿನ ೫೩ ವರ್ಷದ ಹರ್ಬರ್ಟ್ ಸ್ಟ್ಲಾಕ್ ಎಂಬುವರು ೨೦ ಅಡಿ ಉದ್ದ ೬ ಅಡಿ ಅಗಲದ ತೆಪ್ಪದಂತಹ ನೌಕೆಯಲ್ಲಿ ಅಟ್ಲಾಂಟಿಕ್ ಸಾಗರವನ್ನು ದಾಟುವ ಪ್ರಯತ್ನದಲ್ಲಿರುವರು. ೩೦-೪೦ ದಿನಗಳಲ್ಲಿ ಅಮೇರಿಕವನ್ನು ಅವರು ಸೇರುವುದಾಗಿ ಭರವಸೆಯಿಂದಿರುವರು.

ಮೃದಂಗದ ತರಗತಿಗಳು

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಶಾಖೆಗಳಾಗಿರುವ ಶೇಷಾದ್ರಿಪುರಂ ಮಂದಿರದಲ್ಲಿಯೂ ಮತ್ತು ಕೃಷ್ಣಮೂರ್ತಿಪುರದ ಮೊದಲನೇ ಶಾಖೆಯಲ್ಲಿಯೂ ಇದೇ ತಿಂಗಳು ೧೬ನೇ ತಾರೀಖು ಬುಧವಾರದಿಂದ ಮೃದಂಗದ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು. ಮಹಾಜನರು ಈ ಸದವಕಾಶವನ್ನು ಉಪಯೋಗಿಸಿಕೊಂಡು ಕಲೆ ಮತ್ತು ಮಂದಿರದ ಬೆಳವಣಿಗೆಗೆ ನೆರವಾಗಬೇಕೆಂದು ಶ್ರೀ ಮೈಸೂರು ಸಹೋದರರು ಪ್ರಾರ್ಥಿಸುತ್ತಾರೆ.

ರಂಜಿತ್
ಬೆಳಗಿನ ಪ್ರದರ್ಶನ
ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ
ಸ್ಪೆಷಲ್ ಪ್ರೋಗ್ರಾಂ
15-8-50ನೇ ಮಂಗಳವಾರದಿಂದ
6 ದಿನಗಳು ಮಾತ್ರ
ಶಾಕುಂತಲ
ಪಾತ್ರ:- ಜಯಶ್ರೀ, ಚಂದ್ರಮೋಹನ್
ವಿ. ಶಾಂತಾರಾಂರವರ ಪೂರ್ಣ ಪರ್ಣ ರಂಜಿತ ಹಿಂದಿ ಚಿತ್ರ

ರಷ್ಯಾ, ಅಮೇರಿಕಾ ರಾಜತಾಂತ್ರಿಕ ಸಂಬಂಧ ತಪ್ಪಲಿ

ಅಮೇರಿಕವು ಕೂಡಲೇ ರಷ್ಯದೊಡನೆ ರಾಜ ತಾಂತ್ರಿಕ ಸಂಬಂಧವನ್ನು ಕಡಿಯಬೇಕೆಂದು ಅಲ್ಲಿನ ಕಾಂಗ್ರೆಸ್ಸಿನ ರಿಪಬ್ಲಿಕನ್ ಸದಸ್ಯರೊಬ್ಬರು ಸೂಚಿಸಿದ್ದಾರೆ.

ಸೀರೆ ನೈಯ್ಯಲು ಪವರ್ ಲೂಮುಗಳಿಗೆ ಅನುಮತಿ

ಹಲವು ಮಾದರಿಗಳ ಬಣ್ಣಬಣ್ಣದ ಸೀರೆಗಳನ್ನು ನೈಯ್ಯಲು ಭಾರತ ಸರ್ಕಾರದವರು ಪವರ್‌ಲೂಮು ಕಾರ್ಖಾನೆಗಳಿಗೆ ಅವಕಾಶವಿತ್ತಿರುವರು. ಆದರೆ ಜರೀ ಸಾದಾ ಅಥವಾ ಗೀಟುಗಳ ಸೀರೆಗಳನ್ನು ನೈಯ್ಯಬಾರದೆಂದು ನಿರ್ಧರಿಸಲಾಗಿದೆ.

ಹಂಸಗಳು ೧೫೦ ವರ್ಷ ಬದುಕುವುವು

ಪಕ್ಷಿಗಳ ಪೈಕಿ ಹಂಸಗಳೂ ಮತ್ತು ಬಾತುಗಳೂ ದೀರ್ಘ ಕಾಲ ಬದುಕುತ್ತವೆಂದು ಹೇಳಲಾಗಿದೆ. ಹಂಸಗಳು ೧೫೦ ವರ್ಷವೂ, ಬಾತುಗಳು ೮೦ ವರ್ಷವೂ, ಗಿಣಿಗಳು ೬೦ ವರ್ಷವೂ ಇತರ ಕೆಲವು ಪಕ್ಷಿಗಳು ೨೦ ವರ್ಷವೂ, ಬದುಕುತ್ತವೆ.

೧೪ ವರ್ಷದವರೆಗೂ ಉಚಿತ ಒತ್ತಾಯದ ವಿದ್ಯಾಭ್ಯಾಸ

ತಿರುವಾಂಕೂರಿನ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಕೆಲವು ಬದಲಾವಣೆ ಮಾಡಿ ೧೪ ವರ್ಷ ತುಂಬುವವರೆಗೆ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಉಚಿತ ಪ್ರಾಥಮಿಕ ಶಿಕ್ಷಣವನ್ನು ಕಲ್ಪಿಸಲು ಏರ್ಪಾಡು ಮಾಡಬೇಕೆಂದು ಅಲ್ಲಿನ ವಿದ್ಯಾ ಸಚಿವರು ಸೂಚಿಸಿರುತ್ತಾರೆ.

ಒಲಿಂಪಿಯಾ
ಅಮೋಘವಾದ ಧನೇ ವಾರ
ಓಡುತ್ತಿರುವ ಚಿತ್ರವದ
ಹಮಾರ ಘರ್
ಪಾತ್ರ - ದುರ್ಗಾ ಖೋಟೆ, ಚೇತನ್ ಆನಂ

ಬೆಳಗಿನ ಪ್ರದರ್ಶನ 18-8-50 ರಿಂದ
ಭಗವಾನ್ ಪಾತ್ರ ವಹಿಸಿರುವ
• **ಹೇಟ್ ಹ್ಯಾಂಡ್ಸ್** •

ತಾ॥ 15-8-1950ನೇ ಮಂಗಳವಾರ
ಮ. ಧ್ಯಾ ಹ್ನ
ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ
ಇಂದ್ರ ಭವನದಲ್ಲಿ
(ಭೋಜನ ಮತ್ತು ವಸತಿಗೃಹ)
ಧನ್ವಂತರಿ ರಸ್ತೆ :. ಮೈಸೂರು
ಸ್ಪೆಷಲ್ ಊಟದ ಸವಿಯನ್ನು ಉಂಡು ಆನಂದಿಸಿರಿ
ಟಿಕೆಟಿನ ದರ ಮಾಮೂಲಿನಂತೆ

ಮೈಸೂರು ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್.
ಗಾಂಧಿ ಚೌಕ, ಮೈಸೂರು

ನೋಟೀಸು

ಮೇಲ್ಕಂಡ ಸಂಘದಲ್ಲಿ ಈ ಕೆಳಗೆ ಕಂಡ ದರದಲ್ಲಿ ವಾಯಿದೆ ಠೇವಣಿಗಳನ್ನು (Fixed deposit) ಮೆಂಬರುಗಳು ಮತ್ತು ಮೆಂಬರುಗಳಲ್ಲದವರಿಂದಲೂ ತೆಗೆದುಕೊಳ್ಳಲಾಗುತ್ತೆ. ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

ಅವಧಿ		ದರ
6 ತಿಂಗಳಿಗೆ	ಸೇಕಡ	ರೂ 2-0-0
12 ತಿಂಗಳಿಗೆ	,,	,, 2-12-0
24 ತಿಂಗಳಿಗೆ	,,	,, 3-0-0
36 ತಿಂಗಳಿಗೆ	,,	,, 3-8-0
84 ತಿಂಗಳಿಗೆ	,,	,, 4-0-0

ವಸ್ತ್ರ ವಿಭಾಗ ಸಂಘದಲ್ಲಿ ಉಲ್ಲನ್ ಕೋಟಿಂಗು, ಶರ್ಟಿಂಗ್, ದಟ್ಟಿ, ಇಂಗ್ಲಿಷ್ ಚೆಂಟ್ಸ್, ವಾಯಿಲ್ ಮತ್ತು ಎಲ್ಲಾ ವಿಧವಾದ ಮಿಲ್ ಬಟ್ಟೆಗಳೂ ಸಹ ದೊರಕುತ್ತೆ ಇವೆ.

(ಸಹಿ) ಹೆಚ್. ವಿ. ವೆಂಕಟರಾಮಯ್ಯ,
ಗೌ॥ ಕಾರ್ಯದರ್ಶಿ

Edited, printed and published by A. R Nagarajan, at Sadhvi Press D Subbiah Road, Mysore

- ಮಲೇರಿಯಾ ಹಾರಿ ಸೊಳ್ಳೆ ಪರದೆಗಳು -
ಮಕ್ಕಳ ತೊಟ್ಟಿಲಿಗೆ, ಮಂಚಕ್ಕೆ, ಸಿಂಗಲ್ ಮತ್ತು ಡಬ್ಬಲ್ ಹಾಸಿಗೆಗಳಿಗೆ — ಬಾಹುಸಾರ್ ಕಂಪೆನಿ, ಬ್ಯಾಂಕ್ ರೋಡು, ಮೈಸೂರು

ಕ್ರಮಸಂ. 792 ||ವಂದೇ ಮಾತರಂ|| ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೯] ಬುಧವಾರ: ೧೬-೮-೫೦ [ಸಂಚಿಕೆ ...

ಪೂರ್ವ ಭಾರತದಲ್ಲಿ – ಭೀಕರ ಭೂಕಂಪ –

ಸ್ವಾತಂತ್ರ್ಯ ದಿನೋತ್ಸವ ಸಮಾರಂಭಗಳು

ಮೈಸೂರು ೧೬.

ಸ್ವಾತಂತ್ರ್ಯದ ತೃತೀಯ ವಾರ್ಷಿಕೋತ್ಸವವು ನೆನ್ನೆ ನಗರದ ಅನೇಕ ಕಡೆಗಳಲ್ಲಿ ವೈಭವದಿಂದ ನಡೆಯಿತು. ಸರ್ಕಾರಿ ಮತ್ತು ಖಾಸಗೀ ಕಟ್ಟಡಗಳ ಮೇಲೂ ರಾಷ್ಟ್ರಧ್ವಜಗಳು ಹಾರಾಡುತ್ತಿದ್ದವು. ಶಾಲಾ ಬಾಲಕರು ಮತ್ತು ಬಾಲಕಿಯರುಗಳು ಧ್ವಜವನ್ನು ಹಿಡಿದು ದೇಶೀಯ ಗೀತೆಗಳನ್ನು ಹೇಳುತ್ತಾ ಅನೇಕ ಭಾಗಗಳಲ್ಲಿ ಮೆರವಣಿಗೆಗಳನ್ನು ನಡೆಸಿದರು.

ನೆನ್ನೆ ಬೆಳಗ್ಗೆ ಟೌನ್ ಹಾಲ್ ಮೈದಾನದಲ್ಲಿ ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ರಾಷ್ಟ್ರಧ್ವಜವನ್ನು ಏರಿಸಿದರು. ರಿಸರ್ವ್ ಪೋಲೀಸ್ ತಂಡವು ಧ್ವಜಕ್ಕೆ ಗೌರವವನ್ನು ಸಲ್ಲಿಸಿತು. ನಗರದ ಇತರ ಭಾಗಗಳಲ್ಲೂ ಧ್ವಜಾರೋಹಣಗಳಾದವು. ಮಹಾರಾಜಾ ಕಾಲೇಜಿನಲ್ಲಿ ಡಾ|| ಸಿ. ಆರ್. ರೆಡ್ಡಿಯವರಿಂದ ಧ್ವಜಾರೋಹಣವಾಯಿತು.

ಡಿ. ಸುಬ್ಬಯ್ಯ ರಸ್ತೆಯ ಮಹಾತ್ಮಾ ಗಾಂಧಿ ಸಂಘದಲ್ಲಿ ಡಾ|| [illegible] ವರಿಂದಲೂ, ಅದೇ ರಸ್ತೆಯ ಶ್ರೀ [illegible] ಸಹಾಯ ಸಂಘದಲ್ಲಿ ಶ್ರೀ ಬಿ. ಸುಬ್ಬರಾವ್ ಉಪಾಧ್ಯರಿಂದಲೂ ಧ್ವಜಾರೋಹಣಗಳಾದವು. ಸಂಜೆ ನಗರದ ಟೌನ್ ಹಾಲಿನಲ್ಲಿ ಶ್ರೀ ಎಸ್. ರಂಗನಾಥಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಸಿ. ಆರ್. ನರಸಿಂಹ ಶಾಸ್ತ್ರಿ, ಹೆಚ್. [illegible] ರಾವ್, ಎಂ. ಎ. ಶ್ರೀನಿವಾಸರಿಂದ ಭಾಷಣವೂ, ಮಹಾರಾಜಾ ಕಾಲೇಜಿನಲ್ಲಿ ಡಾ|| ಸಿ. ಆರ್. ರೆಡ್ಡಿಯವರ ಭಾಷಣವೂ, [illegible] ಮೊಹಲ್ಲಾ [illegible] ಗುಡಿ ಬೀದಿ ದೇವಾಂಗ ಸಂಘದಲ್ಲಿ ಶ್ರೀ ಎಸ್. [illegible]ಣ್ಣನವರ ಅಧ್ಯಕ್ಷತೆಯಲ್ಲಿ ಭಾಷಣವೂ, ಶ್ರೀರಾಮ ಸಹಾಯ ಸಂಘದಲ್ಲಿ ಶ್ರೀ ಎ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಶ್ರೀ ಸುಬ್ಬರಾವ್ ಉಪಾಧ್ಯರ ಭಾಷಣವೂ, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಬಹಿರಂಗ ಸಭೆಯೂ, [illegible] ಗಂಗೋತ್ರಿ [illegible] ಯುವಕ ಸಂಘ, ನರಸಿಂಹರಾಜ ಮೊಹಲ್ಲಾದ [illegible] ಕೇತನ ಮಂಡಲಿ, [illegible] ರಸ್ತೆಯ ಶಾರದಾ ಸಂಘ, [illegible] ರಸ್ತೆಯ ಮಿತ್ರ ಸಹಾಯ ಸಂಘ, ಡಿ. ಸುಬ್ಬಯ್ಯ ರಸ್ತೆಯ [illegible], [illegible] ಮೊಹಲ್ಲಾದ [illegible] ವಿದ್ಯಾರ್ಥಿ ಸಂಘ ಮುಂತಾದ ನಾನಾ ಸಂಘಗಳಲ್ಲೂ ವೈಭವದಿಂದ ಸಮಾರಂಭಗಳು ನಡೆದವು. ಇವಲ್ಲದೆ [illegible] ಸ್ವಾಮಿಯವರ ಮೋಟಾರ್ [illegible], ಗೌರಿಶಂಕರ್ ಪ್ರೆಸ್ [illegible] ಸಂಘದಲ್ಲೂ ಇದೇ ರೀತಿ ಸಮಾರಂಭಗಳು ನಡೆದುವು.

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದವರು ನೆನ್ನೆ ಸಂಜೆ ಸಾಧ್ವಿ [illegible] ಸಂಪಾದಕರಾದ ಶ್ರೀ [illegible] ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ [illegible] ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಮಂದಿರದ ಕಾರ್ಯದರ್ಶಿ ಶ್ರೀ [illegible] ಚಂದ್ರಶೇಖರಯ್ಯನವರು ಸ್ವಾಗತ [illegible] ನಡೆದ ಬಳಿಕ ವಿದ್ಯಾರ್ಥಿನಿಯರಿಂದ ರಾಷ್ಟ್ರ ಗೀತೆಗಳು ನಡೆದುವು. ಸಂಸ್ಥೆಯ ಅಧ್ಯಕ್ಷರಾದ ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರು ಭಾಷಣ ಮಾಡಿ ಭರತ ಖಂಡದ ಮಹರ್ಷಿಗಳ ತಪೋಬಲ ಮತ್ತು ಮಹಾತ್ಮ ಗಾಂಧಿಯವರ ಸತತ ಪ್ರಯತ್ನದ ಫಲವಾಗಿಯೂ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತೆಂದು ಹೇಳಿದರು. ಅನಂತರ ಅಧ್ಯಕ್ಷ ಶ್ರೀ ಎ. ಆರ್. ಚಂದ್ರಶೇಖರಯ್ಯನವರು ಭಾಷಣ ಮಾಡಿ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಸೂಕ್ಷ್ಮವಾಗಿ ವಿವರಿಸಿ ಸ್ವಾತಂತ್ರ್ಯ ಸಾಧನೆಯ ನಂತರ ಜನರ ಮೇಲೆ ಬಿದ್ದಿರುವ ಗುರುತರ ಜವಾಬ್ದಾರಿಯನ್ನು ವಿವರಿಸಿದರು.

ಆಸ್ಥಾನ ವಿದ್ವಾನ್ [illegible] ವೆಂಕಟಗಿರಿಯಪ್ಪನವರು ಭಾಷಣ ಮಾಡಿ ಮಂದಿರದವರು ಸಂಗೀತ ಕಲೋಪಾಸನೆಯಲ್ಲಿ ಮಾತ್ರ ನಿರತರಾಗಿರದೆ, ದೇಶಾಭ್ಯುದಯಕ್ಕೆ ಸಾಧಕವಾದ ಎಲ್ಲ ಕಾರ್ಯರಂಗಗಳಲ್ಲೂ ತೊಡಗಿರುವುದನ್ನು ಶ್ಲಾಘಿಸಿದರು. ಭಾರತ ಸ್ವಾತಂತ್ರ್ಯದೊಡನೆ ಭಾರತೀಯ ಕಲೆಗಳ ಅಭ್ಯುದಯವೂ ಹೇಗೆ [illegible] ಅಂಗವೆನ್ನುವುದನ್ನು ಅವರು ವಿವರಿಸಿದರು. ಮೈಸೂರಿನಲ್ಲಿ ರಾಜವಂಶೀಯರಿಂದ ಗಾನ ಕಲೆಗೆ ಬಹಳ ಪ್ರೋತ್ಸಾಹ ದೊರೆಯುತ್ತಿದ್ದುದನ್ನೂ, ಕರ್ನಾಟಕ ಸಂಗೀತಕ್ಕೆ ಇದ್ದ ಪ್ರಾಶಸ್ತ್ಯವನ್ನೂ ವಿವರಿಸಿ ಹಿಂದೆ ಮೈಸೂರಿಗೆ [illegible] ಅನೇಕ [illegible] ಬಂದು [illegible] ಅವರು ತಿಳಿಸಿದರು. [illegible] ಸಂಗೀತ [illegible] ಪ್ರವರ್ಧಮಾನ [illegible] ಮುಂತಾದ [illegible] ಸಮಾರಂಭವು ಮುಕ್ತಾಯವಾಯಿತು.

ಶಾರದಾ ವಿಲಾಸ ವಿದ್ಯಾರ್ಥಿ ನಿಲಯದಲ್ಲಿ ಧ್ವಜಾರೋಹಣವು ಶ್ರೀ ಎಸ್. ಲಿಂಗಣ್ಣನವರಿಂದಲೂ, ಸಭೆಯು ಶ್ರೀ ಕೆ. [illegible] ಸ್ವಾಮಿಯವರ ಅಧ್ಯಕ್ಷತೆಯಲ್ಲೂ ನಡೆದುವಲ್ಲದೆ [illegible] ಇಂದ್ರ ಭವನದವರಿಂದ ವಿದ್ಯಾರ್ಥಿಗಳಿಗೆ ಉಪಹಾರವನ್ನು ಏರ್ಪಡಿಸಲಾಗಿತ್ತು. [illegible] ಕಮಿಟಿ [illegible] ಹಿಂದಿ ಪ್ರಚಾರ [illegible] ಉತ್ಸವವು ನಡೆಯಿತು.

ಭಾರತದ ಪೂರ್ವ ಭಾಗದಲ್ಲಿ ಭೀಕರ ಭೂಕಂಪ

ನೆನ್ನೆ ಸಂಜೆ ಭಾರತದ ಪೂರ್ವಭಾಗದ ಅನೇಕ ಕಡೆಗಳಲ್ಲೂ ಮತ್ತು ಪಾಕಿಸ್ತಾನದಲ್ಲೂ ಭೂಕಂಪಗಳು ಸಂಭವಿಸಿರುವುದಾಗಿ ಸುದ್ದಿ ಬಂದಿದೆ. ಕಲ್ಕತ್ತೆಯಲ್ಲಿ ಒಂದು ನಿಮಿಷ ಕಾಲ ಭೂಕಂಪವಾಗಿ ಟ್ರಾಮು, ವಿದ್ಯುಚ್ಛಕ್ತಿ ಮೊದಲಾದುವುಗಳಿಗೆ ಭಂಗ ಆಗಿರುವುದೆಂದೂ, ಗೌಹಾತಿಯಲ್ಲಿ ನಾಲ್ಕು ಬಾರಿ ಆದ ಭೂಕಂಪದ ಪರಿಣಾಮವು ಭೀಕರವಾಗಿ ಅನೇಕ ಮನೆಗಳು ನಾಶವಾಗಿವೆಯೆಂದೂ ವರದಿಯಾಗಿದೆ. ಅಸ್ಸಾಮಿನ ರಾಜಧಾನಿ ಶಿಲ್ಲಾಂಗಿನಲ್ಲಿ ೫ ನಿಮಿಷ ಕಾಲ ಬಿಡುವಿಲ್ಲದೇ ಭೂಮಿಯು ನಡುಗಿತು. ಗುಡುಗಿನಿಂದ [illegible] ಜನರೆಲ್ಲರೂ ಚೀರುತ್ತಾ ಹೊರಗೆ ಬಂದರೆಂದು ಹೇಳಲಾಗಿದೆ. ನಷ್ಟಗಳ ವಿವರ ತಿಳಿದು ಬಂದಿಲ್ಲ. ನೆನ್ನೆಯ ದಿನ ಅಮೆರಿಕದ ಹಲವು ಕಡೆಗಳಲ್ಲೂ ಭೂಕಂಪ ಸಂಭವಿಸಿದ ವರದಿಗಳು ಬಂದಿವೆ.

ಕಾಂಗ್ರೆಸ್ಸಿನಲ್ಲಿ ಛಿದ್ರಗಳು ಹೋಗಬೇಕೆಂದು ನೆಹರೂ

ದೆಹಲಿಯ ೯೦೦ ಜನ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಪ್ರಧಾನಿ ನೆಹರೂರವರು ಕಾಂಗ್ರೆಸ್ಸಿನವರು ತಮ್ಮಲ್ಲಿರುವ ಛಿದ್ರಗಳನ್ನು ಹೋಗಲಾಡಿಸಿಕೊಳ್ಳಬೇಕೆಂದು ತಿಳಿಸಿದರು. [illegible] ಸಭೆ ಮತ್ತು ಪಾರ್ಲಿಮೆಂಟಿನಲ್ಲಿ [illegible] ಅಥವಾ [illegible] ಉತ್ತಮವಾದ ಕಾರ್ಯವಿಲ್ಲವೋ ಎಂದು ಅವರು ಪ್ರಶ್ನೆ ಹಾಕಿ, ಕಾಂಗ್ರೆಸ್ಸಿನವರ ಸಂಖ್ಯೆಯು ಬಹಳವಿದ್ದರೂ, ಕಾರ್ಯಕರ್ತರು ಬಹಳ ಕಡಿಮೆಯಾಗಿರುವರೆಂದು ಹೇಳಿದರು. ಕಾಂಗ್ರೆಸ್ಸಿನವರು ಜನರ ಬಳಿ [illegible] ಹೋಗಿ ಕಾಂಗ್ರೆಸ್ಸಿಗೆ ಸೇವಕರು [illegible] ಬೇಕೆಂದೂ, [illegible] ಅವರ [illegible] ಬರುವುದೆಂದೂ ಅವರು ತಿಳಿಸಿದರು.

ಮೈ. ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನೆನ್ನೆ ಶ್ರೀ ಹೆಚ್. [illegible] ಸ್ವಾಮಿಯವರಿಂದ ಧ್ವಜಾರೋಹಣವಾಯಿತು. [illegible] ಶಾಸ್ತ್ರಿ [illegible] ನೆನ್ನೆ [illegible] ರಾಯರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ನೆರವೇರಿಸಿದರು.

ಅರವಿಂದ ಘೋಷರ ದರ್ಶನ ಲಾಭ

ಸಂದರ್ಶನಕಾರರಿಗೆ ಮಾತೆಯ ಸಂದೇಶ

ವಿ. ಸು. ಸಂ.] ಪುದುಚೇರಿ ೧೬.

ಅರವಿಂದ ಘೋಷರ ದರ್ಶನ [illegible] ನೆನ್ನೆ ಯಾವುದರಿಂದ ಪುದುಚೇರಿಯಲ್ಲಿ ಅವರ ಸಂದರ್ಶನ ನಡೆಯಿತು. [illegible] ಅನೇಕರಲ್ಲಿ ಮೈಸೂರು [illegible] ಸಂಸ್ಥಾನದ ಗೃಹ ಸಚಿವ ಶ್ರೀ ಟಿ. ಮರಿಯಪ್ಪ, [illegible] ಶ್ರೀ [illegible] ರಂಗಸ್ವಾಮಿ [illegible] ಇದ್ದರು. ಆಶ್ರಮದ ಮಾತೆಯವರು ದರ್ಶನಾರ್ಥಿ ಸಂದೇಶ ನೀಡುತ್ತ, ಎನೇ ಅವರೂ [illegible] ಮನೋಭಾವವನ್ನು ತೊರೆಯಬೇಕೆಂದು ತಿಳಿಸಿದರು. ಶರೀರವನ್ನು [illegible] ಬೇಕೆಂದೂ, [illegible] ಬೇಕೆಂದೂ, [illegible] ಅವರು ಹೇಳಿದರು.

[illegible] ಕೆರೆಗೆ ಬಿದ್ದು ಮರಣ

ರಾಜಧಾನಿಯ [illegible] ಕೆರೆಗೆ [illegible] ಹೋದ [illegible] ಎಂಬುವನು ಕೆರೆಯಲ್ಲಿ [illegible] ಬಿದ್ದು ಮೃತಪಟ್ಟನೆಂದು ವರದಿಯಾಗಿದೆ.

ಮೈಸೂರು ಅಕ್ಕಿ ಬೇಡಿಕೆಯ ಪೂರ್ತಿ ಪೂರೈಕೆ ಸಾಧ್ಯವಿಲ್ಲ

ಮೈಸೂರು, ಮದ್ರಾಸು, ತಿರುವಾಂಕೂರು, ಕೊಚ್ಚಿ, ಮತ್ತು ಪಶ್ಚಿಮ ಬಂಗಾಳಗಳ ಅಕ್ಕಿಯ ಬೇಡಿಕೆಗಳನ್ನು ಪೂರ್ತಿಯಾಗಿ ಸಲ್ಲಿಸಲು ಸಾಧ್ಯವಿಲ್ಲವೆಂದು ಕೇಂದ್ರ ಆಹಾರ ಮಂತ್ರಿಗಳು ತಿಳಿಸಿರುವರು.

ಮುಂದಿನ ಕಾರ್ಯಕ್ರಮದಲ್ಲಿ ಬದಲಾವಣೆಯಿಲ್ಲ

ಮುಂದಿನ [illegible] ಮೈಸೂರು ಸರ್ಕಾರ [illegible] ಕಾರ್ಯ [illegible] ವನ್ನು [illegible] ಗೋಧಿ, ಬಿದಿರು, ರಾಗಿ [illegible] ಮುಂತಾದ [illegible] ಕಟ್ಟನ್ನು [illegible] ಯಲ್ಲಿ ಬದಲಾವಣೆ ಮಾಡಲಾಗುವುದಿಲ್ಲವೆಂದು ಹೇಳಲಾಗಿದೆ.

ಟಿಬೆಟ್ ಮೇಲೆ ಕಮ್ಯೂನಿಸ್ಟರ ಧಾಳಿಗೆ ಸಿದ್ಧತೆ

ಕಮ್ಯೂನಿಸ್ಟರು ಟಿಬೆಟ್ ಕಡೆಗೆ ಮುಂದೆ ಬರುವುದನ್ನು ಅಮೆರಿಕದ [illegible] ನೇ [illegible] ವಿಭಾಗವು ಬಲವಾಗಿ ಎದುರಿಸುತ್ತಿದೆ.

ಮದ್ರಾಸು ನಗರಗಳಲ್ಲಿ ವಸ್ತ್ರ ಅಭಾವ

ಮದ್ರಾಸು ನಗರ ಪ್ರದೇಶಗಳಲ್ಲಿ ವಸ್ತ್ರ [illegible] ಹೆಚ್ಚು ಪ್ರದೇಶಗಳಲ್ಲಿ [illegible] ಕೇಂದ್ರ ಸರ್ಕಾರದ ಅನುಮತಿಯನ್ನು ಮದ್ರಾಸ್ ಸರ್ಕಾರವು ಕೇಳುವುದೆಂದು ಹೇಳಲಾಗಿದೆ.

ಆಫ್ರಿಕಾ ಸಂಯುಕ್ತ ಸಂಸ್ಥಾನ ಸ್ಥಾಪನೆ ಪ್ರಯತ್ನ

ವಿಕ್ಟೋರಿಯಾ [illegible] ಆಫ್ರಿಕಾದ ಸಂಯುಕ್ತ ಸಂಸ್ಥಾನಗಳನ್ನು [illegible] ಹಾಗೆ [illegible] ಮಾಡಲಾಗಿದೆ

ಸಿವಿಲ್ ದಾವೆಗಳ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು

ಬೆಂಗಳೂರು ೧೫

ಇಲ್ಲಿನ ಶ್ರೇಷ್ಠ ನ್ಯಾಯಾಸ್ಥಾನವು ಸಿವಿಲ್ ದಾವೆಗಳ ಮೇಲೆ ಕೊಡುವ ತೀರ್ಪಿನ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅವಕಾಶವಾಗುವಂತೆ ಸಂಸ್ಥಾನದ ಶಾಸನವನ್ನು ಬದಲಾಯಿಸುವ ಬಗ್ಗೆ ಮುಂದಿನ ಸಭೆಯಲ್ಲಿ ತಿದ್ದುಪಡಿಯ ಮಸೂದೆಯನ್ನು ತರಲಾಗುವುದು

ಮಂತ್ರಿಗಳಲ್ಲಿ ನಿಯೋಗ

ಸೆಕ್ರೆಟೇರಿಯಟ್ಟಿನಲ್ಲಿ ಕೆಲಸ ಮಾಡುವ ನೌಕರರು ಜನ ಸೇವಕರ ಪ್ರಯೋಗವೊಂದು ನಿನ್ನೆ ಹಣಕಾಸಿನ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರನ್ನು ಭೇಟಿ ಮಾಡಿ ಆಹಾರ ಧಾನ್ಯ ಮತ್ತು ತರಕಾರಿಗಳ ಬೆಲೆಗಳು ಬಹಳ ಹೆಚ್ಚಾಗಿರುವುದರಿಂದ ಅವರುಗಳಿಗೆ ಕೊಡುವಾಗ ತುಟ್ಟಿ ಭತ್ಯವನ್ನು ೧೫ರಿಂದ ೩೫ ರೂ ಗೆ ಹೆಚ್ಚಿಸಬೇಕೆಂದು ಪ್ರಾರ್ಥಿಸಿದರು. ಸಚಿವರು ಉತ್ತರ ಕೊಟ್ಟು ದೇಶವು ಹಣಕಾಸಿನ ಬಿಕ್ಕಟ್ಟಿಗೆ ಸಿಕ್ಕಿರುವುದರಿಂದ ವಾಗ್ದಾನ ಮಾಡಲು ಅಶಕ್ಯವಾಗಿದೆಯೆಂದೂ ಹೇಳಿ, ಈ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು

ಕೊರಿಯಾಕ್ಕೆ ಹೋದ ಮೈಸೂರಿನವರು ಜಪಾನಿಗೆ

ಕೊರಿಯಾದಲ್ಲಿರುವ ಭಾರತೀಯ ಸಾರ್ವಭೌಮಿಕ ಕೇಂದ್ರದಲ್ಲಿ ಒಂದು ವರ್ಷ ಕೆಲಸ ಮಾಡಲು ನೇಮಕವಾದ ಮೈಸೂರಿನ ಪ್ರತಿನಿಧಿ ಶ್ರೀ ಕೆ ನಾಗರಾಜರಾಯರು ಅಲ್ಲಿಂದ ಜಪಾನಿನ ಟೋಕಿಯೋ ನಗರಕ್ಕೆ ಕಳುಹಿಸಲ್ಪಟ್ಟಿದ್ದಾರೆ ಅವರು ಸೌಖ್ಯದಿಂದಿರುವರೆಂದು ಸರ್ಕಾರಿ ಪ್ರಕಟಣೆಯು ತಿಳಿಸಿದೆ

ಸ್ವಾತಂತ್ರ್ಯ ದಿನದ ಶುಭಾಶಯ

ರಾಜಧಾನಿಯ ಅನಂತ ಪದರ್ ಕೃಷ್ಣ ದ ಶ್ರೀ ಎಂ ಎಸ್ ಚಂದ್ರಶೇಖರ ಜೋಯಿಸರು ಕಳುಹಿಸಿರುವ ಸ್ವಾತಂತ್ರ್ಯ ದಿನದ ಶುಭಾಶಯಗಳನ್ನು ನಾವು ಆದರದಿಂದ ಸ್ವೀಕರಿಸುತ್ತೇವೆ

ಬಟ್ಟೆ ಹೊಲೆಯುವ ಹೊಸ ಮಿಷನ್ ಬಿಕರಿಗೆ ಇದೆ

ಪಂಡಿತ ಕೃಷ್ಣಶೆಟ್ಟಿ ಅಂಡ್ ಸನ್ಸ್,
ಬಟ್ಟೆ ವ್ಯಾಪಾರಿಗಳು,
ರಾಜಕಮಲ್ ಟಾಕೀಸ್ ಬಳಿ,
ಶ್ರೀ ರಾಂ ಪೇಟೆ ಮೈಸೂರು.

ಒಲಿಂಪಿಯಾ

18 8-50ರಿಂದ ದಿನವಹಿ 3 ಆಟಗಳು

ಅಬೀದಾ

ತಾರೆ ಸ್ವರ್ಣಲತಾ, ಶಾಹೀದ್
ಮತ್ತು ಬಶೀರ್

ಇದರೊಡನೆ ಕಳೆದ ೧೫ನೇ ತಾ॥ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆ ಚಿತ್ರವನ್ನೂ ತೋರಿಸಲಾಗುವುದು

"ಕಲಾ ಕ್ಷೇತ್ರ" ಮಾಸ ಪತ್ರಿಕೆ

ಶ್ರೈ ಒಳಪಡ ಕನ್ನಡ ಭಾಷೆಯ "ಕಲಾ ಕ್ಷೇತ್ರ" ಎಂಬ ಮಾಸ ಪತ್ರಿಕೆಯು ಈಗ ತಾನೆ ಪ್ರಕಟವಾಗಿದೆ ಕರ್ನಾಟಕದ ಕಲೆ, ಸಾಹಿತ್ಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಈ ಮಾಸ ಪತ್ರಿಕೆಯು ಮೀಸಲಾಗಿದೆ ಈ ಸಂಚಿಕೆಯಲ್ಲಿ ನಾಡ ಹಬ್ಬ, ರಾಷ್ಟ್ರ ಧ್ವಜ ಸಂಗೀತ, ಚಿತ್ರ ಮತ್ತು ಶಿಲ್ಪ ಕಲೆಗಳ ಮೇಲೆ ಲೇಖನಗಳು ಬರೆಯಲ್ಪಟ್ಟಿವೆ ಪತ್ರಿಕೆಯ ಮುಖ ಪತ್ರದಲ್ಲಿ ಬುದ್ಧ ದೇವನ ಚಿತ್ರವಿದೆ ಒಳಗೆ ಮಹಾತ್ಮ ಗಾಂಧಿಯವರ ಸುಂದರ ಚಿತ್ರವಿದೆ ಇದೇ ಅಲ್ಲದೆ ಅಜಂತಾ ಶೈಲಿಯ ಚಿತ್ರವೂ, ಹ್ಯಾರಿಸರವರ ಚಿತ್ರಗಳೂ, ಚಾಮುಂಡಿ ಬೆಟ್ಟದ ದೃಶ್ಯವೂ ಇವೆ ಸಂಪಾದಕ ಮಂಡಲಿಯಲ್ಲಿ ಶ್ರೀಗಳಾದ ಜೆ ಆರ್ ರಾಮದಾಸ್, ಜಿ ನಾಗೇಂದ್ರಪ್ಪ, ಹಿ. ಆರ್ ತಿಪ್ಪೇಸ್ವಾಮಿಯವರು ಗಳಿದ್ದಾರೆ

ಬೆಲ್ಜಿಯಮ್ಮಿನಲ್ಲಿ ಕ್ಯಾಥೊಲಿಕ್ ಸರ್ಕಾರದ ಸ್ಥಾಪನೆ

ಬೆಲ್ಜಿಯಮ್ಮಿನ ಹಳೆಯ ಸರ್ಕಾರವು ಇತ್ತೀಚೆಗೆ ರಾಜೀನಾಮೆ ಕೊಟ್ಟಿತಷ್ಟೆ, ಅಲ್ಲಿ ಮತ್ತೆ ಕ್ಯಾಥೊಲಿಕ್ ಸರ್ಕಾರವು ಸ್ಥಾಪನೆಯಾಗಿರುವುದೆಂದು ವರದಿಯಾಗಿದೆ

ಬಂಗಾರದ ಶೇಖರಣೆಗಾಗಿ ಕಚ್ಚಾಟ

ಪ್ರಪಂಚದ ಸ್ವತಂತ್ರ ವ್ಯಾಪಾರ ಕ್ಷೇತ್ರಗಳಲ್ಲಿ ಚಿನ್ನ ಕೊಳ್ಳಲು ಬಲವಾದ ಪೈಪೋಟಿಯಾಗುತ್ತಿದೆ. ಕೊರಿಯಾ ಯುದ್ಧದ ಪರಿಣಾಮವೇ ಇದಕ್ಕೆ ಕಾರಣ ಸಿರಿಯ ಈಜಿಪ್ಟು, ಉತ್ತರ ಆಫ್ರಿಕಾ ಮತ್ತು ಭಾರತಗಳಲ್ಲಿ ಶೇಖರಣೆ ಜಾಸ್ತಿಯಾಗುತ್ತಿದೆ

ರಾಷ್ಟ್ರಕ್ಕೆ ಅಧ್ಯಕ್ಷರ ಸ್ವಾತಂತ್ರ್ಯ ದಿನದ ಸಂದೇಶ

ಸ್ವಾತಂತ್ರ್ಯದ ತೃತೀಯ ವರ್ಷದ ಸಂಬಂಧವಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ದೇಶಕ್ಕೆ ಸಂದೇಶವನ್ನಿತ್ತು ಜನತೆಯು ಈಗ ಸ್ಥಾಪಿತವಾಗಿರುವ ಪ್ರಜಾ ಪ್ರಭುತ್ವದ ಬಗ್ಗೆ ಹೆಮ್ಮೆ ಪಡಬೇಕೆಂದು ಕೋರಿರುವರು ಕೆಲವು ಶತಮಾನಗಳಿಂದಲೂ ಪರದೇಶೀಯರಾಳ್ವಿಕೆಯಲ್ಲಿ ನಡೆದು ಬಂದ ಆಡಳಿತದ ಸಂಬಂಧವಾಗಿ ಪ್ರಭುತ್ವಕ್ಕೂ ಪ್ರಜೆಗಳಿಗೂ ಅಂತರವಿತ್ತು ಈಗ ಅದು ಹೋಗಬೇಕೆಂದು ರಾಷ್ಟ್ರಾಧ್ಯಕ್ಷರು ಹೇಳಿ, ದೇಶದಲ್ಲಿ ಸ್ವಾರ್ಥಚಿಂತೆಯು ತೊಲಗಬೇಕೆಂದು ಕೋರಿದರು

ಬೊಂಬಾಯಿಯಲ್ಲಿ ೮೭ ಸಾವಿರ ಕಾರ್ಮಿಕರ ಮುಷ್ಕರ

೧॥ ಲಕ್ಷ ಬೊಂಬಾಯಿ ಗಿರಣಿ ಕಾರ್ಮಿಕರ ಪೈಕಿ ೮೭ ಸಾವಿರ ಜನರು ಮೊನ್ನೆ ಗಿರಣಿಗಳಿಗೆ ಹೋಗದೆ ಮುಷ್ಕರವನ್ನು ಪ್ರಾರಂಭಿಸಿದರು. ಈ ಮುಷ್ಕರಕ್ಕೆ ಸಮಾಜವಾದಿಗಳೂ, ಕಮ್ಯೂನಿಸ್ಟರೂ ಬೆಂಬಲವಿತ್ತಿರುವರು ರಾಷ್ಟ್ರೀಯ ಮಜದೂರ್ ಸಂಘದವರು ಇದನ್ನು ವಿರೋಧಿಸಿರುವರು

ಶ್ರೀ ಶಾರದಾ ಯೂನಿಯನ್

ರಾಜಧಾನಿಯ ಶ್ರೀ ಶಾರದಾ ಸಂಘದ ಸಾಮಾನ್ಯ ಸದಸ್ಯರ ಸಭೆಯು ಶ್ರೀ ವಿ ಚಂದ್ರಶೇಖರರವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ನಡೆದು ಪ್ರಸಕ್ತ ಸಾಲಿಗೆ ಶ್ರೀ ಟಿ ವಿ. ಶ್ರೀನಿವಾಸರವರನ್ನು ಕಾರ್ಯಕಾರಿ ಸಮಿತಿಯ ಅಧ್ಯಕ್ಷರನ್ನಾಗಿಯೂ ಶ್ರೀ ಕೆ ವಿ ಸುಬ್ರಹ್ಮಣ್ಯಂರವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಎಚ್ ವಿ ಪ್ರಭಾಕರರನ್ನು ಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು

ಗಣೇಶ್ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

19-8-50ರ ಶನಿವಾರದಿಂದ ಅಮೋಘ ಪ್ರಾರಂಭ

ಜ್ಞಾನ ಸುಂದರಿಯಂತಹ ಉತ್ತಮ ದರ್ಜೆಯ ಚಲನ ಚಿತ್ರವನ್ನು ತಯಾರಿಸಿದ
ಸಿಟಾಡೆಲ್ ಫಿಲಂ ಕಾರ್ಪೊರೇಷನ್ನಿನವರ ಮತ್ತೊಂದು ಅಮೋಘ
ಕಮನೀಯ ಕಲಾಕೃತಿ

*** ಹೃದಯಗೀತಂ ***

ತಾರೆ:- ಟಿ ಆರ್ ಮಹಾಲಿಂಗಂ, ಟಿ ಆರ್ ರಾಜಕುಮಾರಿ, ಕೆ ಸಾರಂಗಪಾಣಿ ವೀರಪ್ಪ, ಟಿ ಎಸ್ ಜಯಸುಂದರವರು ಲಲಿತ, ಪದ್ಮಿನಿಯರ ನೃತ್ಯ ಇದೆ

RAJKAMAL TALKIES, MYSORE.

Grand Double Attraction

From 18-8-50 Daily 3 Shows

1. NAI TALEEM
(In Hindi)

2 TRIUMPH OF YOUTH
(In Russo color)

The most stupendous spectacular and soul-stirring drama, you have ever witnessed Only the screen can unfold the exciting drama of **RUSSIAN ART**

ಕಡೆಯ ೩ ದಿನಗಳು :: ಶೀಲ ಗುಪ್ತಂ

ಫಾರ್ಮೊಸಾ ಧಾಳಿಗೆ ರಷ್ಯದ ಸಹಾಯಕ್ಕಾಗಿ ಮಾವೋ ಷರತ್ತು

ಫಾರ್ಮೊಸ ದ್ವೀಪದ ಮೇಲೆ ಧಾಳಿ ನಡೆಸಲು ಕಮ್ಯೂನಿಸ್ಟ್ ನಾಯಕ ಮಾವೋ ಟ್ಸೆ ಟುಂಗ್‌ರವರು ರಷ್ಯದಿಂದ ಪ್ರಬಲ ಸಹಾಯವನ್ನು ಕೇಳುತ್ತಿದ್ದಾರೆ ಕಮ್ಯೂನಿಸ್ಟ್ ಏಜೆಂಟರು ಮತ್ತು ಧಾಳಿ ನಡೆಸಲು ಶಕ್ತಿಯುಳ್ಳ ಉತ್ತಮ ಸೈನ್ಯಗಳನ್ನು ಆ ದ್ವೀಪದಲ್ಲಿಳಿಸಲು ರಷ್ಯದ ಸಬ್‌ಮೆರೀನುಗಳ ಸಹಾಯ ಸೈನ್ಯಗಳ ರವಾನೆಗೆ ವಿಮಾನಗಳ ಸಹಾಯ ರಷ್ಯದ ಚಿನ್ನ ಮತ್ತು ಸಂಚಾರ ದಳಕ್ಕಾಗಿ ಒಳ್ಳೆ ದಕ್ಷರ ಸಹಾಯ ಇವೇ ಮುಂತಾದುವುಗಳನ್ನು ಕೇಳಲಾಗಿದೆ ಕೊರಿಯಾ ಯುದ್ಧಕ್ಕೆ ರಷ್ಯವು ಸಾಕಷ್ಟು ಬೆಂಬಲ ಕೊಟ್ಟಿರುವುದನ್ನು ಕಂಡ ಕಮ್ಯೂನಿಸ್ಟ್ ಚೀಣದ ನಾಯಕನಿಗೆ ಕೋಪ ಬಂದಿರುವುದೆಂದು ಹೇಳಲಾಗಿದೆ ಆದರೆ ರಷ್ಯದ ವಿದೇಶಾಂಗ ಮಂತ್ರಿ ಮಾಲಟೋವ್‌ರವರು ಅವರನ್ನು ಸಮಾಧಾನಪಡಿಸಿ ಫಾರ್ಮೊಸಾ ಧಾಳಿಯನ್ನು ಮುಂದಕ್ಕೆ ಹಾಕ ಬೇಕೆಂದು ಸೂಚಿಸಿರುವರೆಂದು ತಿಳಿದು ಬಂದಿದೆ

ಕರೇನ್ ದಂಗೆಯ ಮುಖಂಡರ ಕೊಲೆ

ದಕ್ಷಿಣ ಬರ್ಮದ ಮೌಲ್ಮೀನ್ ಜಿಲ್ಲೆಯಲ್ಲಿ ಬರ್ಮದ ಸರ್ಕಾರಿ ಸೇನೆಗಳಿಗೂ ಕರೇನ್ ದಂಗೆಕಾರ ಸೈನ್ಯಗಳಿಗೂ ನಡೆದ ಕಾಳಗದಲ್ಲಿ ದಂಗೆಕಾರರ ಮುಖಂಡ ಸಾಬಾ ಯುಗ್ಯಿಂರವರು ಮೃತಿ ಹೊಂದಿದರು ಇವರ ಜೊತೆಗೆ ಸಹಾಯಕ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ವಿವಿಯನ್‌ರೂ ಮಡಿದರು

ಪುನಃ ವಿಶ್ವ ಸಂಸ್ಥೆಯ ರಷ್ಯದ ಪ್ರತಿನಿಧಿಯ ಅಸಹಕಾರವೇ?

ಈಗ ವಿಶ್ವ ಸಂಸ್ಥೆಯ ಅಧ್ಯಕ್ಷರಾಗಿರುವ ರಷ್ಯದ ಪ್ರತಿನಿಧಿ ಜೇಕಬ್ ಮಲಿಕ್‌ರವರ ಅಧ್ಯಕ್ಷತೆಯ ಅವಧಿಯು ಈ ತಿಂಗಳ ಆಖೈರಿನ ವೇಳೆಗೆ ಮುಕ್ತಾಯವಾಗುವುದು ಅನಂತರ ಅವರು ಮತ್ತೆ ತಮ್ಮ ಅಸಹಕಾರ ನೀತಿಯನ್ನು ಕೈಗೊಂಡು ಸಭಾ ತ್ಯಾಗ ಮಾಡಬಹುದೆಂದು ಹೇಳಲಾಗಿದೆ

○ ನಿಜಾಮರು ರಸ್ತೆಗಳಲ್ಲಿ ಸಂಚಾರ ಮಾಡುವಾಗ ವಾಹನಾದಿಗಳ ಓಡಾಟವನ್ನು ಪ್ರತಿಬಂಧಿಸಲಾಗಿದ್ದುದನ್ನು ಈಗ ತೆಗೆದು ಹಾಕಲಾಗಿದೆ

SRI GAYATHRI
TALKIES
Daily 3 Shows
on Wednesday the 16th —
TARZAN the APE MAN
With Johnny Weissmuller
— on Thursday the 17th —
GOOD EARTH
With —Paul Muni

Edited, printed and published by A K Nagarajan, at Sadhvi Press D Subbiah Road, Mysore

ಮಕ್ಕಳು, ಮಕ್ಕಳ, ಮಕ್ಕಳಿಗೆ ಬೇಕಾದ ಛತ್ರಿಗಳು

ಮಕ್ಕಳಿಗೆ ಹೊದಿಸುವ ಬೇಬಿ ರಗ್ಗು, ಮಕ್ಕಳ ಹಾಸಿಗೆಗೆ ಹಾಸುವ ರಬ್ಬರ್ ಶೀಟು, ಮಕ್ಕಳ ತೊಟ್ಟಿಲಿಗೆ ಕಟ್ಟುವ ಸೊಳ್ಳೆಪರದೆ ಮಕ್ಕಳನ್ನೆತ್ತಿಕೊಳ್ಳುವ ಮೃದುವಾದ ಟವಲು, ಇವೆಲ್ಲಾ ಬಾಬುಸಾಬ್ ಕಂಪೆನಿಯಲ್ಲಿ ಸಿಗುತ್ತವೆ- ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೧೭-೮-೫೦ [ಸಂಚಿಕೆ ೩೪

ಕರಾಚಿ ಪೌರಸಭಾ - ಭವನಕ್ಕೆ ಬೆಂಕಿ -

ಪಡಿತರವನ್ನು ಹೆಚ್ಚಿಸಲು ಪೌರಸಭೆಯ ನಿರ್ಣಯ

ಮೈಸೂರು ೧೬.

ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸು ಮಾಡುವ ಸಲುವಾಗಿ ನೆನ್ನೆ ಸಂಜೆ ರಾಜಧಾನಿಯ ಪೌರಸಭೆಯ ವಿಶೇಷ ಅಧಿವೇಶನವು ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ಸಭೆಯ ೩೪ ಮಂದಿ ಸದಸ್ಯರೂ ಭಾಗವಹಿಸಿ ಉಪಯುಕ್ತ ಸಲಹೆಗಳನ್ನಿತ್ತನಂತರ ಆಹಾರದ ಬಗ್ಗೆ ನಿರ್ಣಯಗಳು ಅಂಗೀಕೃತವಾದವು -

ಭಾರತ ಸರ್ಕಾರದವರು ಸಂಸ್ಥಾನಕ್ಕೆ ಕೊಡಲೊಪ್ಪಿರುವ ಅಕ್ಕಿಯ ಪ್ರಮಾಣವನ್ನು ಪೂರ್ತಿಯಾಗಿ ಬೇಗನೆ ಸೋಕಿಸಿಕೊಂಡು ಮೊದಲು ಜನರಿಗೆ ಕೊಡುತ್ತಿದ್ದ ಪ್ರಮಾಣದ ರೇಷನ್ನನ್ನು ಒದಗಿಸುವುದು. ಭಾರತಕ್ಕೆ ಆಮದಾಗುವ ಗೋಧಿಯಲ್ಲಿ ಮೈಸೂರಿಗೆ ಹೆಚ್ಚಿನ ಕೋಟಾ ಪಡೆದು 'ಎ' ತರಗತಿಯವರಿಗೆ ೧೦ ಔನ್ಸ್ ಮತ್ತು 'ಬಿ' ತರಗತಿಯವರಿಗೆ ೧೨ ಔನ್ಸ್ ಪಡಿತರ ಕೊಡಲು ಏರ್ಪಡಿಸುವುದು. ಪರಿಸ್ಥಿತಿಯು ಉತ್ತಮಗೊಂಡಕೂಡಲೇ ಅಕ್ಕಿಯ ಬೆಲೆಯನ್ನು ಇಳಿಸುವುದು. ಈಗ ದೊರೆಯುತ್ತಿರುವ ಪಾಲಿಷ್ ಕೊಡದ ಅಕ್ಕಿಯ ಬದಲು ಅದರ ಪೌಷ್ಟಿಕ ಅಂಶವು ಹೋಗದ ರೀತಿಯಲ್ಲಿ ಪಾಲಿಷ್ ಮಾಡಿದ ಅಕ್ಕಿಯ ಸರಬರಾಜಿನ ವ್ಯವಸ್ಥೆ ಮಾಡುವುದು [illegible] ಹಾಗೂ ಅಂಗಡಿಗಳಲ್ಲಿ ಶೋಧಿಸಿದ ಆಹಾರ ಪದಾರ್ಥ ಮಾರುವುದು

ಭಾರತದ ವಾಣಿಜ್ಯ ಪರೀಕ್ಷೆಯಲ್ಲಿ ಮೈಸೂರಿನವರಿಗೆ ಪ್ರಥಮ ಸ್ಥಾನ

ಭಾರತ ಸರ್ಕಾರದ ವಿದ್ಯಾಇಲಾಖೆಯವರು ನಡೆಸುವ ಕಾಮರ್ಸಿನ ಡಿಪ್ಲೊಮಾ ಪರೀಕ್ಷೆಯಲ್ಲಿ ರಾಜಧಾನಿಯ ಚಾಂಪಿಯನ್ ಟ್ಯುಟೋರಿಯಲ್ ಕಾಲೇಜಿನ ವಿದ್ಯಾರ್ಥಿಯಾದ ಶ್ರೀ ಬಿ ಎಂ ನಾರಾಯಣರವರಿಗೆ ಪ್ರಥಮ ಸ್ಥಾನವು ದೊರೆತಿದೆ. ಈ ಕಾಲೇಜಿನಿಂದ ಹೋದ ವಿದ್ಯಾರ್ಥಿಗಳ ಪೈಕಿ ಶೇ|| ೭೫ ಮಂದಿ ಉತ್ತೀರ್ಣರಾಗಿರುತ್ತಾರೆ. ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ [illegible] ಶಾಸ್ತ್ರಿಗಳು ಅಭಿನಂದನಾರ್ಹರಾಗಿದ್ದಾರೆ

ನೂತನ ಕಾಂಗ್ರೆಸ್ ಭವನದ ಶಂಕುಸ್ಥಾಪನೆ

ಬೆಂಗಳೂರು ೧೬.

ಇಲ್ಲಿನ [illegible] ಭಾಗದಲ್ಲಿ ೫೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗುವ ಕಾಂಗ್ರೆಸ್ ಭವನದ ಶಂಕುಸ್ಥಾಪನೆಯನ್ನು ಈ ಬೆಳಿಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಚ್ ಸಿ ದಾಸಪ್ಪನವರು ನೆರವೇರಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ [illegible] ರವರು ಸ್ವಾಗತ ಭಾಷಣ ಮಾಡಿದರು. ನಂತರ ಅಧ್ಯಕ್ಷರು ಶಂಕುಸ್ಥಾಪನೆ ಮಾಡಿದರು. ಈ ನಿವೇಶನವನ್ನು ಶ್ರೀ [illegible] ರವರು ಕಾಂಗ್ರೆಸ್ಸಿಗೆ [illegible] ಭವನದ ನಿರ್ಮಾಣಕ್ಕೆ ೧೧| [illegible] ವೆಚ್ಚವಾಗುವುದೆಂದು ಹೇಳಲಾಗಿದೆ

ರಾಜಕುಮಾರಿ ಎಲಿಜಬೆತ್ತಳಿಗೆ ಪುತ್ರಿಯ ಜನನ

ಲಂಡನ್ ರಾಜಕುಮಾರಿ ಎಲಿಜಬೆತ್ತಳು ನೆನ್ನೆ ಬೆಳಿಗ್ಗೆ ಹೆಣ್ಣು ಮಗುವನ್ನು ಪ್ರಸವಿಸಿದಳು

ದೇಶಾದ್ಯಂತ ಸ್ವಾತಂತ್ರ್ಯೋತ್ಸವ

ದೆಹಲಿಯಲ್ಲಿ ೧೦ ಲಕ್ಷ ಜನ ಸಂದಣಿ

ಮೊನ್ನೆ ದಿನ ದೇಶಾದ್ಯಂತವೂ ಸ್ವಾತಂತ್ರ್ಯ ದಿನೋತ್ಸವದ ಆಚರಣೆಯು ನಡೆಯಿತು. ದೆಹಲಿ, ಕಲ್ಕತ್ತಾ, ಮದ್ರಾಸು, ಬೊಂಬಾಯಿಗಳಲ್ಲದೆ ಲಖನೌ, ಗೌಹತಿ, ಅಲಹಾಬಾದ, ನಾಗಪುರ ಮುಂತಾದ ನಗರಗಳಲ್ಲೂ ನಡೆದವು. ದೆಹಲಿಯಲ್ಲಿ ವಿಜೃಂಭಣೆಯಿಂದ ಈ ಉತ್ಸವವು ನಡೆದು ಮಹಾತ್ಮರನ್ನು ಸ್ಮರಿಸಿಕೊಳ್ಳಲಾಯಿತು. ರಾಜಘಾಟಿನಲ್ಲಿ ಗಾಂಧೀಜಿಯವರ ಸಮಾಧಿಬಳಿ ಪ್ರಾರ್ಥನೆ ನಡೆಯಿತು. ರಾಷ್ಟ್ರಪತಿಯೂ, ಪ್ರಧಾನಿಯವರೂ ಸಮಾಧಿಯ ಮೇಲೆ ಪುಷ್ಪ ಮಾಲಿಕೆಗಳನ್ನು ಅರ್ಪಿಸಿದರು. ನಂತರ ಕೆಂಪು ಕೋಟೆಯ ಮೇಲೆ ನೆಹರೂರವರು, [illegible] ರಾಷ್ಟ್ರಧ್ವಜವನ್ನು ಏರಿಸಿದರು. ಭಾರತದ ರಕ್ಷಣಾ ಬಲಗಳ ಗಾರ್ಡ್ ಆಫ್ ಆನರ್ ಅನ್ನು ಅವರು ಸ್ವೀಕರಿಸಿದರು. ಸಮಾರಂಭವನ್ನು ನೋಡಲು ಅಲ್ಲಿ ೧೦ ಲಕ್ಷ ಜನರು ನೆರೆದಿದ್ದರು. ಅವರನ್ನು ಉದ್ದೇಶಿಸಿ ನೆಹರೂರವರು ಭಾಷಣ ಮಾಡಿ ಸ್ವಾತಂತ್ರ್ಯ [illegible] ಬಂದಿರುವ [illegible] ಭಾರತದ [illegible] ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ಅವರು ಮಾಡಿಕೊಂಡಂತಾಗಲಿಲ್ಲವೆಂದೂ, ಸ್ವಾತಂತ್ರ್ಯ ರಕ್ಷಣೆ ಮಾಡಲು ದೇಶದ ಒಳಗಿನ [illegible] ಬಂದೊದಗುವ ಆಪತ್ತುಗಳಿಂದ ದೇಶವು ಪಾರಾಗುವುದಿಲ್ಲವೆಂದೂ ಹೇಳಿದರು. ಭಾಷಣವನ್ನು ಕೇಳಲು ಸೇರಿದ್ದ ಭಾರಿ ಜನಸ್ತೋಮದಲ್ಲಿ ಮರಗಳನ್ನು ಹತ್ತಿದ್ದ ಜನರ ಪೈಕಿ ಹತ್ತು ಜನರು ಗಾಯಗೊಂಡರು

ಆಹಾರಮಂತ್ರಿಗಳ ಸಭೆ

ನಾಳೆ ಮಧ್ಯಾಹ್ನ ೩ ಗಂಟೆಗೆ ಬೆಂಗಳೂರು ನಗರದ [illegible] ಕೇಂದ್ರ [illegible] ಯಲ್ಲಿ ಸಂಸ್ಥಾನದ ಆಹಾರ ಮಂತ್ರಿಗಳ ವಿಶೇಷ ಸಲಹಾ ಸದಸ್ಯರ ಸಭೆಯು ನಡೆಯುವುದು. [illegible] ಸರ್ಕಾರದವರು [illegible] ವಿಶೇಷ [illegible] ಪರಿಶೀಲಿಸಲಾಗುವುದು

ದೆಹಲಿಗೆ ಮೈಸೂರಿನ ಗಂಧದ ಸಸಿಗಳು

ಮೈಸೂರು ೧೬.

ಮೊನ್ನೆ ದಿನ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ದೆಹಲಿಯಲ್ಲಿ ನೆಡುವ ಸಲುವಾಗಿ ಮೈಸೂರಿನಿಂದ ಎಂಟು ಗಂಧದ ಸಸಿಗಳನ್ನು ಶುಕ್ರವಾರ ವಿಮಾನದಲ್ಲಿ ಕಳುಹಿಸಲಾಯಿತೆಂದೂ ಅವುಗಳನ್ನು ಪ್ರಧಾನಿ ನೆಹರೂ ನವರೇ [illegible] ನೆಟ್ಟರೆಂದೂ ತಿಳಿದುಬಂದಿದೆ

ಬಿಲಿಯರ್ಡ್ಸ್ ಪಂದ್ಯ

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಮೊನ್ನೆ ನಡೆದ ಬಿಲಿಯರ್ಡ್ಸ್ ಪಂದ್ಯದಲ್ಲಿ ಬಿ ಎಸ್ ಶಂಕರ್ ೨೫೦, ವಿದ್ಯಾರಣ್ಯ ೨೨೩, ಎಂ ನಾರಾಯಣ ೨೫೦, ವಿಜಯರಾಘವ ರೆಡ್ಡಿ ೨೨೩, ಎ. ವಿಶ್ವನಾಥ ೨೫೧, [illegible] ೧೨೫ ಪಾಯಿಂಟುಗಳನ್ನು ಮಾಡಿದರು

ಸೂಚನೆ

ಗರುಡ ಸಂಚಿಕೆ ಪ್ರಯುಕ್ತ, ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಪುದುಚೇರಿಯಲ್ಲಿ ಸ್ವಾತಂತ್ರ್ಯವಾದಿಯ ಮೇಲೆ ಬಾಂಬು

ಫ್ರೆಂಚ್ ಭಾರತೀಯ ಸಭೆಯ ಭಾರತದ ಏಕೈಕ ಪ್ರತಿನಿಧಿಯಾದ ಲ್ಯಾಂಬರ್ ಸರಾವಣೆಯವರು ಪುದುಚೇರಿಯಲ್ಲಿರುವ ಭಾರತದ ರಾಯಭಾರಿ ಪ್ರತಿನಿಧಿ ಕಛೇರಿಯಲ್ಲಿ ಮೊನ್ನೆ ಸ್ವಾತಂತ್ರ್ಯೋತ್ಸವದ ಔತಣ ಕೂಟದಿಂದ ಮನೆಗೆ ಹಿಂತಿರುಗುತ್ತಿದ್ದಾಗ ಅವರ ಕಾರಿನ ಮೇಲೆ ಎರಡು ಬಾಂಬುಗಳನ್ನು ಹಾಕಲಾಯಿತು. ದೈವವಶಾತ್ ಅವರಿಗೆ ಏನೂ ಪೆಟ್ಟಾಗಲಿಲ್ಲ. ಬಾಂಬನ್ನೆಸೆದ ದುಷ್ಕರ್ಮಿ ಭಾರತಕ್ಕೆ ಓಡಿಹೋದನೆಂದು ಆಪಾದಿಸಿರುವರು. ಇಂತಹ ಹೀನ ಕೃತ್ಯಗಳಿಂದ ಫ್ರೆಂಚ್ ಭಾರತಕ್ಕೆ ಕೆಟ್ಟ ಹೆಸರು ಬರುವುದೇ ಹೊರತು ಸ್ವಾತಂತ್ರ್ಯ ಆಂದೋಲನಕ್ಕೆ ಧಕ್ಕೆಯಾಗದೆಂದು ಶ್ರೀ ಸರಾವಣೆಯವರು ತಿಳಿಸಿದರು

○ ಭಾರತಾದ್ಯಂತವೂ ಹುರುಳಿ ಮತ್ತು ಅವರೆಯನ್ನು ರೇಷನಿನಲ್ಲಿ [illegible] ಸರ್ಕಾರದವರು ಆಜ್ಞೆ ಮಾಡಿದ್ದಾರೆ

೧೬ ಗಂಟೆಗಳಲ್ಲಿ ೪೦ ಸಾರಿ ಭೂಕಂಪ

ಅಸ್ಸಾಂನಲ್ಲಿ ಇದುವರೆಗೆ [illegible] ಜನರಿಗೆ [illegible] ಭಾರಿ ಭೂಕಂಪವು ಅಸ್ಸಾಂನಲ್ಲಿ ನೆನ್ನೆ ಪುನಃ ಸಂಭವಿಸಿದುದರ ಪರಿಣಾಮವಾಗಿ ಎರಡು ಹಳ್ಳಿಗಳು [illegible] ಮನೆ, ಮಠಗಳು, ಮತ್ತು ಕಟ್ಟಡಗಳು ನೆಲಸಮವಾದದ್ದಲ್ಲದೆ ಇನ್ನೂ ಅನೇಕ ಭವನಗಳು ಜಖಂ ಆಗಿರುವುದಾಗಿ ವರದಿಯಾಗಿದೆ. ಗೋಹಾಟಿಯಲ್ಲಿ ಮೊನ್ನೆ ಸಂಜೆ ೭-೪೦ ಘಂಟೆಗೆ ಆರಂಭವಾದ ಭೂಕಂಪವು ನೆನ್ನೆ ಮಧ್ಯಾಹ್ನದವರೆಗೆ ಸುಮಾರು ೧೬ ಘಂಟೆಗಳಲ್ಲಿ ೪೦ ಬಾರಿ ಆಯಿತೆಂದೂ, ಮೊನ್ನೆ ರಾತ್ರಿ ಮೊದಲನೆಯ ಬಾರಿ ಅಲ್ಲಿ ಒಂದೇ ಸಮನೆ ೭ ನಿಮಿಷಗಳ ಕಾಲ ಭೂಮಿ ಅದುರಿತೆಂದೂ ಹೇಳಲಾಗಿದೆ. ಡಾರ್ಜಿಲಿಂಗಿನಲ್ಲಿ ಒಂದು ಇಡೀ ರಸ್ತೆಯನ್ನು [illegible] ಭೂಮಿ ಕುಸಿದು ಬಿದ್ದುದರಿಂದ [illegible] ಪೂರ್ವ ಭಾರತ, ಪೂರ್ವ ಪಾಕಿಸ್ತಾನಗಳಲ್ಲದೆ ಬರ್ಮಾದ ಹಲವು ಕಡೆಗಳಲ್ಲೂ, ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲೂ ಭೂಕಂಪವು [illegible] ವರದಿಗಳು [illegible] ಭೂಕಂಪಗಳಿಂದಲೂ [illegible] ಹೇಳಲಾಗಿದೆ

ಧಾನ್ಯ ವಸೂಲಿ ಮೇಲೆ ಕೇಂದ್ರದ ಹತೋಟಿ

ಈ ವಾರಾಂತ್ಯದಲ್ಲಿ ದೆಹಲಿಯಲ್ಲಿ ಸೇರುವ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ದೇಶದೆಲ್ಲೆಡೆ ಆಹಾರದ ಬಗ್ಗೆ ಒಂದೇ ವಿಧವಾದ ನೀತಿಯನ್ನು ಅನುಸರಿಸುವ ವಿಷಯವನ್ನು ಪರಿಶೀಲಿಸಲಾಗುವುದು. ಪ್ರಾಂತಗಳಲ್ಲಿ ಧಾನ್ಯ ವಸೂಲಿ ಬಗ್ಗೆ ಕೇಂದ್ರದ ಹತೋಟಿಯನ್ನು [illegible] ಹಲವು ಪ್ರಾಂತಗಳ ಮೇಲೆ ಒತ್ತಾಯ ಮಾಡಲು ಆಲೋಚಿಸಲಾಗುವುದೆಂದೂ ಹೇಳಲಾಗಿದೆ

ಕರಾಚಿ ಕಾರ್ಪೊರೇಷನ್ನಿಗೆ ಬೆಂಕಿ

ಕರಾಚಿ ೧೫. ಒಂದು [illegible] ಹಲವು ಮುಸ್ಲಿಮರು ನೆನ್ನೆ ಅಲ್ಲಿನ ಕಾರ್ಪೊರೇಷನ್ ಭವನಕ್ಕೆ ಬೆಂಕಿ ಹಚ್ಚಿದರೆಂದೂ, ಇದರ ಪರಿಣಾಮವಾಗಿ ಹಲವು ಕಾಗದ ಪತ್ರಗಳು ಸುಟ್ಟು ಹೋದುವೆಂದೂ ವರದಿಯಾಗಿದೆ. ಪೊಲೀಸರು ಟಿಯರ್ ಗ್ಯಾಸ್ ಬಾಂಬುಗಳನ್ನು ಪ್ರಯೋಗಿಸಿ ಗುಂಪನ್ನು ಚದುರಿಸಿದರು [illegible] ಬಂಧಿಸಲಾಯಿತು.

ನಿಜಾಂ ಪೈಲ್ ಹೋಗಿ ಬರಲು ಕಾರಿಗೆ ೧೯೪೧ ದಿನ

[illegible] ಶ್ರೀ ವೆಂಕಟೇಶ [illegible] ಬೆಂಗಳೂರಿಗೆ ೧೯೪೫ ನೇ [illegible] ಬರೆದ ಕಾಗದವು [illegible] ೧೯೦೧ ದಿನಗಳ ನಂತರ ಈ ತಿಂಗಳು ೧೧ನೇ ತಾರೀಖು ವಾಪಸು ಬಂದಿತೆಂದು ಹೇಳಲಾಗಿದೆ

○ ನಾಸಿಕದಲ್ಲಿ ಸೇರುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವನ್ನು ಬರುವ ತಿಂಗಳು ೧೭, ೧೮ನೇ ತಾರೀಖುಗಳಿಗೆ ಪ್ರತಿಯಾಗಿ ೨೦ ಮತ್ತು ೨೧ನೇ ತಾರೀಖುಗಳಲ್ಲಿ ಸೇರಿಸಬೇಕೆಂದು ನಿರ್ಧರಿಸಲಾಗಿದೆ

ಪ್ರೊಫೆಸರು ಲೆಕ್ಚರರುಗಳನ್ನು ಖಾಯಂ ಮಾಡುವ ಸಮಸ್ಯೆ

ಮೈಸೂರು ವಿಶ್ವವಿದ್ಯಾನಿಲಯದ ಕರ್ತವ್ಯದ ಬಗ್ಗೆ ನಂಜನಗೂಡಿನ ವಕೀಲರಾದ ಶ್ರೀ ಎಸ್. ನಾರಾಯಣ ರಾಯರು ಈ ರೀತಿ ಹೇಳಿಕೆಯಿತ್ತಿರುವರು -

ಮೈಸೂರು ವಿಶ್ವ ವಿದ್ಯಾನಿಲಯವು ತನ್ನ ಮುಂದಿರುವ ಕಷ್ಟವೂ ಹಾಗೂ ಸೂಕ್ಷ್ಮವೂ ಆದ ಒಂದು ಕರ್ತವ್ಯವನ್ನು ಧೈರ್ಯ, ದೂರದೃಷ್ಟಿ ಮತ್ತು ದಾಕ್ಷಿಣ್ಯದಿಂದ ನಿರ್ವಹಿಸಬೇಕಾಗಿದೆ. ಈಗ ಕೆಲವಾರು ಎರಡು ವರ್ಷಗಳಿಂದ ವಿಶ್ವ ವಿದ್ಯಾನಿಲಯದ ಪ್ರೊಫೆಸರುಗಳು ಮತ್ತು ಲೆಕ್ಚರರುಗಳ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದೂ, ಅನೇಕ ಅಧ್ಯಾಪಕರುಗಳು ಹಲವು ವರ್ಷಗಳ ಕೆಲಸ ಮಾಡಿದಾಗ್ಯೂ ಅವರ ಕೆಲಸವು ಖಾಯಂ ಆಗದೇ ಇರುವುದೂ ಸಾಧಾರಣವಾಗಿಹೋಗಿದೆ. ಹಿಂದೆ ಈ ಜಾಗಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟವರಿಂದ ಹಲವು ರೀತಿಯ ಅಹವಾಲುಗಳೂ, ಬೇಡಿಕೆಗಳೂ ಬರುತ್ತಿದ್ದುವು. ಇದರ ಪರಿಣಾಮವಾಗಿ ಕೆಲವು ಅಧ್ಯಾಪಕರು ತಮ್ಮ ಹಿರಿಯ ಅಧ್ಯಾಪಕರುಗಳ ಮೇಲೆ ಬಡ್ತಿ ಪಡೆದು ಹೋಗುವ ಪ್ರಸಂಗಗಳು ನಡೆಯುತ್ತಿದ್ದುವು. ಈಗ ಈ ವಿಷಯವನ್ನು ಹೊಸ ಕೋನದಿಂದ ನೋಡಬೇಕಾಗಿರುತ್ತೆ. ಭಾರತದ ನೂತನ ರಾಜ್ಯಾಂಗವು ರೂಪುಗೊಂಡು ದೇಶವು ರಾಷ್ಟ್ರೀಯ ಭಾವನೆ, ಸಕಲರಿಗೂ ಸಮಾನಾವಕಾಶ, ಸಮಾನ ಅಂತಸ್ತು ಮುಂತಾದ ಧ್ಯೇಯಗಳಿಂದ ತುಂಬಿರುವ ಸನ್ನಿವೇಶದಲ್ಲಿ ನಮ್ಮ ವಿಶ್ವವಿದ್ಯಾಲಯದ ಅಧಿಕಾರ ವರ್ಗದವರು ಬಹು ದೂರ ದೃಷ್ಟಿಯಿಂದಲೂ, ಸ್ಥೈರ್ಯದಿಂದಲೂ ಹೊಸ ಪರಿಸ್ಥಿತಿಗೆ ಹೊಂದಿಕೊಂಡು ತಮ್ಮ ಮುಂದಿರುವ ತೊಡಕಾದ ಪ್ರಶ್ನೆಗಳನ್ನು ನ್ಯಾಯವಾದ ರೀತಿಯಲ್ಲಿ ಬಗೆಹರಿಸಿ, ಇತರ ಆಡಳಿತ ಶಾಖೆಗಳಿಗೆ ಮಾರ್ಗದರ್ಶಕವಾಗುವುದು ಅವಶ್ಯಕ.

ಭಾರತ ರಾಜ್ಯಾಂಗದ ೧೫ನೇ ನಿಬಂಧನೆಯು ಸರ್ಕಾರವು ಮತ, ಜನಾಂಗ, ಕೋಮು, ಲಿಂಗ ಮೊದಲಾದ ಭೇದಗಳ ಆಧಾರದ ಮೇಲೆ ಯಾವ ವ್ಯಕ್ತಿಗೂ ಪಕ್ಷಪಾತ ತೋರಿಸಕೂಡದೆಂದು ವಿಧಿಸಿದೆ. ಅಂತೆಯೇ ೧೬ (೨) ನೇ ನಿಬಂಧನೆಯು ಮೇಲ್ಕಂಡ ಕಾರಣಗಳಿಂದ ಯಾವ ಪ್ರಜೆಯೂ ಸರ್ಕಾರದ ಯಾವುದೊಂದು ಹುದ್ದೆಗೂ ಅನರ್ಹನಲ್ಲವೆಂದು ಘೋಷಿಸಿದೆ. ಆದರೆ ಸಾಕಾದಷ್ಟು ಪ್ರಾತಿನಿಧ್ಯವಿಲ್ಲದ ಹಿಂದುಳಿದ ಪಂಗಡಕ್ಕೆ ಕೆಲವು ಸ್ಥಾನಗಳನ್ನು ಮೀಸಲಾಗಿಡಲು ರಾಜ್ಯಾಂಗವು ಸರ್ಕಾರಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ರೀತಿ ಅವಕಾಶವಿದ್ದರೂ ಇದೇ ರಾಜ್ಯಾಂಗದ ೩೩೫ನೇ ನಿಬಂಧನೆಯಂತೆ ನಿಮ್ನ ವರ್ಗದವರ ಹಾಗೆ ಹಿಂದುಳಿದ ಪಂಗಡದವರನ್ನೂ ಕೂಡ ಉದ್ಯೋಗಗಳಿಗೆ ತೆಗೆದುಕೊಳ್ಳುವಾಗ ಆಡಳಿತದ ದಕ್ಷತೆಗೆ ಧಕ್ಕೆಬಾರದಂತೆ ಎಚ್ಚರಿಕೆಯಿಂದಿರಬೇಕೆಂ ವಿಧಿಸಲಾಗಿದೆ. ಹಿಂದುಳಿದ ಪಂಗಡದವರ ಉನ್ನತಿಗಾಗಿ ಅವರ ಸ್ಥಿತಿಗತಿಗಳನ್ನು ವಿಚಾರಿಸಲು ಒಂದು ಪ್ರವೀಣರ ಸಮಿತಿಯ ನೇಮಕವಾಗುವುದಕ್ಕೆ ರಾಜ್ಯಾಂಗದ ೩೪೦ನೆಯ ನಿಬಂಧನೆಯು ಅವಕಾಶ ಕಲ್ಪಿಸಿದೆ. ಈ ಪರಿಸ್ಥಿತಿಯ ಪರಿಹಾರಾರ್ಥವಾಗಿ ಈ ಬಗೆಯ ಸಲಹೆಯನ್ನು ರಾಜ್ಯಾಂಗವು ನೀಡಿದೆ. ಇದರ ಪರಿಣಾಮವಾಗಿ ಕೆಲವು ಹುದ್ದೆಗಳನ್ನು ಮೀಸಲಾಗಿಡುವ ಪದ್ಧತಿ ಸಹ ಮುಂದೆ ಸ್ವಾಭಾವಿಕವಾಗಿಯೇ ಅನವಶ್ಯಕವೆನಿಸುತ್ತದೆ.

ಭಾರತದ ರಾಜ್ಯಾಂಗವು ನಮ್ಮ ಅನುಕರಣೆಗೋಸ್ಕರ ರಚಿಸಿರುವ ದೃಶ್ಯವಿದು. ಈಗಿರುವ ಉತ್ತಮ ಅನರ್ಹತೆಗಳು ಮಾಯವಾಗಿ ರಾಷ್ಟ್ರಾಡಳಿತದ ದಕ್ಷತೆಗೆ ಧಕ್ಕೆ ಬರದಂತೆ ಯೋಗ್ಯತೆ ಮೇಲೆ ಅಧಿಕಾರಿಗಳನ್ನು ಆರಿಸುವ ನಿಯಮ ಬದ್ಧವಾದ ನೀತಿಯು ಆಚರಣೆಗೆ ಬರಬೇಕು. ಈ ಸಮಯದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಮುಂದೆ ಅನೇಕ ಸಮಸ್ಯೆಗಳು ಉದ್ಭವಿಸುವುದು ಸಹಜವಾಗಿದೆ. ಆದರೆ ವಿಶ್ವವಿದ್ಯಾನಿಲಯವು ದೂಷಣೆಗಳಿಗೂ ಆಕ್ಷೇಪಣೆಗಳಿಗೂ ಹೆದರದೆ, ಹೊಸ ರಾಜ್ಯಾಂಗದ ನಿಯಮಕ್ಕೆ ತಕ್ಕಂತೆ ತನ್ನ ಕರ್ತವ್ಯವನ್ನು ನಿರ್ವಹಿಸಿದಲ್ಲಿ, ಸಂಸ್ಥಾನಗಳಲ್ಲಿ ರಾಜ್ಯಾಂಗಕ್ಕೆ ನಿಷ್ಠೆಯುಳ್ಳ ಪ್ರಥಮ ವಿದ್ಯಾಪೀಠವೆಂದು ಭಾರತದ ಇತಿಹಾಸಕ್ಕೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ.

ಸ್ವಾತಂತ್ರ್ಯೋತ್ಸವಗಳು

ಮೈಸೂರು ೧೭

ಮೊನ್ನೆ ನಡೆಸಲಾದ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾದ ಕಾರ್ಯಕ್ರಮಗಳಲ್ಲಿ ನಗರದ ಅನೇಕ ಭಾಗಗಳಲ್ಲಿ ಉತ್ಸವಗಳು ನೆರವೇರಿದವು.

ಪತ್ರಿಕೋದ್ಯೋಗಿ ಸಂಘದವರು ಬೆಳಿಗ್ಗೆ ಧ್ವಜಾರೋಹಣವನ್ನು ನಡೆಸಿದರು. ದಿವಾನರ ರಸ್ತೆಯಲ್ಲಿರುವ ಮಹಿಳಾ ಸದನದವರು ಸಂಜೆ ಅತ್ಯಮ ಭಜನೆ, ಪ್ರಾರ್ಥನೆ ಮತ್ತು ಶ್ರೀ ಟಿ. ಆರ್. ಶ್ರೀನಿವಾಸನ್‌ರವರಿಂದ ಸಂಗೀತ, ವಿದ್ಯಾರ್ಥಿನಿಯರಿಂದ ರಾಷ್ಟ್ರಗೀತೆಗಳನ್ನು ಏರ್ಪಡಿಸಿದ್ದರು. ಶಾರದಾ ಯೂನಿಯನ್ನಿನವರೂ, ದೇವಾಂಗ ರಿಕ್ರಿಯೇಷನ್ ಕ್ಲಬ್ಬಿನವರೂ, ಧ|| ಪ್ರ|| ಕೊಂಡಾಳೆ ರಂಗಯ್ಯನವರ ವಿದ್ಯಾರ್ಥಿ ನಿಲಯದವರೂ, ಹಳ್ಳದಕೇರಿಯ ಜೈ ಹಿಂದ್ ವಿದ್ಯಾರ್ಥಿ ಕೂಟದವರೂ ದಿನಾಚರಣೆಯನ್ನು ನೆರವೇರಿಸಿದರು. ಈ ಸಂಘದ ಕಾರ್ಯದರ್ಶಿಯವರು ಪ್ರಧಾನಿ ನೆಹರೂರವರಿಗೆ ಶುಭ ಸಂದೇಶವನ್ನು ಕಳುಹಿಸಿ, ಗಾಂಧಿಜಿಯವರ ರಾಮರಾಜ್ಯದ ಕಡೆಗೆ ದೇಶವು ನಡೆಯಬೇಕೆಂದು ಪ್ರಾರ್ಥಿಸಿರುವರು. ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಸಂಸ್ಥೆ ಶಾಲೆ, ಗಂಗಾ ಪರಮೇಶ್ವರಿ ಯೂನಿಯನ್‌ಗಳಲ್ಲಿ ಸಮಾರಂಭಗಳು ನಡೆದವು. ಶ್ರೀ ಇಂದ್ರ ಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರು ಪತ್ರಿಕೋದ್ಯಮಿಗಳಿಗೆ ಸ್ವಾತಂತ್ರ್ಯೋತ್ಸವದ ಭೋಜನವನ್ನು ಏರ್ಪಡಿಸಿದ್ದರು. ರಾಜಧಾನಿಯ ಮೆಟ್ರೊಪಾಲಿಟನ್ ಕಾಫೀ ಹೌಸಿನಲ್ಲೂ ಸಹ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಕೊಡಗಹಳ್ಳಿಯಲ್ಲಿ ಸಮಾರಂಭ

ಕೊಡಗಹಳ್ಳಿಯಲ್ಲಿ ವಿಜೃಂಭಣೆಯಿಂದ ದಿನಾಚರಣೆಯು ನಡೆದು, ಊರಿನಲ್ಲೆಲ್ಲಾ ಮುಖಂಡರ ಭಾವಚಿತ್ರಗಳ ಮೆರವಣಿಗೆ ಆಯಿತು. ಶ್ರೀ ಕೊಡಗಹಳ್ಳಿ ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಎಚ್. ಪುಟ್ಟಸ್ವಾಮಿ, ಪಟೇಲ್ ಮರಿಗೌಡರು, ಸುಬ್ಬೇಗೌಡರು, ಸಿದ್ದ ನಾಯ್ಕರು, ಮುಂತಾದವರ ಭಾಷಣಗಳಾದವು.

ಕ್ರಯಕ್ಕಿದೆ

ಡೋರ್ ನಂಬರು ೧೩೮೭
ಕೃಷ್ಣಮೂರ್ತಿ ಪುರಂ,
ಮಹಡಿ ಮನೆ, ಔಟ್ ಹೌಸ್,
ನಲ್ಲಿ, ದೀಪ, ಭಾವಿ,
ಉಳ್ಳ ಸ್ವತ್ತು.
ವಿವರಗಳಿಗೆ -
ಆರ್. ಗುಂಡೂರಾವ್,
ಪಿಟ್ಸ್ ರ್, ಶ್ರೀರಾಂಪೇಟೆ, ಮೈಸೂರು

ರಘುಲಾಲ್ & ಕೋ.,
ಔಷಧ ವ್ಯಾಪಾರಗಳು,
ಧನ್ವಂತರಿ ರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅವಿನ್ಯೂ ಶ್ರೀನಿವಾಸಾಚಾರ್ಯರ ರಸ್ತೆ
ಬೆಂಗಳೂರು

ರಣಜಿತ್
18-8-50ನೇ ಶುಕ್ರವಾರದಿಂದ
ಯಶಸ್ವಿ 2ನೇ ವಾರ
ಮ್ಯಾಟನಿ 3 ಘಂಟೆಗೆ
ಎ. ವಿ. ಎಂ. ರವರ
ತೆಲುಗು ಚಿತ್ರ - ಜೀವಿತಂ -
ಪಾತ್ರ:- ನಾರಾಯಣರಾವ್, ವೈಜಯಂತಿ, ಇತ್ಯಾದಿ
ಬೆಳಗಿನ ಪ್ರದರ್ಶನ 15-8-50ರಿಂದ 6 ದಿವಸಗಳು ಮಾತ್ರ
ಶಾಂತಾರಾಂರವರ ಪೂರ್ಣ ವರ್ಣರಂಜಿತ ಹಿಂದಿ ಚಿತ್ರ
- ಶಾಕುಂತಲಾ - ಜಯಶ್ರೀ ಚಂದ್ರಮೋಹನ್

RAJKAMAL TALKIES,
MYSORE
Grand Double Attraction
from 18-8-50 Daily 3 Shows
1. NAI TALEEM
(In Hindi)
2. TRIUMPH - OF YOUTH
(In Russo color)

The most stupendous spectacular and soul stirring drama, you have ever witnessed. Only the screen can unfold the exciting drama of RUSSIAN ART
Morning Shows From 18-8-50 For 3 days
LIGHTNING TERROR
A Full Thrilling Serial

ವಿವಿಧ ರೇಷ್ಮೆ ಸೀರೆಗಳಿಗೆ
9 ಗಜದ ಪೂನಾ ನಾಗಪುರ ಸೀರೆಗಳಿಗೆ
M. V. ಭೋಜಯ್ಯ ಬಿ. ವಿ.
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಒಲಂಪಿಯಾ
18-8-50ರಿಂದ ದಿನದಿನ 3 ಆಟಗಳು
ಆಬಿದ
ಪಾತ್ರ ಸ್ವರ್ಣಲತಾ, ಶಮೀನ ಮತ್ತು ವಜೀರ್
ಇದರೊಡನೆ ಕಳೆದ ೧೫ನೇ ತಾ|| ದೆಹಲಿಯಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆ ಚಿತ್ರವನ್ನೂ ತೋರಿಸಲಾಗುವುದು
ಬೆಳಗಿನ ಪ್ರದರ್ಶನ 18-8-50 ರಿಂದ
ಭಗವಾನ್ ಪಾತ್ರ ವಹಿಸಿರುವ
• ಷೇರ್ ದಿಲ್ಯಾಂಡ್ಸ್ •

SRI GAYATHRI
TALKIES
Daily 3 Shows
— on Friday the 18th —
PRIDE & PREJUDICE
With:—Greer Garson & Laurence Oliver
—:on Saturday the 19th —
BLOSSOMS - IN THE DUST
With —Greer Garson & Walter Pidgeon
Morning Shows on Sat, the 19th & Sun the 20th
They Died With - Their Boots on

Edited, printed and published by A R Nagarajan, at Sadhvi Press D Subbiah Road, Mysore

ಕ್ರಮಾಂಕ 792 ॥ವಂದೇ ಮಾತರಂ॥ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಶನಿವಾರ ೧೯-೮-೫೦ [ಸಂಚಿಕೆ ೨೫

ಪುಟ್ಟರಾಜ ಅರಸರಿಗೆ ರಾಷ್ಟ್ರಾಧ್ಯಕ್ಷರ ಕರೆ

ಸೋಮವಾರ ಶೇರಿಯನ್ನು ಬ್ಯಾರಿಗೆ ತಲುಪುವ ಏರ್ಪಾಡು

ಕರ್ನಾಟಕ ಶಿಕ್ಷಕ ವಿದ್ಯಾ ... ಸಭೆ

ಬೆಂಗಳೂರು ೧೯

ಇಲ್ಲಿನ ಬಸವನಗುಡಿ ... [illegible]

ಪೈಲಿನ ಗೋಡೆ ಬಿದ್ದು ಪ್ರೈದಿಗಳ ಪರಾರಿ

ಕೆಲವು ದಿವಸಗಳ ಹಿಂದೆ ... ಸಂಭವಿಸಿದ ಭೂಕಂಪದ ಪರಿಣಾಮವಾಗಿ ... ಬಂದೀಖಾನೆಯ ಗೋಡೆಯು ಕುಸಿದು ಬಿದ್ದು ಇಬ್ಬರು ಪ್ರೈದಿಗಳು ಪರಾರಿಯಾಗಿರುವರೆಂದು ವರದಿಯಾಗಿದೆ

ದೋಣಿ ಮುಳುಗಿ ೩೦೦ ಮಂದಿಯ ಮರಣ

ಪೂರ್ವ ಬಂಗಾಳದ ... ೩೦೦ ಮಂದಿಯನ್ನು ಹೊತ್ತು ... ದೋಣಿಯು ... ಮುಳುಗಿ ... ಮಂದಿ ಮೃತಪಟ್ಟರೆಂದು ವರದಿಯಾಗಿದೆ

ಬಿಜಾಪುರದಲ್ಲಿ ಕ್ಷಾಮ

ಬೊಂಬಾಯಿ ಪ್ರಾಂತ್ಯದ ಬಿಜಾಪುರದ ... ಮಳೆಯ ಅಭಾವದಿಂದ ... ೨೦ ಲಕ್ಷ ... [illegible] ... ತಲೆದೋರುತ್ತಿದೆ ಎಂದು ವರದಿಯಾಗಿದೆ

[illegible]

[illegible]

"ಸುಧಾ" ವಾರ ಪತ್ರಿಕೆ

ಬೆಂಗಳೂರಿನ ... [illegible] ... "ಸುಧಾ" ಎಂಬ ... ವಾರ ಪತ್ರಿಕೆಯನ್ನು ... ದಿವಸದಿಂದ ಪ್ರಕಟಿಸುವರು

ಸ್ವಾಗತ

... ಶ್ರೀ ... "ಬೆಂಗಳೂರು" ... [illegible]

ಭೂಕಂಪದಿಂದ ಟಿಬೆಟ್ಟಿನ ಆಕ್ರಮಣಕ್ಕೆ ಅಡಚಣೆ

ಪೂರ್ವ ಟಿಬೆಟ್ಟಿನಲ್ಲಿ ಭಾರಿಯಾದ ಭೂಕಂಪನಗಳಾಗಿ ... ಮತ್ತು ಟಿಬೆಟ್ ರಾಜಧಾನಿ ಲ್ಹಾಸಕ್ಕೆ ಹೋಗುವ ಎರಡು ರಸ್ತೆಗಳು ... ಕೆಟ್ಟು ಹೋಗಿವೆ ... ಟಿಬೆಟ್ಟಿನ ಮೇಲೆ ... ಆಕ್ರಮಣವು ... ಮುಂದುವರೆಯುವುದೆಂದು ಹೇಳಲಾಗಿದೆ

೧೯ ವರ್ಷಗಳ ನಂತರ ಬಿಡುಗಡೆಯಾದ ಖೈದಿ

[illegible] ... ಎಂಬುವರಿಗೆ ಈ ತಿಂಗಳು ... ಬಿಡುಗಡೆ ಮಾಡಲಾಯಿತೆಂದು ವರದಿಯಾಗಿದೆ

ಗೇರು ಬೀಜ ಕೊಳ್ಳುವವರ ... ಸೂಚನೆ

[illegible] ... ಶ್ರೀ ಎಂ. ... ಕಂಪನಿಯವರು ... ಬೆಂಗಳೂರಿನ ... ಶ್ರೀ ... [illegible]

ಪುಟ್ಟರಾಜೆ ಅರಸರಿಗೆ ರಾಷ್ಟ್ರಾಧ್ಯಕ್ಷರಿಂದ ಕರೆ

ಸ್ವಂ. ವ. ಪ್ರೋ.] ಬೆಂಗಳೂರು ೧೯

ರಾಷ್ಟ್ರಾಧ್ಯಕ್ಷರ ಭೇಟಿಗಾಗಿ ... ನ್ಯಾಯಾಧೀಶರಾದ ಶ್ರೀ ಆರ್. ಪುಟ್ಟರಾಜೆ ಅರಸಿನವರು ... ಸಂಬಂಧವಾಗಿ ... ದೆಹಲಿಗೆ ಶ್ರೀ ಅರಸಿನವರು ... ಬಂದಿರುವುದಾಗಿ ತಿಳಿದುಬಂದಿದೆ

ಹೈಕೋರ್ಟಿನಲ್ಲಿ ಅರಸರ ಅರ್ಜಿ

ಶ್ರೀ ಆರ್. ಪುಟ್ಟರಾಜೇ ಅರಸಿನವರು ... ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಆರ್. ... ಶ್ರೀ ಟಿ. ಎ. ... ಅವಕಾಶವನ್ನು ಕೊಡಲಾಗಿದೆ

ದೆಹಲಿಗೆ ಆರೋಗ್ಯ ಸಚಿವರು

ವಿದ್ಯಾ ಮತ್ತು ಆರೋಗ್ಯ ಸಚಿವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ... ದೆಹಲಿಗೆ ಪ್ರಯಾಣ ... ಆರೋಗ್ಯ ... ಶ್ರೀ ಸಿದ್ದಲಿಂಗಯ್ಯನವರು ರಾಜಧಾನಿಗೆ ... ಮೆಡಿಕಲ್ ಕಾಲೇಜು, ... ಆಯುರ್ವೇದಿಕ್ ಕಾಲೇಜಿನಲ್ಲಿ ... ಭೇಟಿಯಿತ್ತರು

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ... [illegible]

ಸಹಾಯಾರ್ಥ ಪ್ರದರ್ಶನ

ರಾಜಧಾನಿಯ ... ಸಂಜೆ ... "ಶ್ರೀ ಕೃಷ್ಣ ... " ಎಂಬ ನಾಟಕವನ್ನು ... ಸಹಾಯಾರ್ಥವಾಗಿ ಪ್ರದರ್ಶಿ...

ಭಾರತಕ್ಕೆ ೧॥ ಲಕ್ಷ ಟನ್ ಬರ್ಮಾ ಅಕ್ಕಿ

ಭಾರತಕ್ಕೆ ೧ ಲಕ್ಷ ೬೦ ಸಾವಿರ ಟನ್ ಬರ್ಮಾ ಅಕ್ಕಿಯನ್ನು ... ಕೊಡುವುದು ... ಸಾವಿರ ಟನ್ ಅಕ್ಕಿಯನ್ನು ... ಒಪ್ಪಂದವಾಗಿದೆ

ಮುಕ್ತಾರ್ ಎಕ್ಸ್‌ಪ್ರೆಸ್ ಅಪಘಾತದಿಂದ ೩೯ ಜನರ ಸಾವು

ಮುಕ್ತಾರ್ ಎಕ್ಸ್‌ಪ್ರೆಸ್ ರೈಲಿನ ಅಪಘಾತದಿಂದ ೩೯ ಜನರ ಪ್ರಾಣಹಾನಿಯಾಗಿರುವುದಾಗಿ ವರದಿಯಾಗಿದೆ

ಎರಡು ತಲೆಗಳ ವಿಚಿತ್ರ ಶಿಶು

ಮಧ್ಯ ಪ್ರದೇಶದ ... ಎಂಬ ... ವಿಚಿತ್ರ ... ಶಿಶುಗಳಿಗೆ ಜನ್ಮವಿತ್ತಿರುವ ಪ್ರಸಂಗವು ವರದಿಯಾಗಿದೆ ... ಒಂದು ಗಂಡು ಮತ್ತೊಂದು ಹೆಣ್ಣು ... ಎರಡು ಭುಜಗಳ ... ಎರಡು ತಲೆಗಳುಳ್ಳವುಗಳೆಂದು ... ಗಂಡು ಮಗುವು ... ವರದಿಯಾಗಿದೆ

ಭೂಚಲನೆಯಿಂದ ಮನೆಗಳು ಮುಳುಗುತ್ತಿವೆ

ಅಸ್ಸಾಮಿನ ... ನಗರದಲ್ಲೂ ಭೂಕಂಪದಿಂದ ಮನೆಗಳು ... ಹೋಗುತ್ತಿರುವುದಾಗಿ ... ಭಾರಿ ಸ್ಫೋಟನೆಗಳು ... ೧೧ ಜನರು ... ೧ ಕೋಟಿ ರೂಪಾಯಿಗಳ ... ನಷ್ಟವಾಗಿರುವುದು

ಹರಿಕಥೆ

ರಾಜಧಾನಿಯ ... ದೇವಸ್ಥಾನದಲ್ಲಿ ... ಶ್ರೀ ... ಮಧ್ಯಾಹ್ನ ... ಗಂಟೆಗೆ ಶ್ರೀ ... "ವಾಸುದೇವ ಚರಿತ್ರೆ" ಎಂಬ ಹರಿಕಥೆಯು ಏರ್ಪಾಟಾಗಿದೆ

ಯುವಕ ಸಂಘದ ನೂತನ ಅಧಿಕಾರಿಗಳು

... ಪುರದ ಯುವಕ ಸಂಘದ ... ಸಾಲಿನ ಅಧಿಕಾರ ವರ್ಗಕ್ಕೆ ಶ್ರೀಗಳಾದ ಎಂ. ವಿ. ... ಸಿ. ಎಸ್. ರಾಮಚಂದ್ರ, ಮತ್ತು ಬಿ. ಎ. ವೆಂಕಟರಾಮಯ್ಯ ಮತ್ತು ... ಅಧ್ಯಕ್ಷ, ಕಾರ್ಯದರ್ಶಿಗಳು ಮತ್ತು ... ಚುನಾಯಿತರಾಗಿರುವರು

ಬಲಿಯರ್ಡ್ಸ್ ಪಂದ್ಯ

ರಾಜಧಾನಿಯ ... ಕ್ಲಬ್ಬಿನಲ್ಲಿ ನೆನ್ನೆ ದಿನ ನಡೆದ ಬಲಿಯರ್ಡ್ಸ್ ಪಂದ್ಯದಲ್ಲಿ ... ಕ್ಲಬ್ಬಿನ ಶ್ರೀ ಎ. ಸಿ. ... ಮತ್ತು ಶ್ರೀ ಬಿ. ಬಿ. ... ಸ್ಪರ್ಧೆ ನಡೆದು ... ಪಾಯಿಂಟುಗಳನ್ನೂ ... ಎರಡನೇ ಪಂದ್ಯದಲ್ಲಿ ... ಕ್ಲಬ್ಬಿನ ಶ್ರೀ ಎ. ಸಿ. ವೀರಣ್ಣಾಜೆ ಅರಸಿನವರಿಗೂ ... ಕ್ಲಬ್ಬಿನ ಶ್ರೀ ಬಿ. ಎಸ್. ... ಸ್ಪರ್ಧೆ ನಡೆದು ...

ವಿಶ್ವ ವಿದ್ಯಾನಿಲಯದ ಪರೀಕ್ಷಾ ಫಲಿತಾಂಶ

ಮೈಸೂರು ೧೯

ಕಳೆದ ಜುಲೈ-ಆಗಸ್ಟಿನಲ್ಲಿ ನಡೆದ ಎಂ ಎ ಮತ್ತು ಎಂ ಎಸ್‌ಸಿ ಪರೀಕ್ಷಾ ಫಲಿತಾಂಶಗಳ ಕೆಳಗೆ ಕಂಡಂತೆ ಇವೆ

ಎಂ ಎ ಡಿಗ್ರಿ ಪರೀಕ್ಷೆ

ಇಂಗ್ಲೀಷ್ ಫಸ್ಟ್ ಕ್ಲಾಸ್ ಇಲ್ಲ ಸೆಕೆಂಡ್ ಕ್ಲಾಸ್ ೧ ೨, ೪ ೬, ೭, ೮

ಕನ್ನಡ - ಫಸ್ಟ್ ಕ್ಲಾಸ್ ೧೩ ಸೆಕೆಂಡ್ ಕ್ಲಾಸ್ ೧೧ ೧೨, ವಿಶೇಷ ಪ್ರಶಸ್ತಿಯ ಡಿಗ್ರಿ ಪಡೆದವರ ೧೪

ಸಂಸ್ಕೃತ - ಫಸ್ಟ್ ಕ್ಲಾಸ್ ಇಲ್ಲ ಸೆಕೆಂಡ್ ಕ್ಲಾಸ್ ೧೭, ೧೮ ವಿಶೇಷ ಪ್ರಶಸ್ತಿಯ ಡಿಗ್ರಿ ಪಡೆದವರು ೧೬

ಎಕನಾಮಿಕ್ಸ್ - ಫಸ್ಟ್ ಕ್ಲಾಸ್ ೨೧, ೨೬ ಸೆಕೆಂಡ್ ಕ್ಲಾಸ್ ೧೯, ೨೦, ೨೨, ೨೩ ೨೬, ೨೯, ೩೦ ೩೧, ೩೩

ಪಾಲಿಟಿಕ್ಸ್ - ಫಸ್ಟ್ ಕ್ಲಾಸ್ ೩೬ ಸೆಕೆಂಡ್ ಕ್ಲಾಸ್ ೩೫ ೩೭

ಫಿಲಾಸಫಿ - ೩೮, ೩೯ ಇವರಿಗೆ ಡಿಗ್ರಿ ಕೊಡಲಾಗಿದೆ ವಿಶೇಷ ಪ್ರಶಸ್ತಿಯ ಡಿಗ್ರಿ ಪಡೆದವರು ೪೧

ಸೈಕಾಲಜಿ - ವಿಶೇಷ ಪ್ರಶಸ್ತಿಯ ಡಿಗ್ರಿ ಪಡೆದವರು ೪೬

ಎಂ ಎಸ್‌ಸಿ ಡಿಗ್ರಿ ಪರೀಕ್ಷೆ

ಸ್ಟಾಟಿಸ್ಟಿಕ್ಸ್ ಫಸ್ಟ್ ಕ್ಲಾಸ್ ೪೪, ೪೭ ಸೆಕೆಂಡ್ ಕ್ಲಾಸ್ ಇಲ್ಲ

ಫಿಸಿಕ್ಸ್ - ಫಸ್ಟ್ ಕ್ಲಾಸ್ ೫, ೭, ೪೬ ಸೆಕೆಂಡ್ ಕ್ಲಾಸ್ ೧, ೨, ೩ ೮, ೪೭

ಮ್ಯಾಥಮ್ಯಾಟಿಕ್ಸ್ - ಫಸ್ಟ್ ಕ್ಲಾಸ್ ೨೨ ಸೆಕೆಂಡ್ ಕ್ಲಾಸ್ ೪೮

ಬಾಟನಿ ಫಸ್ಟ್ ಕ್ಲಾಸ್ ೨೮ ಸೆಕೆಂಡ್ ಕ್ಲಾಸ್ ೪೯

ಜೂಆಲಜಿ - ಫಸ್ಟ್ ಕ್ಲಾಸ್ ೩೪ ಸೆಕೆಂಡ್ ಕ್ಲಾಸ್ ೩೧, ೩೦ ೩೨, ೫೦ ವಿಶೇಷ ಪ್ರಶಸ್ತಿಯ ಡಿಗ್ರಿ ಪಡೆದವರು ೩೫ ೩೬

ಜಿಯಾಲಜಿ ಫಸ್ಟ್ ಕ್ಲಾಸ್ ೩೮, ೬೨ ೬೩, ೬೫ ಸೆಕೆಂಡ್ ಕ್ಲಾಸ್ ೩೭, ೩೯, ೪೦, ೪೧, ೪೪

ಕೆಮಿಸ್ಟ್ರಿ ಪರೀಕ್ಷಾ ಫಲಿತಾಂಶವನ್ನು ಮುಂದೆ ಪ್ರಕಟಿಸಲಾಗುವುದು

ಸಂಸ್ಥಾನದಲ್ಲಿ ಸಾಕಷ್ಟು ಆಹಾರವಿದೆ

ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷರ ಹೇಳಿಕೆ

ಮೈಸೂರು ೧೯

ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್ ಎಂ ಚನ್ನಬಸಪ್ಪನವರು ನರಸಿಂಹರಾಜ ಬುಲೆವಾರ್ಡಿನ ತಮ್ಮ ನೂತನ ನಿವಾಸವಾದ ಬ ಹಾರ್ಲೆನಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಿದ್ದರು

ಆಹಾರದ ಮೇಲಿನ ಹತೋಟಿಯನ್ನು ಜಾರಿಯಲ್ಲಿಟ್ಟಿರುವುದರಿಂದ ಜನರಿಗೆ ಏನೂ ಸುಖವಿಲ್ಲವೆಂದೂ, ಕಾಳಸಂತೆಕೋರರು ಮತ್ತು ಸರ್ಕಾರಿ ಅಧಿಕಾರಿಗಳ ಹಿತಕ್ಕಾಗಿ ಇದನ್ನು ಜಾರಿಯಲ್ಲಿಟ್ಟಂತಾಗಿದೆಯೆಂದೂ ಶ್ರೀ ಚನ್ನಬಸಪ್ಪನವರು ನುಡಿದರು ನಂಜನಗೂಡು ಟಿ ನರಸೀಪುರ ಯಳಂದೂರು ಮತ್ತು ಗುಂಡ್ಲುಪೇಟೆಗಳ ಆಹಾರದ ಸ್ಥಿತಿಯನ್ನು ಪ್ರಸ್ತಾಪಿಸಿ ಆ ಪ್ರದೇಶಗಳಲ್ಲಿ ಕ್ಷಾಮದ ಪರಿಸ್ಥಿತಿ ತಲೆದೋರಿದೆಯೆಂದೂ, ಆದರೆ ಹಳ್ಳಿಯ ಪಕ್ಕದ ಗಡಿಯಾದ ಪೆರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆಗಳಿಂದ ಆಹಾರವು ಹೊರಕ್ಕೆ ರವಾನೆಯಾಗುವುದು ದಿನಚರಿಕಾರ್ಯವಾಗಿದೆಯೆಂದೂ ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಅಸಮರ್ಥವಾಗಿದೆಯೆಂದೂ ಅವರು ಹೇಳಿದರು ಸಂಸ್ಥಾನದಲ್ಲಿನ ಆಹಾರ ದಾಸ್ತಾನಿನ ಬಗ್ಗೆ ಸರ್ಕಾರದವರಿಗೆ ಸರಿಯಾದ ಅಂಕಿ ಅಂಶಗಳು ದೊರೆತಿಲ್ಲವೆಂದೂ ಜನರು ಯಾವುದಾದರೊಂದು ರೀತಿ ಆಹಾರವನ್ನು ಕೊಳ್ಳುತ್ತಿರುವುದೂ ಮತ್ತು ಕಡಿಯೋ ಇಲ್ಲದೆ ಹೊರಕ್ಕೆ ಆಹಾರವು ಸಾಗುತ್ತಿರುವುದೂ ಇಲ್ಲಿ ಯಥೇಚ್ಛವಾಗಿ ಆಹಾರ ಬೆಳೆಯಬಹುದಕ್ಕೆ ನಿದರ್ಶನವಾಗಿದೆಯೆಂದೂ ಆದ್ದರಿಂದ ಕೂಡಲೇ ಆಹಾರಹತೋಟಿಯನ್ನು ರದ್ದುಗೊಳಿಸಿದರೆ ಮೇಲ್ಕಂಡ ತೊಡಕುಗಳ ನಿವಾರಣೆಯಾಗಿ ಪರಿಸ್ಥಿತಿಯು ಸುಧಾರಿಸಲ್ಪಡುವುದೆಂದೂ ಶ್ರೀಯುತರು ನುಡಿದರು

ಹರಿಕಥೆ

ಈ ದಿನ ರಾತ್ರಿ ೯ ಘಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಸೇತು ಮಾಧವ ದಾಸರಿಂದ ದತ್ತಾತ್ರೇಯ ಜನನ ಎಂಬ ಹರಿಕಥೆ ನಡೆಯುತ್ತದೆ

ರಾಘವೇಂದ್ರ ಗುರು ಆರಾಧನೋತ್ಸವ

ರಾಜಧಾನಿಯ ಬ್ರಾಹ್ಮಣರ ಕೇರಿ ೩ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನಾ ಮಹೋತ್ಸವ ಇದೇ ತಿಂಗಳು ೨೮ ೨೯ ಮತ್ತು ೩೦ನೇ ತಾರೀಖುಗಳಲ್ಲಿ ನಡೆಯುತ್ತದೆ ಗುರುಗಳ ಭಕ್ತರೆಲ್ಲರಿಗೂ ಈ ಮೂಲಕ ವ್ಯವಸ್ಥಾಪಕರು ಆಹ್ವಾನವಿತ್ತಿರುವರು ಭಜನೆ, ಪೂಜೆಗಳು ಏರ್ಪಾಡಾಗಿದೆ ಧಾನ್ಯಗಳ ರೂಪದಲ್ಲಿ ಸಹಾಯವನ್ನು ಕೋರಲಾಗಿದೆ

ಎಸ್ ಬಿ ಕೋ ಆಪರೇಟಿವ್ ಬ್ಯಾಂಕ್
ಡೈರೆಕ್ಟರುಗಳ ಚುನಾವಣೆ
ನಾಳೆ ಮಧ್ಯಾಹ್ನ ೩ ಘಂಟೆಗೆ ರಾಜಧಾನಿಯ ಸಾಹುಕಾರ್ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯಲಿರುವ ಬ್ಯಾಂಕಿನ ಚುನಾವಣೆಯಲ್ಲಿ,
ನಂ 33 ಪಿ. ವಿ. ಸುಬ್ರಾಯರ್
ಸ್ಟ್ಯಾಂಪ್ ವೆಂಡರ್,
ಇವರಿಗೆ ತಮ್ಮ ಓಟನ್ನು ಕೊಡಬೇಕಾಗಿ ವಿನಂತಿ

ಒಳ್ಳೆಯ ಧಾವಳಿಗಳು
ಈಗ ತಾನೆ ಬಂದಿವೆ
ರಾಜಲಕ್ಷ್ಮಿ ಹಾಲ್ & ಟೈಲರಿಂಗ್ ಇನ್‌ಸ್ಟಿಟ್ಯೂಟ್
ಅಲ್ಬರ್ಟ್ ರೋಡ್ ಮೈಸೂರು

ರಘುಲಾಲ್ & ಕೋ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ
ಬೆಂಗಳೂರು

ಕ್ರಯಕ್ಕಿದೆ
ಡೋರ್ ನಂಬರು ೧೨೪೭
ಕೃಷ್ಣಮೂರ್ತಿ ಪುರಂ,
ಮಹಡಿ ಮನೆ, ಔಟ್ ಹೌಸ್,
ನಲ್ಲಿ, ದೀಪ, ಭಾವಿ,
ಉಳ್ಳ ಸ್ವತ್ತು.
— ವಿವರಗಳಿಗೆ —
ಆರ್. ಗುಂಡೂರಾವ್,
ಡೆಕ್ಕರ್, ಶ್ರೀರಾಂಪೇಟೆ, ಮೈಸೂರು

Edited, printed and published by A R Nagarajan, at Sadhvi Press D Subbiah Road, Mysore

ಒಲಂಪಿಯಾ
18-8-50ರಿಂದ ದಿನವೂ 3 ಆಟಗಳು
ಆಬೀದ
ಪಾತ್ರ ಸ್ವರ್ಣಲತಾ, ಶಾಹೀದ್ ಮತ್ತು ಜಹೀರ್
ಇದರೊಡನೆ ಕಳೆದ ೧೪ನೇ ತಾ॥ ಕರಾಚಿಯಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆ ಚಿತ್ರವನ್ನೂ ತೋರಿಸಲಾಗುವುದು
ಬೆಳಗಿನ ಪ್ರದರ್ಶನ 18 8 50ರಿಂದ
ಭಗವಾನ್ ಪಾತ್ರವಹಿಸಿರುವ
* ಶೇಕ್ ಹ್ಯಾಂಡ್ಸ್ *

ಗಣೇಶ್ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ
19-8-50ಕ್ಕೆ ಶುಕ್ರವಾರದಿಂದ ಅಮೋಘ ಪ್ರಾರಂಭ
† ಟಿ ಆರ್ ಮಹಾಲಿಂಗಂ,
† ಟಿ ಆರ್ ರಾಜಕುಮಾರಿ,
† ಕೆ ಸಾರಂಗಪಾಣಿ,
† ಟಿ ಎಸ್ ಬಾಲಯ್ಯ
† ವೀರಪ್ಪ,
† ಲಲಿತ - ಪದ್ಮಿನಿ
ಮುಂತಾದವರು ಪಾತ್ರವಹಿಸಿರುವ
ಸ್ವಾಮಿ ಸುಂದರಿಯಂತಹ ಉತ್ತಮ ದರ್ಜೆಯ ಚಲನ ಚಿತ್ರವನ್ನು ತಯಾರಿಸಿದ

ಜುಪಿಟರ್ ಫಿಲಂ ಕಾರ್ಪೋರೇಷನ್ನವರ ಮತ್ತೊಂದು ಅಮೋಘ ತಮಿಳು ಚಿತ್ರ
* ಹೃದಯಗೀತಂ *
ಮೊದಲಿನ 4 ವಾರಗಳು ಕಾಂಪ್ಲಿಮೆಂಟರಿ, ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಲಾಗಿದೆ
ಬುಕಿಂಗಿನ ಬಳಿ ಪ್ರತಿ ದಿನ ಬೆಳಗ್ಗೆ ೧೦ರಿಂದ ೧೨ರ ವರೆಗೆ ಮುಂಗಡ ಟಿಕೆಟುಗಳನ್ನು ರಿಸರ್ವ್ ಮಾಡಲಾಗುವುದು

ರಣಜಿತ್
18-8-50ಕ್ಕೆ ಶುಕ್ರವಾರದಿಂದ ಯಶಸ್ವೀ 2ನೇ ವಾರ
ಮ್ಯಾಟಿನಿ 3 ಘಂಟೆಗೆ
ಎ ವಿ ಎಂ.ರವರ ತೆಲುಗು ಚಿತ್ರ - ಜೀವಿತಂ -
ಪಾತ್ರ ನಾರಾಯಣರಾವ್, ವರಲಕ್ಷ್ಮಿ, ಇತ್ಯಾದಿ
ಬೆಳಗಿನ ಪ್ರದರ್ಶನ 15-8-50ರಿಂದ 6 ದಿನಗಳು ಮಾತ್ರ
ಶಾಂತಾರಾಂರವರ ಪೂರ್ತಿ ವರ್ಣರಂಜಿತ ಹಿಂದಿ ಚಿತ್ರ
- ಶಾಕುಂತಲ - ಜಯಶ್ರೀ ಚಂದ್ರಮೋಹನ್

ಪ್ರಭುದೇವಾ ಟಾಕೀಸ್
ದಿನವೂ 3 ಆಟಗಳು
19-8-50ರಿಂದ ಅಮೋಘ 2ನೇ ವಾರ
ವಾಹಿನಿಯವರ ತೆಲುಗು ಚಿತ್ರ
ಯೋಗಿ ವೇಮನ
ಪಾತ್ರ.- ನಾಗಯ್ಯ, ರಾಜಮ್ಮ, ಲಿಂಗಮೂರ್ತಿ ಮುಂತಾದವರು

ನೋಂ. ೭೯೨ "WEEKLY EDITION" ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೫] ಭಾನುವಾರ ೨೦ ೮-೫೦ [ಸಂಚಿಕೆ ೫

ಉತ್ತರ ಕೊರಿಯನ್ನರ ಮೇಲೆ ಉಗ್ರ ಧಾಳಿ

೧೦ ಸೇರು ರೇಷನ್ ಪದಾರ್ಥ ಕೊಂಡೊಯ್ಯಲು ಅನುಮತಿ

[ಸ್ವಂ ಸು ಫೋ] ಬೆಂಗಳೂರು ೨೦

ಸಂಸ್ಥಾನದ ವಿದ್ಯಾ ಸಚಿವರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಪತ್ರಿಕಾ ಪ್ರತಿನಿಧಿಯೊಬ್ಬರೊಡನೆ ಮಾತನಾಡುತ್ತಾ ಬೆಂಗಳೂರು, ಮೈಸೂರು, ದಾವಣಗೆರೆ, ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶಗಳು ಇನ್ನು ಸಂಸ್ಥಾನದ ಉಳಿದ ಯಾವ ಪ್ರದೇಶದಿಂದ ಯಾವ ಪ್ರದೇಶಕ್ಕಾದರೂ ೧೦ ಸೇರು ರೇಷನ್ ಪದಾರ್ಥವನ್ನು ಕೊಂಡೊಯ್ಯಲು ಅವಕಾಶವಿರುವುದಾಗಿ ತಿಳಿಸಿದರೆಂದು ಗೊತ್ತಾಗಿದೆ

ಕೋರ್ಟಿನ ತೀರ್ಪು ವಿರುದ್ಧ ವಾದುದಕ್ಕೆ ಮಗುವಿನ ಬಲಿ

ಇಂದೂರಿನ ಒಬ್ಬ ಜಮೀನ್ದಾರ ಹಿಂದು ರೈತನು ಭೂಮಾಲೀಕತ್ವದ ಬಗ್ಗೆ ಸಂಭವಿಸಿದ ಒಂದು ವ್ಯವಹಾರದಲ್ಲಿ ಕೋರ್ಟಿನವರು ತನಗೆ ವಿರುದ್ಧವಾಗಿ ತೀರ್ಪು ಕೊಟ್ಟುದಕ್ಕೆ ಅಸಮಾಧಾನಪಟ್ಟು ಕಳ್ಳೇ ಇದ್ದ ತನ್ನ ಮಗುವನ್ನು ಕೋರ್ಟಿನ ಮಹಡಿ ಮೇಲಿನಿಂದ ಕೆಳಕ್ಕೆ ಬಿಸಾಡಿದನೆಂದು ವರದಿಯಾಗಿದೆ ಚಿಕಿತ್ಸೆಗಾಗಿ ಮಗುವನ್ನು ಆಸ್ಪತ್ರೆಗೆ ಸೇರಿಸಲಾಗಿ ಅದು ಅಲ್ಲಿ ಮೃತಪಟ್ಟಿತು ಅಪರಾಧಿಯನ್ನು ಬಂಧಿಸಲಾಗಿದೆ

ರಾತ್ರಿಯ ವೇಳೆ ಅಂಚೆ ವ್ಯವಹಾರ

ಭಾರತದ ಹಲವು ಪ್ರಮುಖ ನಗರಗಳಲ್ಲಿ ರಾತ್ರಿಯ ವೇಳೆ ಅಂಚೆ ವ್ಯವಹಾರ ನಡೆಸುವಂತೆ ಏರ್ಪಡಿಸುವ ಅಂಶವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಗೊತ್ತಾಗಿದೆ ಅದರ ಪ್ರಕಾರ ದಿನಚರಿ ಮಾಮೂಲು ವ್ಯವಹಾರವನ್ನು ರಾತ್ರಿ ೧೦ ಘಂಟೆಯವರೆಗೂ ನಡೆಸಲಾಗುವುದೆಂದು ಹೇಳಲಾಗಿದೆ

ನಿರಾಶ್ರಿತ ಸ್ತ್ರೀಯರಿಗಾಗಿ "ವರಾನ್ವೇಷಣ" ಶಾಖೆ

ನಿರಾಶ್ರಿತರಾಗಿರುವ ವಿದ್ಯಾವತಿಯರಾದ ಯುವತಿಯರನ್ನು ಸೇರಲು ಯೋಗ್ಯ ವರಗಳನ್ನು ಹುಡುಕಲು ಪೂರ್ವ ಪಂಜಾಬಿನಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ ೨೫ರಿಂದ ೩೦ ವರ್ಷದೊಳಗಿನ ವಿದ್ಯಾವಂತ ಉದ್ಯೋಗಸ್ಥರು ಈ ಯುವತಿಯರನ್ನು ವಿವಾಹವಾಗಲು ಇಚ್ಛೆಯನ್ನು ವ್ಯಕ್ತಪಡಿಸಿ ಅರ್ಜಿ ಹಾಕಿಕೊಳ್ಳಬಹುದೆಂದು ತಿಳಿಸಲಾಗಿದೆ

ಅಂಚೆ ನೌಕರರ ಬೇಡಿಕೆ ಪೂರೈಸುವ ಭರವಸೆ

ಅಖಿಲ ಭಾರತ ಅಂಚೆ-ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ನಾರಾಯಣರವರು ಮೊನ್ನೆ ದಿವಸ ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ರಫಿ ಅಹಮದ್ ಕಿದ್ವಾಯಿಯವರನ್ನು ಭೇಟಿ ಮಾಡಿ ಅಂಚೆ ನೌಕರರ ಬೇಡಿಕೆ ಬಗ್ಗೆ ಮಾತುಕತೆ ನಡೆಸಿದರೆಂದೂ, ಆ ಬೇಡಿಕೆಗಳೆಲ್ಲವನ್ನೂ ಬಹು ಮಟ್ಟಿಗೆ ಪೂರೈಸಲು ಸಚಿವರು ಒಪ್ಪಿದರೆಂದೂ, ಆದುದರಿಂದ ಸಧ್ಯದಲ್ಲಿ ಅಂಚೆ ನೌಕರರ ಮುಷ್ಕರ ನಡೆಯುವ ಸಂಭವವಿಲ್ಲವೆಂದೂ ಹೇಳಲಾಗಿದೆ

○ ಜರ್ಮನ್ ಮತ್ತು ಇಂಡೋನೇಷ್ಯಗಳಿಗೆ ಭಾರತದಿಂದ ವೈರ್ಲೆಸ್ ಮತ್ತು ರೇಡಿಯೋ ಫೋನ್ ಸಂಬಂಧವೇರ್ಪಡಾಗಿದೆ

ಬೆಲೆ ಏರುವುದನ್ನು ತಡೆಯಬೇಕೆಂದು ನೆಹರೂ ಸಲಹೆ

ನೆನ್ನೆ ದಿನ ದೆಹಲಿಯಲ್ಲಿ ನಡೆದ ಪ್ರಾಂತ್ಯಗಳ ಮುಖ್ಯ ಮಂತ್ರಿಗಳ ಮತ್ತು ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಪಂಡಿತ ನೆಹರೂರವರು ಭಾಷಣಮಾಡಿ ದೇಶದ ಉಗ್ರ ಆಹಾರದ ಪರಿಸ್ಥಿತಿಯನ್ನು ಎದುರಿಸಲು ಎಲ್ಲ ಪ್ರಾಂತ್ಯಗಳಲ್ಲೂ ತೀವ್ರ ಕ್ರಮವನ್ನು ಕೈಗೊಳ್ಳಬೇಕೆಂದೂ ಮತ್ತು ಆಹಾರ ಪದಾರ್ಥಗಳ ಬೆಲೆ ಏರದಂತೆ ತಡೆಗಟ್ಟಬೇಕೆಂದೂ ಸಲಹೆ ಮಾಡಿದರು ಅಧಿಕ ಲಾಭ ಸಂಪಾದಿಸಲು ಧಾನ್ಯದ ದಾಸ್ತಾನು ಮತ್ತು ಕಾಳಸಂತೆ ನಡೆಸುವವರಿಗೆ ಉಗ್ರ ಶಿಕ್ಷೆಯನ್ನು ವಿಧಿಸಬೇಕೆಂದು ತೀರ್ಮಾನಿಸಲಾಯಿತು

ಭೂಕಂಪದಿಂದ ನದಿಯ ನೀರು ಕೆಟ್ಟಿದೆ

ಕಳೆದ ವಾರ ಅಸ್ಸಾಮಿನಲ್ಲಿ ಸಂಭವಿಸಿದ ಭೂಕಂಪದ ಪರಿಣಾಮವಾಗಿ ಗೌಹತಿಯಲ್ಲಿ ಬ್ರಹ್ಮಪುತ್ರಾ ನದಿ ಪ್ರವಾಹದಲ್ಲಿ ಕಡಿದು ಬಿದ್ದ ಮರಗಳಿಂದ ಕೂಡಿದ ಕೆಸರಿನಿಂದ ನೀರು ವಿಪರೀತ ದುರ್ವಾಸನೆ ಕೊಡುತ್ತಿದೆಯೆಂದೂ ಈ ವಾಸನೆಯನ್ನು ತಡೆಯಲಾರದೆ ಮೀನುಗಳು ದಡದ ಮೇಲೆ ಬಂದು ಬೀಳುತ್ತಿವೆಯೆಂದೂ ವರದಿಯಾಗಿದೆ ಭೂಕಂಪದ ಪರಿಣಾಮವಾಗಿ ಆ ಪ್ರದೇಶದ ಭೂಗರ್ಭದಲ್ಲಿ ಸ್ವಲ್ಪ ಬದಲಾವಣೆಯಾಗಿರಬಹುದೆಂದೂ ಊಹಿಸಲಾಗಿದೆ

ಜಪಾನಿನಲ್ಲಿ ೨ ಸಾವಿರ ಕಮ್ಯೂನಿಸ್ಟ್-ನೌಕರರ ವಜಾ

ಜಪಾನಿನ ವಿದ್ಯುಚ್ಛಕ್ತಿ ಸಂಸ್ಥೆಗಳಲ್ಲಿ ಕೆಲಸದಲ್ಲಿರುವ ಸುಮಾರು ಎರಡು ಸಾವಿರ ಕಮ್ಯೂನಿಸ್ಟ್-ಮತ್ತು ಜಾಪ ಪಕ್ಷದ ತೀವ್ರವಾದಿ ಬಣಗಳ ನೌಕರರನ್ನು ಈ ತಿಂಗಳಿನಲ್ಲಿ ಕೆಲಸದಿಂದ ವಜಾ ಮಾಡಲು ನಿರ್ಧರಿಸಲಾಗಿದೆಯೆಂದು ಗೊತ್ತಾಗಿದೆ ವಿದ್ಯುಚ್ಛಕ್ತಿ ಕೇಂದ್ರಗಳಿಗೆ ಅವರಿಂದ ಸಂಭವಿಸಬಹುದಾದ ಲೂಟಿ ಮೊದಲಾದ ವಿನಾಶ ಕೃತ್ಯವನ್ನು ತಡೆಗಟ್ಟುವ ಸಲುವಾಗಿ ಈ ಕ್ರಮವನ್ನು ಕೈಗೊಳ್ಳಲಾಗುವುದೆಂದು ಹೇಳಲಾಗಿದೆ

○ ಕಳೆದ ಸಾಲಿನಲ್ಲಿ ಭಾರತ ಸಮುದ್ರಾಂತರ ವ್ಯಾಪಾರವು ಸಾವಿರ ಕೋಟಿ ರೂ ಗಳನ್ನು ಮೀರಿತ್ತೆಂದು ಹೇಳಲಾಗಿದೆ

ಸಿಯೋಲಿನ ಪಶ್ಚಿಮ ತೀರದಲ್ಲಿ ಆಸ್ಟ್ರೇಲಿಯಾ ಸೈನ್ಯ

ದಕ್ಷಿಣ ಕೊರಿಯಾ ರಾಜಧಾನಿಯಾಗಿದ್ದ ಸಿಯೋಲ್ ನಗರಕ್ಕೆ ೨೦ ಮೈಲಿ ಪಶ್ಚಿಮಕ್ಕೆ ಇರುವ ಇಂಚಾನ್ ಎಂಬ ರೇವಿನಲ್ಲಿ ನಾಲ್ಕು ಸಾವಿರ ಆಸ್ಟ್ರೇಲಿಯದ ಸೈನ್ಯಗಳು ಇಳಿದಿರುವುದಾಗಿ ವರದಿಯಾಗಿದೆ ಈ ಭಾಗವೆಲ್ಲಾ ಉತ್ತರ ಕೊರಿಯನ್ನರ ವಶದಲ್ಲಿದೆ ದಕ್ಷಿಣ ಕೊರಿಯಾದ ಹೊಸ ರಾಜಧಾನಿಯಾಗಿದ್ದ ಟೇಗೂವನ್ನು ಸಿಂಗ್ಮನ್ ರ್ಹೀ ಸರಕಾರವು ತ್ಯಜಿಸಿದೆ ನಗರದ ಮೇಲೆ ಕಮ್ಯೂನಿಸ್ಟರು ಷೆಲ್‌ಗಳನ್ನು ಹೊಡೆಯುತ್ತಿರುವರು ನಾಕ್ಟಾಂಗ ನದಿ ಭಾಗದಲ್ಲಿ ೪೦ ಸಾವಿರ ಉತ್ತರ ಕೊರಿಯನ್ನರು, ಮೇಲಿನಿಂದ ಸೂಪರ್ ಫೋರ್ಟ್ರೆಸ್ ವಿಮಾನಗಳು ಬಲವಾಗಿ ಹೊಡೆಯುತ್ತಿದ್ದರೂ ಲೆಕ್ಕಿಸದೆ, ಅಮೆರಿಕದ ಸೈನ್ಯಗಳ ಮೇಲೆ ಧಾಳಿಮಾಡಿ ಪೋಹಾಂಗ್ ರೇವನ್ನು ದಕ್ಷಿಣದವರು ಪುನಃ ಆಕ್ರಮಿಸಿರುತ್ತಾರೆ

ಮೀನು ಹಿಡಿಯಲು ಬೀಸಿದ ಬಲೆಯಲ್ಲಿ ಬಾಲಕಿ

ಗಂಗಾ ನದಿಯಲ್ಲಿ ಮೀನು ಹಿಡಿಯುವ ಸಲುವಾಗಿ ಬೆಸ್ತರು ಬಲೆ ಬೀಸಲು ಅದರಲ್ಲಿ ೧೩ ವರ್ಷ ವಯಸ್ಸಿನ ಒಬ್ಬ ಜೀವಂತ ಹುಡುಗಿಯು ಬಲೆಯಲ್ಲಿ ಸಿಕ್ಕಿಬಿದ್ದ ಪ್ರಸಂಗವು ವರದಿಯಾಗಿದೆ ಕಲ್ಕತ್ತಾದಿಂದ ೪೦ ಮೈಲಿ ದೂರದಲ್ಲಿರುವ ನೈಹಾಟಿ ಎಂಬ ಹಳ್ಳಿಯಲ್ಲಿ ಈ ಘಟನೆ ಸಂಭವಿಸಿತೆಂದೂ ಹುಡುಗಿಯು ಬಲೆಯಲ್ಲಿ ಸಿಕ್ಕಿದಾಗ ಕಣ್ಣುಗಳು ಮುಚ್ಚಿದ್ದವೆಂದೂ ಮತ್ತು ಗಾಬರಿಯಿಂದ ಆಕೆಯು ನಡುಗುತ್ತಿದ್ದಳೆಂದೂ ಹೇಳಲಾಗಿದೆ ಆ ಹುಡುಗಿಯು ತನ್ನ ಮನೆಯ ಇತರ ಸ್ತ್ರೀಯರೊಡನೆ ಆಕೆ ಸ್ನಾನ ಮಾಡುತ್ತಿದ್ದಾಗ ಕೊಚ್ಚಿಕೊಂಡು ಹೋದಳೆಂದೂ, ಆಕೆಯ ಪ್ರಶ್ನೋತ್ತರಗಳು ಇನ್ನೂ ತಿಳಿದುಬಂದಿಲ್ಲವೆಂದೂ ವರದಿಯಾಗಿದೆ

ಮಂಚದ ಮೇಲೆ ಮಲಗಿದ್ದ ಶಿಶು ಮಂಚದೊಡನೆ ಭೂಗತ

ಶೌಲಾಲಂಪುರದ ಒಂದು ಇಂಜಿನೀಯರನ ಮನೆಯಲ್ಲಿ ಮಂಚದ ಮೇಲೆ ಮಲಗಿದ್ದ ಮಗುವು ಕಳೆದ ವಾರ ಸಂಭವಿಸಿದ ಭೂಕಂಪದಿಂದ ಭೂಮಿಯು ಬಿರುಕು ಬಿಟ್ಟು ಅದರೊಳಗೆ ಮಂಚದ ಸಮೇತ ಮಾಯವಾಯಿತೆಂದು ವರದಿಯಾಗಿದೆ ಮಗುವನ್ನು ರಕ್ಷಿಸಲು ನಡೆದ ಎಲ್ಲ ಪ್ರಯತ್ನಗಳೂ ವಿಫಲವಾಯಿತು

ಕೊರಿಯಾದಲ್ಲಿ ಕಮ್ಯೂನಿಸ್ಟರು ಹಿಮ್ಮೆಟ್ಟಿದರು

ಕೊರಿಯಾ ರಣರಂಗದಲ್ಲಿ ದಕ್ಷಿಣ ಕೊರಿಯಾ ಮತ್ತು ಅಮೆರಿಕದ ಸೈನ್ಯಗಳು ಕಮ್ಯೂನಿಸ್ಟರ ಮೇಲೆ ಪ್ರಬಲ ಧಾಳಿಯನ್ನು ಆರಂಭಿಸಿರುವುದಾಗಿ ವರದಿಯಾಗಿದೆ ನಾಕ್ಟಾಂಗ್ ನದಿ ತೀರದ ಬಳಿ ಶತ್ರು ಸೈನ್ಯಗಳು ಹಿಮ್ಮೆಟ್ಟುತ್ತಿರುವುವು, ಟೇಗೂ ನಗರದಿಂದಲೂ ಶತ್ರುಗಳು ಓಡುತ್ತಿದ್ದಾರೆ ಬ್ರಿಟನ್ ಯುದ್ಧ ನೌಕೆಗಳ ಸಹಾಯದಿಂದ ಇಂಚಾನ್ ದ್ವೀಪದಲ್ಲಿ ದಕ್ಷಿಣ ಕೊರಿಯನ್ನರು ಇಳಿದರು ದಕ್ಷಿಣ ಕೊರಿಯಾದ ರಾಜಧಾನಿಯನ್ನು ಹಂಗಾಮಿಯಾಗಿ ಟೇಗೂವಿನಿಂದ ಪೂಸಾನಿಗೆ ವರ್ಗಾಯಿಸಲಾಗಿದೆ ಟೇಗೂವಿಗೆ ಅರ್ಧ ಗಂಡಾಂತರವನ್ನು ತಪ್ಪಿಸಲಾಗಿದೆ ಈ ಧಾಳಿಯಲ್ಲಿ ಅಮೆರಿಕದ ವಿಮಾನಗಳು ಎಂಟು ನೂರು ಟನ್ ಬಾಂಬನ್ನು ಸುರಿಸಿ ಸುಮಾರು ಒಂದು ಸಾವಿರ ಮಂದಿ ಕಮ್ಯೂನಿಸ್ಟರನ್ನು ಕೊಲೆ ಮಾಡಿರುವುದಾಗಿ ವರದಿಯಾಗಿದೆ

ಜಾಮೀನಿನ ಹೈದರಾಬಾದ್ ಅಧಿಕಾರಿಯ ಬಿಡುಗಡೆ

ಲಾಯಕ್ ಅಲಿ ಪರಾರಿ ಸಂಬಂಧವಾಗಿ ಬಂಧನದಲ್ಲಿದ್ದ ಹೈದರಾಬಾದಿನ ಮಾಜಿ ಪೊಲೀಸ್ ಡೈರೆಕ್ಟರ್ ಜನರಲ್ ನವಾಬ್ ದೀನ್‌ಯಾರ್ ಜಂಗರನ್ನು ಅನಾರೋಗ್ಯದ ನಿಮಿತ್ತ ೧ ೦೫ ೦೦೦ರೂ ಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಹೈದರಾಬಾದ್ ಮತ್ತು ಸಿಕಂದರಾಬಾದ್ ಪೌರಸಭಾ ಕ್ಷೇತ್ರದಿಂದ ಹೊರಗೆ ಹೋಗಕೂಡದೆಂದು ಅವರ ಮೇಲೆ ನಿರ್ಬಂಧ ಹಾಕಲಾಗಿದೆ

೪ ಮಕ್ಕಳ ನಿರೀಕ್ಷಣೆ, ೨ ಮಕ್ಕಳು ಹುಟ್ಟಿವೆ

ಬ್ರಿಟನ್ನಿನ ೨೫ ವರ್ಷ ವಯಸ್ಸಿನ ಬೆಟ್ಟಿಗಾರ ಎಂಬಾಕೆಯು ಪೂರ್ಣ ಗರ್ಭಿಣಿಯಾಗಿದ್ದಳು ಆಕೆಗೆ ನಾಲ್ಕು ಮಕ್ಕಳು ಜನಿಸುವುವೆಂದು ನಿರೀಕ್ಷಿಸಲಾಗಿದೆ ಆಸ್ಪತ್ರೆ ಕಳೆದ ಗುರುವಾರ ಒಂದು ಮಗುವೂ, ಶುಕ್ರವಾರ ಒಂದು ಮಗುವೂ ಜನಿಸಿದುವೆಂದೂ ಮತ್ತೆರಡರ ಪ್ರಸವವನ್ನು ಸಧ್ಯದಲ್ಲೇ ನಿರೀಕ್ಷಿಸಲಾಗುತ್ತಿದೆಯೆಂದೂ ವರದಿಯಾಗಿದೆ

ಟಾಟಾ ಕಂಪೆನಿಯೊಡನೆ ಸರ್ಕಾರದ ಪಾಲುಗಾರಿಕೆ

ಜಂಷೆಡ್‌ಪುರದಲ್ಲಿರುವ ಟಾಟಾ ಕಬ್ಬಿಣದ ಕಾರ್ಖಾನೆಯಲ್ಲಿ ರೈಲ್ವೆ ಇಂಜನ್ನುಗಳ ಬಾಯ್ಲರುಗಳನ್ನು ತಯಾರಿಸಲು ಸಿದ್ಧತೆಗಳು ನಡೆದಿವೆ ಕಂಪೆನಿಯು ಒಂದು ವಾಳಿಕ್ಕಾಗಿ ಕೇಂದ್ರ ಸರ್ಕಾರದವರನ್ನು ಎರಡು ಕೋಟಿ ರೂ ಸಾಲ ಕೇಳಲಾಗಿತ್ತೆಂದೂ, ಆದರೆ ಸರ್ಕಾರದವರು ಸಾಲವನ್ನು ಕೊಡುವ ಬದಲು ಕಂಪೆನಿಯಲ್ಲಿ ಪಾಲುಗಾರಿಕೆಯನ್ನು ಪಡೆದು ಅರ್ಧ ಬಂಡವಾಳವನ್ನು ಕೊಡಲು ಆಲೋಚಿಸಿರುವರೆಂದೂ ತಿಳಿದುಬಂದಿದೆ ಅಲ್ಲಿ ರೈಲ್ವೆ ಇಂಜನ್ನುಗಳನ್ನು ತಯಾರಿಸುವ ಕಾರ್ಯವು ಶೀಘ್ರದಿಂದ ಸಾಗುತ್ತಿದೆಯೆಂದೂ ಗೊತ್ತಾಗಿದೆ

ಉಪನ್ಯಾಸ

ಮಹಾರಾಜ ಕಾಲೇಜಿನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ ಎ ಹಾಲಿನಲ್ಲಿ ಶ್ರೀ ಸಿ ಜೆ ವಾರ್ಕೆಯವರು 'ಚಾರಿತ್ರಿಕ ಘಟನೆಗಳು' ಎಂಬ ವಿಷಯವಾಗಿ ಇಂಗ್ಲೀಷಿನಲ್ಲಿ ಭಾಷಣ ಮಾಡುವರು

ವಾರ ಭವಿಷ್ಯ

ತಾ|| ೨೦-೮-೫೦ರಿಂದ ೨೬-೮-೫೦ರ ವರೆಗೆ

ಮೇಷ—ಅಪೇಕ್ಷಾ ಭಂಗದ ವಾರ ವ್ಯಾಪಾರಾದಿಗಳಲ್ಲಿ ಕಟು ಅನುಭವ ಪತ್ನಿಯ ಆರೋಗ್ಯಕ್ಕೆ ಧಕ್ಕೆ ವ ನಷ್ಟಿಗೆ ತೊಂದರೆ ತಾ|| ೨೦, ೨೧, ನಿದ್ರಾ ನಾಶ, ವಿಕ್ಷಿಪ್ತ ಘಾತ

ವೃಷಭ—ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ಬಹ ಸ್ವ ಹೆಚ್ಚುವುದ ಧನ ಲಾಭ ಶತ್ರುಗಳಿಗೆ ಹಾನಿ ತಾ|| ೨೨, ೨೩, ೨೪, ಪಟ್ಟುಗಟ್ಟು ಮಹತ್ವದ ಕಾರ್ಯ ಅರ್ಧಕ್ಕೆ

ಮಿಥುನ—ಆರೋಗ್ಯ ನೆಟ್ಟಗೆ ಹೊಸ ಹೊಸ ಕಲ್ಪನೆಗಳು ವಿದ್ವಾಂಸರ ಪರಿಚಯ, ಕೋರ್ಟು ವ್ಯವಹಾರದಲ್ಲಿ ಜಯ ಸಂತತಿಗೆ ತೊಂದರೆ ಕ್ಲೇಶ ವ್ಯಾಪಾರಾದಿಗಳಲ್ಲಿ ಕೊಂಚ ತೊಂದರೆ ತಾ|| ೨೦ ೨೧ ವಿಶೇಷ ಖರ್ಚು

ಕರ್ಕ—ಆರೋಗ್ಯಕ್ಕೆ ಧಕ್ಕೆ ಶಚನ ಕ್ರಿಯೆ ಇಲ್ಲ ಮಕ್ಕಳಿಗೆ ಹಾನಿಯಿರೆ ವ್ಯಾಪಾರಾದಿಗಳಲ್ಲಿ ಗೊಂದಲ ನೌಕರರು ವಿರುದ್ಧ ಪ್ರಿಯ ವ್ಯಕ್ತಿಗಳ ವಿಯೋಗ ವಾಹನಾಘಾತ ಜಮೀನು ವ್ಯವಹಾರದ ಉಗ್ರತೆ ಚತುಷ್ಪಾದಗಳಿಂದ ಹಾನಿ ತಾ|| ೨೨, ೨೩, ದ್ರವ್ಯ ನಾಶ, ಸಂಕಟ

ಸಿಂಹ—ನಿರುತ್ತೇಜಕ ಗ್ರಹಮಾನವಿಲ್ಲ ಆರೋಗ್ಯ ನೆಟ್ಟಗೆ ಯೋಜಿತ ಘಟನೆಗಳ ಸಿದ್ಧಿ ವ್ಯಾಪಾರಾದಿಗಳಲ್ಲಿ ವೈಭವ ಎದುರಾಳಿಗಳ ವ್ಯಗ್ರತೆ ಆತ್ಮರ ಭೇಟಿ ತಾ|| ೨೦ ೨೧ ಖರ್ಚು

ಕನ್ಯಾ—ಧಾರ್ಮಿಕ ಕಾರ್ಯ ಆರೋಗ್ಯ ಕೊಂಚ ಉತ್ತಮ ಗೆಳೆಯರಿಂದ ಜಾಗರಣೆಗೆ ಅವಕಾಶ ವ್ಯಾಪಾರದ ವೃದ್ಧಿಯಿಂದ ಉತ್ತಮ ತಾ|| ೨೦ ೨೧ ಅಕಸ್ಮಾತ್ ಪ್ರವಾಸ ಸಹಾಯಗನ ನ

ತುಲಾ—ಅಪ್ರಿಯ ಪ್ರಸಂಗಗಳಿಂದ ವ್ಯಗ್ರತೆ ಮಿತ್ರರೇ ಶತ್ರುಗಳಾಗುವರು ವ್ಯಾಪಾರಾದಿಗಳಲ್ಲಿ ಸಂಕಟ ಪ್ರಾಪ್ತಿ ವೆಚ್ಚಾಧಿಕ್ಯ ಕುಟುಂಬದಲ್ಲಿ ಕಲಹ ಪ್ರವಾಸ ಯೋಗ್ಯವಲ್ಲ ಅಪಘಾತ ಭಯ ತಾ|| ೨೧, ೨೨ ಧನ ಚಿಂತಾ ನಿವಾರಣೆ

ವೃಶ್ಚಿಕ—ಹಣಕಾಸಿನ ಅಡಚಣೆ ಹೊಸ ಖರ್ಚು ಮಹತ್ವದ ಕಾರ್ಯ ಅರ್ಧಕ್ಕೆ ಕೈಕೆಳಗಿನವರಿಂದ ನಿಷ್ಕಾರಣ ದ್ವೇಷ

ತಾ|| ೨೫, ೨೬ ವ ನಷ್ಟಿಗೆ ಕೊ ಚ ನೆ ವೃದ್ಧಿ

ಧನ—ಆರೋಗ್ಯ ನೆಟ್ಟಗೆ ಕಾರ್ಯಸಿದ್ಧಿ ಮಾನ ಸನ್ಮಾನ ವ್ಯಾಪಾರ-ಧಂಧೆಗಳಲ್ಲಿ ಲಾಭ ಪ್ರಿಯ ಜನರ ಸಹವಾಸ ಕಾರ್ಯಗಳ ಸಫಲತೆ ತಾ|| ೨೦ ೨೧ ೨೨ ಚಂಚಲತೆಯಿಂದಾಗಿ ಖರ್ಚು

ಮಕರ—ಮಹತ್ವದ ಕಾರ್ಯದಲ್ಲಿ ಜಯ ಅಪೂರ್ವ ಆನಂದ ಎದುರಾಳಿಗಳ ಶಕ್ತಿ ಭಂಗ ಆರೋಗ್ಯ ನೆಟ್ಟಗೆ ಹಣಕಾಸಿನ ದೃಷ್ಟಿ ಚಿನ್ನಾಗಿದೆ ಲಾಭದಾಯಕ ಘಟನೆ ತಾ|| ೨೨, ೨೩ ೨೪ ವಿಶ್ರಾಂತಿ ಇಲ್ಲ ಗಡಿಬಿಡಿ

ಕುಂಭ—ಆರೋಗ್ಯ ನೆಟ್ಟಗೆ, ವ್ಯಾಪಾರಾದಿಗಳಲ್ಲಿ ಹರ್ಷ ಪ್ರವಾಸಯೋಗ, ಧನ ಪ್ರಾಪ್ತಿ, ತಾ|| ೨೨, ೨೩ ಪ್ರಯತ್ನಗಳು ಸಾಂಗವಾಗಿ ಜರುಗುವವು

ಮೀನ—ಪರಿಸ್ಥಿತಿ ಕ್ಲೇಶದಾಯಕ ವೈವಾಹಿಕ ವರ್ತನೆ ಒಳಕಲ್ಲ ಆರೋಗ್ಯದ ಕಡೆ ಲಕ್ಷ್ಯವಿರಲಿ ಅಪಘಾತ ಸಂಭವ ಹಣಕಾಸಿನ ತೊಂದರೆ ತಾ|| ೨೬ ವಿಘ್ನ ನಿವಾರಣೆ ಮಿತ್ರ ಸಹಾಯ

ಪ್ರಭುಗಳ ವರ್ಧಂತಿ

ರಾಜಧಾನಿಯ ಶ್ರೀ ವರಲಕ್ಷ್ಮೀ ವಿದ್ಯಾಮಂದಿರದವರ ಶ್ರಾವಣ ಶುಕ್ಲದ ಪೂರ್ಣಿಮೆಯ ದಿವಸದ ಶಾಲೆಯಲ್ಲಿ ನೆನ್ನೆ ದಿನ ರಾವ್ ಬಹದ್ದೂರ್ ಎಂ ರಾಮಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಶ್ರೀ ಚಾಮರಾಜೇಂದ್ರ ವರ್ಧಂತ್ಯುತ್ಸವವನ್ನು ಆಚರಿಸಿದರು ಸಂಚಾಲಕರಾದ ಶ್ರೀ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿದ ನಂತರ ಆಸ್ಥಾನ ವಿದ್ವಾನ್ ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು ಭಾಷಣ ಮಾಡಿ ಮೈಸೂರು ರಾಜ ಮನೆತನದವರಿಂದ ಸಂಗೀತ ಕಲೆಗೆ ದೊರೆಯುತ್ತಿದ್ದ ಉತ್ತೇಜನವನ್ನು ವಿವರಿಸಿ ಮುಂದಿರದವರ ಪ್ರಭುಗಳ ವರ್ಧಂತ್ಯುತ್ಸವವನ್ನು ನೆರವೇರಿಸುವ ಔಚಿತ್ಯವನ್ನು ತಿಳಿಸಿದರು. ಅನಂತರ ಪತ್ರಿಕೋದ್ಯೋಗಿಗಳಾದ ಶ್ರೀ ಎಚ್ ಆರ್ ಅನಂತಮೂರ್ತಿಯವರು ಭಾಷಣ ಮಾಡಿ ಹಲವು ಸೂಕ್ತ ಸಲಹೆ ಇತ್ತರು

ವಿವಿಧ ರೇಷ್ಮೆ ಸೀರೆಗಳಿಗೆ

9 ಗಜದ ಪೂನಾ ನಾಗಪುರ ಸೀರೆಗಳಿಗೆ

M V ಭೋಜಯ್ಯ ಬ ಎ

ಇಂಡಿಯನ್ ಬ್ಯಾಂಕ್ ಎದುರು ಮೈಸೂರು

Edited printed and published by A R Nagarajan at Sadhvi Press D Subbiah Road Mysore

ಸ್ವಾತಂತ್ರ್ಯ ದಿನಾಚರಣೆ

ಗುಂಡ್ಲುಪೇಟೆ ತಾಲ್ಲೂಕ ಕಿವಹಳ್ಳಿ ಗ್ರಾಮದ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಕಳೆದ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶ್ರೀ ಆರ್ ಪುಟ್ಟಶೇಷದೇವರವರು ರಾಷ್ಟ್ರಧ್ವಜಾರೋಹಣವನ್ನು ಮಾಡಿದರು ಶಾಲಾ ಮುಂಭಾಗದ ಆವರಣದಲ್ಲಿ ಗ್ರಾಮದ ಮುಖಂಡರುಗಳು ಇಟ್ಟಿದ್ದ ಸಸಿಗಳನ್ನು ನೆಟ್ಟರು ಇದೇ ದಿವಸ ಸಾಯಂಕಾಲ ರಾಷ್ಟ್ರಾಧ್ಯಕ್ಷರು ರಾಜೇಂದ್ರ ಪ್ರಸಾದ್ ಮಹಾತ್ಮ ಗಾಂಧಿ, ಪಂಡಿತ್ ಜವಾಹರಲಾಲ್ ನೆಹರೂರವರುಗಳ ಭಾವ ಚಿತ್ರಗಳನ್ನು ಹೂವಿನ ಪಲ್ಲಕ್ಕಿಯಲ್ಲಿಟ್ಟು ಮಂಗಳವಾದ್ಯಗಳೊಡನೆ ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಉತ್ಸವ ಮಾಡಲಾಯಿತು ನಂತರ ಆಗರದ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು ಶಾಲಾ ಮುಖ್ಯೋಪಾಧ್ಯಾಯರಾದ ಎಂ ಬಸವಯ್ಯನವರು ಶ್ರೀ ಆರ್ ನಾರಾಯಣರಾಯರು ಕೈರ್ಮೊ ಶಿವಪ್ಪನವರು ಕೆ ಎಂ ಪ್ರಭುಸ್ವಾಮಿಯವರು ಮಾತನಾಡಿದರು ಭಾಷಣವಾದ ನಂತರ ವಂದನಾರ್ಪಣೆ ರಾಷ್ಟ್ರಗೀತೆಯೊಡನೆ ಸಭೆಯು ಮಂಗಳವಾಯಿತು

ಬಿಲಿಯರ್ಡ್ಸ್ ಪಂದ್ಯ

ನೆನ್ನೆ ದಿನ ಕಾಸ್ಮೋಪಾಲಿಟನ್ ಕ್ಲಬ್ಬಿನಲ್ಲಿ ಅಸೋ ಕ್ಲಬ್ಬಿನ ಶ್ರೀ ಎಚ್ ಡಿ ಗೋಪಾಲರಾಜ ಅರಸಿನವರಿಗೂ ಮತ್ತು ಕಾಸ್ಮೋಪಾಲಿಟನ್ ಕ್ಲಬ್ಬಿನ ಶ್ರೀ ಟಿ ವಿ ರಾಮರಾಜ ಅರಸಿನವರಿಗೂ ಬಿಲಿಯರ್ಡ್ಸ್ ಪಂದ್ಯ ನಡೆದ ಅವರಿಗೆ ಕ್ರಮವಾಗಿ ೨೫೦ ಮತ್ತು ೨೨೩ ಪಾಯಿಂಟುಗಳನ್ನು ಗಳಿಸಿದರು

ರು ಸಂಘದ ಅಧ್ಯಕ್ಷರಾದ ಟಿ ಪಿ ರಾಮಸ್ವಾಮಿಯವರ ಭಾಷಣ ಮಾಡಿ ಮೈಸೂರು ರಾಜ್ಯದಲ್ಲಿ ಸಂಗೀತ ಪ್ರಭುತ್ವವು ಬಹಳ ದಿನದಿಂದಲೂ ಜಾರಿಯಲ್ಲಿದ್ದು, ಇಲ್ಲಿನ ರಾಜ ಮನೆತನದವರು ಮಹಾತ್ಮ ಗಾಂಧಿಯವರ ಮೆಚ್ಚುಗೆಗೆ ಪಾತ್ರರಾಗಿ ಸಂಸ್ಥಾನಕ್ಕೆ ರಾಮರಾಜ್ಯವೆಂಬ ಕೀರ್ತಿಯನ್ನು ತಂದ ಅಂಶವನ್ನು ವಿವರಿಸಿದರು ವಂದನಾರ್ಪಣೆ, ಮೈಸೂರು ಗೀತೆ ರಾಷ್ಟ್ರಗೀತೆ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು

SRI GAYATHRI

TALKIES

From 20 8 50 For 2 Days

More Songs, More Girls & More Fun in

MY DREAM IS YOURS

[In Technicolour

With - Doris Day, Jack Carson,

On Tuesday 22nd

Decision of Christopher Blake

- Next Change -

CHRISTMAS EVE

ರಾಜಕಮಲ್, ಮೈಸೂರು

20 8 50 ರಿಂದ

ಅನೋಖ ಪ್ಯಾರ್

ದಿನವೂ ೩ ಆಟಗಳು

ಖಾಮುಷ್ - ಸಿಪಾಯಿ

(ಹಿಂದಿ)

ಭೂಮಿಕೆ - ನಿಗರ್, ಜೀವನ್

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ಕೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇದೇ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಿರುವುದು

ಇವೆಲ್ಲಾ ಬೇಕಾದರೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಲು ಇಂದೇ ನಿರ್ಧರಿಸಿರಿ

ಕಾಳೆ ಏಕೆ ಬೇಕು

Latest & apt. for

C T C PUBLICATIONS

by

Sri D V Venkatasubbiah M S

CHEMISTRY 1 12 0

Answers to 12 question papers of the Int Exam in India March 1950

METALS 1 2 0

Notes useful for Inter & B S Exams

Please apply to the Best sellers or

C T C PUBLICATIONS

Vanivilas Road Mysore

5, 6, 8, 9 ಗಜದ ಪ್ರಿಂಟೆಡ್ ವಾಯಿಲ್ ಸೀರೆಗಳು

ಒಳ್ಳೆ ಡಿಸೈನುಗಳಲ್ಲಿ ಬಂದಿವೆ ಬಂದು ನೋಡಬೇಕಾಗಿ ವಿನಂತಿ **ಚಾಮುಂಡೇಶ್ವರೀ ಕಂಪೆನಿ,** ಬ್ಯಾಂಕು ರೋಡು, ಮೈಸೂರು

ಪೋ॥ ನಂ 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯} ಸೋಮವಾರ ೨೧-೮-೫೦ [ಸಂಚಿಕೆ ೨೩

ಬೆಂಗಳೂರಿನಲ್ಲಿ ಕಾಂಗ್ರೆಸ್ಸಿಗೆ ವಿಜಯ

ಭಾನುವಾರಗಳಲ್ಲಿ ಮನಿಯಾರ್ಡರ್

ಕಲ್ಕತ್ತಾ, ಬೊಂಬಾಯಿ, ಮದ್ರಾಸು, ಹಳೆ ಮತ್ತು ಹೊಸ ದೆಹಲಿ, ಹೈದರಾಬಾದು, ಕಾನ್ಪುರ ಮತ್ತು ಅಹಮದಾಬಾದುಗಳಲ್ಲಿ ಅಂಚೆ ಮತ್ತು ತಂತಿ ಕಛೇರಿಗಳು ಈಗ ಇರುವಂತೆ ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೩ ಗಂಟೆಗೆಬದಲು ಬೆಳಗ್ಗೆ ೮ ರಿಂದ ೩ರ ವರೆಗೆ ಮನಿಯಾರ್ಡರುಗಳು, ಇನ್ಸೂರ್ ಕಾಗದಗಳು ಮತ್ತು ಸೇವಿಂಗ್ಸ್ ಬ್ಯಾಂಕಿನ ಲೆಕ್ಕಗಳನ್ನು ತೆಗೆದುಕೊಳ್ಳಬೇಕೆಂದು ಬರುವ ಅಕ್ಟೋಬರ್ ೧ನೇ ತಾರೀಖಿನಿಂದ ಏರ್ಪಾಡು ಮಾಡಲಾಗುವುದು. ಭಾನುವಾರಗಳಲ್ಲೂ ಸಹ ಈ ರೀತಿಯ ಕೆಲಸಕಾರ್ಯಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಗುವುದು. ಇದರಿಂದ ಕಛೇರಿಗಳಲ್ಲಿ ಇನ್ನೂ ಎರಡು ಗಂಟೆ ಕೆಲಸ ಹೆಚ್ಚಿಗೆ ಮಾಡಬೇಕಾಗುವುದು. ರಿಜಿಸ್ಟರ್ಡ್ ಥಾಂಗಿ ಸ್ಟಾಂಪುಗಳ ಮತ್ತು ಪೋಸ್ಟಲ್ ಆರ್ಡರುಗಳ ಮಾರಾಟ ತಂತಿ ಮನಿಯಾರ್ಡರುಗಳು ಇವುಗಳಿಗಾಗಿ ೨ ಗಂಟೆ ವರೆಗೂ ಕೆಲಸದ ಕಾಲವನ್ನು ಹೆಚ್ಚಿಸಲಾಗುವುದು

ಕಾಂಗ್ರೆಸ್ ಅಧ್ಯಕ್ಷರ ಅವಧಿ ಮೂರು ವರ್ಷ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಪದವಿ ಅವಧಿಯು ಇದುವರೆಗೆ ಒಂದು ವರ್ಷ ಇದ್ದುದನ್ನು ಇನ್ನು ಮುಂದೆ ಮೂರು ವರ್ಷಗಳಿಗೆ ಹೆಚ್ಚಿಸಲಾಗುವುದೆಂದು ಗೊತ್ತಾಗಿದೆ

ಯತಿರಾಜ ಸಾರ್ವಭೌಮ ಮತ್ತು ಗುರು ಆರಾಧನೋತ್ಸವ

ರಾಜಧಾನಿಯ ರಾಮಾನುಜ ರಸ್ತೆಯ ೬೫ನೇ ನಂಬರು ಮನೆಯಲ್ಲಿ ಇರುವ ಭಾನುವಾರ ಪ್ರಾಸ್ಥಿಮಾತ್ರೆಯುಕ್ತ ಯತಿರಾಜ ಸಾರ್ವಭೌಮ ಮತ್ತು ಮಾರನೆ ಮೂರು ದಿನಗಳಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನೆ, ಭಜನೆ ಮುಂತಾದುವುಗಳು ನಡೆಯುವುವು. ಭಕ್ತಾದಿಗಳು ದಯಮಾಡಿ ಬರಬೇಕೆಂದು ಕೋರಲಾಗಿದೆ

ಡಾ॥ ಜಯರಾಂರವರಿಗೆ ತಿರುಚನಾಪಳ್ಳಿಯಲ್ಲಿ ಹುದ್ದೆ

ನಿವೃತ್ತ ಸೀನಿಯರ್ ಸರ್ಜನ್ನರಾದ ಡಾ॥ ಬಿ ಜಯರಾಂರವರು ತಿರುಚನಾಪಳ್ಳಿ ಬಳಿಯಿರುವ ಕ್ಷಯ ರೋಗ ನಿವಾರಣಾ ಆಸ್ಪತ್ರೆಯ ಮುಖ್ಯಾಧಿಕಾರಿಯ ಸ್ಥಾನವನ್ನು ೮೦೦ ರೂ ಸಂಬಳದ ಮೇಲೆ ಅಂಗೀಕರಿಸಿರುವರೆಂದು ತಿಳಿದುಬಂದಿದೆ.

ಸಿಟಿ ಕೋ-ಅಪರೇಟಿವ್ ಬ್ಯಾಂಕ್ ಡೈರೆಕ್ಟರ ಚುನಾವಣೆ

ರಾಜಧಾನಿಯ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ ಪ್ರತಿಶತ ಡೈರೆಕ್ಟರ ಚುನಾವಣೆಯು ನೆನ್ನೆ ನಡೆದು ಕೆಳಗೆ ಕಂಡವರು ಆರಿಸಲ್ಪಟ್ಟಿರುತ್ತಾರೆ — ಶ್ರೀಗಳಾದ ಕೆ ನಂದೀಬಸಪ್ಪ, ಡಿ ಬಿ ಕೃಷ್ಣಪ್ಪ, ಜಿ ಜನಾರ್ಧನ ನಾಯ್ಡು, ಸಿ ಪರಸಿಂಹಯ್ಯ, ಟಿ ಗುಂಡಪ್ಪ, ಎ ವಿ ರಂಗರಾವ್, ಡಾ॥ ಬಿ ಎಸ್ ಸೂರ್ಯನಾರಾಯಣರಾವ್, ಜಿ ಕೃಷ್ಣಮೂರ್ತಿ ರಾವ್, ಹಬೀಬ್ ಜಿ ಫಯಿಬಾಲ್, ಪ್ರೊ ದಯ್ಯಾ, ಶ್ರೀ ವಿ ನಂಜನಗೂಡು ಶ್ರೀಕಂಠ ಶಾಸ್ತ್ರಿ, ಕೆ ಟಿ ಚಂದ್ರಶೇಖರ ಗೌಡ, ಗೌಸ್ ಮೊಹಿದೀನ್, ಎ ಕೆ ರಂಗರಾವ್ ಮತ್ತು ಎಂ ವಿ ನಾರಾಯಣ ರಾವ್

ಗಿರಣಿ ಮುಷ್ಕರದಲ್ಲಿ ಪೊಲೀಸ್ ಅಧಿಕಾರಿ ಮರಣ

ಇಂದೂರಿನ ಒಂದು ಗಿರಣಿಯು ಸಲವು ಮಹಿಳಾ ಕೆಲಸಗಾರರನ್ನು ತೆಗೆಯುವುದಾಗಿ ಆಡಳಿತ ವರ್ಗದವರು ತಿಳಿಸಿದುದನ್ನು ಪ್ರತಿಭಟಿಸಲು ೨೫ ಮಂದಿ ಮಹಿಳಾ ಕಾರ್ಮಿಕರೂ, ಇತರ ೩,೦೦೦ ಕೆಲಸಗಾರರೂ ನೆನ್ನೆ ಮುಷ್ಕರ ನಡೆಸಿದರು. ಅವರನ್ನು ಚದುರಿಸಲು ಪೊಲೀಸರು ಪ್ರಯತ್ನಿಸಿದಾಗ ಗುಂಪಿನವರು ದೊಣ್ಣೆ, ಸೋಡ ನೀರಿನ ಬಾಟಲುಗಳನ್ನು ಪ್ರಯೋಗಿಸಿ ಪೊಲೀಸರ ಮೇಲೆ ಬಿದ್ದರೆಂದೂ ಗಲಾಟೆಯಲ್ಲಿ ೩ ಮಂದಿ ಪೊಲೀಸರಿಗೂ ೬ ಮಂದಿ ಕೆಲಸಗಾರರಿಗೂ ಗಾಯವಾಯಿತೆಂದೂ ವರದಿಯಾಗಿದೆ. ಏಟಿಗೆ ತುತ್ತಾದ ಅಲ್ಲಿನ ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಶ್ರೀ ಜೋಷಿಯವರು ಮೃತಪಟ್ಟರು. ಸಬ್ ಇನ್ಸ್‌ಪೆಕ್ಟರೊಬ್ಬರ ತಲೆಗೆ ತೀವ್ರ ಪೆಟ್ಟು ಬಿದ್ದು ಅವರ ಸ್ಥಿತಿಯು ಚಿಂತಾಜನಕವಾಗಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಗುಂಡು ಹಾರಿಸಿದರು

ಬೊಂಬಾಯಿನ ೫೦ ಗಿರಣಿಗಳು ಮುಚ್ಚಲ್ಪಟ್ಟಿವೆ

ಬೊಂಬಾಯಿನ ಗಿರಣಿ ಕೆಲಸಗಾರರ ಮುಷ್ಕರವು ಮತ್ತಷ್ಟು ಪ್ರಬಲಗೊಂಡು ನೆನ್ನೆ ದಿನ ಒಟ್ಟು ೨,೫೫,೦೦೦ ಮಂದಿ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರೆಂದೂ, ೬೫ ಗಿರಣಿಗಳ ಪೈಕಿ ೫೦ ಗಿರಣಿಗಳು ಮುಚ್ಚಲ್ಪಟ್ಟವೆಯೆಂದೂ ವರದಿಯಾಗಿದೆ. ಬೊಂಬಾಯಿಯ ಮುಷ್ಕರಕಾರರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ದೆಹಲಿಯ ಬಟ್ಟೆ ಗಿರಣಿಗಳ ಕಾರ್ಮಿಕರು ಒಂದುದಿನದ ಸಾಂಕೇತಿಕ ಮುಷ್ಕರವನ್ನು ಆಚರಿಸಲು ನಿರ್ಧರಿಸಿರುವರು

ಹಾಪ್ ಅಸಿಸ್ಟೆಂಟ್ ಅಧಿಕಾರಿಗಳಿಗೆ ಹೋಟೇಲು ಕೆಲಸಗಾರರ ಪ್ರಾರ್ಥನೆ

ರಾಜಧಾನಿಯ ಕೆಲವು ಹೋಟೇಲು ಮಾಲೀಕರುಗಳು ಕಾರ್ಮಿಕರಿಗೆ ನ್ಯಾಯವಿರುದ್ಧವಾದ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದು, ಪೋಲೀಸು ಸ್ಟೇಷನ್ನಿಗೆ ಕೆಲಸಗಾರರ ಮೇಲೆ ದೂರನ್ನು ಕೊಟ್ಟು, ಕೆಲಸಗಾರರನ್ನು ವಜಾ ಮಾಡುವುದಾಗಿ ಬೆದರಿಸುತ್ತಿರುವರೆಂದೂ, ಹಾಪ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರು ಈ ಬಗ್ಗೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ನಡೆಸಬೇಕೆಂದೂ ಹೋಟೇಲು ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಉಪ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಜಯ

ಒಬ್ಬರು ಸ್ವತಂತ್ರರ ಠೇವಣಿ ಮುಟ್ಟುಗೋಲು

ಸ್ವಂ ಸು ಪೋ॥ ಬೆಂಗಳೂರು ೨೧

ಮೈಸೂರು ಶಾಸನ ಸಭೆಗೆ ಈ ನಗರದಿಂದ ನೆನ್ನೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪರವಾಗಿ ನಿಂತಿದ್ದ ಶ್ರೀ ವಿ ಎಸ್ ನಾರಾಯಣರಾಯರು ಜಯಗಳಿಸಿದರು. ಅಪರಿಮಿತ ಸಮಾಜವಾದಿ ಪಕ್ಷದ ಪರವಾಗಿ ಡಾ॥ ಶ್ರೀಕಂಠೇಶ್ವರ್‌ರವರೂ ಮತ್ತು ಸ್ವತಂತ್ರವಾಗಿ ಶ್ರೀಗಳಾದ ಶೀಲಗಿರಿ ಸಂಜೀವಯ್ಯ ಮತ್ತು ಜಿ ವಿ ರಾಮಾಚಾರ್ಯರೂ ಸ್ಪರ್ಧಿಸಿದ್ದರು. ೧೧೬ ಸಾವಿರ ಮಂದಿ ಮತದಾರರ ಪೈಕಿ ೫೫೫೧೭ ಮಂದಿ ಮಾತ್ರ ಓಟು ಕೊಟ್ಟರು. ಈ ಪತ ಓಟುಗಳ ಎಣಿಕೆ ನಡೆದುವು. ಫಲಿತಾಂಶ ಕೆಳಗೆ ಕಂಡಂತೆ ಇದೆ - ಶ್ರೀ ವಿ ಎಸ್ ನಾರಾಯಣರಾವ್ ೨೫೧೯, ಡಾ॥ ಶ್ರೀಕಂಠೇಶ್ವರ್ ೧೬೭೭, ಶ್ರೀ ಶೀಲಗಿರಿ ಸಂಜೀವಯ್ಯ ೬೭೨, ಶ್ರೀ ಜಿ ವಿ ರಾಮಾಚಾರ್ ೮೮೮, ಕೆಟ್ಟುಹೋದವು ೨೬೭. ಶ್ರೀ ಜಿ ವಿ ರಾಮಾಚಾರ್ಯರು ತಮ್ಮ ಠೇವಣಿಯನ್ನು ಕಳೆದುಕೊಂಡಿರುವರು. ಜಯಶೀಲರಾದ ಶ್ರೀ ವಿ ಎಸ್ ನಾರಾಯಣರಾಯರನ್ನು ಎಣಿಕೆ ಸ್ಥಳದಲ್ಲಿದ್ದವರು ಅಭಿನಂದಿಸಿದರು

ಟೀನಾವಿಗೆ ಪಂಡಿತ ನೆಹರೂ ಭೇಟಿ

ಚೀಣಾದ ನಾಯಕ ಚಿಯಾಂಗ್ ಕೈ ಶೇಕರ ಸಹೋದರ ಮ್ಯಾಡಂ ಕಾಯಾಂಗ್ ಸೇನರವರು ಭಾರತದ ಪ್ರಧಾನಿ ಪಂಡಿತ ನೆಹರೂರವರನ್ನು ಟೀನಾಕ್ಕೆ ಭೇಟಿ ಕೊಡಬೇಕೆಂದು ಪ್ರಾರ್ಥಿಸಿರುವರೆಂದೂ, ಪಂಡಿತ ನೆಹರೂರವರು ಸಧ್ಯದಲ್ಲೇ ಅಲ್ಲಿಗೆ ಭೇಟಿ ಕೊಡಬಹುದೆಂದೂ ಹೇಳಲಾಗಿದೆ

ದಿಂಡಿಗಲ್ ಜನರಿಗೆ ಕರಿ ಕತ್ತಾಳೆ ಬೇರು ಆಹಾರ

ದಿಂಡಿಗಲ್ ತಾಲ್ಲೂಕಿನ ಹಳ್ಳಿಗಳಲ್ಲಿ ಜನರಿಗೆ ಗಂಜಿ ವಾರದಿಂದಲೂ ಕೂಳು ದೊರೆಯದೇ ಬಡವರು ಕರಿ ಕತ್ತಾಳೆಯ ಬೇರನ್ನು ಆಹಾರವಾಗಿ ಉಪಯೋಗಿಸುತ್ತಿರುವರೆಂದು ಹೇಳಲಾಗಿದೆ.

ಔಷಧಿಗೆ ಬದಲು ಟೆಲ್ಕಂ ಸೇವನೆ

ಮೈಸೂರು ೨೧

ಚಾಮರಾಜಪುರದಲ್ಲಿರುವ ಪ್ರಭಾತ ಕಾಲೊನಿ ೧೬ ಪಕೋಡ ಬಿ ಎಸ್ ಸಿ ತರಗತಿಯ ವಿದ್ಯಾರ್ಥಿನಿಯು ಕಳೆದ ಮೂರು ದಿನಗಳಿಂದ ಅಸ್ವಸ್ಥವಾಗಿದ್ದು ಈ ದಿನ ಬೆಳಗ್ಗೆ ಔಷಧಿಯನ್ನು ಕುಡಿಯಲು ಹೋಗಿ ಅಲಮಾರ್ ಬೀರುವಿನಲ್ಲಿದ್ದ ಟೆಲ್ಕಂನನ್ನು ಸೇವಿಸಿದರೆಂದು ವರದಿಯಾಗಿದೆ. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ಪತ್ರಿಕೋದ್ಯೋಗಿಗಳಿಗೆ ಭೋಜನ ಕೂಟ

ರಾಜಧಾನಿಯ ಪತ್ರಿಕೋದ್ಯೋಗಿಗಳಿಗೆ ನೆನ್ನೆ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣಗೌಡ ರಾಮಸ್ವಾಮಿಯವರು ಕೃಷ್ಣರಾಜಸಾಗರದಲ್ಲಿ ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು. ಬೆಳಗಿನಿಂದ ರಾತ್ರಿಯವರೆಗೂ ಪತ್ರಿಕೋದ್ಯೋಗಿಗಳು ಅಲ್ಲಿನ ರಮ್ಯ ಪ್ರದೇಶದಲ್ಲಿ ವಿವಿಧ ಸಂತೋಷ ಕಾರ್ಯಗಳಲ್ಲಿ ತೊಡಗಿ ರಾತ್ರಿ ವಾಪಸು ಬಂದರು

ಭಾರತಕ್ಕೆಲ್ಲಾ ಒಂದೇ ರೀತಿಯ ಆಹಾರದ ವ್ಯವಸ್ಥೆ

ಭಾರತದ ಆದ್ಯಂತವೂ ಆಹಾರದ ವಿಷಯದಲ್ಲಿ ಒಮ್ಮುಖವಾದ ಧೋರಣೆಯನ್ನು ಅನುಸರಿಸುವ ಸಲುವಾಗಿ ಕೆಳಗೆ ಕಂಡ ಏಳು ಅಂಶಗಳನ್ನು ಜಾರಿಗೆ ತರತಕ್ಕದ್ದೆಂದು ದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಮತ್ತು ಆಹಾರ ಸಚಿವರುಗಳ ಸಮ್ಮೇಳನದಲ್ಲಿ ತೀರ್ಮಾನವಾಯಿತು. ಯುದ್ಧ ಕಾಲದಲ್ಲಿ ಅನುಸರಿಸಲಾದ ಆಹಾರೋತ್ಪತ್ತಿ ಮತ್ತು ಸಂಗ್ರಹಣೆಯ ಕ್ರಮವನ್ನೇ ಈಗಲೂ ಜಾರಿಗೆ ತರುವುದು. ಆಹಾರ ಸ್ವಯಂಪರಿಪೂರ್ಣತೆ ಬಗ್ಗೆ ತ್ವರಿತ ಕಾರ್ಯಕ್ರಮ, ಭಾರತದಾದ್ಯಂತ ಹತೋಟಿಗೊಳಗಾದ ಆಹಾರದ ಸಂಗ್ರಹಣೆಯನ್ನು ತೀವ್ರಗೊಳಿಸುವುದು, ಆಹಾರದ ಶಾಸನವನ್ನು ಕಟ್ಟುನಿಟ್ಟಾಗಿ ಪ್ರಯೋಗಿಸಿ, ದಾಸ್ತಾನುಗಾರರ ಮೇಲೆ ಉಗ್ರ ಕ್ರಮ ಕೈಗೊಳ್ಳುವುದು. ಏಕ ರೀತಿಯ ಬೆಲೆಗಾಗಿ ಪ್ರಯತ್ನಿಸುವುದು ಮತ್ತು ಪ್ರಾದೇಶಿಕ ಕೊರತೆಯ ಮೇಲೆ ಕಣ್ಣನ್ನು ಒದಗಿಸುವುದು. ಇವುಗಳಲ್ಲದೇ ಹೆಚ್ಚುವರಿ, ಕೊರತೆ ಪ್ರದೇಶಗಳಲ್ಲಿ ಬೆಳೆದ ಧಾನ್ಯವನ್ನು ಪರಿಶೀಲನಾಗಿ ಹಂಚುವುದು

ಮದುವೆಯ ಅರ್ಹತೆಗೆ ೨೦ ಮೈಲಿ ಈಜಬೇಕು

ಪ್ಯಾರಿಸ್ಸಿನ ಜರ್ಮೇನ್ ರೋಜ ಎಂಬುವಳನ್ನು ವರಿಸಲು ಅಪೇಕ್ಷಿಸಿದ್ದ ನ್ಯೂಯಾರ್ಕಿನ ಡೇವಿಡ್ ಫ್ರಾಂಕ್ಸ್ ಎಂಬುವನು ಆಕೆಯನ್ನು ಕೇಳಲು ಅವನ ಇಂಗ್ಲಿಷ್ ಕಡಲ್ಗಾಲುವೆಯನ್ನು ಈಜದ ಹೊರತು ತಾನು ಅವನನ್ನು ವರಿಸುವುದಿಲ್ಲವೆಂದು ತಿಳಿಸಿದುದಾಗಿ ಗೊತ್ತಾಗಿದೆ. ಡೇವಿಡ್ ಫ್ರಾಂಕ್ಸನು ಅದಕ್ಕಾಗಿ ಸತತವಾದ ಈಜುವ ಪ್ರಯತ್ನ ಮಾಡುತ್ತಿರುವನೆಂದೂ, ಆ ಸ್ತ್ರೀಯೆಗೆ ಅವನು ನ್ಯೂಯಾರ್ಕಿನಿಂದ ಇಂಗ್ಲೆಂಡಿಗೆ ಪ್ರಯಾಣ ಕೈಗೊಂಡಿದ್ದಾಗ ಹಡಗಿನ ಕೊಳದಲ್ಲೂ ಈಜುತ್ತಾ 'ನಾನು ೨೦ ಮೈಲಿ ಈಜಲು ಕಲಿಯಬೇಕು' ಎಂದು ಹೇಳುತ್ತಿದ್ದನೆಂದೂ ವರದಿಯಾಗಿದೆ

ಕೊರಿಯಾ ಯುದ್ಧದ ಬಗ್ಗೆ ಟೋಕಿಯೋವಿನಲ್ಲಿ ಗಾಬರಿ

ಕೊರಿಯಾದ ಯುದ್ಧ ಪರಿಸ್ಥಿತಿಯಿಂದ ಟೋಕಿಯೋ ನಗರದಲ್ಲಿ ಜನರು ಗಾಬರಿಗೊಂಡು ತಪ್ಪಿನ ತಿವ್ರ ಮನೆಗಳನ್ನು ಬಾಡಿಗೆಗೆ ಕೊಟ್ಟು ತಾವು ಪಟ್ಟಣದ ಹಳ್ಳಿಗಳ ಪ್ರದೇಶದಲ್ಲಿ ನೆಲೆಸಲು ಹವಣಿಸುತ್ತಿರುವರೆಂದೂ, ಆದರೆ ಆ ಮನೆಗಳನ್ನು ಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲವೆಂದೂ ಹೇಳಲಾಗಿದೆ

ದಕ್ಷಿಣ ಭಾರತದಲ್ಲಿ ಆಹಾರ ಉತ್ಪತ್ತಿ ಮಂಡಲಿ

ಮೈಸೂರು, ಹೈದರಾಬಾದು, ಮದ್ರಾಸ್ ಮತ್ತು ತಿರುವಾಂಕೂರು ಕೊಚ್ಚಿಗಳಲ್ಲಿರುವ ಆಹಾರ ಕೊರತೆಯನ್ನು ನಿವಾರಿಸಲು ಕೇಂದ್ರ ಆಹಾರ ಮಂತ್ರಿ ಮುನ್ಷಿಯವರ ಅಧ್ಯಕ್ಷತೆಯಲ್ಲಿ ಒಂದು ಮಂಡಳಿಯನ್ನು ರಚಿಸಿ, ಹೆಚ್ಚು ಆಹಾರ ಬೆಳೆಯುವ ಈ ನಾಡುಗಳ ಆಹಾರ ಪರಿಪೂರ್ಣತೆಯ ಕಾರ್ಯವನ್ನು ಕೈಗೊಳ್ಳಲಾಗುವುದು

ಮಕ್ಕಳ ಹಾಡುಗಳು

ರಾಜಧಾನಿಯ ಶಂಕರಮಠ ಅಗ್ರಹಾರದ ೪೭೩ನೇ ನಂಬರಿನ ಮನೆಯಲ್ಲಿರುವ ಸಂಗೀತದ ಅಧ್ಯಾಪಕರಾದ ಶ್ರೀ ಎಸ್ ಆರ್ ಶ್ರೀನಿವಾಸ ಭಟ್ಟಾಚಾರ್ಯರವರು ರಚಿಸಿರುವ ಮಕ್ಕಳ ಹಾಡುಗಳ ದ್ವಿತೀಯ ಪರಿಷ್ಕೃತ ಮುದ್ರಣದ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ ಇದರಲ್ಲಿ ಶ್ರೀಮನ್ಮಹಾರಾಜರವರ ಶ್ರೀಮುಖ ಪ್ರಾರ್ಥನೆ, ರಾಷ್ಟ್ರಗೀತೆಗಳು, ದೇವರ ಸ್ತುತಿಗಳು ಮೊದಲಾದ ಹಾಡುಗಳನ್ನು ಸ್ವರ, ತಾಳ ಮತ್ತು ರಾಗ ಸಹಿತ ಪ್ರಕಟಿಸಲಾಗಿದೆ ಪುಸ್ತಕದ ಪ್ರಯೋಜನವನ್ನು ಸರ್ವರೂ ಹೊಂದಲೆಂದು ಆಶಿಸುತ್ತೇವೆ ಬೆಲೆ ೦-೩-೦ ಮೇಲ್ಕಂಡ ವಿಳಾಸದಲ್ಲಿ ದೊರೆಯುವುದು

ಆನಂದ ಕೃತಿ ಪುಷ್ಪ ಮಾಲೆಯ ಪ್ರಕಟಣೆ

ರಾಜಧಾನಿಯ ಸಂಗೀತ ವಿದ್ವಾಂಸರಾದ ಎಸ್ ಆನಂದರಾಯರ ಅನಾರೋಗ್ಯದ ನಿಮಿತ್ತ ಅವರು ಪ್ರಕಟಿಸುತ್ತಿರುವ ಆನಂದ ಕೃತಿ ಪುಷ್ಪಮಾಲೆಯ ಪ್ರತಿಯ ಸಂಚಿಕೆಯು ಹೊರಬೀಳಲು ಸ್ವಲ್ಪ ತಡವಾಗುವುದೆಂದೂ, ಈ ಅಭಿವಾಯಕ್ಕೆ ಕ್ಷಮಿಸಬೇಕೆಂದೂ ಗ್ರಂಥಕರ್ತರು ಕೋರಿರುತ್ತಾರೆ

ಇಂಡೋ ಚೀಣಕ್ಕೆ ಕಮ್ಯೂನಿಸ್ಟರ ಭೀತಿ

೨೦೦ ರಿಂದ ೩೦೦ ಸಾವಿರ ಚೀಣಾ ಕಮ್ಯೂನಿಸ್ಟ್ ಸೈನ್ಯಗಳು ಯುನ್ನಾನ್ ಪ್ರಾಂತದ ಕಡೆಗೆ ಹೋಗುತ್ತಿರುವುದಾಗಿ ವರದಿಯಾಗಿದೆ ಈ ಪ್ರಾಂತವು ಇಂಡೋ ಚೀಣಾ ಗಡಿಯಲ್ಲಿದೆ

ನಾಟಕಗಳಿಗೆ ಮನರಂಜನೆ ತೆರಿಗೆ ವಜಾ

ನಾಟ್ಯ ಕಲೆಗೆ ಉತ್ತೇಜನ ಕೊಡುವ ಉದ್ದೇಶದಿಂದ ಮದರಾಸ್ ಸರ್ಕಾರದವರು ಅಲ್ಲಿನ ನಾಟಕ ಪ್ರದರ್ಶನಗಳ ಮೇಲೆ ಮನರಂಜನೆ ತೆರಿಗೆಯನ್ನು ರದ್ದುಗೊಳಿಸಲು ಆಲೋಚಿಸುತ್ತಿರುವರೆಂದು ವರದಿಯಾಗಿದೆ

ಮಕ್ಕಳ ಪೋಷಣೆಗಾಗಿ ಕೃತಕ ಪ್ರೋಟೀನ್

ಬಡ ಮಕ್ಕಳುಗಳಿಗೆ ಪುಷ್ಟಿಕರವಾದ ಆಹಾರವನ್ನು ಕೊಡುವ ಪವಿತ್ರ ಉದ್ದೇಶದಿಂದ ಜಪಾನಿನಲ್ಲಿ ತಯಾರಾಗುತ್ತಿರುವ ಕೃತಕ ಪ್ರೋಟೀನ್ ವಸ್ತುಗಳಿಂದ ಸಾಧ್ಯವಾಗಬಹುದೆಂದು ಹೇಳಲಾಗಿದೆ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ವಿದ್ಯಾವರ್ಧಕ ಹೈಸ್ಕೂಲ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಸಲಾಯಿತು ಮೈಸೂರು ಪುರಸಭೆಯ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು ಧ್ವಜಾರೋಹಣವಾದ ನಂತರ ವಿದ್ಯಾರ್ಥಿಗಳಿಂದಲೂ, ಶ್ರೀ ಎಂ ಎನ್ ಜೋಯಿಸರಿಂದಲೂ ಭಾಷಣಗಳಾದವು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಚುನಾವಣಾ ಪ್ರಚಾರದಲ್ಲಿ ಘರ್ಷಣೆ

ಮೊನ್ನೆ ರಾತ್ರಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರದ ವ್ಯಾನು ಬಳೇ ಪೇಟೆಯಲ್ಲಿ ಬಂದಾಗ ಹಲವು ಮಂದಿ ಸೋಷಿಯಲಿಸ್ಟ್ ಪಕ್ಷದವರಿಗೂ ಮತ್ತು ವ್ಯಾನಿನಲ್ಲಿದ್ದವರಿಗೂ ಘರ್ಷಣೆಯಾಗಿ ಎರಡು ಪಕ್ಷಕ್ಕೂ ಸೇರಿದ ಇಬ್ಬರಿಗೆ ಗಾಯಗಳಾದುವೆಂದು ವರದಿಯಾಗಿದೆ.

ಮುಸ್ಲಿಂ ಯುವತಿಯನ್ನು ಅಪಹರಿಸಿ ಮಾರಿದ ಪ್ರಸಂಗ

ಕರಾಚಿಯಲ್ಲಿ ಮುಸ್ಲಿಂ ಯುವತಿಯೊಬ್ಬಳನ್ನು ಇಬ್ಬರು ಮುಸ್ಲಿಂ ತರುಣರು ಅಪಹರಿಸಿಕೊಂಡು ಹೋಗಿ ಪೈರ್‌ಪುರದ ಜಮಾನ್ದಾರನೊಬ್ಬನಿಗೆ ೬೦೦ ರೂ ಗಳಿಗೆ ಮಾರಿದ್ದಾರೆಂದೂ, ಆಕೆಯು ಹೇಗೋ ತಪ್ಪಿಸಿಕೊಂಡು ಬಂದು ಪೋಲೀಸರಿಗೆ ದೂರು ಕೊಟ್ಟಳೆಂದೂ, ಇಬ್ಬರು ತರುಣರನ್ನೂ ಬಂಧಿಸಲಾಗಿದೆಯೆಂದೂ ವರದಿಯಾಗಿದೆ

ಜೂಜಿನ ತೆರಿಗೆ ಕಾನೂನಿಗೆ ಮತ್ತೊಂದು ತಿದ್ದುಪಡಿ

ಕಳೆದ ಮೇ ತಿಂಗಳಿನಲ್ಲಿ ಜೂಜಿನ ತೆರಿಗೆ ಬಗ್ಗೆ ತಿದ್ದುಪಡಿ ಮಾಡಿ ಹೊರಡಿಸಲಾದ ವಿಶೇಷಾಜ್ಞೆಯು ಬದಲಾಗಿ ಈಗ ಹೊಸ ತಿದ್ದುಪಡಿ ಶಾಸನವನ್ನು ಮಾಡಲಾಗಿದೆ ಅದರ ಪ್ರಕಾರ ಬೊಂಬಾಯಿನಲ್ಲಿ ಬುಕ್ ಮೇಕರುಗಳಿಗೆ ಕೊಟ್ಟಿರುವ ವಸ್ತು ಕೊಡಲಾಗುವ ಎಲ್ಲಾ ದುಡ್ಡುಗಳಿಗೂ ಈಗ ವಿಧಿಸಲಾಗುವ ತೆರಿಗೆಯಂತೆ ಇಲ್ಲೂ ತೆರಿಗೆಯನ್ನು ವಿಧಿಸಲಾಗುವುದು ಸರಕಾರದ ಆದಾಯವನ್ನು ಹೆಚ್ಚಿಸಲು ಮತ್ತು ಸಾರ್ವಜನಿಕರು ಜೂಜಾಡುವ ಪದ್ಧತಿಯನ್ನು ಕಡಿಮೆಮಾಡಲು ಈ ಹೊಸ ಕಾನೂನು ಆಗಿರುವುದು

ಕಾಡು ಕುರುಬರ ವಿದ್ಯಾರ್ಥಿ ನಿಲಯ

ಕಳೆದ ಸೋಮವಾರ ಹೆಗ್ಗಡದೇವನ ಕೋಟೆ ತಾಲ್ಲೂಕು ನಿಸನ ಗ್ರಾಮದಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ಕಾಡು ಕುರುಬರ ವಿದ್ಯಾರ್ಥಿ ನಿಲಯ ಪ್ರಾರಂಭೋತ್ಸವವನ್ನು ಜಿಲ್ಲಾಧಿಕಾರಿಗಳಾದ ಜ|| ಕೆ ಎಂ. ಅಹಮದ್‌ರವರು ನೆರವೇರಿಸಿದರು ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ರಂಗಣ್ಣನವರು ಅಧ್ಯಕ್ಷತೆಯನ್ನು ವಹಿಸಿದ್ದರು

ಅಸ್ಸಾಮಿನಲ್ಲಿ ಇನ್ನೂ ಭೂಕಂಪ ನಿಂತಿಲ್ಲ

ಉತ್ತರ ಅಸ್ಸಾಮಿನಲ್ಲಿ ಭೂಕಂಪದ ಘಟನೆಗಳೂ ಇನ್ನೂ ಸಂಭವಿಸುತ್ತಲೇ ಇರುವುವೆಂದು ವರದಿಯಾಗಿದೆ ಅಲ್ಲಿ ಕಾಲೇಜ್ ಪ್ರಾಂತದಲ್ಲಿ ಮೊನ್ನೆ ದಿನ ಮತ್ತೆ ಬಹಳ ಸಾಮಾನ್ಯ ಭೂಕಂಪವಾದುದು ಗೊತ್ತಾಗಿದೆ

ಹಿಂದಿ ತರಗತಿ ವಿದ್ಯಾರ್ಥಿಗಳ ಕೂಟ

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಹಿಂದಿ ಪ್ರಾಥಮಿಕ ಮಾಧ್ಯಮ ಮತ್ತು ರಾಷ್ಟ್ರಭಾಷಾ ತರಗತಿಗಳ ಕೂಟವು ನೆನ್ನೆ ಸಂಜೆ ಆಲ್ ಇಂಡಿಯಾ ರೇಡಿಯೋ ವಿನ ಅಸಿ ಡೈರೆಕ್ಟರ್ ಡಾ|| ಎ ಎಂ ನಟೇಶನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಮತಿ ಆರ್ ವಿ ಇಂದಿರಾರವರಿಂದ ಪ್ರಾರ್ಥನೆಯಾದ ನಂತರ ಶ್ರೀ ನಗರಂ ರಂಗಯ್ಯನವರು ಸ್ವಾಗತ ಭಾಷಣ ಮಾಡಿದರು. ಸಂಚಾಲಕರಾದ ಶ್ರೀ ಪದ್ಮನಾಭಾಚಾರ್ಯರವರು ವರದಿಯನ್ನು ಒಪ್ಪಿಸಿದ್ದರು ನಂತರ ಶ್ರೀ ಕೇಶವ ಮೂರ್ತಿಯವರಿಂದ ಪಿಟೀಲು ಮತ್ತು ಶ್ರೀ ಎಸ್ ಗೋಪಾಲಾಚಾರ್ಯರ ಮೃದಂಗ ವಾದನವು ನಡೆಯಿತು ಬಾಲಕ ಬಾಲಕಿಯರಿಂದ ಹಿಂದಿ ನಾಟಕಗಳ ಕಾರ್ಯಕ್ರಮವಾಯಿತು ಆಲ್ ಇಂಡಿಯಾ ರೇಡಿಯೋವಿನ [illegible] ಮದ ಸಹಾಯಕರಾದ ಶ್ರೀ [illegible] ಕಾಮಯ್ಯನವರು [illegible] ಹಿಂದಿಯ ಆವಶ್ಯಕತೆಯ [illegible] ಮಾಡಿದರು [illegible] ವಿನಿಯೋಗವಾದ [illegible] ಹಣ ಮಾಡಿ [illegible] ವರು ವಂದನಾರ್ಪಣೆ [illegible] ಯೊಡನೆ ಸಭಾಕಾರ್ಯಕ್ರಮವು ಮುಕ್ತಾಯವಾಯಿತು.

ರಘುಲಾಲ್ & ಕೋ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಅರ್ಕಾಟ್ ಶ್ರೀನಿವಾಸಾಚಾರ್ಯರ ರ|
ಬೆಂಗಳೂರು

ಶ್ರೀ ರಾಘವ
ಬೆಣ್ಣೆ, ತುಪ್ಪದ ಅಂಗಡಿ
ಗಾಂಧಿ, ಒಲಂಪಿಯಾ ಟಾಕೀಸ್ ಬಳಿ, ಮೈಸೂರು

ಇಲ್ಲಿ ಒಳ್ಳೆಯ ಬೆಣ್ಣೆ ಮತ್ತು ತುಪ್ಪ ಒಟ್ಟಾಗಿಯೂ, ಚಿಲ್ಲರೆಯಾಗಿಯೂ ನ್ಯಾಯವಾದ ಬೆಲೆಗೆ ದೊರೆಯುತ್ತೆ
ಕೆ. ಗೋವಿಂದರಾಜು ಚೆಟ್ಟಿ

ಗ್ಲಾಸ್ ಪ್ಲಾಂಟ್ ಬಿಕರಿಗಿದೆ
ವಿವರಗಳಿಗೆ.-
ಪರಶುರಾಂ ವರ್ಕ್ ಷಾಪ್
ಹಳ್ಳದಕೇರಿ, ಮೈಸೂರು.

WANTED

A Manager, pay Rs 40+D A Rs 15/- Qualifications V Form English, Praveshika in Hindi, Knowledge and experience in Accountancy Security of Rs 200/- to be given Apply before 31-8-50 to the Hindi Prachara Sabha, Co operators' Home, Mysore

(Sd) S SREERANGACHAR,
Hon Secretary,
Hindi Prachar Sabha,
Mysore

ಪ್ರಭುದೇವಾ ಟಾಕೀಸ್
ದಿನವಹಿ 3 ಆಟಗಳು
23-8-50ನೇ ಬುಧವಾರದಿಂದ
ಮಾಯಾ ಲೋಕಂ
(ತೆಲುಗು)
ಪಾತ್ರ:- ಕನ್ನಾಂಬಾ, ರಾಜಮ್ಮ, ಶಾಂತ ಕುಮಾರಿ, ಸಿ. ಎಸ್. ಆರ್., ಡಾ|| ಸುಬ್ಬರಾವ್, ನಾಗೇಶರರಾವ್

Latest & up to date
C T C PUBLICATIONS
by
Sri D V Venkatasubbiah M S
CHEMISTRY 1-12-[illegible]
Answers to TEN question papers of Int Exam Including March 1950
METALS 1 2-[illegible]
A most useful [illegible] to Inter S B [illegible] Exams
Please enquire Your Book seller
C T C PUBLICATIONS
Vanivilas Road M[illegible]

Edited, printed and published by A R Natarajan, at Sadhvi Press D Subbiah Road Mysore

ಕಾಶ್ಮೀರ ಭವಿಷ್ಯದ ಬಗ್ಗೆ ದಿಕ್ಸನ್ ಸಂಧಾನ ವಿಫಲ

ಜಂಗರ ಬಿಡುಗಡೆ

ಭೂಕಂಪದಿಂದ ೮೪ ಜನರ ಮರಣ

ಭೂಕಂಪದಿಂದ ಶಿವಸಾಗರ ಅಣೆಕಟ್ಟು ಒಡೆಯಿತು

ಅಸ್ಸಾಮಿನಲ್ಲಿ ಇತ್ತೀಚೆಗೆ ಆದ ಭೂಕಂಪದ ಪರಿಣಾಮವಾಗಿ ಅಲ್ಲಿನ ಚಹಾ ತೋಟಗಳಿಗೆ ಹೆಚ್ಚಿನ ಅಪಾಯ ತಗುಲಿದೆಯೆಂದೂ ಅನೇಕ ಜನರು ವ್ಯಥಿತರಾಗಿದ್ದಾರೆಂದೂ ವರದಿಯಾಗಿದೆ. ಒಂದು ಶತಿ ೫ ಸಾವಿರ ದನಕರುಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ಶಿವಸಾಗರದ ಹತ್ತಿರ ಇರುವ ಒಂದು ಅಣೆಕಟ್ಟು ಒಡೆದು ಸಹಸ್ರಾರು ಮನೆ ಮಠಗಳು ಕೊಚ್ಚಿಹೋಗಿವೆ. ಅಲ್ಲದೆ ಅಲ್ಲಿನ ರೈಲ್ವೆ ಸ್ಟೇಷನ್ನು ನೀರಿನಲ್ಲಿ ಮುಳುಗಿದೆ. ಬ್ರಹ್ಮಪುತ್ರಾ ನದಿಯ ನೀರು ಹೆಚ್ಚುತ್ತಲೇ ಇದೆ. ಈ ಅನಾಹುತಗಳಿಂದ ಆದ ನಷ್ಟವನ್ನು ಸರಿಪಡಿಸಲು ಒಂದು ತಿಂಗಳ ಕಾಲ ಹಿಡಿಯುವುದೆಂದು ಅಸ್ಸಾಂ ಗೌರ್ನರರು ತಿಳಿಸಿರುತ್ತಾರೆ.

ಬಾಡಿಗೆ ಕೊಡಲು ಸರ್ಕಾರಿ ನೌಕರರ ನಿರಾಕರಣೆ

ಅಹಮದಾಬಾದಿನಲ್ಲಿ ಸರ್ಕಾರಿ ನೌಕರರಿಗಾಗಿ ಸರ್ಕಾರದವರು ಕಟ್ಟಿಸಿರುವ ಮನೆಗಳ ಬಾಡಿಗೆಯನ್ನು ಒಂದಕ್ಕೆ ಎರಡರಷ್ಟು ಹೆಚ್ಚಿಸಿದುದರಿಂದ ಬಾಡಿಗೆದಾರರು ಬಾಡಿಗೆಯನ್ನು ಕೊಡುವುದಿಲ್ಲವೆಂದು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಬಾಡಿಗೆಯನ್ನು ಹೆಚ್ಚಿಸಲು ಕಾರಣವನ್ನೇ ಕೊಟ್ಟಿಲ್ಲವೆಂದೂ ಮನೆಗಳನ್ನು ಕಟ್ಟಲು ತಗುಲಿದ ವೆಚ್ಚದ ಪಟ್ಟಿಯನ್ನು ಬಾಡಿಗೆದಾರರು ಕೇಳಲು ಸರ್ಕಾರದವರು ಅದನ್ನು ಕೊಡಲು ನಿರಾಕರಿಸಿದರೆಂದೂ ಹೇಳಲಾಗಿದೆ.

ಕಳ್ಳತನಕ್ಕಾಗಿ ಕೈ ಕತ್ತರಿಸುವ ಶಿಕ್ಷೆ

ಸೌದಿ ಅರೇಬಿಯಾ ಮತ್ತು ಇತರ ಮುಸ್ಲಿಂ ರಾಜ್ಯಗಳಲ್ಲಿದ್ದ ಕಳ್ಳತನಕ್ಕಾಗಿ ಕೈಯನ್ನು ಕತ್ತರಿಸುವ ಶಾಸನವು ರದ್ದಾಗಿರುವುದರಿಂದ ಆ ದೇಶಗಳಲ್ಲಿ ಸಣ್ಣ ಪುಟ್ಟ ಕಳ್ಳತನಗಳು ಹೆಚ್ಚುತ್ತಿರುವುದಾಗಿ ವರದಿಯಾಗಿದೆ. ಈ ಶಾಸನವು ಜಾರಿಯಲ್ಲಿದ್ದಾಗ ಕಳ್ಳರ ಎಡಗೈಯನ್ನು ಮೊದಲನೇ ತಪ್ಪಿಗಾಗಿ ಕತ್ತರಿಸಲಾಗುತ್ತಿತ್ತು. ಎರಡನೇ ಅಪರಾಧಕ್ಕೆ ಬಲಗೈ ಕೋಲನ್ನೇ ಕತ್ತರಿಸಿ, ಮುಂದೆ ಇಂತಹ ಕೃತ್ಯವನ್ನು ಇತರರು ಮಾಡದಂತೆ ಎಚ್ಚರಿಸಲು ತೋಳನ್ನು ಕಳ್ಳತನ ನಡೆದ ಜಾಗದಲ್ಲಿ ಗೋಡೆಯ ಮೇಲೆ ನೇತುಹಾಕಲಾಗುತ್ತಿತ್ತು.

ರಾಜಕಮಲ್, ಮೈಸೂರು

20-8-50 ರಿಂದ

ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಖಾಮುಷ್ - ಸಿಪಾಹಿ

(ಹಿಂದಿ)

ಭೂಮಿಕೆ:- ನಿಗರ್, ಜೀವನ್.

೨ ಕೋಟಿ ಫ್ರಾಂಕುಗಳ ಆಭರಣಗಳ ಕಳುವು

ಕಳೆದ ಹತ್ತು ದಿನ ಫ್ರಾನ್ಸಿನಲ್ಲಿ ನಡೆದ ಆಭರಣಗಳ ಕಳ್ಳತನದಲ್ಲಿ ಭಾರಿಯಾದ ಕಳ್ಳತನವು ಕ್ಯಾನ್ಸಿನಲ್ಲಿ ಮೊನ್ನೆ ನಡೆದು ಒಬ್ಬ ವ್ಯಾಪಾರಿಯಿಂದ ೨ ಕೋಟಿ ೬೦ ಲಕ್ಷ ಫ್ರಾಂಕುಗಳ ಆಭರಣಗಳನ್ನು ಹೊತ್ತುಕೊಂಡು ಹೋಗಲಾಗಿದೆ. ಇಂತಹ ಆರು ಭಾರಿ ಕಳುವುಗಳು ಅಲ್ಲಿ ಒಂದು ವಾರದೊಳಗೆ ನಡೆದಿವೆ.

ಲಕ್ಷ ಗೋವುಗಳಿಗೆ ಮೇವಿನ ಅಭಾವ

ಉತ್ತರ ಅಸ್ಸಾಂ ಭೂಕಂಪದಿಂದ ಬ್ರಹ್ಮಪುತ್ರಾ ನದಿಯು ಉಬ್ಬಿ ಹಲವು ಕಡೆಗಳಲ್ಲಿ ೧ ಲಕ್ಷ ಗೋವುಗಳಿಗೆ ಮೇವಿಲ್ಲದೆ ಸಾಯುವ ಸ್ಥಿತಿ ಉಂಟಾಗಿದೆಯೆಂದು ಹೇಳಲಾಗಿದೆ.

ಕಾಂಗ್ರೆಸ್ ಅಧಿವೇಶನದಲ್ಲಿ ಕಾರ್ಯಕರ್ತರಿಗೆ ರಿಯಾಯಿತಿ

ನಾಸಿಕ ಕಾಂಗ್ರೆಸ್ ಅಧಿವೇಶನವನ್ನು ನೋಡಲು ಪ್ರತಿ ಪ್ರಾಂತದಿಂದಲೂ ಗಂಡಿ ಜನ ನಂಬಿಕೆಗೆ ಅರ್ಹರಾದ ಕಾಂಗ್ರೆಸ್ ಕಾರ್ಯಕರ್ತರಿಗೆ ೪೦ ರೂ ರಿಯಾಯಿತಿ ದರದ ಮೇಲೆ ಅವಕಾಶವೀಯಲಾಗುವುದು.

ಲೀಗ್ ಅಧ್ಯಕ್ಷ ಚುನಾವಣೆಯಲ್ಲಿ ಮುಷ್ಠಿ ಕಾಳಗ

ಪಶ್ಚಿಮ ಪಂಜಾಬ್ ಮುಸ್ಲಿಂಲೀಗಿನ ಅಧ್ಯಕ್ಷ ಚುನಾವಣೆಯು ನಡೆದ ಸಮಯದಲ್ಲಿ ಮುಷ್ಠಿ ಕಾಳಗ, ಕೂಗಾಟ, ಅಪಶಬ್ದ ಪ್ರಯೋಗ ಮುಂತಾದ ಗಲಭೆಗಳು ನಡೆದುವೆಂದು ವರದಿಯಾಗಿದೆ.

ಗಣೇಶ್ ಮತ್ತು ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

19-8-50ರಿಂದ ಕಿಕ್ಕಿರಿದ ಜನಸಂದಣಿಗೆ

ಪ್ರದರ್ಶಿಸಲಾಗುತ್ತಿದೆ

ಸಿಟಾಡೆಲ್ ಫಿಲಂ ಕಾರ್ಪೊರೇಷನ್ನಿನ ನವರ ತಮಿಳು ಕಲಾಕೃತಿ

* ಹೃದಯ ಗೀತಂ *

ಮುಖ್ಯ ಪಾತ್ರ – ಟಿ ಆರ್ ಮಹಾಲಿಂಗಂ, ಟಿ ಆರ್ ರಾಜಕುಮಾರಿ, ಕೆ ಸಾರಂಗಪಾಣಿ, ಟಿ. ಎಸ್ ಜಯ, ವೀರಪ್ಪ, ಲಲಿತ - ಪದ್ಮಿನಿ

ಉನ್ನತ ಸಂಗೀತ - ಪಿ. ಎ. ಪೆರಿಯ ನಾಯಕಿ

ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

23-8-50ನೇ ಬುಧವಾರದಿಂದ

ಮಾಯಾ ಲೋಕಂ

(ತೆಲುಗು)

ಪಾತ್ರ:- ಕನ್ನಾಂಬಾ, ಶಾಂತ ಕುಮಾರಿ, ರಾಜಮ್ಮ, ಸಿ. ಎಸ್. ಆರ್., ಡಾ|| ಸುಬ್ಬರಾವ್, ನಾಗೇಶ್ವರರಾವ್

ಆಫ್ರಿಕದ ಅರಣ್ಯದಲ್ಲಿ ಭಯಂಕರ ಕಾಡ್ಗಿಚ್ಚು

ಆಫ್ರಿಕದ ನೈರೋಬಿ ಮತ್ತು ಮೊಂಬಾಸಾ ಎಂಬಲ್ಲಿನ ಮಧ್ಯ ಪ್ರದೇಶದಲ್ಲಿ ಭೀಕರ ಕಾಡ್ಗಿಚ್ಚು ಸಂಭವಿಸಿ ಆ ಕಾಡಿನಲ್ಲಿ ಅನೇಕ ಜಾತಿ ಮೃಗಗಳ ಪ್ರದೇಶವು ಹೊಗೆಯಿಂದ ಆವರಿಸಲ್ಪಟ್ಟಿದೆಯೆಂದು ವರದಿಯಾಗಿದೆ. ಕಳೆದ ಗುರುವಾರ ಅಲ್ಲಿ ಭಯಂಕರ ಜ್ವಾಲಾಮುಖಿಯು ಸಂಭವಿಸಿತೆಂದೂ, ಹೊಗೆ ಮತ್ತು ಧೂಳಿಯ ಪ್ರಾಬಲ್ಯದಿಂದ ಆ ಪ್ರದೇಶಕ್ಕೆ ವಿಮಾನದ ಮೂಲಕ ಹೋಗಿ ಪರಿಶೀಲನೆ ನಡೆಸಲು ಅಸಾಧ್ಯವಾಯಿತೆಂದೂ ಹೇಳಲಾಗಿದೆ.

ಪಶ್ಚಿಮ ಜರ್ಮನಿ ವಿರುದ್ಧ ಪ್ರಚಾರದ ಸಮ್ಮೇಳನ

ಪೂರ್ವ ಮತ್ತು ಪಶ್ಚಿಮ ಜರ್ಮನಿಗಳಲ್ಲಿರುವ ಕಮ್ಯೂನಿಸ್ಟರ ೪ ಸಾವಿರ ಪ್ರತಿನಿಧಿಗಳ ರಾಷ್ಟ್ರೀಯ ಸಮ್ಮೇಳನವು ಬರುವ ಶುಕ್ರವಾರ ಬರ್ಲಿನ್ ನಗರದಲ್ಲಿ ನಡೆಯುವುದು. ಪಶ್ಚಿಮ ಜರ್ಮನಿಯನ್ನು ಕಮ್ಯೂನಿಸ್ಟರು ಆಕ್ರಮಿಸುವ ಪೂರ್ವ ಭಾವಿಯಾಗಿ ಈ ಸಮ್ಮೇಳನವು ನಡೆಯುವುದೆಂದು ಹೇಳಲಾಗಿದೆ. ಈ ಸಮ್ಮೇಳನಕ್ಕೆ ಪ್ರತಿನಿಧಿಗಳು ಹೋಗದಂತೆ ಪಶ್ಚಿಮ ಜರ್ಮನಿ ಸರ್ಕಾರವು ಪ್ರತಿಬಂಧಕವನ್ನು ಹಾಕಿದೆ.

ಎಣ್ಣೆ ತಯಾರಿಕೆಗಾರರ ಸಮ್ಮೇಳನ

ಸಂಸ್ಥಾನದ ಎಣ್ಣೆ ತಯಾರಿಕೆಗಾರರು ಮತ್ತು ವ್ಯಾಪಾರಗಾರರ ಸಮ್ಮೇಳನವು ಮೊನ್ನೆ ದಿನ ಬೆಂಗಳೂರಿನಲ್ಲಿ ನಡೆಯಿತು. ಗ್ರಾಮಾಂತರ ಪ್ರದೇಶಗಳ ಎಣ್ಣೆ ತಯಾರಿಕೆಗಾರರಿಗೆ ಉತ್ತೇಜನ ಕೊಡುವ ಸಲುವಾಗಿ ಅವರುಗಳಿಗೆ ಉದಾರ ಧನ ಸಹಾಯ ಕೊಡಬೇಕೆಂದೂ, ಎಣ್ಣೆ ತಯಾರಿಕೆಗಾರರ ಒಂದು ಸಹಕಾರ ಸಂಘವನ್ನು ತೆರೆದು ಅದರ ಮುಖಾಂತರ, ಉತ್ಪನ್ನವಾದ ಎಣ್ಣೆಯ ವ್ಯಾಪಾರಕ್ಕೆ ವ್ಯವಸ್ಥೆ ಮಾಡಬೇಕೆಂದೂ ತೀರ್ಮಾನವಾಯಿತು.

Edited, printed and published by A R. Nagarajan, at Sadhvi Press D Subbiah Road, Mysore

ಮೈಸೂರು ದಸರಾ ವಸ್ತುಪ್ರದರ್ಶನ, 1950

(1950ನೇ ಅಕ್ಟೋಬರ್ 12ರಿಂದ ಅಕ್ಟೋಬರ್ 27ರ ವರೆಗೆ, ಎರಡು ದಿನಗಳೂ ಸೇರಿ)

ಮೈಸೂರು ದಸರಾ ವಸ್ತು ಪ್ರದರ್ಶನವು ಮಾಮೂಲು ಮೇರೆಗೆ ಈ ಸಾರಿ ಅಕ್ಟೋಬರ್ ೧೨ರಿಂದ ಅಕ್ಟೋಬರ್ ೨೭ರ ವರೆಗೆ ಎರಡು ದಿನಗಳೂ ಸೇರಿ ನಡೆಯುವುದು

ಸ್ಟಾಲುಗಳನ್ನು ರಿಸರ್ವ್ ಮಾಡಲು ಕಡೆಯ ದಿನ 1950ನೇ ಸೆಪ್ಟೆಂಬರ್ 15

ಲಲಿತ ಕಲಾ ಮತ್ತು ಕುಶಲ ಕಲಾ ವಿಭಾಗಕ್ಕೆ ಚಿತ್ರಗಳನ್ನು ಕಳುಹಿಸುವ ಕಡೆಯ ದಿನ (ಅವಶ್ಯಕವಾದ ಫೀಜಿನ ಜೊತೆಗೆ) 1950ನೇ ಸೆಪ್ಟೆಂಬರ್ 25

ಪ್ರಾಸ್ಪೆಕ್ಟಸ್ ಮತ್ತು ಇತರ ವಿಷಯಗಳಿಗೆ, ಪ್ರದರ್ಶಕ ಮಾಡಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಲು ಕೋರಲಾಗಿದೆ:-

ಕಾರ್ಯದರ್ಶಿ,

ಮೈಸೂರು ದಸರಾ ವಸ್ತು ಪ್ರದರ್ಶನದ ಸಮಿತಿ, ಮೈಸೂರು

- ಮಲೇರಿಯಾ ಹಾರಿ ಸೊಳ್ಳೆ ಪರದೆಗಳು -

ಮಕ್ಕಳ ತೊಟ್ಟಿಲಿಗೆ, ಮಂಚಕ್ಕೆ, ಸಿಂಗಲ್ ಮತ್ತು ಡಬ್ಬಲ್ ಹಾಸಿಗೆಗಳಿಗೆ ಜಾಮಿನಾರ್ ಕಂಪೆನಿ, ಬ್ಯಾಂಕ್ ರೋಡು, ಮೈಸೂರು

ಫೋನ್ ನಂ. 792 ||ಶಂಭೋ ಶಂಕರಃ|| ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೯] ಬುಧವಾರ ೨೩-೮-೫೦ [ಸಂಚಿಕೆ ೨೮

ಹಾಸನ, ಚಿತ್ರದುರ್ಗದಲ್ಲಿ ಕಾಂಗ್ರೆಸ್ಸಿಗೆ ಜಯ

ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲೂ ಕಾಂಗ್ರೆಸ್ಸಿಗೆ ಜಯ

ಸ್ವಂ ವ ಫೋನ್] ಬೆಂಗಳೂರು ೨೩

ಶಾಸನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಕಾಂಗ್ರೆಸ್ಸಿಗೆ ಜಯ ಲಭ್ಯವಾಗಿದೆಯೆಂದು ವರದಿಯಾಗಿದೆ. ಹಾಸನದಲ್ಲಿ ಕಾಂಗ್ರೆಸ್ ಉಮೇದುವಾರರಾಗಿದ್ದ ಶ್ರೀ ಸಿದ್ದನಂಜಪ್ಪನವರು ಸ್ವತಂತ್ರರಾದ ಶ್ರೀ ವೈ ಧರ್ಮಪ್ಪನವರನ್ನು ಸೋಲಿಸಿದರು. ಚಿತ್ರದುರ್ಗ ಜಿಲ್ಲೆಯಿಂದ ಕಾಂಗ್ರೆಸ್ ಕಡೆಯಿಂದ ನಿಂತಿದ್ದ ಶ್ರೀ ಎಸ್ ರಂಗನಾಥರು ಸಮಾಜವಾದಿ ಪಕ್ಷದ ಶ್ರೀ ಮುನಿಯಪ್ಪ ಗೋವಿಂದಶೆಟ್ಟಿಯವರ ಮೇಲೆ ಜಯ ಗಳಿಸಿದರು.

ಓಟಿನ ವಿವರಗಳು ಕೆಳಗೆ ಕಂಡಂತಿವೆ —

ಹಾಸನ

ಶ್ರೀ ಸಿದ್ದನಂಜಪ್ಪ (ಕಾಂ)	೬೧೨೬
,, ವೈ ಧರ್ಮಪ್ಪ (ಸ್ವ)	೬೧೪೦
ಕೆಟ್ಟು ಹೋದ ಓಟುಗಳು	೫೧೪

ಚಿತ್ರದುರ್ಗ

ಶ್ರೀ ಎಸ್ ರಂಗನಾಥ್ (ಕಾಂ)	೪೬೪೦
,, ಮುನಿಯಪ್ಪ ಗೋವಿಂದಶೆಟ್ಟಿ (ಸಮಾಜವಾದಿ ಪಕ್ಷ)	೩೩೬೦
,, ಶಿವಲಿಂಗಪ್ಪ (ಸ್ವ)	೬೪೧
ಕೆಟ್ಟುಹೋದ ಓಟುಗಳು	೫೨೦

ಶ್ರೀ ಶಿವಲಿಂಗಪ್ಪನವರು ಠೇವಣಿ ಹಣವನ್ನು ಕಳೆದುಕೊಳ್ಳುವರು

ಪ್ರವಾಹದಿಂದ ೬೦೦ ಗ್ರಾಮಗಳಿಗೆ ವಿಪತ್ತು

ಉತ್ತರ ಪ್ರದೇಶ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ವಿಪರೀತ ಪ್ರವಾಹವು ಬಂದು ೬೦೦ ಗ್ರಾಮಗಳಿಗೆ ವಿಪತ್ತು ಸಂಭವಿಸಿರುವುದಾಗಿಯೂ, ಜನರು ನಿರಾಶ್ರಿತರಾಗಿರುವುದಾಗಿಯೂ, ಬೆಳೆಗಳು ಕೊಚ್ಚಿ ಹೋಗಿರುವುದಾಗಿಯೂ ವರದಿಯಾಗಿದೆ

ಕಾಶ್ಮೀರ ದಿನಾಚರಣೆಗೆ ಸಮಾಜವಾದಿಗಳ ಪ್ರಾರ್ಥನೆ

ಭಾರತದ ಎಲ್ಲೆಡೆಯೂ ಮುಂದಿನ ಭಾನುವಾರ ಕಾಶ್ಮೀರ ದಿನಾಚರಣೆಯನ್ನು ನೆರವೇರಿಸಬೇಕೆಂದು ಅಖಿಲ ಭಾರತ ಸಮಾಜವಾದಿ ಪಕ್ಷದವರು ಪ್ರಾರ್ಥಿಸಿರುತ್ತಾರೆ. ಸಮಾಜವಾದೀ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರು ಆ ದಿನ ಮುಂಬಯಿಯಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರೆಂದೂ ಹೇಳಲಾಗಿದೆ

ಹೋಟೇಲುಗಳಿಗೆ ಕೊಡುವ ಅಕ್ಕಿ ಪಡಿತರದಲ್ಲಿ ಕಡಿತ

ಮದ್ರಾಸು ಪ್ರಾಂತದ ಊಟದ ಹೋಟೇಲುಗಳಿಗೆ ಈಗ ಕೊಡಲಾಗುತ್ತಿರುವ ತಲಾ ಆರು ಔನ್ಸು ತೂಕದ ಅಕ್ಕಿಯ ಪಡಿತರವನ್ನು ೫ ಔನ್ಸಿಗೆ ಇಳಿಸಿ ಭಾನುವಾರದಿಂದ ಜಾರಿಗೆ ತರಲಾಗಿದೆ

ಸೈನ್ಯಕ್ಕೆ ಸೇರುವವರಿಗೆ ಸೂಚನೆ

ಭಾರತದ ಸೈನ್ಯ ಮತ್ತು ನೌಕಾ ಬಲಗಳಿಗೆ ಸೇರಬಯಸುವ ೧೯ ವಯಸ್ಸಿನ ಬಾಲಕರು ಮತ್ತು ಟೆಕ್ನಿಕಲ್ ಶಿಕ್ಷಣ ಪಡೆಯಬಯಸುವ ದೊಡ್ಡವರು, ರಾಜಧಾನಿಯ ರಾಮಪುರ ಲಿಂಕು ರೋಡಿನಲ್ಲಿ ಎಕ್ಸಿಕ್ಯೂಟಿವ್ ಆಫೀಸರಾಗಿರುವ ಶ್ರೀ ಮುನಿಯಪ್ಪನವರನ್ನು ನಾಳೆ ಬೆಳಗ್ಗೆ ೯ ಗಂಟೆಯಿಂದ ಮಧ್ಯಾಹ್ನದವರೆಗೂ ಭೇಟಿ ಮಾಡಬಹುದು.

ಲೈಸೆನ್ಸ್ ಫೀ ಹೆಚ್ಚಿಸಿದುದಕ್ಕೆ ಕ್ಷೌರಿಕರ ಪ್ರತಿಭಟನೆ

ಮೈಸೂರು ೨೩

ನಗರದ ಕ್ಷೌರಿಕರ ಅಂಗಡಿಗಳ ಮಾಲೀಕರ ಸಂಘದ ಸಭೆಯು ನೆನ್ನೆ ದಿನ ಪಟೇಲ್ ಕಾಲೋನಿಯಲ್ಲಿರುವ ಶ್ರೀ ರಾಮಮಂದಿರದಲ್ಲಿ ಶ್ರೀ ಎಂ ಆರ್ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೌನ್ಸಿಲರು ಸೆಲೂನುಗಳ ಮೇಲೆ ವಿಧಿಸಿರುವ ಲೈಸೆನ್ಸ್ ಫೀಯನ್ನು ಹೆಚ್ಚಿಸಿರುವುದನ್ನು ಖಂಡಿಸಿ ನಿರ್ಣಯಗಳಾದುವು. ಈ ವರ್ಷದ ವೆಚ್ಚವು ಸೆಲೂನುಗಳಿಗೆ ಬೇಕಾದ ಸಾಮಗ್ರಿಗಳ ಬೆಲೆಯೂ ವಿಪರೀತ ಏರಿರುವಾಗ ಲೈಸೆನ್ಸ್ ಫೀಯನ್ನು ೧ ರೂ ನಿಂದ ೫ ರೂ ಗಳಿಗೆ ಹೆಚ್ಚಿಸಿರುವುದನ್ನು ವಿಷಾದದಿಂದ ಪರಿಶೀಲಿಸಿ, ಕೂಡಲೇ ಈ ಆಜ್ಞೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಲಾಯಿತು. ಲೈಸೆನ್ಸ್ ಫೀಯನ್ನು ಹೆಚ್ಚಿಸುವ ಸಂದರ್ಭದಲ್ಲಿ ಪುರಸಭಾ ಕಮೀಷನರು ಕಳೆದ ಮೇ ೩ ರಲ್ಲಿ ಹೊರಡಿಸಿದ ಪ್ರಕಟಣೆಗೆ ಈ ಸಂಘವು ಆಕ್ಷೇಪಣೆ ಪತ್ರಗಳನ್ನು ಕಳಿಸಿದರೂ ಇನ್ನೂ ಜವಾಬು ಕೊಡದಿರುವುದಕ್ಕೆ ವಿಷಾದ ಸೂಚಿಸಲಾಯಿತು.

ಮಹಾರಾಜಾ ಕಾಲೇಜಿನ ಶತಮಾನೋತ್ಸವ

ರಾಜಧಾನಿಯ ಮಹಾರಾಜಾ ಕಾಲೇಜಿನ ಶತಮಾನೋತ್ಸವವು ಬರುವ ಡಿಸೆಂಬರಿನಲ್ಲಿ ನಡೆಯುವುದು. ಈ ಸಮಾರಂಭದ ಸಂಬಂಧವಾಗಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆಯು ಜೂಬಿಲಿ ಹಾಲಿನಲ್ಲಿ ನಾಳೆದ್ದು ಸಂಜೆ ೫-೩೦ ಗಂಟೆಗೆ ಸೇರುವುದೆಂದೂ, ನಗರದಲ್ಲಿರುವ ಹಳೇ ವಿದ್ಯಾರ್ಥಿಗಳೆಲ್ಲರೂ ದಯಮಾಡಿ ಬರಬೇಕೆಂದೂ ಸಂಚಾಲಕರಾದ ಶ್ರೀ ಕೆ. ವರಕಂಠ ಮೂರ್ತಿಯವರು ಪ್ರಾರ್ಥಿಸಿರುತ್ತಾರೆ

ಚೀಣಾಕ್ಕೆ ನೆಹರೂ ಭೇಟಿ ಇಲ್ಲ

ಪ್ರಧಾನಿ ನೆಹರೂರವರು ಚೀಣಾಕ್ಕೆ ಭೇಟಿ ಕೊಡುವ ಸಂಭವವಿಲ್ಲವೆಂದು ಭಾರತ ಸರ್ಕಾರದ ವಿದೇಶಾಂಗ ಶಾಖೆಯು ಪ್ರಕಟಣೆಯನ್ನು ಹೊರಡಿಸಿದೆ. ಅವರಿಗೆ ಅಧಿಕಾರಯುತ ಆಹ್ವಾನವು ಬಂದಿಲ್ಲವೆಂದು ತಿಳಿಸಲಾಗಿದೆ

ಕೇಂದ್ರದಿಂದ ಸಂಸ್ಥಾನಕ್ಕೆ ಹೆಚ್ಚು ಆಹಾರ ಸರಬರಾಜಿಲ್ಲ

ಪತ್ರಿಕಾ ಸಮ್ಮೇಳನದಲ್ಲಿ ಕೆ. ಸಿ ರೆಡ್ಡಿಯವರ ಹೇಳಿಕೆ

ಸ್ವಂ ವ ಫೋನ್] ಬೆಂಗಳೂರು ೨೩

ದೆಹಲಿಯಿಂದ ಹಿಂದಿರುಗಿದ ಮುಖ್ಯ ಮಂತ್ರಿ, ಶ್ರೀ ಕೆ ಸಿ ರೆಡ್ಡಿಯವರು ನೆನ್ನೆ ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿ, ಸಂಸ್ಥಾನಕ್ಕೆ ಕೇಂದ್ರ ಸರ್ಕಾರದಿಂದ ಒದಗಲಿರುವ ಸೌಲಭ್ಯಗಳು ಮತ್ತು ಇಲ್ಲಿನ ಆಹಾರ ಪರಿಸ್ಥಿತಿಗಳ ಬಗ್ಗೆ ವಿವರಣೆಯಿತ್ತರು. ಸಂಸ್ಥಾನದ ಅಭಿವೃದ್ಧಿ ಕಾರ್ಯಗಳಿಗಾಗಿ ಭಾರತ ಸರ್ಕಾರದವರು ಸಹಾಯ ಮತ್ತು ಸಾಲದ ರೂಪದಲ್ಲಿ ಒಂದು ಕೋಟಿ ರೂ ಗೆ ಕಡಿಮೆಯಿಲ್ಲದಂತೆ ಮೂರು ಕೋಟಿ ರೂ ಗಳವರೆಗೂ ಒದಗಿಸಲಿರುವರೆಂದೂ, ನಂತರ ಮುಂದೆ ಕೈಕೊಳ್ಳಬೇಕಾದ ಕಾರ್ಯಗಳ ಬಗ್ಗೆ ನಿರ್ಧರಿಸಲಾಗುವುದೆಂದೂ ಶ್ರೀ ರೆಡ್ಡಿಯವರು ತಿಳಿಸಿದರು. ಪೂರ್ವ ಬಂಗಾಳದ ೧೬,೦೦೦ ನಿರಾಶ್ರಿತರ ಸಂಸಾರಗಳಿಗೆ ಶಿವಮೊಗ್ಗದ ಜಿಲ್ಲೆಯಲ್ಲಿ ಜಮೀನುಗಳನ್ನು ಕೊಟ್ಟು ಅವರ ಪುನರ್ವಸತಿಗೆ ಏರ್ಪಾಡು ಮಾಡಲಾಗುವುದೆಂದು ಅವರು ಹೇಳಿದರು

ಆಹಾರದ ವಿಷಯವನ್ನು ಪ್ರಸ್ತಾಪಿಸುತ್ತಾ, ಸಂಸ್ಥಾನದಲ್ಲಿ ಈಗ ಆಹಾರವು ಅಕ್ಟೋಬರ್ ವರೆಗೆ ಸಾಕಾಗುವಷ್ಟು ಮಾತ್ರ ಇದೆಯೆಂದೂ, ಕೇಂದ್ರ ಸರ್ಕಾರದವರು ಪ್ರವಾಹ ಮತ್ತು ಭೂಕಂಪದ ಹಾನಿಗೊಳಗಾದ ಅಸ್ಸಾಂ ಮೊದಲಾದ ಪ್ರದೇಶಗಳಿಗೆ ಹೆಚ್ಚು ಆಹಾರವನ್ನು ಒದಗಿಸಬೇಕಾಗಿರುವುದರಿಂದ ಸಂಸ್ಥಾನಕ್ಕೆ ಪ್ರತ್ಯೇಕವಾಗಿ ಹೆಚ್ಚು ಆಹಾರ ಕಳುಹಿಸಲಾರರೆಂದೂ, ಆದರೆ ಸಾಧ್ಯವಾದಷ್ಟು ಬೇಗ ಒಂದು ಸಾವಿರ ಟನ್ ಹೆಚ್ಚು ಗೋಧಿಯನ್ನು ಸಂಸ್ಥಾನಕ್ಕೆ ಒದಗಿಸಲು ಒಪ್ಪಿರುವರೆಂದೂ ಹೇಳಿದರು. ಹೊರ ದೇಶಗಳಿಂದ ಭಾರತಕ್ಕೆ ಬರಬೇಕಾದ ಆಹಾರ ಪದಾರ್ಥಗಳು ಯಥಾಕಾಲಕ್ಕೆ ಬಾರದೆ ಅನಿಶ್ಚಿತವಾಗಿರುವುದರಿಂದ ಸಂಸ್ಥಾನಕ್ಕೆ ಸರಬರಾಜಾಗುವ ಅಕ್ಕಿಯ ಪ್ರಮಾಣವನ್ನು ಇನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆಯೆಂದೂ ತಿಳಿಸಿದರು

○ ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯಲ್ಲಿರುವ ಒಂದು ಚಿಲ್ಲರೆ ಅಂಗಡಿಗೆ ನೆನ್ನೆ

ಆಹಾರದ ಪರಿಸ್ಥಿತಿ ತೀವ್ರವಾಗಿದೆಯೆಂದು ನೆಹರೂ

ದೆಹಲಿ ರೇಡಿಯೋದಲ್ಲಿ ನೆನ್ನೆ ರಾತ್ರಿ ಭಾಷಣ ಮಾಡುತ್ತಾ, ಪ್ರಧಾನಿ ನೆಹರೂರವರು ಆಹಾರದ ವಿಷಯದ ಪರಿಸ್ಥಿತಿಯನ್ನು ಪ್ರಸ್ತಾಪಿಸಿ, ಅದನ್ನು ಸರಿಪಡಿಸಲು ಎಲ್ಲರೂ ಯುದ್ಧ ಕಾಲದಲ್ಲಿ ಮಾಡುವ ಪ್ರಯತ್ನದಂತೆ ಶ್ರಮಪಡಬೇಕೆಂದು ಪ್ರಾರ್ಥಿಸಿದರು. ಸ್ಥಿತಿಯು ತೀವ್ರವಾಗಿದ್ದರೂ ಕ್ಷಾಮ ಒದಗಿದೆಯೆಂದು ಹೇಳುವುದು ಮೂರ್ಖತನವೆಂದೂ, ದೇಶದಲ್ಲಿ ಸಾಕಾದಷ್ಟು ಆಹಾರವಿದ್ದು, ಅದನ್ನು ಎಲ್ಲ ಕಡೆಗೂ ರವಾನೆ ಮಾಡುವ ಸಂಚಾರದ ತೊಂದರೆಯಾಗಿದೆಯೆಂದೂ ಅವರು ಹೇಳಿದರು. ಪ್ರಕೃತಿಯು ೩ ತಿಂಗಳಿಂದಲೂ ನಮ್ಮ ಮೇಲೆ ನಿರ್ದಯವಾಗಿ ವರ್ತಿಸಿದೆಯೆಂದೂ, ಅಕಾಲದ ಮಳೆಯಿಂದ ಹೋಳವು ನಾಶವಾದುದಲ್ಲದೆ, ಮದ್ರಾಸಿನಲ್ಲಿ ಮುಂಗಾರು ಮಳೆಯು ಬೀಳದೇ ಬಾಧೆ ಬಾರದೆ ಹೋಗಿದೆಯೆಂದು ಹೇಳಿದರು

ಮೈಸೂರಿಗೆ ರಾಜಾಜಿಯವರ ಭೇಟಿ

ಮೈಸೂರು ೨೩

ರಾಜಧಾನಿಯಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಕೇಂದ್ರದ ಪ್ರಾರಂಭೋತ್ಸವವನ್ನು ನೆರವೇರಿಸಲು ಬರುವ ಅಕ್ಟೋಬರ್ ತಿಂಗಳ ವಾರದಲ್ಲಿ ಕೇಂದ್ರದ ಮಂತ್ರಿಗಳಾದ ರಾಜಗೋಪಾಲಾಚಾರಿಯವರು ಇಲ್ಲಿಗೆ ಆಗಮಿಸುವರೆಂದು ಹೇಳಲಾಗಿದೆ. ಪ್ರಧಾನಿ ನೆಹರೂರವರು ಈ ಕಾರ್ಯವನ್ನು ನೆರವೇರಿಸುವುದಾಗಿ ಹಿಂದೆ ತಿಳಿಸಲಾಗಿತ್ತು

ನಗರದಲ್ಲಿ ಕಳ್ಳತನ

ರಾಜಧಾನಿಯ ಅಶೋಕಾ ರಸ್ತೆಯ ಬಟ್ಟೆ ವ್ಯಾಪಾರಿಗಳಾದ ಶ್ರೀ ಬಿ ಕೆಂಚಪ್ಪನವರ ಅಂಗಡಿಗೆ ನೆನ್ನೆ ಕಳ್ಳರು ನುಗ್ಗಿ ೩೬೫ ರೂ ಬೆಲೆ ಬಾಳುವ ಸೀರೆಗಳನ್ನು ಅಪಹರಿಸಿರುವರೆಂದು ವರದಿಯಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು

ನಾಲ್ಕು ಕಾಲಿನ ಕೋಳಿ ಮರಿ

ಬಾಗಲಕೋಟೆ ಮಿಷನ್ ಮತ್ತು ಫರ್ಟಿಲೈಸರ್ ಕಾರ್ಖಾನೆಯಲ್ಲಿರುವ ದೊಡ್ಡಯ್ಯ ಎಂಬಾತನ ಮನೆಯಲ್ಲಿ ಒಂದು ಕೋಳಿಯು ಹಾಕಿದ್ದ ಮೊಟ್ಟೆಯು ಆ ದಿನ ಬೆಳಗ್ಗೆ ಒಡೆದಾಗ ನಾಲ್ಕು ಕಾಲಿನ ಒಂದು ಮರಿಯು ಹೊರಗೆ ಬಂದು ಕೂಡಲೇ ಅದು ಸತ್ತುಹೋಯಿತೆಂದು ಸುದ್ದಿ ಬಂದಿದೆ

○ ಭಾರತದ ಪಾರ್ಲಿಮೆಂಟಿಗೆ ಸಂಸ್ಥಾನದಿಂದ ಆರಿಸಲಾಗುವ ಅಧಿಕಾರಿಗಳನ್ನು ಚುನಾಯಿಸಲು ಆರಿಸಿ ಸಮಿತಿಯವರು ಬರುವ ಅಕ್ಟೋಬರ್ ತಿಂಗಳಿನಲ್ಲಿ ಆಗಮಿಸುವರೆಂದು ಹೇಳಲಾಗಿದೆ.

ಸಿನಿಮಾಗಳಲ್ಲಿ ತಿಂಡಿ ಮಾರಾಟಕ್ಕೆ ಪ್ರತಿಬಂಧಕ

ಬೊಂಬಾಯಿನ ಪೋಲೀಸ್ ಕಮೀಷನರು ಸಿನಿಮಾ ಮತ್ತು ನಾಟಕ ಮಂದಿರಗಳಲ್ಲಿ ಫಲಹಾರ ಮತ್ತು ಪಾನೀಯಗಳ ಮಾರಾಟವನ್ನು ಪ್ರತಿಬಂಧಿಸಲು ಆಲೋಚಿಸುತ್ತಿದ್ದಾರೆ. ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಿ ಸಾರ್ವಜನಿಕರ ಅಭಿಪ್ರಾಯವನ್ನು ಕೇಳಿ ತೆಗೆದುಕೊಳ್ಳಲಾಗುವುದೆಂದು ವರದಿಯಾಗಿದೆ

ಕಳ್ಳರು ನುಗ್ಗಿ ಸುಮಾರು ೩೫೦ ರೂ ಗಳ ವಸ್ತುಗಳನ್ನು ಕಳುವು ಮಾಡಿರುವರೆಂದು ವರದಿಯಾಗಿದೆ

ನರಿಮಾನ್ ಸಾಡೆಕ್ಕಳೊಡನೆ ಈಜಿಪ್ಟ್ ರಾಜರ ವಿವಾಹವಿಲ್ಲ

ಈಜಿಪ್ಟಿನ ಅರಸರಾದ ಫರೂಕರು ನರಿಮಾನ್ ಸಾಡೆಕ್‌ರನ್ನು ವಿವಾಹ ಮಾಡಿಕೊಳ್ಳುವುದಾಗಿ ತಾವು ತಿಳಿಸಿದುದು ನಿಜವಲ್ಲವೆಂದು ರಾಜರ ಪತ್ರಿಕಾ ಸಲಹೆಗಾರರು ತಿಳಿಸಿರುತ್ತಾರೆ ಅಲ್ಲಿನ ಪ್ರಮುಖ ಪತ್ರಿಕೆಯೂ ವಿವಾಹದ ಸುದ್ದಿಯನ್ನು ನಿರಾಕರಿಸಿರುವುದಲ್ಲದೆ ಅರಸರು ವಿವಾಹವಾಗಬೇಕಾದರೆ ತಮ್ಮ ದೇಶದಲ್ಲೇ ವಿವಾಹವಾಗುವರೆಂದು ತಿಳಿಸಿದೆ ನರಿಮಾನ್ ಸಾಡೆಕ್ ಎಂಬುವರು ೧೭ ವರ್ಷದ ಯುವತಿ ಮತ್ತು ಈಜಿಪ್ಟಿನ ಮಾಜಿ ಅಧಿಕಾರಿಯ ಮಗಳು ಈಕೆಯು ಮತ್ತೊಬ್ಬ ಯುವಕನನ್ನು ವಿವಾಹವಾಗಬೇಕಿತ್ತು.

ಬೊಂಬಾಯಿಯಲ್ಲಿ ೧ ದಿನದ ಸಾರ್ವತ್ರಿಕ ಮುಷ್ಕರ

ಬೊಂಬಾಯಿಯ ಹತ್ತಿ ಗಿರಣಿ ಮುಷ್ಕರದವರಿಗೆ ಸಹಾನುಭೂತಿ ತೋರಿಸಲು ಅಲ್ಲಿ ಒಂದು ದಿನದ ಎಲ್ಲ ಕೆಲಸಗಾರರ ಸಾರ್ವತ್ರಿಕ ಮುಷ್ಕರವನ್ನು ಹೂಡಲು ನಿರ್ಧರಿಸಲಾಗಿದೆ

ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್

ತಿರುಚ್ಚಿನಾಪಳ್ಳಿಯ ಬಟ್ಟೆ ವ್ಯಾಪಾರಿಗಳು ಕೈ ಮಗ್ಗದ ಬಟ್ಟೆ ಕೊಂಡ ಹೊರತು ಮಿಲ್ ಬಟ್ಟೆಗಳನ್ನು ಕೊಡುವುದಿಲ್ಲವೆಂದು ಚಿಲ್ಲರೆ ವರ್ತಕರಿಗೆ ತೊಂದರೆ ಉಂಟುಮಾಡುತ್ತಿರುವುದನ್ನು ಪ್ರತಿಭಟಿಸಲು ಅಲ್ಲಿನ ಸಮಾಜವಾದಿ ಪಕ್ಷದವರು ಬಟ್ಟೆ ವ್ಯಾಪಾರಿಗಳ ಅಂಗಡಿ ಮುಂದೆ ಪಿಕೆಟಿಂಗ್ ನಡೆಸುತ್ತಿರುವರು

ಅಣು ರಹಸ್ಯ ಬಯಲು ಮಾಡಿದವನ ತಂದೆಗೆ ಹುದ್ದೆ

ಬ್ರಿಟನ್ನಿನಲ್ಲಿ ಅಣು ರಹಸ್ಯವನ್ನು ರಷ್ಯಕ್ಕೆ ಬಿಟ್ಟುಕೊಟ್ಟ ಸಂದರ್ಭದಲ್ಲಿ ೧೪ ವರ್ಷದ ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗಿರುವ ಕ್ಲಾಸ್ ಫ್ಯೂಕ್ಸ್‌ರವರ ತಂದೆ ಎಮಿಲ್‌ರವರನ್ನು ರಷ್ಯದ ವಿಶ್ವವಿದ್ಯಾಲಯವೊಂದರಲ್ಲಿ ಅಧ್ಯಾಪಕರನ್ನಾಗಿ ನೇಮಿಸಲಾಗುವುದು

ಉತ್ತರ ಅಸ್ಸಾಮಿನ ಭೂಸ್ಥಿತಿಯೇ ಮಾರ್ಪಟ್ಟಿದೆ

ಕಳೆದ ವಾರದ ಭೂಕಂಪದಿಂದ ೩೦ ಸಾವಿರ ಚದುರ ಮೈಲಿಯ ಮತ್ತು ೫೦ ಲಕ್ಷ ಜನರುಳ್ಳ ಉತ್ತರ ಅಸ್ಸಾಮಿನ ಭಾಗದಲ್ಲೆಲ್ಲಾ ಭೂಮಿಯ ನೆಲಮಟ್ಟದಲ್ಲಿ ಭಾರಿ ವ್ಯತ್ಯಾಸವುಂಟಾಗಿದೆ ಭೂಮಿಯು ಇನ್ನೂ ಸ್ಥಿಮಿತ ಸ್ಥಿತಿಗೆ ಬಂದಿಲ್ಲ ಇಂತಹ ಭಾರಿ ಭೂಕಂಪವು ೧೯೨೩ ರಲ್ಲಿ ಜಪಾನಿನ ಕ್ವಾಂಟೋವಿನಲ್ಲಿ ಆಗಿತ್ತು ೩೦ ಸಾವಿರ ಜನರು ನಿರಾಶ್ರಿತರಾಗಿರುವುದಲ್ಲದೆ ೫೦ ಸಾವಿರ ಗೋವುಗಳು ನಾಶವಾಗಿವೆ ಒಂದು ಊರಿನ ಸುತ್ತಮುತ್ತ ೩೦ ಅಡಿ ನೀರಿನೊಳಗೆ ಮುಳುಗಿದೆ ಅಲ್ಲಿನ ಹಲವು ವರ್ತಕರು ಪ್ರಳಯ ದೇವತೆಯು ಶಾಂತಿಗಾಗಿ ಪ್ರಾರ್ಥನೆ ಮಾಡಲುಪಕ್ರಮಿಸಿದ್ದಾರೆ

ಪಶ್ಚಿಮ ಜರ್ಮನಿ ಆಕ್ರಮಣವನ್ನು ತಡೆಯಲು ಸಿದ್ಧತೆ

ಪೂರ್ವ ಜರ್ಮನಿಯ ಕಡೆಯಿಂದ ಕಮ್ಯೂನಿಸ್ಟರು ರಷ್ಯನ್ ಬೆಂಬಲದೊಡನೆ ಪಶ್ಚಿಮ ಜರ್ಮನಿಯ ಮೇಲೆ ಬೀಳುವುದಾದರೆ, ಆಗ ಅವರ ಆಕ್ರಮಣ ಪ್ರಯತ್ನ ವಿಫಲಗೊಳಿಸಲು ಪಶ್ಚಿಮ ಜರ್ಮನಿಯ ಅಧಿಕಾರಿಗಳು ಮತ್ತು ಬ್ರಿಟಿಷ್, ಅಮೆರಿಕ ಮತ್ತು ಫ್ರೆಂಚ್ ಅಧಿಕಾರಿಗಳು ಪೂರ್ವ ಮತ್ತು ಪಶ್ಚಿಮ ದೇಶಗಳನ್ನು ಸಂಧಿಸುವ ಸೇತುವೆಗಳನ್ನು ನಾಶಪಡಿಸಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದಾರೆ

ಔಷಧಿಗೆ ಪ್ರತಿಯಾಗಿ ಡಾಕ್ಟರಿಂದಲೇ ವಿಷ ಸೇವನೆ

ಕೋಜಿಕೋಡೆಯ ಬಳಿ ರಾಮನಾಟ್ಟುಕರೆ ಎಂಬಲ್ಲಿ ಒಬ್ಬ ವೈದ್ಯರು ನಿದ್ರೆಯ ಗುಳಿಗೆಯೆಂದು ತಿಳಿದು ಯಾವುದೋ ವಿಷದ ಮಾತ್ರೆಯನ್ನು ಸೇವಿಸಿ ಪ್ರಜ್ಞೆತಪ್ಪಿದರೆಂದೂ, ಕೂಡಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿ ಪ್ರಜ್ಞೆ ಬಂದು ಉತ್ತಮಗೊಳ್ಳುತ್ತಿರುವರೆಂದೂ ಹೇಳಲಾಗಿದೆ

ಹಿಂದೀ ಸೇವಾ ಸದನದ ಪ್ರಾರಂಭೋತ್ಸವ

ಚಾಮರಾಜಪುರದ ರೈಲ್ವೆ ನಿಲ್ದಾಣದ ಬಳಿಯಿರುವ ಹಿಂದೀ ಸೇವಾ ಸದನದ ಪ್ರಾರಂಭೋತ್ಸವವನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಯವರಾದ ಶ್ರೀ ಸತ್ಯನಾರಾಯಣರವರು ನೆರವೇರಿಸಿದರು

೧೦ ಪೌಂಡು ಬಂಡವಾಳದಲ್ಲಿ ಪ್ರಪಂಚ ಪರ್ಯಟನೆ

ಮಿಸ್ ಜೆನ್ನಿಫರ್ ಜೇಮ್ಸ್ ಎಂಬ ೧೮ ವರ್ಷ ವಯಸ್ಸಿನ ಮತ್ತು ಮಿಸ್ ವ್ಯಾನಿಸ್ಸಾ ಟೆರ್ರಿ ಎಂಬ ೨೦ ವರ್ಷ ವಯಸ್ಸಿನ ಇಂಗ್ಲೀಷ್ ತರುಣಿಯರು ಕೇವಲ ೧೦ ಪೌಂಡು ಬಂಡವಾಳದೊಡನೆ ವಿಶ್ವಪರ್ಯಟನ ಕೈಗೊಳ್ಳಲಿರುವರೆಂದು ವರದಿಯಾಗಿದೆ ತಮ್ಮ ಪ್ರವಾಸಕ್ಕೆ ಬೇಕಾಗುವ ವೆಚ್ಚವನ್ನು ಅವರು ಹೋದೆಡೆಗಳಲ್ಲೆಲ್ಲಾ ಬಟ್ಟೆಗಳನ್ನು ತೊಳೆಯುವುದು ಮೊದಲ್ಗೊಂಡು ಏನಾದರೊಂದು ಉದ್ಯೋಗದಿಂದ ಸಂಪಾದಿಸಿಕೊಂಡು ಮುಂದುವರಿಯುವುದಾಗಿ ತಿಳಿಸಿದ್ದಾರೆ ಅವರ ತಂದೆ ತಾಯಿಗಳಿಗೆ ಇದು ಇಷ್ಟವಿಲ್ಲದಿದ್ದರೂ ಅವರ ದಾರ್ಷ್ಟ್ಯಕ್ಕೆ ಮೆಚ್ಚಿ ಪ್ರವಾಸಕ್ಕೆ ಅನುಮತಿ ಇತ್ತಿದ್ದಾರೆ

ಪಶ್ಚಿಮ ಪಂಜಾಬಿನಲ್ಲಿ ಮಳೆಯಿಂದ ವಿಪರೀತ ನಷ್ಟ

ಪಶ್ಚಿಮ ಪಂಜಾಬಿನಲ್ಲಿ ಲಾಹೋರಿಗೆ ಸೇರಿದ ಎರಡು ಹಳ್ಳಿಗಳಲ್ಲಿ ವಿಪರೀತ ಮಳೆ ಬಂದುದರಿಂದ ೩೦೦ ಮನೆಗಳು ನಾಶವಾದುವೆಂದೂ, ಇನ್ನೂ ೧೨೦೦ ಮನೆಗಳು ಕುಸಿದುಬೀಳುವಂತಿವೆಯೆಂದೂ ತಿಳಿದುಬಂದಿದೆ ಗ್ರಾಮಗಳು ಪೂರ್ಣವಾಗಿ ನೀರಿನಿಂದ ಆವರಿಸಲ್ಪಟ್ಟು ಪೈರುಪಚ್ಚೆಗಳೂ ನಾಶವಾಗಿವೆಯೆಂದು ವರದಿಯಾಗಿದೆ

ದೆಹಲಿಯಲ್ಲಿ ಟಿಬೆಟ್ ಮತ್ತು ಚೀನಾಗಳ ಸಂಧಾನ

ಟಿಬೆಟ್ಟಿನ ಭವಿಷ್ಯದ ಬಗ್ಗೆ ನವದೆಹಲಿಯಲ್ಲಿ ಟಿಬೆಟ್ ಮತ್ತು ಕಮ್ಯೂನಿಸ್ಟ್ ಚೀನಾ ಪ್ರತಿನಿಧಿಗಳಲ್ಲಿ ಶೀಘ್ರದಲ್ಲೇ ಸಂಧಾನವು ನಡೆಯಲಿದೆ ಟಿಬೆಟ್ಟಿನ ಮೇಲೆ ಕಮ್ಯೂನಿಸ್ಟ್ ದಂಡಯಾತ್ರೆಯಾಗುವುದೆಂದು ಅಲ್ಲಿನ ಪ್ರತಿನಿಧಿಗಳು ಭಾವಿಸಿಲ್ಲ.

೧೯ ನಿಮಿಷ ಕಾಲ ಹೃದಯ ಚಲನೆ ನಿಂತ ಮಹಿಳೆ

ಚಿಕಾಗೊ ಆಸ್ಪತ್ರೆಯಲ್ಲಿದ್ದ ೨೩ ವರ್ಷದ ಯುವತಿಗೆ ೧೯ ನಿಮಿಷ ಕಾಲ ಹೃದಯ ಚಲನೆಯು ನಿಂತುಹೋಗಿ, ಆಕೆಯು ಸತ್ತಿರುವಳೆಂದು ಭಾವಿಸಲ್ಪಟ್ಟಿದ್ದು ಆಕೆಗೆ ಜೀವವು ಬಂದಿತೆಂದು ಹೇಳಲಾಗಿದೆ ಇದು ವೈದ್ಯರಿಗೆ ಆಶ್ಚರ್ಯವನ್ನುಂಟುಮಾಡಿದೆ

ಭಾರತದೇಶದಲ್ಲಿ ಶೇಕಡ ೧೦ ರಷ್ಟು ಇಳಿತ

ಬೆಲೆ ಹತೋಟಿ ಶಾಸನಕ್ಕೆ ಒಳಪಟ್ಟ ಆಹಾರ ಮತ್ತು ಇತರ ಅವಶ್ಯಕ ಪದಾರ್ಥಗಳ ಬೆಲೆಯನ್ನು ಶೇಕಡ ಹತ್ತರಷ್ಟು ಇಳಿತ ಮಾಡಬೇಕೆಂದು ದೆಹಲಿಯಲ್ಲಿ ನಡೆದ ಆಹಾರ ಸಚಿವರುಗಳ ಸಮ್ಮೇಳನದಲ್ಲಿ ಅಭಿಪ್ರಾಯ ಪಡಲಾಯಿತು ಈ ಬಗ್ಗೆ ಶಾಸನವನ್ನು ಮಾಡಿ ಸಂಸ್ಥಾನಗಳ ಅಧಿಕಾರಿಗಳಿಗೆ ಬೆಲೆ ನಿಗದಿ ಮಾಡುವ ಅಧಿಕಾರ ಕೊಡಲಾಗುವುದು. ದಾಸ್ತಾನು ಮತ್ತು ಅಧಿಕ ಲಾಭ ಸಂಪಾದನೆಗೆ ಶಿಕ್ಷೆ ವಿಧಿಸುವ ಮತ್ತು ದಾಸ್ತಾನನ್ನು ತೆರೆಯಬಾರದೆಂದು ನಿರ್ಬಂಧಿಸುವ ಮತ್ತು ದರಗಳ ಪಟ್ಟಿಯನ್ನು ಹಾಕಬೇಕೆಂದು ಒತ್ತಾಯ ಪಡಿಸುವ ಅಧಿಕಾರವನ್ನೂ ಅವರಿಗೆ ಕೊಡಲಾಗುವುದು ನಿಯಮಗಳನ್ನು ಉಲ್ಲಂಘಿಸಿ ನಡೆಯುವ ವರ್ತಕರುಗಳ ಒಂದು "ಬ್ಲಾಕ್ ಲಿಸ್ಟ್" ಅನ್ನು ತಯಾರಿಸಿ ಅವರ ಮೇಲೆ ಸತತ ಕಾವಲಿಟ್ಟು ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳಲಾಗುವುದು

ಮನೆಯ ಮೇಲೆ ವಿಮಾನ ಬಿದ್ದು ಇಬ್ಬರ ಮರಣ

ನೆನ್ನೆ ದಿನ ಬೆಳಗ್ಗೆ ಹೆಬ್ಬಾಳ ವಿಮಾನ ನಿಲ್ದಾಣದ ಬಳಿ ಭಾರತ ವಿಮಾನ ದಳದ ಶಿಕ್ಷಣ ಕೇಂದ್ರದ ವಿಮಾನವೊಂದು ಅಪಘಾತಕ್ಕೀಡಾಗಿ ಒಂದು ಕಾಂಪೌಂಡಿನ ಭವನದೊಳಗಿದ್ದ ಸಣ್ಣ ಮನೆಯ ಮೇಲೆ ಬಿದ್ದಿತು ಅದರ ಸಾರಥಿಯು ಕೂಡಲೆ ಪ್ಯಾರಚೂಟಿನಲ್ಲಿ ವಿಮಾನದಿಂದ ಜಿಗಿದು ಉಳಿದುಕೊಂಡನು ಸಣ್ಣ ಮನೆಯಲ್ಲಿದ್ದ ಇಬ್ಬರು ಮಹಿಳೆಯರು ಬೆಂಕಿಯ ಆಘಾತಕ್ಕೆ ಸಿಕ್ಕಿ ಒಬ್ಬಳು ಮೃತಪಟ್ಟರು ಮತ್ತೊಬ್ಬರನ್ನು ಅಗ್ನಿಶಮನ ದಳದವರು ರಕ್ಷಿಸಿದರು

ಯ ಜು ರು ಪಾ ಕ ರ್ಮ

ಮೈಸೂರು ಹೆಬ್ಬಾರು ಶ್ರೀ ವೈಷ್ಣವ ಉಭಯ ಸಭೆಯವರು ತಾ|| ೨೭-೮-೫೦ನೇ ಭಾನುವಾರ ಬೆಳಗ್ಗೆ ರಾಜಧಾನಿಯ ಸುಬ್ಬರಾಯನಕೆರೆ ಮೇಲುಭಾಗದಲ್ಲಿರುವ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಯಜುರುಪಾಕರ್ಮವನ್ನು ನಡೆಸಲು ಏರ್ಪಾಡು ಮಾಡಿರುತ್ತಾರೆ ಹೆಬ್ಬಾರು ಶ್ರೀ ವೈಷ್ಣವ ಮಂಡಲಿಯವರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ರಘುಲಾಲ್ & ಕೋ
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ
ಬೆಂಗಳೂರು.

SRI GAYATHRI
TALKIES
From 23-8-50 For 2 Days
Daily 3 Shows
CHRISTMAS EVE
Stars - Randolph Scott & Joan Blondell
From 25-8-50
BAGDAD
(Technicolor)

ಪ್ರಭುದೇವಾ ಟಾಕೀಸ್
ದಿನವೂ 3 ಆಟಗಳು
23-8-50ನೇ ಬುಧವಾರದಿಂದ
ಮಾಯಾ ಲೋಕಂ
(ತೆಲುಗು)
ಪಾತ್ರ: ಕನ್ನಾಂಬಾ, ಶಾಂತ ಕುಮಾರಿ, ರಾಜಮ್ಮ, ಸಿ. ಎಸ್. ಆರ್., ಡಾ|| ಸುಬ್ಬರಾವ್, ನಾಗೇಶ್ವರರಾವ್

ವಿವಿಧ ರೇಷ್ಮೆ ಸೀರೆಗಳಿಗೆ
9 ಗಜದ ಪೂನಾ ನಾಗಪುರ ಸೀರೆಗಳಿಗೆ
M. V. ಭೋಜಯ್ಯ ಬಿ ಎ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ
ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ
ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು
ಗುಣ ಹೊಂದಿದ್ದಾರೆ. ಬೆಲೆ 0-1-6
ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್
ಕೊಡಲಾಗುವುದು
ರಮಣಿ ಟ್ರೇಡಿಂಗ್ ಕಂಪೆನಿ,
೧೩೯೮/೩, ಕೃಷ್ಣಮೂರ್ತಿಪುರಂ,
ಮೈಸೂರು

Edited, printed and published by A. R Nagarajan, at Sadhvi Press D.Subbiah Road, Mysore

ಫೋನ್ ನಂ. 792 ||ಏಕಂ ಸದ್ವಿಪ್ರಾ ಬಹುಧಾ ವದಂತಿ|| ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೨೪-೮-೫೦ [ಸಂಚಿಕೆ ೫೯

– ಕಾಶ್ಮೀರ ಸಂಧಾನ – ಮುರಿದುದು ಭಾರತ?

ಉಪಾಕರ್ಮಗಳು

ಮೈಸೂರು ೨೩

ಶ್ರೀಯುತ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಪತ್ರತಿಯ ಮೇರೆ ಈ ವರ್ಷವೂ ಸಹ ವಿದ್ಯಾರ್ಥಿಗಳವರ ಸನ್ನಿಧಿಯಲ್ಲಿ ಋಕ್ ಶಾಖಾಧ್ಯಾಯಿಗಳಿಗೆ ರಾಗ್ಯಜುಸ್ಸಾಮೋಪಾಕರ್ಮಗಳು ಶಾಸ್ತ್ರೋಕ್ತ ವಾಗುವಂತೆ ಏರ್ಪಾಡಾಗಿದೆ. ಋಗ್ವೇದಿಗಳಿಗೆ ೨೬ನೇ ತಾ|| ಶನಿವಾರ ಬೆಳಗ್ಗೆ ೮|| ಗಂಟೆಗೆ ಸ್ವಾಮಿಗಳಾಗಿ ಬ್ರಂ|| ಶ್ರೀ|| ವೆಂಕಟಸುಬ್ಬಾಶಾಸ್ತ್ರಿಗಳು ಮತ್ತು ಕೃಷ್ಣಯಜುರ್ವೇದಿಗಳಿಗೆ ಬ್ರಂ|| ಶ್ರೀ|| ಟಿ. ಕೃಷ್ಣಮಾಚಾರ್ಯರುಗಳಿಂದಲೂ, ಯಜುಸ್ಸಾಮಿಗಳಿಗೆ ೨೬ನೇ ಭಾನುವಾರ ಬೆಳಗ್ಗೆ ೮|| ಗಂಟೆಗೆ ಸ್ವಾಮಿಗಳಾಗಿ ಬ್ರಂ|| ಶ್ರೀ ಪಟ್ಟಾಭಿರಾಮ ಶಾಸ್ತ್ರಿಗಳು, ಸಂಗೀತ ಸಂಪ್ರದಾಯದವರಿಗಾಗಿ ಬ್ರಂ|| ಶ್ರೀ ಕೆ. ಎಸ್. ರಾಮಸ್ವಾಮಿಗಳು ಮತ್ತು ವೈಷ್ಣವರಿಗೆ ಬ್ರಂ|| ಆರ್. ಶ್ರೀನಿವಾಸಾಚಾರ್ಯರು ಮತ್ತು ಶುಕ್ಲಯಜುರ್ವೇದಿಗಳಿಗೆ ಬ್ರಂ|| ಶ್ರೀ ಬಿ. ಸ್ವಾಮಿನಾಥಶಾಸ್ತ್ರಿಗಳು, ಶ್ರೀವೈಷ್ಣವರಿಗೆ ಬ್ರಂ|| ಶ್ರೀನಿವಾಸ ಸುಂದರಾಚಾರ್ಯರುಗಳಿಂದಲೂ, ಉಪಾಕರ್ಮಗಳು ನಡೆಸಲ್ಪಡುವುವು. ಸಾಮೋಪಾಕರ್ಮವು ಬರುವ ತಿಂಗಳು ೧ನೇ ತಾರೀಖು ಬೆಳಗ್ಗೆ ೮|| ಗಂಟೆಗೆ ಬ್ರಂ|| ಶ್ರೀ ಆರ್. ನಾರಾಯಣಸ್ವಾಮಿ ದೀಕ್ಷಿತರಿಂದ ನಡೆಸಲ್ಪಡುವುವು.

ಮಹಾರಾಜಾ ಕಾಲೇಜಿನ ಶತಮಾನೋತ್ಸವ

ರಾಜಧಾನಿಯ ಮಹಾರಾಜಾ ಕಾಲೇಜಿನ ಶತಮಾನೋತ್ಸವವು ಬರುವ ಡಿಸೆಂಬರಿನಲ್ಲಿ ನಡೆಯುವುದು. ಈ ಸಮಾರಂಭದ ಸಂಬಂಧವಾಗಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆಯು ಯೂನಿಯನ್ ಬಿ ಎ ಹಾಲಿನಲ್ಲಿ ಇದೇ ೨೬ನೇ ತಾ|| ಶನಿವಾರ ಸಂಜೆ ೫-೩೦ ಗಂಟೆಗೆ ಸೇರುವುದೆಂದೂ, ನಗರದಲ್ಲಿರುವ ಹಳೇ ವಿದ್ಯಾರ್ಥಿಗಳೆಲ್ಲರೂ ದಯಮಾಡಿಸಬೇಕೆಂದೂ ಸಂಚಾಲಕರಾದ ಶ್ರೀ ಸಿ. ನರಸಿಂಹ ಮೂರ್ತಿಯವರು ಪ್ರಾರ್ಥಿಸಿರುತ್ತಾರೆ.

ಲಾಠಿ ಮೂಲಕ ಹತ್ಯೆ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಒಂದು ಗಲ್ಲಿಯಲ್ಲಿ ಲಾಠಿಯ ಮೂಲಕ ನನ್ನ ನಡೆಯುತ್ತ ಜನಗಳಿಗೆ ತೊಂದರೆ ಮಾಡುತ್ತಿದ್ದನೆಂದು ವ್ಯಕ್ತಿಯೊಬ್ಬನನ್ನು ಸಿಟಿ ಏವ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೃಷ್ಣಮೂರ್ತಿಯವರು ದಸ್ತಗಿರಿ ಮಾಡಿರುತ್ತಾರೆ.

ಮೈಸೂರು ಪ್ರಾಂತ ಕಾಂಗ್ರೆಸ್ಸಿನ ಅಧ್ಯಕ್ಷತೆ

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಚಿತ್ರದುರ್ಗದ ವಕೀಲರಾದ ಶ್ರೀ ಕೆ. ಕೆಂಚಪ್ಪನವರೂ ಸ್ಪರ್ಧಿಸುವರೆಂದು ತಿಳಿದುಬಂದಿದೆ.

ಪಿ. ಟಿ. ಶ್ರೀನಿವಾಸರಾಘವರಿಗೆ ಶಿಕ್ಷಾವಿಯೋಗ

ಮೈಸೂರು ಸರ್ಕಾರದ ಅಸಿಸ್ಟೆಂಟ್ ಜನರಲ್ಲರಾದ ಶ್ರೀ ಪಿ ಟಿ ಶ್ರೀನಿವಾಸರಾಘವರ ಕಂದೆಯವರಾದ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಪಿ ವಿ ತ್ಯಾಗರಾಜ ಅಯ್ಯರ್‌ರವರು ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ೭೫ ವರ್ಷ ವಯಸ್ಸಾಗಿತ್ತು. ಅವರ ಆತ್ಮಕ್ಕೆ ಶಾಂತಿ ಯನ್ನೀಯಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಬೆಳೆಯುವವರಿಂದ ೩ ಪೌಂ. ಅಕ್ಕಿ ಕೊಳ್ಳಲು ಅನುಮತಿ

ಕಡ್ಡಾಯವಾಗಿ ಪಡಿತರ ಜಾರಿಯಲ್ಲಿಲ್ಲದ ಪ್ರದೇಶಗಳಲ್ಲಿ ಧಾನ್ಯಗಳನ್ನು ಬೆಳೆಯುವ ಜನರು ಬೆಳೆಯುವವರಿಂದ ಒಬ್ಬರಿಗೆ ೩ ಸೇರು ಪೌಂಡು ಅಕ್ಕಿಯನ್ನು ಕೊಳ್ಳಲು ಅನುಮತಿಯನ್ನು ಮೈಸೂರು ಸರ್ಕಾರದವರು ಕೊಟ್ಟಿರುತ್ತಾರೆ.

ಹೆಂಗಸರನ್ನು ಅಪಹರಿಸಿ ಮಾರುವ ತಂಡ

ಹೆಂಗಸರನ್ನು ಅಪಹರಿಸಿ ಮಾರುವ ಕಾರ್ಯದಲ್ಲಿ ನಿರತವಾಗಿರುವ ತಂಡವೊಂದನ್ನು ಕಲಾಸಿಪಾಳ್ಯ ಪೊಲೀಸರು ಪತ್ತೆ ಹಚ್ಚಿ, ಇಬ್ಬರು ಅಪಹೃತ ಮಹಿಳೆಯರನ್ನು ರಕ್ಷಿಸಿರುತ್ತಾರೆ.

ದೆಹಲಿ ಭಂಗಿ ಕಾಲೊನಿಯಲ್ಲಿ ಗಾಂಧಿಜಿಯ ಸ್ಮಾರಕ

೧೯೪೬-೪೭ ರಲ್ಲಿ ಗಾಂಧಿಜಿಯವರು ಸಂಜೆ ಪ್ರಾರ್ಥನೆಯನ್ನು ನಡೆಸುತ್ತಿದ್ದ ದೆಹಲಿ ಭಂಗಿ ಕಾಲೊನಿಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಅಲ್ಲಿನ ಪೌರ ಸಭೆಯವರು ನಿರ್ಧರಿಸಿರುವರು.

ಭಾರತಕ್ಕೆ ಸಿಲೋನಿನಿಂದ ೧೦ ಸಾವಿರ ಟನ್ ಅಕ್ಕಿಯ ಸಾಲ

ಸಿಂಹಳ ದ್ವೀಪದ ಸರ್ಕಾರದವರು ಭಾರತಕ್ಕೆ ಹತ್ತು ಸಾವಿರ ಟನ್ ಅಕ್ಕಿಯನ್ನು ಸಾಲ ಕೊಡಲು ಒಪ್ಪಿರುವರೆಂದು ವರದಿಯಾಗಿದೆ.

ಪುರಾಣ ಮತ್ತು ಹರಿಕಥೆ

ರಾಜಧಾನಿಯ ಕಾಶಪ್ಪ ಶೆಟ್ಟಿ ಬೀದಿಯಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿನಿತ್ಯವೂ ಸಂಜೆ ೫ ರಿಂದ ೭ ಗಂಟೆ ವರೆಗೆ ಶ್ರೀ ಕೂಡ್ಲಿಗಿ ಗೌಡ ಮತ್ತು ಓರ್ವ ಸ್ತ್ರೀಯರುಗಳಿಂದ ಮಹಾಭಾರತ ಪುರಾಣ ಮತ್ತು ರಾತ್ರಿ ಸಂಜೆ ೭ ಗಂಟೆಗೆ ಶ್ರೀ ಬಿಜಾ. ವಿ. ಶಿವಲಿಂಗಸ್ವಾಮಿಗಳವರಿಂದ "ಗುರುಭಕ್ತಿ ಭದ್ರಾಯು" ಎಂಬ ಹರಿಕಥೆ, ದೇವರಿಗೆ ಅಕ್ಕಿ ಅಲಂಕಾರ, ಮಾರನೆ ಸಂಜೆ ೭ ಗಂಟೆಗೆ ಪ್ರಾರ್ಥನಾ ಶನಿವಾರ ಪ್ರಯುಕ್ತ ಅವರಿಂದಲೇ "ಭಕ್ತ ಕಬೀರದಾಸ" ಹರಿಕಥೆ ಮತ್ತು ಉಪಾಕರ್ಮದ ಪ್ರಯುಕ್ತ ಪತ್ರಿಕಾ ವರಿಗೆ ಗಾಯತ್ರಿ ಅಲಂಕಾರ ಇವುಗಳನ್ನು ದೇವಾಂಗ ಸಂಘದವರು ಏರ್ಪಡಿಸಿರುತ್ತಾರೆ.

ಅಮೆರಿಕಾದ ನೋಲೆ ಅಣು ಬಾಂಬ್ ಕಂಪೆನಿಯ ದಾವಾ

ಅಮೆರಿಕದ ಜೆ. ಎಂ. ಜಯರಾಮ್ ಮತ್ತು ಕಂಪೆನಿಯು ಶೋಧನದಾದ ಡಾ|| ಎರಿ ಕೋಫ್‌ಫಿರ್ಮೆಯವರು ಅಣು ಬಾಂಬನ್ನು ಕಂಡುಹಿಡಿದು, ನೀಲಿಂದೆ ಮಾರ್ಕೋನಿ ಕಳವನ್ನು ಸಂಪಾದಿಸಿದ್ದರೆಂದೂ, ಅವರ ಸಹ ಯಾರಿಕೆ ಬಗ್ಗೆ ಪೇಟೆಂಟ್ ಹಕ್ಕನ್ನು ಅವರಿಂದ ಕೊಳ್ಳಲಾದ ಕಂಪೆನಿಯವರು ಪಡೆದಿದ್ದರೆಂದೂ, ಅವರ ಅನುಮತಿ ಪಡೆಯದೆ ಅಮೆರಿಕಾ ಸರ್ಕಾರದವರು ಅಣು ಬಾಂಬನ್ನು ತಯಾರಿಸುತ್ತಿರುವುದರಿಂದ ಕಂಪೆನಿಗೆ ಅವರು ೪|| ಕೋಟಿ ರೂ ಪರಿಹಾರ ಕೊಡಬೇಕೆಂದು ದಾವಾ ಹೂಡಿರುವುದಾಗಿ ವರದಿಯಾಗಿದೆ.

ಕೊರಿಯಾದಲ್ಲಿ ಅಮೆರಿಕದ ಸೈನಿಕರ ದಂಗೆಯೆ?

ಕೊರಿಯಾದಲ್ಲಿ ಯುದ್ಧ ಮಾಡುತ್ತಿರುವ ಅಮೆರಿಕದ ಸೈನ್ಯಗಳ ಸೈನಿಕ ದಂಗೆಯೆದ್ದಿರುವ ಕಾರಣಕ್ಕಾಗಿ ೫೦ ಜನ ಸೈನಿಕರನ್ನು ಜನರಲ್ ಮೆಕಾರ್ಥರು ಗುಂಡು ಹೊಡೆದು ಕೊಲ್ಲಬೇಕೆಂದು ಆಜ್ಞೆ ಮಾಡಿರುವುದಾಗಿ ರಷ್ಯದ ಸರ್ಕಾರಿ ಪತ್ರಿಕೆ ಇಜ್‌ವೆಸ್ತಿಯಾ ತಿಳಿಸಿದೆ.

ಬೆಲೆ ಇಳಿಸಲು ವರ್ತಕರ ಪ್ರತಿಜ್ಞೆ

ಬೆಂಗಳೂರು ವರ್ತಕರ ಸಂಘದವರು ಅತ್ಯವಶ್ಯಕ ಪದಾರ್ಥಗಳ ಬೆಲೆಯನ್ನು ಇಳಿಸಲು ತಮ್ಮ ಶಕ್ತಿಯಿರುವ ಪ್ರಯತ್ನವನ್ನು ಮಾಡಲು ಈಚೆಗೆ ನಡೆದ ಅವರ ಸಭೆಯಲ್ಲಿ ಪ್ರತಿಜ್ಞೆ ಮಾಡಿರುತ್ತಾರೆ.

ಅಖಿಲ ಭಾರತ ಗೃಹ ನಿರ್ಮಾಣ ಕಾಂಗ್ರೆಸ್ ಸಭೆ

ಬರುವ ತಿಂಗಳು ೨೯ ಮತ್ತು ೩೦ನೇ ತಾರೀಖುಗಳಲ್ಲಿ ಅಖಿಲ ಭಾರತ ಗೃಹ ನಿರ್ಮಾಣ ಕಾಂಗ್ರೆಸ್ಸಿನ ಸಮ್ಮೇಳನವು ಬೆಂಗಳೂರಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಇಂಡಿಯಾದವರ ಆಶ್ರಯದಲ್ಲಿ ನಡೆಯುವುದು. ಸಮ್ಮೇಳನದ ಪ್ರಾರಂಭೋತ್ಸವವನ್ನು ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಎನ್. ವಿ. ಗಾಡ್ಗೀಳರವರು ನೆರವೇರಿಸುವರೆಂದು ಗೊತ್ತಾಗಿದೆ.

ಬೆಂಗಳೂರು ಪ್ರಾಂತದ ಒಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ರಾಮಸಿಂಗ್‌ರವರನ್ನು ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಬಂಧಿಸಲಾಗಿದೆ.

ಕೇಂದ್ರ ಗೃಹ ನಿರ್ಮಾಣ ಸಂಘದ ಸ್ಥಾಪನೆ

ಬೆಂಗಳೂರು ೨೩.

ಸಂಸ್ಥಾನದಲ್ಲಿನ ಅವಶ್ಯಕವಾಗಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕವಾಗಿ ಆಗಿರುವ ವಿವಿಧ ಮಾದರಿಯ ಮನೆಗಳನ್ನು ನಿರ್ಮಿಸುವ ಸಲುವಾಗಿ ಒಂದು ಕೇಂದ್ರ ಗೃಹ ನಿರ್ಮಾಣ ಸಂಘವನ್ನು ಸ್ಥಾಪಿಸಲು ಕೇಂದ್ರ ಬ್ಯಾಂಕಿನ ಆಡಳಿತ ವರ್ಗದವರು ಬ್ಯಾಂಕಿನ ಸಭೆಯಲ್ಲಿ ನಿರ್ಧಾರ ಮಾಡಿರುವ. ಗೃಹ ಸಚಿವ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಸ್ವಾತಂತ್ರ್ಯೋತ್ಸವದಂದು ಶಾಂತಿ ಘೋಷಣೆಗೆ ಬೆಂಗಳೂರು ಪ್ರಮುಖರ ರುಜು

ಕಳೆದ ದಿನಗಳ ೧೫ನೇ ಸ್ವಾತಂತ್ರ್ಯೋತ್ಸವದಲ್ಲಿ ನಡೆದ ವಿಶ್ವ ಶಾಂತಿ ಸಮ್ಮೇಳನದಲ್ಲಿ ಅಣು ಬಾಂಬನ್ನು ಬಹಿಷ್ಕರಿಸಬೇಕು, ಅಣು ಶಕ್ತಿಯನ್ನು ಅಂತರರಾಷ್ಟ್ರೀಯ ಹತೋಟಿಗೊಳಪಡಿಸಬೇಕು ಮತ್ತು ಬಾಂಬನ್ನು ಪ್ರಯೋಗಿಸುವ ರಾಷ್ಟ್ರವನ್ನು ಯುದ್ಧ ಪಾತಕಿಯೆಂದು ಸಾರಬೇಕು—ಎಂದು ಘೋಷಿಸಿ ಹೊರಡಿಸಿರುವ ಪ್ರಕಟಣೆಗೆ ಸಂಸ್ಥಾನದ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯ, ಶ್ರೀಗಳಾದ ಕೆ. ಹನುಮಂತಯ್ಯ, ಪ್ರೊ|| ಜೋಸೆಫ್, ಟಿ. ಟಿ. ಶರ್ಮ ಮೊದಲಾದ ಮೂರು ಸಾವಿರ ಗಣ್ಯ ವ್ಯಕ್ತಿಗಳು ಘೋಷಣೆಗೆ ರುಜು ಹಾಕಿದ್ದಾರೆ.

ಸುಪ್ರೀಂ ಕೋರ್ಟಿಗೆ ಮದ್ರಾಸ್ ಸರ್ಕಾರದ ಅಪೀಲು

ಮದ್ರಾಸು ಹೈಕೋರ್ಟಿನವರು ಅಲ್ಲಿ ಜಾರಿಯಲ್ಲಿರುವ ಕೋಮುವಾರು ಜಿ. ಒ. ಶಾಸನಬದ್ಧವಲ್ಲವೆಂದು ಕೊಟ್ಟಿರುವ ತೀರ್ಪಿನ ಮೇಲೆ ಮದ್ರಾಸು ಸರ್ಕಾರದವರು ಸುಪ್ರೀಂ ಕೋರ್ಟಿಗೆ ಅಪೀಲನ್ನು ದಾಖಲು ಮಾಡಿರುತ್ತಾರೆ.

ಓಡುತ್ತಿದ್ದ ರೈಲಿನಿಂದ ೧,೩೦,೦೦೦ ರೂ. ಕಳುವು

ಕಳೆದ ೧೧ನೇ ತಾರೀಖು ಮತ್ತು ಹೌರಾ ಸ್ಟೇಷನ್ನುಗಳ ಮಧ್ಯೆ ಹೋಗುತ್ತಿದ್ದ ರೈಲಿನಲ್ಲಿದ್ದ ೧,೩೦,೦೦೦ ರೂ ಬೆಲೆ ಬಾಳುವ ಚಿನ್ನದ ಗಟ್ಟಿಗಳ ನೆಟ್ಟಿಗೆಯನ್ನು ಯಾರೋ ಅಪಹರಿಸಿದ ವರದಿ ಬಂದಿದೆ. ಧನಬಾದ್ ರೈಲ್ವೆ ನಿಲ್ದಾಣದಲ್ಲಿ ಗಾರ್ಡನು ರಂಗಸ್ವಾಮಿಯನ್ನು ಪೊಲೀಸರಿಗೆ ಒಪ್ಪಿಸಿದನೆಂದೂ, ಅವನನ್ನು ಬಂಧಿಸಲಾಗಿದೆಯೆಂದೂ ವರದಿಯಾಗಿದೆ.

ಕಾಶ್ಮೀರ ಸಂಧಾನದ ಭಗ್ನಕ್ಕೆ ಭಾರತದ ಮೇಲ ಆರೋಪ

ಕಾಶ್ಮೀರದ ಸಂಧಾನಕ್ಕಾಗಿ ಓವೆನ್ ಡಿಕ್ಸನ್ನರು ಮಾಡಿದ ಪ್ರಯತ್ನವು ವಿಫಲವಾದುದಕ್ಕೆ ಭಾರತ ಕಾರಣವೆಂದು ಲಿಯಾಕತ್ ಅಲಿಖಾನರು ತಿಳಿಸಿರುತ್ತಾರೆ. ಕಾಶ್ಮೀರದ ವಿಷಯವು ನ್ಯಾಯವಾಗಿ ಇತ್ಯರ್ಥವಾಗದಿದ್ದರೆ ಭಾರತ ಮತ್ತು ಪಾಕಿಸ್ತಾನಗಳಿಗೆ ವಿವಾದ ಶಾಂತಿಯುಂಟಾಗುವುದಿಲ್ಲವೆಂದೂ ಕಾಶ್ಮೀರದಲ್ಲಿ ಜನ ಮತಗಣನೆಗೆ ಭಾರತವು ಸಿದ್ಧವಾಗಿಲ್ಲವೆಂದು ಕಾಣಬರುತ್ತಿರುವುದೆಂದೂ ಅವರು ಅಭಿಪ್ರಾಯಪಟ್ಟಿರುವರು.

ಪ್ರದೋಷ ಸಂಗೀತ

ಗಾನ ವಿಹಾರದ ಆಶ್ರಯದಲ್ಲಿ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ವಿದ್ವಾನ್ ಚೊಕ್ಕಸ್ವಾಮಿಯವರ ಸಂಗೀತವು ವಿದ್ವಾನ್ ಸಿದ್ದರಾಮಯ್ಯನವರ ಪಿಟೀಲು ಮತ್ತು ವಿದ್ವಾನ್ ಅನಂತಸ್ವಾಮಿಯವರ ಮೃದಂಗದೊಡನೆ ನಡೆಯುವುದು.

ಪಾಕಿಸ್ತಾನ-ಆಫ್ಘಾನಗಡಿಯಲ್ಲಿ ಅಲೆಕ್ಸಾಂಡರ್ ವಂಶಸ್ಥರು

ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನ ಗಡಿಗಳಲ್ಲಿ ಭಾರತೀಯ ರಲ್ಲದ ಮತ್ತು ಗ್ರೀಕ್ ಭಾಷೆಯನ್ನು ಬಳಸುವ ಬಿಳಿಯ ವರ್ಣದವರು ಇರುವುದಾಗಿ ಪಾಕಿಸ್ತಾನ ಪ್ರಧಾನಿಯವರು ಕೊಟ್ಟ ವರದಿಯ ಆಧಾರದ ಮೇಲೆ ಅಲ್ಲಿಗೆ ಒಬ್ಬ ಸಂಶೋಧನಾಧಿಕಾರಿಗಳನ್ನು ಗ್ರೀಕ್ ಸರ್ಕಾರದವರು ಕಳುಹಿಸುವರು. ಕ್ರಿಸ್ತಪೂರ್ವ ೩೩೦ರಲ್ಲಿ ಸ್ವದೇಶಕ್ಕೆ ಹಿಂತಿರುಗಿದ ಅಲೆಕ್ಸಾಂಡರನ ಸೈನಿಕರ ಪೈಕಿ ವಾಪಸು ಹೋಗದೇ ಉಳಿದವರ ವಂಶಸ್ಥರಿವರೆಂದು ಹೇಳಲಾಗಿದೆ.

ಅಸ್ಸಾಂ ಭೂಕಂಪದಿಂದ ೨೦೦ ಜನರ ಮರಣ

ಅಸ್ಸಾಮಿನಲ್ಲಾದ ಭೂಕಂಪದಿಂದ ೨೦೦ ಮಂದಿ ಮಡಿದಿರುವರೆಂದು ಅನಧಿಕಾರಯುತವಾಗಿ ತಿಳಿಸಲಾಗಿದೆ. ನೆನ್ನೆಯೂ ಸಹ ಅಲ್ಲಿ ಏಳು ಬಾರಿ ಸಣ್ಣವಾದ ಭೂಕಂಪಗಳಾದವು.

ಸರ್ ಓವೆನ್ ಡಿಕ್ಸನ್ನರ ನಿರ್ಗಮನ

ವಿಶ್ವ ಸಂಸ್ಥೆಯ ಕಾಶ್ಮೀರದ ಮಧ್ಯಸ್ಥಿಕೆಗಾರರಾದ ಸರ್ ಓವೆನ್ ಡಿಕ್ಸನ್ನರು ನೆನ್ನೆ ದಿನ ಕರಾಚಿಯಿಂದ ಲೇಕ್ ಸಕ್ಸೆಸ್ಸಿನ ಅಭಿಮುಖವಾಗಿ ಲಂಡನ್ನಿಗೆ ವಿಮಾನದೊಡನೆ ಪ್ರಯಾಣ ಹೊರಟರು.

ಅಮೆರಿಕದವರ ವೇಷದಲ್ಲಿ ರಷ್ಯದ ರಾಯಭಾರಿ

ಸ್ವೀಡನ್ನಿನಲ್ಲಿರುವ ರಷ್ಯದ ರಾಯಭಾರಿಗಳ ಮಿಲಿಟರಿ ಸಹಾಯಕರಾದ ಶ್ರೀ ಡಿಮಿಟ್ರಿ ಲಾರಿಚೆಲ್‌ರವರು ಅಮೆರಿಕನ್ನರ ವೇಷ ಧರಿಸಿ ಆ ದೇಶದ ಮಿಲಿಟರಿ ಪ್ರದೇಶಗಳ ಫೋಟೋ ತೆಗೆದುಕೊಂಡದು ಪತ್ತೆಯಾಗಿದೆ. ಅವುಗಳನ್ನು ವಾಪಸು ಕೊಡಲು ನಿರಾಕರಿಸಿರುತ್ತಾರೆ.

ಭಾರತದ ಆರೋಗ್ಯ ಇಲಾಖೆಗೆ ಉಪ ಸಚಿವರು

ಪಾರ್ಲಿಮೆಂಟಿನ ಸದಸ್ಯರಾಗಿರುವ ಶ್ರೀಮತಿ ದುರ್ಗಾ ಬಾಯಿಯವರನ್ನು ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಉಪ ಮಂತ್ರಿಯನ್ನಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ. ಆಹಾರದ ಇಲಾಖೆಗೆ ಶ್ರೀ ಎ ತಿರುಮಲ ರಾಯರನ್ನು ಉಪ ಸಚಿವರನ್ನಾಗಿ ನೇಮಿಸಲಾಗಿದೆ.

○ ತುಮಕೂರು ಜಿಲ್ಲೆಯ ದ ಶ್ರೀ ಮುದ್ದ ರಾಮಯ್ಯನವರ ಶಾಸನ ಸಭೆಗೆ ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ.

ಮದ್ರಾಸಿನಲ್ಲಿ ತೂಕದ ಮೇಲೆ ಧಾನ್ಯದ ಮಾರಾಟ

ಮದ್ರಾಸು ಪ್ರಾಂತದಲ್ಲಿ ಚಿಲ್ಲರೆ ಬೆಲೆಯ ಆಹಾರ ಧಾನ್ಯಗಳೆಲ್ಲವನ್ನೂ ತೂಕ ಮಾಡಿ ಕೊಡಬೇಕೆಂದು ಅಲ್ಲಿನ ಸರ್ಕಾರದವರು ವಿಧಾಯಕ ಮಾಡಿರುತ್ತಾರೆ. ಈ ಹೊಸ ಪದ್ಧತಿಯು ಬರುವ ತಿಂಗಳು ೩ನೇ ತಾ|| ನಿಂದ ಜಾರಿಗೆ ಬರುವುದು.

ಪಿಕೆಟಿಂಗ್ ಮಾಡಲು ಆಂಧ್ರ ಕಾಂಗ್ರೆಸ್ ನಿರ್ಧಾರ

ಕಾಳಸಂತೆಯನ್ನು ಮಟ್ಟ ಹಾಕಲು ಅಂಗಡಿಗಳ ಮುಂದೆ ಶಾಂತಿಯುತವಾದ ಪಿಕೆಟಿಂಗ್ ನಡೆಸಲು ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿಯವರು ನಿರ್ಧರಿಸಿರುತ್ತಾರೆ.

ಭಾರತಕ್ಕೆ ಈಜಿಪ್ಟ್ ಮತ್ತು ಇಟಲಿಯ ಅಕ್ಕಿ

ಈಜಿಪ್ಟ್ ಮತ್ತು ಇಟಲಿಗಳಿಂದ ಅಕ್ಕಿ ಮತ್ತು ಇತರ ಆಹಾರ ಪದಾರ್ಥಗಳನ್ನು ಭಾರತವು ತರಿಸುವ ಏರ್ಪಾಡು ಆಗುತ್ತಿದೆ. ಈ ಯೋಜನೆಯನ್ನೂ ಪತ್ರ ವ್ಯವಹಾರದ ಹದದಲ್ಲೇ ಇದೆ.

ವಸ್ತು ಪ್ರದರ್ಶನದಲ್ಲಿ ಮಕ್ಕಳಿಗಾಗಿ ವಿರಾಮ ಗೃಹ

ಪ್ರತಿ ವರ್ಷವೂ ನಡೆಯುವ ದಸರಾ ವಸ್ತು ಪ್ರದರ್ಶನಕ್ಕೆ ಬರಲಿರುವ ಅನೇಕ ಪ್ರೇಕ್ಷಕರ ಪೈಕಿ ಬರುವಂಥ ಸ್ತ್ರೀಯರೂ ಇರುವರು. ಅವರೊಡನೆ ಸಣ್ಣ ಸಣ್ಣ ಮಕ್ಕಳು ಬರುವುವು. ಮಕ್ಕಳನ್ನು ಮನೆಗಳಲ್ಲಿ ಬಿಟ್ಟು ಬರಲು ಹೆಂಗಸರು ಅವುಗಳನ್ನು ಕರೆತರುವರು. ಮಕ್ಕಳನ್ನು ಎತ್ತಿಕೊಂಡು ಸ್ಟಾಲುಗಳನ್ನು ನೋಡುವುದರಲ್ಲಿ ಸ್ತ್ರೀಯರಿಗೆ ತುಂಬಾ ಆಯಾಸವಾಗುವುದಲ್ಲದೆ, ಗಂಡಸರಿಗೂ ಇದರಿಂದ ತುಂಬಾ ತೊಂದರೆಯಾಗುತ್ತದೆ. ಇದನ್ನು ತಪ್ಪಿಸಲು ವಸ್ತು ಪ್ರದರ್ಶನ ಸಮಿತಿಯವರು ಒಂದು ಮಕ್ಕಳ ಇರುವ ಗೃಹವನ್ನು ಏರ್ಪಡಿಸಿ, ಬಿಟ್ಟು ಹೋಗುವ ಮಕ್ಕಳನ್ನು ನೋಡಿಕೊಳ್ಳುವವರನ್ನು ನೇಮಿಸಿ, ಹಾಲು, ಹಣ್ಣು ಬಿಸ್ಕತ್ತುಗಳನ್ನು ಕೊಟ್ಟು ಅವುಗಳಿಗೆ ಹರ್ಷವನ್ನು ಮಾಡಿದರೆ ತಂದೆ ತಾಯಿಗಳಿಗೆ ಉಪಕಾರವಾಗುವುದು. ಹೀಗೆಲ್ಲಾ ಮಾಡಿದರೆ ಏನೆಲ್ಲಾ ನೋಡುವುದರ ಬದಲು ತಂದೆ ತಾಯಿಗಳು ಕೆಲವೇ ಗಂಟೆಗಳಲ್ಲಿ ಪ್ರದರ್ಶನವನ್ನು ನೋಡಿ ಹೋಗಲು ಅನುಕೂಲವಾಗುವುದು- ಎಂದು ಶ್ರೀ ಜಿ. ಎಂ. ನಾಯುಡುರವರು ತಿಳಿಸುತ್ತಾರೆ.

SRI GAYATHRI TALKIES

From 25-8-50 : Daily 3 Shows

Universal International Pictures

- BAGDAD -

(In Technicolor)

Lips against lips Sword against sword in the World's Fabulous city of Sin

Starring -Maureen O' Hara Paul Christian Vincent Price

ರಾಜಕಮಲ್, ಮೈಸೂರು

25-8-50ರಿಂದ ದಿನವಹಿ 3 ಆಟಗಳು

ಬೆಂಗಾಲ್ ನ್ಯಾಷನಲ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ

ಏಕ್ ಔರತ್

ಪಾತ್ರ - ನಾರಂಗ್, ಸುಂದರ್, ಸ್ಮೃತಿ ಮುಂತಾದವರ

-: ಬೆಳಗಿನ ಪ್ರದರ್ಶನ :-

25-8-50ರಿಂದ 3 ದಿನಗಳು

ರೂಪ್ ನಗರ್

(ಹಿಂದಿ)

ಭೂಮಿಕೆ - ಜಯಂತ್, ರಾಜಾರಾಣಿ

ರಣಜಿತ್ ★ ಯಶಸ್ವೀ 3ನೇ ವಾರ ದಿನವಹಿ 3 ಆಟಗಳು

ಇದುವರೆಗೂ ನೋಡದಿದ್ದರೆ ಈ ದಿನವೇ ನೋಡಿ (ತೆಲುಗು)

- ಜೀವಿತಂ -

25-8-50ರಿಂದ ಬೆಳಗಿನ ಪ್ರದರ್ಶನ 3 ದಿನಗಳು ಮಾತ್ರ

ಏಕ್ ರಾತ್ - EK-RAAT

ಪಾತ್ರ,- ಶೀಲಾ, ಕೃಷ್ಣಕಾಂತ್

ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

23-8-50ನೇ ಬುಧವಾರದಿಂದ

ಮಾಯಾ ಲೋಕಂ

(ತೆಲುಗು)

ಪಾತ್ರ:- ಕನ್ನಾಂಬಾ, ಶಾಂತ ಕುಮಾರಿ, ರಾಜಮ್ಮ, ಸಿ. ಎಸ್. ಆರ್., ಡಾ|| ಸುಬ್ಬರಾವ್, ನಾಗೇಶ್ವರರಾವ್

ಮೈಸೂರು ರೇಷನಿಂಗ್ ಅಧಿಕಾರಿಯ ಕಛೇರಿ

ಮೈಸೂರು 20-8-1950

ನೋಟಿಫಿಕೇಷನ್

ಉಪಾಕರ್ಮದ ಪ್ರಯುಕ್ತ ಮೈಸೂರು ನಗರದ ಎಲ್ಲ ರೇಷನ್ ಡಿಪೋಗಳ ವ್ಯವಹಾರವನ್ನು 26-8-50ನೇ ಶನಿವಾರ ಬೆಳಿಗ್ಗೆ ನಿಲ್ಲಿಸಲಾಗುವುದೆಂದೂ, ಆ ದಿನ ಮಧ್ಯಾಹ್ನ ಮಾಮೂಲು ಪ್ರಕಾರ ಅವುಗಳು ತೆರೆದಿರುವುವೆಂದೂ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಅಧಿಕಾರಿ
ಮೈಸೂರು ಸಿಟಿ

Latest & up to date

C T C PUBLICATIONS

by

Sri D V Venkatasubbiah M Sc

CHEMISTRY 1-12 0

Answers to TEN question papers of the Int Exams Including Mar h1950

METALS 1 2 0

A most useful guide to Inter & B Sc Exams

Please enquire Your Book seller or
C T C PUBLICATIONS
Vanivilas Road, Mysore

ಒಲಂಪಿಯಾ

25-8-50ರಿಂದ ಅನಭೂತ 2ನೇ ವಾರ

ದಿನವಹಿ 3 ಆಟಗಳು

ಹಿಂದ್ ಪಿಕ್ಚರ್ಸ್‌ರವರ

ಆ ಬೀ ದಾ

ಪಾತ್ರ - ಸ್ವರ್ಣಲತಾ, ಮಹೀಪಾಲ್ ಮತ್ತು ನಜೀರ್

ಇದರೊಡನೆ ಕಳೆದ ಗುರುವಾರ ಕರಾಚಿಯಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆ ಚಿತ್ರವನ್ನೂ ತೋರಿಸಲಾಗುವುದು

ಬೆಳಗಿನ ಪ್ರದರ್ಶನ 25 8 50ರಿಂದ

ಫೆಡರಲ್ ಆಪರೇಟರ್ ನಂ. 99

15 ಭಾಗಗಳ ಹೊಸ ಸೀರಿಯಲ್

Edited, printed and published by A R Nagarajan, at Sadhvi Press D Subbiah Road, Mysore

ಮಕ್ಕಳು, ಮಕ್ಕಳ, ಮಕ್ಕಳಿಗೆ ಬೇಕಾದ ಛತ್ರಿಗಳು

ಮಕ್ಕಳಿಗೆ ಹೊದಿಸುವ ಬೇಬಿ ರಗ್ಗು, ಮಕ್ಕಳ ಹಾಸಿಗೆಗೆ ಹಾಸುವ ರಬ್ಬರ್ ಷೀಟು, ಮಕ್ಕಳ ತೊಟ್ಟಿಲಿಗೆ ಕಟ್ಟುವ ಸೊಳ್ಳೆಪರದೆ ಮಕ್ಕಳಿಗೋಸ್ಕರ ಮಾಡಿರುವ ಮೃದುವಾದ ಟವಲು, ಇವೆಲ್ಲಾ ಜಾಮದಾರ್ ಕಂಪೆನಿಯಲ್ಲಿ ಸಿಗುತ್ತವೆ- ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಶುಕ್ರವಾರ ೨೫-೮-೫೦ [ಸಂಚಿಕೆ ೨೦

ಪಾಕಿಸ್ತಾನ ಪ್ರಧಾನಿಗೆ ನೆಹರೂ ಪ್ರತ್ಯುತ್ತರ

ಅಸ್ಸಾಮಿನಲ್ಲಿ ಭೂಕಂಪದ ಘೋರ ದೃಶ್ಯಗಳು

ಮಿತಿಮೀರಿದ ಪ್ರವಾಹದಲ್ಲಿ ಶವಗಳು ತೇಲುತ್ತಿವೆ

ಭೂಕಂಪ ಮತ್ತು ಪ್ರವಾಹಗಳ ದಾಳಿಯ ದುಷ್ಪರಿಣಾಮದಿಂದ ಅಸ್ಸಾಂ ಪ್ರಾಂತ್ಯವು ಇನ್ನೂ ಮುಕ್ತವಾಗಿಲ್ಲ. ಮೊನ್ನೆ ದಿನ ಬೆಳಗ್ಗೆ ಅಲ್ಲಿನ ಜೋರಹಾಟ್ ಎಂಬಲ್ಲಿ ಸಾಲ್ಪ ಬಾರಿಯೂ, ಅದೇ ಸಂಜೆ ಮತ್ತೊಂದು ಬಾರಿಯೂ ಭೂಕಂಪಗಳು ಸಂಭವಿಸಿದುವು. ಆ ಪ್ರದೇಶಗಳಲ್ಲಿ ವಿಮಾನಗಳ ಮೂಲಕ ಸಂಚರಿಸಿ ಹಿಂತಿರುಗಿದವರು ಅಲ್ಲಿನ ಘೋರ ದೃಶ್ಯಗಳನ್ನು ವರದಿ ಮಾಡಿರುವರು. ಭೂಕಂಪದಿಂದ ಲಕ್ಷಾಂತರ ಜನರು ನಿರಾಶ್ರಿತರಾಗಿರುವರಲ್ಲದೆ, ಪ್ರವಾಹದ ಅಟ್ಟಹಾಸಕ್ಕೀಡಾದ ಜನರು ಮುಂದಿನ ತೀರದಲ್ಲಿ ತೇಲುವ ಬಾಳೆಯ ಗಿಡದ ದಿಂಡುಗಳನ್ನು ಹಿಡಿದು ಅವುಗಳ ಮೇಲೆ ಕುಳಿತು ಅವರ ದೇಹವನ್ನು ತೇಲಿಸಿಕೊಂಡು ಉಳಿದುಕೊಳ್ಳಲು ನೋಡುತ್ತಿರುವರು. ಸಾಧ್ಯವಾದೆಡೆಗಳಲ್ಲಿ ಅವರಿಗೆ ವಿಮಾನಗಳ ಮೂಲಕ ಆಹಾರವನ್ನೊದಗಿಸಲಾಗುತ್ತಿದೆ. ಬ್ರಹ್ಮಪುತ್ರ ಮತ್ತು ಇತರ ಉಪನದಿಗಳಲ್ಲಿ ಪ್ರವಾಹವು ಉಕ್ಕಿ ಹರಿಯುತ್ತಿರುವುದೆಂದೂ, ನದಿ ಪ್ರವಾಹದಲ್ಲಿ ಎರಡು ಆನೆಗಳ ಶವಗಳು ಕೊಚ್ಚಿಕೊಂಡು ಹೋದುವೆಂದೂ, ಜಾನುವಾರುಗಳೂ ಮತ್ತು ಇತರ ಪ್ರಾಣಿಗಳೂ ಬಹುವಾಗಿ ನಷ್ಟವೆಂದೂ ತಿಳಿದುಬಂದಿದೆ.

ಕೊರಿಯಾ ರಣರಂಗದಲ್ಲಿ ಚರ್ಚಿಲ್ಲರ ಮಗನಿಗೆ ಗಾಯ

ಬ್ರಿಟನ್ನಿನ ಮಾಜಿ ಪ್ರಧಾನಿಗಳಾದ ವಿನ್‌ಸ್ಟನ್ ಚರ್ಚಿಲರ ಪುತ್ರ ರ್‍ಯಾಂಡಾಲ್ಫ್ ಚರ್ಚಿಲರು ಲಂಡನ್ನಿನ ಡೈಲಿ ಟೆಲಿಗ್ರಾಫ್ ಪತ್ರಿಕೆಯ ವರದಿಗಾರರಾಗಿ ಕೊರಿಯಾದ ರಣರಂಗದಲ್ಲಿ ಸುದ್ದಿ ಸಂಗ್ರಹಿಸಲು ಅಮೆರಿಕದ ಪಡೆಗಳೊಡನೆ ಹೋಗುತ್ತಿದ್ದಾಗ ಮೊನ್ನೆ ದಿನ ಅವರ ಬಲಗಾಲಿಗೆ ಮಾರ್ಟರ್ ಫೈರ್ ಆಘಾತದಿಂದ ತೀವ್ರ ಗಾಯವಾಗಿದೆಯೆಂದು ವರದಿಯಾಗಿದೆ.

ಲಾರಿ ಅಪಘಾತದಿಂದ ಮೂವರ ಮರಣ

ಹೊಸಹಳ್ಳಿಯಿಂದ ೮ ಮೈಲಿ ದೂರದಲ್ಲಿ ಕಲ್ಲೂರು ಬಳಿ ಮೈಸೂರು ರಸ್ತೆಯಲ್ಲಿ ಕಟ್ಟೆ ಮುಳಬಾಗಿಲಿಯಿಂದ ರಾಜಧಾನಿಗೆ ಬರುತ್ತಿದ್ದ ಹುಣಸೂರಿನ ವ್ಯಾಪಾರಿಗಳೊಬ್ಬರ ತೆಂಗಿನಕಾಯಿ ತುಂಬಿದ್ದ ಲಾರಿಯು ನೆನ್ನೆ ಮಧ್ಯಾಹ್ನ ಮರಕ್ಕೆ ಢಿಕ್ಕಿ ಹೊಡೆದುದರಿಂದ ಅದು ತಲೆಕೆಳಗಾಗಿ ಬಿದ್ದು ಸ್ಥಳದಲ್ಲೇ ಇಬ್ಬರು ಸತ್ತರೆಂದೂ ಲಾರಿಗೆ ಸಂಬಂಧಪಟ್ಟವನೊಬ್ಬನು ಸತ್ತನೆಂದೂ ಹೇಳಲಾಗಿದೆ. ಡ್ರೈವರನನ್ನೂ ಕ್ಲೀನರನನ್ನೂ ಬಂಧಿಸಲಾಗಿದೆ. ಎದುರಿಗೆ ಗಾಡಿಯೊಂದು ಬರುತ್ತಿದ್ದುದನ್ನು ತಪ್ಪಿಸಲು ಹೋಗಿ ಲಾರಿ ಅಪಘಾತಕ್ಕೀಡಾಯಿತೆಂದು ಹೇಳಲಾಗಿದೆ.

೩೦ ಹೊಸ ವಯಸ್ಕರ ಶಾಲೆಗಳು

ಮೈಸೂರು ತಾಲ್ಲೂಕಿನಲ್ಲಿ ಈ ವರ್ಷ ೩೦ ವಯಸ್ಕರ ಶಿಕ್ಷಣ ಶಾಲೆಗಳನ್ನು ಹೊಸದಾಗಿ ತೆರೆಯಲು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು. ಜಿಲ್ಲಾಧಿಕಾರಿಗಳಾದ ಜನಾಬ್ ಮಹಮದ್ ಅಹಮದ್‌ರವರು ಅಧ್ಯಕ್ಷತೆ ವಹಿಸಿದ್ದರು. ಅಲ್ಲದೆ ತಾಲ್ಲೂಕಿಗೆ ೨೦ಕ್ಕೆ ಹೆಚ್ಚು ಪುಸ್ತಕ ಭಂಡಾರಗಳನ್ನು ತೆರೆಯಲು ಸಹ ತೀರ್ಮಾನಿಸಲಾಯಿತು.

ಯಜುರ್ವೇದ ಉಪಾಕರ್ಮ

ಮೈಸೂರು ೨೫

ಇದೇ ೨೭ನೇ ತಾರೀಖು ಭಾನುವಾರ ಬೆಳಗ್ಗೆ ೯॥ ಗಂಟೆಗೆ ೩ ಸುಬ್ಬರಾಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯ ಕಟ್ಟಡದಲ್ಲಿ ವೇದರಕ್ಷಣ ಸಭೆಯವರು ನೇರವಾದ ಯಜ್ಞೋಪವೀತ ಧಾರಣೆಯ ಯಜುರ್ವೇದೋಪಾಕರ್ಮವನ್ನು ನಡೆಸುವರು. ಇದರಲ್ಲಿ ಭಾಗವಹಿಸುವವರೆಲ್ಲರೂ ಕಾಲಕ್ಕೆ ಸರಿಯಾಗಿ ಬರಬೇಕೆಂದು ಕೋರಲಾಗಿದೆ.

ಕಾಳಸಂತೆ ಕೋರರ ಬಂಧನಕ್ಕೆ ಆರ್ಡಿನೆನ್ಸ್

ಪದಾರ್ಥಗಳ ಬೆಲೆಯು ಏರುತ್ತಿರುವುದನ್ನು ತಪ್ಪಿಸಲು, ಅದರಲ್ಲಿ ನಿರತರಾದ ಕಾಳಸಂತೆಕೋರರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲು ಸರ್ಕಾರಕ್ಕೆ ಅವಕಾಶವೊದಗಿಸುವ ಒಂದು ಆರ್ಡಿನೆನ್ಸನ್ನು ಈ ವಾರಾಂತ್ಯದಲ್ಲಿ ಭಾರತ ಸರ್ಕಾರದವರು ಹೊರಡಿಸುವರು. ಈ ಬಗ್ಗೆ ದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಚರ್ಚೆಯಾಗಿತ್ತು.

ಡಾಕ್ಟರ್ ಮೋದಿಯವರ ಉಚಿತ ನೇತ್ರ ಚಿಕಿತ್ಸೆ

ಕರ್ನಾಟಕದ ಸುಪ್ರಸಿದ್ಧ ವೈದ್ಯರಾದ ಡಾ॥ ಎಂ. ಸಿ. ಮೋದಿಯವರು ಬರುವ ತಿಂಗಳು ೫ ರಂದು ಉಚಿತ ನೇತ್ರ ವೈದ್ಯ ಚಿಕಿತ್ಸೆಯನ್ನು ಹುಬ್ಬಳ್ಳಿಯಲ್ಲಿ ನಡೆಸುವರು. ಜಗನ್ನಾಥರು ಗಾಂಧರ ಉಚಿತ ನೇತ್ರ ಚಿಕಿತ್ಸಾ ಎಂಬ ಆಶ್ರಯದಿಂದ ನಡೆಯುವ ಸಾಧಾರಣ ಚಿಕಿತ್ಸೆಯಲ್ಲಿ ಈ ಕಾರ್ಯವು ಅಂದಿನಿಂದ ಪ್ರಾರಂಭವಾಗುವುದು. ಎಲ್ಲ ವಿಧದ ಶಸ್ತ್ರ ಚಿಕಿತ್ಸೆ, ಮೋತಿ ಬಿಂದು, ಅಕ್ಷಿಪಟಲ, ತಿರುಗು ಗಣ್ಣು, ಮೆಳ್ಳಗಣ್ಣು ಇವುಗಳನ್ನು ನೆಟ್ಟಗೆ ಮಾಡಲಾಗುವುದು. ಚಿಕಿತ್ಸೆಗೆ ಒಳಗಾದವರು ೧೦ ದಿವಸಗಳವರೆಗೆ ಅಲ್ಲಿ ಇರಬೇಕು. ಬಡವರಿಗೆ ಮಾತ್ರ ಉಚಿತ ಊಟದ ವ್ಯವಸ್ಥೆಯಿರುತ್ತದೆ.

ಇಂದಿನಿಂದ ಪೆಟ್ರೋಲ್ ರೇಷನಿಂಗ್ ರದ್ದು

ಸಂಸ್ಥಾನದಲ್ಲಿ ಪೆಟ್ರೋಲ್ ರೇಷನಿಂಗ್ ಪದ್ಧತಿಯು ರದ್ದಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುತ್ತಾರೆ. ಈ ಬಗ್ಗೆ ಸರ್ಕಾರದ ತೀರ್ಮಾನವಾಗಿದೆ. ಇಂದಿನಿಂದ ಹೊಸ ಆಜ್ಞೆಯು ಜಾರಿಗೆ ಬರುವುದು.

ಹಿಂದಿಯನ್ನೇ ಎಲ್ಲಾ ಕಡೆ ಬಳಸುವಂತಾಗಬೇಕು

ಆಂಗ್ಲೋ ಇಂಡಿಯನ್ನರ ಸಮ್ಮೇಳನದಲ್ಲಿ ಫ್ರಾಂಕ್ ಆಂತೋಣಿ ಭಾಷಣ

ಸ್ವಂ ಸು ಪ್ರೋ] ಬೆಂಗಳೂರು ೨೫

ಭಾರತದಲ್ಲಿರುವ ಆಂಗ್ಲೋ ಇಂಡಿಯನ್ನರ ಪ್ರತಿನಿಧಿಗಳ ಹತ್ತೊಂದನೆಯ ಅಧಿವೇಶನವು ಈ ದಿನ ಮೇಯೊ ಹಾಲಿನಲ್ಲಿ ಪಾರ್ಲಿಮೆಂಟಿನ ಸದಸ್ಯರಾದ ಫ್ರಾಂಕ್ ಆಂತೋಣಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾ ಸಚಿವರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅಧ್ಯಕ್ಷರು ಭಾಷಣ ಮಾಡಿ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಆಂಗ್ಲೋ ಇಂಡಿಯನ್ನರ ಕಾಲಕ್ಕೆ ತಕ್ಕಂತೆ ಪರಿವರ್ತನೆ ಹೊಂದಬೇಕೆಂದು ತಿಳಿಸಿ, ಕೇಂದ್ರ ಸರ್ಕಾರದವರು ಕೊಡುತ್ತಿರುವಂತೆ ಆಂಗ್ಲೋ ಇಂಡಿಯನ್ನರ ವಿದ್ಯಾ ಸವಲತ್ತುಗಳನ್ನು ಪ್ರತಿಯೊಂದು ಸಂಸ್ಥಾನದಲ್ಲೂ ಸ್ವೀಕರಿಸಬೇಕೆಂದು ತಿಳಿಸಿದರು. ಹಿಂದಿ ಭಾಷೆಯನ್ನು ಎಲ್ಲರೂ ಒಳ್ಳೆ ವಂತಿಕೆಯಿಂದ ಕಲಿಯಬೇಕೆಂದೂ ಅವರು ಸೂಚಿಸಿದರು.

ಗ್ವಾಲಿಯರ್ ವಿಚಾರಣೆ ಅಧಿಕಾರಿಗೆ ನೋಟೀಸು

ಗ್ವಾಲಿಯರ್‌ನಲ್ಲಿ ವಿದ್ಯಾರ್ಥಿಗಳ ಮತ್ತು ಜನರ ಮೇಲೆ ಪೋಲೀಸರು ಗುಂಡು ಹಾರಿಸಿದ ಬಗ್ಗೆ ವಿಚಾರಣೆ ನಡೆಸಲು ಬಂದ ಕೇಂದ್ರ ಸರ್ಕಾರದ ವಿಚಾರಣಾಧಿಕಾರಿಯವರಿಗೆ ಗ್ವಾಲಿಯರಿನ ಮಧ್ಯಭಾರತದ ಹೈಕೋರ್ಟ್ ನೋಟೀಸು ಕೊಟ್ಟು ಹೀಗೆ ವಿಚಾರಣೆ ನಡೆಸಲು ಅವರಿಗೆ ಇರುವ ಅಧಿಕಾರ ಮತ್ತು ಉದ್ದೇಶದ ಬಗ್ಗೆ ಸಮಜಾಯಿಷಿ ಕೇಳಿರುತ್ತಾರೆ.

ಕಮ್ಯೂನಿಸ್ಟ್ ಪಕ್ಷಕ್ಕೆ ರಾಜೀನಾಮೆ

ರಾಜಧಾನಿಯ ಒಂದು ಲೋಕಲ್ ಸರ್ಕಲ್ಲಿನ ಸದಸ್ಯರಾದ ಶ್ರೀ ಕರ್ಪೂರರಾಯರು ಪತ್ರವೊಂದು ಬರೆದು "ಕಮ್ಯೂನಿಸ್ಟ್ ಪಾರ್ಟಿಯ ಇಂದಿನ ರೀತಿ ನೀತಿಗಳಲ್ಲಿ ನನಗೆ ಸಂಶಯ ಹುಟ್ಟಿದೆ. ನನ್ನೊಬ್ಬನ ಪಾರ್ಟಿಯ ನೀತಿಯನ್ನು ಒಪ್ಪಲು ಸಾಧ್ಯವೆಂಬ ನಂಬಿಕೆ ನನಗಿಲ್ಲ. ಆದ್ದರಿಂದ ನಾನು ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೇನೆ" ಎಂಬುದಾಗಿ ತಿಳಿಸಿದ್ದಾರೆ.

ಕಾಶ್ಮೀರದ ಭಗ್ನ ಸಂಧಾನಕ್ಕೆ ಪಾಕಿಸ್ತಾನ ಕಾರಣವೆಂದು ನೆಹರೂ

ಕಾಶ್ಮೀರದ ತೊಡಕಿಗೆಲ್ಲಾ ಪಾಕಿಸ್ತಾನವೇ ಕಾರಣವೆಂದು, ನೆನ್ನೆ ಪ್ರಧಾನಿ ನೆಹರೂರವರು ಪಾಕಿಸ್ತಾನ ಪ್ರಧಾನಿ ಲಿಯಾಕತ್ತರ ಪತ್ರಕ್ಕೆ ಉತ್ತರ ಕೊಡುತ್ತಾ ತಿಳಿಸಿದರು. ಸಂಧಾನ ಪ್ರಯತ್ನ ವಿಫಲಗೊಂಡರೂ, ಭಾರತವು ಮಿಲಿಟರಿ ಕಾರ್ಯಾಚರಣೆಯಲ್ಲಿ ತೊಡಗುವ ಉದ್ದೇಶ ಹೊಂದಿಲ್ಲವೆಂದೂ, ಆದರೆ ಭಾರತೀಯ ಸೈನ್ಯವು ಮತ್ತೊಂದು ಕಡೆಯಿಂದ ಆಕ್ರಮಣವಾದರೆ ಅದಿನ್ನ ರೀತಿಯೋ ಬೇರೆಯಾಗುವುದೆಂದೂ ಅವರು ಹೇಳಿದರು. ಮಧ್ಯಸ್ಥಿಕೆಗಾರರಾದ ಸರ್ ಓವೆನ್ ಡಿಕ್ಸನ್ನರು ಈಗಿನ ಕಾಶ್ಮೀರ ಸರ್ಕಾರದ ಅಧಿಕಾರವನ್ನು ವಿಶ್ವಸಂಸ್ಥೆಯ ಆಡಳಿತ ಮಂಡಳಿಗೆ ಒಪ್ಪಿಸಬೇಕೆಂದು ಸೂಚಿಸಿದ್ದರೆಂದೂ, ಭಾರತವು ಮಾತ್ರ ಕಾಶ್ಮೀರ ಸರ್ಕಾರದ ಗೌರವಕ್ಕೆ ಧಕ್ಕೆ ತರಲು ತಯಾರಿಲ್ಲವೆಂದೂ ತಿಳಿಸಿದರು.

ಅಜಾದ್ ಕಾಶ್ಮೀರ ಸರ್ಕಾರದ ನಾಯಕನ ಬಂಧನ ?

ಪಾಕಿಸ್ತಾನದಲ್ಲಿರುವ ಆಜಾದ್ ಕಾಶ್ಮೀರ ಸರ್ಕಾರಕ್ಕೆ ಸೇರಿದ ಪೂಂಛ್ ಎಂಬಲ್ಲಿ ಪ್ರಜೆಗಳಿಗೂ ಪಾಕಿಸ್ತಾನದ ಸೈನ್ಯಗಳಿಗೂ ಘರ್ಷಣೆಯಾಗಿ ಪ್ರಜೆಗಳು ಆಶ್ರಯಾರ್ಥವಾಗಿ ಭಾರತ ಕಾಶ್ಮೀರಕ್ಕೆ ವಲಸೆ ಹೋಗುತ್ತಿರುವರೆಂದು ವರದಿಯಾಗಿದೆ. ಆಜಾದ್ ಕಾಶ್ಮೀರ ಸರ್ಕಾರದ ಸ್ಥಾಪಕರಾದ ಸರ್ದಾರ್ ಇಬ್ರಾಹಿಂ ಖಾನರು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ದರಿಂದವರನ್ನು ಬಂಧಿಸಲಾಗಿದೆಯೆಂದು ಹೇಳಲಾಗಿದೆ. ಈಗ ಇಬ್ರಾಹಿಂ ಖಾನರು ಆಜಾದ್ ಕಾಶ್ಮೀರ ಪ್ರದೇಶವನ್ನು ಪಾಕಿಸ್ತಾನಕ್ಕೆ ಸೇರಿಸಕೂಡದೆಂದು ಪ್ರತಿಭಟಿಸುತ್ತಿರುವರೆಂದೂ ಗೊತ್ತಾಗಿದೆ.

ವಿಶ್ವ ಸಂಸ್ಥೆಗೆ ಕೆಂಪು ಚೀಣಾದ ಬಿನ್ನಹ

ಫಾರ್ಮೋಸಾದಿಂದ ಅಮೆರಿಕ ಸೇನೆಗಳು ವಾಪಸಾಗಬೇಕೆಂದು ಕೆಂಪು ಚೀಣವು ವಿಶ್ವ ಸಂಸ್ಥೆಗೆ ಒಂದು ಬಿನ್ನಹ ಮಾಡಿಕೊಂಡಿದೆ. ಇದನ್ನು ಭದ್ರತಾ ಸಮಿತಿಯ ಅಧ್ಯಕ್ಷರಾದ ಜೇಕಬ್ ಮಾಲಿಕ್‌ರವರು ನಾಳೆ ಸಭೆ ಸೇರಿದಾಗ ಪ್ರಸ್ತಾಪಿಸುವರೆಂದು ಹೇಳಲಾಗಿದೆ.

ಇಸ್ರೇಲ್ ಸರ್ಕಾರಕ್ಕೆ ಭಾರತದ ಮನ್ನಣೆ

ಇಸ್ರೇಲಿನಲ್ಲಿ ಸ್ಥಾಪಿಸಲಾಗಿರುವ ಯಹೂದ್ಯರ ಸರ್ಕಾರಕ್ಕೆ ಭಾರತವು ಮನ್ನಣೆ ಕೊಡಲು ನಿರ್ಧರಿಸಿರುವುದೆಂದೂ, ಸದ್ಯದಲ್ಲೇ ಆ ಬಗ್ಗೆ ಪ್ರಕಟಣೆಯು ಹೊರಬೀಳುವುದೆಂದೂ ಹೇಳಲಾಗಿದೆ.

ಮೆಡಿಕಲ್ ಕಾಲೇಜಿನ ರಜತೋತ್ಸವ

ಮೈಸೂರು ೨೫

೨೬ನೇ ತಿಂಗಳ ೮, ೯ ನೆ ತಾರೀಖುಗಳಲ್ಲಿ ನಡೆಯಲಿರುವ ಮೆಡಿಕಲ್ ಕಾಲೇಜಿನ ರಜತೋತ್ಸವದಲ್ಲಿ ಶ್ರೀ ಮನ್ಮಹಾರಾಜರು ಆರಂಭ ಭಾಷಣ ಮಾಡುವರೆಂದು ಗೊತ್ತಾಗಿದೆ.

ಫಾರ್ಮೋಸಾ ಧಾಳಿಯಿಲ್ಲವೆಂದು ಮಾವೊತ್ಸೆ ಭರವಸೆ

ವಿಶ್ವಸಂಸ್ಥೆಯ ಸೆಪ್ಟೆಂಬರ್ ತಿಂಗಳಿನ ಸಭೆಗಳು ನಡೆಯುವವರೆಗೂ ಫಾರ್ಮೋಸಾ ದ್ವೀಪದ ಮೇಲೆ ಬೀಳ ವುದಿಲ್ಲವೆಂದು ಕಮ್ಯೂನಿಸ್ಟ್ ಚೀಣದ ಅಧ್ಯಕ್ಷ ಮಾವೊತ್ಸೆ ಟುಂಗ್‌ರವರು ನೆಹರೂರವರಿಗೆ ಭರವಸೆ ಯಿತ್ತಿರುವುದಾಗಿ ಇಂಗ್ಲೆಂಡಿನ ಡೈಲಿ ಗ್ರಾಫಿಕ್ ಪತ್ರಿಕೆ ತಿಳಿಸಿದೆ

ಅಮೆರಿಕದ ಯುದ್ಧನೌಕೆಯ ಸಿಡಿತ

ಅಮೆರಿಕದ ಯುದ್ಧ ನೌಕಾಬಲಕ್ಕೆ ಸೇರಿದ ಡಿಸ್ಟ್ರಾಯರ್ ಹಡಗು ಉತ್ತರ ಕೊರಿಯಾ ತೀರದಲ್ಲಿ ಫಿರಂಗಿ ಪೂಡಕದಿಂದ ಸಿಡಿದುಹೋಯಿತೆಂದು ಹೇಳಲಾಗಿದೆ

ಕೊರಿಯಾ ಯುದ್ಧಕ್ಕೆ ಸಾವಿರ ಫ್ರೆಂಚ್ ಸೈನ್ಯ

ಕೊರಿಯಾ ಯುದ್ಧದಲ್ಲಿ ಭಾಗ ವಹಿಸಲು ಫ್ರೆಂಚ್ ಸರ್ಕಾರವು ಒಂದು ಸಾವಿರದವರೆಗೆ ಭೂ ಸೈನ್ಯವನ್ನು ಕಳುಹಿಸಲು ತೀರ್ಮಾನಿಸಿದೆ

ಮೈಸೂರು ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್

ಮೇಲ್ಕಂಡ ಸಂಘದ ವಾರ್ಷಿಕೋತ್ಸವವು ಈ ತಿಂಗಳು ೧೫ ರಲ್ಲಿ ಪುರಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು ಮೊನ್ನೆ ದಿನ ಸಾಯಂಕಾಲ ಶಾಲೆಯಲ್ಲಿ ಆ ಸಂಘದ 'ಅಭಿಮಾನಿಗಳ ಸಭೆ' ಯು ಶ್ರೀ ಎಂ ಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ನಿಯಮಾವಳಿಯು ರಚನೆಯಾಯಿತು ಶ್ರೀಗಳಾದ ಕೆ ಎಸ್ ನಾರಾಯಣಸ್ವಾಮಿ ಎಲ್ ಶ್ರೀಕಂಠಯ್ಯನವರುಗಳು ಕಾರ್ಯದರ್ಶಿಗಳಾಗಿಯೂ, ಜಿ ಹೆಚ್ ರಾಮರಾಯರು ಕೋಶಾಧಿಕಾರಿಗಳಾಗಿಯೂ ಚುನಾಯಿತರಾದರು ಮುಂದಿನ ೩ ತಿಂಗಳಿನ ಕಾರ್ಯಕ್ರಮವನ್ನು ಸಿದ್ಧಪಡಿಸಲು ಶ್ರೀಗಳಾದ ಎಂ ಭದ್ರಯ್ಯ, ಟಿ ಕೃಷ್ಣಮೂರ್ತಿ, ಎಸ್ ವಿ ಶ್ರೀನಿವಾಸರಾವ್, ಕೆ ಎಸ್ ನಾರಾಯಣಸ್ವಾಮಿ, ಎಲ್ ಶ್ರೀಕಂಠಯ್ಯ ಮತ್ತು ಜಿ ಹೆಚ್ ರಾಮರಾಯರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಲಾಯಿತು

ಬೊಂಬಾಯಿ ಮಂತ್ರಿಗಳಿಂದ ದಂತಧಾವನ ಚೂರ್ಣ

ಜಗತ್ತಿನಲ್ಲಿ ತಯಾರಾಗುವ ದಂತಧಾವನ ಪೇಸ್ಟುಗಳಿಗಿಂತಲೂ ಉತ್ತಮವಾದದೆಂದು ಹೇಳಲಾದ ವಸ್ತುವನ್ನು ಬೊಂಬಾಯಿನ ಸಿವಿಲ್ ಸರಬರಾಜು ಮಂತ್ರಿ ದಿನಕರ್ ದೇಸಾಯಿಯವರು ತಯಾರಿಸಿ, ಅದನ್ನು ಒಹುದಿನಗಳಿಂದಲೂ ಉಪಯೋಗಿಸುತ್ತಿರುವರು ಅದರ ತಯಾರಿಕೆ ವಿಧಾನವನ್ನು ಅವರು ತಿಳಿಸಿ, ಮೂರು ಭಾಗ ಉಪ್ಪು, ೧ ಭಾಗ ಸೋಡಾ ಬೈಕಾರ್ಬೊನೇಟ್‌ಗಳನ್ನು ಮಿಶ್ರ ಮಾಡಿ ಉಪಯೋಗಿಸಬೇಕೆಂದು ಹೇಳುತ್ತಾರೆ ಟೂತ್‌ಪೇಸ್ಟುಗಳ ಬೆಲೆಯು ಅತಿಯಾಗಿ ಹೆಚ್ಚುತ್ತಿರುವುದನ್ನು ಮಂತ್ರಿಗಳ ಗಮನಕ್ಕೆ ತಂದಾಗ ಮೇಲ್ಕಂಡ ವಿಷಯವನ್ನು ಅವರು ಹೊರಗೆಡಹಿದರು

ಬೊಂಬಾಯಿ ಪಾನನಿರೋಧ ಶಾಸನ ನ್ಯಾಯಬದ್ಧವಲ್ಲ

ಬೊಂಬಾಯಿ ಪ್ರಾಂತದಲ್ಲಿರುವ ಪಾನ ನಿರೋಧದ ಹಲವು ನಿಬಂಧನೆಗಳು ನ್ಯಾಯಬದ್ಧವಲ್ಲವೆಂದು ಅಲ್ಲಿನ ಹೈಕೋರ್ಟು ತೀರ್ಪು ಕೊಟ್ಟಿದೆ ಸೈನ್ಯಗಳಿಗೆ ಕೊಟ್ಟಿರುವ ವಿನಾಯಿತಿ, ಭಾರತದ ಮತ್ತು ವಿದೇಶೀ ರಹದಾರಿ ಪಡೆದಿರುವವರಿಗೆ ಕಾಣಿಸಿರುವ ವ್ಯತ್ಯಾಸಗಳು ಸರಿಯಾದುದಲ್ಲವೆಂದು ನ್ಯಾಯಾಧೀಶರುಗಳು ಹೇಳಿರುತ್ತಾರೆ

ಪೌರಸಭೆಗೆ ಟಾಂಗಾವಾಲಾಗಳ ಸವಾಲ್

ದಕ್ಷಿಣ ನಗರದ ರಸ್ತೆಗಳು ಕೆಟ್ಟು, ಟಾಂಗಾ ಗಾಡಿಗಳಿಗೆ ಜಖಂ ಆಗಿ, ದುರಸ್ತಿನ ಖರ್ಚು ಹೆಚ್ಚಾಗುತ್ತಿರುವುದರಿಂದ ಸಂಚಾರದ ಸೌಕರ್ಯವನ್ನು ಅಲ್ಲಿನ ಪೌರಸಭೆಯವರು ಸರಿಯಾಗಿ ಕಲ್ಪಿಸದಿದ್ದರೆ ಮುಷ್ಕರ ಹೂಡುವುದಾಗಿ ಅಲ್ಲಿನ ಟಾಂಗಾ ಗಾಡಿಯವರು ನಿರ್ಧರಿಸಿರುತ್ತಾರೆ.

ಚಿಕ್ಕ ಮಕ್ಕಳು ಪಟ ಹಾರಿಸಲು ಪ್ರತಿಬಂಧಕ

ಜಮ್ಶೆಡ್‌ನಗರದಲ್ಲಿ ಹನ್ನೆರಡು ವಯಸ್ಸಿಗೆ ಕಡಿಮೆ ಇರುವ ಬಾಲಕರು ಪಟವನ್ನು ಹಾರಿಸಕೂಡದೆಂದೂ, ಈ ಆಜ್ಞೆಯನ್ನು ಮಕ್ಕಳು ಉಲ್ಲಂಘಿಸಿದರೆ ಅವರ ಪಾಲಕರನ್ನು ಶಿಕ್ಷಿಸಲಾಗುವುದೆಂದೂ ತಿಳಿಸಲಾಗಿದೆ

ರಘುಲಾಲ್ & ಕೊ.,

ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ
ಬೆಂಗಳೂರು

ರ ಣ ಜಿ ತ್ *

ಇದುವರೆಗೆ ನೋಡದಿದ್ದರೆ ಈ ದಿನವೇ ನೋಡಿ ತೆಲುಗ.

3ನೇ ಕಡೇ ವಾರ
ದಿನವಹಿ 3 ಆಟಗಳು

- ಜೀವಿತಂ -

25 8-50ರಿಂದ ಬೆಳಗಿನ ಪ್ರದರ್ಶನ 3 ದಿನಗಳು ಮಾತ್ರ

ಏಕ್ ರಾತ್ - EK-RAAT

ಪಾತ್ರ - ನೀನಾ, ಪೃಥ್ವಿರಾಜ್

ಗಣೇಶ್ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

26—8—50ರಿಂದ ಯಶಸ್ವಿಯಾದ 2ನೇ ವಾರ

ಸಿಟಾಡೆಲ್‌ರವರ ತಮಿಳು ಚಿತ್ರ

ಹೃದಯ - - ಗೀತಂ

ಪಾತ್ರ -ಟಿ ಆರ್ ಮಹಾಲಿಂಗಂ,
ಟಿ ಆರ್ ರಾಜಕುಮಾರಿ,
ಕೆ ಸಾರಂಗಪಾಣಿ,
ಲಲಿತ - ಪದ್ಮಿನಿ

ಅ ಬೀ ದ್ ರ ವ ರ

ಗ್ರಾಂಡ್ ಔಟ್‌ರೈಟ್ ಹರಾಜು

(ಸ್ವಾಮ್ಯ ಸ್ಕ್ವೇರಿನಲ್ಲಿರುವ ಪೇಪರ್ ಹೌಸಿನಲ್ಲಿ)

1950ನೇ ಆಗಸ್ಟ್ 27ನೇ ಭಾನುವಾರ ಬೆಳಿಗ್ಗೆ 10ಘಂಟೆಗೆ

(ಉಪಯೋಗಿಸಿದ ಪ್ರಯುಕ್ತ ಹರಾಜು ಮಾಡುವುದನ್ನು ಬದಲಾಯಿಸಲಾಗಿದೆ)

ಪೀಠೋಪಕರಣಗಳು, ಕಬ್ಬಿಣದ ಸಾಮಾನುಗಳು, ಹಾರ್ಮೋನಿಯಂ, ಅಲಾರಂ ಟೇಬಲ್ ಟ್ರಂಕುಗಳು, ಬೈಸಿಕಲ್ಲುಗಳು, ಗಡಿಯಾರಗಳು ಮತ್ತು ಇತರ ಉಪಯುಕ್ತ ಸಾಮಾನುಗಳು

ತಾರೀಖು:- 26-8-50 ಷರತ್ತು - ನಗದು ವ್ಯಾಪಾರ

ನೆಲಗಡಲೆಯಿಂದ ಉಣ್ಣೆ

ನೆಲಗಡಲೆ ಕಾಯಿಯಿಂದ ಕೃತಕ ಉಣ್ಣೆಯನ್ನು ತಯಾರಿಸಲು ಸ್ಕಾಟ್ಲೆಂಡಿನಲ್ಲಿ ಏರ್ಪಾಡು ಮಾಡಲಾಗುತ್ತಿದೆ ಇದಕ್ಕಾಗಿ ೩೦ ಲಕ್ಷ ಪೌಂಡುಗಳ ಯಂತ್ರಗಳನ್ನು ಜೋಡಿಸಲಾಗುವುದು ಬರುವ ವರ್ಷದಿಂದಲೇ ವ್ಯಾಪಾರ ಮಾಡಲನುಕೂಲವಾಗುವಂತೆ ಉಣ್ಣೆಯ ತಯಾರಿಕೆಯನ್ನು ಪ್ರಾರಂಭಿಸಲಾಗುವುದೆಂದು ಹೇಳಲಾಗಿದೆ

ಕೊಳ್ಳೇಗಾಲಕ್ಕೆ ಪೌರ ಸಭೆ

ಕೊಳ್ಳೇಗಾಲದ ಗ್ರಾಮ ಪಂಚಾಯಿತಿಯನ್ನು ರದ್ದುಗೊಳಿಸಿ ಅದಕ್ಕೆ ಪ್ರತಿಯಾಗಿ ಪೌರಸಭೆಯನ್ನು ರಚಿಸುವ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಮದ್ರಾಸು ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿರುತ್ತಾರೆ

ವಾರ್ಷಿಕೋತ್ಸವ

ರಾಜಧಾನಿಯ ಆಜಾದ್ ವಿದ್ಯಾಲಯದ ದ್ವಿತೀಯ ವಾರ್ಷಿಕೋತ್ಸವವು ಮತ್ತು ಸ್ವಾತಂತ್ರ್ಯ ದಿನಾಚರಣೆಗಳು ಕಳೆದ ಭಾನುವಾರ ಸಹಕಾರ ಭವನದಲ್ಲಿ ನಡೆದುವು ಶ್ರೀ ರಾಮಚರಣದಾಸ ಗುಪ್ತರವರು ಅಧ್ಯಕ್ಷತೆ ವಹಿಸಿದ್ದರು "ಮನೆಯಲ್ಲೇ ಮ್ಯಾಟಿನಿ" ಮತ್ತು "ಪುನರ್ಜನ್ಮ" ಎಂಬ ನಾಟಕಗಳು ಅಭಿನಯಿಸಲ್ಪಟ್ಟವು ವಂದನಾರ್ಪಣೆ, ರಾಷ್ಟ್ರ ಗೀತೆಗಳೊಡನೆ ಕಾರ್ಯಕಲಾಪಗಳು ಮುಕ್ತಾಯಗೊಂಡವು

ಪ್ರಭಾ

25 8-50 ರಿಂದ ಅಮೋಘ 5ನೇ ವಾರ

ರಾಜಕಮಲ್ ಕಲಾ ಮಂದಿರದವರ ಹಿಂದಿ ಚಿತ್ರ

* ದಹೇಜ್ *

ದಿಗ್ದರ್ಶನ :: ಶಾಂತಾರಾಂ
ಪಾತ್ರ— ಜಯಶ್ರೀ, ಪೃಥ್ವಿರಾಜ್ ಕರಣ್ ದಿವಾನ್, ಉಲ್ಹಾಸ್.

ಪ್ರಸಿದ್ಧ ಪತ್ರಿಕೆ

ಮೈಸೂರು ೨ ನೇ ಮುನ್ಸೀಫರ ಕೋರ್ಟಿನಲ್ಲಿ
O. S No 65/49-50
ವಾದಿ.-ಮಲ್ಲಪ್ಪ
Vs
ಪ್ರತಿವಾದಿಗಳು - 1 ಡಿ ಚಂದ್ರಶೇಖರಯ್ಯ 2 ನಂಜುಂಡ

೨ ನೇ ಪ್ರತಿವಾದಿಯು ತನ್ನ ಸಾಲಗಾರರಿಗೆ ಮೋಸ ಮಾಡಬೇಕೆಂದು ಸಿಡ್ಲಘಟ್ಟ ಸ್ವತ್ತನ್ನು ೧ ನೇ ಪ್ರತಿವಾದಿಗೆ ಕ್ರಯ ಮಾಡಿರುವುದು ಊರ್ಜಿತವಾಗತಕ್ಕದ್ದಲ್ಲವೆಂದು ತೀರ್ಮಾನ ಮಾಡಬೇಕೆಂದು ವಾದಿಯು ಇವರಿಬ್ಬರ ಮೇಲೂ C P C ಆರ್ಡರ್ R 1 ರ ಪ್ರಕಾರ Representative Capacity ಯಲ್ಲಿ ದಾವಾ ಹೂಡಿರುತ್ತಾನೆ ವಾದಿಯೊಡನೆ ಸೇರಲು ಅಪೇಕ್ಷೆ ಪಡುವವರು ಇದೇ ತಿಂಗಳು 31-8-50ಕ್ಕೆ ಕೋರ್ಟಿಗೆ ಖುದ್ದಾಗಿ ಆಗಲೀ, ಅಥವಾ ಲಾಯರ ಮೂಲಕವಾಗಲೀ, ಹಾಜರಾಗಬಹುದು

ಸಿಡ್ಲಘಟ್ಟ. ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ತೊರೆಮಾವು ಗ್ರಾಮದಲ್ಲಿರುವುದು ಪೂರ್ವಕ್ಕೆ ಸಿದ್ದಪ್ಪನ ಮನೆ, ಪಶ್ಚಿಮಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ದಾರಿ, ಉತ್ತರಕ್ಕೆ ಖಾಲಿ ಮನೆ ಈ ಮಧ್ಯೆ ಇರುವ 16 ಕಂಭದ ತೊಟ್ಟಿ ಮನೆ

ಎಂ. ಆರ್. ನರಸಿಂಹಮೂರ್ತಿ,
ವಾದಿ ಪರ ಲಾಯರು

ಒಲಂಪಿಯಾ

25-8-50ರಿಂದ ಜನಭರಿತ 2ನೇ ವಾರ
ದಿನವಹಿ 3 ಆಟಗಳು

ಹಿಂದ್ ಪಿಕ್ಚರ್ಸ್‌ರವರ

ಅಬೀದಾ

ಪಾತ್ರ ಸ್ವರ್ಣಲತಾ, ಕುರ್ಷಿದ್ ಮತ್ತು ವಜೀರ್

ಇದರೊಡನೆ ಕಳೆದ ೧೫ನೇ ತಾ|| ಕಲ್ಕತ್ತೆಯಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆ ಚಿತ್ರವನ್ನೂ ತೋರಿಸಲಾಗುವುದು

ಬೆಳಗಿನ ಪ್ರದರ್ಶನ 25-8-50ರಿಂದ

ಫೆಡರಲ್ ಆಪರೇಟರ್ ನಂ. 99

15 ಭಾಗಗಳ ಭೂತಾರ್ ಸೀರಿಯಲ್

Edited, printed and published by A K Nagarajan, at Sadhvi Press D Subbiah Road, Mysore

ರೋ. ನಂ. 792 ಗಿರಂಟೀ ಪ್ರಾಂತಂ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೨೮-೮-೫೦ [ಸಂಚಿಕೆ ೩೧

ಬಿಹಾರ್ ಪ್ರಾಂತದಲ್ಲಿ ಆಹಾರದ ಲೂಟಿ

ಚುನಾವಣಾ ಗಡಿ ನಿರ್ಧಾರಕ್ಕೆ ಪ್ರತ್ಯೇಕ ಸಮಿತಿ ಅವಶ್ಯಕ

ಶಾಸನ ಸಭೆಗೆ ಇಮಾಂಸರವರ ತಿಳುವಳಿಕೆ

ಬೆಂಗಳೂರು ೨೮

ಬರುವ ಸಾರ್ವತ್ರಿಕ ಚುನಾವಣೆಗಳ ಕ್ಷೇತ್ರ ನಿರ್ಧಾರದ ಸಂಬಂಧವಾಗಿ ಈ ತಿಂಗಳು ೨೮ನೇ ತಾ|| ದಿಂದ ೬ ದಿನಗಳ ಕಾಲ ನಡೆಯುವ ಶಾಸನ ಸಭೆಯಲ್ಲಿ ಸ್ವಾಸನಾಂಗ ಮಂತ್ರಿಗಳು ಒಂದು ನಿರ್ಣಯವನ್ನು ಮಂಡಿಸಿ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವರು. ಸರ್ಕಾರದವರೇ ನಿರ್ದಿಷ್ಟವಾದ ಸೂಚನೆಯನ್ನು ಮಾಡುವುದಿಲ್ಲವಾದರೂ ಈ ಬಗ್ಗೆ ಸಲಹೆ ಕೊಡಲು ಒಂದು ಸಮಿತಿಯ ರಚನೆಗೆ ಅವರು ಒಪ್ಪುವರೆಂದು ಹೇಳಲಾಗಿದೆ. ಶ್ರೀ ಜೆ. ಎಂ. ಇಮಾಂಸರವರು ಒಂದು ನಿರ್ಣಯವನ್ನು ಕಳುಹಿಸಿ, ಒಬ್ಬ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ, ಸ್ಥಳೀಯ ಶಾಸನ ಸಭೆ ಮತ್ತು ಪಾರ್ಲಿಮೆಂಟಿಗೆ ಚುನಾವಣೆ ನಡೆಸಲು ಕ್ಷೇತ್ರ ನಿರ್ದೇಶನ ಸಮಿತಿಯನ್ನು ರಚಿಸಬೇಕೆಂದು ಸೂಚಿಸಿರುತ್ತಾರೆ. ಶ್ರೀ ಎಸ್. ಆರ್. ಯಪ್ಪನವರು ಕಳುಹಿಸಿರುವ ನಿರ್ಣಯದಲ್ಲಿ ಏಕ ಸದಸ್ಯ ಕ್ಷೇತ್ರಗಳ ರಚನೆಯಾಗಬೇಕೆಂದು ಸೂಚಿಸಲಾಗಿದೆ.

ಜಿಲ್ಲಾಧಿಕಾರಿಗಳೊಡನೆ ಕೆ. ಸಿ. ರೆಡ್ಡಿಯವರ ಸಮಾಲೋಚನೆ

ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಕುರಿತು ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಜಿಲ್ಲಾಧಿಕಾರಿಗಳೊಡನೆ ತಮ್ಮ ಕಛೇರಿಯಲ್ಲಿ ಮೊನ್ನೆ ಮಾತುಕತೆ ನಡೆಸಿದರು. ದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಮತ್ತು ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಆದ ತೀರ್ಮಾನಗಳನ್ನು ವಿವರಿಸಿ, ಅವುಗಳ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕೆಂದು ಅವರು ಸೂಚಿಸಿದರು. ಆಹಾರ ಧಾನ್ಯವನ್ನು ಅಡಗಿಸಿಡುವ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂದೂ, ಶೀಘ್ರದಲ್ಲೇ ಕೇಂದ್ರದಿಂದ ಹೆಚ್ಚಾಗಿ ಸರಬರಾಜು ಬರುವುದಿಲ್ಲವೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು.

ಪ್ರಭುಗಳಿಂದ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವ

ಬೆಂಗಳೂರಿನ ಸರ್ ಪುಟ್ಟಣ್ಣಚೆಟ್ಟಿ ಟೌನ್‌ಹಾಲ್ ಎದುರಿಗೆ, ಧರ್ಮ ಪ್ರಕಾಶ ಎಸ್. ದಾಸಪ್ಪನವರು ಧರ್ಮಾರ್ಥವಾಗಿ ಕಟ್ಟಿಸಿ ಕೊಟ್ಟಿರುವ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ಇದೇ ೩೧ನೇ ತಾರೀಖು ಸೋಮವಾರ ಬೆಳಿಗ್ಗೆ ೧೦ ಘಂಟೆಗೆ ಶ್ರೀಜಯಚಾಮರಾಜೇಂದ್ರ ಒಡೆಯರವರು ನೆರವೇರಿಸುವರು.

○ ಸಂಸ್ಥಾನದಲ್ಲಿ ಪೆಟ್ರೋಲ್ ಕಂಟ್ರೋಲ್ ಬರುವ ತಿಂಗಳು ೧ನೇ ತಾರೀಖಿನಿಂದ ರದ್ದಾಗುವುದು.

ಹಸಿವಿನಿಂದ ೧೧ ಜನರ ಮರಣ

ಕೋರಾಪುಟ್ ತಾಲ್ಲೂಕಿನಲ್ಲಿ ಒಂದು ಹಳ್ಳಿಯಲ್ಲಿ ಈ ತಿಂಗಳು ೧೪ರಿಂದ ೨೧ರ ವರೆಗೆ ೧೧ ಜನರು ಹಸಿವಿನ ಬಾಧೆಯಿಂದ ಸತ್ತಿರುವರೆಂದು ವರದಿಯಾಗಿದೆ. ಅಲ್ಲಿಯ ಜನರು ಭೂ ಮಾಲೀಕರಿಗೆ ಎತ್ತನ್ನೂ ಒಂದು ಜಗೆಯ ಕರಿಯ ಬೀಜವನ್ನೂ ಒತ್ತೆ ಇಟ್ಟಿದ್ದಾರೆಂದು ಹೇಳಲಾಗಿದೆ.

ಅಸ್ಸಾಂ ಭೂಕಂಪದಿಂದ ಸಾವಿರ ಮಂದಿಯ ಮರಣ

ಕಳೆದ ವಾರ ಅಸ್ಸಾಮಿನಲ್ಲಿ ಸಂಭವಿಸಿದ ಭೂಕಂಪದಿಂದ ಇದುವರೆಗೆ ೩೦ ಸಾವಿರ ಚದುರ ಮೈಲಿಯಷ್ಟು ಪ್ರದೇಶವು ಅನಾಹುತಕ್ಕೊಳಗಾಗಿ, ೧೦ ಕೋಟಿ ರೂ. ಗಳು ನಷ್ಟ ಸಂಭವಿಸಿರುವುದಾಗಿಯೂ, ಸುಮಾರು ಒಂದು ಸಾವಿರ ಮಂದಿ ಮೃತಪಟ್ಟಿರಬಹುದೆಂದೂ ಅಂದಾಜು ಮಾಡಲಾಗಿದೆ. ದಿಬ್ರುಗಢ್ ಎಂಬ ಊರಿನಲ್ಲಿ ಮುಕ್ಕಾಲುಭಾಗ ಮನೆಗಳೆಲ್ಲವೂ ಕುಸಿದುಬಿದ್ದಿರುವುದಾಗಿಯೂ ಹೇಳಲಾಗಿದೆ.

ಅಸ್ಸಾಂ ಪ್ರಜೆಗಳಿಗೆ ಪಾಕಿಸ್ತಾನದ ನೆರವು

ಅಸ್ಸಾಮಿನಲ್ಲಿ ಭೂಕಂಪ ಮತ್ತು ಪ್ರವಾಹಗಳ ಅನಾಹುತಕ್ಕೆ ಸಿಕ್ಕಿ ಕಷ್ಟಕ್ಕೊಳಗಾದವರ ಬಗ್ಗೆ ಪಾಕಿಸ್ತಾನದ ಪ್ರಧಾನಿ ಲಿಯಾಕತ್ ಆಲಿಖಾನರು ಸಹಾನುಭೂತಿಯನ್ನು ವ್ಯಕ್ತಪಡಿಸಿ ಭಾರತದ ಪ್ರಧಾನ ಮಂತ್ರಿ ನೆಹರೂರವರಿಗೆ ತಂತಿಯನ್ನು ಕಳುಹಿಸಿದ್ದಾರೆ. ನೊಂದ ಪ್ರಜೆಗಳ ಸಹಾಯಾರ್ಥವಾಗಿ ಹತ್ತು ಸಾವಿರ ಮಣ ಅಕ್ಕಿಯನ್ನು ಕೊಡುವಂತೆ ತಾವು ಪೂರ್ವ ಪಾಕಿಸ್ತಾನ ಸರ್ಕಾರಕ್ಕೆ ಸೂಚನೆ ಇತ್ತಿರುವುದಾಗಿಯೂ, ಅದನ್ನು ಸ್ವೀಕರಿಸಬೇಕೆಂದೂ ಲಿಯಾಕತ್ತರು ಪಂಡಿತ ನೆಹರೂರವರನ್ನು ಪ್ರಾರ್ಥಿಸಿರುವರು.

ವಿದ್ಯಾರಣ್ಯಾಚಾರ್ಯರ ಜಯಂತಿ ಉತ್ಸವ

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶ್ರೀ ವಿದ್ಯಾರಣ್ಯಾಚಾರ್ಯರವರ ೬೦೦ನೇ ಜಯಂತಿ ಮಹೋತ್ಸವವು ವೈಭವದಿಂದ ನಡೆಯುವುದು. ಆ ದಿನ ನಡೆಯುವ ಬೆಳಿಗ್ಗೆ ಅರ್ಚನೆ, ಸ್ತೋತ್ರ ಪಠನ, ಸ್ವಸ್ತಿ ವಾಚನ ಮತ್ತು ರಾಜಾಶೀರ್ವಾದಗಳು ನಡೆದವು. ಸಂಜೆ ೫-೩೦ ಗಂಟೆಗೆ ಉಪನ್ಯಾಸ, ಮತ್ತು ಗಾಯನ ಕೃಷ್ಣಯ್ಯಂಗಾರ್ಯರ ಸಂಗೀತವು ನಡೆಯುವುವು.

ಉಪಾಕರ್ಮ

ನಾಳೆ ದಿನ ಬೆಳಿಗ್ಗೆ ೯ ರಿಂದ ೧೨ ಘಂಟೆವರೆಗೆ ರಾಜಧಾನಿಯ ಚಾಮರಾಜಪೇಟೆ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಯಜುರ್ವೇದೋಪಾಕರ್ಮ ನಡೆಯುವುದು.

ಚಾಮರಾಜನಗರ - ಕೊಯಮತ್ತೂರು ರೈಲ್ವೆ ರಸ್ತೆ ನಿರ್ಮಾಣ

ಚಾಮರಾಜನಗರ-ಕೊಯಮತ್ತೂರು ರೈಲ್ವೆ ರಸ್ತೆಯ ಸರ್ವೆಯು ಪೂರ್ತಿಯಾಗಿರುವುದೆಂದೂ, ಅದರ ವಿವರಗಳನ್ನು ಕೇಂದ್ರ ರೈಲ್ವೆ ಖಾತಾ ಸಮಿತಿಯ ಮುಂದೆ ಶೀಘ್ರದಲ್ಲೇ ಮಂಡಿಸಲಾಗುವುದೆಂದೂ ರೈಲ್ವೆಗಳ ಚೀಫ್ ಕಮೀಷನರ್, ಕೆ. ಸಿ. ಬಕ್ಷಿಯವರು ತಿಳಿಸಿರುತ್ತಾರೆ. ಮುಖ್ಯ ರಸ್ತೆಗೆ ಕೊಯಮತ್ತೂರನ್ನು ಸೇರಿಸುವ ಹೊಸ ಲೂಪ್ ಲೈನನ್ನು ಶೀಘ್ರದಲ್ಲೇ ಆರಂಭಿಸಿ, ಮಾಡಲಾಗುವುದೆಂದು ಅವರು ಹೇಳಿರುತ್ತಾರೆ.

ವಿದ್ಯಾಲಯಗಳಲ್ಲಿ ಒಂದೇ ಬೋಧನ ಭಾಷೆ ಇರಬೇಕು

ಎಲ್ಲಾ ವಿಶ್ವ ವಿದ್ಯಾಲಯಗಳಲ್ಲೂ ಒಂದೇ ಬೋಧನಭಾಷೆಯಿರಬೇಕೆಂದೂ, ಇಂಗ್ಲೀಷಿನ ಬದಲಾಗಿ ಭಾರತೀಯ ಭಾಷೆಯನ್ನು ಜಾರಿಗೆ ಕೊಡುವ ಬಗ್ಗೆ ಎಚ್ಚರಿಕೆಯಿಂದವರ್ತಿಸಬೇಕೆಂದೂ ಅಂತರ ವಿಶ್ವವಿದ್ಯಾಲಯಗಳ ಬೋರ್ಡಿನಲ್ಲಿ ನಿರ್ಣಯವಾಗಿದೆ.

ವಾರಕ್ಕೆ ೩ ದಿನಗಳ ರೇಷನ್ ಸಾಕೆಂದು ಕಾರ್ಡುದಾರರು

ದೆಹಲಿಯಲ್ಲಿ ಅನೇಕರು ವಾರಕ್ಕೆ ಮೂರು ದಿನಗಳ ರೇಷನ್ ಧಾನ್ಯವನ್ನು ಮಾತ್ರ ತೆಗೆದುಕೊಳ್ಳುವುದಾಗಿ ಕೇಂದ್ರ ಆಹಾರ ಇಲಾಖೆಯವರಿಗೆ ತಿಳಿಸುತ್ತಿರುವುದಾಗಿ ಹೇಳಲಾಗಿದೆ.

ಹರಿಕಥೆ ಮತ್ತು ಸಂಗೀತ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ, ಶ್ರಾವಣ ಶನಿವಾರದ ಪ್ರಯುಕ್ತ ಈ ರಾತ್ರಿ ೯ ಘಂಟೆಗೆ ಹರಿಕಥೆಯು ನಡೆಯುವುದು. ನಾಳೆ ಸಂಜೆ ೭ ಘಂಟೆಗೆ ಗಾಯಕ ಶ್ರೀ ಜಗನ್ನಾಥ ಪಿಂಗ್ಳೆಯವರ ಸಂಗೀತ ಗೋಷ್ಠಿಯನ್ನು ಡಾ|| ಎ|| ಸೀನಪ್ಪನವರ ಅಧ್ಯಕ್ಷತೆಯೊಡನೆ ಏರ್ಪಡಿಸಲಾಗಿದೆ.

ರಾಜಧಾನಿಯ ಅನಂತರಾವ್ ಬೀದಿಯಲ್ಲಿರುವ ಭಜನೆ ವೆಂಕಟಕೃಷ್ಣನವರ ಅಷ್ಟೋತ್ತರ ಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಪೌರ್ಣಿಮಾ ಪ್ರಯುಕ್ತ ಶ್ರೀ ಕೆ. ಗುಂಡೂರಾಯರಿಂದ "ದ್ರೌಪದೀ ಪ್ರತಾಪ" ಎಂಬ ಹರಿಕಥೆಯು ನಡೆಯುವುದು.

ಮೈಸೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರದ ಸ್ಥಿತಿ

ಅಭಾವವಿಲ್ಲವೆಂದು ಗೃಹ ಸಚಿವರ ಭರವಸೆ

ಬೆಂಗಳೂರು ೨೮

ಮೈಸೂರು ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ, ಮತ್ತು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಆಹಾರ ಪರಿಸ್ಥಿತಿಯು ತೃಪ್ತಿಕರವಾಗಿದೆಯೆಂದೂ, ಅಭಾವವುಂಟಾಗಿದೆಯೆಂದು ಹೇಳುವುದು ಕೇವಲ ಉತ್ಪ್ರೇಕ್ಷೆಯೆಂದೂ ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ತಿಳಿಸುತ್ತಾರೆ. ಈಚೆಗೆ ಆ ಭಾಗಗಳಲ್ಲಿ ಮಳೆಯಾಗಿ ಪರಿಸ್ಥಿತಿ ಉತ್ತಮಗೊಂಡಿರುವುದಲ್ಲದೆ, ಅಲ್ಲಿಗೆ ಸಾಕಾದಷ್ಟು ಧಾನ್ಯಗಳನ್ನು ಕಳುಹಿಸಲಾಗಿದೆಯೆಂದು ಅವರು ಹೇಳಿದರು.

ಕಮ್ಯೂನಿಸ್ಟ್ ನಾಯಕರ ಬಂಧನ

ಮೈಸೂರಿನ ಪ್ರಸಿದ್ಧ ಕಮ್ಯೂನಿಸ್ಟ್ ನಾಯಕರಾದ ಶ್ರೀ ಎಂ. ಎಸ್. ರಾಮರಾಯರನ್ನು ನೆನ್ನೆ ಸಂಜೆ ಪೋಲೀಸರು ಬಂಧಿಸಿದರೆಂದು ತಿಳಿದು ಬಂದಿದೆ.

ನಗರ ಸೇವಾದಳದ ಸಮಿತಿ

ರಾಜಧಾನಿಯಲ್ಲಿ ಸೇವಾದಳದ ಸಂಘಟನೆಗಾಗಿ ಕೇಂದ್ರ ಸೇವಾದಳದ ಅನುಮತಿ ಪಡೆದು ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಗೆ ಶ್ರೀ ಟಿ. ಎಸ್. ಸುಬ್ಬಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಬಿ. ಎ. ನಾರಾಯಣಸ್ವಾಮಿಯವರು ನಗರದ ದಳಪತಿಯಾಗಿಯೂ, ಶ್ರೀ ಹೆಚ್. ಸಿ. ಶಿವಾನಂದಮೂರ್ತಿ, ಶ್ರೀಮತಿ ಸ ನಂದಮ್ಮನವರು ಕಾರ್ಯದರ್ಶಿ, ಸಹಕಾರ್ಯದರ್ಶಿಗಳಾಗಿಯೂ, ಶ್ರೀ ಎಂ. ಎಸ್. ಜೋಯಿಸರು ಖಜಾಂಚಿಗಳಾಗಿಯೂ, ಆರಿಸಲ್ಪಟ್ಟಿರುವರು.

ಆಹಾರದ ಅವ್ಯವಸ್ಥೆಗಾಗಿ ಬಿಹಾರಿನಲ್ಲಿ ದಂಗೆ

ಆಹಾರ ಪರಿಸ್ಥಿತಿಯು ತೀರ ಹದಗೆಟ್ಟಿರುವುದರಿಂದ ಬಿಹಾರ್ ಪ್ರಾಂತದ ಮಾಂಘೀರ್, ಸಂತಾಲ ಪರಗಣಗಳು ಮತ್ತು ಮಾನ ಭೂಮಿ ಜಿಲ್ಲೆಗಳ ಜನರು ದಂಗೆ ಎದ್ದಿರುವರೆಂದೂ, ದಿನದಿನಕ್ಕೂ ಆಹಾರದ ಬೆಲೆಯು ಹೆಚ್ಚುತ್ತಿದ್ದು, ಕ್ಷುದ್ಬಾಧೆಯನ್ನು ತಡೆಯಲಾರದೆ ಲೂಟಿ ಮುಂತಾದ ಕೃತ್ಯಗಳಲ್ಲಿ ತೊಡಗಿರುವರೆಂದೂ ಹೇಳಲಾಗಿದೆ. ಒಂದು ಕಡೆ ಒಬ್ಬ ವರ್ತಕನು ಕಾನೂನಿನ ಬೆಲೆಗಿಂತಲೂ ಹೆಚ್ಚು ಬೆಲೆಗೆ ಪದಾರ್ಥವನ್ನು ಕೇಳಿದನೆಂದು ಕೊಡದಿದ್ದುದಕ್ಕಾಗಿ ಅವನ ಅಂಗಡಿ ಲೂಟಿಯಾಯಿತು.

ಟಿಬೆಟ್ಟಿನ ಮೇಲೆ ಕಮ್ಯೂನಿಸ್ಟರ ಆಕ್ರಮಣ

ಚೀನಾದ ಕಮ್ಯೂನಿಸ್ಟರು ಟಿಬೆಟ್ಟಿನ ಮೇಲೆ ದಂಡಯಾತ್ರೆಯನ್ನು ಪ್ರಾರಂಭಿಸುವರೆಂದು ಖಾರಿಸ್ಥಾನದ ವರದಿಗಳು ಬರುತ್ತಿವೆ. ಆ ದೇಶದ ಗಡಿಯಲ್ಲಿ ಸ್ಪಷ್ಟವಾಗಿ ೫೦ ಸಾವಿರ ಕಮ್ಯೂನಿಸ್ಟ್ ಸೈನ್ಯಗಳು ಕಾದು ನಿಂತಿವೆಯೆಂದೂ ಹೇಳಲಾಗಿದೆ.

ಸೂಚನೆ

ಉಪಾಕರ್ಮ ಉತ್ಸವದ ಪ್ರಯುಕ್ತ ನಾಳೆ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ

ವರಿಸಲು ನಿರಾಕರಿಸಿದ ತರುಣಿಯ ಕೊಲೆ ಪ್ರಯತ್ನ

ಕರಾಚಿಯ ಮಹಮದ್ ಅಹಮದ್ ಎಂಬಾತನು ಒಬ್ಬ ಮುಸ್ಲಿಂ ತರುಣಿಯನ್ನು ಮೋಹಿಸಿ ತನ್ನನ್ನು ಮದುವೆಯಾಗಬೇಕೆಂದು ಆಕೆಯನ್ನು ಕೇಳಿದನೆಂದೂ, ಆಕೆಯು ಅದಕ್ಕೆ ನಿರಾಕರಿಸಿದಳೆಂದೂ ಮೊನ್ನೆ ದಿನ ಆಕೆಯು ಇತರ ಹೆಂಗಸರೊಡನೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಆತನು ಆಕೆಯನ್ನು ಚೂರಿಯಿಂದ ಇರಿಯಲು ಪ್ರಯತ್ನಿಸಿದನೆಂದೂ, ಪೊಲೀಸರು ಅವನನ್ನು ಬಂಧಿಸಿರುವರೆಂದೂ ವರದಿಯಾಗಿದೆ

ವಿಯಟ್‌ಮಿನ್ ಸರ್ಕಾರಕ್ಕೆ ಕೆಂಪು ಚೀಣಾದ ಸೈನ್ಯ ಸಹಾಯ

